ಅಧ್ಯಾತ್ಮಗ್ರಂಥಾವಳಿ

ಶ್ರೀಸುರೇಶ್ವರಾಚಾರ್ಯವಿರಚಿತ

# ನೈಷ್ಕರ್ಮ್ಯಸಿದ್ಧಿ

(ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಶಬ್ದಾನುಕ್ರಮಣಿಕೆ
ಮುಂತಾದವುಗಳೊಡನೆ)

ಅನುವಾದಕರು :
ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ. 85

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - 573 211
ದೂ : 08175-273820
2008

ಯಲ್ಲಿರುವ ಕೆಲವು ಪದಗಳಿಗೆ ಶ್ಲೋಕಸ್ಥವಾದ ಬೇರೆಯ ಪದಗಳೊಡನೆ ಅನ್ವಯವಾಗುವಂತೆ ಅವುಗಳನ್ನು ಹೆಣೆದಿರುತ್ತದೆ. ಕೆಲವು ಕಡೆಗಳಲ್ಲಿ ಮೂಲಶ್ಲೋಕಗಳಲ್ಲಿ ಸೂತ್ರರೂಪವಾಗಿ ಸೂಚಿಸಿರುವ ವಿಷಯಗಳನ್ನು ಸಂಬಂಧೋಕ್ತಿಯಲ್ಲಿ ವಿವರಿಸಿರುತ್ತದೆ. ಹೀಗೆ ಸಂಬಂಧೋಕ್ತಿಗೂ ಶ್ಲೋಕಕ್ಕೂ ಒಂದೇ ವಿಷಯವಿರುವದರಿಂದ ಕೆಲವು ಕಡೆಗಳಲ್ಲಿ ಪುನರುಕ್ತಿಯಾಗಿರುತ್ತದೆ.

ಇದಲ್ಲದೆ ಮೂಲಗ್ರಂಥದಲ್ಲಿಯೂ ಒಂದು ಅಧ್ಯಾಯದಲ್ಲಿ ಹೇಳಿದ ಅಂಶವನ್ನೇ ಅದರ ಹಿಂದಿನ ಮತ್ತು ಮುಂದಿನ ಅಧ್ಯಾಯಗಳಲ್ಲಿ ಪ್ರಕಾರಾಂತರದಿಂದ ಪ್ರತಿಪಾದಿಸಿರುವದರಿಂದಲೂ ಪುನರುಕ್ತಿಯು ಮತ್ತೆಮತ್ತೆ ಬರುತ್ತದೆ. ಆ ಪುನರುಕ್ತಿಯು, ಗ್ರಂಥಲಾಘವಕ್ಕಿಂತಲೂ ಬುದ್ಧಿಲಾಘವವೇ ಮೇಲು ಎಂಬ ಕಾರಣದಿಂದ ಬಂದದ್ದೆಂದು (೩-೨೩ರ ಸಂಬಂಧೋಕ್ತಿಯಲ್ಲಿ) ಗ್ರಂಥಕರ್ತರೇ ಹೇಳಿಕೊಂಡಿರುತ್ತಾರೆ. ವೇದಾಂತಸಿದ್ಧಾಂತವನ್ನು ಹೀಗೆ ಮತ್ತೆಮತ್ತೆ ಪ್ರಕಾರಾಂತರದಿಂದ ವರ್ಣಿಸಿರುವದು ಗೌಡಪಾದರಕಾರಿಕೆ, ಉಪದೇಶಸಾಹಸ್ರಿ, ನೈಷ್ಕರ್ಮ್ಯಸಿದ್ಧಿ - ಇವು ಮೂರಕ್ಕೂ ಸಮಾನವಾಗಿರುತ್ತದೆ. ಇದನ್ನು ಸ್ಪಷ್ಟಗೊಳಿಸುವದಕ್ಕೆ ನಾವು ಹಿಂದುಮುಂದಿನ ಗ್ರಂಥಗಳ ಪರಾಮರ್ಶಗಳನ್ನು ಕೊಟ್ಟಿರುವದಲ್ಲದೆ ಗ್ರಂಥದ ಕೊನೆಯಲ್ಲಿರುವ ಶಬ್ದಾನುಕ್ರಮಣಿಕೆಯಲ್ಲಿಯೂ ಬೇರೆ ಬೇರೆ ಕಡೆಯಲ್ಲಿರುವ ವಿಷಯಗಳನ್ನು ಒಕ್ಕಡೆಗೆ ಕೂಡಿಸಿ ತೋರಿಸಿರುತ್ತೇವೆ.

## ಗ್ರಂಥಪ್ರತಿಪಾದ್ಯ ವಿಷಯ

ಗ್ರಂಥದ ಮುಖ್ಯವಿಷಯಗಳನ್ನು ಸಂಬಂಧೋಕ್ತಿಯ ಆದಿಯಲ್ಲಿ ಅತಿ ಸಂಕ್ಷೇಪವಾಗಿ ತಿಳಿಸಿ ಮುಂದಿನ ಗ್ರಂಥದಲ್ಲಿ ಅದನ್ನು ವಿಸ್ತರಿಸಿರುತ್ತದೆ. ಸ್ವತಃಸಿದ್ಧನಾದ ಅದ್ವಿತೀಯಾತ್ಮನ ಅಜ್ಞಾನದಿಂದಲೇ ದ್ವೈತವು ತೋರುತ್ತಿರುವದು (ಸಂ. ೨-೯೭, ೯೮, ೧೧೬, ೩-೧). ಈ ದ್ವೈತದಲ್ಲಿ ಶುಭಾಶುಭಾಧ್ಯಾಸ, ಅದರಿಂದ ರಾಗದ್ವೇಷಗಳು, ಅವುಗಳಿಂದ ಕರ್ಮಗಳು, ಪುಣ್ಯಪಾಪಗಳು, ಜನ್ಮ, ದುಃಖ - ಇವುಗಳು ಕ್ರಮಕ್ರಮವಾಗಿ ಉಂಟಾಗುತ್ತಿರುವವು. ಆತ್ಮಸ್ವರೂಪವಾಗಿರುವ ನಿತ್ಯಸುಖವನ್ನು ಕಾಣದಂತೆ ಮಾಡಿರುವದು ಈ ಅಜ್ಞಾನವೇ (ಸಂ). ಆದ್ದರಿಂದ ಅಜ್ಞಾನವು ಹೋದರೆ ಸಕಲ ದುಃಖನಿವೃತ್ತಿಯೂ ಸುಖಪ್ರಾಪ್ತಿಯೂ ಆಗುವದು (ಸಂ. ೧-೭). ಆತ್ಮನ ಅಜ್ಞಾನವು ಜ್ಞಾನದಿಂದಲೇ ಹೋಗಬೇಕಾಗಿದೆ. ಆದರೆ ಆತ್ಮನು ಮಿಕ್ಕೆಲ್ಲ ಪ್ರಮೇಯಗಳಿಗಿಂತ ವಿಲಕ್ಷಣಸ್ವಭಾವದವನಾದ್ದರಿಂದಲೂ (ಸಂ.)

ಪ್ರತ್ಯಕ್ಷಾದಿಗಳು ಭೌತಿಕವಾದ ಹೊರಗಿನ ವಿಷಯಗಳನ್ನು ಮಾತ್ರ ತಿಳಿಸಬಲ್ಲವಾದ್ದರಿಂದಲೂ (೨-೧, ೪-೧೨), ಆತ್ಮಾನುಭವದಿಂದ ತೋರುತ್ತಾ (೧-೭) ಅವಿಚಾರಿತಸಿದ್ಧವಾಗಿರುವ (೩-೧೧೩) ಅವಿದ್ಯೆಯನ್ನು ವೇದಾಂತ ವಾಕ್ಯವಲ್ಲದೆ[1] ಮತ್ತೆ ಯಾವದೂ ಕಳೆಯಲಾರದು (ಸಂ. ೨-೧). ಆತ್ಮನು ಅನುಭವ ಸ್ವರೂಪನಾಗಿರುವದರಿಂದಲೂ (೨-೫೮) ಅವಿದ್ಯಾ ಮಾತ್ರವ್ಯವಹಿತನಾಗಿರುವದ ರಿಂದಲೂ (೩-೧೧೩) ವಾಕ್ಯದಿಂದ ಅವಿದ್ಯೆಯ ನಾಶವಾಗಿ ಅಷ್ಟರಿಂದಲೇ ಆತ್ಮಜ್ಞಾನವಾಗುತ್ತದೆ (೨-೧೦೫, ೩-೧೦೫).

ವಾಕ್ಯಜ್ಞಾನವಾಗದೆ ಇರುವದಕ್ಕೆ ತ್ವಂಪ'ದಾರ್ಥಜ್ಞಾನವಿಲ್ಲದಿರುವದೇ ಕಾರಣ (೨-೧). ಯಾರಿಗೆ ತ್ವಂಪದಾರ್ಥಜ್ಞಾನವು ತಾನೇ ಅಥವಾ ಸ್ವಪ್ರಯತ್ನದಿಂದ ಆಗುವದೋ ಅವರಿಗೆ ವಾಕ್ಯಾರ್ಥಶ್ರವಣವನ್ನು ಮತ್ತೆಮತ್ತೆ ಮಾಡಿಸಬೇಕಾದ ದ್ದಿರವದಿಲ್ಲ ; ಯಾರಿಗೆ ಆ ಜ್ಞಾನವಾಗಿರುವದಿಲ್ಲವೋ ಅವರಿಗೆ ಅನ್ವಯವ್ಯತಿರೇಕ ನ್ಯಾಯದಿಂದ ಅದನ್ನುಂಟುಮಾಡಿಸಿಕೊಟ್ಟು ಶ್ರವಣಮಾಡಿಸಬೇಕು (೨-೯, ೩-೬೪). ಅನ್ವಯವ್ಯತಿರೇಕವು ಮುಖ್ಯವಾಗಿ ಎರಡು ಬಗೆಯಾಗಿರುವದು. ಅಜ್ಞಾನದಿಂದಾಗಿರುವ ಬೋದ್ಧೃತ್ವಾದ್ಯುಪಾಧಿಯುಳ್ಳ ಆತ್ಮನನ್ನು ಇಟ್ಟುಕೊಂಡು ದ್ರಷ್ಟೃದೃಶ್ಯವಿಭಾಗವನ್ನು ಮಾಡಿಕೊಳ್ಳುವ ದ್ರಷ್ಟ್ರನ್ವಯದೃಶ್ಯವ್ಯತಿರೇಕವೊಂದು ; ಅವಿದ್ಯಾಪರಿಕಲ್ಪಿತವಾಗಿರುವ ಆಗಮಾಪಾಯಿಸಾಕ್ಷಿವಿಭಾಗದಿಂದಾಗುವ ಸಾಕ್ಷ್ಯನ್ವಯ ಸಾಕ್ಷ್ಯವ್ಯತಿರೇಕವೊಂದು (೨-೫೮, ೩-೫೪). ಮೊದಲನೆಯದರಿಂದ ಅಹಂಕಾರಮಮತ್ವಯತ್ನೇಚ್ಛಾದಿಗಳೂ ಎರಡನೆಯದರಿಂದ ಕರ್ತೃತ್ವವೇ ಮುಂತಾದದ್ದೂ ಅನಾತ್ಮವೆಂದು ಗೊತ್ತಾಗುತ್ತದೆ (೨-೫೮).

ಆತ್ಮನು ಅಹಂಪ್ರತ್ಯಯಗಮ್ಯನೆಂಬ ಮೀಮಾಂಸಕಪಕ್ಷವನ್ನು ಹೀಗೆ ತಳ್ಳಿಹಾಕಬೇಕು : ಅಹಂಕಾರವು ಜ್ಞಾತೃವಿಗೆ ವಿಷಯವಾಗಿರುತ್ತದೆ (೨-೨೪). ಅದು

1. ಅಜ್ಞಾನವನ್ನು ಕಳೆಯುವ 'ತತ್ತ್ವಮಸಿ' ಮುಂತಾದ ವಾಕ್ಯಗಳನ್ನು ಮಹಾವಾಕ್ಯಗಳೆಂದು ಕರೆಯುವ ರೂಢಿಯು ಈಗಿನ ವೇದಾಂತಿಗಳಲ್ಲಿದೆ. ಆದರೆ ಶಾಂಕರಭಾಷ್ಯದಲ್ಲಾಗಲಿ, ವಾರ್ತಿಕಪ್ರಸ್ಥಾನದಲ್ಲಾಗಲಿ, ಈ ಹೆಸರನ್ನು ಪಾರಿಭಾಷಿಕವಾಗಿ ಉಪಯೋಗಿಸಿರುವದು ಕಂಡು ಬರುವುದೇ ಇಲ್ಲ. ವೇದಾಂತದ ಮಹಾತಾತ್ಪರ್ಯವನ್ನು ಈ ವಾಕ್ಯಗಳು ತಿಳಿಸುವದರಿಂದ ಅವನ್ನು ಮಹಾವಾಕ್ಯಗಳೆಂದು ಕರೆಯುವದು ಯುಕ್ತವೂ ಆಗಿದೆ ; ಈ ಹೆಸರಿನಿಂದ ಬ್ರಹ್ಮಾತ್ಮೈಕ್ಯವನ್ನು ಹೇಳುವ ವಾಕ್ಯಗಳನ್ನು ಗುರುತಿಸುವದಕ್ಕೆ ಆಗುವದರಿಂದ ಒಂದು ಸೌಕರ್ಯವೂ ಉಂಟು.

ಅನಾತ್ಮವಾದ ಅಂತಃಕರಣದ ಧರ್ಮವೆಂದು ಪ್ರತ್ಯಕ್ಷದಿಂದಲೇ ತಿಳಿಯಬರುತ್ತದೆ (೨-೨೫). ಆತ್ಮನಲ್ಲಿ ಯಾವ ವಿಭಾಗವೂ ಇಲ್ಲ, ಅಂಶಗಳಿಲ್ಲ, ಅವನು ಅವಿಷಯನು (೨-೨೯) ; ಅಹಂಕಾರವು ಆಗಮಾಪಾಯಿ (೨-೨೨), ಪ್ರಮಾಣ ಗಮ್ಯ (೨-೩೭), ಸುಷುಪ್ತಿಯಲ್ಲಿ ಇರುವದೇ ಇಲ್ಲ (೨-೩೨). ಇದಿಷ್ಟೂ ದೃಷ್ಟಾನ್ವಯದೃಶ್ಯವ್ಯತಿರೇಕದಿಂದ ತಿಳಿಯಬರತಕ್ಕದ್ದು. ಇನ್ನು ಸಾಕ್ಷ್ಯನ್ವಯ ಸಾಕ್ಷ್ಯ ವ್ಯತಿರೇಕದಿಂದ ಅಂತಃಕರಣದ ವಿಕಾರವಾದ ಜ್ಞಾತೃತ್ವವು ಆತ್ಮನ ಸ್ವರೂಪವೆಂಬ ಭ್ರಾಂತಿಯು ತೊಲಗುವದು. ಹೇಗೆಂದರೆ ''ಇದು'' ಎಂದು ವಿಷಯವನ್ನು ತಿಳಿಯುವ ಅಂತಃಕರಣವಿಕಾರವಾದ ಜ್ಞಾತೃತ್ವವಾಗಲಿ, ಇದು ನನಗೆ ಉಪಕಾರಿ ಅಥವಾ ಅಪಕಾರಿಯೆಂಬ ಮಮತ್ವವಾಗಲಿ, ಸುಷುಪ್ತಿಯಲ್ಲಿರುವದೇ ಇಲ್ಲ (೩-೬೨). ಆತ್ಮನು ಅಂತಃಕರಣದ ಪರಿಣಾಮವೆಲ್ಲವನ್ನೂ ನೋಡುವ ಸಾಕ್ಷಿಯು. ಅಂತಃಕರಣವು ಜ್ಞಾತೃವಾಗಿ ವಿಷಯಗಳನ್ನು ಅರಿಯುವಾಗ ವಿಷಯಾಕಾರದಿಂದ ಪರಿಣಮಿಸಿ ಒಂದೊಂದಾಗಿ ಅವನ್ನು ಅರಿಯುತ್ತದೆ. ಸಾಕ್ಷಿಯು ಕೂಟಸ್ಥನಾಗಿದ್ದು ರತ್ನವು ತನ್ನ ಸ್ವರೂಪವಾದ ಬೆಳಕಿನಿಂದ ವಸ್ತುಗಳನ್ನು ಬೆಳಗುವಂತೆ ಜ್ಞಾತ್ರಾದಿಗಳನ್ನು ಒಮ್ಮೆಗೇ ಬೆಳಗುತ್ತಿರುತ್ತಾನೆ (೨-೬೪ ರಿಂದ ೮೯). ಅಂತಃಕರಣದಲ್ಲಿ ಪ್ರತ್ಯಯಗಳ ಉತ್ಪತ್ತಿಯಿಂದ ಜ್ಞಾತೃತ್ವವೂ ದೇಹಾದಿಗಳ ಅಪೇಕ್ಷೆಯಿಂದ ಪ್ರತ್ಯಗಾತ್ಮತ್ವವೂ ಇರುವಂತೆ ತೋರುತ್ತದೆ ; ನಿಜವಾದ ಜ್ಞಾತೃತ್ವವೂ ಪ್ರತ್ಯಗಾತ್ಮತ್ವವೂ ಆತ್ಮನ ಸ್ವರೂಪವೇ ಆಗಿರುತ್ತದೆ (೩-೧೮, ೧೯). ಅಂತಃಕರಣದ ಜ್ಞಾತೃತ್ವಪ್ರತ್ಯಕ್ತ್ವಗಳಂತೆ ಆತ್ಮನಲ್ಲಿ ಅವೆರಡೂ ಒಂದನ್ನೊಂದು ಎಂದಿಗೂ ಅಗಲಿರುವದಿಲ್ಲ, ಅವುಗಳಿಗೆ ಧರ್ಮಧರ್ಮಿಭಾವವೂ ಇರುವದಿಲ್ಲ (೩-೧೨ ರಿಂದ ೧೪). ಹಡಗು ಚಲಿಸುತ್ತಿರುವಲ್ಲಿ ದಡದ ಮರಗಳು ಚಲಿಸುತ್ತಿವೆ ಎಂದು ಭ್ರಾಂತಿಯಾಗುವ ಹಾಗೆ ಪರಿಣಾಮಿಯಾದ ಅಂತಃಕರಣದ ಧರ್ಮವನ್ನು ಕೂಟಸ್ಥನಾದ ಆತ್ಮನಮೇಲೆ ಹಾಕಿ ಅವನನ್ನು ಪ್ರಮಾತೃವೆಂದೂ ಭೋಕ್ತೃವೆಂದೂ ತಪ್ಪಾಗಿ ತಿಳಿಯುತ್ತಿರುವರು (೨-೬೦ ರಿಂದ ೬೩). ನಿಜವಾಗಿ ಆತ್ಮನು ಕೂಟಸ್ಥಾನುಭವರೂಪನೇ ಆಗಿರುತ್ತಾನೆ.

ದೇಹಕ್ಕಿಂತ ವ್ಯತಿರಿಕ್ತವಾದ ಹೊರಗಿನ ವಸ್ತುಗಳು ಅನಾತ್ಮವೆಂಬುದು ತಾನೇ ತಿಳಿದಿರುತ್ತದೆ ; ಇವೆಲ್ಲವನ್ನೂ ಅರಿಯುವವನು ಆತ್ಮನೆಂಬುದೂ ಹಾಗೆಯೇ ತಾನೇ ತಿಳಿದಿರುತ್ತದೆ. ಆದರೆ ನಡುವೆಯಿರುವ ದೇಹಾದಿಬುದ್ಧ್ಯಂತವಾದ ಪದಾರ್ಥಗಳಲ್ಲಿ 'ನಾನು', 'ಇದು' ಎಂಬ ಎರಡು ಬಗೆಯ ಪ್ರತ್ಯಯಗಳಾಗುತ್ತಿರುವದರಿಂದ ಸಂಶಯ

ವುಂಟಾಗುತ್ತಿರುತ್ತದೆ. ಈ ಸಂಶಯವು ಮೇಲೆ ಹೇಳಿರುವ ದ್ವಿವಿಧಾನ್ವಯ ವ್ಯತಿರೇಕದಿಂದ ತೊಲಗಿ ಬುದ್ಧ್ಯಾದಿದೇಹಾಂತವೆಲ್ಲವೂ ಅನಾತ್ಮವೇ ಎಂಬ ನಿಶ್ಚಯವಾಗುತ್ತದೆ (೪-೪ ರಿಂದ ೭ ; ೨-೯೬ ; ೩-೫೪, ೫೫).

ಈ ಆತ್ಮಾನಾತ್ಮವಿಭಾಗವೂ ಅಜ್ಞಾನದ ಕಾರ್ಯವೇ. ಇದನ್ನು ಶ್ರುತಿವಾಕ್ಯವೇ ಅದ್ವಿತೀಯಚೈತನ್ಯಸ್ವರೂಪವನ್ನು ತಿಳಿಸುವ ಮೂಲಕವಾಗಿ ತೊಲಗಿಸ ಬೇಕಾಗಿರುತ್ತದೆ. ಆತ್ಮನು ಸ್ವತಃಸಿದ್ಧನಾಗಿರುತ್ತಾನೆ, ಅನಾತ್ಮವು ಪರತಃಸಿದ್ಧವಾದ ತೋರಿಕೆಮಾತ್ರವಾಗಿರುತ್ತದೆ. ಇವುಗಳನ್ನು ಒಂದರಲ್ಲೊಂದನ್ನು ಹಗ್ಗದಲ್ಲಿ ಹಾವನ್ನು ಕಲ್ಪಿಸುವಂತೆ ಕಲ್ಪಿಸುತ್ತಾರೆ. ಇದಕ್ಕೆಲ್ಲ ಅವಿದ್ಯೆಯೇ ಕಾರಣವು (೨-೧೦೧, ೧೦೨, ೧೦೩), ಇದನ್ನು ವಾಕ್ಯವೇ ತೊಲಗಿಸುತ್ತದೆ (೩-೬). ಪ್ರಮಾಣದಿಂದುಂಟಾದ ಜ್ಞಾನವು ಅಪ್ರಮಾಣವಾದ ಅಜ್ಞಾನವನ್ನು ತೊಲಗಿಸುವದು ಯುಕ್ತವೇ ಆಗಿದೆ (೨-೧೦೪). ಬರಿಯ ಅನ್ವಯವ್ಯತಿರೇಕರೂಪವಾದ ಅನುಮಾನದಿಂದಲೇ ಅಜ್ಞಾನವು ತೊಲಗಲಾರದು. ಆದರಿಂದ ನಾನು ದೇಹಾದಿಗಳು ಎಂಬ ಭಾವ ರೂಪಜ್ಞಾನವು ಹೋಗಿ ದೇಹಾದಿಗಳು ನಾನಲ್ಲ ಎಂಬ ಅಭಾವಜ್ಞಾನವಾಗುತ್ತದೆ. ಭಾವಾಭಾವಗಳನ್ನು ಮೀರಿದ ಆತ್ಮಜ್ಞಾನವು ತತ್ತ್ವಮಸ್ಯಾದಿವಾಕ್ಯಗಳಿಂದಲೇ ಆಗಬೇಕಾಗಿದೆ (೩-೧೧೩ ರಿಂದ ೧೧೫, ೪-೮). ಲಿಂಗದಿಂದಾಗುವ ಅನುಮಿತಿಯಿಂದ ಆತ್ಮಸಾಕ್ಷಾತ್ಕಾರವಾಗಲಾರದು. ಆದರಿಂದ ಆತ್ಮನು ಇದಾನೆ ಎಂದು ತಿಳಿಯುತ್ತದೆ (೩-೫೭) ; ಅವನು ಅನಾತ್ಮವಲ್ಲ, ಭೇದರಹಿತನು ಎಂದೂ ತಿಳಿಯುತ್ತದೆ (೨-೯೬, ೧೦೮, ೩-೬). ಅದ್ವಿತೀಯಾತ್ಮನೇ ನಾನು ಎಂಬುದು ವಾಕ್ಯಮಾತ್ರದಿಂದ ತಿಳಿಯಬರತಕ್ಕದ್ದು. ವಾಕ್ಯವನ್ನು ಅನಾದರಮಾಡಿ ಬರಿಯ ಅನುಮಾನವನ್ನೇ ನಂಬುವವರು ಬೌದ್ಧರಂತೆ ನಿರಾತ್ಮವಾದಿಗಳೂ ಆಗುವ ಸಂಭವವಿದೆ (೩-೩೪).

ಈ ಅನ್ವಯವ್ಯತಿರೇಕನ್ಯಾಯವನ್ನು ಶ್ರುತಿಯು ತಾನೇ ತಿಳಿಸಿಕೊಟ್ಟು ಆತ್ಮ ಸ್ವರೂಪವನ್ನು ಉಪದೇಶಿಸುತ್ತದೆ (೩-೩೯, ೪೦). ಅನ್ವಯವ್ಯತಿರೇಕಗಳಿಂದ ಬುದ್ಧ್ಯಾದಿದೇಹಾಂತವಾದದ್ದೆಲ್ಲವೂ ಅನಾತ್ಮವೇ, ನಾನು ಇದೊಂದೂ ಅಲ್ಲ - ಎಂದು ಗೊತ್ತಾದಬಳಿಕ ಹಾಗಾದರೆ ನಾನು ಯಾರಾಗಿದ್ದೇನು ? - ಎಂಬ ಯೋಚನೆ ಹುಟ್ಟುವದು ಸ್ವಾಭಾವಿಕವಷ್ಟೆ. ಹೀಗೆ ಆಲೋಚನಾ ಪರನಾದವನಿಗೇ ಶ್ರುತಿಯು 'ತತ್ತ್ವಮಸಿ' ಎಂಬ ಉಪದೇಶವನ್ನು ಮಾಡುತ್ತದೆ (೩-೫, ೫೩ ; ೪-೩೪).

ವಾಕ್ಯದ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ಪದಗಳ ಸಾಮಾನಾಧಿಕರಣ್ಯ, ಪದಾರ್ಥಗಳಿಗೆ ವಿಶೇಷಣವಿಶೇಷ್ಯಭಾವ, ಪದಾರ್ಥಗಳಿಗೂ ಆತ್ಮನಿಗೂ ಲಕ್ಷ್ಯಲಕ್ಷಣಭಾವ - ಈ ಮೂರನ್ನೂ ಅರಿತುಕೊಳ್ಳಬೇಕು (೩-೩). 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ತತ್ತ್ವಂಪದಗಳಿಗೆ ಸಾಮಾನಾಧಿಕರಣ್ಯವಿದೆ. ಆದ್ದರಿಂದ 'ನೈದಿಲೆಯು ಕಪ್ಪು' ಎಂಬಂತೆ ಈ ವಾಕ್ಯದಲ್ಲಿ ಪದಗಳಿಂದ ತೋರುವ ಪದಾರ್ಥಗಳಿಗೆ ವಿಶೇಷ್ಯವಿಶೇಷಣಭಾವವು ಏರ್ಪಡುತ್ತದೆ. ಆದ್ದರಿಂದ ತ್ವಂಪದಾರ್ಥವು ತತ್ಪದಾರ್ಥಭಿನ್ನವೆಂಬರ್ಥವುಂಟಾಗುತ್ತದೆ. ಯಾವನು ಅನ್ವಯ ವ್ಯತಿರೇಕಗಳಿಂದ ಆತ್ಮಸ್ವರೂಪವನ್ನು ಸರಿಯಾಗಿ ಅರಿತುಕೊಂಡಿರುವದಿಲ್ಲವೋ ಅವನಿಗೆ 'ನಾನು ದುಃಖಿ' ಎಂಬ ಜ್ಞಾನವೂ ಅದ್ವಿತೀಯಪರಮಾತ್ಮನು ಪರೋಕ್ಷನೆಂಬ ಜ್ಞಾನವೂ ಇರುತ್ತದೆ. ಆದ್ದರಿಂದ ಈ ವಿಶೇಷ್ಯವಿಶೇಷಣಭಾವವು ವಿರುದ್ಧಾರ್ಥವನ್ನು ಹೇಳುವಂತೆ ಕಾಣುತ್ತದೆ. ವಾಕ್ಯವು ಪ್ರಮಾಣವಾಗುವದಕ್ಕೆ ತತ್ತ್ವಂಪದಗಳಲ್ಲಿ ಕಾಣುವ ಈ ವಿರುದ್ಧಾರ್ಥಗಳನ್ನು ಬಿಟ್ಟು ತತ್ತ್ವಂಪದಗಳಿಂದ ಲಕ್ಷಿತವಾಗಿರುವ ಆತ್ಮನನ್ನು ಮಾತ್ರ ಅರಿತುಕೊಳ್ಳಬೇಕಾಗುತ್ತದೆ (೩-೭೭, ೭೮).

ತತ್ತ್ವಮಸಿವಾಕ್ಯದಲ್ಲಿ ತ್ವಂಪದವೂ ಅಹಂಬ್ರಹ್ಮಾಸ್ಮಿ ವಾಕ್ಯದಲ್ಲಿ ಅಹಂ ಎಂಬ ಪದವೂ ಅಹಂವ್ಯಾಜದಿಂದ ಈ ಅದ್ವಿತೀಯಾತ್ಮನನ್ನೇ ತಿಳಿಸುತ್ತದೆ (೩-೪೧, ೪೨). ಅಹಂವೃತ್ತಿಯನ್ನು ಬಿಟ್ಟರೆ ಮತ್ತೆ ಯಾವ ಮಾರ್ಗದಿಂದಲೂ ಆತ್ಮನನ್ನು ತಿಳಿಸುವದಕ್ಕೆ ಆಗುವದಿಲ್ಲ ; ಏಕೆಂದರೆ ಅದನ್ನು ಬಿಟ್ಟು ಬೇರೆಯ ವೃತ್ತಿಗಳಿಂದ ತಿಳಿಸಿದರೆ ಪರಮಾತ್ಮನು ಅನಾತ್ಮವೆಂದಾಗಿ ಶ್ರುತಿಯು ಅಪ್ರಮಾಣವಾಗಿಬಿಡುತ್ತಿತ್ತು (೩-೯೮, ೧೦೧), ಅಹಂಕಾರವು ತನ್ನ ಹೊರಗಿನ ಪದಾರ್ಥಗಳ ದೃಷ್ಟಿಯಿಂದ ಪ್ರತ್ಯಗಾತ್ಮನು. ಸೂಕ್ಷ್ಮವಾದದ್ದು, ಆತ್ಮಚೈತನ್ಯವನ್ನನುಸರಿಸಿ ಚಿದಾಭಾಸವಾಗಿ ತೋರಿಕೊಳ್ಳ ತಕ್ಕದ್ದು, ತಾನಿರುವಾಗ ಆತ್ಮನನ್ನು ಬಿಟ್ಟು ಇರುವದೇ ಇಲ್ಲ. ಈ ಕಾರಣಗಳಿಂದ ಅದನ್ನು ಆತ್ಮನಿಗೆ ಲಕ್ಷಣವಾಗಿ ಉಪಯೋಗಿಸಿರುತ್ತದೆ (೨-೫೫, ೫೬ ; ೩-೧೦೦). ತ್ವಂಪದಕ್ಕೆ ದುಃಖಿತ್ವ ಸದ್ವಿತೀಯತ್ವ - ಮುಂತಾದ ಸಾಮಾನ್ಯಾರ್ಥಗಳು ವಾಕ್ಯಾರ್ಥಜ್ಞಾನವಾಗುವ ಮೊದಲೇ ತಿಳಿದಿರುತ್ತದೆ ; ಹೀಗೆಯೇ ತತ್ಪದಕ್ಕೆ ಪಾರೋಕ್ಷ್ಯವೆಂಬರ್ಥವೂ ಮೊದಲೇ ತಿಳಿದಿರುತ್ತದೆ. ಆದ್ದರಿಂದ ಶ್ರುತಿಗೆ ಅವುಗಳಲ್ಲಿ ತಾತ್ಪರ್ಯವಿರುವದಿಲ್ಲ (೩-೨೩). ಉದ್ದೇಶ್ಯದಲ್ಲಿರುವ ಧರ್ಮಗಳೆಲ್ಲವನ್ನೂ ವಿಧೇಯದೊಡನೆ ಅನ್ವಯಿಸಿಕೊಳ್ಳಬೇಕೆಂಬುದು ಸರಿಯಲ್ಲ. ತ್ವಂಪದಕ್ಕೆ ತೋರುವ ಅರ್ಥವಾದ ಸದ್ವಿತೀಯತ್ವವೂ ದುಃಖಿತ್ವವೂ

ತತ್ಪದಾರ್ಥವಾದ ಅದ್ವಿತೀಯಾಸಂಸಾರಿಸ್ವರೂಪಕ್ಕೆ ಹೊಂದುವದಿಲ್ಲ ; ಇದರಂತೆ ತತ್ಪದಕ್ಕೆ ತೋರುವ ಪಾರೋಕ್ಷ್ಯವೂ ತ್ವಂಪದಾರ್ಥಕ್ಕೆ ಹೊಂದುವದಿಲ್ಲ . ಆದ್ದರಿಂದ ಈ ಸಾಮಾನ್ಯಾರ್ಥಗಳು ಅನುವಾದಕ್ಕಾಗಿ ಹೇಳಿಕೊಂಡವುಗಳೆಂದು ತಿಳಿದು ಅವನ್ನು ಕೈಬಿಟ್ಟು ಮೊದಲು ಅರಿತುಕೊಳ್ಳದೆ ಇದ್ದ , ಪುರುಷಾರ್ಥಕ್ಕೆ ಕಾರಣವಾಗಿರುವ ಅದ್ವಿತೀಯಪ್ರತ್ಯಗಾತ್ಮನೆಂಬ ವಿಶೇಷಾರ್ಥವನ್ನೇ ವಾಕ್ಯಕ್ಕೆ ವಿವಕ್ಷಿತವಾದ ಅರ್ಥವೆಂದು ಸ್ವೀಕರಿಸಬೇಕು (೩-೨೫, ೭೫, ೭೬, ೮೦).

ವಾಕ್ಯದಿಂದುಂಟಾಗುವ ಜ್ಞಾನವು ಘಟಾದಿಜ್ಞಾನದಂತೆ ಜ್ಞಾತೃಜ್ಞೇಯಜ್ಞಾನಭೇದವನ್ನು ಉಳಿಸಿಕೊಂಡು ಆಗುವದಿಲ್ಲ ; ಏಕೆಂದರೆ ಕ್ರಿಯಾಕಾರಕಫಲರಹಿತವಾದ ಅದ್ವಿತೀಯಪ್ರತ್ಯಗಾತ್ಮರೂಪವೇ ಆತ್ಮನಿಗೆ ಸ್ವಾಭಾವಿಕವಾಗಿರುತ್ತದೆ (೩-೭೧). ಅಜ್ಞಾನಾವಸ್ಥೆಯಲ್ಲಿ ದ್ವೈತಕ್ಕಿಂತ ಬೇರೆಯ ತತ್ತ್ವವಿಲ್ಲದಿರುವಂತೆಯೇ ಜ್ಞಾನವಾದಾಗ ಅದ್ವಿತೀಯಾತ್ಮನಿಗಿಂತ ಬೇರೆಯ ವಸ್ತು ಯಾವದೂ ಇರುವದಿಲ್ಲ (೪-೫೦). ಕನಸಿನಲ್ಲಿ ಕಂಡ ಹುಲಿಯ ಗರ್ಜನೆಯೇ ಮುಂತಾದ ನಿಮಿತ್ತದಿಂದ ಕನಸಿನ ದ್ವೈತವನ್ನು ಕಳೆದು ತಾನೊಬ್ಬನೇ ಉಳಿದುಕೊಳ್ಳುವಂತೆ ಶ್ರುತಿವಾಕ್ಯಜ್ಞಾನದಿಂದ ಎಚ್ಚತ್ತವನು ಶಾಸ್ತ್ರ , ಗುರು, ಶಿಷ್ಯ - ಎಂಬ ಭೇದವನ್ನೂ ಸಕಲಸಂಸಾರರೂಪವಾದ ಭೇದವನ್ನೂ ಕಳೆದುಕೊಂಡು ತಾನೇ ತಾನಾಗಿ ಉಳಿಯುವನು (೪-೩೬ ರಿಂದ ೩೮).

ಅದ್ವಿತೀಯಪ್ರತ್ಯಗಾತ್ಮನನ್ನು ಅರಿತುಕೊಂಡ ಜ್ಞಾನಿಯ ವ್ಯವಹಾರವು ಹೇಗಿರುವದು ? ಈ ಜ್ಞಾನವು ಜ್ಞೇಯಾಭಿನ್ನವಾಗಿರುವದರಿಂದ ಜ್ಞಾನಿಯು ಕ್ರಿಯಾಕಾರಕಫಲರಹಿತನಾದ ಆತ್ಮನಲ್ಲಿಯೇ ನಿಷ್ಠನಾಗಿರುತ್ತಾನೆ. ಅವನಿಗೆ ಪ್ರವೃತ್ತಿಧರ್ಮವೂ ಇಲ್ಲ, ನಿವೃತ್ತಿಧರ್ಮವೂ ಇಲ್ಲ. ಜ್ಞಾನದಿಂದ ಅಜ್ಞಾನವು ಪೂರ್ಣವಾಗಿ ನಾಶವಾಗಿರುವವನಿಗೆ ಯಾವ ಕರ್ಮವು ತಾನೆ ಉಳಿದೀತು ? ಜ್ಞಾನಿಯ ದೃಷ್ಟಿಯಲ್ಲಿ ಅಜ್ಞಾನವು ಹೋಗಿ ಜ್ಞಾನವು ಬರಬೇಕೆಂಬುದೂ ಇರುವದಿಲ್ಲ. ಏಕೆಂದರೆ ಅಜ್ಞಾನದಿಂದುಂಟಾಗಿರುವ ದೇಶಕಾಲಾದಿಗಳ ಸಂಬಂಧವು ಆತ್ಮನಿಗಿರುವದೇ ಇಲ್ಲ (೪-೫೪ ರಿಂದ ೫೯). ಆದರೂ ವ್ಯಾವಹಾರಿಕದೃಷ್ಟಿಯಿಂದ ಸಾಂಪ್ರದಾಯಿಕರು ಹೇಳುವದೇನೆಂದರೆ : ಪ್ರವೃತ್ತಿಬೀಜವಾದ ಕಾಮವು ಹೋಗಿಬಿಟ್ಟಿರುವದರಿಂದ ಜ್ಞಾನಿಗೆ ನಿವೃತ್ತಿಧರ್ಮದಿಂದಲೇ ಶರೀರಕ್ಷಯವಾಗುತ್ತದೆ (೪-೬೦, ೬೧). ತತ್ತ್ವಜ್ಞಾನಿಗೆ ಯಥೇಷ್ಟಾಚಾರದ ಪ್ರಸಕ್ತಿಯಿರುವದಿಲ್ಲ ; ಏಕೆಂದರೆ ಅವನಿಗೆ

ಧರ್ಮಾಧರ್ಮಗಳೆರಡೂ ಇರುವದಿಲ್ಲ (೪-೬೨, ೬೪) ; ವಿರಕ್ತನಾದ ಮುಮುಕ್ಷುವು ಕೂಡ ಯಥೇಷ್ಟಾಚಾರಕ್ಕೆ ಹೋಗುವದಿಲ್ಲ ; ಇನ್ನು ಪ್ರವೃತ್ತಿಗಳನ್ನೆಲ್ಲ ನುಂಗಿಹಾಕುವ ಜ್ಞಾನವುಂಟಾದವನು ಹೇಗೆತಾನೆ ಯಥೇಷ್ಟಾಚಾರಕ್ಕೆ ಕೈಹಾಕಿಯಾನು ? ರಾಗದ್ವೇಷಗಳೂ ಯಥೇಷ್ಟಾಚಾರಗಳೂ ಅಜ್ಞಾನದ ಗುರುತು (೪-೬೨ ರಿಂದ ೬೭).

ಈ ಜ್ಞಾನಕ್ಕೆ ಅಮಾನಿತ್ವಾದಿನಿಷ್ಠರೂ ಅದ್ವೇಷ್ಟೃತ್ವಾದಿಸಾಧನವುಳ್ಳವರೂ ಅಧಿಕಾರಿಗಳು. ಜ್ಞಾನಿಗಳಿಗೆ ಈ ಗುಣಗಳು ಸ್ವಭಾವದಿಂದಿರುತ್ತವೆ. ಆದ್ದರಿಂದ ಈ ಗ್ರಂಥಕ್ಕೆ ವಿರಕ್ತರೂ ಸರ್ವಕರ್ಮಸಂನ್ಯಾಸವನ್ನು ಮಾಡಿದವರೂ ಪ್ರತ್ಯಕ್ಪ್ರವಣ ಬುದ್ಧಿಯುಳ್ಳವರೂ ಆದ ಶಾಂತರಾದ ಯತಿಗಳೇ ತಕ್ಕವರು (೪-೭೦ ರಿಂದ ೭೩).

## ಮತಾಂತರಖಂಡನೆ

ಇಲ್ಲಿಯವರೆಗೆ ಹೇಳಿರುವ ಸ್ವಪ್ರಕ್ರಿಯೆಗೆ ವಿರುದ್ಧವಾಗಿ ''ಯಾವದಾದರೊಂದು ಸಾಧನದಿಂದಲೇ ಮೋಕ್ಷವು ಸಿಕ್ಕುತ್ತದೆಯೆಂದು ಶ್ರುತಿಯು ಉಪದೇಶಿಸುತ್ತದೆ'' ಎನ್ನುವವರ ಮತಗಳನ್ನು ಈ ಪ್ರಕರಣದಲ್ಲಿ ಖಂಡಿಸಿರುತ್ತದೆ. (೧) ಕರ್ಮದಿಂದಲೇ ಮೋಕ್ಷವೆಂಬ ಮೀಮಾಂಸಕರ ಪಕ್ಷವನ್ನೂ ಕರ್ಮಜ್ಞಾನಗಳ ಸಮುಚ್ಚಯದಿಂದ ಮೋಕ್ಷವೆಂಬ ಮೀಮಾಂಸಕರ ಮತ್ತು ವೇದಾಂತಿಗಳ ಪಕ್ಷವನ್ನೂ ಖಂಡಿಸಿರುವದಲ್ಲದೆ (೨) ಭಾವನಾರೂಪವಾದ ಉಪಾಸನೆಯಿಂದಲೇ ಮೋಕ್ಷವೆನ್ನುವ, ಮತ್ತು ಶಬ್ದಯುಕ್ತ್ಯಭ್ಯಾಸರೂಪವಾದ ನಿದಿಧ್ಯಾಸನದಿಂದಲೇ ಮೋಕ್ಷವೆನ್ನುವ, ವೇದಾಂತಿಗಳ ಪಕ್ಷವನ್ನೂ ಇಲ್ಲಿ ಖಂಡಿಸಿದೆ. ಈ ಪಕ್ಷಗಳೆಲ್ಲ ಸಿದ್ಧವಸ್ತುವಾದ ಆತ್ಮನ ಸ್ವರೂಪವನ್ನು ಉಪದೇಶಿಸುವ ವೇದಾಂತವಾಕ್ಯದ ಜ್ಞಾನದಿಂದಲೇ ಮೋಕ್ಷವಾಗುತ್ತದೆ ಎಂಬ ಈ ಪ್ರಕರಣದ ಸಿದ್ಧಾಂತಕ್ಕೆ ಎದುರಾಳಿಗಳಾಗಿರುತ್ತವೆ. ಇಲ್ಲಿರುವ ಪೂರ್ವಪಕ್ಷಗಳಲ್ಲದೆ ಇನ್ನೂ ಅನೇಕ ಪಕ್ಷಗಳನ್ನು ಬೃಹದಾರಣ್ಯಕಭಾಷ್ಯವಾರ್ತಿಕದಲ್ಲಿ ವಿಸ್ತಾರವಾಗಿ ಖಂಡಿಸಿರುತ್ತದೆ. ಆದ್ದರಿಂದ ನಾವು ಇಲ್ಲಿ ಸಂಕ್ಷಿಪ್ತವಾಗಿ ಸೂಚಿತವಾಗಿರುವ ಅಭಿಪ್ರಾಯಗಳನ್ನು ಆ ವಾರ್ತಿಕದ ಸಹಾಯದಿಂದ ನಿರ್ಣಯಿಸುವದಕ್ಕೆ ಪ್ರಯತ್ನಿಸಿರುತ್ತೇವೆ.

(೧) ಕರ್ಮದಿಂದಲೇ ಮೋಕ್ಷವೆಂಬ ಪೂರ್ವಪಕ್ಷವು ತೈತ್ತಿರೀಯಭಾಷ್ಯ, ಗೀತಾಭಾಷ್ಯ, ಸೂತ್ರಭಾಷ್ಯ - ಇವುಗಳಲ್ಲಿ ನಿರಸ್ತವಾಗಿರುವಂತೆಯೇ ಇಲ್ಲಿಯೂ ನಿರಸ್ತವಾಗಿದೆ. ನಿತ್ಯನೈಮಿತ್ತಿಕಕರ್ಮಗಳನ್ನು ಮಾತ್ರ ಮಾಡುತ್ತಿದ್ದರೆ

ಕಾಮ್ಯನಿಷಿದ್ಧಗಳಿಂದಾಗಬೇಕಾದ ಒಳ್ಳೆಯ ಕೆಟ್ಟಫಲಗಳು ಆಗುವದಿಲ್ಲ ; ಕರ್ಮವನ್ನು ಬಿಟ್ಟದ್ದರಿಂದಾಗಬೇಕಾದ ಪ್ರತ್ಯವಾಯವೂ ಆಗುವದಿಲ್ಲ . ಪ್ರಾರಬ್ಧಕರ್ಮವನ್ನು ಅನುಭವಿಸಿದ ಬಳಿಕ ಆತ್ಮನಲ್ಲಿಯೇ ನಿಲ್ಲುವದೆಂಬ ಮೋಕ್ಷವು ಅಯತ್ನದಿಂದ ಆಗುತ್ತದೆ. ಆತ್ಮಜ್ಞಾನವೇನೂ ಬೇಕಿಲ್ಲ -ಎಂಬುದು ಈ ಪಕ್ಷದವರ ಅಭಿಪ್ರಾಯವು. ಈ ಪಕ್ಷದ ಅಭಿಪ್ರಾಯವು ಕುಮಾರಿಲರ ವಾರ್ತಿಕದಲ್ಲಿಯೂ ಇದೆ. ಆದರೆ ಅಲ್ಲಿ ಆತ್ಮಜ್ಞಾನವನ್ನು ಒಪ್ಪಿ ಕರ್ಮಜ್ಞಾನಗಳ ಸಮುಚ್ಚಯದಿಂದ ಮೋಕ್ಷವೆಂದು ತಿಳಿಸಿರುತ್ತದೆ (ತಂ. ವಾ. ೧-೩-೨೫, ೨೦೮). ಕರ್ಮವಾದಿಗಳ ಪಕ್ಷಗಳನ್ನು ಖಂಡಿಸಿರುವದು ಹೇಗೆಂದರೆ : ಹಿಂದೆ ಕೂಡಿಹಾಕಿರುವ ಪಾಪಪುಣ್ಯಗಳು ಅನಂತವಾಗಿರುವದರಿಂದ ಅವುಗಳು ಹೇಗೂ ನಾಶವಾಗುವಹಾಗಿಲ್ಲ ; ಈಗ ಮತ್ತೆ ಪಾಪಪುಣ್ಯಗಳನ್ನು ಮಾಡುವದಿಲ್ಲವೆಂದು ಹೇಳುವದೂ ಆಗದ ಮಾತು. ಕರ್ಮದಿಂದ ಮೋಕ್ಷವೆಂದು ಶ್ರುತಿಯಲ್ಲಿಲ್ಲ . ಕರ್ಮಸಂನ್ಯಾಸಪೂರ್ವಕವಾದ ಜ್ಞಾನದಿಂದ ಮೋಕ್ಷವಾಗುವದೆಂದು ಶ್ರುತಿಯಲ್ಲಿದೆ ; ಜ್ಞಾನದಿಂದ ಮೋಕ್ಷವಾಗುವದು ಪ್ರತ್ಯಕ್ಷಾನುಭವದಲ್ಲಿಯೂ ಇದೆ. ಕರ್ಮವನ್ನು ದೇಹಾದಿಗಳು ತಾನೆಂದು ಭಾವಿಸಿರುವ ಅಜ್ಞನಿಗೇ ಹೇಳಿದ್ದೆಂಬುದು ಯುಕ್ತಿಗೂ ಹೊಂದುತ್ತದೆ. ಆದ್ದರಿಂದ ಈ ಪಕ್ಷವು ಸರಿಯಲ್ಲ - ಎಂದು ಈ ಮತವನ್ನು ಇಲ್ಲಿ ಖಂಡಿಸಿರುತ್ತದೆ (೧-೨೩ ರಿಂದ ೯೫).

(೨) ಕರ್ಮಜ್ಞಾನಗಳ ಸಮುಚ್ಚಯದಿಂದ ಮೋಕ್ಷವೆಂಬ ಮತವನ್ನು ಮುಖ್ಯವಾಗಿ ಜ್ಞಾನಕರ್ಮಗಳಿಗಿರುವ ವಿರೋಧದ ಆಧಾರದ ಮೇಲೆ ತಿರಸ್ಕರಿಸಿದೆ (೧-೫೮). ಕರ್ಮಪ್ರಕರಣದಲ್ಲಿರುವ ಜ್ಞಾನವು ಕರ್ಮಾಂಗವಾಗಬಹುದಾದರೂ ಹುಟ್ಟಿದಮಾತ್ರದಿಂದ ಅಜ್ಞಾನವನ್ನೇ ನಾಶಗೊಳಿಸುವ ಸ್ವಪ್ರಕರಣಸ್ಥವಾದ ಆತ್ಮಜ್ಞಾನವು ಕರ್ಮಕ್ಕೆ ಎಂದಿಗೂ ಅಂಗವಾಗಲಾರದು (೧-೬೩, ೬೫) ಎಂಬುದು ಈ ಮತದ ಖಂಡನೆಯ ಸಾರವು. ಬ್ರಹ್ಮವು ನಾನಾರಸವುಳ್ಳದ್ದು, ಸಮಸ್ತವ್ಯಸ್ತರೂಪವಾಗಿ ಎಂದರೆ ಸಾಮಾನ್ಯವಿಶೇಷರೂಪವಾಗಿದೆ (೧-೭೭) ಎಂಬ ವೇದಾಂತಿಗಳ ಪಕ್ಷದಲ್ಲಿಯೂ ಜ್ಞಾನಕರ್ಮಸಮುಚ್ಚಯವು ಸಿದ್ಧಿಸುವದಿಲ್ಲ (೧-೬೮) ಎಂದು ಇದೇ ಸಂದರ್ಭದಲ್ಲಿ ಹೇಳಿರುತ್ತದೆ. ಈ ಪಕ್ಷವು ಭರ್ತೃಪ್ರಪಂಚರೆಂಬವರ ಅನುಯಾಯಿಗಳದು ಎಂದು ಬೃಹದಾರಣ್ಯಕಭಾಷ್ಯದಿಂದ ತಿಳಿಯಬರುತ್ತದೆ. ಬ್ರಹ್ಮವು ಸವಿಶೇಷವು ಎಂದು ಆ ಪಕ್ಷದವರು ಹೇಳುತ್ತಿದ್ದದ್ದರಿಂದ ಸಾಮಾನ್ಯವಿಶೇಷಭಾವವಿಲ್ಲದ ಕೂಟಸ್ಥಚೈತನ್ಯವೇ ಆತ್ಮನ ಪರಮಾರ್ಥ

ರೂಪವೆಂದು ಈ ಪ್ರಕರಣದಲ್ಲಿ (೩-೧೭) ಹೇಳಿದೆ. ಪರಮಾತ್ಮನಲ್ಲಿ ಸಾಮಾನ್ಯ ವಿಶೇಷಭಾವಗಳಿಲ್ಲವೆಂಬುದನ್ನು ತಿಳಿಸುವದಕ್ಕಾಗಿ ''ಅವ್ಯಾವೃತ್ತಾನನುಗತ''ವೆಂಬ ವಿಶೇಷಣವನ್ನು ವಾರ್ತಿಕದಲ್ಲಿ ಮತ್ತೆಮತ್ತೆ ಉಪಯೋಗಿಸಿರುತ್ತದೆ. ಈ ಮತವನ್ನು ಇಲ್ಲಿ ಖಂಡಿಸಿರುವದರ ಸಾರವು ಇಷ್ಟು : ಈ ನಾನಾರಸರೂಪವಾದ ಬ್ರಹ್ಮವು ಸಾಧಕನ ಆತ್ಮವಾಗಿದೆಯೊ, ಅನಾತ್ಮವಾಗಿದೆಯೊ, ಅವನಿಗಿಂತ ಭಿನ್ನಾಭಿನ್ನವೊ ? ಮೊದಲನೆಯ ಪಕ್ಷದಲ್ಲಿ ಬ್ರಹ್ಮವು ನಮ್ಮ ಆತ್ಮನೇ ಎಂಬ ಜ್ಞಾನವೇ ಮೋಕ್ಷಕ್ಕೆ ಸಾಕು (೧-೭೦). ಅದು ಸಾಧಕನಿಗಿಂತ ಭಿನ್ನವಾದರೆ ಬ್ರಹ್ಮಾತ್ಮತ್ವವು ಸಿದ್ಧವಾಗಲೇ ಆರದು ; ಒಂದು ವೇಳೆ ಸಿದ್ಧವಾದರೂ ಜ್ಞಾನಾಭ್ಯಾಸರೂಪವಾದ ಉಪಾಸನೆಯಿಂದ ಆಗಬಹುದು, ಕರ್ಮದಿಂದಲಂತೂ ಆಗಲಾರದು (೧-೭೧, ೭೨). ಅದು ಸಾಧಕನಿಗಿಂತ ಭಿನ್ನಾಭಿನ್ನವೆಂಬ ಪಕ್ಷವು ವಿರುದ್ಧವಾಗಿರುತ್ತದೆ ; ಏಕೆಂದರೆ ಒಂದೇ ಕಾಲದಲ್ಲಿ ಒಂದೇ ವಸ್ತುವಿಗಿಂತ ಭಿನ್ನವೂ ಅಭಿನ್ನವೂ ಆಗಿರುವದೆಂಬ ಮಾತು ವ್ಯಾಹತವು (೧-೭೮). ಬ್ರಹ್ಮವು ವಿಶೇಷರೂಪವಾದ ಜೀವರಿಗಿಂತ ಭಿನ್ನಾಭಿನ್ನ ಎನ್ನುವುದಾದರೆ ಮುಕ್ತನಿಗೆ ಬ್ರಹ್ಮರೂಪವನ್ನು ಪಡೆದಾಗ ಎಲ್ಲಾ ಜೀವರ ದುಃಖವೂ ಗಂಟುಬೀಳುವದು (೧-೭೮). ಆದ್ದರಿಂದ ಈ ಪಕ್ಷದಲ್ಲಿಯೂ ಕರ್ಮಜ್ಞಾನಸಮುಚ್ಚಯದಿಂದ ಮೋಕ್ಷವಿಲ್ಲ.

## ಇಲ್ಲಿ ಖಂಡಿಸರುವ ಅದ್ವೈತಮತಗಳು

(೧) ಈ ಪ್ರಕರಣದಲ್ಲಿ ಖಂಡಿಸಿರುವ ಅದ್ವೈತಮತಗಳು ಯಾರವು ಎಂಬುದನ್ನು ನಿಶ್ಚಯಮಾಡುವದು ಕಷ್ಟ. ಬೃಹದಾರಣ್ಯಕಭಾಷ್ಯವಾರ್ತಿಕದಲ್ಲಿ ''ವಿಜ್ಞಾಯ ಪ್ರಜ್ಞಾಂ ಕುರ್ವೀತ'' (ಬೃ. ೪-೪-೨೧) ಎಂಬ ವಾಕ್ಯಾರ್ಥವನ್ನು ವಿವರಿಸುವ ಸಂದರ್ಭದಲ್ಲಿ ಸುರೇಶ್ವರಾಚಾರ್ಯರು ಮೂರು ಪಕ್ಷಗಳನ್ನು ವಿಸ್ತಾರವಾಗಿ ವಿಮರ್ಶಿಸಿರುತ್ತಾರೆ. ಮೊದಲನೆಯ ಪಕ್ಷವು ಭರ್ತೃಪ್ರಪಂಚರದೆಂದು (ಬೃ. ವಾ. ೪-೪-೭೪೧) ವಾರ್ತಿಕಕಾರರು ತಾವೇ ಬಾಯಿಬಿಟ್ಟು ಹೇಳಿರುತ್ತಾರೆ. ಭರ್ತೃಪ್ರಪಂಚರು ಹೇಳುವದೇನೆಂದರೆ ವಾಕ್ಯವು ವಸ್ತುಸಾಮಾನ್ಯವನ್ನು ಬುದ್ಧಿಗೆ ಹತ್ತಿಸುತ್ತದೆಯಾದ್ದರಿಂದ ಶಬ್ದದಿಂದ ತಿಳಿದುಕೊಂಡ ವಸ್ತುವನ್ನೇ ಭಾವನಾಜ್ಞಾನಸಂತಾನಗಳಿಂದ ಸಾಕ್ಷಾತ್ಕಾರಮಾಡಿಕೊಳ್ಳಬೇಕು ಎಂಬುದನ್ನು ''ವಿಜ್ಞಾಯ ಪ್ರಜ್ಞಾಂ ಕುರ್ವೀತ'' ಎಂಬ ವಾಕ್ಯವು ತಿಳಿಸುತ್ತದೆ (ಬೃ.ವಾ. ೪-೪-೭೦೭, ೭೦೮, ೭೩೭). ಇಲ್ಲಿಯೂ 'ಭಾವನೋಪಚಯದಿಂದಲೇ

ಅಜ್ಞಾನವು ನಿಶ್ಶೇಷವಾಗಿ ಹೋಗುತ್ತದೆ' (೧-೬೭) ಎಂದು ಹೇಳಿರುವ ಪಕ್ಷವು ಇದೇ ಆಗಿರಬಹುದೆ ? -ಎಂಬುದನ್ನು ನಾವು ಆಲೋಚಿಸಬೇಕು. ಇದು ನಿಜವಾದರೆ ಈ ಪಕ್ಷವು ಸವಿಶೇಷಾದ್ವೈತವಾದಿಗಳದ್ದು ಎಂದಾಗುತ್ತದೆ.

(೨) ಇನ್ನು ಬೃಹದಾರಣ್ಯಕವಾರ್ತಿಕದಲ್ಲಿ ಮೇಲೆ ಹೇಳಿರುವ ಸಂದರ್ಭದಲ್ಲಿಯೇ ವಾಕ್ಯವು ಸಂಸರ್ಗವನ್ನು ಬೋಧಿಸುತ್ತದೆಯಾದ್ದರಿಂದಲೂ ಬ್ರಹ್ಮವು ಸಾಮಾನ್ಯವಿಶೇಷರಹಿತವಾಗಿದ್ದು ಅದರಲ್ಲಿ ಯಾವ ಸಂಸರ್ಗವೂ ಇಲ್ಲದ್ದರಿಂದಲೂ ಶಬ್ದವು ಸಾಕ್ಷಾತ್ತಾಗಿ ಬ್ರಹ್ಮವನ್ನು ತಿಳಿಸಲಾರದು. ಆದ್ದರಿಂದ ವಾಕ್ಯಜ್ಞಾನವನ್ನು ಅಭ್ಯಾಸಮಾಡುವದೆಂಬ ನಿದಿಧ್ಯಾಸನವನ್ನು ಮತ್ತೆಮತ್ತೆ ಮಾಡಬೇಕು -ಎಂಬುದೇ ''ವಿಜ್ಞಾಯ ಪ್ರಜ್ಞಾಂ ಕುರ್ವೀತ'' ಎಂಬ ವಾಕ್ಯದ ಅಭಿಪ್ರಾಯ - ಎಂಬವರ ಪಕ್ಷವನ್ನು (ಬೃ. ವಾ. ೪-೪-೭೯೬ ರಿಂದ ೮೧೯) ವರ್ಣಿಸಿದೆ. ಈ ಪಕ್ಷವನ್ನೇ ಈ ಪ್ರಕರಣದಲ್ಲಿಯೂ (೧-೬೭, ೩-೯)ರಲ್ಲಿಯೂ ವರ್ಣಿಸಿದೆ ಎಂದು ನಾವು ನಂಬಬಹುದು. ಆದರೆ ಈ ಮತವು ಯಾರದು ? - ಎಂಬುದು ನಿಶ್ಚಯವಾಗುವಂತಿಲ್ಲ . ಬೃಹದಾರಣ್ಯಕವ್ಯಾಖ್ಯಾತೃಗಳಾದ ಆನಂದ-ಜ್ಞಾನರು ಇದು 'ಮಂಡನಾದಿಗಳ' ಅಭಿಪ್ರಾಯವೆಂದು (ಬೃ.ವಾ. ೪-೩-೭೯೭) ವರ್ಣಿಸಿರುತ್ತಾರೆ. ಆದರೆ ಅದೇ ವ್ಯಾಖ್ಯಾತೃಗಳು ಸಂಬಂಧವಾರ್ತಿಕದಲ್ಲಿ ಪ್ರಸಂಖ್ಯಾನವಾದದ ತಿರಸ್ಕಾರವು ಪ್ರಸ್ತುತವಾಗಿರುವ ಕಡೆಯಲ್ಲಿ (ಸಂ. ವಾ. ೭೬೧ ರಿಂದ ಮುಂದಕ್ಕೆ) ಪ್ರಸಂಖ್ಯಾನವಾದದವರು ಹೇಳುವ ನಿಯೋಗಪಕ್ಷವನ್ನು 'ಬ್ರಹ್ಮದತ್ತಾದಿಗಳ' ಮತವೆಂದೂ (ಸಂ.ವಾ. ೭೯೭) ಹೇಳಿರುತ್ತಾರೆ. ಅಲ್ಲಿಯೂ ವಾರ್ತಿಕಕಾರರು ವಾಕ್ಯವು ಸಂಸರ್ಗವನ್ನು ಹೇಳುತ್ತದೆ ಎಂಬ ಮತವನ್ನು ತಿರಸ್ಕರಿಸಿರುತ್ತಾರೆ (ಸಂ.ವಾ. ೭೮೦, ೭೮೧). ಆದ್ದರಿಂದ ವ್ಯಾಖ್ಯಾನಕಾರರಿಗೆ ವಾಕ್ಯವು ಪದಾರ್ಥಸಂಸರ್ಗವನ್ನು ಹೇಳುತ್ತದೆ ಎಂಬುದು ಯಾರ ಮತವೆಂಬ ಬಗ್ಗೆ ನಿಶ್ಚಯವಾಗಿರಲಿಲ್ಲವೆಂದು ತಿಳಿಯಬೇಕಾಗಿದೆ. ಇದೂ ಅಲ್ಲದೆ ವಾಕ್ಯವು ಸಂಸರ್ಗವನ್ನೇ ಹೇಳುತ್ತದೆ ಎಂಬ ಪಕ್ಷವು ಮಂಡನಮಿಶ್ರರದ್ದಲ್ಲವೆಂಬುದಕ್ಕೆ ನಮಗೆ ಅವರ ಬ್ರಹ್ಮಸಿದ್ಧಿಯು ಸಾಕ್ಷಿಯಾಗಿರುತ್ತದೆ. ಏಕೆಂದರೆ ಅಲ್ಲಿ ಮಂಡನಮಿಶ್ರರು ಈ ಮತವನ್ನು ಪೂರ್ವಪಕ್ಷಿಯ ದ್ವಾರದಿಂದ ಖಂಡಿಸಿ (ಬ್ರ.ಸಿ.ಪು.೩೩) ಸ್ವಪ್ರಕ್ರಿಯೆಯನ್ನು ಬೇರೆಯಾಗಿಯೇ (ಬ್ರ.ಸಿ.ಪು. ೩೫) ಹೇಳಿರುತ್ತಾರೆ. ಆದ್ದರಿಂದ ಈ ಮತವು ಪ್ರಸಂಖ್ಯಾನನಿಯೋಗವನ್ನೊಪ್ಪಿದ್ದ ಕೆಲವು ಪೂರ್ವಾಚಾರ್ಯರು ಗಳದ್ದೆಂದಿಷ್ಟೇ ಸದ್ಯಕ್ಕೆ ಹೇಳಬಹುದಾಗುತ್ತದೆ. ಪ್ರಸಂಖ್ಯಾನವಾದವನ್ನು

ನೈಷ್ಕರ್ಮ್ಯಸಿದ್ಧಿಯಲ್ಲಿಯೂ, ಸುರೇಶ್ವರರು ಸಂಮತಿಗೆಂದು ಪ್ರಮಾಣವಚನಗಳನ್ನು ಆರಿಸಿಕೊಳ್ಳುವದಕ್ಕೆ ಮೂಲಗ್ರಂಥವಾಗಿರುವ ಉಪದೇಶಸಾಹಸ್ರಿಯಲ್ಲಿಯೂ, ವಿಸ್ತಾರವಾಗಿ ಖಂಡಿಸಿರುವದರಿಂದ ಆಗ್ಗೆ ಈ ವಾದಿಗಳ ಮತವು ಅದ್ವೈತಿಗಳಲ್ಲಿ ಪ್ರಬಲವಾಗಿತ್ತೆಂದೂ ಅದನ್ನು ಖಂಡಿಸುವದಕ್ಕಾಗಿಯೇ ಸುರೇಶ್ವರರು ನೈಷ್ಕರ್ಮ್ಯಸಿದ್ಧಿಯನ್ನು ಬರೆದರೆಂದೂ ಊಹಿಸುವದಕ್ಕೆಡೆಯಿದೆ.

ಪ್ರಸಂಖ್ಯಾನವಾದಿಗಳು ತತ್ತ್ವಮಸಿವಾಕ್ಯಾರ್ಥವು ಪ್ರತ್ಯಕ್ಷಕ್ಕೆ ವಿರುದ್ಧವಾಗಿರುವದರಿಂದಲೂ ಅದು ವಸ್ತುಬೋಧಕವಾಗಿರುವ ಅಭಿಧಾಶ್ರುತಿಯಾಗಿರುವದರಿಂದಲೂ (೩-೪೭) ಬ್ರಹ್ಮವನ್ನು ನೇರಾಗಿ ಹೇಳುವದಿಲ್ಲವೆಂದು ವಾದಿಸಿರುವದನ್ನು ಖಂಡಿಸಿ ವಾಕ್ಯವು ಭೇದಸಂಸರ್ಗರಹಿತವಾದ ಅವಾಕ್ಯಾರ್ಥವನ್ನೇ ತಿಳಿಸುತ್ತದೆ (೩-೨೬, ೮೬) ಎಂದು ಹೇಳಿರುವದಲ್ಲದೆ ಪ್ರಮಾಣಗಳಿಗೆ ಪರಸ್ಪರವಿರೋಧವೆಂಬುದೇ ಸರಿಯಲ್ಲ ಎಂದು (೩-೪೭, ೪೮, ೮೩) ತಿಳಿಸಿ ಶಬ್ದಸಂಬಂಧವು ಇಲ್ಲದಿದ್ದರೂ ಸುಪ್ತಪುರುಷನನ್ನು ಎಚ್ಚರಿಸುವ ವಾಕ್ಯದಂತೆ ತತ್ತ್ವಮಸಿವಾಕ್ಯವು ಅಜ್ಞಾನವನ್ನು ಕಳೆಯುವ ಮೂಲಕ ಸ್ವತಃಸಿದ್ಧಾನುಭವರೂಪವಾದ ಆತ್ಮನನ್ನು ತಿಳಿಸಿಕೊಡಬಹುದಾಗಿದೆ (೩-೩೮, ೧೦೩ ರಿಂದ ೧೦೫), ವಾಕ್ಯವು ಅಪ್ರಮಾಣವೆಂಬುದಕ್ಕೆ ಕಾರಣವೂ ಇಲ್ಲ (೩-೬೮ ರಿಂದ ೭೦) - ಎಂದು ಸ್ವಪಕ್ಷವನ್ನು ಸ್ಥಾಪಿಸಿಕೊಂಡಿರುತ್ತಾರೆ.

ಪ್ರಸಂಖ್ಯಾನಮತದಲ್ಲಿ ನೈಷ್ಕರ್ಮ್ಯಸಿದ್ಧಿಕಾರರು ತೋರಿಸಿರುವ ಮುಖ್ಯದೋಷಗಳು ಯಾವವೆಂದರೆ : ದುಃಖಿತ್ವವು ಆವಿದ್ಯಕವೆಂದಾದರೆ ಜ್ಞಾನದಿಂದಲೇ ಅದುಹೋಗಿಬಿಡುತ್ತದೆಯಾದ್ದರಿಂದ ಪ್ರಸಂಖ್ಯಾನವು ನಿಷ್ಫಲವು ; ದುಃಖಿತ್ವವು ಪ್ರಮಾಣಿಕವೇ ಆದರೆ ಅದು ಎಷ್ಟು ಪ್ರಸಂಖ್ಯಾನವನ್ನು ಮಾಡಿದರೆ ತಾನೆ ಹೇಗೆ ಹೋದೀತು ? (೩-೮೮). ಹೋಗುವದೆಂದರೆ ಪ್ರಸಂಖ್ಯಾನದಿಂದಾದ ಅನುಭವವು ಪ್ರತ್ಯಕ್ಷವಿರುದ್ಧವೆಂದೇ ಆಗುವದು (೩-೮೯). ಪ್ರಸಂಖ್ಯಾನವೆಂದರೆ, ಶಬ್ದಯುಕ್ತಿಗಳ ಅಭ್ಯಾಸವಷ್ಟೆ . ಪ್ರಮಾಣಗಳು ಯಾವವೂ ಅಭ್ಯಾಸದಿಂದ ಪ್ರಮೆಯನ್ನುಂಟುಮಾಡುವದು ಕಂಡಿಲ್ಲ . ಪ್ರತಿಜ್ಞಾಹೇತುದೃಷ್ಟಾಂತಗಳಂತೆ ಶಬ್ದಯುಕ್ತಿಗಳು ಒಂದಕ್ಕೊಂದು ಸಹಾಯವಾಗುವವೆಂಬುದೂ ಸರಿಯಲ್ಲ ; ಏಕೆಂದರೆ ಪ್ರಮಾಣವು ಮತ್ತೊಂದು ಪ್ರಮಾಣದ ಸಹಾಯವನ್ನು ಬಯಸಿದರೆ ಅದಕ್ಕೆ ಸ್ವತಃಪ್ರಮಾಣ್ಯವು ಇಲ್ಲವಾಗುವದು. ಆದ್ದರಿಂದ ಅಭ್ಯಾಸದಿಂದ

ಬುದ್ಧಿಯಲ್ಲಾಗುವ ಈ ಅತಿಶಯವು ಭಾವನಾರೂಪವಾದ ಐಕಾಗ್ರ್ಯವೆಂದೇ ಹೇಳಬೇಕಾಗುವದು. ಆಗ ಅದರ ಫಲವು ಆತ್ಯಂತಿಕವಾಗಲೇ ಆರದು (೩-೮೬, ೯೦, ೯೧). ಏಕೆಂದರೆ ದುಃಖಿಯು ನಾನು ಎಂಬ ಅನಾದಿಕಾಲದ ಭಾವನೆಯು ಪ್ರಸಂಖ್ಯಾನದಿಂದ ಹೋಗುವದೆಂದರೆ ಸ್ವಲ್ಪದಿನಗಳು ಅಭ್ಯಾಸಮಾಡಿದ ಭಾವನೆಯು ಶಾಶ್ವತವಾಗಿರಬಹುದೆಂದು ಹೇಗೆತಾನೆ ನಂಬುವದು (೩-೯೨, ೯೩) ? ಶಾಸ್ತ್ರದಿಂದಾಗದ ಜ್ಞಾನವು ಪ್ರಸಂಖ್ಯಾನದಿಂದ ಆಗುತ್ತದೆ ಎಂದರೆ ಶಾಸ್ತ್ರವು ಅಪ್ರಮಾಣವೆಂದೇ ಆಗುವದು (೩-೧೨೩). ಆದ್ದರಿಂದ ಪ್ರಸಂಖ್ಯಾನ ವಿಧಿಯನ್ನು ವಾಕ್ಯಕ್ಕೆ ಕಲ್ಪಿಸುವದು ಸರ್ವಥಾ ಸರಿಯಲ್ಲ (೧-೯೮, ೩-೧೧೯ ರಿಂದ ೧೨೧). ಪ್ರಸಂಖ್ಯಾನವಿಧಿಯು ಅತ್ಯಾವಶ್ಯಕವೆನ್ನುವವರು ಬೇಕಾದರೆ ಶ್ರವಣಾದಿಗಳಲ್ಲಿ ಆ ವಿಧಿಯನ್ನು ಕಲ್ಪಿಸಿಕೊಳ್ಳಬಹುದು (೩-೧೨೫, ೧೨೬).

(೩) ಬೃಹದಾರಣ್ಯಕವಾರ್ತಿಕದಲ್ಲಿ ಇದೇ ಸಂದರ್ಭದಲ್ಲಿ ಖಂಡಿಸಿರುವ ಮತ್ತೊಂದು ಮತವುಂಟು. ಆ ಪಕ್ಷದವರ ಅಭಿಪ್ರಾಯವೇನೆಂದರೆ (ಬೃ.ವಾ. ೪-೪-೮೭೭ ರಿಂದ ೮೮೫) ವಾಕ್ಯಶ್ರವಣದಿಂದ ಯಥಾರ್ಥಜ್ಞಾನವೇ ಆಗುವದಾದರೂ ಅನಾದ್ಯವಿದ್ಯೆಯಿಂದ ಅದು ಬಾಧಿತವಾಗಿಬಿಡುತ್ತದೆ. ಆದ್ದರಿಂದಲೇ ಜ್ಞಾನಿಗಳಲ್ಲಿಯೂ ಅವಿದ್ಯೆಯ ಕಾರ್ಯವಾದ ರಾಗಾದಿಗಳು ಕಾಣುತ್ತಲೇ ಇರುವವು. ಆದ್ದರಿಂದ ಅವಿದ್ಯೆಯು ನಿರನ್ವಯವಾಗಿ ನಾಶವಾಗುವ ವರೆಗೂ ಮತ್ತೆಮತ್ತೆ ಜ್ಞಾನಾಭ್ಯಾಸವನ್ನು ಮಾಡುತ್ತಿರಬೇಕು. ಈ ಪಕ್ಷಕ್ಕೆ ಗೌಡಪಾದ ರವರ ಸಮ್ಮತಿಯೂ ಇದೆ. 'ತತ್ತ್ವದಿಂದ ಅಪ್ರಚ್ಯುತನಾಗದೆ ಇರಬೇಕು' (೨-೩೮) ಎಂದು ಗೌಡಪಾದರು ಹೇಳಿರುವದಕ್ಕೂ ಮನೋನಿಗ್ರಹಕ್ಕೆ ಉಪಾಯವನ್ನು ಅವರು ಉಪದೇಶಿಸಿರುವದಕ್ಕೂ (೩-೪೦ ರಿಂದ ೪೬) ಇದೇ ಕಾರಣವೆಂದು ಈ ಮತದವರು ಭಾವಿಸಿರುತ್ತಾರೆ (ಬೃ. ವಾ. ೪-೪-೮೮೭, ೮೮೮).

ಈ ಪಕ್ಷದವರು ಯಾರೆಂಬುದು ಸರಿಯಾಗಿ ತಿಳಿಯುವಂತಿಲ್ಲ. ನೈಷ್ಕರ್ಮ್ಯಸಿದ್ಧಿಯಲ್ಲಿಯೂ (೧-೩೮) ಇದನ್ನು ಸೂಚಿಸಿ ಖಂಡಿಸಿದೆ. ರಾಗವು ಅವಿದ್ಯೆಗೆ ಗುರುತು ಎಂದು (೪-೬೭) ಬ್ರಹ್ಮಸಿದ್ಧಿಯಲ್ಲಿ ಹೇಳಿರುವದು ಈ ಪಕ್ಷದವರ ನಿರಾಸಕ್ಕಾಗಿಯೇ ಇರಬಹುದು. ಮೇಲೆ ಉದಾಹರಿಸಿರುವ ಗೌಡಪಾದಕಾರಿಕೆಗಳ ಸಂದರ್ಭದಲ್ಲಿ ಶ್ರೀಶಂಕರಭಗವತ್ಪಾದರವರು ಬರೆದಿರುವ ವ್ಯಾಖ್ಯಾನವನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಈ ಪಕ್ಷದವರ ಖಂಡನೆಗಾಗಿ ಅವರು ಪ್ರಯತ್ನಿಸಿರುವಂತೆ ಹೊಳೆಯದೆ ಇರದು. ಇದರಿಂದ ಆಚಾರ್ಯ

ರಿಗಿಂತಲೂ ಮೊದಲೇ ಗೌಡಪಾದರವರ ಅನುಯಾಯಿಗಳಲ್ಲಿ ಆಗಲೆ ಮತಭೇದವಾಗಿತ್ತೆಂದು ಕಲ್ಪಿಸಬಹುದಾಗುತ್ತದೆ. ಬ್ರಹ್ಮಸಿದ್ಧಿಕಾರನಾದ ಮಂಡನಮಿಶ್ರನೂ ವಾಕ್ಯದಿಂದ ಆತ್ಮತತ್ತ್ವವನ್ನು ಅರಿತುಕೊಂಡಮೇಲೂ ಮಿಥ್ಯಾರೂಪವಾದ ತೋರಿಕೆಗಳು ಅನುಸರಿಸಿಕೊಂಡು ಬಂದಿರುವದುಂಟು ಎಂದಿರುತ್ತಾನೆ ; ಅವುಗಳ ನಿವೃತ್ತಿಗಾಗಿ ತತ್ತ್ವದರ್ಶನಾಭ್ಯಾಸವನ್ನು ಮಾಡಬೇಕು (ಬ್ರ.ಸಿ.ಪು. ೩೫) ಎಂದು ಒಂದು ಕಡೆಯಲ್ಲಿಯೂ ಶಾಬ್ದಜ್ಞಾನವು ಪರೋಕ್ಷವಾಗಿರುವದರಿಂದ ಅಪರೋಕ್ಷಜ್ಞಾನಕ್ಕಾಗಿ ಉಪಾಸನೆಯು ಬೇಕು (ಬ್ರ. ಸಿ. ಪು. ೧೩೪) ಎಂದು ಮತ್ತೊಂದು ಕಡೆಯಲ್ಲಿಯೂ ಬರೆದಿರುತ್ತಾನೆ. ಮಂಡನಮಿಶ್ರನ ಹಲವು ಯುಕ್ತಿಗಳನ್ನು ಸಂಬಂಧವಾರ್ತಿಕದಲ್ಲಿ ಉಪಯೋಗಿಸಿರುವದು ಕಂಡುಬರುವದರಿಂದ ಈ ಮತವು ಆ ಮಿಶ್ರನದೇ ಆಗಿರಬಾರದೇಕೆ ? -ಎಂಬ ಶಂಕೆಯುಂಟಾಗುತ್ತದೆ. ಆದರೆ 'ಶಾಬ್ದಜ್ಞಾನವುಂಟಾದವನು ಸಾಕ್ಷಾತ್ಕಾರಕ್ಕಾಗಿ ತಾನೇ ಪ್ರಯತ್ನಿಸುತ್ತಾನೆ. ಸಾಕ್ಷಾತ್ಕಾರಕ್ಕಾಗಿ ಪ್ರತ್ಯಯಪ್ರವಾಹವನ್ನು ವಿಧಿಸಿದೆಯೆಂದು ಬೇಕಾದರೆ ಹೇಳಬಹುದು ; ಅಥವಾ ಅದೂ ವ್ಯರ್ಥ, ಏಕೆಂದರೆ ಜ್ಞಾನಾಭ್ಯಾಸದಿಂದ ಸಮ್ಯಗ್ಜ್ಞಾನವುಂಟಾಗುವದು ಲೋಕದಲ್ಲಿ ಕಂಡೇ ಇರುವದರಿಂದ ವಿಧಿಯೇನೂ ಬೇಕಿಲ್ಲ' (ಬ್ರ.ಸಿ.ಪು.೧೫೪) ಎಂದು ಮಂಡನಮಿಶ್ರನು ಹೇಳುವದರಿಂದ ಆತನ ಪಕ್ಷವು ಮೇಲೆ ಹೇಳಿದ ಪ್ರಸಂಖ್ಯಾನಮತವನ್ನು ಸ್ವಲ್ಪ ಕ್ರಮಪಡಿಸಿಕೊಂಡು ಏರ್ಪಡಿಸಿದ್ದೆಂದು ತೋರುತ್ತದೆ. ಈ ಪಕ್ಷವನ್ನು ನೈಷ್ಕರ್ಮ್ಯಸಿದ್ಧಿಯಲ್ಲಾಗಲಿ ವಾರ್ತಿಕದಲ್ಲಾಗಲಿ ಪರಾಮರ್ಶಿಸಿರುವದಿಲ್ಲ. 'ಅವಿದ್ಯಾಸಂಸ್ಕಾರವು ಬಾಧಿತವಾಗಿದ್ದು ಅನುವೃತ್ತವಾದರೆ ವಿದ್ಯೆಯ ಸ್ಮೃತಿಗೆ ಕಾರಣವಾಗುತ್ತದೆಯಾದ್ದರಿಂದ ಅವಿದ್ಯೆಯು ವಿದ್ಯೆಗೆ ಬಾಧಕವಾಗಲಾರದು' (೧-೩೮) ಎಂಬುದೇ ಈ ಮತದ ಖಂಡನೆ ಎಂದು ಸುರೇಶ್ವರಾಚಾರ್ಯರು ಭಾವಿಸಿದ್ದರೆಂದು ತೋರುತ್ತದೆ.

ಈ ಮೂರು ಪಕ್ಷದವರೂ ಶ್ರವಣವಾದ ಮೇಲೆ ನಿದಿಧ್ಯಾಸನವನ್ನು ವಿಧಿಸಿದೆ - ಎಂಬ ಮತದವರಾದ್ದರಿಂದಲೋ ಏನೋ, ವಾರ್ತಿಕಕಾರರು ನಿದಿಧ್ಯಾಸನವನ್ನು ಬೇರೊಂದು ಸಾಧನವೆಂದು ಎಣಿಸದೆ ಅಪರಾಯತ್ತವಾದ ವಾಕ್ಯಜ್ಞಾನವೇ ನಿದಿಧ್ಯಾಸನವು, ಅದು ಧ್ಯಾನವಲ್ಲ (ಬೃ. ವಾ. ೨-೪-೨೧೭, ೨೩೨, ೨೩೩) ಎಂದು ಬರೆದಿರುತ್ತಾರೆ. ನಿದಿಧ್ಯಾಸನವೆಂದರೆ ವಸ್ತುವಿನ ಜ್ಞಾನವನ್ನು ಮಾಡಿಕೊಳ್ಳುವದಕ್ಕೆ ಮಾಡಬೇಕಾಗಿರುವ ಪ್ರತ್ಯಯಾವೃತ್ತಿ (ಸೂ.ಭಾ. ೪-೧-೧) ಎಂದು ಭಾಷ್ಯಕಾರರು ಬರೆದಿರುವದಕ್ಕೆ ಇದು ಸ್ವಲ್ಪ ಭಿನ್ನವಾಗಿದ್ದರೂ

ವಾಕ್ಯಜ್ಞಾನವನ್ನು ಅಭ್ಯಾಸಮಾಡಿದರೇ ಸಾಕ್ಷಾತ್ಕಾರವಾಗುವದೆಂಬವರ ಮತವನ್ನು ತಿರಸ್ಕರಿಸುವದು ಗುರುಶಿಷ್ಯರಿಬ್ಬರಿಗೂ ಸಮಾನವಾಗಿರುತ್ತದೆ. ಸುರೇಶ್ವರರು ನಿದಿಧ್ಯಾಸನವು ಧ್ಯಾನವಲ್ಲ ಎಂದು ಕಂಠೋಕ್ತವಾಗಿ ಹೇಳಿ ಧ್ಯಾನವು ಜ್ಞಾನಕ್ಕೆ ಅವಶ್ಯವೆಂಬುದನ್ನು ವಾರ್ತಿಕದಲ್ಲಿಯೂ (ಬೃ. ವಾ. ೨-೪-೨೩೪), ಈ ಪ್ರಕರಣದಲ್ಲಿಯೂ (೧-೫೨) ಹೇಳಿರುತ್ತಾರೆ. ವಾಕ್ಯಜ್ಞಾನವು ಅಪರೋಕ್ಷಜ್ಞಾನಕ್ಕೆ ಕಾರಣವೆಂಬುದನ್ನು ದಶಮನ ದೃಷ್ಟಾಂತದಿಂದ ತಿಳಿಸಿಕೊಟ್ಟಿರುವದೂ (೩-೬೯, ೭೦) ವಾಕ್ಯದಿಂದ ಆಗುವ ಜ್ಞಾನವು ಕಾರಕಗಳನ್ನೆಲ್ಲ ಬಾಧಿಸಿಯೇ ಹುಟ್ಟುವದೆಂದು ಹೇಳಿರುವದೂ (೩-೭೧) ಈ ಇಬ್ಬರಿಗೂ ಸಮಾನವಾಗಿರುತ್ತದೆ. ಈ ಎರಡು ಅಭಿಪ್ರಾಯಗಳು ವಾಕ್ಯಾರ್ಥಜ್ಞಾನವನ್ನು ಅಭ್ಯಾಸಮಾಡುವದರಿಂದಲೇ ಸಾಕ್ಷಾತ್ಕಾರವೆಂಬ ವಾದಿಗಳನ್ನೆಲ್ಲ ನಿರುತ್ತರರನ್ನಾಗಿ ಮಾಡುವವೆಂಬುದು ಸ್ಫುಟವಾಗಿರುತ್ತದೆ. ಜ್ಞಾನಾಭ್ಯಾಸವಾದಿಗಳು ಯಾರೂ ದಶಮನ ದೃಷ್ಟಾಂತವನ್ನಾಗಲಿ ವಾಕ್ಯದಿಂದ ಅಕರ್ತೃತ್ವಜ್ಞಾನವಾಗುವದೆಂಬುದನ್ನಾಗಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂಬುದನ್ನು ನಾವು ಮನಸ್ಸಿಗೆ ತಂದುಕೊಳ್ಳುವದು ಇಲ್ಲಿ ಅತ್ಯವಶ್ಯವಾಗಿರುತ್ತದೆ.

## ಅವಿದ್ಯಾವಿಚಾರ

ವಾಕ್ಯಜ್ಞಾನದಿಂದ ಬಾಧಿತವಾಗುವ ಅವಿದ್ಯೆಯ ಸ್ವರೂಪವೇನು ? ಅನಿರ್ವಚನೀಯವಾದ ಮೂಲಾವಿದ್ಯೆಯು ಆತ್ಮಾನಾತ್ಮರ ಅಧ್ಯಾಸಕ್ಕೆ ಉಪಾದಾನಕಾರಣವೆಂಬುದಾಗಲಿ ಸುಷುಪ್ತಿಯಲ್ಲಿ ಈ ಭಾವರೂಪಾವಿದ್ಯೆಯು ಉಳಿದಿರುವದೆಂಬುದಾಗಲಿ ಈ ಪ್ರಕರಣಕರ್ತರಿಗೆ ಸಮ್ಮತವಾಗಿತ್ತೆ ? ಎಂಬುದನ್ನು ನಾವು ಸ್ವಲ್ಪ ವಿಮರ್ಶಿಸಿ ನೋಡುವದು ಅಗತ್ಯವಾಗಿದೆ. ಸಂಬಂಧಗ್ರಂಥದ ಅವತರಣಿಕೆಯಲ್ಲಿಯೂ ೨-೯೯, ೧೧೪, ೧೧೬ ಮುಂತಾದ ಸ್ಥಲಗಳಲ್ಲಿಯೂ ಅವಿದ್ಯೆಯು ದ್ವೈತಸಂಸಾರಕ್ಕೆ 'ಉಪಾದಾನ'ವೆಂದು ಬರೆದಿರುವದನ್ನು ಕಂಡು ಶಬ್ದಮಾತ್ರದಿಂದ ಭ್ರಾಂತರಾಗಿ ಕೆಲವರು ಅವಿದ್ಯೋಪಾದಾನವಾದವು ಸುರೇಶ್ವರರಿಗೆ ಸಮ್ಮತವೆಂದು ಭಾವಿಸಿಕೊಂಡಿರುತ್ತಾರೆ. ಆದರೆ ಸಂಬಂಧಗ್ರಂಥದಲ್ಲಿ ಉಪಾದಾನಶಬ್ದವನ್ನು ಹೇತು, ಮೂಲ, ನಿಬಂಧನ, ನಿಮಿತ್ತ - ಎಂಬ ಮಾತುಗಳಿಗೆ ಪರ್ಯಾಯವಾಗಿ ಕಾರಣವೆಂಬ ಸಾಮಾನ್ಯಾರ್ಥದಲ್ಲಿಯೇ ಉಪಯೋಗಿಸಿರುತ್ತದೆಯೆಂಬುದನ್ನು ಮನದಂದುಕೊಂಡವರಿಗೆ ಈ ಭಾವನೆಗೆ ಬುಡವಿಲ್ಲವೆಂಬುದು ವ್ಯಕ್ತವಾಗುತ್ತದೆ. ಈ ಪ್ರಕರಣದಲ್ಲಿ ಅಜ್ಞಾನ, ಅನವಬೋಧ, ಅಪ್ರತಿಪತ್ತಿ , ಧ್ವಾಂತ, ತಮ, ಮೋಹ - ಈ ಶಬ್ದಗಳನ್ನೆಲ್ಲ ಅವಿದ್ಯೆಗೆ ಪರ್ಯಾಯವಾಗಿ

ಉಪಯೋಗಿಸಿರುತ್ತದೆ. ಮಿಥ್ಯಾಜ್ಞಾನಕ್ಕಿಂತ ಬೇರೆಯಾದ ಅವಿದ್ಯೆಯಿಲ್ಲವೆಂಬ ವಾದವನ್ನು ಖಂಡಿಸಿದೆ (೩-೫, ೬) ; ಅಜ್ಞಾನವೆಂದರೆ ಜ್ಞಾನಾಭಾವವೆಂಬ ಅರ್ಥವನ್ನು ಇಟ್ಟುಕೊಂಡು (೩-೧) ಅದು ಸಂಸಾರಕ್ಕೆ ಕಾರಣವಾಗಲಾರದೆಂದು ಮೀಮಾಂಸಕಮತವನ್ನವಲಂಬಿಸಿ ಆಕ್ಷೇಪಿಸುವವರಿಗೆ ಸಮಾಧಾನವನ್ನು ಹೇಳಿದೆ (೩-೭). ವ್ಯಾಖ್ಯಾನಕಾರರು ಅಗ್ರಹಣಕ್ಕಿಂತ ವ್ಯತಿರಿಕ್ತವಾದ ಅನಾದಿಭಾವರೂಪಾವಿದ್ಯೆಯನ್ನು ಗ್ರಂಥಕರ್ತರು ಸಾಧಿಸಿರುತ್ತಾರೆಂದು ಕೆಲವು ಕಡೆಗಳಲ್ಲಿ ಮೂಲವನ್ನು ತಿರುಚುವದಕ್ಕೆ ಪ್ರಯತ್ನಿಸಿರುತ್ತಾರೆ (೩-೭ರ ವ್ಯಾಖ್ಯಾನವನ್ನು ನೋಡಿ) ; ಈಶ್ವರನ ಶಕ್ತಿಯಾದ ಅವ್ಯಾಕೃತವೇ ಅವಿದ್ಯೆ ಎಂದು ಈ ಪ್ರಕರಣದಲ್ಲಿಟ್ಟುಕೊಂಡಿದೆ ಎಂದೂ ಕಲ್ಪಿಸಿರುತ್ತಾರೆ (೪-೪೬ರ ವ್ಯಾಖ್ಯಾನವನ್ನು ನೋಡಿ). ಆದರೆ ಸುರೇಶ್ವರಕೃತವೆಂದು ನಿಸ್ಸಂಶಯವಾಗಿರುವ ನೈಷ್ಕರ್ಮ್ಯಸಿದ್ಧಿ, ತೈತ್ತಿರೀಯವಾರ್ತಿಕ, ಬೃಹದಾರಣ್ಯಕ ವಾರ್ತಿಕ - ಈ ಮೂರು ಗ್ರಂಥಗಳಲ್ಲಿ ಎಲ್ಲಿಯೂ ಅಗ್ರಹಣಕ್ಕಿಂತ ವ್ಯತಿರಿಕ್ತವಾದ ಭಾವರೂಪಾವಿದ್ಯೆಯ ಸೊಲ್ಲೂ ಇರುವದಿಲ್ಲ. ಇಷ್ಟೇ ಅಲ್ಲ, ತೈತ್ತಿರೀಯಭಾಷ್ಯ ವಾರ್ತಿಕದಲ್ಲಿ ಈ ಸ್ಪಷ್ಟೋಕ್ತಿಗಳಿವೆ. ''ಅರಿಯೆನು (ನ ಜಾನಾಮಿ) ಎಂಬ ನಿತ್ಯಾವಿದ್ಯೆಯೊಂದೇ ಇದಕ್ಕೆ ಕಾರಣವು... ಅನಾತ್ಮವೆಂದು ಇಲ್ಲಿ ಕಾಣುವದಲ್ಲ, ಅದು ಅವಿದ್ಯಾವಿಜೃಂಭಿತವಾದದ್ದರಿಂದ ಅದನ್ನೂ ಅವಿದ್ಯೆಯೆನ್ನುವರು ; ಆತ್ಮಾಗ್ರಹಣಕ್ಕಿಂತ ವ್ಯತಿರಿಕ್ತವಾಗಿ ಅದಕ್ಕೆ ಬೇರೊಂದು ರೂಪವಿರುವದಿಲ್ಲ'' (ತೈ. ವಾ. ೨-೧೭೬, ೧೭೮, ೧೭೯). ಅವಿದ್ಯೆಗೆ 'ನ ವೇದ್ಮಿ' (ಅರಿಯೆನು) ಎಂಬ ಅನುಭವವೇ ಪ್ರಮಾಣವೆಂದೂ ಅದು ಪ್ರಮಾಣಸಿದ್ಧವಲ್ಲವೆಂದೂ ಬೃಹದ್ವಾರ್ತಿಕದಲ್ಲಿ ಮತ್ತೆಮತ್ತೆ ಹೇಳಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮಂಡನಮಿಶ್ರನಂತೆಯೇ ಅಗ್ರಹಣ, ಅನ್ಯಥಾಗ್ರಹಣ - ಇವೆರಡಕ್ಕಿಂತ ಬೇರೆಯಾದ ಅವಿದ್ಯೆಯನ್ನು ಪ್ರಕರಣಕಾರರು ಒಪ್ಪಿಲ್ಲವೆಂದು ಹೇಳಬೇಕಾಗುತ್ತದೆ. ಅದರಲ್ಲಿಯೂ ಅನ್ಯಥಾಗ್ರಹಣಕ್ಕಿಂತ ಅಗ್ರಹಣವೇ ಮುಖ್ಯವಾಗಿ ಅವಿದ್ಯೆಯೆಂದೂ ಅನ್ಯಥಾಗ್ರಹಣವೆಂಬುದು ಅಗ್ರಹಣಕ್ಕಿಂತ ಬೇರೆಯಲ್ಲವೆಂದೂ ಹೇಳಿರುವದು ವಾರ್ತಿಕಕಾರರಿಗೆ ಮೀಸಲಾಗಿರುತ್ತದೆ (೪-೫೭).

ಅಜ್ಞಾನವು ಸುಷುಪ್ತಿಯಲ್ಲಿರುವದೆಂದು ಈ ಪ್ರಕರಣದಲ್ಲಿ (೩-೫೮) ಹೇಳಿರುವದು ಈ ಜ್ಞಾನಾಭಾವವನ್ನೇ ಎಂದು ಈಗ ತಾನೇ ಸಿದ್ಧವಾಗುತ್ತದೆ. ಆದ್ದರಿಂದಲೇ ಅಲ್ಲಿ 'ಘಟಂ ನ ಜಾನಾಮಿ' (ಗಡಿಗೆಯನ್ನು ಅರಿಯೆನು) ಎಂಬ ಘಟಾಜ್ಞಾನವನ್ನು ಆತ್ಮಾಜ್ಞಾನಕ್ಕೆ ದೃಷ್ಟಾಂತವಾಗಿ ಕೊಟ್ಟಿರುತ್ತದೆ. ವಾಕ್ಯಜ್ಞಾನವಿಲ್ಲದೆ

ಅಜ್ಞಾನವು ನಾಶವಾಗಲೇ ಆರದು ; ಅದು ಒಂದೊಂದು ವೇಳೆ ತೋರದೆ ಇರಬಹುದು, ಆದರೆ ಅದರ ಆತ್ಯಂತಿಕ ನಾಶವು ವಾಕ್ಯದಿಂದಲೇ ಆಗುತ್ತದೆ ಎಂಬುದನ್ನು ತಿಳಿಸುವದಕ್ಕೆ ಈ ಸುಷುಪ್ತ್ಯಜ್ಞಾನವಾದವು ಬಂದಿದೆ ಎಂಬುದನ್ನು ಓದುಗರು ಲಕ್ಷಿಸಬೇಕು. ಹೀಗೆ ಅಜ್ಞಾನವೇ ವಾಕ್ಯಜ್ಞಾನದಿಂದ ಬಾಧ್ಯವಾಗಿರುವದರಿಂದಲೂ ಅದು ಹೋದಬಳಿಕ ಸಂಶಯಮಿಥ್ಯಾಜ್ಞಾನಗಳು ಇರುವ ಹಾಗೇ ಇಲ್ಲವಾದ್ದರಿಂದಲೂ ವಾಕ್ಯವು ಸಂಶಯಿತಮಿಥ್ಯಾಜ್ಞಾನಾಜ್ಞಾನ ಪ್ರಧ್ವಂಸಮುಖದಿಂದ ಸಾಕ್ಷಾದಪರೋಕ್ಷವಾಗಿ ಸತ್ಯಜ್ಞಾನಾನಂದಲಕ್ಷಣನಾದ ಆತ್ಮನನ್ನು ಪ್ರತಿಪಾದಿಸುತ್ತದೆ (೩-೪೭) ಎಂದು ಸುಸ್ಪಷ್ಟವಾಗಿ ಹೇಳಿರುತ್ತದೆ. **ಅಗ್ರಹಣಕ್ಕಿಂತ ವ್ಯತಿರಿಕ್ತವಾದ ಅನಿರ್ವಚನೀಯಭಾವಾವಿದ್ಯೆಯನ್ನೇ ವಾಕ್ಯವು ಕಳೆಯುತ್ತದೆ ಎಂಬ ಮಾತು ಮಾತ್ರ ಹಗಲುಬತ್ತಿಯನ್ನು ಹಿಡಿದುಕೊಂಡು ಹುಡುಕಿದರೂ ಈ ಪ್ರಕರಣದಲ್ಲಾಗಲಿ ವಾರ್ತಿಕಗಳಲ್ಲಾಗಲಿ ಕಾಣುವದೇ ಇಲ್ಲ.**

ವಾಕ್ಯವು ಮೂರವಸ್ಥೆಗಳಲ್ಲಿಯೂ ಇದ್ದುಕೊಂಡಿರುವ ಈ ಅವಿದ್ಯೆಯನ್ನು ಹೇಗೆ ಕಳೆದೀತು ? - ಎಂದು ಯಾರಾದರೂ ಶಂಕಿಸಬಹುದು. ಆದರೆ ಅವಿದ್ಯೆಯಿರುವದೆಂಬುದು ಅವಿದ್ಯಾಪ್ರಸಿದ್ಧಿಯಿಂದ ; ಗೂಬೆಗಳ ರಾತ್ರೆಯಂತೆ ಅದು ಕಲ್ಪನಾಮಾತ್ರವಾಗಿರುತ್ತದೆ (೩-೧೧೧). ಜ್ಞಾನಸ್ವರೂಪನಾದ ಆತ್ಮನಲ್ಲಿ ಅವಿದ್ಯೆಯ ಸಂಭಾವನೆಯೂ ಇರುವದೇ ಇಲ್ಲ (೩-೧೧೨). ಅವಿಚಾರಿತಸಿದ್ಧವಾಗಿರುವ ಈ ಅವಿದ್ಯೆಯೊಂದೇ ಆತ್ಮನಿಗೆ ಮರೆಯಾಗಿರುವದರಿಂದ ವಾಕ್ಯವು ಅವಿದ್ಯೆಯನ್ನು ಕಳೆದು ಆತ್ಮನನ್ನು ತಿಳಿಸಬಹುದಾಗಿದೆ (೩-೧೧೩). ಇಂಥ ಅವಿದ್ಯೆಯು ಎಲ್ಲಿಂದ ಬಂತು ? - ಎಂಬ ಪ್ರಶ್ನೆಯು ಅಜ್ಞಾನಿಗೂ ಹುಟ್ಟುವದಿಲ್ಲ ; ಜ್ಞಾನಿಗೂ ಹುಟ್ಟುವದಿಲ್ಲ. ಅಜ್ಞಾನಿಗೆ ನಾನು ನಿತ್ಯಚೈತನ್ಯಸ್ವರೂಪನೆಂಬ ತಿಳಿವಳಿಕೆಯಿಲ್ಲ, ಜ್ಞಾನಿಗೆ ಅವಿದ್ಯೆಯು ಮೂರ ಕಾಲದಲ್ಲಿಯೂ ಇಲ್ಲವೆಂಬ ನಿಶ್ಚಯವಿರುತ್ತದೆ (೩-೧೧೭) ಎಂದು ಗ್ರಂಥಕರ್ತರು ಹೇಳಿರುತ್ತಾರೆ. ಪ್ರತ್ಯಗ್ದೃಷ್ಟಿಯಿಂದ ನೋಡಿದರೆ ಅವಿದ್ಯಾತ್ರಯವೂ ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿ ಕಾಣುವದೇ ಇಲ್ಲ (ಬೃ. ವಾ. ೧-೪-೨೯೯) ಎಂಬ ವಾರ್ತಿಕವಾಕ್ಯವನ್ನು ಮೆಲುಕು ಹಾಕಿದವರಿಗೆ ಅವಿದ್ಯೆಯು ಸುಷುಪ್ತಿಯಲ್ಲಿದೆ ಎಂಬುದು ಪ್ರಮಾತ್ರಾಶ್ರಿತವಾದ ಪರಾಗ್ದೃಷ್ಟಿಯಿಂದ, ಎಂದರೆ ವ್ಯವಹಾರದೃಷ್ಟಿಯಿಂದ, ಹೇಳಿದ್ದು ಎಂಬುದು ಸ್ಫುಟವಾಗದೆ ಇರದು (೪-೪೫). ಆದ್ದರಿಂದ ಸುಷುಪ್ತಿಯಲ್ಲಿ ಅವಿದ್ಯೆಯಿದೆಯೆಂದು ಒಂದು ಕಡೆ (೩-೫೮) ಅವಸ್ಥಾತ್ರಯದಲ್ಲಿಯೂ ಆತ್ಮನು ಅದ್ವಿತೀಯನಾಗಿಯೇ ಇರುತ್ತಾನೆ

(೪-೪೮), ಹುಟ್ಟಬೇಕಾದ ಜ್ಞಾನವಾಗಲಿ ಹೋಗಬೇಕಾದ ಅಜ್ಞಾನವಾಗಲಿ ಇಲ್ಲವೇ ಇಲ್ಲ (೪-೫೮) ಎಂದು ಒಂದು ಕಡೆ - ಹೀಗೆ ಹೇಳಿರುವದರಲ್ಲಿ ಯಾವ ವಿರೋಧವೂ ಇಲ್ಲ .

ಅಜ್ಞಾನವು ಆತ್ಮನನ್ನೇ ಆಶ್ರಯಿಸಿದೆ, ಅನಾತ್ಮವನ್ನಲ್ಲ ; ಅದಕ್ಕೆ ಆತ್ಮನೇ ವಿಷಯ, ಅನಾತ್ಮವಲ್ಲ (೩-೧) – ಎಂದು ಹೇಳಿರುವದೂ ಈ ಅವಿದ್ಯಾದೃಷ್ಟಿಯಿಂದಲೇ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಹಾಗೆಂದು ಗ್ರಂಥಕರ್ತರೇ ''ಅಜ್ಞಾನಮಾತ್ರನಿಮಿತ್ತತ್ವಾತ್ ತದ್ವಿಭಾಗಸ್ಯ ಸರ್ಪಾತ್ಮತೇವ ರಜ್ಜ್ವಾಃ'' (೩-೧) ಎಂಬ ವಾಕ್ಯದಿಂದ ಸ್ಪಷ್ಟಪಡಿಸಿರುತ್ತಾರೆ. ಈ ವಾಕ್ಯವು ''ಅವಿದ್ಯೆಯು ಜೀವನಿಗೊ, ಬ್ರಹ್ಮಕ್ಕೊ ?''ಎಂಬ ಈಚಿನ ವೇದಾಂತಿಗಳ ಪ್ರಶ್ನೆ ಎಂದು ಭ್ರಮಿಸಿ ಈ ಸಂದರ್ಭದಲ್ಲಿ , ಸಂಕ್ಷೇಪ ಶಾರೀರಕವಾಕ್ಯವನ್ನು ಹೋಲಿಕೆಗೆ ತೆಗೆದುಕೊಳ್ಳುವವರೂ ಕೆಲವರುಂಟು. ಆದರೆ ಸುರೇಶ್ವರರಿಗೆ ಮೂಲಾವಿದ್ಯಾವಾದದ ಗಂಧವೂ ಮನಸ್ಸಿನಲ್ಲಿರಲಿಲ್ಲವೆಂಬುದಕ್ಕೆ ಯುಕ್ತಿಗಳನ್ನು ನಾವು ಮೇಲೆ ಕೊಟ್ಟಿರುತ್ತೇವೆ. ಆ ವಾದಕ್ಕೆ ಆಧಾರಭೂತವಾಗಿರುವ ಮೂಲಗ್ರಂಥವಾದ ಪಂಚಪಾದಿಕೆಯನ್ನು ಕೂಡ ಸುರೇಶ್ವರರು ನೋಡಿಯೇ ಇರಲಿಲ್ಲವೆಂದು ಇಟ್ಟುಕೊಳ್ಳುವುದೇ ಉಚಿತವಾಗಿರುತ್ತದೆ. ಸುರೇಶ್ವರರ ಕಾಲದಲ್ಲಿ ಈಗಿನ ವೇದಾಂತಿಗಳಲ್ಲಿ ಚರ್ಚೆಗೆ ವಿಷಯವಾಗಿರುವ ಅವಚ್ಛಿನ್ನವಾದ, ಪ್ರತಿಬಿಂಬವಾದ, ಏಕಾವಿದ್ಯಾವಾದ, ನಾನಾವಿದ್ಯಾವಾದ - ಇವೇ ಮುಂತಾದವುಗಳು ವೇದಾಂತಿಗಳ ಗೋಷ್ಠಿಯಲ್ಲಿದ್ದವೆಂಬುದಕ್ಕೆ ಯಾವ ಆಧಾರವೂ ನಮಗೆ ದೊರಕಿರುವದೇ ಇಲ್ಲ . ಪಂಚಪಾದಿಕೆಯಲ್ಲಿ (ಪು. ೨೨) ತತ್ತ್ವಮಸಿ ವಾಕ್ಯದಿಂದ ತ್ವಮರ್ಥದ ಬಾಧವು ಉಪದಿಷ್ಟವಾಗಿಲ್ಲವೆ ? - ಎಂಬ ಶಂಕೆಯನ್ನು ತೆಗೆದು ಅಲ್ಲಿ ಜೀವನ ಸ್ವರೂಪವು ಬ್ರಹ್ಮವೆಂದಿಷ್ಟೇ ಹೇಳಿದೆಯೇ ಹೊರತು ಬಾಧದ ಸುದ್ದಿಯಿಲ್ಲ ಎಂಬ ಸಮಾಧಾನವನ್ನು ಕೊಟ್ಟಿದೆ. ತತ್ತ್ವಮಸಿವಾಕ್ಯದಲ್ಲಿ ಅಹಮರ್ಥದ ಬಾಧದಿಂದಲೇ ವಾಕ್ಯಾರ್ಥಜ್ಞಾನವಾಗುತ್ತದೆ (೨-೨೯, ೩-೨೭, ೭೩) ಎಂದು ನೈಷ್ಕರ್ಮ್ಯಸಿದ್ಧಿಯಲ್ಲಿ ಹೇಳಿರುವದನ್ನು ಅಲ್ಲಿ ಪರಾಮರ್ಶಿಸಿದೆ ಎಂದು ಇಟ್ಟುಕೊಳ್ಳಬಹುದಾದರೆ ಪಂಚಪಾದಿಕಾಕಾರರು ಸುರೇಶ್ವರರಿಗಿಂತ ಈಚಿನವರೇ ಎಂದೂ ಆದ್ದರಿಂದಲೇ ವಾರ್ತಿಕಪ್ರಸ್ಥಾನದಲ್ಲಿ ಮೂಲಾವಿದ್ಯೆಯ ವೃತ್ತಾಂತವು ಕಂಡುಬರುವದಿಲ್ಲವೆಂದೂ ತೀರ್ಮಾನಿಸ ಬಹುದಾಗುತ್ತದೆ.

## ಉಪಸಂಹಾರ

ನೈಷ್ಕರ್ಮ್ಯಸಿದ್ಧಿಯಲ್ಲಿ ಕೇವಲ ವಾಕ್ಯಜ್ಞಾನದಿಂದಲೇ ಮೋಕ್ಷವೆಂಬ ಒಂದೇ ವಿಷಯವನ್ನು ಕುರಿತು ಬೇರೆಬೇರೆ ದೃಷ್ಟಿಗಳಿಂದ ಉತ್ಕೃಷ್ಟ ವಿಮರ್ಶಾತ್ಮಕ ಚರ್ಚೆಯಿರುತ್ತದೆ. ಇದರಲ್ಲಿ ವಾರ್ತಿಕಪ್ರಸ್ಥಾನದಲ್ಲಿ ತಿಳಿಸಿರುವ ಅನೇಕ ವಿಚಾರಗಳು ಬೀಜರೂಪದಿಂದ ಸೂಚಿತವಾಗಿರುತ್ತವೆ. ಭಾಷ್ಯಕಾರರ ಪ್ರಸ್ಥಾನದಲ್ಲಿ ಪ್ರತಿಪಾದಿಸಿರುವ ಮುಖ್ಯತತ್ತ್ವಗಳಿಗೆ ವಿರೋಧವಿಲ್ಲದಂತೆ (೧)ಆತ್ಮನು ಸ್ವತಃಸಿದ್ಧಾನುಭವರೂಪನೆಂಬುದು, (೨) ಅವಿದ್ಯೆಯೊಂದೇ ಆತ್ಮಜ್ಞಾನಕ್ಕೆ ಅಡ್ಡಿಯಾಗಿರುವದೆಂಬುದು, (೩) ಅವಿದ್ಯೆಯಿಂದಲೇ ಆತ್ಮಾನಾತ್ಮಗಳ ಇತರೇತರಾಧ್ಯಾಸವಾಗಿದೆ ಎಂಬುದು, (೪) ಪ್ರಮಾಣಪ್ರಮೇಯವ್ಯವಹಾರವೂ ಕ್ರಿಯಾಕಾರಕವ್ಯವಹಾರವೂ ಆವಿದ್ಯಕವೆಂಬುದು, (೫) ಪ್ರಮಾಣಗಳು ಒಂದಕ್ಕೊಂದು ವಿರುದ್ಧವಲ್ಲವೆಂಬುದು, (೬) ಧರ್ಮಜಿಜ್ಞಾಸಾಬ್ರಹ್ಮಜಿಜ್ಞಾಸಾ-ಶಾಸ್ತ್ರಗಳು ಪೃಥಕ್ಶಾಸ್ತ್ರಗಳೆಂಬುದು, (೭) ವೇದಾಂತಶಾಸ್ತ್ರವು ಅವಿದ್ಯೆಯನ್ನು ಕಳೆಯುವದರಿಂದ ಮಾತ್ರವೇ ಪ್ರಮಾಣವಾಗಿದೆ ಎಂಬುದು, (೮) ವಾಕ್ಯಾಜ್ಞಾನಾ-ನಂತರದಲ್ಲಿ ಯಾವ ಅನುಷ್ಠೇಯವೂ ಇಲ್ಲವೆಂಬುದು - ಇವೇ ಮುಂತಾದ ಅಮೂಲ್ಯವಾದ ವಿಷಯಗಳನ್ನು ಇಲ್ಲಿ ಹೃದಯಂಗಮವಾಗಿ ಪ್ರತಿಪಾದಿಸಿದೆ. ಇದರಲ್ಲಿ ಲಲಿತವಾದ ಭಾಷೆಯಲ್ಲಿ ಕಾಣುವ ಕೆಲವು ಅಪಾಣಿನೀಯರೂಪಗಳನ್ನೂ ಅನ್ವಯಕ್ಲೇಶಗಳನ್ನೂ ನಾವು ಮನಸ್ಸಿಗೆ ಹತ್ತಿಸಿಕೊಳ್ಳುವಂತೆ ಇಲ್ಲ. ಮುಮುಕ್ಷುಗಳಿಗೂ ಅನುಭವಪ್ರಧಾನವಾದ ವಿಚಾರದಲ್ಲಿಯೇ ಆಸಕ್ತಿಯಿರುವವರಿಗೂ ಇದೊಂದು ಅಮೋಘಗ್ರಂಥರತ್ನವಾಗಿರುತ್ತದೆ ಎಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ನಾವು ಈಗ ಹೊರಕ್ಕೆ ತಂದಿರುವ ಅನುವಾದದಿಂದ ಈ ಪ್ರಕರಣದ ಗ್ರಂಥಗ್ರಂಥಿಗಳು ಒಂದಿಷ್ಟಾದರೂ ಬಿಚ್ಚಿಕೊಂಡು ಓದುಗರಿಗೆ ವಾರ್ತಿಕಪ್ರಸ್ಥಾನದಲ್ಲಿ ಅಭಿರುಚಿಯನ್ನುಂಟುಮಾಡಿದರೆ ಅಷ್ಟರಿಂದಲೇ ನಮ್ಮ ಶ್ರಮವು ಸಾರ್ಥಕವಾಯಿತೆಂದು ಎಣಿಸುವೆವು.

ಅಧ್ಯಾತ್ಮ ಕುಟೀರ,
ಖರಸಂವತ್ಸರ ಆಶ್ವಯುಜ ಬಹುಳ ೧೧
೧೯೫೧.

ಅನುವಾದಕರು

# ವಿಷಯಗಳ ಪರಿವಿಡಿ

**ವಿಶೇಷ : ಇಲ್ಲಿ ಕೊಟ್ಟಿರುವವು ಪುಟದ ಸಂಖ್ಯೆಗಳು ; ವಿವರಗಳು ಅನುವಾದಕರು ಹಾಕಿಕೊಂಡಿರುವ ತಲೆಬರಹದವು.**

## ಒಂದನೆಯ ಅಧ್ಯಾಯ

(ನೈಷ್ಕರ್ಮ್ಯಸ್ವರೂಪಜ್ಞಾನದಿಂದಲೇ ಮೋಕ್ಷ)

ಗ್ರಂಥಾವತರಣಿಕೆ (1) - ಮಂಗಲಾಚರಣೆ, ಗ್ರಂಥಾರಂಭ ಪ್ರತಿಜ್ಞೆ (4) - ಪ್ರಕರಣಾರ್ಥದ ಸಂಕ್ಷೇಪ (9) - ಕರ್ಮವಾದಿಗಳ ಪೂರ್ವಪಕ್ಷ : ಕರ್ಮದಿಂದಲೇ ಮುಕ್ತಿ (10) - ಆತ್ಮಬೋಧಕಶಾಸ್ತ್ರವೇ ಇಲ್ಲ (13) - ವಿಧೇಯಜ್ಞಾನವನ್ನೊಪ್ಪಿದರೂ ಸಮುಚ್ಚಯದಿಂದ ಮೋಕ್ಷ (17) - ಪೂರ್ವಪಕ್ಷದ ಉಪಸಂಹಾರ (17) - ಸಿದ್ಧಾಂತ : ಕರ್ಮವು ಮೋಕ್ಷಕ್ಕೆ ಸಾಧನವಲ್ಲ (18) - ಅಜ್ಞಾನಪರಿಹಾರಕ್ಕೆ ಕರ್ಮವು ಸಾಧನವಲ್ಲ, ಜ್ಞಾನವೇ ಸಾದನ (22) - ಅವಿದ್ಯೆಯಿದ್ದಲ್ಲಿ ಸಂಸಾರವಿರುವದು (34) - ಕರ್ಮಗಳು ಪರಂಪರೆಯಿಂದ ಮೋಕ್ಷಕ್ಕೆ ಕಾರಣ (39) - ಜ್ಞಾನವು ಮೋಕ್ಷಕ್ಕೆ ನಿರಪೇಕ್ಷಸಾಧನ (46) - ಏಕದೇಶಿಗಳಿಗೆ ಸಮ್ಮತವಾದ ಸಮುಚ್ಚಯದ ಖಂಡನೆ (54) - ನಾನಾರಸಬ್ರಹ್ಮವಾದ ದಲ್ಲಿಯೂ ಸಮುಚ್ಚಯವು ಹೊಂದದು (57) - ಸಮುಚ್ಚಯ ನಿರಾಸದ ಉಪಸಂಹಾರ (65) - ಪೂರ್ವಪಕ್ಷೋಕ್ತಿಗಳ ಖಂಡನೆ (66) - ಉಪಸಂಹಾರ (83).

**ಪುಟ 1-84**

## ಎರಡನೆಯ ಅಧ್ಯಾಯ

(ತ್ವಂಪದಾರ್ಥವಿವೇಕ)

ಅಧ್ಯಾಯದ ಸಂಬಂಧ (85) - ಪೂರ್ವಪಕ್ಷ : ವಾಕ್ಯವು ಜ್ಞಾನಕ್ಕೆ ನಿಯತ ಹೇತುವಲ್ಲ (86) - ಸಿದ್ಧಾಂತ : ವಾಕ್ಯವೇ ಬ್ರಹ್ಮಜ್ಞಾನಕ್ಕೆ ಕಾರಣ (88) - ವಾಕ್ಯ ಪ್ರಾಮಾಣ್ಯ (89) - ಪದಾರ್ಥಜ್ಞಾನಕ್ಕಾಗಿ ಉತ್ತರಗ್ರಂಥ (90) - ಸ್ಥೂಲದೇಹವಿವೇಕ (91) - ಸೂಕ್ಷ್ಮದೇಹ ವಿವೇಕ (97) - ಆತ್ಮನು ಅದ್ವಿತೀಯನು (113) - ಆತ್ಮನಲ್ಲಿ ಅಹಂಶಬ್ದವೃತ್ತಿ ಹೇಗೆ ? (119) - ಆತ್ಮನು ಕೂಟಸ್ಥನಿತ್ಯನು (122) - ಅನ್ವಯವ್ಯತಿರೇಕದ ಉಪಸಂಹಾರ (144) - ಆತ್ಮನು ಸ್ವತಃ ಸಿದ್ಧಾದ್ವಿತೀಯನು (145) - ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸವು ಅವಿದ್ಯಾನಿಮಿತ್ತ (149) - ಆತ್ಮಜ್ಞಾನದಿಂದ ಅವಿದ್ಯೆಯ ನಿವೃತ್ತಿ (150) - ಶೋಧಿತ ತ್ವಂಪದಾರ್ಥವು ಅದ್ವಿತೀಯವು (153) - ಅಧ್ಯಾಯಾರ್ಥದ ಉಪಸಂಹಾರ (162).

**ಪುಟ 85-162**

## ಮೂರನೆಯ ಅಧ್ಯಾಯ

(ತತ್ತ್ವಮಸ್ಯಾದಿ ವಾಕ್ಯವ್ಯಾಖ್ಯಾನ)

ಅಧ್ಯಾಯದ ಸಂಬಂಧ (163) - ವಾಕ್ಯದಿಂದಲೇ ಅವಾಕ್ಯಾರ್ಥಜ್ಞಾನ (168) - ವಾಕ್ಯವ್ಯಾಖ್ಯಾನಸೂತ್ರ (170)- ಶ್ರವಣಮನನಗಳು ವಿಹಿತವಾಗಿವೆ (170) - ವಾಕ್ಯದಿಂದ ತೊಲಗುವ ಅಜ್ಞಾನದ ಸ್ವರೂಪ (172) - ವಾಕ್ಯದಿಂದ ಅವಾಕ್ಯಾರ್ಥಜ್ಞಾನವಾಗುವ ಬಗೆ (176) - ವಾಕ್ಯವು ಅಜ್ಞಾನವನ್ನು ತೊಲಗಿಸುವದು (195) - ಅನ್ವಯವ್ಯತಿರೇಕನ್ಯಾಯವು ಶ್ರುತ್ಯನುಗೃಹೀತ (198) - ಅಭಿಧಾಶ್ರುತಿಯಾದ ವಾಕ್ಯಕ್ಕೂ ಪ್ರಾಮಾಣ್ಯವುಂಟು (205) - ಅನ್ವಯವ್ಯತಿರೇಕಮಾತ್ರದಿಂದ ಆತ್ಮದರ್ಶನವಾಗಲಾರದು (211) - ಸುಷುಪ್ತಿಪ್ರಾಪ್ತಿಯಿಂದಲೂ ಆತ್ಮಪ್ರಾಪ್ತಿಯಿಲ್ಲ (216) - ಅಹಂಜ್ಞಾತೃಗಳ ವಿವೇಕ (219) - ಶ್ರುತ್ಯನುಗೃಹೀತವಾದ ಅನ್ವಯವ್ಯತಿರೇಕದ ಉಪಸಂಹಾರ (225) - ವಾಕ್ಯದಿಂದ ಅವಿದ್ಯೆಯ ನಿವೃತ್ತಿಗೆ ದಶಮವಾಕ್ಯದ ದೃಷ್ಟಾಂತ (226) - ವಾಕ್ಯದಲ್ಲಿ ಅವಿದ್ಯೋತ್ಥಕರ್ತೃತ್ವಾದಿಗಳನ್ನು ಅನುವಾದಮಾಡಿಕೊಂಡಿದೆ (232) - ತತ್ತ್ವಮಸ್ಯಾದಿ ವಾಕ್ಯಗಳು ಪ್ರಸಂಖ್ಯಾನವನ್ನು ವಿಧಿಸುವದಿಲ್ಲ (241) - ಶಬ್ದದಿಂದ ಆತ್ಮನ ಸಮ್ಯಗ್ಜ್ಞಾನವುಂಟಾಗುವ ಬಗೆ (259) - ಅವಿದ್ಯೆಯು ಶಾಸ್ತ್ರಪ್ರಮಾಣವೊಂದರಿಂದಲೇ ತೊಲಗುತ್ತದೆ (266) - ಅವಿದ್ಯಾನಾಶಕ್ಕೆ ಪ್ರಸಂಖ್ಯಾನಾದಿಗಳು ಬೇಕಿಲ್ಲ (269).

**ಪುಟ 163-276**

## ನಾಲ್ಕನೆಯ ಅಧ್ಯಾಯ

(ಗ್ರಂಥಸಾರ, ಪೂರ್ವಾಚಾರ್ಯರ ಸಂಮತಿ, ಉಪಸಂಹಾರ)

ಅಧ್ಯಾಯದ ಸಂಬಂಧ (277) - ಹಿಂದಿನ ಗ್ರಂಥಾರ್ಥದ ಸಂಕ್ಷೇಪ (277) - ಆಚಾರ್ಯವಚನಸಂಮತಿ (288) - ಅಜ್ಞಾನವು ಅನಾತ್ಮಧರ್ಮವೇ (303) - ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವರೂಪನು (305) - ಜ್ಞಾನದ ಫಲ (306) - ಪ್ರಕರಣಾರ್ಥದ ಉಪಸಂಹಾರ (307) - ಜ್ಞಾನಿಯ ವ್ಯವಹಾರ (308) - ಜ್ಞಾನಿಗೆ ಯಥೇಷ್ಟಾಚರಣವಿರಲಾರದು (313) - ಈ ಜ್ಞಾನಕ್ಕೆ ಅಧಿಕಾರಿ (316) - ಉಪಸಂಹಾರ (320) - ಗುರುನಮಸ್ಕಾರ (322) - ಸಂಬನ್ಧೋಕ್ತಿಯ ಉಪಸಂಹಾರ (322).

**ಪುಟ 277 ರಿಂದ 322**

## ಅನುಕ್ರಮಣಿಕೆಗಳು

| | | |
|---|---|---|
| (೧) | ಶ್ಲೋಕಗಳ ವರ್ಣಾನುಕ್ರಮಣಿಕೆ | **ಪುಟ 323** |
| (೨) | ಪ್ರಮಾಣವಚನಗಳ ಗ್ರಂಥಾನುಕ್ರಮ | **ಪುಟ 330** |
| (೩) | ವಿಷಯಗಳ ಅಕ್ಷರಾನುಕ್ರಮಣಿಕೆ | **ಪುಟ 333** |

# ಸಂಕೇತವಿವರಣೆ

ಉಪನಿಷತ್ತುಗಳ ಹೆಸರನ್ನು ಮೊದಲನೆಯ ಅಕ್ಷರದಿಂದಲೂ ಆಯಾ ಉಪನಿಷತ್ತುಗಳ ಭಾಷ್ಯಗಳನ್ನು ಭಾ. ಎಂಬ ಅಕ್ಷರದಿಂದಲೂ ಭಾಷ್ಯದ ಭಾಗಗಳನ್ನು ಭಾ. ಭಾ. ಎಂದೂ ತಿಳಿಸಿದೆ. ಉದಾಹರಣೆಗೆ ಈ = (ಈಶಾವಾಸ್ಯ), ತೈ. ಭಾ. ಭಾ. = (ತೈತ್ತಿರೀಯಭಾಷ್ಯಭಾಗ). ಸಂಖ್ಯೆಗಳು ಅಧ್ಯಾತ್ಮಗ್ರಂಥಾವಳಿಯಲ್ಲಿ ಪ್ರಕಟವಾಗಿರುವ ಪುಸ್ತಕಗಳನ್ನು ಪರಾಮರ್ಶಿಸುತ್ತವೆ. ಕೆಲವು ಮುಖ್ಯಸಂಕೇತಗಳನ್ನು ಈ ಕೆಳಗೆ ವಿವರಿಸಿದೆ :-

| ಸಂಕೇತ | ವಿವರ |
|---|---|
| ಉ. ಸಾ.<br>ಉ. ಸಾ. ಪ.<br>ಉಪ. ಸಾ.<br>ಉಪ. | ಶ್ರೀಶಂಕರಾಚಾರ್ಯ ವಿರಚಿತ ಉಪದೇಶಸಾಹಸ್ರೀ ಪದ್ಯಭಾಗ. |
| ಗೀ. ಭಾ. | ಗೀತಾ ಶಾಂಕರಭಾಷ್ಯ |
| ಗೌ.ಕಾ. ಮಾಂ. ಕಾ. | ಗೌಡಪಾದಕೃತ ಮಾಂಡೂಕ್ಯಕಾರಿಕಾ |
| ಜೈ. ಮೀ. ಸೂ. | ಜೈಮಿನೀಯಮೀಮಾಂಸಾಸೂತ್ರ |
| ತೈ. ಬ್ರಾ. | ತೈತ್ತಿರೀಯಬ್ರಾಹ್ಮಣ |
| ತೈ. ವಾ. | ತೈತ್ತಿರೀಯಭಾಷ್ಯವಾರ್ತಿಕ |
| ತಂ. ವಾ. | ತಂತ್ರವಾರ್ತಿಕ, ಆನಂದಾಶ್ರಮ ಮುದ್ರಣಾಲಯದ್ದು |
| ಪಾ. | ಪಾಠಾಂತರ |
| ಪು. | ಪುಟ |
| ಬೃ. ವಾ. | ಬೃಹದಾರಣ್ಯಕಭಾಷ್ಯವಾರ್ತಿಕ |
| ಬ್ರ. ಸೂ. | ಬ್ರಹ್ಮಸೂತ್ರ |
| ಮೋ. | ಮೋಕ್ಷಧರ್ಮ |
| ಯೋ. ಸೂ. | ಯೋಗಸೂತ್ರಗಳು, ಪತಂಜಲಿವಿರಚಿತ |
| ಶತ. ಬ್ರಾ. | ಶತಪಥಬ್ರಾಹ್ಮಣ |
| ಶಾ. ಭಾ. | ಶಾಬರಭಾಷ್ಯ |
| ಸಂ. ವಾ. | ಸಂಬಂಧವಾರ್ತಿಕ |

॥ ಓಂ ॥

# ನೈಷ್ಕರ್ಮ್ಯಸಿದ್ಧಿ

## ಒಂದನೆಯ ಅಧ್ಯಾಯ

### ೧. ಗ್ರಂಥಾವತರಣಿಕೆ

(ಮೂಲ)

ಆಬ್ರಹ್ಮಸ್ತಮ್ಬಪರ್ಯನ್ತೈಃ ಸರ್ವಪ್ರಾಣಿಭಿಃ ಸರ್ವಪ್ರಕಾರಸ್ಯಾಪಿ ದುಃಖಸ್ಯ ಸ್ವರಸತ ಏವ ಜಿಹಾಸಿತತ್ವಾತ್ ತನ್ನಿವೃತ್ತ್ಯರ್ಥಾ ಪ್ರವೃತ್ತಿರಸ್ತಿ ಸ್ವರಸತ ಏವ । ದುಃಖಸ್ಯ ಚ ದೇಹೋಪಾದಾನೈಕಹೇತುತ್ವಾತ್ ದೇಹಸ್ಯ ಚ ಪೂರ್ವೋಪಚಿತಧರ್ಮಾಧರ್ಮಮೂಲತ್ವಾತ್ ಅನುಚ್ಛಿತ್ತಿಃ । ತಯೋಶ್ಚ ವಿಹಿತಪ್ರತಿಷಿದ್ಧಕರ್ಮಮೂಲತ್ವಾತ್ ಅನಿವೃತ್ತಿಃ । ಕರ್ಮಣಶ್ಚ ರಾಗ ದ್ವೇಷಾಸ್ಪದತ್ವಾತ್, ರಾಗದ್ವೇಷಯೋಶ್ಚ ಶೋಭನಾಶೋಭನಾಧ್ಯಾಸನಿ ಬನ್ಧನತ್ವಾತ್, ಅಧ್ಯಾಸಸ್ಯ ಚ ಅವಿಚಾರಿತಸಿದ್ಧದ್ವೈತವಸ್ತುನಿಮಿತ್ತತ್ವಾತ್, ದ್ವೈತಸ್ಯ ಚ ಶುಕ್ತಿಕಾರಜತಾದಿವತ್ ಸರ್ವಸ್ಯಾಪಿ ಸ್ವತಃಸಿದ್ಧಾದ್ವಿತೀಯಾ ತ್ಮಾನವಬೋಧಮಾತ್ರೋಪಾದಾನತ್ವಾತ್ ಅವ್ಯಾವೃತ್ತಿಃ । ಅತಃ ಸರ್ವಾ ನರ್ಥಹೇತುಃ ಆತ್ಮಾನವಬೋಧ ಏವ । ಸುಖಸ್ಯ ಚ ಅನಾಗಮಾಪಾಯಿ ನೋಽಪರತನ್ತ್ರಸ್ಯ ಆತ್ಮಸ್ವಭಾವತ್ವಾತ್ ತಸ್ಯ ಅನವಬೋಧಃ ಪಿಧಾನಮ್ । ಅತಸ್ತಸ್ಯ ಅತ್ಯನ್ತೋಚ್ಛಿತ್ತೌ ಅಶೇಷಪುರುಷಾರ್ಥಪರಿಸಮಾಪ್ತಿಃ । ಅಜ್ಞಾನ ನಿವೃತ್ತೇಶ್ಚ ಸಮ್ಯಗ್ಜ್ಞಾನಸ್ವರೂಪಲಾಭಮಾತ್ರಹೇತುತ್ವಾತ್ ತದುಪಾ ದಾನಮ್ । ಅಶೇಷಾನರ್ಥಹೇತ್ವಾತ್ಮಾನವಬೋಧವಿಷಯಸ್ಯ ಚ ಅನಾಗಮಿಕ ಪ್ರತ್ಯಕ್ಷಾದಿಲೌಕಿಕಪ್ರಮಾಣಾವಿಷಯತ್ವಾತ್ ವೇದಾನ್ತಾಗಮವಾಕ್ಯಾದೇವ ಸಮ್ಯಗ್ಜ್ಞಾನಮ್ । ಅತಃ ಅಶೇಷವೇದಾನ್ತಸಾರಸಂಗ್ರಹಪ್ರಕರಣಮಿದಮ್ ಆರಭ್ಯತೇ ॥

॥ ಓಂ ॥

# ನೈಷ್ಕರ್ಮ್ಯಸಿದ್ಧಿ

## ಒಂದನೆಯ ಅಧ್ಯಾಯ

### ೧. ಗ್ರಂಥಾವತರಣಿಕೆ

(ಮೂಲ)

ಆಬ್ರಹ್ಮಸ್ತಮ್ಬಪರ್ಯನ್ತೈಃ ಸರ್ವಪ್ರಾಣಿಭಿಃ ಸರ್ವಪ್ರಕಾರಸ್ಯಾಪಿ ದುಃಖಸ್ಯ ಸ್ವರಸತ ಏವ ಜಿಹಾಸಿತತ್ವಾತ್ ತನ್ನಿವೃತ್ತ್ಯರ್ಥಾ ಪ್ರವೃತ್ತಿರಸ್ತಿ ಸ್ವರಸತ ಏವ । ದುಃಖಸ್ಯ ಚ ದೇಹೋಪಾದಾನೈಕಹೇತುತ್ವಾತ್ ದೇಹಸ್ಯ ಚ ಪೂರ್ವೋಪಚಿತಧರ್ಮಾಧರ್ಮಮೂಲತ್ವಾತ್ ಅನುಚ್ಛಿತ್ತಿಃ । ತಯೋಶ್ಚ ವಿಹಿತಪ್ರತಿಷಿದ್ಧಕರ್ಮಮೂಲತ್ವಾತ್ ಅನಿವೃತ್ತಿಃ । ಕರ್ಮಣಶ್ಚ ರಾಗ ದ್ವೇಷಾಸ್ಪದತ್ವಾತ್, ರಾಗದ್ವೇಷಯೋಶ್ಚ ಶೋಭನಾಶೋಭನಾಧ್ಯಾಸನಿಬನ್ಧನತ್ವಾತ್, ಅಧ್ಯಾಸಸ್ಯ ಚ ಅವಿಚಾರಿತಸಿದ್ಧದ್ವೈತವಸ್ತುನಿಮಿತ್ತತ್ವಾತ್, ದ್ವೈತಸ್ಯ ಚ ಶುಕ್ತಿಕಾರಜತಾದಿವತ್ ಸರ್ವಸ್ಯಾಪಿ ಸ್ವತಃಸಿದ್ಧಾದ್ವಿತೀಯಾತ್ಮಾನವಬೋಧಮಾತ್ರೋಪಾದಾನತ್ವಾತ್ ಅವ್ಯಾವೃತ್ತಿಃ । ಅತಃ ಸರ್ವಾನರ್ಥಹೇತುಃ ಆತ್ಮಾನವಬೋಧ ಏವ । ಸುಖಸ್ಯ ಚ ಅನಾಗಮಾಪಾಯಿನೋಽಪರತನ್ತ್ರಸ್ಯ ಆತ್ಮಸ್ವಭಾವತ್ವಾತ್ ತಸ್ಯ ಅನವಬೋಧಃ ಪಿಧಾನಮ್ । ಅತಸ್ತಸ್ಯ ಅತ್ಯನ್ತೋಚ್ಛಿತ್ತೌ ಅಶೇಷಪುರುಷಾರ್ಥಪರಿಸಮಾಪ್ತಿಃ । ಅಜ್ಞಾನನಿವೃತ್ತೇಶ್ಚ ಸಮ್ಯಗ್ಜ್ಞಾನಸ್ವರೂಪಲಾಭಮಾತ್ರಹೇತುತ್ವಾತ್ ತದುಪಾದಾನಮ್ । ಅಶೇಷಾನರ್ಥಹೇತ್ವಾತ್ಮಾನವಬೋಧವಿಷಯಸ್ಯ ಚ ಅನಾಗಮಿಕಪ್ರತ್ಯಕ್ಷಾದಿಲೌಕಿಕಪ್ರಮಾಣಾವಿಷಯತ್ವಾತ್ ವೇದಾನ್ತಾಗಮವಾಕ್ಯಾದೇವ ಸಮ್ಯಗ್ಜ್ಞಾನಮ್ । ಅತಃ ಅಶೇಷವೇದಾನ್ತಸಾರಸಂಗ್ರಹಪ್ರಕರಣಮಿದಮ್ ಆರಭ್ಯತೇ ॥

(ಅರ್ಥ)

ಬ್ರಹ್ಮನಿಂದ ಹಿಡಿದು ಮೋಟುಮರದವರೆಗಿನ ಎಲ್ಲಾ ಪ್ರಾಣಿಗಳೂ ಎಲ್ಲಾ ಬಗೆಯ[1] ದುಃಖವನ್ನೂ ತಾವಾಗಿಯೆ[2] ತೊಲಗಿಸಿಕೊಳ್ಳಲಿಚ್ಛಿಸುವದರಿಂದ ಅದನ್ನು ಕಳೆದುಕೊಳ್ಳುವುದಕ್ಕೆ (ಮಾಡಬೇಕಾದ) ಪ್ರವೃತ್ತಿಯು ಸ್ವರಸವಾಗಿಯೇ ಇರುತ್ತದೆ.[3] ದುಃಖಕ್ಕೆ ದೇಹಸ್ವೀಕಾರವೊಂದೇ ಹೇತುವಾಗಿರುವದರಿಂದಲೂ ದೇಹಕ್ಕೆ ಹಿಂದೆ ಕೂಡಿಹಾಕಿಕೊಂಡಿರುವ ಧರ್ಮಾಧರ್ಮಗಳೇ ಮೂಲವಾಗಿರುವದರಿಂದಲೂ (ಅದು) ನಾಶವಾಗದೆ ಇರುತ್ತದೆ.[4] ಆ (ಧರ್ಮಾಧರ್ಮ)ಗಳಿಗೆ ವಿಹಿತಪ್ರತಿಷಿದ್ಧಕರ್ಮಗಳೇ ಮೂಲವಾಗಿರುವದರಿಂದ (ಅವು) ತೊಲಗದೆ ಇರುತ್ತವೆ.[5] ಕರ್ಮಕ್ಕೆ ರಾಗದ್ವೇಷಗಳೇ ಆಧಾರವಾಗಿರುವದರಿಂದಲೂ ರಾಗದ್ವೇಷಗಳಿಗೆ ಒಳ್ಳೆಯದು, ಕೆಟ್ಟದ್ದು ಎಂಬ ಅಧ್ಯಾಸವೇ[6] ಕಾರಣವಾಗಿರುವದರಿಂದಲೂ ಅಧ್ಯಾಸಕ್ಕೆ ಅವಿಚಾರಿತಸಿದ್ಧವಾದ[7] ದ್ವೈತವಸ್ತುವೇ ನಿಮಿತ್ತವಾಗಿರುವದರಿಂದಲೂ ಎಲ್ಲಾ ದ್ವೈತಕ್ಕೂ ಕಪ್ಪೆಯ ಚಿಪ್ಪಿನ ಬೆಳ್ಳಿಯೇ ಮುಂತಾದವುಗಳಿಗೆ ಹೇಗೋ ಹಾಗೆ, ಸ್ವತಃಸಿದ್ಧವಾದ ಅದ್ವಿತೀಯಾತ್ಮನ ಅನವಬೋಧವೊಂದೇ ಉಪಾದಾನವಾಗಿರು

---

1. ಆಧ್ಯಾತ್ಮಿಕಾದಿರೂಪದ.

2. ಮತ್ತೊಬ್ಬರ ಪ್ರೇರಣೆಯಿಲ್ಲದೆ, ಸ್ವಭಾವದಿಂದಲೇ.

3. ಅದಕ್ಕೂ ಶಾಸ್ತ್ರಾದಿಗಳ ಪ್ರೇರಣೆ ಬೇಕಿಲ್ಲ.

4. ಏಕೆಂದರೆ ಧರ್ಮಾಧರ್ಮಗಳಿಂದ ದೇಹವೂ, ದೇಹವಿರುವಲ್ಲಿ ದುಃಖವೂ ಮತ್ತೆಮತ್ತೆ ಆಗುತ್ತಲೇ ಇರುತ್ತದೆ.

5. ಕರ್ಮದಿಂದ ಪುಣ್ಯವೋ ಪಾಪವೋ ಆಗಿಯೇತೀರುತ್ತದೆ ; ಯಾವ ಕರ್ಮವೇ ಆಗಲಿ ಶಾಸ್ತ್ರದಲ್ಲಿ ವಿಹಿತವಾಗಿರುವ ಅಥವಾ ಪ್ರತಿಷಿದ್ಧವಾಗಿರುವ ಕರ್ಮಗಳಲ್ಲಿ ಅಡಕವಾಗಿಯೇ ಇರುತ್ತದೆ.

6. ತಪ್ಪು ತಿಳಿವಳಿಕೆಯೇ ಎಂದರ್ಥ ; ಏತರಲ್ಲಿ ರಾಗವಿರುವದೋ ಅದು ಒಳ್ಳೆಯದೆಂಬ ಬುದ್ಧಿಯೂ ಏತರಲ್ಲಿ ದ್ವೇಷವಿರುವದೋ ಅದು ಕೆಟ್ಟದ್ದೆಂಬ ಬುದ್ಧಿಯೂ ಆಗುತ್ತಲೇ ಇರುವವು.

7. ದ್ವೈತವಸ್ತುವು ವಿಚಾರಮಾಡದೆ ಇರುವಾಗಲೇ ಸತ್ಯವೆಂದು ಕಾಣಿಸುತ್ತದೆ.

ವದರಿಂದಲೂ[1] (ಆ ಕರ್ಮವು) ಬಿಟ್ಟುಹೋಗದೆ ಇರುತ್ತದೆ. ಆದ್ದರಿಂದ ಎಲ್ಲಾ ಅನರ್ಥಗಳಿಗೂ ಹೇತುವು ಆತ್ಮನ ಅನವಬೋಧವೇ.[2] ಬಂದೂ ಹೋಗೀ ಮಾಡದ ಪರತಂತ್ರವಲ್ಲದ ಸುಖವು ಆತ್ಮನ ಸ್ವಭಾವವೇ ಆಗಿರುವದರಿಂದ ಅದಕ್ಕೆ ಅನವಬೋಧವೇ ಮುಸುಕು.[3] ಆದ್ದರಿಂದ ಅದು ಅತ್ಯಂತವಾಗಿ ನಾಶವಾದರೆ ಎಲ್ಲಾ ಪುರುಷಾರ್ಥವನ್ನೂ ಪಡೆದಂತೆ. ಅಜ್ಞಾನದ ನಿವೃತ್ತಿಗೆ ಸಮ್ಯಗ್ಜ್ಞಾನವು ಹುಟ್ಟುವದೆಂಬುದೊಂದೇ ಹೇತುವಾಗಿರುವದರಿಂದ ಅದನ್ನು ಸ್ವೀಕರಿಸಬೇಕು.

ಎಲ್ಲಾ ಅನರ್ಥಗಳಿಗೂ ಹೇತುವಾಗಿರುವ ಆತ್ಮಾಜ್ಞಾನದ ವಿಷಯ (ವಾದ, ಆತ್ಮನು) ಅನಾಗಮಿಕವಾದ[4] ಪ್ರತ್ಯಕ್ಷಾದಿಲೌಕಿಕಪ್ರಮಾಣಗಳಿಗೆ ಗೋಚರನಲ್ಲವಾದ್ದರಿಂದ[5] ವೇದಾಂತಾಗಮವಾಕ್ಯದಿಂದಲೇ ಸಮ್ಯಗ್ಜ್ಞಾನ

1. ಉಪಾದಾನವೆಂದರೆ ಮಡಕೆಗೆ ಮಣ್ಣಿನಂತೆ ಕಾರಣವು ಎಂದು ಅಭಿಪ್ರಾಯವಲ್ಲ ; ಕಪ್ಪೆಯಚಿಪ್ಪನ್ನು ಸರಿಯಾಗಿ ಅರಿತುಕೊಳ್ಳದಿರುವಾಗ ಅದನ್ನು ಬೆಳ್ಳಿ ಎಂದು ತಪ್ಪಾಗಿ ತಿಳಿಯುವಂತೆ ಆತ್ಮನನ್ನು ಸರಿಯಾಗಿ ಅರಿತುಕೊಳ್ಳದಿರುವಲ್ಲಿ ಅವನನ್ನೇ ದ್ವೈತಪ್ರಪಂಚವೆಂದು ತಪ್ಪಾಗಿ ತಿಳಿದುಕೊಳ್ಳುತ್ತೇವೆ. ಆದ್ದರಿಂದ ಆತ್ಮಾನವಬೋಧವೇ, ಆತ್ಮನನ್ನು ಸರಿಯಾಗಿ ತಿಳಿದುಕೊಳ್ಳದಿರುವದೇ, ದ್ವೈತಸತ್ಯತ್ವಬುದ್ಧಿಗೆ ಕಾರಣವು. ಈ ಪ್ರಘಟ್ಟದಲ್ಲಿ ಹೇತು, ಮೂಲ, ನಿಬಂಧ, ನಿಮಿತ್ತ , ಉಪಾದಾನ- ಈ ಶಬ್ದಗಳು ಪರ್ಯಾಯಗಳೆಂಬುದನ್ನು ನೆನಪಿಡಬೇಕು.

2. ಆತ್ಮನನ್ನು ಸರಿಯಾಗಿ ಅರಿತುಕೊಳ್ಳದ್ದರಿಂದಲೇ ದ್ವೈತ, ಅಧ್ಯಾಸ, ರಾಗದ್ವೇಷಗಳು, ಕರ್ಮ, ಧರ್ಮಾಧರ್ಮಗಳು, ದೇಹ, ದುಃಖ- ಇವು ಒಂದರಿಂದೊಂದು ಉಂಟಾಗುತ್ತಿರುವವು.

3. ಅಜ್ಞಾನವು ಅಭಾವರೂಪವಾಗಿರುವದರಿಂದ ಅದು ನಿಜವಾಗಿ ಆತ್ಮಸ್ವರೂಪಕ್ಕೆ ಮುಸುಕಲ್ಲ ; ಅದು ತೋರದೆ ಇರುವದಕ್ಕೆ ಕಾರಣ ಎಂದರ್ಥ. ಅನಾಗಮಾಪಾಯಿ, ಅಪರತಂತ್ರ ಎಂಬ ವಿಶೇಷಣಗಳನ್ನು ಇಲ್ಲಿ ಉಪಯೋಗಿಸಿರುವದು ವಿಷಯಸುಖವು ಪರಮಾರ್ಥಸುಖವಲ್ಲವೆಂಬುದನ್ನು ಸೂಚಿಸುವದಕ್ಕೆ.

4. ಆತ್ಮೈಕತ್ವವನ್ನು ಬೋಧಿಸುವ ವೇದಾಂತದ ಉಪದೇಶವೆಂಬ ಆಗಮದಿಂದುಂಟಾಗದಿರುವ. 'ಆಗಮಿಕಪ್ರತ್ಯಕ್ಷವಲ್ಲದ' ಎಂಬ ವ್ಯಾಖ್ಯಾನದಲ್ಲಿ ಆದಿ ಹೆಚ್ಚಾಗುವದು, ಲೌಕಿಕಪ್ರಮಾಣವಾದ ಪ್ರತ್ಯಕ್ಷವನ್ನು ಕೈಬಿಟ್ಟಂತೆಯೂ ಆಗುವದು.

5. ಲೌಕಿಕಪ್ರಮಾಣಗಳಿಗೆ ಹೊರಗಿನ ವಿಷಯಗಳೇ ಗೋಚರ ; ವಿಷಯಿಯಾದ ಆತ್ಮನು ಗೋಚರನಲ್ಲ .

ವಾಗುತ್ತದೆ. ಆದ್ದರಿಂದ[1] ಸರ್ವವೇದಾಂತಗಳ ಸಾರಸಂಗ್ರಹವಾಗಿರುವ ಈ ಪ್ರಕರಣವನ್ನು[2] ಆರಂಭಿಸಿರುತ್ತದೆ.

## ಮಂಗಲಾಚರಣೆ, ಗ್ರಂಥಾರಂಭಪ್ರತಿಜ್ಞೆ

(ಮೂಲ)

ತತ್ರ ಅಭಿಲಷಿತಾರ್ಥಪ್ರಚಯಾಯ ಪ್ರಕರಣಾರ್ಥಸಂಸೂತ್ರಣಾಯ ಚ ಅಯಮಾದ್ಯಃ ಶ್ಲೋಕಃ–

**ಖಾನಿಲಾಗ್ನ್ಯಬ್ಧರಿತ್ರ್ಯನ್ತಂ ಸ್ರಕ್ಫಣೇವೋದ್ಗತಂ ಯತಃ ।**
**ಧ್ವಾನ್ತಚ್ಛಿದೇ ನಮಸ್ತಸ್ಮೈ ಹರಯೇ ಬುದ್ಧಿಸಾಕ್ಷಿಣೇ ॥೧॥**

(ಅರ್ಥ)

ಇಲ್ಲಿ ಇಷ್ಟಾರ್ಥವು ಈಡೇರುವದಕ್ಕಾಗಿಯೂ ಪ್ರಕರಣದ ಅರ್ಥವನ್ನು ಸೂಚಿಸುವದಕ್ಕಾಗಿಯೂ[3] ಈ ಮೊದಲನೆಯ[4] ಶ್ಲೋಕವು ಬಂದಿರುತ್ತದೆ :

---

1. ವೇದಾಂತಾಗಮವಾಕ್ಯದಿಂದಲೇ ಸರಿಯಾದ ಆತ್ಮಜ್ಞಾನವಾಗುವದರಿಂದ. ಇಲ್ಲಿ ವೈದಿಕವಾದರೂ ಕರ್ಮೋಪಾಸನೆಗಳಿಂದ ಈ ಜ್ಞಾನವಾಗಲಾರದು, ಯೋಗಿಪ್ರತ್ಯಕ್ಷವೇ ಮುಂತಾದವುಗಳಿಂದಲೂ ಆಗಲಾರದು ಎಂಬ ಸೂಚನೆಯಿದೆ.

2. ವೇದಾಂತವು ಶಾಸ್ತ್ರವು ; ಅಲ್ಲಿರುವ ಜ್ಞಾನದ ಸ್ವರೂಪವನ್ನು ಮಾತ್ರ ನಿರ್ಧಾರಣೆ ಮಾಡುವದರಿಂದ ಈ ಗ್ರಂಥವು ಪ್ರಕರಣವು. ಪೀಠಿಕೆಯನ್ನು ನೋಡಿ.

3. ಪ್ರಕರಣವು ನಿರ್ವಿಘ್ನವಾಗಿ ಮುಗಿಯಬೇಕು, ಗುರುಶಿಷ್ಯ ಪರಂಪರೆಯಿಂದ ಅಧಿಕಾರಿಗಳಲ್ಲಿ ವಿನಿಯೋಗವಾಗಬೇಕು, ಶಿಷ್ಯರಿಗೆ ಮಂಗಲಾಚರಣೆಯನ್ನು ಮಾಡಬೇಕೆಂಬುದು ತಿಳಿಯಬೇಕು - ಎಂಬುದು ಇಷ್ಟಾರ್ಥಸಿದ್ಧಿ ; ಅದಕ್ಕಾಗಿಯೂ, ವೇದಾಂತ ವಾಕ್ಯಜನ್ಯವಾದ ಪ್ರತ್ಯಗಾತ್ಮಾಭಿನ್ನಪರದೇವತಾಜ್ಞಾನದಿಂದಲೇ ಅನರ್ಥಹೇತುವಾದ ಅಜ್ಞಾನವು ನಾಶವಾಗುತ್ತದೆ ಎಂಬುದು ಪ್ರಕರಣದ ಅರ್ಥವು ; ಅದನ್ನು ಸೂಚಿಸುವದಕ್ಕಾಗಿಯೂ ಪರಮಾತ್ಮನನ್ನು ನಮಸ್ಕರಿಸಿದೆ.

4. ಮೊದಲನೆಯ ಶ್ಲೋಕದಲ್ಲಿ ವಿಷಯಪ್ರಯೋಜನಗಳನ್ನು ಸೂಚಿಸುವದರಿಂದ ಓದುವವರಿಗೆ ಆದರವುಂಟಾಗುತ್ತದೆ.

೧. ಆಕಾಶ, ವಾಯು, ಅಗ್ನಿ, ಅಪ್ಪು, ಪೃಥಿವಿ - ಎಂಬವರೆಗಿನ (ಜಗತ್ತು ) ಹಗ್ಗದ ಹಾವಿನಂತೆ ಯಾವನಿಂದ ಮೇಲಕ್ಕೆದ್ದುಕೊಂಡಿರುವದೋ[1] ಅಜ್ಞಾನವನ್ನು ನಾಶಗೊಳಿಸುವ ಬುದ್ಧಿಸಾಕ್ಷಿಯಾದ [2] ಆ ಹರಿಗೆ ನಮಸ್ಕಾರ !

(ಮೂಲ)

ಸ್ವಸಂಪ್ರದಾಯಸ್ಯ ಚೋದಿತಪ್ರಮಾಣಪೂರ್ವಕತ್ವಜ್ಞಾಪನಾಯ ವಿಶಿಷ್ಟಗುಣಸಂಬನ್ಧಸಂಕೀರ್ತನಪೂರ್ವಿಕಾ ಗುರೋರ್ನಮಸ್ಕ್ರಿಯಾ[3] -

**ಅಲಬ್ಧಾತಿಶಯಂ ಯಸ್ಮಾದ್ ವ್ಯಾವೃತ್ತಾಸ್ತಮಬಾದಯಃ ।**
**ಗರೀಯಸೇ ನಮಸ್ತಸ್ಮಾ ಅವಿದ್ಯಾಗ್ರನ್ಥಿಭೇದಿನೇ ॥೨॥**

(ಅರ್ಥ)

ತನ್ನ ಸಂಪ್ರದಾಯವು ಉಕ್ತ ಪ್ರಮಾಣಪೂರ್ವಕವೆಂದು ತಿಳಿಸುವದಕ್ಕಾಗಿ ಅಸಾಧಾರಣಗುಣಸಂಬಂಧವನ್ನು[4] ಹೇಳುವ ಮೂಲಕ ಗುರುವಿಗೆ ನಮಸ್ಕಾರವನ್ನು (ಮಾಡುತ್ತಾರೆ) :

೨. ಯಾವನಿಗಿಂತ ಮಿಗಿಲನ್ನು ಪಡೆಯದೆ 'ತಮಪ್' ಮುಂತಾದ (ಪ್ರತ್ಯಯಗಳು)[5] ಹಿಂತಿರುಗಿರುವವೋ[6] ಅವಿದ್ಯಾಗ್ರಂಥಿಯನ್ನು ನಾಶಗೊಳಿ

---

1. ಆತ್ಮನಿಂದ ಜಗತ್ತುಂಟಾಗಿರುವದು ಅಜ್ಞಾನದಿಂದಲೇ ಎಂಬುದನ್ನು ಇದು ಸೂಚಿಸುತ್ತದೆ. ಗ್ರಂಥಕರ್ತರು ಪ್ರಾತಿಭಾಸಿಕವಸ್ತೂತ್ಪತ್ತಿಯನ್ನು ಎಲ್ಲಿಯೂ ಪ್ರತಿಪಾದಿಸಿಲ್ಲ.

2. ಬುದ್ಧಿಗೂ ಸಾಕ್ಷಿಯಾಗಿರುವ ಪರಮಾತ್ಮನನ್ನು ಅರಿತುಕೊಂಡ ಮಾತ್ರದಿಂದ ಅಜ್ಞಾನವು ನಾಶವಾಗುತ್ತದೆ ಎಂದದ್ದರಿಂದ ವಿಷಯಪ್ರಯೋಜನಗಳನ್ನು ಸೂಚಿಸಿದಂತೆ ಆಯಿತು.

3. ಅಚ್ಚಿನ ಪುಸ್ತಕದಲ್ಲಿರುವ 'ನಮಸ್ಕಾರಕ್ರಿಯಾ' ಎಂಬುದನ್ನು ಹೀಗೆ ಬರೆದುಕೊಂಡಿದೆ.

4. ಈ ಸಂಪ್ರದಾಯವು ಶ್ರುತ್ಯುಕ್ತರೀತಿಯಿಂದ ಅವಿದ್ಯೆಯನ್ನು ಕಳೆಯುವ ಆಚಾರ್ಯರಿಂದ ಬಂದ್ದೆಂದು ತಿಳಿಸುವದಕ್ಕಾಗಿ ಗುರುವಿನ ಅಸಾಧಾರಣಗುಣವನ್ನು ತಿಳಿಸಿದೆ ಎಂದರ್ಥ. ಇಲ್ಲಿ ಆಚಾರ್ಯವಚನವೆಂಬ ಪ್ರಮಾಣವೇ ಶ್ರುತ್ಯುಕ್ತ ಪ್ರಮಾಣವು.

5. ತಮಪ್, ಇಷ್ಠನ್, ತರಪ್ - ಮುಂತಾದವುಗಳು ಸಂಸ್ಕೃತದಲ್ಲಿ ಮಿಗಿಲಿಲ್ಲದ್ದೆಂಬುದನ್ನು ತಿಳಿಸುವವು.

6. ಯಾವ ಗುರುವಿನಲ್ಲಿಯೇ ನಿಂತುಬಿಟ್ಟಿವೆಯೋ.

ಸುವ [1] ಆ ಗುರುವಿಗೆ ನಮಸ್ಕಾರ !

(ಮೂಲ)

ನಮಸ್ಕಾರನಿಮಿತ್ತಸ್ವಾಶಯಾವಿಷ್ಕರಣಾರ್ಥಃ–

**ವೇದಾನ್ತೋದರಸಂಗೂಢಂ ಸಂಸಾರೋತ್ತಾರಿ ವಸ್ತುಗಮ್ ।**
**ಜ್ಞಾನಂ ವ್ಯಾಕೃತಮಪ್ಯನ್ಯೈರ್ವಕ್ಷ್ಯೇ ಗುರ್ವನುಶಿಕ್ಷಯಾ ॥೩॥**

(ಅರ್ಥ)

ನಮಸ್ಕಾರಕ್ಕೆ ಕಾರಣವಾದ ತನ್ನ ಅಭಿಪ್ರಾಯವನ್ನು ಹೊರಪಡಿಸುವದಕ್ಕೆ (ಈ ಶ್ಲೋಕವು) :

೩. ವೇದಾಂತದೊಡನೆ ಅಡಗಿರುವ,[2] ಸಂಸಾರವನ್ನು ತೊಲಗಿಸುವ ವಸ್ತುವಿಷಯಕವಾದ ಜ್ಞಾನವನ್ನು[3] ಮಿಕ್ಕವರು ವಿವರಿಸಿದ್ದರೂ ಗುರುಗಳ ಅಪ್ಪಣೆಯಂತೆ ಹೇಳುವೆನು.

(ಮೂಲ)

ಕಿಂವಿಷಯಂ ಪ್ರಕರಣಮಿತಿ ಚೇತ್ ತದುಪನ್ಯಾಸಃ–

**ಯತ್ಸಿದ್ಧಾವಿದಮಃ ಸಿದ್ಧಿರ್ಯದಸಿದ್ಧೌ ನ ಕಿಂಚನ ।**
**ಪ್ರತ್ಯಗ್ಧರ್ಮೈಕನಿಷ್ಠಸ್ಯ ಯಾಥಾತ್ಮ್ಯಂ ವಕ್ಷ್ಯತೇ ಸ್ಫುಟಮ್ ॥೪॥**

(ಅರ್ಥ)

ಪ್ರಕರಣದ ವಿಷಯವೇನು ?[4] -ಎಂದರೆ ಅದನ್ನು ಹೇಳುತ್ತಾರೆ :

---

1. ಅಜ್ಞಾನವಶದಿಂದ ಬಹುಕಾಲದಿಂದ ಕೂಡಿಹಾಕಿಕೊಂಡಿದ್ದ ಮಿಥ್ಯಾವಾಸನಾರಾಶಿಯೇ ಅವಿದ್ಯಾಗ್ರಂಥಿಯು. ಅದರಿಂದಲೇ ಸಂಸಾರಬಂಧವಾಗಿರುವದು.

2. ಉಪನಿಷತ್ತುಗಳಲ್ಲಿದ್ದರೂ ಸಾಮಾನ್ಯರಿಗೆ ತಿಳಿಯದಿರುವ.

3. ಸಂಸಾರವನ್ನು ತೊಲಗಿಸುವ ಜ್ಞಾನವನ್ನು ವಸ್ತುವಿಷಯಕವಾದ ಜ್ಞಾನವನ್ನು- ಎಂದು ಬೇರೆಬೇರೆಯಾಗಿಯೂ ಅಥವಾ ಸಂಸಾರವನ್ನು ತೊಲಗಿಸುವ ವಸ್ತುವನ್ನು ತಿಳಿಸುವ ಜ್ಞಾನವನ್ನು- ಎಂದು ವಿಶಿಷ್ಟರೂಪದಿಂದಲೂ ಅನ್ವಯಿಸಬಹುದು. ಆತ್ಮಜ್ಞಾನವನ್ನು ಎಂದೇ ಎರಡಕ್ಕೂ ಅರ್ಥ. ವಸ್ತುಗವೆಂದರೆ ವಸ್ತು ತಂತ್ರವಾದದ್ದು .

4. ಪ್ರಕರಣದ ವಿಷಯವು ಜ್ಞಾನವೆಂದು ಹಿಂದಿನ ಶ್ಲೋಕದಲ್ಲಿ ಹೇಳಿಯೇ ಇದೆ ; ಆ ಜ್ಞಾನಕ್ಕೆ ವಿಷಯವಾದ ವಸ್ತು ಯಾವದು?- ಎಂಬುದನ್ನು ಇಲ್ಲಿ ಹೇಳುತ್ತದೆ.

೪. ಯಾವದು ಸಿದ್ಧವಾದರೆ ಇದರ ಸಿದ್ಧಿಯಾಗುವದೋ [1] ಯಾವದು ಸಿದ್ಧವಾಗದಿದ್ದರೆ ಯಾವದೊಂದೂ ಇಲ್ಲವೋ,[2] ಪ್ರತ್ಯಗ್ಧರ್ಮ್ಯೈಕನಿಷ್ಠವಾದ [3] ಅದರ ತತ್ತ್ವವನ್ನು ಸ್ಫುಟವಾಗಿ ತಿಳಿಸಲಾಗುವದು.[4]

(ಮೂಲ)

ವಿವಕ್ಷಿತಪ್ರಕರಣಾರ್ಥಪ್ರರೋಚನಾಯ ಅನುಕ್ತದುರುಕ್ತಾಪ್ರಾಮಾಣ್ಯಕಾರಣಶಙ್ಕಾವ್ಯುದಾಸೇನ ಸ್ವಗುರೋಃ ಪ್ರಾಮಾಣ್ಯೋಪವರ್ಣನಮ್ –

**ಗುರೂಕ್ತೋ ವೇದರಾದ್ಧಾನ್ತಸ್ತತ್ರ ನೋ ವಚ್ಮ್ಯಶಕ್ತಿತಃ ।**
**ಸಹಸ್ರಕಿರಣವ್ಯಾಪ್ತೇ ಖದ್ಯೋತಃ ಕಿಂ ಪ್ರಕಾಶಯೇತ್ ॥೫॥**

(ಅರ್ಥ)

ಹೇಳಬೇಕೆಂದಿರುವ ಪ್ರಕರಣದ ವಿಷಯದಲ್ಲಿ ಸವಿಯನ್ನುಂಟುಮಾಡುವದಕ್ಕಾಗಿ ಅನುಕ್ತ , ದುರುಕ್ತ – ಎಂಬ ಅಪ್ರಾಮಾಣ್ಯಕಾರಣದ ಶಂಕೆಯನ್ನು ತಿರಸ್ಕರಿಸಿ[5] ತಮ್ಮ ಗುರುವಿಗೆ ಪ್ರಾಮಾಣ್ಯವನ್ನು ವರ್ಣಿಸುತ್ತಾರೆ.

---

1. ಯಾವದರ ಸಿದ್ಧಿಯನ್ನು ಆಶ್ರಯಿಸಿಕೊಂಡೇ ಇದಂಪ್ರತ್ಯಯಗೋಚರವಾದ ಅನಾತ್ಮದ ಸಿದ್ಧಿಯಾಗುವದೋ.

2. ಪ್ರಮಾತ್ರಾದಿಗಳಾಗಲಿ ಅವುಗಳ ಅಭಾವವಾಗಲಿ ಸಿದ್ಧಿಸದೋ ಎಂದರ್ಥ.

3. ಪ್ರತ್ಯಕ್ತ್ವವೆಂಬ ಅಸಾಧಾರಣರೂಪವುಳ್ಳ, ಅಥವಾ ಪ್ರತ್ಯಗಾತ್ಮನಲ್ಲಿಯೇ ಪರ್ಯವಸಾನವಾಗುವ, ಪ್ರತ್ಯಗಾತ್ಮನಿಗಿಂತ ಬೇರೆಯಲ್ಲದ.

4. ಉಪನಿಷತ್ತುಗಳಲ್ಲಿ ವಿಸ್ತಾರವಾಗಿ ಹೇಳಿದ್ದರೂ ಬ್ರಹ್ಮಸೂತ್ರದಲ್ಲಿಯೂ ಅದರ ಭಾಷ್ಯದಲ್ಲಿಯೂ ನಿರ್ಣೀತವಾಗಿದ್ದರೂ ವಿಷಯಾಂತರವನ್ನು ಸೇರಿಸಿಕೊಂಡು ಅಲ್ಲಲ್ಲಿ ಇಷ್ಟಿಷ್ಟು ಹೇಳಿರುವದರಿಂದಲೂ ಇಲ್ಲಿ ಅದನ್ನೇ ಸಂಕ್ಷೇಪಿಸಿ ಒಕ್ಕಡೆಯಲ್ಲಿಯೇ ಸ್ಪಷ್ಟವಾಗಿ ತಿಳಿಸಲಾಗುತ್ತದೆ ಎಂದರ್ಥ.

5. ಗುರುಗಳು ಯಾವ ವಿಷಯವನ್ನಾದರೂ ಹೇಳಿಲ್ಲ , ಅಥವಾ ತಪ್ಪಾಗಿ ಹೇಳಿದಾರೆ ಎಂದರೆ ಅವರು ಪ್ರಮಾಣವಲ್ಲವೆಂದಾಗುವದು ; ಆಗ ಆ ಗುರುಗಳ ಶಿಷ್ಯನಾದ ನೀನು ಮಾಡಿದ ಪ್ರಕರಣದಲ್ಲಿ ಯಾರಿಗೂ ಆದರವಿಲ್ಲದೆ ಹೋಗುವದು- ಎಂಬ ಶಂಕೆಗೆ ಉತ್ತರವಾಗಿ ಮುಂದಿನ ಶ್ಲೋಕವು ಬಂದಿದೆ ಎಂದರ್ಥ.

೫. ವೇದಸಿದ್ಧಾಂತವನ್ನು ಗುರುಗಳೇ ಹೇಳಿರುತ್ತಾರೆ. ಆದರ ವಿಷಯದಲ್ಲಿ (ನನಗೆ) ಶಕ್ತಿಯಿಲ್ಲದ್ದರಿಂದ (ಹೆಚ್ಚಿಗೆ ಏನೂ) ಹೇಳುವದಿಲ್ಲ.[1] ಸೂರ್ಯನು ವ್ಯಾಪಿಸಿರುವ (ವಸ್ತುವನ್ನು) ದೀಪದಹುಳು ಏನು ಬೆಳಗಿತೋರಿಸೀತು ?

(ಮೂಲ)

ಗುರುಣೈವ ವೇದಾರ್ಥಸ್ಯ ಪರಿಸಮಾಪಿತತ್ವಾತ್ ಪ್ರಕರಣೋಕ್ತೌ ಖ್ಯಾತ್ಯಾದ್ಯಪ್ರಾಮಾಣ್ಯಕಾರಣಾಶಙ್ಕಾ ಇತಿ ಚೇತ್ ತದ್ವ್ಯುದಾಸಾರ್ಥಮ್ ಆಹ[2] –

**ನ ಖ್ಯಾತಿಲಾಭಪೂಜಾರ್ಥಂ ಗ್ರನ್ಥೋಽಸ್ಮಾಭಿರುದೀರ್ಯತೇ ।**
**ಸ್ವಬೋಧಪರಿಶುದ್ಧ್ಯರ್ಥಂ ಬ್ರಹ್ಮವಿನ್ನಿಕಷಾಶ್ಮಸು ॥೬॥**

(ಅರ್ಥ)

ಗುರುವೇ ವೇದಾರ್ಥವನ್ನು (ಹೇಳಿ) ಮುಗಿಸಿರುವದರಿಂದ ಪ್ರಕರಣದಲ್ಲಿ ಹೇಳುವದಕ್ಕೆ ಖ್ಯಾತಿಯೇ ಮುಂತಾದ ಅಪ್ರಾಮಾಣ್ಯಕಾರಣವಿರಬೇಕು ಎಂಬ ಶಂಕೆಯಾಗಬಹುದಲ್ಲ ! - ಎಂದರೆ ಅದನ್ನು ತಿರಸ್ಕರಿಸುವದಕ್ಕೆ ಹೇಳುತ್ತಾರೆ :

೬. ಖ್ಯಾತಿ, ಲಾಭ, ಪೂಜೆ - ಇವುಗಳಿಗಾಗಿ ನಾವು ಗ್ರಂಥವನ್ನು ಹೇಳುವದಿಲ್ಲ, ಬ್ರಹ್ಮವನ್ನು ಬಲ್ಲವರೆಂಬ ಒರೆಗಲ್ಲುಗಳಲ್ಲಿ ನಮ್ಮ ಬುದ್ಧಿಯನ್ನು ಶುದ್ಧಿಮಾಡಿಕೊಳ್ಳುವದಕ್ಕಾಗಿ[3] (ಹೇಳುತ್ತೇವೆ).

---

1. ಅಲ್ಪಮತಿಗಳಾದವರಿಗೆ ಸ್ಫುಟವಾಗುವಂತೆ ವೇದಾಂತವಾಕ್ಯಜನ್ಯಜ್ಞಾನದ ಸ್ವರೂಪವನ್ನು ಬೇರೆಯ ಸಂಪ್ರದಾಯಗಳನ್ನು ನಿರಾಕರಿಸಿ ಸಂಗ್ರಹವಾಗಿ ಗುರುಗಳು ಹೇಳಿಲ್ಲವೆಂಬ ಅಭಿಪ್ರಾಯದಿಂದ ಸ್ಫುಟವಾಗಿ ಹೇಳುತ್ತೇನೆಂದದ್ದು. ಗುರುಗಳು ವೇದಾಂತಸಿದ್ಧಾಂತವನ್ನು ಹೇಳಿಲ್ಲವೆಂದಾಗಲಿ ತಪ್ಪಾಗಿ ಹೇಳಿದ್ದಾರೆಂದಾಗಲಿ ಅಭಿಪ್ರಾಯವಿಲ್ಲ-ಎಂದರ್ಥ.

2. 'ಉಪನ್ಯಾಸಃ' ಪಾ॥

3. ಒರೆಗಲ್ಲಿಗೆ ತಿಕ್ಕಿನೋಡಿದರೆ ಚಿನ್ನವು ಎಷ್ಟು ಚೊಕ್ಕನಾಗಿದೆಯೆಂಬುದು ತಿಳಿಯುವಂತೆ ಬ್ರಹ್ಮಜ್ಞಾನಿಗಳೊಡನೆ ವಾದಮಾಡುವದರಿಂದ ತನ್ನ ಜ್ಞಾನದ ಶುದ್ಧಿಯೂ ತಿಳಿಯಬರುತ್ತದೆ ಎಂದು ಅಭಿಪ್ರಾಯ.

## ಪ್ರಕರಣಾರ್ಥದ ಸಂಕ್ಷೇಪ

(ಮೂಲ)

ಅನರ್ಥಾನರ್ಥಹೇತುಪುರುಷಾರ್ಥತದ್ಧೇತುಪ್ರಕರಣಾರ್ಥಸಂಗ್ರಹ ಜ್ಞಾಪನಾಯ ಉಪನ್ಯಾಸಃ –

**ಐಕಾತ್ಮ್ಯಾಪ್ರತಿಪತ್ತಿರ್ಯಾ ಸ್ವಾತ್ಮಾನುಭವಸಂಶ್ರಯಾ ।**
**ಸಾವಿದ್ಯಾ ಸಂಸೃತೇರ್ಬೀಜಂ ತನ್ನಾಶೋ ಮುಕ್ತಿರಾತ್ಮನಃ ॥೭॥**

(ಅರ್ಥ)

ಅನರ್ಥ, ಅನರ್ಥಕ್ಕೆ ಹೇತು, ಪುರುಷಾರ್ಥ, ಅದಕ್ಕೆ ಹೇತು - ಎಂಬ ಪ್ರಕರಣಾರ್ಥಗಳನ್ನು[1] ಸಂಗ್ರಹವಾಗಿ ತಿಳಿಯಪಡಿಸುವದಕ್ಕೆ (ಈ ಶ್ಲೋಕವನ್ನು ) ಹೇಳಿದೆ :

೭. ತನ್ನ ಆತ್ಮನೆಂಬ ಅನುಭವವನ್ನು ಆಶ್ರಯಿಸಿಕೊಂಡಿರುವ,[2] ಏಕಾತ್ಮತ್ವದ ಅಜ್ಞಾನವೆಂಬುದಿದೆಯಲ್ಲ , ಆ ಅವಿದ್ಯೆಯೇ ಸಂಸಾರಕ್ಕೆ ಕಾರಣವು, ಅದರ ನಾಶವೇ ಆತ್ಮನಿಗೆ ಮುಕ್ತಿ.

(ಮೂಲ)

ಪುರುಷಾರ್ಥಹೇತೋರವಶಿಷ್ಟತ್ವಾತ್ ತದಭಿವ್ಯಾಹಾರಃ –

**ವೇದಾವಸಾನವಾಕ್ಯೋತ್ಥಸಮ್ಯಗ್ಜ್ಞಾನಾಶುಶುಕ್ಷಣೇಃ ।**
**ದನ್ದಹೀತ್ಯಾತ್ಮನೋ ಮೋಹಂ ನ ಕರ್ಮಾಪ್ರತಿಕೂಲತಃ ॥೮॥**

---

1. ಜ್ಞಾನದ ಸ್ವರೂಪವನ್ನು ನಿರ್ಧರಿಸುವದಕ್ಕೆ ಈ ನಾಲ್ಕನ್ನೂ ನಿರೂಪಣ ಮಾಡಬೇಕು ಎಂದಭಿಪ್ರಾಯ.

2. ಅಜ್ಞಾನವು ಪ್ರಮಾಣದಿಂದ ಸಿದ್ಧವಾಗಿಲ್ಲ, ಆತ್ಮಾನುಭವದಿಂದಲೇ ತಿಳಿಯಬರುತ್ತದೆ ; ನನಗೆ ಐಕಾತ್ಮ್ಯವು ತಿಳಿಯದು ಎಂಬುದೇ ಅಜ್ಞಾನ, ಅಥವಾ ಅವಿದ್ಯೆ. ಈ ಪ್ರಕರಣದಲ್ಲಿ ಜ್ಞಾನಾಭಾವವನ್ನೇ ಮುಖ್ಯವಾಗಿ ಅವಿದ್ಯೆಯೆಂದು ಕರೆದಿದೆ. ಪೀಠಿಕೆಯನ್ನು ನೋಡಿ.

(ಅರ್ಥ)

ಪುರುಷಾರ್ಥಹೇತುವನ್ನು (ಹೇಳುವದು) ಉಳಿದಿರುವದರಿಂದ (ಈ ಶ್ಲೋಕದಲ್ಲಿ ) ಅದನ್ನು ಹೇಳಿರುತ್ತದೆ :

೮. ವೇದಾಂತವಾಕ್ಯದಿಂದ ಉಂಟಾದ ಸಮ್ಯಗ್ಜ್ಞಾನವೆಂಬ ಬೆಂಕಿಯು ಆತ್ಮನ ಅಜ್ಞಾನವನ್ನು ಸುಟ್ಟುಹಾಕಿಬಿಡುತ್ತದೆ ; ಕರ್ಮವು (ಸುಡ)ಲಾರದು. ಏಕೆಂದರೆ (ಅದು ಅದಕ್ಕೆ) ಪ್ರತಿಕೂಲವಲ್ಲ .

## ೪. ಕರ್ಮವಾದಿಗಳ ಪೂರ್ವಪಕ್ಷ :

## (ಅ) ಕರ್ಮದಿಂದಲೇ ಮುಕ್ತಿ

(ಮೂಲ)

ಪ್ರತಿಜ್ಞಾತಾರ್ಥಸಂಶುದ್ಧ್ಯರ್ಥಂ ಪೂರ್ವಪಕ್ಷೋಕ್ತಿಃ । ತತ್ರ ಜ್ಞಾನ ಮಭ್ಯುಪಗಮ್ಯ ತಾವದ್ ಉಪನ್ಯಾಸಃ –

**ಮುಕ್ತೇಃ ಕ್ರಿಯಾಭಿಃ ಸಿದ್ಧತ್ವಾಜ್ಜ್ಞಾನಂ ತತ್ರ ಕರೋತಿ ಕಿಮ್ ।**
**ಕಥಂ ಚೇಚ್ಛೃಣು ತತ್ ಸರ್ವಂ ಪ್ರಣಿಧಾಯ ಮನೋ ಯಥಾ ॥೯॥**

**ಅಕುರ್ವತಃ ಕ್ರಿಯಾಃ ಕಾಮ್ಯಾಃ ನಿಷಿದ್ಧಾಸ್ತ್ಯಜತಸ್ತಥಾ ।**
**ನಿತ್ಯನೈಮಿತ್ತಿಕಂ ಕರ್ಮ ವಿಧಿವಚ್ಚಾನುತಿಷ್ಠತಃ ॥೧೦॥**

(ಅರ್ಥ)

ಪ್ರತಿಜ್ಞೆಮಾಡಿರುವ ಅರ್ಥವನ್ನು ನಿರ್ಣಯಿಸುವದಕ್ಕಾಗಿ ಪೂರ್ವಪಕ್ಷವನ್ನು ಹೇಳಲಾಗುತ್ತದೆ. ಅಲ್ಲಿ[1] ಮೊದಲು ಜ್ಞಾನವನ್ನು ಒಪ್ಪಿ (ಪೂರ್ವಪಕ್ಷವನ್ನು) ಹೇಳಲಾಗುತ್ತದೆ :

೯-೧೦. ಮುಕ್ತಿಯು ಕ್ರಿಯೆಗಳಿಂದ ಸಿದ್ಧವಾಗುವದರಿಂದ ಅದಕ್ಕೆ ಜ್ಞಾನವು ಏನು ಮಾಡೀತು ? (ಇದು) ಹೇಗೆ ಎಂದರೆ, ಅದೆಲ್ಲವನ್ನೂ ಮನಸ್ಸನ್ನು ಸಮಾಧಾನಗೊಳಿಸಿಕೊಂಡು ಕೇಳು. ಕಾಮ್ಯಕರ್ಮಗಳನ್ನು

---

1. ಬೇರೆಬೇರೆಯ ಪೂರ್ವಪಕ್ಷಗಳೊಳಗೆ.

ಮಾಡದೆ ಮತ್ತು ನಿಷಿದ್ಧಕರ್ಮಗಳನ್ನು ಬಿಟ್ಟು ನಿತ್ಯನೈಮಿತ್ತಿಕಕರ್ಮವನ್ನು ವಿಧಿವತ್ತಾಗಿ ಮಾಡುತ್ತಿದ್ದರೆ[1]–

(ಮೂಲ)

ಕಿಮತೋ ಭವತಿ?

**ಕಾಮ್ಯಕರ್ಮಫಲಂ ತಸ್ಮಾದ್ ದೇವಾದೀಮಂ ನ ಢೌಕತೇ ।**
**ನಿಷಿದ್ಧಸ್ಯ ನಿರಸ್ತತ್ವಾನ್ನಾರಕೀಂ ನೈತ್ಯಧೋಜನಿಮ್ ॥೧೧॥**

(ಅರ್ಥ)

ಇದರಿಂದೇನಾಗುವದು ? ಎಂದರೆ :

೧೧. ಆ(ಕಾಮ್ಯತ್ಯಾಗದಿಂದ) ಕಾಮ್ಯಕರ್ಮದ ಫಲವಾದ ದೇವತ್ವವೇ ಮುಂತಾದದ್ದು ಇವನನ್ನು ಸೋಂಕುವದಿಲ್ಲ. ನಿಷಿದ್ಧ (ಕರ್ಮ)ವನ್ನು ಬಿಟ್ಟಿದ್ದರಿಂದ ನರಕಸಂಬದ್ಧವಾದ ಕೀಳುಜನ್ಮವನ್ನೂ ಪಡೆಯುವದಿಲ್ಲ.[2]

(ಮೂಲ)

ದೇಹಾರಮ್ಭಕಯೋಶ್ಚ ಧರ್ಮಾಧರ್ಮಯೋರ್ಜ್ಞಾನಿನಾ ಸಹ ಕರ್ಮಿಣಃ ಸಮಾನೌ ಚೋದ್ಯಪರಿಹಾರೌ –

**ವರ್ತಮಾನಮಿದಂ ಯಾಭ್ಯಾಂ ಶರೀರಂ ಸುಖದುಃಖದಮ್ ।**
**ಆರಬ್ಧಂ ಪುಣ್ಯಪಾಪಾಭ್ಯಾಂ ಭೋಗಾದೇವ ತಯೋಃ ಕ್ಷಯಃ॥೧೨॥**

(ಅರ್ಥ)

(ಈ) ದೇಹಕ್ಕೆ ಕಾರಣವಾದ ಧರ್ಮಾಧರ್ಮಗಳ (ವಿಷಯದ) ಆಕ್ಷೇಪಪರಿಹಾರಗಳು ಜ್ಞಾನವಾದಿಗೆ (ಹೇಗೋ ಹಾಗೆ) ಕರ್ಮವಾದಿಗೂ ಸಮಾನವಾಗಿರುವವು :

---

1. ಮುಂದಿನ ಶ್ಲೋಕದಭಿಪ್ರಾಯವನ್ನೂ ಈ ಶ್ಲೋಕದಭಿಪ್ರಾಯವನ್ನೂ ಸೇರಿಸಿಕೊಂಡು ಗ್ರಹಿಸಬೇಕು.

2. ಸ್ಥಾವರಾಂತವಾದ ಕೀಳುಜನ್ಮಗಳು ದುಃಖಪ್ರಧಾನವಾಗಿರುವದರಿಂದ ನಾರಕವೆನಿಸುವವು. ಅವು ನಿಷಿದ್ಧಕರ್ಮಗಳ ಫಲ ಎಂದು ಅಭಿಪ್ರಾಯ.

೧೨. ಸುಖದುಃಖಗಳನ್ನು ಕೊಡುತ್ತಿರುವ ಈಗಿನ ಈ ಶರೀರವು ಯಾವ ಪುಣ್ಯಪಾಪಗಳಿಂದ ಆಗಿರುತ್ತದೆಯೋ ಅವುಗಳು ಭೋಗದಿಂದಲೇ ಕ್ಷಯವಾಗುವವು.

(ಮೂಲ)

ಕಾಮ್ಯಪ್ರತಿಷಿದ್ಧಕರ್ಮಫಲತ್ವಾತ್ ಸಂಸಾರಸ್ಯ ತನ್ನಿರಾಸೇನೈವ ಅಶೇಷಾನರ್ಥನಿರಾಸಸ್ಯ ಸಿದ್ಧತ್ವಾತ್ ಕಿಂ ನಿತ್ಯಾನುಷ್ಠಾನೇನ ? ಇತಿ ಚೇತ್ ತನ್ನ , ತದಕರಣಾದಪಿ ಅನರ್ಥಪ್ರಸಕ್ತೇಃ –

**ನಿತ್ಯಾನುಷ್ಠಾನತಶ್ಚೈನಂ ಪ್ರತ್ಯವಾಯೋ ನ ಸಂಸ್ಪೃಶೇತ್ ।**
**ಅನಾದೃತ್ಯಾತ್ಮವಿಜ್ಞಾನಮತಃ ಕರ್ಮಾಣಿ ಸಂಶ್ರಯೇತ್ ॥೧೩॥**

(ಅರ್ಥ)

ಸಂಸಾರವು ಕಾಮ್ಯಪ್ರತಿಷಿದ್ಧಕರ್ಮಗಳ ಫಲವಾಗಿರುವದರಿಂದ, ಅದನ್ನು ಬಿಡುವದರಿಂದಲೇ ಎಲ್ಲಾ ಅನರ್ಥಗಳೂ ತೊಲಗುವವೆಂಬುದು ಸಿದ್ಧವಾಗುವದರಿಂದ ನಿತ್ಯ(ಕರ್ಮ)ವನ್ನು ಮಾಡುವದರಿಂದೇನು ?– ಎಂದರೆ ಹಾಗಲ್ಲ. ಅದನ್ನು ಮಾಡದೆ ಇರುವದರಿಂದಲೂ ಅನರ್ಥವು ಗಂಟುಬೀಳುವದು :

೧೩. ಮತ್ತು ನಿತ್ಯ(ಕರ್ಮ)ಗಳನ್ನು ಮಾಡುವದರಿಂದ ಇವನಿಗೆ ಪ್ರತ್ಯವಾಯವು[1] ಸೋಂಕದೆ ಇರುತ್ತದೆ. ಆದ್ದರಿಂದ ಆತ್ಮವಿಜ್ಞಾನವನ್ನು ಅಸಡ್ಡೆ ಮಾಡಿ ಕರ್ಮಗಳನ್ನು ಆಶ್ರಯಿಸಬೇಕು.[2]

---

1. ನಿತ್ಯಕರ್ಮವನ್ನು ಮಾಡದೆ ಇದ್ದರೆ ಪ್ರತ್ಯವಾಯವೆಂಬ ದೋಷವುಂಟಾಗುವದೆಂದು ಮೀಮಾಂಸಕರ ಅಭಿಪ್ರಾಯ.

2. ಇಲ್ಲಿಯವರೆಗಿನ ಪೂರ್ವಪಕ್ಷವು ಶ್ಲೋಕವಾರ್ತಿಕದಲ್ಲಿ (೧೦೮) ಕಂಡುಬರುತ್ತದೆ. ಈ ಪಕ್ಷವನ್ನು ತೈ. ಭಾ. ಅವತರಣಿಕೆ, ಗೀ. ಭಾ. ೧೮-೬೬, ಸೂ. ಭಾ. ೪-೩-೧೪- ಇವುಗಳಲ್ಲಿ ಭಾಷ್ಯಕಾರರು ಖಂಡಿಸಿರುತ್ತಾರೆ. ಸಂಬಂಧವಾರ್ತಿಕದಲ್ಲಿಯೂ ಇದನ್ನು ವಿಸ್ತಾರವಾಗಿ ಖಂಡಿಸಿದೆ. ಆತ್ಮನಲ್ಲಿ ನೆಲೆನಿಲ್ಲುವದೇ ಮೋಕ್ಷವೆಂದರೂ ಕರ್ಮದ ಅನುಷ್ಠಾನದಿಂದಲೇ ಆ ಮೋಕ್ಷವು ದೊರೆಯಬಹುದಾಗಿದೆ ಎಂದೂ ಪೂರ್ವಪಕ್ಷಿಯ ಆಶಯ.

## (ಆ) ಆತ್ಮಬೋಧಕಶಾಸ್ತ್ರವೇ ಇಲ್ಲ

(ಮೂಲ)

ಅಭ್ಯುಪೇತ್ಯ ಏವಮುಚ್ಯತೇ, ನ ತು ಯಥಾವಸ್ಥಿತಾತ್ಮವಸ್ತುವಿಷಯಂ ಜ್ಞಾನಮಸ್ತಿ । ತತ್ಪ್ರತಿಪಾದಕಪ್ರಮಾಣಾಭಾವಾತ್ –

**ಯಾವನ್ತ್ಯಶ್ಚೇಹ [1] ವಿದ್ಯನ್ತೇ ಶ್ರುತಯಃ ಸ್ಮೃತಿಭಿಃ ಸಹ ।**
**ವಿದಧತ್ಯುರುಯತ್ನೇನ ಕರ್ಮಾತೋ ಭೂರಿಸಾಧನಮ್ ॥೧೪॥**

(ಅರ್ಥ)

(ಜ್ಞಾನವನ್ನು)ಒಪ್ಪಿ ಹೀಗೆ ಹೇಳಿರುತ್ತೇವೆ ; ಆದರೆ ಸಿದ್ಧವಾಗಿರುವ ಆತ್ಮವಸ್ತುವಿನ ವಿಷಯಕವಾದ ಜ್ಞಾನವೇ ಇಲ್ಲ . ಏಕೆಂದರೆ ಅದನ್ನು ತಿಳಿಸುವ (ವಾಕ್ಯ) ಪ್ರಮಾಣವೇ ಇರುವದಿಲ್ಲ .

೧೪. ಇಲ್ಲಿ ಶ್ರುತಿಗಳು ಎಷ್ಟಿವೆಯೋ (ಅವುಗಳೆಲ್ಲ) ಸ್ಮೃತಿಗಳೊಡನೆ ಕರ್ಮವನ್ನೇ ಬಹಳ ಪ್ರಯತ್ನದಿಂದ ವಿಧಿಸುತ್ತಿರುವವು. ಆದ್ದರಿಂದ (ಆ ಕರ್ಮವೇ) ಪುಷ್ಕಲಸಾಧನವಾಗಿರುತ್ತದೆ.

(ಮೂಲ)

ಸ್ಯಾತ್ ಪ್ರಮಾಣಾಸಂಭವೋ ಭವದಪರಾಧಾತ್ ಇತಿ ಚೇತ್, ತನ್ನ । ಯತಃ –

**ಯತ್ನತೋ ವೀಕ್ಷಮಾಣೋಽಪಿ ವಿಧಿಂ ಜ್ಞಾನಸ್ಯ ನ ಕ್ವಚಿತ್ ।**
**ಶ್ರುತೌ ಸ್ಮೃತೌ ವಾ ಪಶ್ಯಾಮಿ ವಿಶ್ವಾಸೋ ನಾನ್ಯತೋಽಸ್ತಿ ನಃ ॥೧೫॥**

(ಅರ್ಥ)

ಪ್ರಮಾಣವು ಇಲ್ಲವೆಂಬ (ಶಂಕೆಯು) ನಿನ್ನ ತಪ್ಪಿನಿಂದ [2] ಆಗಿರಬಹುದು ಎಂದರೆ ಹಾಗಲ್ಲ , ಏಕೆಂದರೆ :

೧೫ ಶ್ರುತಿಯಲ್ಲಾಗಲಿ ಸ್ಮೃತಿಯಲ್ಲಾಗಲಿ ಯತ್ನದಿಂದ ನೋಡಿದರೂ

1. 'ಯಾವತ್ಯಃ' ಎಂದಿರಬೇಕು.
2. ಸರಿಯಾಗಿ ಹುಡುಕಿ ನೋಡದೆ ಇರುವ ತಪ್ಪಿನಿಂದ.

ಜ್ಞಾನದ ವಿಧಿಯು ನನಗೆ ಎಲ್ಲಿಯೂ ಕಾಣಿಸುವದಿಲ್ಲ.[1] ನಮಗೆ ಮತ್ತೊಂದರಲ್ಲಿ ವಿಶ್ವಾಸವಿಲ್ಲ.[2]

(ಮೂಲ)

**ಸ್ಯಾತ್ ಪ್ರವೃತ್ತಿರನ್ತರೇಣಾಪಿ ವಿಧಿಮ್, ಲೋಕವತ್ ಇತಿ ಚೇತ್, ತನ್ನ । ಯತಃ –**

**ಅನ್ತರೇಣ ವಿಧಿಂ ಮೋಹಾದ್ ಯಃ ಕುರ್ಯಾತ್ ಸಾಂಪರಾಯಿಕಮ್ ।**
**ನ ತತ್ ಸ್ಯಾದುಪಕಾರಾಯ ಭಸ್ಮನೀವ ಹುತಂ ಹವಿಃ ॥೧೬॥**

(ಅರ್ಥ)

ವಿಧಿಯಿಲ್ಲದೆಯೂ ಲೋಕದಂತೆ ಪ್ರವೃತ್ತಿಯಾಗಬಹುದಲ್ಲ![3] ಎಂದರೆ ಹಾಗಲ್ಲ. ಏಕೆಂದರೆ :

೧೬. ಪರಲೋಕ (ಪ್ರಯೋಜನ)ವುಳ್ಳ (ಕರ್ಮ)ವನ್ನು ಯಾವನು ವಿಧಿಯಿಲ್ಲದೆಯೇ ಭ್ರಾಂತಿಯಿಂದ ಮಾಡುವನೋ ಅದು ಬೂದಿಯಲ್ಲಿ ಹೋಮ ಮಾಡಿದಂತೆ[4] ಯಾವ ಉಪಕಾರವನ್ನೂ (ಮಾಡುವುದಾಗಲಾರದು).

---

1. 'ಆತ್ಮಾವಾ ಅರೇ ದ್ರಷ್ಟವ್ಯಃ' ಮುಂತಾದವು ಆತ್ಮಮಾತ್ರವನ್ನು ತಿಳಿಸುತ್ತವೆ ; ಅವು ಕರ್ಮಕ್ಕೆ ಬೇಕಾದ ಕರ್ತೃವನ್ನು ತಿಳಿಸುತ್ತವೆಯಾದ್ದರಿಂದ ಮೋಕ್ಷಸಾಧನವನ್ನು ತಿಳಿಸುವದಿಲ್ಲ ಎಂದು ಭಾವ.

2. ಶ್ರುತಿಸ್ಮೃತಿಗಳಲ್ಲಿ ಕಾಣದಿದ್ದರೂ ಮತ್ತೊಬ್ಬರ ವಾಕ್ಯದ ಪ್ರಮಾಣದಿಂದ ಜ್ಞಾನಸಂಪಾದನೆಗೆ ಪ್ರವರ್ತಿಸಬಾರದೇಕೆ? - ಎಂಬ ಆಕ್ಷೇಪಕ್ಕೆ ಸಮಾಧಾನವಿದು.

3. ಲೋಕದಲ್ಲಿ ಜನರು ಹಸಿವು ಮುಂತಾದದ್ದನ್ನು ಪರಿಹರಿಸುವದಕ್ಕೆ ಶಾಸ್ತ್ರ ವಿಧಿಯನ್ನು ಕಂಡು ಭೋಜನಾದಿಗಳಲ್ಲಿ ಪ್ರವರ್ತಿಸುವದಿಲ್ಲ. ಊಟಮಾಡಿದರೆ ಹಸಿವು ಅಡಗುತ್ತದೆ, ಇಲ್ಲದಿದ್ದರೆ ಇಲ್ಲ- ಎಂಬ ಅನ್ವಯವ್ಯತಿರೇಕಗಳಿಂದ ಊಟವು ಹಸಿವನ್ನು ಅಡಗಿಸುವುದಕ್ಕೆ ಸಾಧನವೆಂದು ತಿಳಿದುಕೊಂಡು ಪ್ರವರ್ತಿಸುತ್ತಾರೆ. ಹಾಗೆಯೇ ಜ್ಞಾನದಲ್ಲಿ ವಿಧಿಯಿಲ್ಲದೆ ಏತಕ್ಕೆ ಪ್ರವರ್ತಿಸಬಾರದು ?- ಎಂದು ಆಕ್ಷೇಪ.

4. ಕನ್ನಡದಲ್ಲಿ 'ನೀರಿನಲ್ಲಿ ಹೋಮಮಾಡಿದಂತೆ' ಎನ್ನುವ ರೂಢಿಯಿದೆ. ಬೆಂಕಿಯು ಜ್ವಲಿಸುತ್ತಿರುವಾಗಲೇ ಹೋಮಮಾಡಬೇಕೆಂದು ಶಾಸ್ತ್ರದಲ್ಲಿದೆ. ಹೀಗಿರುವಲ್ಲಿ ಬೆಂಕಿಯೇ ಇಲ್ಲದ ಬೂದಿಯಲ್ಲಿ ಹೋಮಮಾಡಿದರೆ ಹೇಗೆ ನಿಷ್ಪ್ರಯೋಜನವಾಗುವದೋ ಹಾಗೆ ಶಾಸ್ತ್ರ ಪ್ರಮಾಣವಿಲ್ಲದ ಪಾರಲೌಕಿಕಪ್ರವೃತ್ತಿಯು ವ್ಯರ್ಥ ಎಂಬುದನ್ನು ಭಸ್ಮದೃಷ್ಟಾಂತವು ತಿಳಿಸುತ್ತದೆ. ಛಾಂ ೫-೨೪-೧ ನೋಡಿ.

(ಮೂಲ)

**ಅಭ್ಯುಪಗತಪ್ರಾಮಾಣ್ಯವೇದಾರ್ಥವಿಜ್ಜೈಮಿನ್ಯನುಶಾಸನಾಚ್ಚ –**

**ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮಿತೋಽನ್ಯಥಾ ।**
**ಇತಿ ಸಾಟೋಪಮಾಹೋಚ್ಚೈರ್ವೇದವಿಜ್ಜೈಮಿನಿಃ ಸ್ವಯಮ್ ॥೧೭॥**

(ಅರ್ಥ)

ಪ್ರಮಾಣವೆಂದು (ನೀವೂ) ಒಪ್ಪಿರುವ ವೇದಾರ್ಥವನ್ನು ಬಲ್ಲ ಜೈಮಿನಿಗಳ ವಚನದಿಂದಲೂ (ಇದು ಸಿದ್ಧವಾಗುತ್ತದೆ). ಹೇಗೆಂದರೆ :

೧೭. 'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಮ್'[1] (ಜೈ.ಸೂ. ೧-೨-೧) ಆಮ್ನಾಯವು ಕ್ರಿಯೆಯಲ್ಲಿ ತಾತ್ಪರ್ಯವುಳ್ಳದ್ದಾದ್ದರಿಂದ ಅದಕ್ಕಿಂತಬೇರೆಯಾಗಿರುವ (ವಾಕ್ಯಗಳು) ವ್ಯರ್ಥವೆಂದಾಗುವದು[2] ಎಂದು (ಹೆಚ್ಚಿನ) ಅಭಿಪ್ರಾಯಪೂರ್ವಕವಾಗಿ ವೇದಾರ್ಥವನ್ನೆಲ್ಲ ಜೈಮಿನಿಗಳು ತಾವೇ ಗಟ್ಟಿಯಾಗಿ (ಕೂಗಿ) ಹೇಳಿರುತ್ತಾರೆ.[3]

(ಮೂಲ)

**ಮನ್ತ್ರವರ್ಣಾಚ್ಚ –**

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ ।**
**ಇತಿ ಮನ್ತ್ರೋಽಪಿ ನಿಃಶೇಷಂ ಕರ್ಮಣ್ಯಾಯುರವಾಸೃಜತ್ ॥೧೮॥**

---

1. ಈ ಸೂತ್ರದಲ್ಲಿ 'ಅನರ್ಥಕ್ಯಮತದರ್ಥಾನಾಮ್' ಎಂಬ ಭಾಗದರ್ಥವನ್ನು 'ಆನರ್ಥಕ್ಯಮತೋಽನ್ಯಥಾ' ಎಂದು ಛಂದಸ್ಸಿನ ಹೊಂದುಗಡೆಗಾಗಿ ಶ್ಲೋಕದಲ್ಲಿ ಬರೆದುಕೊಂಡಿದೆ.

2. ಇದು ಪೂರ್ವಪಕ್ಷಸೂತ್ರವಾದರೂ ಇದಕ್ಕೆ ಸಮಾಧಾನವನ್ನು ಹೇಳುವಾಗ ಅರ್ಥವಾದಗಳು ಸ್ತುತ್ಯರ್ಥವಾಗಿ ವಿಧಿಗಳೊಡನೆ ಏಕವಾಕ್ಯತೆಯನ್ನು ಹೊಂದುವವು ಎಂದು ಹೇಳಿರುವದರಿಂದ ಬರಿಯ ವಸ್ತುವನ್ನು ಹೇಳುವ ವೇದಭಾಗವು ಇಲ್ಲವೆಂದೇ ಆಗುತ್ತದೆ ಎಂದು ವಿಧಿವಾದಿಯ ಆಶಯ.

3. ಆಮ್ನಾಯವು ಕ್ರಿಯಾರ್ಥವು ಎಂದಿಷ್ಟೇ ಹೇಳಿದರೂ ಸಾಗುತ್ತಿರುವಲ್ಲಿ ಆ ಅರ್ಥವನ್ನು ಹೇಳದ ವಾಕ್ಯಗಳು ವ್ಯರ್ಥ ಎಂದು ಬಾಯಿಬಿಟ್ಟು ಹೇಳಿರುವದರಿಂದ ಅಕ್ರಿಯಾರ್ಥವಾಕ್ಯಗಳಿಲ್ಲವೆಂದು ಹೇಳಿದಂತೆ ಆಯಿತು.

(ಅರ್ಥ)

ಮಂತ್ರವರ್ಣದಿಂದಲೂ (ಹೀಗೆಂದು ನಿಶ್ಚಯವಾಗುತ್ತದೆ)[1] :

೧೮. 'ಇಲ್ಲಿ ಕರ್ಮವನ್ನು ಮಾಡುತ್ತಲೇ ನೂರು ವರ್ಷಗಳು ಬದುಕಿರುವದಕ್ಕೆ ಇಚ್ಛಿಸಬೇಕು' (ಈ. ೨) ಎಂದು ಮಂತ್ರವೂ ಆಯುಸ್ಸೆಲ್ಲವನ್ನೂ ಕರ್ಮದಲ್ಲಿಯೇ ವಿನಿಯೋಗಿಸಿರುತ್ತದೆ.[2]

(ಮೂಲ)

ಜ್ಞಾನಿನಶ್ಚ ವಸ್ತುನಿ ವಾಕ್ಯಪ್ರಾಮಾಣ್ಯಾಭ್ಯುಪಗಮಾತ್, ವಾಕ್ಯಸ್ಯ ಚ ಕ್ರಿಯಾಪದಪ್ರಧಾನತ್ವಾತ್ । ತತಶ್ಚಾಭಿಪ್ರೇತಜ್ಞಾನಾಭಾವಃ –

ವಿರಹಯ್ಯ ಕ್ರಿಯಾಂ ನೈವ ಸಂಹನ್ಯನ್ತೇ ಪದಾನ್ಯಪಿ ।
ನ ಸಮಸ್ತ್ಯಪದಂ ವಾಕ್ಯಂ ಯತ್ ಸಾಜ್ಞಾನವಿಧಾಯಕಮ್ ॥೧೯॥

(ಅರ್ಥ)

ಜ್ಞಾನವಾದಿಯು (ಆತ್ಮ) ವಸ್ತುವಿನಲ್ಲಿ ವಾಕ್ಯಪ್ರಾಮಾಣ್ಯವನ್ನು ಒಪ್ಪಿರುವದರಿಂದಲೂ ವಾಕ್ಯಕ್ಕೆ ಕ್ರಿಯಾಪದವೇ ಮುಖ್ಯವಾಗಿರುವದರಿಂದಲೂ (ಹೀಗೆ).[3] ಆದ್ದರಿಂದ (ಅವನಿಗೆ) ಇಷ್ಟವಾದ ಜ್ಞಾನವೇ[4] ಸಿದ್ಧಿಸುವದಿಲ್ಲ :

೧೯. ಪದಗಳೂ ಕ್ರಿಯಾಪದವಿಲ್ಲದೆ ಒಂದುಗೂಡುವುದೇ ಇಲ್ಲ. ಪದಗಳಿಲ್ಲದ ವಾಕ್ಯವೇ ಇರುವಂತಿಲ್ಲ ; ಹಾಗಿದ್ದರಲ್ಲವೆ, ಅದು ಜ್ಞಾನವನ್ನು ವಿಧಿಸೀತು ?

---

1. ಪೌರುಷೇಯವಚನಪ್ರಾಮಾಣ್ಯದಿಂದ ಮಾತ್ರವೇ ಅಲ್ಲ, ವೇದಪ್ರಾಮಾಣ್ಯದಿಂದಲೂ ನಿಶ್ಚಯವಾಗುತ್ತದೆ.

2. ಬರಿಯ ಜ್ಞಾನದ ಅನುಷ್ಠಾನಕ್ಕೆಂದು ಆಯುಸ್ಸನ್ನು ಉಳಿಸಿಕೊಂಡಿಲ್ಲ.

3. ವಾಕ್ಯಕ್ಕೆ ಕರ್ಮದಲ್ಲಿಯೇ ತಾತ್ಪರ್ಯ.

4. ವಾಕ್ಯಪ್ರಮಾಣಕವಾದ ಜ್ಞಾನವೇ ಎಂದರ್ಥ. ವಸ್ತುಬೋಧಕಜ್ಞಾನವು ಮುಕ್ತಿಗೆ ಉಪಯೋಗವಿಲ್ಲವೆಂದು ಪೂರ್ವಪಕ್ಷದ ಆದಿಯಲ್ಲಿ ಹೇಳಿತ್ತು ; ಇಲ್ಲಿ ವಿಧೇಯಜ್ಞಾನವೂ ಇಲ್ಲ, ಎಲ್ಲವೂ ಕರ್ಮಪರವೇ ಎಂದು ಹೇಳಿದೆ.

## (ಇ) ವಿಧೇಯಜ್ಞಾನವನ್ನೊಪ್ಪಿದರೂ ಸಮುಚ್ಚಯದಿಂದ ಮೋಕ್ಷ

(ಮೂಲ)

ಜ್ಞಾನಾಭ್ಯುಪಗಮೇಽಪಿ ನ ದೋಷಃ । ಯತಃ –

**ಕರ್ಮಣೋಽಜ್ಞಾಙ್ಗಿಭಾವೇನ ಸ್ವಪ್ರಧಾನತಯಾಥವಾ ।**
**ಸಂಬನ್ಧಸ್ಯೇಹ ಸಂಸಿದ್ಧೇರ್ಜ್ಞಾನೇ ಸತ್ಯಪ್ಯದೋಷತಾ[1] ॥೨೦॥**

(ಅರ್ಥ)

ಜ್ಞಾನವನ್ನು ಒಪ್ಪಿದರೂ ದೋಷವಿಲ್ಲ. ಏಕೆಂದರೆ :

೨೦. ಕರ್ಮಕ್ಕೆ ಅಂಗಾಂಗಿಭಾವದಿಂದಲಾದರೂ ಅಥವಾ ಸ್ವಪ್ರಧಾನತ್ವದಿಂದಲಾದರೂ[2] ಸಂಬಂಧವು ಇಲ್ಲಿ ಸಿದ್ಧವಾಗುವದರಿಂದ ಜ್ಞಾನವು ಇದ್ದರೂ ದೋಷವಿಲ್ಲ.

## ಪೂರ್ವಪಕ್ಷದ ಉಪಸಂಹಾರ

(ಮೂಲ)

ಯಸ್ಮಾಜ್ಜ್ಞಾನಾಭ್ಯುಪಗಮೇ ಅನಭ್ಯುಪಗಮೇಽಪಿ ನ ಜ್ಞಾನಾನ್ಮುಕ್ತಿಃ –

**ಅತಃ ಸರ್ವಾಶ್ರಮಾಣಾಂ ಹಿ ವಾಙ್ಮನಃಕಾಯಕರ್ಮಭಿಃ ।**
**ಸ್ವನುಷ್ಠಿತೈರ್ಯಥಾಶಕ್ತಿ ಮುಕ್ತಿಃ ಸ್ಯಾನ್ನಾನ್ಯಸಾಧನಾತ್ ॥೨೧॥**

(ಅರ್ಥ)

ಜ್ಞಾನವನ್ನು ಒಪ್ಪಿದರೂ ಒಪ್ಪದೆ ಇದ್ದರೂ ಜ್ಞಾನದಿಂದ ಮುಕ್ತಿಯಿಲ್ಲವಷ್ಟೆ :

---

1. 'ಅದೋಷತಃ' ಎಂಬ ಪಾಠಕ್ಕಿಂತ ಇದು ಮೇಲು.

2. ಜ್ಞಾನವು ಕರ್ಮಕ್ಕೆ ಅಂಗ ಅಥವಾ ಜ್ಞಾನಕ್ಕೆ ಕರ್ಮವು ಅಂಗ - ಹೀಗಿರುವದು ಅಂಗಾಂಗಿಭಾವವು. ಜ್ಞಾನವೂ ಕರ್ಮವೂ ಸಮಪ್ರಧಾನವಾಗಿ ಅನುಷ್ಠಿತವಾಗುವದು ಸ್ವಪ್ರಧಾನತ್ವ. ಹೀಗೆ ಎರಡು ವಿಧದಿಂದ ಕರ್ಮಕ್ಕೂ ಜ್ಞಾನಕ್ಕೂ ಸಂಬಂಧವಾಗಬಹುದು.

೨೧. ಆದ್ದರಿಂದ ಎಲ್ಲಾ ಆಶ್ರಮದವರಿಗೂ ವಾಕ್ಕು, ಮನಸ್ಸು , ಕಾಯ-(ಇವುಗಳಿಂದಾಗಬೇಕಾದ) ಕರ್ಮಗಳನ್ನು ಶಕ್ತಿ ಇದ್ದಷ್ಟುಮಟ್ಟಿಗೆ ಸರಿಯಾಗಿ ಅನುಷ್ಠಾನಮಾಡಿದರೆ (ಅದರಿಂದಲೇ) ಮುಕ್ತಿಯಾಗುವದು, ಮತ್ತೊಂದು ಸಾಧನದಿಂದ ಆಗಲಾರದು.

## ಕರ್ಮವು ಮೋಕ್ಷಕ್ಕೆ ಸಾಧನವಲ್ಲ

(ಮೂಲ)

ಅಸದರ್ಥಪ್ರಲಾಪೋಽಯಮ್ ಇತಿ ದೂಷಣಸಂಭಾವನಾಯ ಆಹ-

**ಇತಿ ಹೃಷ್ಟಧಿಯಾಂ ವಾಚಃ ಸ್ವಪ್ರಜ್ಞಾಧ್ಮಾತಚೇತಸಾಮ್ ।**
**ಘುಷ್ಯನ್ತೇ ಯಜ್ಞಶಾಲಾಸು ಧೂಮಾನದ್ಧಧಿಯಾಂ ಕಿಲ ॥೨೨॥**

(ಅರ್ಥ)

ಇದು ಇಲ್ಲದ ಅರ್ಥವನ್ನು (ಹೇಳುವ) ಹರಟೆಯಿದು ಎಂದು ದೋಷಗಳ ಸಂಭಾವನೆಗಾಗಿ ಹೇಳುತ್ತಾರೆ :

೨೨. ಹೀಗೆಂದು ಹೃಷ್ಟಾಂತಃಕರಣರಾದ [1] ತಮ್ಮ ಪ್ರಜ್ಞೆಯಿಂದ ಉಬ್ಬಿದ ಚಿತ್ತವುಳ್ಳ [2] ಧೂಮದಿಂದ ತಡೆಗಟ್ಟಿದ ಬುದ್ಧಿಯುಳ್ಳವರ [3] ವಾಕ್ಕುಗಳು ಯಜ್ಞಶಾಲೆಗಳಲ್ಲಿ ಗದ್ದಲಮಾಡುತ್ತಿರುತ್ತವೆಯಂತೆ ! [4]

(ಮೂಲ)

ದೂಷಣೋಪಕ್ರಮಾವಧಿಜ್ಞಾಪನಾಯ ಆಹ–

**ಅತ್ರಾಭಿದಧ್ಮಹೇ ದೋಷಾನ್ ಕ್ರಮಶೋ ನ್ಯಾಯಬೃಂಹಿತೈಃ ।**
**ವಚೋಭಿಃ ಪೂರ್ವಪಕ್ಷೋಕ್ತಿಘಾತಿಭಿರ್ನಾತಿಸಂಭ್ರಮಾತ್ ॥೨೩॥**

---

1. ದೃಪ್ತರಾದ ಎಂದರ್ಥ.

2. ತಾವೇ ಪಂಡಿತರೆಂದು ತಿಳಿದುಕೊಂಡಿರುವ ಎಂದರ್ಥ.

3. ಧೂಮಮಾರ್ಗದಿಂದ ಸಿಕ್ಕುವ ಫಲಾಶೆಯ ಪ್ರತಿಬಂಧವುಳ್ಳ ಎಂದರ್ಥ. ತೈ. ಬ್ರಾ. ೩-೧೦-೧೧-೧ ನೋಡಿ. ಈವರೆಗೆ ಜ್ಞಾನಕ್ಕೆ ಇರುವ ಮೂರು ಅಡ್ಡಿಗಳನ್ನು ತಿಳಿಸಿದಂತೆ ಆಯಿತು.

4. ತಮ್ಮತಮ್ಮವರ ಗುಂಪಿನಲ್ಲಿ ಆಡಬಹುದಾದ ಮಾತುಗಳಿವು, ತಿಳಿದವರ ಮುಂದೆ ಆಡತಕ್ಕವಲ್ಲ- ಎಂಬುದನ್ನು ಇಲ್ಲಿ ಸೂಚಿಸಿದೆ.

(ಅರ್ಥ)

ದೂಷಣದ ಉಪಕ್ರಮವನ್ನೂ ಕೊನೆಯನ್ನೂ ತಿಳಿಸುವದಕ್ಕೆ ಹೇಳುತ್ತಾರೆ :

೨೩. ಪೂರ್ವಪಕ್ಷದ ಉಕ್ತಿಗಳನ್ನು ಬಾಧಿಸುವ ಯುಕ್ತಿಯಿಂದ ಪುಷ್ಟವಾಗಿರುವ ವಚನಗಳಿಂದ ಹೆಚ್ಚಿನ ಸಂಭ್ರಮವಿಲ್ಲದೆ[1] ಕ್ರಮವಾಗಿ[2] ಇಲ್ಲಿ ದೋಷಗಳನ್ನು ಹೇಳುವೆವು.

(ಮೂಲ)

**ಚತುರ್ವಿಧಸ್ಯಾಪಿ ಕರ್ಮಕಾರ್ಯಸ್ಯ ಮುಕ್ತೌ ಅಸಂಭವಾತ್ ನ ಮುಕ್ತೇಃ ಕರ್ಮಕಾರ್ಯತ್ವಮ್ –**

**ಅಜ್ಞಾನಹಾನಿ[3]ಮಾತ್ರತ್ವಾನ್ಮುಕ್ತೇಃ ಕರ್ಮ ನ ಸಾಧನಮ್ ।**
**ಕರ್ಮಾಪಮಾರ್ಷ್ಟಿ ನಾಜ್ಞಾನಂ ತಮಸೀವೋತ್ಥಿತಂ ತಮಃ ॥೨೪॥**

(ಅರ್ಥ)

ನಾಲ್ಕು ಬಗೆಯ[4] ಕರ್ಮಕಾರ್ಯವೂ ಮುಕ್ತಿಯಲ್ಲಿ ಸಂಭವಿಸುವಂತಿಲ್ಲವಾದ್ದರಿಂದ ಮುಕ್ತಿಯು ಕರ್ಮದ ಕಾರ್ಯವಲ್ಲ[5] –

೨೪. ಮುಕ್ತಿಯು ಅಜ್ಞಾನದ ನಾಶವು ಮಾತ್ರವಾಗಿರುವದರಿಂದ[6]

---

1. ಪರಪಕ್ಷವನ್ನು ಹೇಗಾದರೂ ಮಾಡಿ ಖಂಡಿಸಬೇಕು ಎಂಬ ಅಭಿನಿವೇಶವಿಲ್ಲದೆ ; ಪೂರ್ವಪಕ್ಷದ ಅಸಾರತೆಯನ್ನು ತೋರಿಸಿ ಸಿದ್ಧಾಂತದಲ್ಲಿ ಮುಮುಕ್ಷುಗಳಿಗೆ ಆದರವನ್ನುಂಟುಮಾಡುವದಕ್ಕಾಗಿ ಎಂದರ್ಥ.

2. ಕೇವಲಕರ್ಮವಾದ, ವಸ್ತುಬೋಧಕವಾಕ್ಯನಿರಾಸವಾದ, ಕರ್ಮಜ್ಞಾನ ಸಮುಚ್ಚಯವಾದ- ಈ ಮೂರನ್ನೂ ಕ್ರಮದಿಂದ ಖಂಡಿಸುವೆವು ಎಂದರ್ಥ.

3. 'ಹಾನ' ಎಂದು ಪಾ॥ 4. ಮುಂದೆ ೧-೫೩ರಲ್ಲಿ ಇವನ್ನು ಹೇಳಿದೆ.

5. ಕರ್ಮವು ಕಾರಣವಾಗಿದ್ದರೆ ಅದರ ವ್ಯಾಪಾರವು ಮುಕ್ತಿಯಲ್ಲಿ ಸಂಭವಿಸುವಂತೆ ಇರಬೇಕು. ಹಾಗಿಲ್ಲವೆಂಬುದನ್ನು ನಾವು ತೋರಿಸಿಕೊಡುವೆವು.

6. ಮುಕ್ತಿಯೆಂದರೆ ತನ್ನ ಸ್ವರೂಪದಲ್ಲಿ ನೆಲೆನಿಲ್ಲುವದು ; ತನ್ನ ಸ್ವರೂಪವು ನಿತ್ಯಪ್ರಾಪ್ತವಾಗಿರುವದರಿಂದ ಅಜ್ಞಾನದಿಂದಲೇ ಅದು ಅಪ್ರಾಪ್ತವಾಗಿರುತ್ತದೆ. ಆದ್ದರಿಂದ ಸ್ವರೂಪದಲ್ಲಿಲ್ಲವೆಂಬುದು ಅಜ್ಞಾನ ಮಾತ್ರದಿಂದ. ಆದ್ದರಿಂದ ಅಜ್ಞಾನವು ಹೋದ ಮಾತ್ರದಿಂದ ಮುಕ್ತಿಯು ದೊರಕುವದು. ಅದಕ್ಕೆ ಬೇರೆ ಪ್ರಯತ್ನವು ಬೇಕಿಲ್ಲ.

ಕರ್ಮವು (ಅದಕ್ಕೆ) ಕಾರಣವಲ್ಲ. ಅಜ್ಞಾನದಲ್ಲಿ ಎದ್ದುಕೊಂಡಿರುವ ಅಜ್ಞಾನದಂತೆಯೇ [1] ಕರ್ಮವು ಅಜ್ಞಾನವನ್ನು ನಾಶಮಾಡಲಾರದು.

(ಮೂಲ)

ಕರ್ಮಕಾರ್ಯತ್ವಾಭ್ಯುಪಗಮೇಽಪಿ ದೋಷ ಏವ –

**ಏಕೇನ ವಾ ಭವೇನ್ಮುಕ್ತಿರ್ಯದಿ ವಾ ಸರ್ವಕರ್ಮಭಿಃ ।**
**ಪ್ರತ್ಯೇಕಂ ಚೇದ್ವೃಥಾನ್ಯಾನಿ ಸರ್ವೇಭ್ಯೋಽಪ್ಯೇಕಕರ್ಮತಾ ॥೨೫॥**

(ಅರ್ಥ)

ಕರ್ಮಫಲವೆಂದು ಒಪ್ಪಿದರೂ ದೋಷವೇ :

೨೫. ಒಂದೇ (ಕರ್ಮ)ದಿಂದ ಮುಕ್ತಿಯಾಗುವದೊ ಅಥವಾ ಎಲ್ಲಾ ಕರ್ಮಗಳಿಂದಲೂ ಆಗುವದೊ ? ಒಂದೊಂದು (ಕರ್ಮ)ದಿಂದ ಎಂದರೆ ಮಿಕ್ಕವು ವ್ಯರ್ಥ. ಎಲ್ಲವುಗಳಿಂದಲೂ ಎಂದರೆ (ಎಲ್ಲವೂ ಸೇರಿ) ಒಂದೇ ಕರ್ಮವೆಂದಾಗುವದು.[2]

(ಮೂಲ)

ಸರ್ವಪ್ರಕಾರಸ್ಯಾಪಿ ಕರ್ಮಣ ಉತ್ಪತ್ತಿತ ಏವ ವಿಶಿಷ್ಟಸಾಧ್ಯಾಭಿಸಂಬನ್ಧಾತ್ ನ ಪಾರಿಶೇಷ್ಯನ್ಯಾಯಸಿದ್ಧಿಃ –

**ದುರಿತಕ್ಷಪಣಾರ್ಥತ್ವಾನ್ನ ನಿತ್ಯಂ ಸ್ಯಾದ್ವಿಮುಕ್ತಯೇ ।**
**ಸ್ವರ್ಗಾದಿಫಲಸಂಬನ್ಧಾತ್ ಕಾಮ್ಯಂ ಕರ್ಮ ತಥೈವ ನ ॥೨೬॥**

---

1. ಹಗ್ಗದ ಅಜ್ಞಾನವೆಂಬ ತಮಸ್ಸಿರುವಾಗ ಹುಟ್ಟಿದ ಹಾವೆಂಬ ಭ್ರಾಂತಿಜ್ಞಾನರೂಪವಾದ ತಮಸ್ಸು ತನ್ನ ಮೂಲವಾದ ಅಜ್ಞಾನವನ್ನು ಕಳೆಯಲಾರದು. ಇದರಂತೆ ಅಜ್ಞಾನದಿಂದ ಹುಟ್ಟಿದ ಕರ್ಮವು ತನ್ನ ಮೂಲವಾದ ಅಜ್ಞಾನವನ್ನು ಕಳೆಯಲಾರದು. ಭ್ರಾಂತಿಜ್ಞಾನವು ಅಜ್ಞಾನದಿಂದ ಹುಟ್ಟಿ ಅಜ್ಞಾನವಿರುವಾಗ ಮಾತ್ರ ಇರುತ್ತದೆ ಎಂಬ ಅಭಿಪ್ರಾಯವು ಈ ದೃಷ್ಟಾಂತದಲ್ಲಿ ಅಡಗಿದೆ.

2. ಅದು ವೇದವಿರುದ್ಧ ; ಏಕೆಂದರೆ ಒಂದೊಂದು ಕರ್ಮಕ್ಕೆ ಒಂದೊಂದು ಬೇರೆಬೇರೆ ಫಲವನ್ನು ವೇದದಲ್ಲಿ ಹೇಳಿದೆ ಎಂದು ಭಾವ.

(ಅರ್ಥ)

ಎಲ್ಲಾ ಬಗೆಯ ಕರ್ಮವೂ ಉತ್ಪತ್ತಿಯಿಂದಲೇ [1] ಅಸಾಧಾರಣವಾದ ಸಾಧ್ಯದೊಡನೆ ಸಂಬದ್ಧವಾಗಿರುವದರಿಂದ ಪಾರಿಶೇಷ್ಯದ ನ್ಯಾಯವು [2] ಸಿದ್ಧಿಸುವದಿಲ್ಲ :

೨೬. ನಿತ್ಯ(ಕರ್ಮವು) ದುರಿತದ ಕ್ಷಯಕ್ಕಾಗಿರುವದರಿಂದ (ಅದು) ಮುಕ್ತಿಫಲಕ್ಕಾಗಲಾರದು. ಹಾಗೆಯೇ ಕಾಮ್ಯಕರ್ಮವು ಸ್ವರ್ಗಾದಿಫಲಕ್ಕೆ ಸಂಬಂಧಪಟ್ಟಿರುವದರಿಂದ (ಅದೂ ಮುಕ್ತಿಗೆ ಸಾಧನ)ವಲ್ಲ.[3]

(ಮೂಲ)

ಪ್ರಮಾಣಾಸಂಭವಾಚ್ಚ–

**ಸಾಧ್ಯಸಾಧನಭಾವೋಽಯಂ ವಚನಾತ್ ಪಾರಲೌಕಿಕಃ ।**
**ನಾಶ್ರೌಷಂ ಮೋಕ್ಷದಂ ಕರ್ಮ ಶ್ರುತೇರ್ವಕ್ತ್ರಾತ್ ಕಥಂಚನ ॥೨೭॥**

(ಅರ್ಥ)

ಪ್ರಮಾಣವಿಲ್ಲದ್ದರಿಂದಲೂ (ಹೀಗೆಂದು ತಿಳಿಯಬೇಕು) :

೨೭. ಈ ಪರಲೋಕಸಂಬಂಧವಾದ ಸಾಧ್ಯಸಾಧನಭಾವವು [4] ವಚನದಿಂದ

---

1. ಕರ್ಮಸ್ವರೂಪವನ್ನು ತಿಳಿಸುವದು ಉತ್ಪತ್ತಿವಿಧಿ, ಅದಕ್ಕೆ ಅಂಗದ ಸಂಬಂಧವನ್ನು ತಿಳಿಸುವದು ವಿನಿಯೋಗವಿಧಿ, ಫಲಸಂಬಂಧವನ್ನು ತಿಳಿಸಿ ಪುರುಷನನ್ನು ತೊಡಗಿಸುವದು ಅಧಿಕಾರಿವಿಧಿ, ಎಲ್ಲವನ್ನೂ ಸೇರಿಸಿಕೊಂಡು ಅನುಷ್ಠಾನಮಾಡಿಸತಕ್ಕದ್ದು ಪ್ರಯೋಗವಿಧಿ. ಉತ್ಪತ್ತಿವಿಧಿಯಿಂದಲೇ ಫಲಸಂಬಂಧವು ತಿಳಿಯಬರುವದಿಲ್ಲವಾದರೂ ಅದೇ ಮಿಕ್ಕವುಗಳ ರೂಪಾಂತರವನ್ನೂ ಹೊಂದುವದರಿಂದ 'ಉತ್ಪತ್ತಿಯಿಂದಲೇ' ಎಂದಿದೆ.

2. ನಿತ್ಯಕರ್ಮಗಳಿಗೆ ಫಲವನ್ನು ಹೇಳಿಲ್ಲ ; ಅವಕ್ಕೂ ಫಲವಿರಬೇಕು, ಏಕೆಂದರೆ ಇಲ್ಲದಿದ್ದರೆ ವಿಧಿಸಿರುವದು ಹೊಂದುವದಿಲ್ಲ. ಕರ್ಮಗಳಿಗೆಲ್ಲ ಆಯಾಫಲವನ್ನು ಹೇಳಿರುವದರಿಂದ ಮೋಕ್ಷವನ್ನು ಬಿಟ್ಟು ನಿತ್ಯಕರ್ಮಗಳಿಗೆ ಕಲ್ಪಿಸುವುದಕ್ಕೆ ಫಲವು ಬೇರೆ ಉಳಿದಿಲ್ಲ. ಆದ್ದರಿಂದ ಉಳಿದಿರುವ ಮೋಕ್ಷವೇ ನಿತ್ಯಮರ್ಕಗಳ ಫಲವು ಎಂಬುದು ಪರಿಶೇಷನ್ಯಾಯ.

3. ಆದ್ದರಿಂದ ಅದು ಮೋಕ್ಷಕ್ಕೆ ಸಾಧನವಲ್ಲ. ಕಾಮ್ಯಕರ್ಮವನ್ನು ಬಿಡಬೇಕೆಂದು ಪೂರ್ವಪಕ್ಷಿಯೇ ಒಪ್ಪಿರುವದರಿಂದ ಅದನ್ನು ಸುಮ್ಮನೆ ಅನುವಾದ ಮಾಡಿಕೊಂಡಿದೆ ಎನ್ನಬೇಕು.

4. ಈ ಸಾಧನದಿಂದ ಈ ಸಾಧ್ಯವು ದೊರಕುವದು ಎಂಬುದು.

(ಗೊತ್ತಾಗತಕ್ಕದ್ದು). ಮೋಕ್ಷವನ್ನು ಕೊಡುವ ಕರ್ಮವೆಂದು ಶ್ರುತಿಯ ಬಾಯಿಂದ (ಬಂದದ್ದನ್ನು) ಹೇಗೂ ನಾನು ಕೇಳಿರುವದೇ ಇಲ್ಲ.[1]

(ಮೂಲ)

ಅಭ್ಯುಪಗತಾಭ್ಯುಪಗಮಾಚ್ಚ ಶ್ವಶ್ರೂನಿರ್ಗಚ್ಛೋಕ್ತಿವತ್, ಭವತೋ ನಿಷ್ಪ್ರಯೋಜನಃ ಪ್ರಲಾಪಃ –

**ನಿಷಿದ್ಧಕಾಮ್ಯಯೋಸ್ತ್ಯಾಗಸ್ತ್ವಯಾಪೀಷ್ಟೋ ಯಥಾ ಮಯಾ ।**
**ನಿತ್ಯಸ್ಯಾಫಲವತ್ತ್ವಾಚ್ಚ ನ ಮೋಕ್ಷಃ ಕರ್ಮಸಾಧನಃ ॥೨೮॥**

(ನಾವು) ಒಪ್ಪಿರುವದನ್ನೇ ನೀನೂ ಒಪ್ಪಿರುವದರಿಂದ ಅತ್ತೆಯು ಹೋಗು ಎಂದ ಮಾತಿನಂತೆ[2] ನಿನ್ನ ಮಾತು ನಿಷ್ಪ್ರಯೋಜನವು :

೨೮. ನಿಷಿದ್ಧಕಾಮ್ಯ(ಕರ್ಮಗಳನ್ನು) ಬಿಡಬೇಕೆಂಬುದು ನನಗೆ ಒಪ್ಪಾಗಿರುವಂತೆ ನಿನಗೂ ಒಪ್ಪಾಗಿದೆ. ನಿತ್ಯವು ನಿಷ್ಫಲವಾದದ್ದಾದ್ದರಿಂದಲೂ[3] ಮೋಕ್ಷಕ್ಕೆ ಕರ್ಮವು ಸಾಧನವಲ್ಲ.

## ಅಜ್ಞಾನಪರಿಹಾರಕ್ಕೆ ಕರ್ಮವು ಸಾಧನವಲ್ಲ, ಜ್ಞಾನವೇ ಸಾಧನ

(ಮೂಲ)

ಏವಂ ತಾವತ್ 'ಮುಕ್ತೇಃ ಕ್ರಿಯಾಭಿಃ ಸಿದ್ಧತ್ವಾತ್' (೧-೯) ಇತಿ

---

1. ಶ್ರುತಿಪ್ರಮಾಣವಿಲ್ಲದೆ ಯಾವ ಸಾಧನವನ್ನು ಮಾಡಿದರೂ ಅದು ಪರಲೋಕದ ಸಾಧ್ಯವನ್ನು ಮಾಡಿಕೊಡುವದೆಂದು ನಂಬುವದಕ್ಕಿಲ್ಲವೆಂದು ಪೂರ್ವಪಕ್ಷದಲ್ಲಿ ಹಿಂದೆಯೇ ಹೇಳಿದೆ.

2. ಸೊಸೆಯು ಭಿಕ್ಷವಿಲ್ಲವೆಂದು ಹೇಳಿಕಳುಹಿಸಿದ ಭಿಕ್ಷುಕನನ್ನು ಕರೆದು 'ಇಲ್ಲಿ ನನ್ನದೇ ಅಧಿಕಾರ, ಸೊಸೆಗೆ ಭಿಕ್ಷೆಯಿಲ್ಲವೆಂದು ಹೇಳಲು ಯಾವ ಅಧಿಕಾರವೂ ಇಲ್ಲ, ಈಗ ನಾನು ಹೇಳುತ್ತೇನೆ, ಭಿಕ್ಷೆಯಿಲ್ಲ, ಹೋಗು' ಎಂದ ಅತ್ತೆಯ ಮಾತಿನಂತೆ.

3. ೧-೧೩ರಲ್ಲಿ ಪ್ರತ್ಯವಾಯಪರಿಹಾರಮಾತ್ರವೇ ನಿತ್ಯಕರ್ಮಕ್ಕೆ ಫಲವೆಂದು ನೀನು ಹೇಳಿರುವದರಿಂದಲೂ ಎಂದರ್ಥ. ಕಾಮ್ಯನಿಷಿದ್ಧಗಳನ್ನು ಬಿಡುವದು ಹೇಗೆ ಅನಿಷ್ಟಪರಿಹಾರಕ್ಕೋ ನಿತ್ಯಾನುಷ್ಠಾನವೂ ಹಾಗೆಯೇ ಅನಿಷ್ಟನಿವಾರಣಕ್ಕೆ ಎಂದಾಗುವದರಿಂದ ಇಷ್ಟರೂಪವಾದ ಮೋಕ್ಷದ ಪ್ರಾಪ್ತಿಗೆ ಯಾವ ಕರ್ಮವೂ ಉಪಾಯವಲ್ಲವೆಂದಾಯಿತು ಎಂದು ಭಾವ.

ನಿರಸ್ತೋಽಯಂ ಪಕ್ಷಃ । ಅಥಾಧುನಾ ಸರ್ವಕರ್ಮಪ್ರವೃತ್ತಿಹೇತುನಿರೂಪಣೇನ ಯಥಾವಸ್ಥಿತಾತ್ಮವಸ್ತುವಿಷಯಕೇವಲಜ್ಞಾನಮಾತ್ರಾದೇವ ಸಕಲಸಂಸಾರಾನರ್ಥ ನಿವೃತ್ತಿಃ ಇತೀಮಂ ಪಕ್ಷಂ ದ್ರ್ಢಯಿತುಕಾಮ ಆಹ । ಇಹ ಚೇದಂ ಪರೀಕ್ಷ್ಯತೇ – ಕಿಂ ಯಥಾ ಪ್ರತಿಷಿದ್ಧೇಷು ಯಾದೃಚ್ಛಿಕೇಷು ಚ ಕರ್ಮಸು ಸ್ವಾಭಾವಿಕ ಸ್ವಾಶಯೋತ್ಥನಿಮಿತ್ತವಶಾದೇವ 'ಇದಂ ಹಿತಮ್', 'ಇದಮಹಿತಮ್' ಇತಿ[1] ಪರಿಕಲ್ಪ್ಯ ಮೃಗತೃಷ್ಣಿಕೋದಕಪಿಪಾಸುರಿವ ಲೌಕಿಕಪ್ರಮಾಣಸಿದ್ಧಾನ್ಯೇವ ಸಾಧನಾನಿ ಉಪಾದಾಯ ಹಿತಪ್ರಾಪ್ತಯೇಽಹಿತನಿರಾಸಾಯ ಚ ಸ್ವಯಮೇವ ಪ್ರವರ್ತತೇ ನಿವರ್ತತೇ ಚ, ತಥೈವ ಅದೃಷ್ಟಾರ್ಥೇಷು ಕಾಮ್ಯೇಷು ನಿತ್ಯೇಷು ಚ ಕರ್ಮಸು, ಕಿಂ ವಾ ಅನ್ಯದೇವ ತತ್ರ ಪ್ರವೃತ್ತಿನಿವೃತ್ತಿ ನಿಮಿತ್ತಮಿತಿ ? ಕಿಂ ಚಾತಃ ? ಯದ್ಯೇವಮ್, ಶೃಣು । ಯದಿ ತಾವತ್ ಯಥಾವಸ್ಥಿತವಸ್ತುಸಮ್ಯಗ್ಜ್ಞಾನಂ ಪ್ರಮಾಣಭೂತಂ ಲೌಕಿಕಮ್ ಆಗಮಿಕಂ ವಾ ಪ್ರವೃತ್ತಿನಿಮಿತ್ತಮಿತಿ ನಿಶ್ಚಯಃ[2] ನಿವೃತ್ತಿಶಾಸ್ತ್ರಂ ಚ ನಾಭ್ಯುಪಗಮ್ಯತೇ , ತದಾ ಹತಾಃ ಕರ್ಮತ್ಯಾಗಿನಃ । ಭ್ರಾನ್ತಿವಿಜ್ಞಾನಮಾತ್ರಾವಷ್ಟಮ್ಭಾತ್[3] ಅಲೌಕಿಕಪ್ರಮಾಣೋಪಾತ್ತಕರ್ಮಾನುಷ್ಠಾನತ್ಯಾಗಿತ್ವಾಚ್ಚ । ಅಥ ಮೃಗತೃಷ್ಣಿಕೋದಕ ಪಿಪಾಸುಪ್ರವೃತ್ತಿನಿಮಿತ್ತವತ್ ಅಯಥಾವಸ್ತುಭ್ರಾನ್ತಿವಿಜ್ಞಾನಮೇವ ಸರ್ವಪ್ರವೃತ್ತಿ ನಿಮಿತ್ತಮ್, ತದಾ ವರ್ಧಾಮಹೇ ವಯಮ್, ಹತಾಃ ಸ್ಥ ಯೂಯಮ್ ಇತಿ ॥

**ಹಿತಂ ಸಂಪ್ರೇಪ್ಸತಾಂ ಮೋಹಾದಹಿತಂ ಚ ಜಿಹಾಸತಾಮ್ ।**
**ಉಪಾಯಾನ್ ಪ್ರಾಪ್ತಿಹಾನಾರ್ಥಾನ್ ಶಾಸ್ತ್ರಂ ಭಾಸಯತೇಽರ್ಕವತ್ ॥೨೯॥**

(ಅರ್ಥ)

ಹೀಗೆ 'ಮುಕ್ತೇಃ ಕ್ರಿಯಾಭಿಃ ಸಿದ್ಧತ್ವಾತ್' (ಮುಕ್ತಿಯು ಕರ್ಮಗಳಿಂದ ಸಿದ್ಧವಾಗುವದರಿಂದ) (೧-೯) ಎಂಬೀ ಪಕ್ಷವನ್ನು (ಈವರೆಗೆ) ತಿರಸ್ಕರಿಸಿದಂತೆ

---

1. ಇದರ ಮುಂದೆ 'ವಿಶೇಷಾನ್' ಎಂದಿರುವ ಹೆಚ್ಚಿಗೆಯ ಪಾಠವು ಅವಶ್ಯವಿಲ್ಲ .
2. 'ನಿಶ್ಚೀಯತೇ' ಪಾ॥
3. 'ಭ್ರಾನ್ತಿ ಮೂಲವಿಜ್ಞಾನಮಾತ್ರಾವಷ್ಟಮ್ಭಾತ್' ಪಾ॥

ಆಯಿತು. ಇನ್ನು ಈಗ ಎಲ್ಲಾ ಕರ್ಮಗಳಲ್ಲಿಯೂ ತೊಡಗುವದಕ್ಕೆ ಹೇತು (ಯಾವದೆಂದು) ನಿರೂಪಣೆಮಾಡುವದರಮೂಲಕ ಸಿದ್ಧವಾಗಿರುವ ಆತ್ಮವಸ್ತು ವಿಷಯದ ಕೇವಲಜ್ಞಾನಮಾತ್ರದಿಂದಲೇ ಸಕಲ ಸಂಸಾರ(ರೂಪ) ಅನರ್ಥವೂ ತೊಲಗುವದೆಂಬೀ ಪಕ್ಷವನ್ನು ಗಟ್ಟಿಗೊಳಿಸುವ ಇಚ್ಛೆಯಿಂದ [1] (ಮುಂದಿನ ಗ್ರಂಥವನ್ನು ) ಹೇಳಿರುತ್ತಾರೆ.

ಇಲ್ಲಿ ಇದನ್ನು ಪರೀಕ್ಷಿಸಲಾಗುವದು. ಹೇಗೆ ಪ್ರತಿಷಿದ್ಧವಾದ ಮತ್ತು ಯಾದೃಚ್ಛಿಕವಾದ ಕರ್ಮಗಳಲ್ಲಿ [2] ಸ್ವಾಭಾವಿಕವಾಗಿರುವ ತನ್ನ ಅಭಿಪ್ರಾಯ ದಿಂದಲೇ ಉಂಟಾದ ನಿಮಿತ್ತವಶದಿಂದಲೇ [3] 'ಇದು ಹಿತವು', 'ಇದು ಅಹಿತವು' ಎಂದು ಕಲ್ಪಿಸಿಕೊಂಡು ಬಿಸಿಲುಕುದುರೆಯ ನೀರನ್ನು ಕುಡಿಯುವದಕ್ಕೆ ಇಚ್ಛಿಸು ವವನಂತೆ ಲೌಕಿಕಪ್ರಮಾಣಸಿದ್ಧವಾದ ಸಾಧನಗಳನ್ನೇ ಸ್ವೀಕರಿಸಿ ಹಿತಪ್ರಾಪ್ತಿಗೂ ಅಹಿತದ ಪರಿಹಾರಕ್ಕೂ ತಾನೇ ಪ್ರವರ್ತಿಸುತ್ತಾನೋ [4] ಹಿಂತಿರುಗುತ್ತಾನೋ ಹಾಗೆಯೇ ಅದೃಷ್ಟಾರ್ಥವಾದ [5] ಕಾಮ್ಯ (ಕರ್ಮ)ಗಳಲ್ಲಿಯೂ ನಿತ್ಯಕರ್ಮ ಗಳಲ್ಲಿಯೂ (ತಾನೇ ತೊಡಗುತ್ತಲೂ ಹಿಮ್ಮೆಟ್ಟುತ್ತಲೂ ಇರುವನೊ,) ಅಥವಾ ಅಲ್ಲಿ ಪ್ರವೃತ್ತಿನಿವೃತ್ತಿಗಳಿಗೆ ನಿಮಿತ್ತವು ಬೇರೆಯೇ ಆಗಿರುವದೊ [6] ?

---

1. 'ಕರ್ಮವು ಅಜ್ಞಾನವನ್ನು ನಾಶಗೊಳಿಸಲಾರದು' (೧-೨೪) ಎಂಬಲ್ಲಿ ಅದು ಅಜ್ಞಾನದ ಕಾರ್ಯವೆಂಬ ಹೇತುವನ್ನು ಹೇಳಿತ್ತು , ಅದನ್ನು ಉಪಪಾದನೆಮಾಡುವದಕ್ಕೆಂದು ಈಗ ಪ್ರಾರಂಭಿಸಿದೆ. ಇದರಿಂದ ಎಲ್ಲಾ ಪ್ರವೃತ್ತಿಯೂ ಅಜ್ಞಾನ ಮೂಲಕವೆಂದೂ ಏರ್ಪಡುತ್ತದೆ ; ಅದರಿಂದ ಕರ್ಮಕ್ಕೆ ಅಜ್ಞಾನನಾಶಕತ್ವವಿಲ್ಲವೆಂಬುದೂ ಜ್ಞಾನಮಾತ್ರದಿಂದಲೇ ಸಂಸಾರನಿವೃತ್ತಿಯೆಂಬುದೂ ಗಟ್ಟಿಯಾಗುತ್ತದೆ. ಅದಕ್ಕಾಗಿ ಮುಂದಿನ ಗ್ರಂಥವನ್ನು ಪ್ರಾರಂಭಿಸಿದೆ.

2. ಮಾಡಕೂಡದೆಂದು ವಿಧಿಸಿರುವ ಅಭಕ್ಷ್ಯಭಕ್ಷಣವೇ ಮುಂತಾದ ಕರ್ಮಗಳ ಲ್ಲಿಯೂ, ತನ್ನಿಚ್ಛೆಯಿಂದಲೇ ಮಾಡುವ ಸ್ವಾಭಾವಿಕಕರ್ಮಗಳಲ್ಲಿಯೂ.

3. ಶಾಸ್ತ್ರೀಯವಲ್ಲದ ಸ್ವಾಭಾವಿಕರಾಗದ್ವೇಷಗಳಿಂದಲೇ.

4. ಇದು ಸರ್ವಸಮ್ಮತವು ; ಏಕೆಂದರೆ ಶಾಸ್ತ್ರವೇನೂ ಈ ಕರ್ಮಗಳಲ್ಲಿ ಮನುಷ್ಯನನ್ನು ತೊಡಗಿಸುವದಿಲ್ಲ ಅಥವಾ ಅವುಗಳಿಂದ ಹಿಮ್ಮೆಟ್ಟಿಸುವದಿಲ್ಲವೆಂದು ಪೂರ್ವಪಕ್ಷಿಯೂ ಒಪ್ಪುತ್ತಾನೆ.

5. ಪರಲೋಕದಲ್ಲಿ ಫಲವನ್ನು ಕೊಡುವ.

6. ಶಾಸ್ತ್ರವೇ ತೊಡಗಿಸುವದೊ ಅಥವಾ, ಹಿಮ್ಮೆಟ್ಟಿಸುವದೊ ?

(ಪ್ರಶ್ನೆ) : ಇದರಿಂದೇನು (ಪ್ರಯೋಜನ) ?[1]

(ಉತ್ತರ) : ಹೀಗಾದರೆ ಕೇಳು : ಮೊದಲನೆಯದಾಗಿ ಸಿದ್ಧವಾಗಿರುವ ವಸ್ತುವಿನ ಲೌಕಿಕವಾದ ಅಥವಾ ಆಗಮಿಕವಾದ ಪ್ರಮಾಣವಾಗಿರುವ ಸಮ್ಯಗ್ಜ್ಞಾನವೇ ಪ್ರವೃತ್ತಿನಿಮಿತ್ತವೆಂದು ನಿಶ್ಚಯವಾದರೆ[2] ನಿವೃತ್ತಿಶಾಸ್ತ್ರವನ್ನು ಒಪ್ಪುವದೂ ಇಲ್ಲವಾದರೆ[3] ಆಗ ಕರ್ಮತ್ಯಾಗಿಗಳು ಕೆಟ್ಟರು ;[4] ಏಕೆಂದರೆ (ಅವರು) ಭ್ರಾಂತಿಜ್ಞಾನವೊಂದನ್ನೇ ಅವಲಂಬಿಸಿಕೊಂಡಿರುತ್ತಾರೆ. ಮತ್ತು ಅಲೌಕಿಕವಾದ ಪ್ರಮಾಣದಿಂದ[5] ಸ್ವೀಕರಿಸಿದ್ದ ಕರ್ಮಾನುಷ್ಠಾನವನ್ನು ಬಿಟ್ಟಿರುತ್ತಾರೆ. ಹೀಗಲ್ಲದೆ[6] ಬಿಸಿಲುಕುದುರೆಯ ನೀರನ್ನು ಕುಡಿಯಲಿಚ್ಛಿಸುವವನ ಪ್ರವೃತ್ತಿನಿಮಿತ್ತದಂತೆ ವಸ್ತುವಿಗೆ ವಿಪರೀತವಾದ ಭ್ರಾಂತಿವಿಜ್ಞಾನವೇ ಎಲ್ಲಾ ಪ್ರವೃತ್ತಿಗಳಿಗೂ ನಿಮಿತ್ತವೆಂದಾದರೆ ಆಗ ನಾವು ಗೆದ್ದೆವು, ನೀವು ಕೆಟ್ಟಿರಿ.

೨೯. ಭ್ರಾಂತಿಯಿಂದ ಹಿತವನ್ನು ಪಡೆಯಬೇಕೆಂದಿಚ್ಛಿಸುವವರಿಗೂ ಅಹಿತವನ್ನು ತಪ್ಪಿಸಿಕೊಳ್ಳಬೇಕೆನ್ನುವವರಿಗೂ ಪಡೆಯುವದಕ್ಕೂ ತಪ್ಪಿಸಿಕೊಳ್ಳು

---

1. ಇಲ್ಲಿಯವರೆಗೆ ಸಂಶಯವನ್ನು ಹೇಳಿದ್ದಾಯಿತು. ಈಗ ವಿಚಾರದಿಂದಾಗುವ ಪ್ರಯೋಜನವನ್ನು ತಿಳಿಸುವದಕ್ಕಾಗಿ ಈ ಪ್ರಶ್ನೆಯನ್ನು ಹಾಕಿಕೊಂಡಿದೆ.

2. ಭ್ರಾಂತಿನಿಮಿತ್ತವಲ್ಲವೆಂದಾದರೆ ; ಲೌಕಿಕಪ್ರಮಾಣವು ಲೌಕಿಕಪ್ರವೃತ್ತಿಗಳಿಗೂ ಶಾಸ್ತ್ರೀಯಜ್ಞಾನವು ಕಾಮ್ಯನಿತ್ಯಕರ್ಮಗಳ ಪ್ರವೃತ್ತಿಗೂ ನಿಮಿತ್ತವೆಂದಾದರೆ.

3. ಶಾಸ್ತ್ರೀಯಕರ್ಮಸಂನ್ಯಾಸವನ್ನು ಮಾಡತಕ್ಕದ್ದಲ್ಲವೆಂದೇ ಮತವಾದರೆ ಎಂದರ್ಥ.

4. ಪುರುಷಾರ್ಥವಿಲ್ಲದವರಾಗುವರು.

5. ಯಾವಜ್ಜೀವವೂ ಅಗ್ನಿಹೋತ್ರವನ್ನು ಹೋಮಮಾಡಬೇಕು ಮುಂತಾದ ಶಾಸ್ತ್ರವಚನದಿಂದ.

6. ಸಮ್ಯಗ್ಜ್ಞಾನದಿಂದಲೇ ಕರ್ಮಗಳಲ್ಲಿ ತೊಡಗುತ್ತಾರೆಂದಾದರೆ ಈ ಪ್ರಯೋಜನವಾಗುವದೆಂದು ಹೇಳಿದ್ದಾಯಿತು ; ಪ್ರವೃತ್ತಿಗೆಲ್ಲ ಭ್ರಾಂತಿಯೇ ನಿಮಿತ್ತವೆಂದಾದರೆ ಇದಕ್ಕೆ ವಿಪರೀತಪ್ರಯೋಜನವಾಗುವದು, ಕರ್ಮವಾದಿಗಳೇ ಫಲದಿಂದ ವಂಚಿತರಾಗುವರು, ಜ್ಞಾನವಾದಿಗಳಿಗೆ ಪುರುಷಾರ್ಥಪ್ರಾಪ್ತಿಯಾಗುವದು ಎಂದರ್ಥ.

ವದಕ್ಕೂ ಉಪಾಯಗಳನ್ನು ಸೂರ್ಯನಂತೆ[1] ಶಾಸ್ತ್ರವು ತಿಳಿಸಿಕೊಡುತ್ತದೆ.

(ಮೂಲ)

ಏವಂ ತಾವತ್ ಪ್ರತ್ಯಕ್ಷಾನುಮಾನಾಗಮಪ್ರಮಾಣಾವಷ್ಟಮ್ಭಾತ್ ಆತ್ಮನೋ ನಿರತಿಶಯಸುಖಹಿತಾವ್ಯತಿರೇಕಸಿದ್ಧೇಃ, ಅಹಿತಸ್ಯ ಚ ಷಷ್ಠಗೋಚರವತ್ ಸ್ವತ ಏವ ಅನಭಿಸಂಬನ್ಧಾತ್ ಏವಂಸ್ವಾಭಾವ್ಯಾತ್ಮಾನವಬೋಧಮಾತ್ರಾದೇವ 'ಹಿತಂ ಮೇ ಸ್ಯಾತ್' 'ಅಹಿತಂ ಮೇ ಮಾ ಭೂತ್' ಇತಿ ಮಿಥ್ಯಾಜ್ಞಾನಂ ತು ಊಷರಶುಕ್ತಿಕಾನವಬೋಧೋತ್ಥಮಿಥ್ಯಾಜ್ಞಾನವತ್ ಪ್ರವೃತ್ತಿನಿಮಿತ್ತಮ್ ಇತಿ ನಿರ್ಧಾರಿತಮ್ । ಶಾಸ್ತ್ರಂ ಚ ನ ಪದಾರ್ಥಶಕ್ತ್ಯಾಧಾನಕೃತ್ ಇತಿ । ಅಥೈತಸ್ಯೈವ ಉತ್ತರತ್ರ ಪ್ರಪಞ್ಚ ಆರಭ್ಯತೇ –

ನ ಪರೀಪ್ಸಾಂ ಜಿಹಾಸಾಂ ವಾ ಪುಂಸಃ ಶಾಸ್ತ್ರಂ ಕರೋತಿ ಹಿ ।
ನಿಜೇ ಏವ ತು ತೇ ಯಸ್ಮಾತ್ ಪಶ್ವಾದಾವಪಿ ದರ್ಶನಾತ್ ॥೩೦॥

(ಅರ್ಥ)

ಹೀಗೆ (ಇದುವರೆಗೆ) ಆತ್ಮನು ಮಿಗಿಲಿಲ್ಲದ ಸುಖಹಿತಗಳಿಂದ ಅವ್ಯತಿರಿಕ್ತನೆಂದು ಸಿದ್ಧವಾಗಿರುವದರಿಂದಲೂ ಅಹಿತವೆಂಬುದು ಷಷ್ಠಗೋಚರದಂತೆ[2] ತಾನೇ ಸಂಬದ್ಧವಲ್ಲದೆ ಇರುವದರಿಂದಲೂ – ಈ ಸ್ವಭಾವದ ಆತ್ಮನನ್ನು ಅರಿತುಕೊಳ್ಳದ್ದರಿಂದಲೇ 'ನನಗೆ ಹಿತವಾಗಲಿ' 'ನನಗೆ ಅಹಿತವು ಆಗಬೇಡ' ಎಂಬ ಮಿಥ್ಯಾಜ್ಞಾನವೇ ಮರುಭೂಮಿ, ಕಪ್ಪೆಯಚಿಪ್ಪು ಇವುಗಳನ್ನು ಅರಿತುಕೊಳ್ಳದಿರುವದರಿಂದುಂಟಾದ ಮಿಥ್ಯಾಜ್ಞಾನದಂತೆ ಪ್ರವೃತ್ತಿನಿಮಿತ್ತವು ಎಂದು ಪ್ರತ್ಯಕ್ಷಾನುಮಾನಾಗಮಪ್ರಮಾಣಗಳನ್ನಾಶ್ರಯಿಸಿ ನಿರ್ಧರಿಸಿದ್ದಾಯಿತು. ಶಾಸ್ತ್ರವು

---

1. ಸೂರ್ಯನು ದಾರಿಯಲ್ಲಿರುವ ಪದಾರ್ಥಗಳನ್ನು ಬೆಳಗುತ್ತಾನೆ ; ಜನರಿಗೆ ಅವರವರ ಬುದ್ಧಿಸಂಸ್ಕಾರದಿಂದ ಹಾನ, ಉಪಾದಾನ, ಔದಾಸೀನ್ಯ - ಎಂಬ ಮೂರು ಬಗೆಯ ಬುದ್ಧಿಗಳು ಅವುಗಳಲ್ಲಿ ಉಂಟಾಗುತ್ತವೆ. ಇದರಂತೆ ಎಂದರ್ಥ. ಶಾಸ್ತ್ರವು ಉಪಾಯಮಾತ್ರಪ್ರದರ್ಶಕವು, ಪ್ರವರ್ತಕವಲ್ಲ ಎಂಬುದನ್ನು ತೈ. ಭಾ. ಭಾ. ೭೮, ಐ.ಭಾ.ಭಾ. ೧೧, ಬೃ.ಭಾ. ೫-೧-೧ ಮುಂತಾದವುಗಳಲ್ಲಿ ಆಚಾರ್ಯರೂ ಹೇಳಿದ್ದಾರೆ.

2. ಆರನೆಯ ಪ್ರಮಾಣದ ವಿಷಯದಂತೆ, ಅಭಾವದಂತೆ ; ಅಥವಾ ಆರನೆಯ ಇಂದ್ರಿಯದ ವಿಷಯದಂತೆ.

ಪದಾರ್ಥಕ್ಕೆ ಶಕ್ತಿಯನ್ನುಂಟುಮಾಡತಕ್ಕದ್ದಲ್ಲವೆಂದೂ (ನಿರ್ಧರಿಸಿದ್ದಾಯಿತು).[1] ಇನ್ನು ಇದೇ (ವಿಷಯದ) ವಿವರವನ್ನು ಮುಂದಿನ (ಗ್ರಂಥದಲ್ಲಿ ತಿಳಿಸುವದಕ್ಕೆ) ಆರಂಭಿಸಿರುತ್ತದೆ :

೩೦. ಪಡೆಯಬೇಕೆಂಬ ಇಚ್ಛೆಯನ್ನಾಗಲಿ ತೊಲಗಿಸಿಕೊಳ್ಳಬೇಕೆಂಬ ಇಚ್ಛೆಯನ್ನಾಗಲಿ ಶಾಸ್ತ್ರವು ಮನುಷ್ಯನಿಗೆ ಉಂಟುಮಾಡುವದೇ ಇಲ್ಲ. ಏಕೆಂದರೆ ಅವು ಸ್ವಾಭಾವಿಕವೇ ಆಗಿರುತ್ತವೆ, ಪಶ್ವಾದಿಗಳಲ್ಲಿಯೂ ಕಾಣಬರುವದರಿಂದ (ಹೀಗೆಂದು ಒಪ್ಪಬೇಕು).[2]

(ಮೂಲ)

ಉಕ್ತಂ ತಾವತ್ ಅನವಬುದ್ಧವಸ್ತುಯಾಥಾತ್ಮ್ಯ ಏವ ವಿಧಿಪ್ರತಿಷೇಧ ಶಾಸ್ತ್ರೇಷು ಅಧಿಕ್ರಿಯತ ಇತಿ । ಅಥಾಧುನಾ ವಿಷಯಸ್ವಭಾವಾನುರೋಧೇನ ಪ್ರವೃತ್ತ್ಯಸಂಭವಂ ವಕ್ತುಕಾಮ ಆಹ–

**ಲಿಪ್ಸತೇಽಜ್ಞಾನತೋ ಲಬ್ಧಂ ಕಣ್ಠೇ ಚಾಮೀಕರಂ ಯಥಾ ।**
**ವರ್ಜಿತಂ ಚ ಸ್ವತೋ ಭ್ರಾನ್ತ್ಯಾ ಚ್ಛಾಯಾಯಾಮಾತ್ಮನೋ ಯಥಾ ॥**
**ಭಯಾನ್ಮೋಹಾವನದ್ಧಾತ್ಮಾ ರಕ್ಷಃ ಪರಿಜಿಹೀರ್ಷತಿ ।**
**ಯಚ್ಚಾಪರಿಹೃತಂ ವಸ್ತು ತಥಾಲಬ್ಧಂ ಚ ಲಿಪ್ಸತೇ ॥೩೨॥**

---

1. ಆತ್ಮನು ಸುಖಸ್ವರೂಪನು, ಸರ್ವಥಾ ದುಃಖರಹಿತನು, ಎಂಬುದನ್ನರಿಯದ್ದರಿಂದ ಆಗಿರುವ ಮಿಥ್ಯಾಜ್ಞಾನವೇ ಸುಖಪ್ರಾಪ್ತಿದುಃಖನಿವೃತ್ತಿಯ ಪ್ರವೃತ್ತಿಗಳಿಗೆ ನಿಮಿತ್ತವು ಎಂಬುದನ್ನು ಪ್ರತ್ಯಕ್ಷಾನುಮಾನಗಳಿಂದ ನಿರ್ಧರಿಸಿದ್ದಾಯಿತು. ಭ್ರಾಂತಿಪ್ರತ್ಯಯವು ಪ್ರವೃತ್ತಿನಿಮಿತ್ತವೆಂಬುದು ಮರುಭೂಮಿಯ ಜಲ, ಕಪ್ಪೆಚಿಪ್ಪಿನ ಬೆಳ್ಳಿ- ಇವುಗಳ ದೃಷ್ಟಾಂತದಿಂದ ಪ್ರತ್ಯಕ್ಷದಿಂದ ಸಿದ್ಧವಾಗುತ್ತದೆ ; ಹೀಗೆಯೇ ಮಿಕ್ಕ ಪ್ರವೃತ್ತಿಗಳು ಎಂಬುದು ಅನುಮಾನದಿಂದ ಸಿದ್ಧವಾಗುತ್ತದೆ ಎಂದು ಸೂಚಿಸಿದಂತಾಯಿತು. ಶಾಸ್ತ್ರವು ಉಪಾಯಮಾತ್ರಪ್ರದರ್ಶಕವೆಂದದ್ದರಿಂದ ಶಾಸ್ತ್ರಾಶಯವು ಸೂಚಿತವಾಗಿದೆ. ಆತ್ಮನು ಸುಖಸ್ವರೂಪನು ಎಂಬುದನ್ನು ಪ್ರತ್ಯಕ್ಷಾದಿಗಳಿಂದ ತೋರಿಸಿದೆ ಎಂದು ವ್ಯಾಖ್ಯಾನದಲ್ಲಿರುವದು ಅನುಭವವಿರುದ್ಧ, ಗ್ರಂಥಕಾರರ ಪ್ರತಿಪಾದನ ಶೈಲಿಗೂ ವಿರುದ್ಧ.

2. ಪಶ್ವಾದಿಗಳಿಗೂ ಶಾಸ್ತ್ರಕೃತಜ್ಞಾನವಿರುವದಿಲ್ಲ ; ಆದರೂ ಅವುಗಳಲ್ಲಿ ಪ್ರವೃತ್ತಿನಿವೃತ್ತಿಗಳಿವೆ ; ಬೃ.ಭಾ. ಅವತರಣಿಕೆ, ಐ.ಭಾ. ಭಾ. ೧೧ ಇವನ್ನು ನೋಡಿ.

(ಅರ್ಥ)

ವಸ್ತುವಿನ ತತ್ತ್ವವನ್ನು ಅರಿಯದವನೇ ವಿಧಿಪ್ರತಿಷೇಧಶಾಸ್ತ್ರಗಳಿಗೆ ಅಧಿಕಾರಿ[1] ಎಂದು ಹೇಳಿದ್ದಾಯಿತು. ಈಗ ವಿಷಯಗಳ [2] ಸ್ವಭಾವವನ್ನನುಸರಿಸಿ (ನೋಡಿದರೂ) ಪ್ರವೃತ್ತಿಯು ಸಂಭವಿಸುವದಿಲ್ಲವೆಂದು ಹೇಳಬೇಕೆಂಬ ಇಚ್ಛೆಯಿಂದ (ಹೀಗೆಂದು) ಹೇಳುತ್ತಾರೆ :

೩೧-೩೨. ಕಂಠದಲ್ಲಿರುವ ಚಿನ್ನದಾಭರಣದಂತೆ ಪ್ರಾಪ್ತವಾಗಿರುವದನ್ನೇ ಪಡೆಯುವದಕ್ಕೆ ಅಜ್ಞಾನದಿಂದ ಇಚ್ಛಿಸುತ್ತಾನೆ. ತನ್ನ ನೆರಳಿನಲ್ಲಿ (ಕಲ್ಪಿತ ವಾಗಿರುವ) ರಾಕ್ಷಸನನ್ನು ಅಂಜಿಕೆಯಿಂದ (ತೊಲಗಿಸುವದಕ್ಕೆ ಇಚ್ಛಿಸುವಂತೆ) ಭ್ರಾಂತಿಯಿಂದ ಆವೃತವಾದ ಅಂತಃಕರಣವುಳ್ಳವನಾಗಿ ತಾನೇ ತೊಲಗಿರು ವದನ್ನೇ (ಅಜ್ಞಾನದಿಂದ) ತೊಲಗಿಸಿಕೊಳ್ಳುವದಕ್ಕೆ ಇಚ್ಛಿಸುತ್ತಾನೆ. ಮತ್ತು ಯಾವದು ಪರಿಹಾರವಾಗಿಲ್ಲವೋ, (ಅದನ್ನು ತೊಲಗಿಸಿಕೊಳ್ಳುವದಕ್ಕೂ) ಮತ್ತು ಪಡೆದುಕೊಂಡದ್ದಲ್ಲವೋ (ಆ ವಸ್ತುವನ್ನು) ಪಡೆಯುವದಕ್ಕೂ ಇಚ್ಛಿಸುತ್ತಾನೆ.[3]

(ಮೂಲ)

ತತ್ರ ಏತೇಷು ಚತುರ್ಷು ವಿಷಯೇಷು ಪ್ರಾಪ್ತಯೇ ಪರಿಹಾರಾಯ ಚ ವಿಭಜ್ಯ ನ್ಯಾಯಃ ಪ್ರದರ್ಶ್ಯತೇ—

**ಪ್ರಾಪ್ತವ್ಯಪರಿಹಾರ್ಯೇಷು ಜ್ಞಾತ್ವೋಪಾಯಾಞ್ಛ್ರುತೇಃ ಪೃಥಕ್ ।**
**ಕೃತ್ವಾಥ ಪ್ರಾಪ್ನುಯಾತ್ ಪ್ರಾಪ್ಯಂ ತಥಾನಿಷ್ಟಂ ಜಹಾತ್ಯಪಿ ॥೩೩॥**

---

1. ಕ್ರಿಯಾಕಾರಕಫಲಗಳ ಸಂಬಂಧವನ್ನು ಅರಿತವನೇ ಕರ್ಮಕ್ಕೆ ಅಧಿಕಾರಿಯು ; ಅಜ್ಞನಲ್ಲ. ಆದರೆ ಅವನಿಗೆ ನಿತ್ಯಸುಖರೂಪನೂ ಸರ್ವದುಃಖರಹಿತನೂ ಆಗಿರುವ ಆತ್ಮನ ಜ್ಞಾನವೇನೂ ಬೇಕಿಲ್ಲ, ಅದನ್ನು ಅರಿತರೆ ಕರ್ಮಕ್ಕೆ ಅಧಿಕಾರಿಯಾಗುವಹಾಗೂ ಇಲ್ಲ. ಆದ್ದರಿಂದ ಆತ್ಮವಸ್ತುವಿನ ತತ್ತ್ವವನ್ನು ಅರಿಯದವನೇ ಕರ್ಮಕ್ಕೆ ಅಧಿಕಾರಿ ಎಂದಿದೆ.

2. ಪ್ರಾಪ್ತವ್ಯಪರಿಹರ್ತವ್ಯ ವಿಷಯಗಳು.

3. ಪ್ರಾಪ್ತಪ್ರಾಪ್ತೀಚ್ಛೆ, ವರ್ಜಿತವರ್ಜನೇಚ್ಛೆ, ಅಪ್ರಾಪ್ತಪ್ರಾಪ್ತೀಚ್ಛೆ, ಅಪರಿಹೃತಪರಿ ಹಾರೇಚ್ಛೆ - ಎಂದು ಪ್ರಾಪ್ತಿಪರಿಹಾರಗಳ ಇಚ್ಛೆಯು ನಾಲ್ಕು ಬಗೆ.

(ಅರ್ಥ)

ಇಲ್ಲಿ ಈ ನಾಲ್ಕು ವಿಷಯಗಳಲ್ಲಿ ಪ್ರಾಪ್ತಿಗೂ ಪರಿಹಾರಕ್ಕೂ ವಿಂಗಡಿಸಿಕೊಂಡು ನ್ಯಾಯವನ್ನು ತಿಳಿಸಲಾಗುವದು :

೩೩. ಪ್ರಾಪ್ತವ್ಯಪರಿಹಾರ್ಯಗಳ (ವಿಷಯ)ದಲ್ಲಿ ಉಪಾಯಗಳನ್ನು ಶ್ರುತಿಯಿಂದ ಬೇರೆಬೇರೆಯಾಗಿ ತಿಳಿದುಕೊಂಡು ಆ ಬಳಿಕ (ಆ ಸಾಧನಗಳನ್ನು) ಮಾಡಿ ಪಡೆಯತಕ್ಕದ್ದನ್ನು ಪಡೆಯುವನು, ಮತ್ತು ಅನಿಷ್ಟವನ್ನು ತಪ್ಪಿಸಿಕೊಳ್ಳುವನು.

(ಮೂಲ)

ಅಥ ಅವಶಿಷ್ಟಯೋಃ ಸ್ವಭಾವತ ಏವ [1] –

**ಪರಿಹೃತಾವಾಪ್ತಯೋರ್ಬೋಧಾದ್ ಹಾನಾವಾಪ್ತೀ ನ ಕರ್ಮಣಾ [2] ।**
**ಮೋಹಮಾತ್ರಾನ್ತರಾಯತ್ವಾತ್ ಕ್ರಿಯಯಾ ತೇ ನ ಸಿಧ್ಯತಃ ॥೩೪॥**

(ಅರ್ಥ)

ಇನ್ನು ಉಳಿದೆರಡಕ್ಕೊ, ಎಂದರೆ ಸ್ವಭಾವದಿಂದಲೇ ! [3]

೩೪. ಪರಿಹೃತವಾಗಿ ಪ್ರಾಪ್ತವಾಗಿರುವವುಗಳನ್ನು ತಪ್ಪಿಸಿಕೊಳ್ಳುವದು ಪ್ರಾಪ್ತಿ - ಇವುಗಳು ಜ್ಞಾನದಿಂದಲೇ, ಕರ್ಮದಿಂದಲ್ಲ. ಅಜ್ಞಾನವೊಂದೇ ಅಡ್ಡಿಯಾಗಿರುವದರಿಂದ ಅವೆರಡೂ ಕರ್ಮದಿಂದ ಸಿದ್ಧಿಸುವದಿಲ್ಲ.

(ಮೂಲ)

ಕಸ್ಮಾತ್ ಪುನರಾತ್ಮವಸ್ತುಯಾಥಾತ್ಮ್ಯಾವಬೋಧಮಾತ್ರಾದೇವ ಅಭಿಲಷಿತ ನಿರತಿಶಯಸುಖಾವಾಪ್ತಿನಿಃಶೇಷದುಃಖನಿವೃತ್ತೀ ಭವತೋ ನ ತು ಕರ್ಮಣಾ ಇತಿ ? ಉಚ್ಯತೇ–

---

1. 'ಏವ' ಎಂಬುದು ಪಾಠಾಂತರದಲ್ಲಿಲ್ಲ.

2. ಈ ಶ್ಲೋಕಾರ್ಧದಲ್ಲಿ ಒಂದು ಅಕ್ಷರವು ಹೆಚ್ಚಾಗಿದೆ. 'ವರ್ಜಿತಾವಾಪ್ತಯೋಃ' ಎಂದು ಪಾ॥

3. ಸ್ವಭಾವದಿಂದಲೇ ಪರಿಹೃತವಾಗಿ ಸ್ವಭಾವದಿಂದಲೇ ಪ್ರಾಪ್ತವಾಗಿರುವವುಗಳನ್ನು ಎಂದು ಶ್ಲೋಕಸ್ಥಪದಗಳಿಗೆ ಇದರ ಅನ್ವಯವನ್ನು ಮಾಡಿಕೊಳ್ಳಬೇಕು.

**ಕರ್ಮಾಜ್ಞಾನಸಮುತ್ಥತ್ವಾನ್ನಾಲಂ ಮೋಹಾಪನುತ್ತಯೇ ।**
**ಸಮ್ಯಗ್ಜ್ಞಾನಂ ವಿರೋಧ್ಯಸ್ಯ ತಾಮಿಸ್ರಸ್ಯಾಂಶುಮಾನಿವ ॥೩೫॥**

(ಅರ್ಥ)

ಆತ್ಮವಸ್ತುವಿನ ತತ್ತ್ವಜ್ಞಾನಮಾತ್ರದಿಂದಲೇ ಬೇಕಾಗಿರುವ ಮಿಗಿಲಿಲ್ಲದ ಸುಖಪ್ರಾಪ್ತಿಯೂ ನಿಶ್ಶೇಷದುಃಖನಿವೃತ್ತಿಯೂ ಏಕೆ ಆಗುತ್ತವೆ, ಕರ್ಮದಿಂ(ದೇಕೆ) ಆಗುವದಿಲ್ಲ ? ಎಂದರೆ ಹೇಳುತ್ತೇವೆ :

೩೫. ಕರ್ಮವು ಅಜ್ಞಾನದಿಂದ ಉಂಟಾಗಿರುವದರಿಂದ ಅಜ್ಞಾನವನ್ನು ತೊಲಗಿಸುವದಕ್ಕೆ ಸಾಲದು. ಕತ್ತಲೆಗೆ ಸೂರ್ಯನಂತೆ ಅದಕ್ಕೆ ಸಮ್ಯಗ್ಜ್ಞಾನವೇ ವಿರೋಧಿಯು.

(ಮೂಲ)

**ನನು ಆತ್ಮಜ್ಞಾನಮಪಿ ಅವಿದ್ಯೋಪಾದಾನಮ್ । ನ ಹಿ ಶಾಸ್ತ್ರಶಿಷ್ಯಾಚಾರ್ಯಾದ್ಯನುಪಾದಾಯ ಆತ್ಮಜ್ಞಾನಮ್ ಆತ್ಮಾನಂ[1] ಲಭತ ಇತಿ । ನೈಷ ದೋಷಃ । ಯತಃ ಆತ್ಮಜ್ಞಾನಂ ಹಿ[2] ಸ್ವತಃಸಿದ್ಧಪರಮಾರ್ಥಾತ್ಮವಸ್ತುಸ್ವರೂಪಮಾತ್ರಾಶ್ರಯಾದೇವ ಅವಿದ್ಯಾತದುತ್ಪನ್ನಕಾರಕಗ್ರಾಮಪ್ರಧ್ವಂಸಿ ಸ್ವಾತ್ಮೋತ್ಪತ್ತಾವೇವ ಶಾಸ್ತ್ರಾದಿ ಅಪೇಕ್ಷತೇ ನೋತ್ಪನ್ನಮ್ ಅವಿದ್ಯಾನಿವೃತ್ತೌ । ಕರ್ಮ ಪುನಃ ಸ್ವಾತ್ಮೋತ್ಪತ್ತೌ ಉತ್ಪನ್ನಂ ಚ । ನ ಹಿ ಕ್ರಿಯಾ ಕಾರಕನಿಃಸ್ಪೃಹಾ ಕಲ್ಪಕೋಟಿವ್ಯವಹಿತಫಲದಾನಾಯ ಸ್ವಾತ್ಮಾನಂ ಬಿಭರ್ತಿ ಸಾಧ್ಯಮಾನಮಾತ್ರಸ್ವರೂಪತ್ವಾತ್ ತಸ್ಯಾಃ । ನ ಚ ಕ್ರಿಯಾ ಆತ್ಮಜ್ಞಾನವತ್ ಸ್ವಾತ್ಮಪ್ರತಿಲಂಭಕಾಲ ಏವ ಸ್ವರ್ಗಾದಿಫಲೇನ ಕರ್ತಾರಂ ಸಂಬಧ್ನಾತಿ । ಆತ್ಮಜ್ಞಾನಂ ಪುನಃ ಪುರುಷಾರ್ಥಸಿದ್ಧೌ ನೋತ್ಪದ್ಯಮಾನಸ್ವರೂಪವ್ಯತಿರೇಕೇಣ ಅನ್ಯತ್ ರೂಪಾನ್ತರಂ ಸಾಧನಾನ್ತರಂ ವಾ ಅಪೇಕ್ಷತೇ । ಕುತ ಏತತ್ ? ಯತಃ –**

1. 'ಆತ್ಮಜ್ಞಾನಂ ಲಭತೇ' ಎಂಬ ಪಾಠವು ಸರಿಯಲ್ಲ.

2. 'ಯತಃ', 'ಹಿ' – ಇವೆರಡೂ ಬೇಕಿಲ್ಲವೆಂದು ತೋರುತ್ತದೆ ; 'ಹಿ' ಇಲ್ಲದಿದ್ದರೂ ಸಾಗುತ್ತದೆ.

**ಬಲವದ್ಧಿ ಪ್ರಮಾಣೋತ್ಥಂ ಸಮ್ಯಗ್ಜ್ಞಾನಂ ನ ಬಾಧ್ಯತೇ ।**
**ಆಕಾಙ್ಕ್ಷತೇ ನ ಚಾಪ್ಯನ್ಯದ್ ಬಾಧನಂ ಪ್ರತಿ ಸಾಧನಮ್ ॥೩೬॥**

(ಅರ್ಥ)

(ಆಕ್ಷೇಪ) : ಆತ್ಮಜ್ಞಾನವೂ ಅವಿದ್ಯೆಯೆಂಬ ಉಪಾದಾನದಿಂದಲೇ[1] ಆಗಿರುತ್ತದೆ ; ಏಕೆಂದರೆ ಶಾಸ್ತ್ರ, ಶಿಷ್ಯ, ಆಚಾರ್ಯ – ಮುಂತಾದವನ್ನು ತೆಗೆದುಕೊಳ್ಳದೆ ಆತ್ಮಜ್ಞಾನವು ಹುಟ್ಟುವದಿಲ್ಲವಷ್ಟೆ ?[2]

(ಪರಿಹಾರ) : ಇದೇನೂ ದೋಷವಲ್ಲ. ಏಕೆಂದರೆ ಆತ್ಮಜ್ಞಾನವು ಸ್ವತಃಸಿದ್ಧಪರಮಾರ್ಥಾತ್ಮವಸ್ತುವನ್ನೊಂದನ್ನೇ ಆಶ್ರಯಿಸಿಕೊಂಡೇ[3] ಅವಿದ್ಯೆಯನ್ನೂ ಅದರಿಂದುಂಟಾಗುವ ಕಾರಕಸಮೂಹವನ್ನೂ ನಾಶಮಾಡುವದಾಗಿದ್ದು[4] ಅದು ತನ್ನ ಉತ್ಪತ್ತಿಗೇ ಶಾಸ್ತ್ರಾದಿಗಳನ್ನು ಬಯಸುತ್ತದೆಯೇ ಹೊರತು ಹುಟ್ಟಿದಮೇಲೆ ಅವಿದ್ಯೆಯನ್ನು ತೊಲಗಿಸುವದಕ್ಕೆ (ಮತ್ತೇನನ್ನೂ ಬಯಸು)ವದಿಲ್ಲ. ಕರ್ಮವಾದರೋ ತನ್ನ ಉತ್ಪತ್ತಿಗೂ ಉತ್ಪನ್ನಾದಬಳಿಕವೂ (ಬಯಸುತ್ತದೆ). ಕ್ರಿಯೆಯು ಕಾರಕಗಳನ್ನು ಬಯಸದೆ ಕಲ್ಪಕೋಟಿಯ ವ್ಯವಧಾನವುಳ್ಳ[5] ಫಲವನ್ನು ಕೊಡುವದಕ್ಕೆ ನಿಂತಿರಲೇ ಆರದು ; ಏಕೆಂದರೆ ಅದು ಬರಿಯ ಸಾಧ್ಯಸ್ವರೂಪ

---

1. ಕಾರಣದಿಂದಲೇ.

2. ಆದ್ದರಿಂದ ಅವಿದ್ಯಾಕೃತದ್ವೈತವು ಅದಕ್ಕೂ ಬೇಕು.

3. ಕರ್ಮದಂತೆ ಪ್ರಮಾಣಸಿದ್ಧವಸ್ತುವನ್ನಾಶ್ರಯಿಸಿಕೊಂಡಿರುವದಿಲ್ಲ, ಸ್ವತಃ ಸಿದ್ಧವಸ್ತುವನ್ನಾಶ್ರಯಿಸಿಕೊಂಡಿರುತ್ತದೆ ; ಆದ್ದರಿಂದಲೇ ಪರಮಾರ್ಥವಸ್ತುವನ್ನು ಆಶ್ರಯಿಸಿಕೊಂಡಿರುತ್ತದೆ, ಕರ್ಮದಂತೆ ಅವಿಚಾರಿತಸಿದ್ಧದ್ವೈತವಸ್ತುವನ್ನು ಆಶ್ರಯಿಸಿಕೊಂಡಿರುವದಿಲ್ಲ ; ಆತ್ಮವಸ್ತುವನ್ನೇ ಆಶ್ರಯಿಸಿರುತ್ತದೆ, ಕರ್ಮದಂತೆ ಮತ್ತೊಂದನ್ನು ಆಶ್ರಯಿಸಿರುವದಿಲ್ಲ.

4. ಕರ್ಮದಂತೆ ಹುಟ್ಟಿದಮೇಲೂ ಕಾರಕಗಳನ್ನವಲಂಬಿಸಿಕೊಂಡೇ ಕೆಲಸ ಮಾಡತಕ್ಕದ್ದಲ್ಲ.

5. ಈಗ ಮಾಡುವ ಕರ್ಮಕ್ಕೆ ಕಲ್ಪಕೋಟಿಯಾದ ಬಳಿಕವೂ ಫಲವಾಗಬಹುದು ; ಆದರೆ ಕರ್ಮವು ಹುಟ್ಟಿದ ಬಳಿಕ ತಾನು ನಾಶವಾಗಿಬಿಡುತ್ತದೆ.

ವುಳ್ಳದ್ದಾಗಿದೆ[1] ಕ್ರಿಯೆಯು ಆತ್ಮಜ್ಞಾನದಂತೆ[2] ತಾನು ಹುಟ್ಟಿದ ಕಾಲದಲ್ಲಿಯೇ ಸ್ವರ್ಗಾದಿಫಲದೊಂದಿಗೆ ಕರ್ತೃವನ್ನು ಸಂಬಂಧಿಸುವದೂ ಇಲ್ಲ.[3] ಆತ್ಮಜ್ಞಾನವಾದರೋ ಪುರುಷಾರ್ಥಸಿದ್ಧಿಗಾಗಿ ಹುಟ್ಟುವ ತನ್ನ ಸ್ವರೂಪಕ್ಕಿಂತ ವ್ಯತಿರಿಕ್ತವಾಗಿ ಮತ್ತೊಂದನ್ನು– ರೂಪಾಂತರವನ್ನಾಗಲಿ ಸಾಧನಾಂತರವನ್ನಾಗಲಿ ಬಯಸುವುದಿಲ್ಲ.[4] ಏಕೆಂದರೆ :

೩೬. ಪ್ರಮಾಣದಿಂದ ಉಂಟಾಗಿ ಪ್ರಬಲವಾಗಿರುವದರಿಂದ ಸಮ್ಯಗ್ಜ್ಞಾನವು ಬಾಧಿತವಾಗುವದಿಲ್ಲ[5] (ಅಜ್ಞಾನವನ್ನು) ಬಾಧಿಸುವದಕ್ಕೆ ಮತ್ತೊಂದು ಸಾಧನವನ್ನೂ ಬಯಸುವದಿಲ್ಲ.[6]

(ಮೂಲ)

**ಸ್ವಪಕ್ಷಸ್ಯ ಹೇತ್ವವಷ್ಟಮ್ಭೇನ ಸಮರ್ಥಿತತ್ವಾನ್ನಿರಾಶಙ್ಕಮ್ ಉಪಸಂಹ್ರಿಯತೇ –**

---

1. ಕಾರಕಪರತಂತ್ರವಾಗಿ ಹುಟ್ಟತಕ್ಕದ್ದಾಗಿದೆ, ಭೂತವಸ್ತುವಲ್ಲ. ಆದ್ದರಿಂದ ಅದಕ್ಕೆ ಕಾರಕವು ಬೇಕು.

2. ಜ್ಞಾನವು ಹುಟ್ಟಿದಕೂಡಲೆ ಅಜ್ಞಾನವನ್ನು ನಾಶಮಾಡಿ ಆತ್ಮಪ್ರಾಪ್ತಿಯನ್ನು ಮಾಡಿಕೊಡುವಂತೆ.

3. ಸ್ವರ್ಗಾದಿಗಳು ಸತ್ತಬಳಿಕ ಆಗತಕ್ಕವು, ಕ್ರಿಯೆಯನ್ನು ಮಾಡಿದಕೂಡಲೆ ಆಗುವದಿಲ್ಲ.

4. ಜ್ಞಾನವು ಸಾಕ್ಷಾತ್ಕಾರವೆಂಬ ರೂಪವನ್ನು ಪಡೆದ ಬಳಿಕ ಅಜ್ಞಾನವು ಹೋಗುತ್ತದೆ ಎಂಬವರ ಪಕ್ಷದ ನಿರಾಕರಣೆಯನ್ನು 'ರೂಪಾಂತರವನ್ನಾಗಲಿ' ಎಂಬ ಮಾತು ಸೂಚಿಸುತ್ತದೆ ; ವಾಕ್ಯಜ್ಞಾನದ ಅಭ್ಯಾಸವನ್ನು ಮಾಡಿದ ಬಳಿಕ ಅದು ಆತ್ಯಂತಿಕವಾಗಿ ಅಜ್ಞಾನವನ್ನು ಕಳೆಯುತ್ತದೆ, ಅದಕ್ಕೆ ಕರ್ಮಾದಿಸಹಕಾರಿಕಾರಣವೂ ಬೇಕು ಎಂಬವರ ಪಕ್ಷವನ್ನು 'ಸಾಧನಾಂತರವನ್ನಾಗಲಿ' ಎಂಬ ಮಾತು ಖಂಡಿಸುತ್ತದೆ. ಇದು ಮುಂದೆ ಸ್ಪಷ್ಟವಾಗುತ್ತದೆ.

5. ಅಪೌರುಷೇಯವೇದಾನ್ತವಾಕ್ಯವೆಂಬ ಪ್ರಮಾಣದಿಂದುಂಟಾಗಿರುವದರಿಂದ ಸಮ್ಯಗ್ಜ್ಞಾನವು ಪ್ರಬಲವು, ಅವಿಚಾರಿತ ಸಿದ್ಧವಾಗಿರುವದರಿಂದ ಅಜ್ಞಾನವು ದುರ್ಬಲ. ಆದ್ದರಿಂದ ಅಜ್ಞಾನವು ಜ್ಞಾನವನ್ನು ಬಾಧಿಸುತ್ತದೆ ಎಂಬವರ ಮತವು ತಪ್ಪು. ವಾಕ್ಯಜ್ಞಾನವು ಬಾಧಿಸಲಾರದು ಎಂಬವರ ಮತವೂ ತಪ್ಪು - ಎಂದರ್ಥ.

6. ಸಾಧನಾಂತರವನ್ನು ತನ್ನ ಸಹಾಯಕ್ಕೆ ಬಯಸುವದೂ ಇಲ್ಲ.

**ತಸ್ಮಾದ್ದುಃಖೋದಧೇರ್ಹೇತೋರಜ್ಞಾನಸ್ಯಾಪನುತ್ತಯೇ ।**
**ಸಮ್ಯಗ್ಜ್ಞಾನಂ ಸುಪರ್ಯಾಪ್ತಂ ಕ್ರಿಯಾ ಚೇನ್ನೋಕ್ತಹೇತುತಃ ॥೩೭॥**

(ಅರ್ಥ)

ತಮ್ಮ ಪಕ್ಷವನ್ನು ಹೇತುವಿನ ಆಶ್ರಯದಿಂದ ಸಮರ್ಥಿಸಿದ್ದಾಯಿತಾದ್ದರಿಂದ ಯಾವ ಆಶಂಕೆಯೂ ಇಲ್ಲದೆ ಉಪಸಂಹಾರಮಾಡುತ್ತಾರೆ :

೩೭. ಆದ್ದರಿಂದ ದುಃಖಸಾಗರಕ್ಕೆ ಕಾರಣವಾಗಿರುವ ಅಜ್ಞಾನವನ್ನು ಹೋಗಲಾಡಿಸುವದಕ್ಕಾಗಿ ಸಮ್ಯಗ್ಜ್ಞಾನವು ಪೂರ ಸಾಕಾಗಿರುತ್ತದೆ ; ಕ್ರಿಯೆಯೊ ಎಂದರೆ ಅಲ್ಲ, ಏಕೆಂದರೆ ಹಿಂದೆ ಹೇಳಿದ ಕಾರಣಗಳಿಂದ.[1]

(ಮೂಲ)

ನನು ಬಲವದಪಿ ಸಮ್ಯಗ್ಜ್ಞಾನಂ ಸತ್ ಅಪ್ರಮಾಣೋತ್ಥೇನ ಅಸಮ್ಯಗ್ಜ್ಞಾನೇನ ಬಾಧ್ಯಮಾನಮ್ ಉಪಲಭಾಮಹೇ । ಯತ ಉತ್ಪನ್ನಪರಮಾರ್ಥಬೋಧಸ್ಯಾಪಿ ಕರ್ತೃತ್ವಭೋಕ್ತೃತ್ವರಾಗದ್ವೇಷಾದ್ಯನವಬೋಧೋತ್ಥಪ್ರತ್ಯಯಾ ಆವಿರ್ಭವನ್ತಿ । ನ ಹಿ ಅಬಾಧಿತೇ ಸಮ್ಯಗ್ಜ್ಞಾನೇ ತದ್ವಿರುದ್ಧಾನಾಂ ಪ್ರತ್ಯಯಾನಾಂ ಸಂಭವೋಽಸ್ತಿ । ನೈತದೇವಮ್ । ಕುತಃ ?

**ಬಾಧಿತತ್ವಾದವಿದ್ಯಾಯಾ ವಿದ್ಯಾಂ ಸಾ ನೈವ ಬಾಧತೇ ।**
**ತದ್ವಾಸನಾ ನಿಮಿತ್ತತ್ವಂ ಯಾನ್ತಿ ವಿದ್ಯಾಸ್ಮೃತೇರ್ಧ್ರುವಮ್ ॥೩೮॥**

(ಅರ್ಥ)

(ಆಕ್ಷೇಪ) : ಸಮ್ಯಗ್ಜ್ಞಾನವು ಪ್ರಬಲವಾಗಿದ್ದರೂ ಅಪ್ರಮಾಣದಿಂದ ಉಂಟಾಗಿರುವ ಮಿಥ್ಯಾಜ್ಞಾನದಿಂದ[2] ಬಾಧಿಸಲ್ಪಡುವದು ನಮಗೆ ಕಾಣಿಸು

---

1. ಕರ್ಮಗಳಿಗೆ ಬೇರೆಬೇರೆ ಫಲವನ್ನು ಹೇಳಿರುವದರಿಂದಲೂ, ಮುಕ್ತಿಗೆಂದು ಯಾವ ಕರ್ಮವನ್ನೂ ಹೇಳಿಲ್ಲವಾದ್ದರಿಂದಲೂ ಪ್ರವೃತ್ತಿಮಾತ್ರವೇ ಮಿಥ್ಯಾಜ್ಞಾನದಿಂದಾಗುವದಾದ್ದರಿಂದಲೂ ಮುಕ್ತಿಯಲ್ಲಿ ಕರ್ಮದ ಕಾರ್ಯವು ಯಾವದೂ ಇಲ್ಲವಾದ್ದರಿಂದಲೂ ಪರಮಪುರುಷಾರ್ಥವು ಪ್ರಾಪ್ಯವೆಂಬುದು ಅಜ್ಞಾನಮಾತ್ರದಿಂದಾಗಿರುವದರಿಂದಲೂ ಅಜ್ಞಾನವು ಅಜ್ಞಾನದಿಂದುಂಟಾದ ಕರ್ಮದಿಂದ ತೊಲಗಲಾರದಾದ್ದರಿಂದಲೂ ಸಮ್ಯಗ್ಜ್ಞಾನವೊಂದೇ ಅದನ್ನು ತೊಲಗಿಸಬಲ್ಲದಾದ್ದರಿಂದಲೂ ಕರ್ಮವು ಮುಕ್ತಿಸಾಧನವಲ್ಲ ಎಂದು ಒಟ್ಟರ್ಥ.

2. ಆವಿದ್ಯಕವಾದ ಲೌಕಿಕಪ್ರಮಾಣದಿಂದ ಎಂದರ್ಥ.

ತ್ತದೆಯಲ್ಲ ! ಏಕೆಂದರೆ ಪರಮಾರ್ಥಜ್ಞಾನವುಂಟಾದರೂ[1] ಕರ್ತೃತ್ವಭೋಕ್ತೃತ್ವ ರಾಗದ್ವೇಷಗಳು ಮುಂತಾದ ಅಜ್ಞಾನದಿಂದುಂಟಾದ ಪ್ರತ್ಯಯಗಳು ತೋರಿಕೊಳ್ಳುವವಲ್ಲ ! ಸಮ್ಯಗ್ಜ್ಞಾನವು ಬಾಧಿತವಾಗದಿದ್ದರೆ ಅದಕ್ಕೆ ವಿರುದ್ಧವಾದ (ಈ) ಪ್ರತ್ಯಯಗಳಿಗೆ ಸಂಭವವಿರಲಾರದಷ್ಟೆ ?

(ಪರಿಹಾರ) : ಇದು ಹಾಗಲ್ಲ . ಏಕೆಂದರೆ :

೩೮. ಅವಿದ್ಯೆಯು ಬಾಧಿತವಾಗಿರುವದರಿಂದ ವಿದ್ಯೆಯನ್ನು ಅದು ಬಾಧಿಸುವದೇ ಇಲ್ಲ . ಅದರ ವಾಸನೆಗಳು ವಿದ್ಯಾಸ್ಮೃತಿಗೆ ಅವಶ್ಯವಾಗಿ ಕಾರಣತ್ವವನ್ನು ಹೊಂದುತ್ತವೆ.[2]

## ಅವಿದ್ಯೆಯಿದ್ದಲ್ಲಿ ಸಂಸಾರವಿರುವದು

(ಮೂಲ)

'ಕರ್ಮಾಜ್ಞಾನಸಮುತ್ಥತ್ವಾತ್' (೧-೩, ೫) ಇತ್ಯುಕ್ತೋ ಹೇತುಃ । ತಸ್ಯ ಚ ಸಮರ್ಥನಂ ಪೂರ್ವಮೇವಾಭಿಹಿತಮ್ 'ಹಿತಂ ಸಂಪ್ರೇಪ್ಸತಾಮ್' (೧-೨೯) ಇತ್ಯಾದಿನಾ । ತದಭ್ಯುಚ್ಚಯಾರ್ಥಮ್ ಅವಿದ್ಯಾನ್ವಯೇನ ಚ ಸಂಸಾರಾನ್ವಯಂ[3] ಪ್ರದರ್ಶಯಿಷ್ಯಾಮಿ ಇತ್ಯತ ಆಹ–

1. ವೇದಾಂತವಾಕ್ಯದಿಂದ ಪರಮಾರ್ಥಜ್ಞಾನವುಂಟಾದರೂ ಎಂದರ್ಥ ; ವಾಕ್ಯಜನ್ಯಜ್ಞಾನವನ್ನು ಅಭ್ಯಾಸಮಾಡಿದಮೇಲೆಯೇ ಅವಿದ್ಯೆಯು ಹೋಗುವದೆಂದು ಭಾವ.

2. ಬಾಧಿತವಾದದ್ದು ಮತ್ತೆ ಎದ್ದುಕೊಳ್ಳುವದಾಗಲಿ ಬಾಧಕವನ್ನೇ ಬಾಧಿಸುವದಾಗಲಿ ಆಗಲಾರದು ಎಂಬುದು ಪೂರ್ವಾರ್ಧದ ಅರ್ಥ. ಅವಿದ್ಯಾವಾಸನೆಗಳು ಎದ್ದುಕೊಂಡರೂ ಅದರಿಂದ ವಿದ್ಯಾಸ್ಮೃತಿಯೂ ಉಂಟಾಗುತ್ತದೆಯಾಗಿ ಮತ್ತೂ ಅವು ಬಾಧಿತವೇ ಆಗುತ್ತದೆ ಎಂದು ಉತ್ತರಾರ್ಧದ ಅರ್ಥವು. ರಾಗದ್ವೇಷಾದಿಗಳು ತೋರಿಕೊಂಡರೂ ಬಾಧಿತವಾಗಿಯೇ ತೋರಿಕೊಳ್ಳುತ್ತವೆ ಎಂದು ಭಾವ. ಜ್ಞಾನಿಗೆ ಮತ್ತೆ ಸಾಂಸಾರಿಕಪ್ರತ್ಯಯಗಳುಂಟಾಗಲಾರವೆಂಬುದನ್ನು ಸೂ. ಭಾ. ೧-೧-೪, ಬೃ. ಭಾ. ೧-೪-೧೦ರಲ್ಲಿ ವಿವರಿಸಿದೆ.

3. 'ಸಂಸಾರಾನ್ವಯಿತ್ವಂ' ಎಂಬ ಪಾಠಕ್ಕಿಂತಲೂ ಇದು ಮೇಲು.

**ಬ್ರಾಹ್ಮಣ್ಯಾದ್ಯಾತ್ಮಕೇ ದೇಹೇ ಲಾತ್ವಾ ನಾತ್ಮೇತಿ ಭಾವನಾಮ್ ।**
**ಶ್ರುತೇಃ ಕಿಂಕರತಾಮೇತಿ ವಾಙ್ಮನಃಕಾಯಕರ್ಮಸು[1] ॥೩೯॥**

(ಅರ್ಥ)

'ಕರ್ಮವು ಅಜ್ಞಾನದಿಂದುಂಟಾಗಿರುವದರಿಂದ' (ಅಜ್ಞಾನನಿವರ್ತಕವಲ್ಲ) (೧-೩, ೫) ಎಂಬ ಹೇತುವನ್ನು ಹೇಳಿದ್ದಾಯಿತು. ಅದರ ಸಮರ್ಥನೆಯನ್ನು (ಭ್ರಾಂತಿಯಿಂದ) 'ಹಿತವನ್ನು ಪಡೆಯಬೇಕೆಂದಿಚ್ಛಿಸುವವರಿಗೂ' (೧-೨೯) ಮುಂತಾದ (ವಾಕ್ಯದಿಂದ) ಮೊದಲೇ ಹೇಳಿತ್ತು . ಅದರ ಅಭ್ಯುಚ್ಚಯಕ್ಕಾಗಿ[2] ಅವಿದ್ಯೆಯ ಅನ್ವಯದಿಂದ ಸಂಸಾರದ ಅನ್ವಯವನ್ನು ತೋರಿಸೋಣವೆಂದು ಅದಕ್ಕಾಗಿ ಹೇಳುತ್ತಾರೆ :

೨೯. ಬ್ರಾಹ್ಮಣ್ಯವೇ ಮುಂತಾದದ್ದರ ಸ್ವರೂಪವಾಗಿರುವ[3] ದೇಹದಲ್ಲಿ ತಾನೆಂಬ ಭಾವನೆಯನ್ನು ಸ್ವೀಕರಿಸಿ ಮನುಷ್ಯನ ವಾಙ್ಮನಃಕಾಯಕರ್ಮಗಳ ನಿಮಿತ್ತದಿಂದ ಶ್ರುತಿಯ ಕಿಂಕರನಾಗುವನು.[4]

(ಮೂಲ)

**ಯಸ್ಮಾತ್ ಕರ್ಮ ಅಜ್ಞಾನಸಮುತ್ಥಮೇವ ತಸ್ಮಾತ್ ತದ್ವ್ಯಾವೃತ್ತೌ ನಿವರ್ತತೇ ಇತ್ಯುಚ್ಯತೇ—**

**ದಗ್ಧಾಖಿಲಾಧಿಕಾರಶ್ಚೇದ್ ಬ್ರಹ್ಮಜ್ಞಾನಾಗ್ನಿನಾ ಮುನಿಃ ।**
**ವರ್ತಮಾನಃ ಶ್ರುತೇರ್ಮೂರ್ಧ್ನಿ ನೈವ ಸ್ಯಾದ್ವೇದಕಿಙ್ಕರಃ ॥೪೦॥**

---

1. 'ಕರ್ಮಭಿಃ' ಎಂಬ ಪಾಠವು ಬೇಕಿಲ್ಲ ; ನಿಮಿತ್ತಾರ್ಥದಲ್ಲಿ ಸಪ್ತಮಿ ಎಂದು ತಿಳಿದರೆ ಸಾಕಾಗಿದೆ.

2. ಮತ್ತೊಂದು ಯುಕ್ತಿಯಿಂದಲೂ ತೋರಿಸಿಕೊಡುವದಕ್ಕಾಗಿ.

3. ವರ್ಣಾಶ್ರಮಾದ್ಯಧ್ಯಾಸವುಳ್ಳ ಎಂದರ್ಥ.

4. ಭೃತ್ಯನಂತೆ ಕರ್ಮಗಳನ್ನು ಮಾಡಿ ಫಲವನ್ನು ಭೋಗಿಸುವದಕ್ಕೆ ಯತ್ನಿಸುತ್ತಾನೆ ಎಂದರ್ಥ. ಅವಿದ್ಯೆಯಿದ್ದಲ್ಲಿ ಸಂಸಾರವೂ ಇರುವದೆಂಬ ಅನ್ವಯವು ಇದೇ.

(ಅರ್ಥ)

ಕರ್ಮವು ಅಜ್ಞಾನದಿಂದಲೇ ಉಂಟಾಗಿರುವದರಿಂದ ಅದು ಹೋದರೆ (ಅದೂ) ಹೋಗುತ್ತದೆ ಎಂದು (ಈಗ) ಹೇಳುತ್ತಾರೆ [1] :

೪೦. ಬ್ರಹ್ಮಜ್ಞಾನವೆಂಬ ಬೆಂಕಿಯಿಂದ ಮುನಿಯಾದವನಿಗೆ ಸರ್ವಾಧಿಕಾರವೂ ಸುಟ್ಟುಹೋದರೆ (ಅವನು) ಶ್ರುತಿಯ ತಲೆಯಮೇಲೆ ಇರುತ್ತಾನಾದ್ದರಿಂದ ವೇದಕಿಂಕರನಾಗುವದೇ ಇಲ್ಲ.

(ಮೂಲ)

**ಅಥೇತರೋ ಘನತರಾವಿದ್ಯಾಪಟಲಸಂವೀತಾನ್ತಃಕರಣಃ, ಅಜ್ಞೋ ಕೃತಕರ್ತೃತ್ವಾದ್ಯಶೇಷಕರ್ಮಾಧಿಕಾರಕಾರಣಃ, ವಿಧಿಪ್ರತಿಷೇಧಚೋದನಾ ಸಂದಂಶೋಪದಷ್ಟಃ ಕರ್ಮಸು ಪ್ರವರ್ತಮಾನಃ–**

**ಶುಭೈಃ ಪ್ರಾಪ್ನೋತಿ ದೇವತ್ವಂ ನಿಷಿದ್ಧೈರ್ನಾರಕೀಂ ಗತಿಮ್ ।**
**ಉಭಾಭ್ಯಾಂ ಪುಣ್ಯಪಾಪಾಭ್ಯಾಂ ಮಾನುಷ್ಯಂ ಲಭತೇಽವಶಃ ॥೪೧॥**

(ಅರ್ಥ)

ಇನ್ನು ಮತ್ತೊಬ್ಬನಿದಾನಲ್ಲ, (ಅವನು) ದಟ್ಟವಾದ ಅವಿದ್ಯೆಯ ಪರೆಯು ಮುಸುಕಿರುವ ಅಂತಃಕರಣವುಳ್ಳವನಾಗಿ, ಕರ್ತೃತ್ವವೇ ಮುಂತಾದ ಎಲ್ಲಾ ಕರ್ಮಾಧಿಕಾರಕಾರಣಗಳನ್ನೂ [2] ಅಂಗೀಕರಿಸಿದವನಾಗಿ ವಿಧಿಪ್ರತಿಷೇಧ ಚೋದನೆ ಎಂಬ ಇಕ್ಕಳಕ್ಕೆ ಸಿಕ್ಕಿಕೊಂಡು ಕರ್ಮಗಳಲ್ಲಿ ತೊಡಗಿದವನಾಗಿ [3] :

---

1. ಅವಿದ್ಯೆ ಹೋದರೆ ಸಂಸಾರವೂ ಹೋಗುತ್ತದೆ ಎಂಬ ವ್ಯತಿರೇಕವಿದು. ಹಿಂದಿನ ಶ್ಲೋಕದಲ್ಲಿ 'ಅನ್ವಯ'ವೆಂಬ ಮಾತು ಉಪಲಕ್ಷಣವು. ಈ ಅನ್ವಯ ವ್ಯತಿರೇಕಗಳನ್ನು ಇನ್ನು ಮುಂದೆ ವಿವರಿಸಲಾಗುವದು.

2. ಅರ್ಥಿತ್ವ, ಸಮರ್ಥತ್ವ, ವಿದ್ವತ್ತ್ವ, ಅಪರ್ಯುದಸ್ತತ್ವ - ಮುಂತಾದ ಕಾರಣಗಳನ್ನು.

3. ನಾನು ಕರ್ತೃಭೋಕ್ತೃ, ಬ್ರಾಹ್ಮಣ್ಯಾದಿವರ್ಣಾಶ್ರಮದವನು, ನನಗೆ ಈ ಕರ್ಮವನ್ನು ಫಲಭೋಗಕ್ಕಾಗಿ ಹೇಳಿದೆ ಎಂದು ತಿಳಿದುಕೊಂಡು ಎಂದರ್ಥ.

೪೧. ಪುಣ್ಯ (ಕರ್ಮ)ಗಳಿಂದ ದೇವತ್ವವನ್ನೂ ನಿಷೇಧ(ಕರ್ಮ)ಗಳಿಂದ ನರಕದ ಗತಿಯನ್ನೂ ಪಡೆಯುತ್ತಾನೆ ; ಪುಣ್ಯಪಾಪಗಳೆರಡರಿಂದಲೂ ಮನುಷ್ಯನು ಮನುಷ್ಯತ್ವವನ್ನು ಅವಶನಾಗಿ ಪಡೆಯುತ್ತಾನೆ. [1]

(ಮೂಲ)

ಆಬ್ರಹ್ಮಸ್ತಮ್ಬಪರ್ಯನ್ತೇ ಘೋರೇ ದುಃಖೋದಧೌ [2] ಘಟೀಯನ್ತ್ರವತ್ ಆರೋಹಾವರೋಹನ್ಯಾಯೇನ ಅಧಮಮಧ್ಯಮೋತ್ತಮಸುಖದುಃಖ ಮೋಹವಿದ್ಯುಚ್ಚಪಲಸಂಪಾತದಾಯಿನೀಃ ವಿಚಿತ್ರಯೋನೀಃ ಚಣ್ಡೋತ್ಪಿಞ್ಜಲಕಶ್ವಸನವೇಗಾಭಿಹತಾಮ್ಭೋಧಿಮಧ್ಯವರ್ತಿಶುಷ್ಕಾಲಾಬುವತ್ ಶುಭಾಶುಭವ್ಯಾಮಿಶ್ರಕರ್ಮವಾಯುಸಮೀರಿತಃ –

**ಏವಂ ಚಙ್ಕ್ರಮ್ಯಮಾಣೋಽಯಮವಿದ್ಯಾಕಾಮಕರ್ಮಭಿಃ ।**
**ಪಾಶಿತೋ ಜಾಯತೇ ಕಾಮೀ ಮ್ರಿಯತೇಽಚಾಸುಖಾವೃತಃ ॥೪೨॥**

(ಅರ್ಥ)

ಬ್ರಹ್ಮನಿಂದಹಿಡಿದು ಸ್ತಂಬದವರೆಗಿನ ಘೋರವಾದ ದುಃಖಸಾಗರದಲ್ಲಿ ಘಟೀಯಂತ್ರದಂತೆ[3] ಏರಿಳಿತಗಳ ಕ್ರಮದಿಂದ ಅಧಮ, ಮಧ್ಯಮ, ಉತ್ತಮ ಸುಖದುಃಖಮೋಹಗಳ ಮಿಂಚಿನಂತೆ ತೋರಿಹಾರುವ ಸಂಪಾತವನ್ನು ಕೊಡುವ ವಿಚಿತ್ರಯೋನಿಗಳನ್ನು[4] ಪ್ರಚುರವಾದ ಆಕುಲವಾಗಿರುವ ವಾಯುವಿನ ವೇಗದ ಹೊಡೆತಕ್ಕೆ ಸಿಕ್ಕಿದ ಕಡಲ ನಡುವೆಯಿರುವ ಒಣ ಸೋರೇಬುರುಡೆಯಂತೆ ಒಳ್ಳೆಯದು, ಕೆಟ್ಟದ್ದು , ಎರಡೂ ಸೇರಿದ್ದು – ಎಂಬ ಕರ್ಮವಾಯುವಿನ ಪ್ರೇರಣೆಗೆ ಒಳಪಟ್ಟವನಾಗಿ –

---

1. ಜನ್ಮಗಳನ್ನು ಸ್ವತಂತ್ರನಾಗಿ ಪಡೆಯುವದಿಲ್ಲ , ಕರ್ಮವಶನಾಗಿ ಪಡೆಯುತ್ತಾನೆ.

2. 'ದುಃಖಮಹೋದಧೌ' ಪಾ॥

3. ರಾಟೆಯಂತೆ, ರಾಟೆಗೆ ಕಟ್ಟಿರುವ ಕೊಡದಂತೆ.

4. ಚಂಕ್ರಮ್ಯಮಾಣಃ - (ಒಂದರಿಂದೊಂದನ್ನು ಪಡೆಯುವನಾಗಿ) ಎಂಬ ಶ್ಲೋಕಸ್ಥಪದಕ್ಕೆ ಇದನ್ನು ಅನ್ವಯಿಸಿಕೊಳ್ಳಬೇಕು.

೪೨. ಹೀಗೆ (ಒಂದರಿಂದೊಂದು ಜನ್ಮವನ್ನು) ಪಡೆಯುತ್ತಾ ಅವಿದ್ಯಾ ಕಾಮಕರ್ಮಗಳಿಂದ ಬಿಗಿವಡೆದ ಈ ಕಾಮಿಯು (ಜನ್ಮಗಳನ್ನು) ಪಡೆಯುತ್ತಾ ದುಃಖಾವೃತನಾಗಿ ಮತ್ತೆಮತ್ತೆ ಹುಟ್ಟುತ್ತಾನೆ, ಸಾಯುತ್ತಾನೆ.

(ಮೂಲ)

ಯಥೋಕ್ತೇಽರ್ಥ ಆದರವಿಧಾನಾಯ ಪ್ರಮಾಣೋಪನ್ಯಾಸಃ –

ಶ್ರುತಿಶ್ಚೇಮಂ ಜಗಾದಾರ್ಥಂ ಕಾಮಸ್ಯ ವಿನಿವೃತ್ತಯೇ ।
ತನ್ಮೂಲಾ ಸಂಸೃತಿರ್ಯಸ್ಮಾತ್ ತನ್ನಾಶೋಽಜ್ಞಾನಹಾನತಃ ॥೪೩॥

(ಅರ್ಥ)

ಈ ಹೇಳಿದರ್ಥದಲ್ಲಿ ಆದರವನ್ನುಂಟುಮಾಡುವದಕ್ಕೆ ಪ್ರಮಾಣವನ್ನು ಹೇಳುತ್ತಾರೆ :

೪೩. ಶ್ರುತಿಯೂ ಈ ಅರ್ಥವನ್ನು[1] ಕಾಮದ ವಿನಿವೃತ್ತಿಗಾಗಿ ಹೇಳಿರುತ್ತದೆ. ಏಕೆಂದರೆ ಅದೇ ಸಂಸಾರಕ್ಕೆ ಕಾರಣವು ; ಅದರ ನಾಶವು ಅಜ್ಞಾನನಾಶದಿಂದ (ಆಗುತ್ತದೆ).

(ಮೂಲ)

ಕಾ ನ್ವಸೌ[2] ಶ್ರುತಿರಿತಿ ಚೇತ್ –

ಯದಾ ಸರ್ವೇ ಪ್ರಮುಚ್ಯನ್ತ ಇತಿನ್ವಿತಿ ಚ ವಾಜಿನಃ ।
ಕಾಮಬನ್ಧನಮೇವೇದಂ ವ್ಯಾಸೋಽಪ್ಯಾಹ ಪದೇ ಪದೇ ॥೪೪॥

(ಅರ್ಥ)

ಆ ಶ್ರುತಿಯಾದರೂ ಯಾವದು ? ಎಂದರೆ :

೪೪. 'ಯದಾ ಸರ್ವೇ ಪ್ರಮುಚ್ಯನ್ತೇ (ಕಾಮಾ ಯೇಽಸ್ಯ ಹೃದಿ ಶ್ರಿತಾಃ । ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ)' (ಬೃ ೪-೪-೭) ಯಾವಾಗ (ಇವನ ಹೃದಯದಲ್ಲಿರುವ ಕಾಮ)ಗಳೆಲ್ಲವೂ ಬಿಡುಗಡೆಯಾಗುವವೋ

1. ಅವಿದ್ಯೆಯಿಂದಾದ ಕಾಮವಿರುವವನು ಸಂಸಾರಬದ್ಧನಾಗುವನು. ಕಾಮ ನಿವೃತ್ತಿಯಾದವನು ಮುಕ್ತನಾಗುವನು.

2. 'ಕಾತ್ವಸೌ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

(ಆಗ ಮರ್ತ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುವನು), ಎಂದೂ '(ಪ್ರಾಪ್ಯಾನ್ತಂ ಕರ್ಮಣಸ್ತಸ್ಯ ಯತ್ಕಿಂಚೇಹ ಕರೋತ್ಯಯಮ್ । ತಸ್ಮಾಲ್ಲೋಕಾತ್ ಪುನರೇತ್ಯಸ್ಮೈ ಲೋಕಾಯ ಕರ್ಮಣೇ । ಇತಿ ನು ಕಾಮ ಯಮಾನೋಽಥಾಕಾಮಯಮಾನೋ ಯೋಽಕಾಮೋನಿಷ್ಕಾಮ ಆಪ್ತಕಾಮ ಆತ್ಮಕಾಮೋ ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ)' (ಬೃ. ೪-೪-೬) (ಇಲ್ಲಿ ಯಾವಯಾವ ಕರ್ಮವನ್ನು ಮಾಡಿರುತ್ತಾನೋ ಅದರ ಅಂತವನ್ನು ಪಡೆದುಕೊಂಡು ಆ ಲೋಕದಿಂದ ಮತ್ತೆ ಈ ಲೋಕಕ್ಕೆ ಮತ್ತೂ ಕರ್ಮವನ್ನು ಮಾಡುವದಕ್ಕಾಗಿ ಹಿಂತಿರುಗುವನು), ಇಂತು ಕಾಮಿಸುವವನು (ಗತಿಯನ್ನು ಹೊಂದುತ್ತಾನೆ, ಇನ್ನು ಕಾಮಿಸದೆ ಇರುವವನು : ಯಾವನು ಅಕಾಮನೋ ನಿಷ್ಕಾಮನೋ ಆಪ್ತಕಾಮನೋ ಆತ್ಮಕಾಮನೋ ಅವನ ಪ್ರಾಣಗಳು ಉತ್ಕ್ರಾಂತವಾಗುವದಿಲ್ಲ, ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಅಡಗುವನು)' ಎಂದೂ ವಾಜಸನೇಯಿಶಾಖೆಯವರು (ಪಠಿಸುತ್ತಾರೆ). 'ಕಾಮಬನ್ಧನಮೇವೇದಂ (ನಾನ್ಯದಸ್ತೀಹ ಬನ್ಧನಮ್ । ಕಾಮಬನ್ಧನಮುಕ್ತೋ ಹಿ ಬ್ರಹ್ಮಭೂಯಾಯ ಕಲ್ಪತೇ') (ಮೋ. ೨೫೧-೭) ಇದು ಕಾಮದಿಂದಲೇ ಬದ್ಧವಾಗಿದೆ ಎಂದು ವ್ಯಾಸರೂ (ಇಲ್ಲಿ ಮತ್ತೆ ಯಾವ ಬಂಧವೂ ಇಲ್ಲ. ಕಾಮ ಬಂಧದಿಂದ ಮುಕ್ತನಾದವನೇ ಬ್ರಹ್ಮಭಾವಕ್ಕೆ ಅರ್ಹನಾಗುತ್ತಾನೆ - ಎಂದು) ಹೆಜ್ಜೆಹೆಜ್ಜೆಗೂ[1] ಹೇಳಿರುತ್ತಾರೆ.

## ಕರ್ಮಗಳು ಪರಂಪರೆಯಿಂದ ಮೋಕ್ಷಕ್ಕೆ ಕಾರಣ

(ಮೂಲ)

ಏಷ ಸಂಸಾರಪನ್ಥಾ ವ್ಯಾಖ್ಯಾತಃ । ಅಥ ಇದಾನೀಂ ತದ್ವ್ಯಾವೃತ್ತಯೇ ಕರ್ಮಾಣಿ ಆರಾದುಪಕಾರಕತ್ವೇನ ಯಥಾ ಮೋಕ್ಷಹೇತುತಾಂ ಪ್ರತಿಪದ್ಯನ್ತೇ ತಥಾ ಅಭಿಧೀಯತೇ –

**ತಸ್ಯೈವಂ ದುಃಖತಪ್ತಸ್ಯ ಕಥಂಚಿತ್ ಪುಣ್ಯಶೀಲನಾತ್ ।**
**ನಿತ್ಯೇಹಾಕ್ಷಾಲಿತಧಿಯೋ ವೈರಾಗ್ಯಂ ಜಾಯತೇ ಹೃದಿ ॥೪೫॥**

---

1. ಭಾರತದಲ್ಲಿ ಕಾಮನಿವೃತ್ತಿಯಿಂದ ಬ್ರಹ್ಮಪ್ರಾಪ್ತಿಯಾಗುವದೆಂದು ಮತ್ತೆಮತ್ತೆ ಬೇರೆಬೇರೆಯ ಕಡೆಗಳಲ್ಲಿ ಹೇಳಿರುತ್ತದೆ.

(ಅರ್ಥ)

ಇಗೊ, (ನಾವು) ವಿವರಿಸಿರುವ ಇದೇ ಸಂಸಾರಮಾರ್ಗವು[1]. ಇನ್ನು ಈಗ ಅದನ್ನು ತಪ್ಪಿಸಿಕೊಳ್ಳುವದಕ್ಕೆ ಕರ್ಮಗಳು ದೂರದಿಂದ[2] ಉಪಕಾರಕವಾಗಿ ಹೇಗೆ ಮೋಕ್ಷಕಾರಣತ್ವವನ್ನು ಪಡೆಯುತ್ತವೆ ಎಂಬುದನ್ನು ಹೇಳಲಾಗುವದು :

೪೫. ಹೀಗೆ ದುಃಖತಪ್ತನಾದ ಅವನಿಗೆ ಹೇಗೋ ಪುಣ್ಯವನ್ನು ಮಾಡುವದರಿಂದ ನಿತ್ಯಕರ್ಮದಿಂದ ಚಿತ್ತವನ್ನು ತೊಳೆದುಕೊಂಡದ್ದರಿಂದ ಹೃದಯದಲ್ಲಿ ವೈರಾಗ್ಯವು ಹುಟ್ಟುತ್ತದೆ.

(ಮೂಲ)

ಕೀದೃಗ್ ವೈರಾಗ್ಯಮ್ ಉತ್ಪದ್ಯತ ಇತಿ ? ಉಚ್ಯತೇ –

**ನರಕಾದ್ಭೀರ್ಯಥಾಸ್ಯಾಭೂತ್ ತಥಾ ಕಾಮ್ಯಫಲಾದಪಿ ।**
**ಯಥಾರ್ಥದರ್ಶನಾತ್ ತಸ್ಮಾನ್ನಿತ್ಯಂ ಕರ್ಮ ಚಿಕೀರ್ಷತಿ ॥೪೬॥**

(ಅರ್ಥ)

ಎಂಥ ವೈರಾಗ್ಯವುಂಟಾಗುತ್ತದೆ ? ಎಂದರೆ ಹೇಳುತ್ತಾರೆ :

೪೬. ಇವನಿಗೆ ನರಕದಿಂದ ಹೇಗೆ ಅಂಜಿಕೆಯಾಗಿತ್ತೋ ಹಾಗೆಯೇ ಕಾಮ್ಯಫಲದಿಂದಲೂ, ಯಥಾರ್ಥವನ್ನು ಅರಿತುಕೊಂಡದ್ದರಿಂದ (ಆಗುತ್ತದೆ) ಯಾದ್ದರಿಂದ ನಿತ್ಯಕರ್ಮವನ್ನು[3] ಮಾಡುವದಕ್ಕೆ ಇಚ್ಛಿಸುತ್ತಾನೆ.

(ಮೂಲ)

ಏವಂ ನಿತ್ಯನೈಮಿತ್ತಿಕಕರ್ಮಾನುಷ್ಠಾನೇನ –

**ಶುಧ್ಯಮಾನಂ ತು ತಚ್ಚಿತ್ತಮೀಶ್ವರಾರ್ಪಿತಕರ್ಮಭಿಃ ।**
**ವೈರಾಗ್ಯಂ ಬ್ರಹ್ಮಲೋಕಾದೌ ವ್ಯನಕ್ತ್ಯಥ ಸುನಿರ್ಮಲಮ್ ॥೪೭॥**

---

1. ಅವಿದ್ಯೆಯಿಂದ ಕಾಮ, ಕಾಮದಿಂದ ಕರ್ಮ, ಅದರಿಂದ ಜನ್ಮಗ್ರಹಣ- ಎಂಬೀ ಮಾರ್ಗದಿಂದ ಸಂಸಾರವನ್ನು ಪಡೆಯುತ್ತಾನೆ ಎಂದರ್ಥ.

2. ಪರಂಪರೆಯಿಂದ.

3. ಇದು ಉಪಲಕ್ಷಣ ; ನೈಮಿತ್ತಿಕವನ್ನೂ ಸೇರಿಸಿಕೊಳ್ಳಬೇಕು.

(ಅರ್ಥ)

ಹೀಗೆ ನಿತ್ಯನೈಮಿತ್ತಕಕರ್ಮಗಳನ್ನು ಮಾಡುವದರಿಂದ :

೪೭. ಈಶ್ವರನಿಗೆ ಅರ್ಪಿಸಿದ ಕರ್ಮಗಳಿಂದ ಆ ಚಿತ್ತವು ಶುದ್ಧವಾಗಿ ಅತ್ಯಂತನಿರ್ಮಲವಾಗಲು ಬ್ರಹ್ಮಲೋಕಾದಿಗಳಲ್ಲಿ ವೈರಾಗ್ಯವನ್ನು ಹೊರ ತೋರಿಸುತ್ತದೆ.[1]

(ಮೂಲ)

ಯಸ್ಮಾತ್ ರಜಸ್ತಮೋಮಲೋಪಸಂಸೃಷ್ಟಮೇವ ಚಿತ್ತಂ ಕಾಮ ಬಡಿಶೇನ ಆಕೃಷ್ಯ ವಿಷಯದುರನ್ತಸೂನಾಸ್ಥಾನೇಷು ನಿಕ್ಷಿಪ್ಯತೇ, ತಸ್ಮಾತ್ ನಿತ್ಯನೈಮಿತ್ತಿಕಕರ್ಮಾನುಷ್ಠಾನಪರಿಮಾರ್ಜನೇನ ಅಪವಿದ್ಧರಜಸ್ತಮೋಮಲಂ ಪ್ರಸನ್ನಮ್ ಅನಾಕುಲಂ ಸಂಮಾರ್ಜಿತಸ್ಫಟಿಕಶಿಲಾಕಲ್ಪಂ ಬಾಹ್ಯವಿಷಯ ಹೇತುಕೇನ ಚ ರಾಗದ್ವೇಷಾತ್ಮಕೇನ ಅತಿಗ್ರಹಬಡಿಶೇನ ಅನಾಕೃಷ್ಯಮಾಣಂ ವಿಧೂತಾಶೇಷಕಲ್ಮಷಂ ಪ್ರತ್ಯಙ್ಮಾತ್ರಪ್ರವಣಂ ಚಿತ್ತದರ್ಪಣಮ್ ಅವತಿಷ್ಠತೇ । ಅತ ಇದಮಭಿಧೀಯತೇ –

**ವ್ಯುತ್ಥಿತಾಶೇಷಕಾಮೇಭ್ಯೋ ಯದಾ ಧೀರವತಿಷ್ಠತೇ ।**
**ತದೈವ ಪ್ರತ್ಯಗಾತ್ಮಾನಂ ಸ್ವಯಮೇವಾವಿವಿಕ್ಷತಿ ॥೪೮॥**

(ಅರ್ಥ)

ರಜಸ್ತಮಸ್ಸುಗಳೆಂಬ ಮಲದಿಂದ ಕೂಡಿಕೊಂಡಿರುವ ಚಿತ್ತವನ್ನು ಕಾಮವೆಂಬ ಮೀನುಗಾಳವು ಎಳೆದುಕೊಂಡು ವಿಷಯಗಳೆಂಬ ದುಃಖಾಂತ ವಾದ ಕೊಲೆಮನೆಗಳಲ್ಲಿ ಹಾಕಿ (ಕುಟ್ಟುತ್ತಿರುವದಷ್ಟೆ). ಆದ್ದರಿಂದ ನಿತ್ಯ ನೈಮಿತ್ತಕಕರ್ಮಗಳ ಅನುಷ್ಠಾನದಿಂದ ತೊಳೆದುಕೊಳ್ಳುವದರಿಂದ ರಜಸ್ತಮ ಗಳೆಂಬ ಮಲವನ್ನು ನೀಗಿಕೊಂಡು, ತಿಳಿಯಾಗಿ ಚಾಂಚಲ್ಯವಿಲ್ಲದ್ದಾಗಿ

1. ಹಿಂದೆ ಶುಭಕರ್ಮಗಳಿಗೆ ದೇವಾದ್ಯುತ್ತಮಜನ್ಮಪ್ರಾಪ್ತಿ ಎಂಬ ಫಲವನ್ನು ಹೇಳಿತ್ತು. ಈಗ ಈಶ್ವರಾರ್ಪಣಬುದ್ಧಿಯಿಂದ ಅವನ್ನು ಮಾಡಿದರೆ ಚಿತ್ತಶುದ್ಧ್ಯಾದಿಗಳ ಮೂಲಕ ಜ್ಞಾನಯೋಗ್ಯತೆಯೇ ಫಲವೆಂದು ಹೇಳಿದೆ. ಆದ್ದರಿಂದ ಪೂರ್ವಾಪರ ವಿರೋಧವಿಲ್ಲ. ಈ ಕರ್ಮಗಳು ಆವಿದ್ಯಕವೇ ಆದರೂ ಅವಿದ್ಯಾದಶೆಯಲ್ಲಿಯೇ ಇಲ್ಲಿ ಫಲಾಂತರವನ್ನು ಹೇಳಿರುವದರು ವಿರುದ್ಧವಲ್ಲ.

ತೊಳೆದ ಸ್ಫಟಿಕಶಿಲೆಯಂತಾಗಿ ಹೊರಗಿನ ವಿಷಯಗಳೆಂಬ ನಿಮಿತ್ತದಿಂದಾಗುವ ರಾಗದ್ವೇಷರೂಪವಾದ ಅತಿಗ್ರಹವೆಂಬ[1] ಮೀನುಗಾಳದ ಎಳೆತಕ್ಕೆ ಸಿಕ್ಕದೆ ಎಲ್ಲಾ ಕಲ್ಮಷವನ್ನೂ ತೊಳೆದುಕೊಂಡು ಒಳಗಿನ ಆತ್ಮನೊಬ್ಬನ ಕಡೆಗೇ ತಿರುಗಿಕೊಂಡು ಚಿತ್ತಕನ್ನಡಿಯು ನಿಂತುಬಿಡುತ್ತದೆ.[2] ಆದ್ದರಿಂದ ಇದನ್ನು ಹೇಳುತ್ತಾರೆ :

೪೮. ಯಾವಾಗ ಅಂತಃಕರಣವು ಎಲ್ಲಾ ಕಾಮಗಳನ್ನೂ ಬಿಟ್ಟೇಳುತ್ತದೆಯೋ ಆಗಲೇ ಪ್ರತ್ಯಗಾತ್ಮನನ್ನು ತಾನೇ ಹೊಗುವದಕ್ಕೆಳಸುವದು.[3]

(ಮೂಲ)

**ಅತಃಪರಮ್ ಅವಸಿತಾಧಿಕಾರಾಣಿ ಕರ್ಮಾಣಿ ಪ್ರತ್ಯಕ್ಪ್ರವಣಾತ್ಮಸೂನೌ ಕೃತಸಂಪ್ರತ್ತಿಕಾನಿ ಚರಿತಾರ್ಥಾನಿ ಸನ್ತಿ –**

**ಪ್ರತ್ಯಕ್ಪ್ರವಣತಾಂ ಬುದ್ಧೇಃ ಕರ್ಮಾಣ್ಯುತ್ಪಾದ್ಯ ಶುದ್ಧಿತಃ ।**
**ಕೃತಾರ್ಥಾನ್ಯಸ್ತಮಾಯಾನ್ತಿ ಪ್ರಾವೃಡನ್ತೇ ಘನಾ ಇವ ॥೪೯॥**

(ಅರ್ಥ)

ಇನ್ನು ಮೇಲೆ ತಮ್ಮ ಅಧಿಕಾರವು ಮುಗಿದದ್ದರಿಂದ ಕರ್ಮಗಳು ಪ್ರತ್ಯಕ್ಪ್ರವಣತ್ವವೆಂಬ ಮಗನಲ್ಲಿ ಸಂಪ್ರತ್ತಿಯನ್ನು[4] ಮಾಡಿ ಚರಿತಾರ್ಥಗಳಾಗಿ :

---

1. ಬೃ. ೩-೨-೧೮ ಸೂಚನೆಯಿದು. ಅಲ್ಲಿ ಕಾಮವೊಂದನ್ನೇ ಹೇಳಿದ್ದರೂ ದ್ವೇಷವನ್ನೂ ತೆಗೆದುಕೊಳ್ಳಬೇಕು ಎಂದು ಭಾವ. ಜೀವನನ್ನು ವಶಮಾಡಿಕೊಳ್ಳುವದರಿಂದ ಇಂದ್ರಿಯಗಳೂ ಮನಸ್ಸೂ ಗ್ರಹಗಳು ; ಅವುಗಳನ್ನೂ ವಶಪಡಿಸಿಕೊಳ್ಳುವುದರಿಂದ ವಿಷಯಗಳು ಅತಿಗ್ರಹಗಳು- ಎಂದು ಅಲ್ಲಿ ವರ್ಣಿಸಿದೆ.

2. ಚಿತ್ತದ ಕನ್ನಡಿ ಎಂಬ ಮಾತು ನಿರ್ಮಲತೆಯನ್ನು ತಿಳಿಸುತ್ತದೆ ; ನಿಂತು ಬಿಡುತ್ತದೆ ಎಂಬುದು ವಿಕ್ಷೇಪರಾಹಿತ್ಯವನ್ನು ತಿಳಿಸುತ್ತದೆ.

3. ಆತ್ಮನನ್ನು ತಿಳಿಯಬೇಕೆಂದು ಹಾತುವರಿಯಲು ಮೊದಲುಮಾಡುತ್ತದೆ ಎಂದರ್ಥ.

4. ಸಂಪ್ರತ್ತಿ ಎಂದರೆ ಸಾಯುವ ಕಾಲದಲ್ಲಿ ಅಥವಾ ಸಂನ್ಯಾಸಮಾಡುವ ಕಾಲದಲ್ಲಿ ತಂದೆಯು ತನ್ನ ಕರ್ಮಗಳನ್ನು ಪುತ್ರನಿಗೆ ಒಪ್ಪಿಸುವದು. ಬೃ. ೧-೧-೧೭ನ್ನೂ ಅದರ ವಾರ್ತಿಕವನ್ನೂ ನೋಡಿ. ಕರ್ಮಗಳಿಗೆ ಪ್ರತ್ಯಕ್ಪ್ರಣತ್ವವೇ ಕಾರ್ಯವು ; ಅಲ್ಲಿಂದ ಮುಂದಕ್ಕೆ ಅವುಗಳಿಂದಾಗಬೇಕಾಗಿರುವ ಜ್ಞಾನಜನನವನ್ನು ಪ್ರತ್ಯಕ್ಪ್ರವಣತೆಯೇ ಮಾಡುತ್ತದೆ. ಆದ್ದರಿಂದ ಪ್ರತ್ಯಕ್ಪ್ರವಣತೆ ಎಂಬ ಅವಾಂತರವ್ಯಾಪಾರದ್ವಾರದಿಂದ ಕರ್ಮಗಳು ಜ್ಞಾನಹೇತುವಾಗಿವೆ - ಎಂದರ್ಥ.

೪೯. ಕರ್ಮಗಳು ಬುದ್ಧಿಗೆ ಶುದ್ಧಿಯಿಂದ ಪ್ರತ್ಯಕ್ಪ್ರವಣತ್ವವನ್ನುಂಟುಮಾಡಿ ಕೃತಾರ್ಥಗಳಾಗಿ ಮಳೆಗಾಲದ ಕೊನೆಯಲ್ಲಿ ಮೋಡಗಳು (ಮರೆಯಾಗುವಂತೆ ತಾವೂ) ಮರೆಯಾಗುತ್ತವೆ.[1]

(ಮೂಲ)

ಯತೋ ನಿತ್ಯಕರ್ಮಾನುಷ್ಠಾನಸ್ಯ ಏಷ ಮಹಿಮಾ –

ತಸ್ಮಾನ್ಮುಮುಕ್ಷುಭಿಃ ಕಾರ್ಯಮಾತ್ಮಜ್ಞಾನಾಭಿಲಾಷಿಭಿಃ ।
ನಿತ್ಯಂ ನೈಮಿತ್ತಿಕಂ ಕರ್ಮ ಸದೈವಾತ್ಮವಿಶುದ್ಧಯೇ ॥೫೦॥

(ಅರ್ಥ)

ನಿತ್ಯಕರ್ಮಕ್ಕೆ[2] ಈ ಮಹಿಮೆಯಿರುವದಷ್ಟೆ :

೫೦. ಆದ್ದರಿಂದ ಆತ್ಮಜ್ಞಾನವನ್ನು ಬಯಸುವ ಮುಮುಕ್ಷುಗಳು ನಿತ್ಯನೈಮಿತ್ತಿಕಕರ್ಮಗಳನ್ನು ಚಿತ್ತಶುದ್ಧಿಗಾಗಿ ಯಾವಾಗಲೂ ಮಾಡುತ್ತಿರಬೇಕು.[3]

(ಮೂಲ)

ಯಥೋಕ್ತೇಽರ್ಥೇ ಸರ್ವಜ್ಞವಚನಂ ಪ್ರಮಾಣಮ್ –

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮ ಏವೇತಿ ಚ ಸ್ಮೃತಿಃ ॥೫೧॥

(ಅರ್ಥ)

(ಈ ಮೇಲೆ) ಹೇಳಿರುವ ಅರ್ಥಕ್ಕೆ ಸರ್ವಜ್ಞ(ನಾದ) ಭಗವಂತನ ವಚನವೇ ಪ್ರಮಾಣವು :

---

1. ಚಿತ್ತಶುದ್ಧಿವೈರಾಗ್ಯಪ್ರತ್ಯಕ್ಪ್ರವಣತೆಗಳುಂಟಾದ ಬಳಿಕ ಕರ್ಮಸಂನ್ಯಾಸವನ್ನೇ ಮಾಡತಕ್ಕದ್ದು ಎಂದರ್ಥ.

2. ನೈಮಿತ್ತಿಕಕರ್ಮವೂ ಇಲ್ಲಿ ವಿವಕ್ಷಿತ.

3. 'ಧರ್ಮಾನ್ನಪ್ರಮದಿತವ್ಯಮ್' (ತೈ. ೧-೧೧), 'ನ ತ್ಯಾಜ್ಯಂ ಕಾರ್ಯಮೇವ ತತ್' (ಗೀ. ೧೮-೫), 'ಸಙ್ಗಂ ತ್ಯಕ್ತ್ವಾತ್ಮಶುದ್ಧಯೇ' (ಗೀ. ೫-೧೧) ಮುಂತಾದ ಶ್ರುತಿಸ್ಮೃತಿಗಳಲ್ಲಿ ಕರ್ಮವನ್ನು ಮಾಡಬೇಕೆಂದು ಹೇಳಿರುವದು ಇದಕ್ಕೆ ಪ್ರಮಾಣ.

೫೧. ಯೋಗವನ್ನು ಏರಲಿಚ್ಛಿಸುವ ಮುನಿಗೆ ಕರ್ಮವು ಕಾರಣವೆನಿಸುತ್ತದೆ ; ಯೋಗವನ್ನೇರಿದಮೇಲೆ [1] ಅವನಿಗೇ ಶಮವೇ[2] (ಕಾರಣವೆನಿಸುತ್ತದೆ) - ಎಂದು ಸ್ಮೃತಿ(ಯಿದೆ).

(ಮೂಲ)

ನಿತ್ಯಕರ್ಮಾನುಷ್ಠಾನಾತ್ ಧರ್ಮೋತ್ಪತ್ತಿಃ, ಧರ್ಮೋತ್ಪತ್ತೇಃ ಪಾಪಹಾನಿಃ, ತತಶ್ಚಿತ್ತಶುದ್ಧಿಃ, ತತಃ ಸಂಸಾರಯಾಥಾತ್ಮ್ಯಾವಬೋಧಃ, ತತೋ ವೈರಾಗ್ಯಮ್, ತತೋ ಮುಮುಕ್ಷುತ್ವಮ್, ತತಸ್ತದುಪಾಯಪರ್ಯೇಷಣಮ್, ತತಃ ಸರ್ವಕರ್ಮತತ್ಸಾಧನಸಂನ್ಯಾಸಃ, ತತೋ ಯೋಗಾಭ್ಯಾಸಃ, ತತಶ್ಚಿತ್ತಸ್ಯ ಪ್ರತ್ಯಕ್ಪ್ರವಣತಾ, ತತಸ್ತತ್ತ್ವಮಸ್ಯಾದಿವಾಕ್ಯಾರ್ಥಪರಿಜ್ಞಾನಮ್, ತತೋಽವಿದ್ಯೋಚ್ಛೇದಃ, ತತಶ್ಚ ಸ್ವಾತ್ಮನ್ಯೇವಾವಸ್ಥಾನಮ್ । 'ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ' (ಬೃ. ೪-೪-೬), 'ವಿಮುಕ್ತಶ್ಚ ವಿಮುಚ್ಯತೇ' (ಕ. ೨-೨-೧) ಇತಿ[3] –

ಪಾರಂಪರ್ಯೇಣ ಕರ್ಮೈವಂ ಸ್ಯಾದವಿದ್ಯಾನಿವೃತ್ತಯೇ ।
ಜ್ಞಾನವನ್ನಾವಿರೋಧಿತ್ವಾತ್ ಕರ್ಮಾವಿದ್ಯಾಂ ನಿರಸ್ಯತಿ ॥೫೨॥

(ಅರ್ಥ)

ನಿತ್ಯಕರ್ಮವನ್ನು ಮಾಡುವದರಿಂದ ಪುಣ್ಯವುಂಟಾಗುವದು ; ಪುಣ್ಯವುಂಟಾದದ್ದರಿಂದ ಪಾಪವು ನಾಶವಾಗುವದು ; ಅದರಿಂದ ಚಿತ್ತಶುದ್ಧಿಯಾಗುವದು, ಅದರಿಂದ ಸಂಸಾರದ ನಿಜವು ಗೊತ್ತಾಗುವದು ; ಅದರಿಂದ ವೈರಾಗ್ಯವು, ಅದರಿಂದ ಮುಮುಕ್ಷುತ್ವವು ; ಆ (ಬಳಿಕ) ಆ (ಮೋಕ್ಷದ) ಉಪಾಯವನ್ನು ಹುಡುಕುವದು, ಆಮೇಲೆ ಸರ್ವಕರ್ಮಗಳನ್ನೂ ಅವುಗಳ ಸಾಧನಗಳನ್ನೂ[4] ಸಂನ್ಯಾಸಮಾಡುವದು, ಆಮೇಲೆ ಯೋಗಾಭ್ಯಾಸವು,

1. ಯೋಗಾನುಷ್ಠಾನಸಮರ್ಥನಾದಮೇಲೆ ಎಂದರ್ಥ.

2. ಸಂನ್ಯಾಸವೇ ಎಂದರ್ಥ. ಮೊದಲು ಕರ್ಮ, ಆಬಳಿಕ ಸಂನ್ಯಾಸ- ಇವು ಸಾಧನಗಳೆಂದು ಹಿಂದೆ ಹೇಳಿದ್ದಕ್ಕೆ ಪ್ರಮಾಣವಿದು.

3. 'ಇತಿ ಚ ಶ್ರುತೇಃ' ಎಂದಿದ್ದರೆ ಚೆನ್ನಾಗಿತ್ತೆಂದು ತೋರುತ್ತದೆ.

4. ಯಜ್ಞೋಪವೀತಾದಿಗಳನ್ನು .

ಆಮೇಲೆ ಪ್ರತ್ಯಕ್ಪ್ರವಣತೆಯುಂಟಾಗುವದು,[1] ಆಮೇಲೆ ತತ್ತ್ವಮಸಿ ಮುಂತಾದ ವಾಕ್ಯಾರ್ಥವನ್ನು ಸರಿಯಾಗಿ ತಿಳಿದುಕೊಳ್ಳುವದು, ಅದರಿಂದ ಅವಿದ್ಯೆಯು ನಾಶವಾಗುವದು.[2] ಮತ್ತು ಅದರಿಂದ ತನ್ನ ಸ್ವರೂಪದಲ್ಲಿಯೇ ನೆಲೆನಿಂತುಬಿಡುವದು. 'ಬ್ರಹ್ಮವೇ ಆಗಿದ್ದವನು ಬ್ರಹ್ಮದಲ್ಲಿ ಸೇರಿಹೋಗುತ್ತಾನೆ' (ಬೃ. ೪-೪-೬), 'ವಿಮುಕ್ತನಾಗಿದ್ದೇ ವಿಮುಕ್ತನಾಗುತ್ತಾನೆ' (ಕ. ೨-೨-೧) ಎಂಬೀ (ಶ್ರುತಿಗಳು ಇದಕ್ಕೆ ಪ್ರಮಾಣವು).

೫೨. ಹೀಗೆ ಪರಂಪರೆಯಿಂದ ಕರ್ಮವು ಅವಿದ್ಯೆಯ ನಾಶಕ್ಕೆ (ಹೇತು) ವಾಗುತ್ತದೆ. ಕರ್ಮವು ಜ್ಞಾನದಂತೆ (ನೇರಾಗಿಯೇ) ಅವಿದ್ಯೆಯನ್ನು ನಾಶಪಡಿಸಲಾರದು, ಏಕೆಂದರೆ (ಅದಕ್ಕೆ) ವಿರೋಧಿಯಲ್ಲ.

(ಮೂಲ)

**ನ ಚ ಕರ್ಮಣಃ ಕಾರ್ಯಮ್ ಅಣ್ವಪಿ ಮುಕ್ತೌ ಸಂಭಾವ್ಯತೇ ನಾಪಿ ಮುಕ್ತೌ ಯತ್ ಸಂಭವತಿ ತತ್ ಕರ್ಮಾಪೇಕ್ಷತೇ । ತದುಚ್ಯತೇ –**

**ಉತ್ಪಾದ್ಯಮಾಪ್ಯಂ ಸಂಸ್ಕಾರ್ಯಂ ವಿಕಾರ್ಯಂ ಚ ಕ್ರಿಯಾಫಲಮ್**
**ನೈವಂ ಮುಕ್ತಿರ್ಯತಸ್ತಸ್ಮಾತ್ ಕರ್ಮ ತಸ್ಯಾ ನ ಸಾಧನಮ್ ॥೫೩॥**

(ಅರ್ಥ)

ಕರ್ಮದ ಕಾರ್ಯವು ಒಂದಿಷ್ಟೂ ಮುಕ್ತಿಯಲ್ಲಿ ಆಗುವಂತಿಲ್ಲ, ಮುಕ್ತಿಯಲ್ಲಿ ಯಾವದು ಆಗಬಹುದೋ[3] ಅದು ಕರ್ಮವನ್ನು ಬಯಸುವದೂ ಇಲ್ಲ. ಇದನ್ನು (ಇಲ್ಲಿ) ಹೇಳುತ್ತಾರೆ :

೫೩. ಉತ್ಪಾದ್ಯ (ಉಂಟುಮಾಡತಕ್ಕದ್ದು), ಆಪ್ಯ (ಹೋಗಿ ಪಡೆಯತಕ್ಕದ್ದು), ಸಂಸ್ಕಾರ್ಯ (ಸರಿಪಡಿಸತಕ್ಕದ್ದು), ವಿಕಾರ್ಯ (ಮಾರ್ಪಡಿಸ

---

1. ಇಲ್ಲಿ ಹೇಳಿರುವ 'ಯೋಗಾಭ್ಯಾಸ', 'ಪ್ರತ್ಯಕ್ಪ್ರವಣತೆ'- ಇವುಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಆತ್ಮನನ್ನು ತಿಳಿದುಕೊಳ್ಳುವದೇ ಅವಿದ್ಯೆಯ ನಾಶವಾದರೂ ಅದನ್ನೇ ಬಿಡಿಸಿ ಸ್ಪಷ್ಟವಾಗಿ ಹೇಳಿದೆ ; ತಿಳಿದುಕೊಂಡಮೇಲೂ ಅವಿದ್ಯೆಯು ಇರುವದೆಂಬ ಅಭಿಪ್ರಾಯವಿಲ್ಲ. ಪೀಠಿಕೆಯನ್ನು ನೋಡಿ.

3. ಅವಿದ್ಯೆಯ ನಾಶ.

ತಕ್ಕದ್ದು) - (ಇವಿಷ್ಟು) ಕರ್ಮದ ಫಲವು. ಆದರೆ ಮುಕ್ತಿಯು ಹೀಗೆ (ಈ ನಾಲ್ಕರಲ್ಲಿ ಒಂದೂ) ಅಲ್ಲ; ಆದ್ದರಿಂದ ಕರ್ಮವು ಅದಕ್ಕೆ ಸಾಧನವಲ್ಲ.

## ಜ್ಞಾನವು ಮೋಕ್ಷಕ್ಕೆ ನಿರಪೇಕ್ಷಸಾಧನ

(ಮೂಲ)

ಏವಂ ತಾವತ್ ಕೇವಲಂ ಕರ್ಮ ಸಾಕ್ಷಾತ್ ಅವಿದ್ಯಾಪನುತ್ತಯೇ ನ ಪರ್ಯಾಪ್ತಮ್ ಇತಿ ಪ್ರಪಞ್ಚಿತಮ್ । ಮುಕ್ತೌ ಚ ಮುಮುಕ್ಷುಜ್ಞಾನ ತದ್ವಿಷಯಸ್ವಾಭಾವ್ಯಾನುರೋಧೇನ ಸರ್ವಪ್ರಕಾರಸ್ಯಾಪಿ ಕರ್ಮಣೋಽಸಂಭವ ಉಕ್ತೋ 'ಹಿತಂ ಸಂಪ್ರೇಪ್ಸತಾಮ್' (೧-೨೯) ಇತ್ಯಾದಿನಾ । ಯಾದೃಶಶ್ಚ ಆರಾದುಪಕಾರಕತ್ವೇನ ಜ್ಞಾನೋತ್ಪತ್ತೌ ಕರ್ಮಣಾಂ ಸಮುಚ್ಚಯಃ ಸಂಭವತಿ ತಥಾ ಪ್ರತಿಪಾದಿತಮ್ । ಅವಿದ್ಯೋಚ್ಛಿತ್ತೌ ತು ಲಬ್ಧಾತ್ಮಸ್ವಭಾವಸ್ಯ ಆತ್ಮಜ್ಞಾನಸ್ಯೈವ ಅಸಾಧಾರಣಂ ಸಾಧಕತಮತ್ವಂ ನಾನ್ಯಸ್ಯ ಪ್ರಧಾನಭೂತಸ್ಯ ಗುಣಭೂತಸ್ಯ ವಾ[1] ಇತ್ಯೇತದಧುನೋಚ್ಯತೇ । ತತ್ರ ಜ್ಞಾನಂ ಗುಣಭೂತಂ ತಾವದಹೇತುಃ ಇತ್ಯೇತದಾಹ –

ಸಂನಿಪತ್ಯ ನ ಚ ಜ್ಞಾನಂ ಕರ್ಮಾಜ್ಞಾನಂ ನಿರಸ್ಯತಿ ।
ಸಾಧ್ಯಸಾಧನಭಾವತ್ವಾದೇಕಕಾಲಾನವಸ್ಥಿತೇಃ ॥೫೪॥

(ಅರ್ಥ)

ಹೀಗೆ ಬರಿಯ ಕರ್ಮವು ನೇರಾಗಿ ಅವಿದ್ಯೆಯ ನಿವೃತ್ತಿಗೆ ಸಾಲದು ಎಂಬುದನ್ನು ವಿಸ್ತರಿಸಿದ್ದಾಯಿತು. ಮತ್ತು ಮುಕ್ತಿಗೆ ಯಾವ ಪ್ರಕಾರದ ಕರ್ಮವೂ (ಕಾರಣವೆಂಬುದು) ಹೊಂದುವದಿಲ್ಲವೆಂಬುದನ್ನು ಮುಮುಕ್ಷು, ಜ್ಞಾನ, ಆದರ ವಿಷಯ – ಇವುಗಳ ಸ್ವಭಾವವನ್ನನುಸರಿಸಿ (ವಿಚಾರ ಮಾಡು)ವದರಿಂದ 'ಹಿತಂ ಸಂಪ್ರೇಪ್ಸತಾಮ್' (೧-೨೯) ಎಂಬುದರಿಂದ

1. 'ಚ' ಎಂಬ ಮುದ್ರಿತಪುಸ್ತಕಪಾಠವನ್ನು ಹೀಗೆ ತಿದ್ದಿಕೊಂಡಿದೆ.

ಹಿಡಿದು ತಿಳಿಸಿದ್ದಾಯಿತು.[1] ಮತ್ತು ಜ್ಞಾನೋತ್ಪತ್ತಿಗೆ ಪರಂಪರೆಯಿಂದ ಉಪಕಾರವಾಗುವದಕ್ಕೆ ಎಂಥ ಕರ್ಮಸಮುಚ್ಚಯವು ಆಗಬಹುದು ಎಂಬುದನ್ನೂ ಹಾಗೆಯೇ ಪ್ರತಿಪಾದಿಸಿದ್ದಾಯಿತು.[2] ಅವಿದ್ಯೆಯ ನಾಶಕ್ಕೋ ಎಂದರೆ ಸ್ವರೂಪವನ್ನು ಪಡೆದುಕೊಂಡ ಆತ್ಮಜ್ಞಾನವೊಂದೇ ಅಸಾಧಾರಣವಾದ ಸಾಧಕತಮವಾಗಿರುತ್ತದೆಯೇ[3] ಹೊರತು, ಮತ್ತೆ ಯಾವದೂ ಪ್ರಧಾನವಾಗಿ ಅಥವಾ ಅಂಗವಾಗಿ (ಸಾಧನವಾಗ)ಲಾರದು ಎಂಬಿದನ್ನು ಈಗ ಹೇಳಲಾಗುವದು.

ಇದರೊಳಗೆ[4] ಅಂಗವಾದ ಜ್ಞಾನವು (ಅಜ್ಞಾನನಾಶಕ್ಕೆ) ಹೇತುವಲ್ಲ ಎಂಬುದನ್ನು ಮೊದಲು ಹೇಳುತ್ತಾರೆ :

೫೪. ಆದರೆ ಜ್ಞಾನವು ಕರ್ಮಕ್ಕೆ (ಅಂಗವಾಗಿ) ಸೇರಿಕೊಂಡು ಅಜ್ಞಾನವನ್ನು ನಾಶಗೊಳಿಸುವದಿಲ್ಲ. ಏಕೆಂದರೆ (ಅವೆರಡಕ್ಕೂ) ಸಾಧ್ಯಸಾಧನ ಭಾವವಿದೆಯಾಗಿ (ಅವೆರಡೂ) ಒಂದೇ ಕಾಲದಲ್ಲಿ ಇರುವದೇ ಇಲ್ಲ.[5]

---

1. ಮುಮುಕ್ಷುವಿನ ಸ್ವಭಾವವು ಪ್ರತ್ಯಗಾತ್ಮನ ಕಡೆಗೆ ತಿರುಗಿರುವ ಅಂತಃಕರಣವುಳ್ಳವನಾಗಿರುವಿಕೆ ; ಜ್ಞಾನದ ಸ್ವಭಾವವು ಪರಮಾರ್ಥವಸ್ತುವಿಷಯಕತ್ವ, ಉತ್ಪತ್ತಿಮಾತ್ರದಿಂದ ಅವಿದ್ಯೆಯನ್ನು ನಾಶಮಾಡುವ ಸಾಮರ್ಥ್ಯವುಳ್ಳದ್ದಾಗಿರುವಿಕೆ, ಅವಿದ್ಯಾತದ್ವಾಸನೆಗಳಿಂದ ಬಾಧ್ಯವಲ್ಲದಿರುವಿಕೆ -ಇವು ; ಆತ್ಮನ ಸ್ವಭಾವವು ನಿತ್ಯನಿವೃತ್ತದುಃಖನಾಗಿರುವಿಕೆ, ನಿತ್ಯಸುಖಾಭಿನ್ನನಾಗಿರುವಿಕೆ, ಸ್ವತಃಸಿದ್ಧನಾಗಿರುವಿಕೆ- ಇವು. ಈ ಸ್ವಭಾವವನ್ನು ಅನುಸರಿಸಿ ವಿಚಾರಮಾಡಿ ಯಾವ ಕರ್ಮವೂ ಮುಕ್ತಿಗೆ ಸಾಧನವಲ್ಲವೆಂದು ನಿಶ್ಚಿತವಾಗುತ್ತದೆ ಎಂದು ತಿಳಿಸಿದ್ದಾಯಿತು.

2. ಕರ್ಮಾಧಿಕಾರಕ್ಕೆ ಬೇಕಾದ ಕರ್ತೃತ್ವಾದಿಗಳಿರಬಹುದಾದ ಮಿಥ್ಯಾಜ್ಞಾನದೊಡನೆ ಕರ್ಮಕ್ಕೆ ಸಮುಚ್ಚಯವಾಗಬಹುದು ; ಅದರಿಂದ ಚಿತ್ತಶುದ್ಧ್ಯಾದಿಕ್ರಮದಿಂದ ಪರಂಪರೆಯಿಂದ ಜ್ಞಾನೋತ್ಪತ್ತಿಗೆ ಅದು ಕಾರಣವಾಗಬಹುದು- ಎಂದು ತಿಳಿಸಿದ್ದಾಯಿತು.

3. ಹುಟ್ಟಿದ ಮಾತ್ರದಿಂದ ಜ್ಞಾನವೊಂದೇ ಅಜ್ಞಾನವನ್ನು ನಾಶಗೊಳಿಸುತ್ತದೆಯಾಗಿ ಕರ್ಮವೂ ಹಾಗೆಯೇ ನಾಶಗೊಳಿಸಲಿ ಎಂಬ ವಿಕಲ್ಪವಿಲ್ಲ, ಪ್ರಸಂಖ್ಯಾನಾದಿಗಳ ಅಪೇಕ್ಷೆಯೂ ಇಲ್ಲ.

4. ಉಕ್ತವಿಷಯಗಳೊಳಗೆ.

5. ಕರ್ಮವು ಪರಂಪರೆಯಿಂದ ಜ್ಞಾನಕ್ಕೆ ಸಾಧನವು ಎಂದರ್ಥ. ಸಾಧ್ಯವೂ ಸಾಧನವೂ ಒಂದೇ ಕಾಲದಲ್ಲಿರುವದಿಲ್ಲವಾದ್ದರಿಂದ ಅವಕ್ಕೆ ಯಾವ ಬಗೆಯ ಸಮುಚ್ಚಯವೂ ಆಗಲಾರದು ಎಂದು ಭಾವ.

(ಮೂಲ)

ಸಮಪ್ರಧಾನಯೋರಪಿ ಅಸಂಭವ ಏವ –

**ಬಾಧ್ಯಬಾಧಕಭಾವಾಚ್ಚ ಪಞ್ಚಾಸ್ಯೋರಣಯೋರಿವ ।**
**ಏಕದೇಶಾನವಸ್ಥಾನಾನ್ನ ಸಮುಚ್ಚಯತಾ ತಯೋಃ ॥೫೫॥**

(ಅರ್ಥ)

ಸಮಪ್ರಧಾನವಾಗಿರುವ (ಅವೆರಡಕ್ಕೂ ಸಮುಚ್ಚಯವು) ಅಸಂಭವವೇ :

೫೫. ಮತ್ತು ಸಿಂಹಟಗರುಗಳಿಗಿರುವಂತೆ (ಅವಕ್ಕೆ) ಬಾಧ್ಯಬಾಧಕ ಭಾವವಿರುವದರಿಂದಲೂ[1] ಒಂದೇ ಕಡೆಯಲ್ಲಿ[2] (ಅವು) ಇರಲಾರವಾದ್ದರಿಂದಲೂ ಅವೆರಡಕ್ಕೂ ಸಮುಚ್ಚಯವಿಲ್ಲ.

(ಮೂಲ)

ಕುತೋ ಬಾಧ್ಯಬಾಧಕಭಾವಃ ? ಯಸ್ಮಾತ್ –

**ಅಯಥಾವಸ್ತ್ವವಿದ್ಯಾ ಸ್ಯಾದ್ವಿದ್ಯಾ ತಸ್ಯಾ ವಿರೋಧಿನೀ ।**
**ಸಮುಚ್ಚಯಸ್ತಯೋರೇವಂ ರವಿಶಾರ್ವರಯೋರಿವ ॥೫೬॥**

(ಅರ್ಥ)

ಬಾಧ್ಯಬಾಧಕಭಾವವು ಹೇಗೆ ? ಹೇಗೆಂದರೆ :

೫೬. ಅವಿದ್ಯೆಯು ಯಥಾವಸ್ತು (ಜ್ಞಾನ)ವಲ್ಲ, ವಿದ್ಯೆಯು ಅದಕ್ಕೆ ವಿರುದ್ಧವಾದುದ್ದು– ಹೀಗಿರುವದರಿಂದ ಅವೆರಡಕ್ಕೂ ಸಮುಚ್ಚಯವೆಂಬುದು ಸೂರ್ಯನಿಗೂ ಕತ್ತಲೆಗೂ (ಸಮುಚ್ಚಯವಾಗುವಂತೆ ಅಸಂಭವವೇ).

(ಮೂಲ)

**ತಸ್ಮಾತ್ ಅಕಾರಕಬ್ರಹ್ಮಾತ್ಮನಿ ಪರಿಸಮಾಪ್ತಾವಬೋಧಸ್ಯ ಅಶೇಷ ಕರ್ಮಚೋದನಾನಾಮ್ ಅಚೋದ್ಯಸ್ವಾಭಾವ್ಯಾತ್ ಕುಣ್ಠತಾ । ಕಥಮ್ ? ತದಭಿಧೀಯತೇ –**

1. ಸಾಧ್ಯಸಾಧನಭಾವವೇ ಅಲ್ಲದೆ ಬಾಧ್ಯಬಾಧಕಭಾವವೂ ಸಮುಚ್ಚಯಕ್ಕೆ ವಿರೋಧಿ. ಈ ಬಾಧ್ಯಬಾಧಕಭಾವವೆಂಬ ಹೇತುವು ಸರ್ವವಿಧವಾದ ಸಮುಚ್ಚಯ ವಿರೋಧಕ್ಕೂ ಹೊಂದುತ್ತದೆ.

2. ಒಬ್ಬನೇ ಪುರುಷನಲ್ಲಿ, ಒಂದೇ ಕಾಲದಲ್ಲಿ, ಇವೆರಡೂ ಇರಲಾರವಾದ್ದರಿಂದಲೂ ಎಂದರ್ಥ.

ಬೃಹಸ್ಪತಿಸವೇ ಯದ್ವತ್ ಕ್ಷತ್ರಿಯೋ ನ ಪ್ರವರ್ತತೇ ।
ಬ್ರಾಹ್ಮಣತ್ವಾದ್ಯಹಂಮಾನೀ ವಿಪ್ರೋ ವಾ ಕ್ಷತ್ರಕರ್ಮಣಿ ॥೫೭॥

ಯಥಾಯಂ ದೃಷ್ಟಾನ್ತ ಏವಂ ದಾರ್ಷ್ಟಾನ್ತಿಕೋಽಪಿ ಇತ್ಯೇತದಾಹ–

ವಿದೇಹೋ ವೀತಸಂದೇಹೋ ನೇತಿನೇತ್ಯವಬೋಧಿತಃ[1] ।
ದೇಹಾದ್ಯನಾತ್ಮದೃಕ್ತದ್ವತ್ ತತ್ಕ್ರಿಯಾಂ ವೀಕ್ಷತೇಽಪಿ ನ ॥೫೮॥

(ಅರ್ಥ)

ಆದ್ದರಿಂದ ಅಕಾರಕವಾದ[2] ಬ್ರಹ್ಮಾತ್ಮನಲ್ಲಿ ಜ್ಞಾನವುಂಟಾದವನಿಗೆ ಎಲ್ಲಾ ಬಗೆಯ ಕರ್ಮಚೋದನೆ ಮೊಂಡಾಗುವವು.[3] ಏಕೆಂದರೆ (ಅವನು) ಚೋದನೆಗೆ ತಕ್ಕದ್ದಲ್ಲದ ಸ್ವಭಾವವಿರುವವನಾಗಿರುತ್ತಾನೆ.[4] ಹೇಗೆ ? ಎಂದರೆ ಅದನ್ನು ಹೇಳುತ್ತಾರೆ :

೫೭. ಬೃಹಸ್ಪತಿಸವನದಲ್ಲಿ ಹೇಗೆ ಕ್ಷತ್ರಿಯನು ತೊಡಗುವದಿಲ್ಲವೋ,[5] ಅಥವಾ ಬ್ರಾಹ್ಮಣತ್ವವೇ ಮುಂತಾದವುಗಳಲ್ಲಿ[6] ಅಭಿಮಾನವಿರುವ ವಿಪ್ರನು ಕ್ಷತ್ರಿಯನ ಕರ್ಮದಲ್ಲಿ ಹೇಗೆ (ತೊಡಗುವದಿಲ್ಲವೋ)[7]

ಈ ದೃಷ್ಟಾಂತವು ಹೇಗೋ ದಾರ್ಷ್ಟಾಂತಿಕವೂ ಹಾಗೆ ಎಂಬುದನ್ನು ಹೇಳುತ್ತಾರೆ :

---

1. 'ಅವಶೇಷಿತಃ' ಎಂಬ ಪಾಠಕ್ಕಿಂತ ಇದು ಉತ್ತಮ.

2. ಕಾರಕವೆಂಬುದು ಉಪಲಕ್ಷಣವು ; ಕ್ರಿಯಾಕಾರಕಫಲರಹಿತವಾದ ಎಂದರ್ಥ.

3. ಬಂಡೆಯ ಮೇಲೆ ಪ್ರಯೋಗಿಸಿದ ಕತ್ತಿಯಂತೆ ನಿರ್ವ್ಯಾಪಾರವಾಗುವವು ಎಂದರ್ಥ.

4. ಅನಿಯೋಜ್ಯಸ್ವಭಾವದವನಾಗಿರುತ್ತಾನೆ ಎಂದರ್ಥ. ಇದನ್ನು ಮಾಡು ಎಂದು ನಿಯೋಗಿಸುವದಕ್ಕೆ ತಕ್ಕವನು ಕ್ರಿಯಾಕಾರಕಫಲಬುದ್ಧಿಯುಳ್ಳವನು.

5. ಬೃಹಸ್ಪತಿಸವನಕ್ಕೆ ಬ್ರಾಹ್ಮಣನೇ ಅಧಿಕಾರಿ, ಕ್ಷತ್ರಿಯನಲ್ಲ.

6. ಬ್ರಾಹ್ಮಣ್ಯ, ವೈಶ್ಯತ್ವ- ಮುಂತಾದವುಗಳಲ್ಲಿ.

7. ಕ್ಷತ್ರಿಯನಿಗೇ ಹೇಳಿರುವ ರಾಜಸೂಯವೇ ಮುಂತಾದವುಗಳಲ್ಲಿ ಬ್ರಾಹ್ಮಣನೂ ವೈಶ್ಯನೂ ತೊಡಗುವದಿಲ್ಲ.

೫೮. ದೇಹರಹಿತನೂ ಸಂಶಯಗಳನ್ನು ಕಳೆದುಕೊಂಡವನೂ 'ಇದಲ್ಲ, ಇದಲ್ಲ' ಎಂಬ ಶ್ರುತಿಯಿಂದ ತಿಳಿವಳಿಕೆಯನ್ನು ಸಂಪಾದಿಸಿಕೊಂಡವನೂ[1] ಅದರಂತೆ ದೇಹಾದಿಗಳಲ್ಲಿ ಆತ್ಮದೃಷ್ಟಿಯಿಲ್ಲದವನೂ[2] (ಆದ ಜ್ಞಾನಿಯು) ಅವುಗಳ ಕ್ರಿಯೆಯನ್ನು ಕಣ್ಣೆತ್ತಿಯೂ ನೋಡುವದಿಲ್ಲ.

(ಮೂಲ)

ತಸ್ಯಾರ್ಥಸ್ಯ ಆವಿಷ್ಕರಣಾರ್ಥಮ್ ಉದಾಹರಣಮ್ –

**ಮೃತ್ಸ್ನೇಭಕೇ ಯಥೇಭತ್ವಂ ಶಿಶುರಧ್ಯಸ್ಯ ವಲ್ಗತಿ ।**
**ಅಧ್ಯಸ್ಯಾತ್ಮನಿ ದೇಹಾದೀನ್ ಮೂಢಸ್ತದ್ವದ್ ವಿಚೇಷ್ಟತೇ ॥೫೯॥**

(ಅರ್ಥ)

ಈ ಅರ್ಥವನ್ನು ಸ್ಪಷ್ಟಗೊಳಿಸುವದಕ್ಕಾಗಿ[3] ಉದಾಹರಣೆಯನ್ನು (ಹೇಳುತ್ತಾರೆ) :

೫೯. ಮಣ್ಣಿನ ಆನೆಯಲ್ಲಿ ಹೇಗೆ (ನಿಜವಾದ)ಗಜತ್ವವನ್ನು ಅಧ್ಯಾಸ ಮಾಡಿಕೊಂಡು ಹುಡುಗನು ವ್ಯವಹರಿಸುತ್ತಾನೋ ಅದರಂತೆ ಆತ್ಮನಲ್ಲಿ ದೇಹವೇ ಮುಂತಾದವುಗಳನ್ನು ಅಧ್ಯಾಸಮಾಡಿಕೊಂಡು ಮೂಢನು ವ್ಯವಹರಿಸುತ್ತಾನೆ.

(ಮೂಲ)

ನ ಚ ವಯಂ ಜ್ಞಾನಕರ್ಮಣೋಃ ಸರ್ವತ್ರೈವ ಸಮುಚ್ಚಯಂ ಪ್ರತ್ಯಾಚಕ್ಷ್ಮಹೇ । ಯತ್ರ ಪ್ರಯೋಜ್ಯಪ್ರಯೋಜಕಭಾವೋ ಜ್ಞಾನಕರ್ಮಣೋಃ, ತತ್ರ ನಾಸ್ಮತ್ಪಿತ್ರಾಪಿ ಶಕ್ಯತೇ ನಿವಾರಯಿತುಮ್ । ತತ್ರ ವಿಭಾಗ ಪ್ರದರ್ಶನಾಯ ಉದಾಹರಣಂ ಪ್ರದರ್ಶ್ಯತೇ –

---

1. ಅನಾತ್ಮವಿಕಲ್ಪಗಳನ್ನೆಲ್ಲ ಅಲ್ಲಗಳೆಯುವ ನೇತಿನೇತಿಶ್ರುತಿಯಿಂದ ಎಚ್ಚತ್ತ ಜ್ಞಾನಿಯು.
2. ದೇಹವು ಮಿಥ್ಯೆಯೆಂದು ತಿಳಿದಬಳಿಕ ಅದರಲ್ಲಿ ಆತ್ಮಬುದ್ಧಿಯಿರುವದಿಲ್ಲ.
3. ದೇಹಾದಿರಹಿತನಿಗೆ ಕರ್ಮವಿಲ್ಲವೆಂಬುದನ್ನು ವ್ಯತಿರೇಕದೃಷ್ಟಾಂತದಿಂದ ಸ್ಪಷ್ಟಗೊಳಿಸುವದಕ್ಕಾಗಿ.

ಸ್ಥಾಣುಂ ಚೋರಧಿಯಾಲಾಯ ಭೀತೋ ಯದ್ವತ್ ಪಲಾಯತೇ ।
ಬುದ್ಧ್ಯಾದಿಭಿಸ್ತಥಾತ್ಮಾನಂ ಭ್ರಾನ್ತೋಽಧ್ಯಾರೋಪ್ಯ ಚೇಷ್ಟತೇ ॥೬೦॥

(ಅರ್ಥ)

ಇದಲ್ಲದೆ ನಾವು ಜ್ಞಾನಕರ್ಮಗಳಿಗೆ ಎಲ್ಲೆಲ್ಲಿಯೂ ಸಮುಚ್ಚಯವನ್ನು ಆಗದೆನ್ನುವದಿಲ್ಲ. ಎಲ್ಲಿ ಜ್ಞಾನಕರ್ಮಗಳಿಗೆ ಪ್ರಯೋಜ್ಯಪ್ರಯೋಜಕಭಾವ ವಿರುವದೋ,[1] ಅಲ್ಲಿ ನಮ್ಮಪ್ಪನಿಂದಲೂ (ಸಮುಚ್ಚಯವನ್ನು) ತಪ್ಪಿಸುವದು ಆಗುವದಿಲ್ಲ. ಇಲ್ಲಿ ವಿಂಗಡಿಸುವದಕ್ಕಾಗಿ ಉದಾಹರಣೆಯನ್ನು ತಿಳಿಸುತ್ತಾರೆ :

೬೦. ಮೋಟುಮರವನ್ನು ಕಳ್ಳನೆಂಬ ಬುದ್ಧಿಯಿಂದ ಗ್ರಹಿಸಿ ಅಂಜಿಕೊಂಡು ಹೇಗೆ ಓಡ್ತುತಾನೋ, ಹಾಗೆ ಆತ್ಮನನ್ನು ಬುದ್ಧ್ಯಾದಿಗಳೆಂದು ಭ್ರಾಂತನಾದವನು ಅಧ್ಯಾರೋಪಮಾಡಿಕೊಂಡು ವ್ಯವಹರಿಸುತ್ತಾನೆ.[2]

(ಮೂಲ)

ಏವಂ ಯತ್ರ ಯತ್ರ ಜ್ಞಾನಕರ್ಮಣೋಃ ಪ್ರಯೋಜ್ಯಪ್ರಯೋಜಕ ಭಾವಃ ತತ್ರ ಸರ್ವತ್ರಾಯಂ ನ್ಯಾಯಃ । ಯತ್ರ ತು ನ ಸಮಕಾಲಂ ನಾಪಿ ಕ್ರಮೇಣ ಉಪಪದ್ಯತೇ ಸಮುಚ್ಚಯಃ ಸ ವಿಷಯ ಉಚ್ಯತೇ –

ಸ್ಥಾಣೋಃ ಸತತ್ತ್ವವಿಜ್ಞಾನಂ ಯಥಾ ನಾಙ್ಗಂ ಪಲಾಯನೇ ।
ಆತ್ಮನಸ್ತತ್ತ್ವವಿಜ್ಞಾನಂ ತದ್ವನ್ನಾಙ್ಗಂ ಕ್ರಿಯಾವಿಧೌ ॥೬೧॥

---

1. ಜ್ಞಾನವು ಪ್ರಯೋಜಕಹೇತು ; ಕರ್ಮವು ಪ್ರಯೋಜ್ಯ, ಅದರಿಂದಾಗುವ ಕಾರ್ಯ - ಹೀಗಿರುವದೋ ಎಂದರ್ಥ.

2. ಮೋಟುಮರವೂ ಕಳ್ಳನೂ ಜ್ಞೇಯಗಳಾದ್ದರಿಂದ ಅವುಗಳಿಗೆ ಅನ್ಯೋನ್ಯಾಧ್ಯಾಸವಾಗಬಹುದು ; ಆದರೆ ಆತ್ಮನು ಜ್ಞಾತೃ, ದೇಹಾದಿಗಳು ಜ್ಞೇಯ - ಹೀಗಿರುವದರಿಂದ ಹೇಗೆ ಅಧ್ಯಾಸ ? ಎಂದು ಆಕ್ಷೇಪಿಸಬಾರದು. ದೇಹಸತ್ಯತ್ವವಾದಿಗಳು ಜನ್ಮವೃದ್ಧಿಕ್ಷಯಾದಿಗಳನ್ನು ಆತ್ಮನಲ್ಲಿ ಅಧ್ಯಾಸಮಾಡುವದುಂಟೆಂದು ಒಪ್ಪಿರುವಂತೆ ನಾವೂ ಬುದ್ಧಿಯ ಅನಾತ್ಮಧರ್ಮಗಳನ್ನೆಲ್ಲ ಆತ್ಮನಲ್ಲಿ ಅಧ್ಯಾಸಮಾಡುತ್ತಾರೆಂದು ಒಪ್ಪಬಹುದಾಗಿದೆ. ಇವನು ಕಳ್ಳನು ಎಂಬಂತೆ ನಾನು ಬುದ್ಧಿಯು ಎಂಬ ಅಧ್ಯಾಸವಾಗಿಲ್ಲವಾದರೂ ನಾನು ಸಂಶಯವಂತನು ಎಂದು ಅಧ್ಯಾಸವು ಅನುಭವದಲ್ಲಿದೆ - ಎಂದು ಭಾವ.

(ಅರ್ಥ)

ಹೀಗೆ ಎಲ್ಲೆಲ್ಲಿ ಜ್ಞಾನಕರ್ಮಗಳಿಗೆ ಪ್ರಯೋಜ್ಯಪ್ರಯೋಜಕಭಾವವಿರುವದೋ ಅಲ್ಲೆಲ್ಲ ಇದೇ ನ್ಯಾಯ(ವಿರುವದು). ಆದರೆ ಎಲ್ಲಿ ಸಮಕಾಲದಲ್ಲಾಗಲಿ ಕ್ರಮದಿಂದಲಾಗಲಿ ಸಮುಚ್ಚಯವಾಗುವದಿಲ್ಲವೋ ಆ ವಿಷಯವನ್ನು ಹೇಳುತ್ತೇವೆ.

೬೧. ಮೋಟುಮರದ ತತ್ತ್ವಜ್ಞಾನವು ಹೇಗೆ ಓಡುವದಕ್ಕೆ ಅಂಗವಲ್ಲವೋ ಹಾಗೆಯೇ ಆತ್ಮತತ್ತ್ವವಿಜ್ಞಾನವೂ ಕರ್ಮವನ್ನು ಮಾಡುವದಕ್ಕೆ ಅಂಗವಲ್ಲ.[1]

(ಮೂಲ)

**ಯಸ್ಮಾದ್ ಗುಣಸ್ಯೈತತ್ಸ್ವಾಭಾವ್ಯಮ್–**

**ಯದ್ಧಿ ಯಸ್ಯಾನುರೋಧೇನ ಸ್ವಭಾವಮನುವರ್ತತೇ ।**
**ತತ್ ತಸ್ಯ ಗುಣಭೂತಂ ಸ್ಯಾನ್ನ ಪ್ರಧಾನಾದ್ ಗುಣೋ ಯತಃ ॥೬೨॥**

(ಅರ್ಥ)

ಏಕೆಂದರೆ ಗುಣಕ್ಕೆ[2] ಈ ಸ್ವಭಾವವಿರುತ್ತದೆ :

೬೨. ಯಾವದು ಯಾವದರ ಸ್ವಭಾವವನ್ನನುಸರಿಸಿರುತ್ತದೆಯೋ ಅದು ಅದಕ್ಕೆ ಗುಣಭೂತವಾಗಿರಬಹುದು. ಏಕೆಂದರೆ ಗುಣವು ಪ್ರಧಾನವನ್ನು ತಿನ್ನುವದಾಗಿರುವದಿಲ್ಲ.[3]

(ಮೂಲ)

**ಯಸ್ಮಾತ್ –**

**ಕರ್ಮಪ್ರಕರಣಾಕಾಙ್ಕ್ಷಿ ಜ್ಞಾನಂ ಕರ್ಮಗುಣೋ ಭವೇತ್ ।**
**ಯದ್ಧಿ ಪ್ರಕರಣೇ ಯಸ್ಯ ತತ್ ತದಙ್ಗಂ ಪ್ರಚಕ್ಷತೇ ॥೬೩॥**

---

1. ಏಕೆಂದರೆ ಇವೆರಡೂ ಸಮ್ಯಗ್ಜ್ಞಾನವಾಗಿವೆ. ಮಿಥ್ಯಾಜ್ಞಾನವೇ ಕರ್ಮಕ್ಕೆ ಅಂಗ.

2. ಗುಣವೆಂದರೆ ಇಲ್ಲಿ ಅಂಗ.

3. ಅಂಗವು ಪ್ರಧಾನಕ್ಕೆ ಉಪಕಾರಿಯಾಗಿರಬೇಕು, ಅದಕ್ಕೆ ವಿಘಾತಕವಾಗಿರಬಾರದು. ಆದ್ದರಿಂದ ಕ್ರಿಯಾಕಾರಕಫಲವಿಭಾಗವನ್ನು ತೊಡೆದುಹಾಕುವ ಆತ್ಮಜ್ಞಾನವು ಕರ್ಮಾಂಗವಾಗಲಾರದು.

**ಸ್ವರೂಪಲಾಭಮಾತ್ರೇಣ ಯತ್ತ್ವವಿದ್ಯಾಂ ನಿಹನ್ತಿ ನಃ ।**
**ನ ತದಙ್ಗಂ ಪ್ರಧಾನಂ ವಾ ಜ್ಞಾನಂ ಸ್ಯಾತ್ ಕರ್ಮಣಃ ಕ್ವಚಿತ್ ॥೬೪॥**

(ಅರ್ಥ)

ಏಕೆಂದರೆ :

೬೩-೬೪. ಕರ್ಮಪ್ರಕರಣವನ್ನು ಬಯಸುವ ಜ್ಞಾನವು ಕರ್ಮಕ್ಕೆ ಗುಣವಾಗಬಹುದು. ಏಕೆಂದರೆ ಯಾವದು ಯಾವದರ ಪ್ರಕರಣದಲ್ಲಿರುವದೋ ಅದನ್ನು ಅದರ ಅಂಗವೆನ್ನುವರು. ಆದರೆ ಹುಟ್ಟಿದ ಮಾತ್ರದಿಂದ ನಮ್ಮ ಅವಿದ್ಯೆಯನ್ನೇ ಯಾವದು ನಾಶಮಾಡುತ್ತದೆಯೋ ಆ ಜ್ಞಾನವು ಕರ್ಮಕ್ಕೆ ಅಂಗವೂ ಆಗಲಾರದು, ಪ್ರಧಾನವೂ ಆಗಲಾರದು.[1]

(ಮೂಲ)

ಸಮುಚ್ಚಯಪಕ್ಷವಾದಿನಾಪಿ ಅವಶ್ಯಮೇತದಭ್ಯುಪಗನ್ತವ್ಯಮ್ । ತಸ್ಮಾತ್ –

**ಅಜ್ಞಾನಮನಿರಾಕುರ್ವಜ್ಜ್ಞಾನಮೇವ ನ ಸಿಧ್ಯತಿ ।**
**ವಿಪನ್ನಕಾರಕಗ್ರಾಮಂ ಜ್ಞಾನಂ ಕರ್ಮ ನ ಢೌಕತೇ ॥೬೫॥**

(ಅರ್ಥ)

ಸಮುಚ್ಚಯಪಕ್ಷವಾದಿಯೂ ಅವಶ್ಯವಾಗಿ ಇದನ್ನು ಒಪ್ಪಬೇಕು. ಏಕೆಂದರೆ :

೬೫. ಅಜ್ಞಾನವನ್ನು ತೊಲಗಿಸದೆ ಜ್ಞಾನವೇ ಸಿದ್ಧಿಸುವಂತಿಲ್ಲ[2]. ಕಾರಕಸಮೂಹವನ್ನೇ ನಾಶಮಾಡಿದ ಜ್ಞಾನವು ಕರ್ಮವನ್ನು ಮುಟ್ಟಲಾರದು.

(ಮೂಲ)

ಇದಂ ಚಾಪರಂ ಕಾರಣಂ ಜ್ಞಾನಕರ್ಮಣೋಃ ಸಮುಚ್ಚಯನಿಬರ್ಹಿ –

**ಹೇತುಸ್ವರೂಪಕಾರ್ಯಾಣಿ ಪ್ರಕಾಶತಮಸೋರಿವ ।**
**ವಿರೋಧೀನಿ ತತೋ ನಾಸ್ತಿ ಸಾಙ್ಗತ್ಯಂ ಜ್ಞಾನಕರ್ಮಣೋಃ ॥೬೬॥**

---

1. ೧-೩೬ರಲ್ಲಿ ಹೇಳಿದ್ದನ್ನೇ ಇಲ್ಲಿ ನೆನಪಿಗೆ ತಂದು ಜ್ಞಾನವು ಅಭ್ಯಾಸಾದಿಗಳನ್ನು ಬಯಸಿಯೇ ಅಜ್ಞಾನವನ್ನು ನಾಶಪಡಿಸುತ್ತದೆ ಎಂಬ ಪಕ್ಷವನ್ನು ತಳ್ಳಿಹಾಕಿದೆ.

2. ಆದ್ದರಿಂದ ಜ್ಞಾನದ ಜೊತೆಗೂ ಅಜ್ಞಾನವಿರಲಾರದು.

(ಅರ್ಥ)

ಇದು ಜ್ಞಾನಕರ್ಮಗಳ ಸಮುಚ್ಚಯವನ್ನು ನಾಶಗೊಳಿಸುವದಕ್ಕೆ ಇನ್ನೊಂದು ಕಾರಣವು :

೬೬. (ಇವೆರಡರ) ಹೇತು, ಸ್ವರೂಪ, ಕಾರ್ಯ– ಇವು ಬೆಳಕು ಕತ್ತಲೆಗಳಂತೆ (ಒಂದಕ್ಕೊಂದು) ವಿರುದ್ಧವಾಗಿರುತ್ತವೆ[1]. ಆದ್ದರಿಂದ ಜ್ಞಾನ ಕರ್ಮಗಳಿಗೆ ಸಂಬಂಧವೇ ಇಲ್ಲ[2].

## ಏಕದೇಶಿಗಳಿಗೆ ಸಮ್ಮತವಾದ ಸಮುಚ್ಚಯದ ಖಂಡನೆ

(ಮೂಲ)

ಏವಮುಪಸಂಹೃತೇ ಕೇಚಿತ್ ಸ್ವಸಂಪ್ರದಾಯಬಲಾವಷ್ಟಮ್ಭಾತ್ ಆಹುಃ । ಯದೇತದ್ ವೇದಾನ್ತವಾಕ್ಯಾತ್ 'ಅಹಂ ಬ್ರಹ್ಮ' ಇತಿ ವಿಜ್ಞಾನಂ ಸಮುತ್ಪದ್ಯತೇ ತನ್ನೈವ ಸ್ವೋತ್ಪತ್ತಿಮಾತ್ರೇಣ ಅಜ್ಞಾನಂ ನಿರಸ್ಯತಿ । ಕಿಂ ತರ್ಹಿ ಅಹನ್ಯಹನಿ ದ್ರಾಘೀಯಸಾ ಕಾಲೇನ ಉಪಾಸೀನಸ್ಯ ಸತೋ ಭಾವ-ನೋಪಚಯಾತ್ ನಿಶ್ಶೇಷಮ್ ಅಜ್ಞಾನಮ್ ಅಪಗಚ್ಛತಿ । 'ದೇವೋ ಭೂತ್ವಾ ದೇವಾನಪ್ಯೇತಿ' (ಬೃ. ೪-೧-೨) ಇತಿ ಶ್ರುತೇಃ ಇತಿ । ಅಪರೇ ತು ಬ್ರುವತೇ । ವೇದಾನ್ತವಾಕ್ಯಜನಿತಮ್ 'ಅಹಂ ಬ್ರಹ್ಮ' ಇತಿ ವಿಜ್ಞಾನಂ ಸಂಸರ್ಗಾತ್ಮ ಕತ್ವಾತ್ ಆತ್ಮವಸ್ತುಯಾಥಾತ್ಮ್ಯಾವಗಾಹ್ಯೇವ ನ ಭವತಿ । ಕಿಂ ತರ್ಹಿ ಏತದೇವ ಗಙ್ಗಾಸ್ರೋತೋವತ್ ಸತತಮ್ ಅಭ್ಯಸ್ಯತಃ ಅನ್ಯದೇವ ಅವಾಕ್ಯಾರ್ಥಾತ್ಮಕಂ ವಿಜ್ಞಾನಾನ್ತರಮ್ ಉತ್ಪದ್ಯತೇ । ತದೇವ

---

1. ಕರ್ಮಕ್ಕೆ ಹೇತು ಅಜ್ಞಾನರಾಗದ್ವೇಷಗಳು ; ಜ್ಞಾನಕ್ಕೆ ವಸ್ತುತಂತ್ರವಾದ ಪ್ರಮಾಣ ; ಕರ್ಮಕ್ಕೆ ಸ್ವರೂಪವು ಪ್ರವೃತ್ತಿನಿವೃತ್ತಿರೂಪವಾಗಿರುವದು, ಜ್ಞಾನಕ್ಕೆ ಸ್ವರೂಪವು ವಸ್ತು ವ್ಯಂಜನಸಮರ್ಥವಾಗಿರುವದು. ಕರ್ಮಕ್ಕೆ ಕಾರ್ಯವು ಉತ್ಪಾದ್ಯಾದಿಚತುರ್ವಿಧ, ಜ್ಞಾನಕ್ಕೆ ಅಜ್ಞಾನನಾಶಕತ್ವ.

2. ಇವೆರಡೂ ಕೂಡಿರುವ ಹಾಗೆಯೇ ಇಲ್ಲ, ಇನ್ನು ಸಮುಚ್ಚಯಾನುಷ್ಠಾನದ ಆಶೆಯೆಲ್ಲಿಂದ ಬಂತು ? - ಎಂದು ಭಾವ.

ಅಶೇಷಾಜ್ಞಾನತಿಮಿರೋತ್ಸಾರಿ[1] । 'ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ' (ಬೃ. ೪-೪-೨೧) ಇತಿ ಶ್ರುತೇಃ ಇತಿ । ಅಸ್ಯ ಪಕ್ಷದ್ವಯಸ್ಯ ನಿವೃತ್ತಯೇ ಇದಮಭಿಧೀಯತೇ–

**ಸಕೃತ್ಪ್ರವೃತ್ತ್ಯಾ ಮೃದ್ನಾತಿ ಕ್ರಿಯಾಕಾರಕರೂಪಭೃತ್ ।**
**ಅಜ್ಞಾನಮಾಗಮಜ್ಞಾನಂ ಸಾಙ್ಗತ್ಯಂ ನಾಸ್ತ್ಯತೋಽನಯೋಃ ॥೬೭॥**

(ಅರ್ಥ)

ಹೀಗೆಂದು ಉಪಸಂಹಾರಮಾಡಲಾಗಿ ಕೆಲವರು ತಮ್ಮ ಸಂಪ್ರದಾಯದ ಬಲವನ್ನಾಶ್ರಯಿಸಿ[2] (ಹೀಗೆಂದು) ಹೇಳುತ್ತಾರೆ : ವೇದಾಂತವಾಕ್ಯದಿಂದ ನಾನು ಬ್ರಹ್ಮವು ಎಂಬ ವಿಜ್ಞಾನವಾಗುತ್ತದೆಯಷ್ಟೆ, ಇದು ತಾನು ಹುಟ್ಟಿದ ಮಾತ್ರದಿಂದ ಅಜ್ಞಾನವನ್ನು ತೊಲಗಿಸುವದಿಲ್ಲ. ಮತ್ತೇನೆಂದರೆ ದಿನದಿನವೂ ಬಹು ದೀರ್ಘಕಾಲದವರೆಗೆ ಉಪಾಸನೆಮಾಡುತ್ತಿದ್ದರೆ ಭಾವನೆಯು ಹೆಚ್ಚುವದರಿಂದ ನಿಶ್ಶೇಷವಾಗಿ ಅಜ್ಞಾನವು ತೊಲಗುತ್ತದೆ. 'ದೇವನೇ ಆಗಿ ದೇವತೆಗಳಲ್ಲಿ ಲಯವಾಗುತ್ತಾನೆ' (ಬೃ. ೪-೧-೨) ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.[3]

ಮತ್ತೆ ಕೆಲವರು ಹೇಳುತ್ತಾರೇನೆಂದರೆ, ವೇದಾಂತವಾಕ್ಯಜನಿತವಾದ 'ನಾನು ಬ್ರಹ್ಮವು' ಎಂಬ ಜ್ಞಾನವು ಸಂಸರ್ಗಾತ್ಮಕವಾಗಿರುವದರಿಂದ[4] ಆತ್ಮವಸ್ತುವಿನ ಯಾಥಾತ್ಮ್ಯವನ್ನು ತಿಳಿಸುವದೇ ಇಲ್ಲ. ಮತ್ತೇನೆಂದರೆ

---

1. ಇದರ ಮುಂದೆ ''ಇತಿ'' ಬೇಕಿಲ್ಲ.

2. ಅವರಿಗೆ ಶ್ರುತಿಯುಕ್ತ್ಯನುಭವಗಳ ಬಲವಿಲ್ಲ ಎಂದರ್ಥ.

3. ದೇವನೇ ತಾನೆಂಬ ಸಾಕ್ಷಾತ್ಕಾರವನ್ನು ಹೊಂದಿದರೆ ದೇವತೆಗಳಲ್ಲಿ ಲಯವಾಗುತ್ತಾನೆ ಎಂದು ಶ್ರುತಿಯಿರುವದರಿಂದ 'ನಾನು ಬ್ರಹ್ಮವು' ಎಂಬ ಸಾಕ್ಷಾತ್ಕಾರವನ್ನು ಉಪಾಸನೆಯ ಬಲದಿಂದ ಪಡೆದುಕೊಂಡರೆ ಅಜ್ಞಾನವಿನಾಶವೂ ಮೋಕ್ಷವೂ ಆಗುವದು ಎಂದರ್ಥ. ಯೋ. ಸೂ. ೧-೧-೪ರಲ್ಲಿ ದೀರ್ಘಕಾಲಾಭ್ಯಾಸದಿಂದ ಧ್ಯಾನವು ಗಟ್ಟಿಯಾಗಿ ನಿಲ್ಲುತ್ತದೆ ಎಂದು ಹೇಳಿರುವದನ್ನು ಇದಕ್ಕೆ ಹೋಲಿಸಿರಿ.

4. ಮೀಮಾಂಸಕರ ಮತದಲ್ಲಿ ವಾಕ್ಯವು ಪದಾರ್ಥಗಳ ಸಂಸರ್ಗವನ್ನು ಹೇಳುತ್ತದೆ ; ಪದಗಳು ತಮ್ಮತಮ್ಮ ಅರ್ಥವನ್ನು ಮಾತ್ರ ಹೇಳುತ್ತವೆ. ಆದರೆ ಆತ್ಮಸ್ವರೂಪದಲ್ಲಿ ಯಾವ ಸಂಸರ್ಗವೂ ಇಲ್ಲ, ಅದು ಅಖಂಡರೂಪವಾಗಿರುತ್ತದೆ.

ಈ (ಜ್ಞಾನ)ವನ್ನೇ ಗಂಗೆಯ ಪ್ರವಾಹದಂತೆ ಸತತವಾಗಿ ಅಭ್ಯಾಸವನ್ನು ಮಾಡಿದರೆ (ಅದರಿಂದ) ಅವಾಕ್ಯಾರ್ಥಾತ್ಮಕವಾದ ಮತ್ತೊಂದು ಜ್ಞಾನವೇ ಉಂಟಾಗುತ್ತದೆ.[1] ಅದೇ ನಿಶ್ಶೇಷವಾಗಿ ಅಜ್ಞಾನದ ಕತ್ತಲೆಯನ್ನು ತೊಲಗಿಸುವದು. 'ಬ್ರಾಹ್ಮಣನು ಅರಿತುಕೊಂಡು ಪ್ರಜ್ಞೆಯನ್ನು ಮಾಡಿಕೊಳ್ಳಬೇಕು'[2] (ಬೃ. ೪-೪-೨೧) ಎಂಬ ಶ್ರುತಿ (ಪ್ರಮಾಣ)ದಿಂದ (ಇದು ಸಿದ್ಧವಾಗುತ್ತದೆ)[3]. ಈ ಎರಡು (ಬಗೆಯ) ಪಕ್ಷವನ್ನೂ[4] ತಳ್ಳುವದಕ್ಕಾಗಿ ಇದನ್ನು ಹೇಳುತ್ತಾರೆ :

೬೭. ಒಂದು ಸಲ ತೊಡಗಿದ ಮಾತ್ರದಿಂದಲೇ ಕ್ರಿಯಾಕಾರಕರೂಪವನ್ನು ಧರಿಸಿದ ಅಜ್ಞಾನವನ್ನು ಆಗಮಜ್ಞಾನವು ನಾಶಮಾಡುತ್ತದೆ, ಆದ್ದರಿಂದ ಈ (ಎರಡಕ್ಕೂ) ಸಾಂಗತ್ಯವಿಲ್ಲ[5].

---

1. ಅವಾಕ್ಯಾರ್ಥಾತ್ಮಕವೆಂದರೆ ಸಂಸರ್ಗವನ್ನು ಬೋಧಿಸದ, ಅಖಂಡ ವಸ್ತುವನ್ನು ತಿಳಿಸುವ ಜ್ಞಾನ.

2. ಸಂಸರ್ಗರೂಪವಾದ ಅರ್ಥವನ್ನು ವಾಕ್ಯದಿಂದ ತಿಳಿದುಕೊಂಡು ಅಭ್ಯಾಸದಿಂದ ಸಾಕ್ಷಾತ್ಕಾರರೂಪವಾದ ಪ್ರಜ್ಞೆಯನ್ನು ಸಂಪಾದಿಸಿಕೊಳ್ಳಬೇಕು ಎಂದು ಪೂರ್ವಪಕ್ಷದ ಅರ್ಥ.

3. ಅರಿತುಕೊಂಡು ಎಂಬುದು ವಾಕ್ಯಜ್ಞಾನವನ್ನೂ ಪ್ರಜ್ಞೆಯನ್ನು ಮಾಡಿಕೊಳ್ಳಬೇಕು ಎಂದು ಸಾಕ್ಷಾತ್ಕಾರವನ್ನೂ ಹೇಳುತ್ತದೆ ಎಂದರ್ಥ. ಮೊದಲನೆಯ ಮತದಂತೆ ವಾಕ್ಯಜ್ಞಾನವು ಉಪಾಸನೆಗೆ ಬೇಕಾದದ್ದು ; ಉಪಾಸನೆಯಿಂದ ಸಾಕ್ಷಾತ್ಕಾರ ಮೂಲಕವಾಗಿ ವಿದೇಹಮುಕ್ತಿಯಾಗುತ್ತದೆ. ಈ ಪಕ್ಷದಲ್ಲಿ ವಾಕ್ಯಜ್ಞಾನಾಭ್ಯಾಸದಿಂದ ವಿಶಿಷ್ಟವಾದ ಒಂದು ಪ್ರಜ್ಞೆಯನ್ನು ಸಂಪಾದಿಸಿಕೊಂಡು ಅಜ್ಞಾನವನ್ನು ತೊಲಗಿಸಿಕೊಂಡರೆ ಇಲ್ಲಿಯೇ ಮುಕ್ತಿಯಾಗುತ್ತದೆ.

4. ವಾಕ್ಯಜ್ಞಾನಾನಂತರದಲ್ಲಿಯೂ ಅನುಷ್ಠೇಯವಿದೆ ಎಂದು ವಾದಿಗಳನ್ನೆಲ್ಲ ತಳ್ಳುವದಕ್ಕಾಗಿ ಎಂದು ಅರ್ಥಮಾಡಿಕೊಳ್ಳಬೇಕು. ಪೀಠಿಕೆಯನ್ನು ನೋಡಿ.

5. ಜ್ಞಾನಕ್ಕೂ ಅಜ್ಞಾನಕಾರ್ಯವಾದ ಕರ್ಮಕ್ಕೂ ಸಾಹಚರ್ಯವಿಲ್ಲ ಎಂದರ್ಥ. ''ವಿಜ್ಞಾಯ ಪ್ರಜ್ಞಾಮ್'' ಎಂಬ ಶ್ರುತಿಗೆ ಸಿದ್ಧಾಂತಸಮ್ಮತವಾದ ಅರ್ಥವನ್ನು ಬೃಹದಾರಣ್ಯಕ ವಾರ್ತಿಕದಲ್ಲಿ ಹೇಳಿರುವಂತೆ ಮಾಡಿಕೊಳ್ಳಬೇಕು ಎಂದು ಭಾವ. ಪೀಠಿಕೆಯನ್ನು ನೋಡಿ.

## ನಾನಾರಸಬ್ರಹ್ಮವಾದದಲ್ಲಿಯೂ ಸಮುಚ್ಚಯವು ಹೊಂದದು

(ಮೂಲ)

ಏವಂ ತಾವದನಾನಾತ್ವೇ ಬ್ರಹ್ಮಣಿ ಜ್ಞಾನಕರ್ಮಣೋಃ ಸಮುಚ್ಚಯೋ ನಿರಾಕೃತಃ । ಅಥಾಧುನಾ ಪಕ್ಷಾನ್ತರಾಭ್ಯುಪಗಮೇನಾಪಿ ಪ್ರತ್ಯವಸ್ಥಾನೇ ಪೂರ್ವವತ್ ಅನಾಶ್ವಾಸೋ ಯಥಾ ತಥಾಭಿಧೀಯತೇ –

ಅನುತ್ಸಾರಿತನಾನಾತ್ವಂ ಬ್ರಹ್ಮ ಯಸ್ಯಾಪಿ ವಾದಿನಃ ।
ತನ್ಮತೇನಾಪಿ ದುಃಸಾಧ್ಯೋ ಜ್ಞಾನಕರ್ಮಸಮುಚ್ಚಯಃ ॥೬೮॥

(ಅರ್ಥ)

ಹೀಗೆ ಬ್ರಹ್ಮವು ನಾನಾತ್ವರಹಿತವಾದದ್ದು[1] (ಎಂಬ ಪಕ್ಷ)ದಲ್ಲಿ ಜ್ಞಾನಕರ್ಮಗಳ ಸಮುಚ್ಚಯವನ್ನು ನಿರಾಕರಿಸಿದ್ದಾಯಿತು. ಇನ್ನು ಈಗ (ಬ್ರಹ್ಮವು ನಾನಾರಸವೆಂಬ) ಪಕ್ಷಾಂತರವನ್ನು ಒಪ್ಪಿ ಎದುರುನಿಂತರೂ ಮೊದಲಿನಂತೆಯೇ (ಸಮುಚ್ಚಯದಲ್ಲಿ) ವಿಶ್ವಾಸವಾಗಲಾರದೆಂಬುದು ಹೇಗೆ ಎಂಬುದನ್ನು ಹೇಳುತ್ತಾರೆ :

೬೮. ಯಾವ ವಾದಿಯ (ಮತದಲ್ಲಿ) ಬ್ರಹ್ಮವು ನಾನಾತ್ವವನ್ನು ಬಿಟ್ಟಿಲ್ಲವೋ[2] ಅವನ ಮತದಂತೆಯೂ ಜ್ಞಾನಕರ್ಮಗಳ ಸಮುಚ್ಚಯವನ್ನು ಸಾಧಿಸುವದು ಆಗದು.

---

1. ಉಪ್ಪಿನ ಹರಳಿನಂತೆ ಏಕರಸರಾಗಿರುವದು.

2. ಈ ಮತವನ್ನು ಭರ್ತೃಪ್ರಪಂಚರು ಒಪ್ಪಿದ್ದರು. ಇದನ್ನು ಬೃಹದಾರಣ್ಯಕದ ಭಾಷ್ಯವಾರ್ತಿಕದಲ್ಲಿಯೂ ಬ್ರಹ್ಮಸೂತ್ರಭಾಷ್ಯದಲ್ಲಿಯೂ ಖಂಡಿಸಿದೆ. ಪೀಠಿಕೆಯನ್ನು ನೋಡಿ.

(ಮೂಲ)

ತಸ್ಯ ವಿಭಾಗೋಕ್ತಿರ್ದೂಷಣಪ್ರಜ್ಞಪ್ತಯೇ –

**ಬ್ರಹ್ಮಾತ್ಮಾ ವಾ ಭವೇತ್ತಸ್ಯ ಯದಿ ವಾನಾತ್ಮರೂಪಕಮ್ ।**
**ಆತ್ಮಾನಾಪ್ತಿರ್ಭವೇನ್ಮೋಹಾದಿತರಸ್ಯಾಪ್ಯನಾತ್ಮನಃ ॥೬೯॥**

(ಅರ್ಥ)

ಅದನ್ನು (ಮೂರು ಬಗೆಯಿಂದ) ವಿಂಗಡಿಸಿ ಹೇಳುವದು ದೂಷಣದ ವಿಭಾಗವು ತಿಳಿಯಲೆಂದು :

೬೯. ಅವನ ಮತದಲ್ಲಿ ಬ್ರಹ್ಮವು (ತನ್ನ) ಆತ್ಮವೇ ಆಗಿರಬೇಕು, ಅಥವಾ ಅನಾತ್ಮರೂಪದ್ದಾಗಿರಬೇಕು. (ಅಲ್ಲಿ) ಆತ್ಮ (ವಾದ ಬ್ರಹ್ಮದ) ಅನಾಪ್ತಿಯು ಮೋಹದಿಂದ ಆಗಬಹುದು. ಬೇರೆಯಾಗಿರುವ ಅನಾತ್ಮ (ವಾದ ಬ್ರಹ್ಮದ ಅನಾಪ್ತಿಯೂ ಮೋಹದಿಂದಲೇ ಆಗಿರಬಹುದು)[1].

(ಮೂಲ)

ತತ್ರ ಯದಿ ತಾವದ್ ವಾಸ್ತವೇನೈವ ವೃತ್ತೇನ ಬ್ರಹ್ಮ ಪ್ರಾಪ್ತಮ್ । ಆತ್ಮಸ್ವಾಭಾವ್ಯಾತ್, ಕೇವಲಮ್ ಆಸುರಮೋಹಪಿಧಾನಮಾತ್ರಮೇವ ಅನಾಪ್ತಿನಿಮಿತ್ತಮ್, ತಸ್ಮಿನ್ ಪಕ್ಷೇ –

**ಮೋಹಾಪಿಧಾನಭಙ್ಗಾಯ ನೈವ ಕರ್ಮಾಣಿ ಕಾರಣಮ್ ।**
**ಜ್ಞಾನೇನೈವ ಫಲಾವಾಪ್ತೇಸ್ತತ್ರ ಕರ್ಮ ನಿರರ್ಥಕಮ್ ॥೭೦॥**

---

1. ಅನಾತ್ಮತ್ವವು ಯಾವಾಗಲೂ ಪ್ರಾಪ್ಯವಲ್ಲ ; ಹಾಗಿದ್ದರಲ್ಲವೆ, ಅದರ ಅನಾಪ್ತಿಯು ಪರಮಾರ್ಥವಾಗಬಹುದು ?

(ಅರ್ಥ)

ಅಲ್ಲಿ[1] ವಸ್ತುಸ್ವಭಾವದಿಂದಲೇ ಬ್ರಹ್ಮವು ಪ್ರಾಪ್ತವಾಗಿದ್ದರೆ, ಆತ್ಮ ಸ್ವರೂಪವೇ ಆಗಿರುವದರಿಂದ[2] ಬರಿಯ ಆಸುರಮೋಹದ[3] ಮುಸುಕೊಂದೇ (ಅದನ್ನು) ಪಡೆಯದಿರುವದಕ್ಕೆ ನಿಮಿತ್ತವಾಗಿರುವದಾದರೆ, ಆ ಪಕ್ಷದಲ್ಲಿ :

೭೦. ಮೋಹದ ಮುಸುಕನ್ನು ನಾಶಮಾಡುವದಕ್ಕೆ ಕರ್ಮಗಳು ಕಾರಣವೇ ಅಲ್ಲ ; ಜ್ಞಾನದಿಂದಲೇ (ಆ) ಫಲವು ದೊರಕುವದರಿಂದ ಕರ್ಮವು ವ್ಯರ್ಥ[4].

(ಮೂಲ)

ಅನಾತ್ಮರೂಪಕೇ ತು ಬ್ರಹ್ಮಣಿ ನ ಕರ್ಮ ಸಾಧನಭಾವಂ ಪ್ರತಿಪದ್ಯತೇ ನಾಪಿ ಜ್ಞಾನಂ ಕರ್ಮಸಮುಚ್ಚಿತಮ್ ಅಸಮುಚ್ಚಿತಂ ವಾ । ಯಸ್ಮಾತ್ ಅನ್ಯಸ್ಯ ಸ್ವತ ಏವ ಸಾಧಕಸ್ಯ ಬ್ರಹ್ಮಣೋಽಪಿ ಅನ್ಯತ್ವಂ ಸ್ವತ ಏವ ಸಿದ್ಧಮ್ । ತತ್ರೈವಮ್ –

ಅನ್ಯಸ್ಯಾನ್ಯಾತ್ಮತಾಪ್ರಾಪ್ತೌ ನ ಕಶ್ಚಿದ್ಧೇತುಸಂಭವಃ ।
ತಸ್ಮಿನ್ ಸತ್ಯಪಿ ನಾ ನಷ್ಟಃ ಪರಾತ್ಮಾನಂ ಪ್ರಪದ್ಯತೇ ॥೭೧॥

(ಅರ್ಥ)

ಬ್ರಹ್ಮವು (ಸಾಧಕನ) ಆತ್ಮರೂಪವಲ್ಲವೆಂದರೊ, ಕರ್ಮವು ಸಾಧನತ್ವವನ್ನು ಹೊಂದಲಾರದು, ಜ್ಞಾನವೂ ಕರ್ಮದೊಡನೆ ಸಮುಚ್ಚಿತವಾಗಲಿ ಸಮುಚ್ಚಿತವಾಗದಿರಲಿ, (ಸಾಧನತ್ವವನ್ನು) ಹೊಂದಲಾರದು. ಏಕೆಂದರೆ ಅನ್ಯನಾಗಿರುವ ಸಾಧಕನಿಗೂ ಅನ್ಯತ್ವವು ತಾನೇ ಸಿದ್ಧ, ಬ್ರಹ್ಮಕ್ಕೂ (ಅನ್ಯತ್ವವು) ತಾನೇ (ಸಿದ್ಧವಾಗಿರುತ್ತದೆ). ಅಲ್ಲಿ ಹೀಗೆ :

---

1. ಮೋಹದಿಂದಲೇ ಅನಾಪ್ತತ್ವವೆಂಬ ಪಕ್ಷ, ಮೋಹದಿಂದಲೇ ಆಪ್ಯತ್ವವು ಎಂಬ ಪಕ್ಷ - ಈ ಎರಡರಲ್ಲಿ.

2. ಸಾಧಕನ ಸ್ವರೂಪವೇ ಆಗಿರುವದರಿಂದ.

3. ದಂಭದರ್ಪಾದಿಗಳಿಂದಾಗಿರುವ ಮೋಹದ.

4. ಆದ್ದರಿಂದ ಕರ್ಮಜ್ಞಾನಗಳ ಸಮುಚ್ಚಯವು ಆ ಪಕ್ಷದಲ್ಲಿ ಬೇಕಿಲ್ಲ ಎಂದು ಭಾವ.

೭೧. ಒಂದು ಇನ್ನೊಂದರ ಸ್ವರೂಪವನ್ನು ಪಡೆಯುವದಕ್ಕೆ ಯಾವ ಹೇತುವಿನ ಸಂಭವವೂ ಇಲ್ಲ. ಅದು ಇದ್ದರೂ ಮನುಷ್ಯನು (ತಾನು) ನಷ್ಟವಾಗಿಯೇ ಮತ್ತೊಂದು ರೂಪವನ್ನು ಪಡೆದಾನು.[1]

(ಮೂಲ)

ಅಪರಸ್ಮಿಂಸ್ತು ಪಕ್ಷೇ –

**ಪರಮಾತ್ಮಾನುಕೂಲೇನ ಜ್ಞಾನಾಭ್ಯಾಸೇನ ದುಃಖಿನಃ ।**
**ದ್ವೈತಿನೋಽಪಿ ವಿಮುಚ್ಯೇರನ್ ನ ಪರಾತ್ಮವಿರೋಧಿನಾ ॥೭೨॥**

(ಅರ್ಥ)

ಒಂದು ಪಕ್ಷದಲ್ಲಾದರೆ :[2]

೭೨. ಪರಮಾತ್ಮ (ಪ್ರಾಪ್ತಿಗೆ) ಅನುಕೂಲವಾಗಿರುವ ಜ್ಞಾನಾಭ್ಯಾಸದಿಂದ ದುಃಖಿಗಳಾದ ದ್ವೈತಿಗಳೂ[3] ವಿಮುಕ್ತರಾಗಬಹುದು, ಪರಮಾತ್ಮವಿರೋಧಿಯಾದ (ಕರ್ಮದಿಂದ) ಆಗಲಾರರು.[4]

---

1. 'ನೋಽನಷ್ಟಃ' ಎಂಬ ಪಾಠಕ್ಕೆ 'ಸಾಯದೆ ಪರರೂಪವನ್ನು ಪಡೆದುಕೊಳ್ಳಲಾರನು' ಎಂದು ಅರ್ಥ. ಒಂದು ಇನ್ನೊಂದಾಗಲಾರದೆಂಬುದು ಅಬಾಧ್ಯವಾದ ನ್ಯಾಯ. ಇದಕ್ಕೆ ವಿರುದ್ಧವಾದ ಶಾಸ್ತ್ರವನ್ನು ಗೌಣಾರ್ಥದಲ್ಲಿ ತೆಗೆದುಕೊಳ್ಳುವದೇ ಯುಕ್ತ . ಆದರೂ ಶಾಸ್ತ್ರದಿಂದ ಉಪಾಸಕನು ಪರಮಾತ್ಮನಾಗುವನೆಂದು ಹೇಳಿದರೆ, ಸತ್ತ ಬಳಿಕವೇ ಆದೀತು. 'ದೇವೋ ಭೂತ್ವಾ ದೇವಾನಪ್ಯೇತಿ' (ಬೃ. ೪-೧-೨) ಎಂಬ ಶಾಸ್ತ್ರವು ಇಲ್ಲಿ ಪ್ರಮಾಣವು.

2. ಪರಮಾತ್ಮನು ಅನ್ಯನೇ, ಅವನನ್ನು ಉಪಾಸನೆಯಿಂದ ಪಡೆದುಕೊಳ್ಳಬಹುದು - ಎಂಬ ಎರಡನೆಯ ಪಕ್ಷದಲ್ಲಿ ಎಂದರ್ಥ. ಮೂಲದಲ್ಲಿರುವ 'ವಿಧಿಃ' ಎಂಬ ಮಾತನ್ನು ಬಿಟ್ಟುಬಿಟ್ಟಿದೆ. ಸಂಸಾರದಶೆಯಲ್ಲಿಯೂ ಬ್ರಹ್ಮವು ಭಿನ್ನಾಭಿನ್ನವಾಗಿರುವದೆಂಬ ಪಕ್ಷದಲ್ಲಿ ಎಂಬ ವ್ಯಾಖ್ಯಾನವು ಸರಿಯಲ್ಲ ; ಆ ಪಕ್ಷವನ್ನು ಗ್ರಂಥದಲ್ಲಿ ಮುಂದೆ ಹೇಳಿದೆ.

3. ಶಾಸ್ತ್ರೋಕ್ತವಾದ ಉಪಾಸನೆಯ ಬಲದಿಂದ ಸತ್ತ ಬಳಿಕ ಪರಮಾತ್ಮಭಾವ ಪ್ರಾಪ್ತಿಯಾಗುವದು ಎಂದು ನಂಬುವ ಸಂಸಾರಿಗಳಾದ ದ್ವೈತಿಗಳು.

4. ನಾನು ನಾನಾರಸಬ್ರಹ್ಮವು ಎಂಬ ಜ್ಞಾನದ ಅಭ್ಯಾಸದಿಂದ ಒಂದು ವೇಳೆ ಮುಕ್ತಿಯಾದರೂ ಆದೀತು, ಏಕೆಂದರೆ ಭಾವನೆಗೆ ಅನುಗುಣವಾಗಿ ಫಲವಾಗುವದು (ಛಾಂ. ೩-೧೪-೧). ಆದರೆ ನಾನು ಸಂಸಾರಿ ಎಂಬ ವಿರುದ್ಧಭಾವನೆಯಿಂದ ಎಂದಿಗೂ ಆಗದು. ಇದು ಅಭ್ಯುಪಗಮವಾದವು. ಪೀಠಿಕೆಯನ್ನು ನೋಡಿ.

(ಮೂಲ)

ಇತರಸ್ಮಿಂಸ್ತು ಪಕ್ಷೇ ವಿಧೇರೇವ ಅನವಕಾಶತ್ವಮ್ । ಕಥಮ್ ?

**ಸಮಸ್ತವ್ಯಸ್ತಭೂತಸ್ಯ ಬ್ರಹ್ಮಣ್ಯೇವಾವತಿಷ್ಠತಃ ।**
**ಬ್ರೂತ ಕರ್ಮಣಿ ಕೋ ಹೇತುಃ ಸರ್ವಾನನ್ಯತ್ವದರ್ಶಿನಃ ॥೭೩॥**

(ಅರ್ಥ)

ಇನ್ನೊಂದು ಪಕ್ಷದಲ್ಲೊ, ಎಂದರೆ ವಿಧಿಗೇ ಅವಕಾಶವಿರುವದಿಲ್ಲ. ಹೇಗೆಂದರೆ :

೭೩. ಸಮಸ್ತವ್ಯಸ್ತವಾಗಿ ಬ್ರಹ್ಮದಲ್ಲಿಯೇ ನೆಲೆನಿಂತಿರುವ ಸರ್ವಾನನ್ಯತ್ವ ದರ್ಶಿಗೆ[1] ಕರ್ಮದಲ್ಲಿ (ತೊಡಗಲು) ಹೇತು ಯಾವದು ? ಹೇಳಿರಿ[2].

(ಮೂಲ)

ಸರ್ವಕರ್ಮನಿಮಿತ್ತಸಂಭವಾಸಂಭವಾಭ್ಯಾಂ ಸರ್ವಕರ್ಮಸಙ್ಕರಶ್ಚ ಪ್ರಾಪ್ನೋತಿ । ಯಸ್ಮಾತ್ –

**ಸರ್ವಜಾತ್ಯಾದಿಮತ್ತ್ವೇಽಸ್ಯ ನಿತರಾಂ ಹೇತ್ವಸಂಭವಃ ।**
**ವಿಶೇಷಂ ಹ್ಯನುಪಾದಾಯ ಕರ್ಮ ನೈವ ಪ್ರವರ್ತತೇ ॥೭೪॥**

(ಅರ್ಥ)

ಎಲ್ಲಾ ಕರ್ಮನಿಮಿತ್ತಗಳೂ ಸಂಭವಿಸಿದರೂ ಸಂಭವಿಸದೆ ಇದ್ದರೂ ಸರ್ವಕರ್ಮಸಂಕರವು ಗಂಟುಬೀಳುವದು[3]. ಏಕೆಂದರೆ :

---

1. ಸಾಮಾನ್ಯವಿಶೇಷರೂಪವಾಗಿರುವ ಬ್ರಹ್ಮವೇ ತಾನಾಗಿರುವದರಿಂದ ಎಲ್ಲಕ್ಕೂ ಈ ಜೀವನ್ಮುಕ್ತನು ಅನನ್ಯನು, ಸಮಸ್ತ ಕ್ರಿಯಾಕಾರಕಫಲರೂಪನಾಗಿಯೇ ಇರುತ್ತಾನೆ.

2. ಪ್ರಾಪ್ತವ್ಯವಿಲ್ಲದ್ದರಿಂದ ಕರ್ಮಕ್ಕೆ ಹೇತುವಿಲ್ಲ ಎಂದರ್ಥ. ಜ್ಞಾನಕ್ಕೂ ಹೇತುವಿಲ್ಲ ಎಂದು ಸೇರಿಸಿಕೊಳ್ಳಬೇಕು. ಆದ್ದರಿಂದಲೇ ಅವತರಣಿಕೆಯಲ್ಲಿ 'ವಿಧಿಗೇ ಅವಕಾಶವಿಲ್ಲ' ಎಂದದ್ದು.

3. ಕರ್ಮನಿಮಿತ್ತಗಳಾದ ಯಾವ ಗೊತ್ತಾದ ವರ್ಣಾಶ್ರಮಾದಿಗಳೂ ಇವನಿಗೆ ಇಲ್ಲ ಎಂದರೆ ಕರ್ಮಕ್ಕೆ ಹೇತುವಿಲ್ಲ ; ಎಲ್ಲಾ ವರ್ಣಾಶ್ರಮಾದಿಗಳೂ ಇವೆ ಎಂದರೆ ಎಲ್ಲಾ ಕರ್ಮಗಳಿಗೂ ಎಲ್ಲರೂ ಅಧಿಕಾರಿಗಳೆಂಬ ಸಂಕರವಾಗುವದು.

೭೪. ಇವನಿಗೆ ಸರ್ವಜಾತ್ಯಾದಿಗಳೂ ಇರುವದರಿಂದ (ಕರ್ಮಕ್ಕೆ) ಸ್ವಲ್ಪವೂ ಹೇತುವು ಸಂಭವಿಸುವದಿಲ್ಲ. ಏಕೆಂದರೆ ವಿಶೇಷವನ್ನು ಸ್ವೀಕರಿಸದೆ ಕರ್ಮವು ಪ್ರವರ್ತಿಸುವದೇ ಇಲ್ಲ[1].

(ಮೂಲ)

ಸ್ಯಾದ್ ವಿಧಿರಧ್ಯಾತ್ಮಾಭಿಮಾನಾತ್ ಇತಿ ಚೇತ್, ನೈವಮ್ । ಯಸ್ಮಾತ್ –

ನ ಚಾಧ್ಯಾತ್ಮಾಭಿಮಾನೋಽಪಿ ವಿದುಷೋಽಸ್ತ್ಯಾಸುರತ್ವತಃ ।
ವಿದುಷೋಽಪ್ಯಾಸುರಶ್ಚೇತ್ಸ್ಯಾನ್ನಿಷ್ಫಲಂ ಬ್ರಹ್ಮದರ್ಶನಮ್ ॥೭೫॥

(ಅರ್ಥ)

ಅಧ್ಯಾತ್ಮಾಭಿಮಾನದಿಂದ[2] (ಅವನಿಗೂ) ವಿಧಿಯಾಗಬಹುದಲ್ಲ – ಅಂದರೆ ಹಾಗಲ್ಲ. ಏಕೆಂದರೆ :

೭೫. ಜ್ಞಾನಿಗೆ ಅಧ್ಯಾತ್ಮಾಭಿಮಾನವೂ ಇಲ್ಲ. ಏಕೆಂದರೆ (ಅದು) ಆಸುರವಾಗಿದೆ. ಜ್ಞಾನಿಗೂ ಆಸುರ(ಧರ್ಮ)ವಿರುವದಾದರೆ ಬ್ರಹ್ಮದರ್ಶನವು ವ್ಯರ್ಥವು.

(ಮೂಲ)

ಅಜ್ಞಾನಕಾರ್ಯತ್ವಾತ್ ನ ಸಮಕಾಲಂ ನಾಪಿ ಕ್ರಮೇಣ ಜ್ಞಾನ ಕರ್ಮಣೋರ್ವಸ್ತ್ವವಸ್ತುತನ್ತ್ರತ್ವಾತ್ ಸಂಗತಿರಸ್ತಿ ಇತ್ಯೇವಂ ನಿರಾಕೃತೋಽಪಿ ಕಾಶಂ ಕುಶಂ ವಾ ಅವಲಂಬ್ಯ ಆಹ –

ಅಥಾಧ್ಯಾತ್ಮಂ ಪುನರ್ಯಾಯಾದಾಶ್ರಿತೋ ಮೂಢತಾಂ ವ್ರಜೇತ್ ।
ಸ ಕರೋತ್ಯೇವ ಕರ್ಮಾಣಿ ಕೋ ಹ್ಯಜ್ಞಂ ವಿನಿವಾರಯೇತ್॥೭೬॥

(ಅರ್ಥ)

ಅಜ್ಞಾನಕಾರ್ಯವಾಗಿರುವದರಿಂದ[3] ಸಮಕಾಲದಲ್ಲಾಗಲಿ ಕ್ರಮವಾಗಿಯೇ ಆಗಲಿ ವಸ್ತುತಂತ್ರ, ಅವಸ್ತುತಂತ್ರ[4]– ಹೀಗಿರುವದರಿಂದ ಜ್ಞಾನ ಕರ್ಮಗಳಿಗೆ

1. ಬ್ರಾಹ್ಮಣನು ಬೃಹಸ್ಪತಿಸವಕ್ಕೆ, ರಾಜನು ರಾಜಸೂಯಕ್ಕೆ, ವೈಶ್ಯನು ವೈಶ್ಯಸ್ತೋಮಕ್ಕೆ- ಎಂದು ವಿಶೇಷವನ್ನಿಟ್ಟುಕೊಂಡೇ ಕರ್ಮಾಧಿಕಾರವುಂಟಾಗುವದು.

2. ಶರೀರಾದಿಗಳು ನಾನು ಎಂಬ ಅಭಿಮಾನದಿಂದಾಗಿರುವದರಿಂದ.

3. ಕರ್ಮವು ಅಜ್ಞಾನಕಾರ್ಯ.

4. ಪುರುಷತಂತ್ರವಾಗಿರುವದರಿಂದ ಕರ್ಮವು ಅವಸ್ತುತಂತ್ರ ; ಜ್ಞಾನವು ವಸ್ತುತಂತ್ರ.

ಸಂಗತಿಯಿಲ್ಲ ಎಂದಿಂತು ನಿರಾಕೃತನಾದರೂ ಕಾಶವನ್ನೋ ಕುಶವನ್ನೋ ಆಶ್ರಯಿಸಿ[1] (ಪೂರ್ವಪಕ್ಷಿ) ಹೇಳುತ್ತಾನೆ :

೭೬. ಹೀಗಿಲ್ಲದೆ ಮತ್ತೂ ಅಧ್ಯಾತ್ಮವನ್ನು ಹೊಂದುವದಾದರೆ[2] ಅದನ್ನಾಶ್ರಯಿಸಿ ಮೂಢತ್ವವನ್ನು ಹೊಂದುತ್ತಾನೆ. ಅವನು ಕರ್ಮಗಳನ್ನು ಮಾಡಿಯೇತೀರುತ್ತಾನೆ, ಏಕೆಂದರೆ ಅಜ್ಞನನ್ನು ತಡೆಗಟ್ಟುವವರು ಯಾರು[3]?

(ಮೂಲ)

ಸಿದ್ಧತ್ವಾಚ್ಚ ನ ಸಾಧ್ಯಮ್ । ಯತಃ –

**ಸಾಮಾನ್ಯೇತರರೂಪಾಭ್ಯಾಂ ಕರ್ಮಾತ್ಮೈವಾಸ್ಯ ಯೋಗಿನಃ ।**
**ನಿಶ್ವಾಸೋಚ್ಛ್ವಾಸವತ್ ತಸ್ಮಾನ್ನ ನಿಯೋಗಮಪೇಕ್ಷತೇ ॥೭೭॥**

(ಅರ್ಥ)

ಸಿದ್ಧವಾಗಿರುವದರಿಂದ (ಅದು) ಸಾಧ್ಯವೂ ಅಲ್ಲ. ಏಕೆಂದರೆ :

೭೭. ಸಾಮಾನ್ಯವಿಶೇಷರೂಪಗಳಿಂದ ಕರ್ಮವು ಈ ಜ್ಞಾನಿಯ ಆತ್ಮನೇ ಆಗಿರುತ್ತದೆ. ಆದ್ದರಿಂದ ನಿಃಶ್ವಾಸೋಚ್ಛ್ವಾಸಗಳಂತೆಯೇ ಅದು ನಿಯೋಗವನ್ನು ಬಯಸುವದಿಲ್ಲ[4].

(ಮೂಲ)

ಅಸ್ತು ತರ್ಹಿ ಭಿನ್ನಾಭಿನ್ನಾತ್ಮಕಂ ಬ್ರಹ್ಮ । ತಥಾ ಚ ಸತಿ ಜ್ಞಾನಕರ್ಮಣೀ ಸಂಭವತಃ । ಭೇದಾಭೇದವಿಷಯತ್ವಾತ್ ತಯೋಃ । ತತ್ರ

1. ವಿಚಾರದ ಹೊಡೆತಕ್ಕೆ ನಿಲ್ಲದ ಯುಕ್ತಿಯನ್ನು ಆಶ್ರಯಿಸಿ ಎಂದರ್ಥ.

2. ಅಧ್ಯಾತ್ಮವಾದ ಶರೀರಾದಿಪರಿಚ್ಛೇದಾಭಿಮಾನವನ್ನು ಮತ್ತೊಮ್ಮೆ ಹೊಂದುವದಾದರೆ.

3. ಅಜ್ಞನು ಜ್ಞಾನಿಯಲ್ಲವಾದ್ದರಿಂದ ಹಾಗೂ ಜ್ಞಾನಕರ್ಮಸಮುಚ್ಚಯವಿಲ್ಲವೇ ಇಲ್ಲ ಎಂದು ಭಾವ. ಜ್ಞಾನಿಯು ಅಜ್ಞಾನಿಯಾಗುತ್ತಾನೆಂಬುದು ಉಪಹಾಸ್ಯವಾಗಿದೆ ಎಂದು ಭಾವ.

4. ನಿಶ್ವಾಸೋಚ್ಛ್ವಾಸಗಳು ತಮಗೆತಾವೇ ಆಗುತ್ತಿರುವದರಿಂದ ಅವನ್ನು ಶಾಸ್ತ್ರವು ವಿಧಿಸಬೇಕಾದದ್ದಿಲ್ಲದಿರುವಂತೆ ಸಾಮಾನ್ಯ ವಿಶೇಷರೂಪಕರ್ಮವು ಸಾಮಾನ್ಯ ವಿಶೇಷರೂಪದಿಂದ ಎಲ್ಲರೂ ಆಗಿರುವ ಬ್ರಹ್ಮದ ಸ್ವಭಾವವೇ ಆಗಿರುವದರಿಂದ ವಿಧ್ಯರ್ಥವಲ್ಲವೆಂದಾಗುವದು.

ತಾವತ್ ಅಯಂ ಪಕ್ಷ ಏವ ನ ಸಂಭವತಿ । ಕಿಂ ಕಾರಣಮ್ ? ನ ಹಿ ಭಿನ್ನೋಽಯಮ್ ಇತ್ಯಭೇದಬುದ್ಧಿಮ್ ಅನಿರಾಕೃತ್ಯ ಭೇದಬುದ್ಧಿಃ ಪದಾರ್ಥಮ್ ಆಲಿಙ್ಗತೇ । ಏವಂ ಹಿ ಅನಭ್ಯುಪಗಮೇ ಭಿನ್ನಾಭಿನ್ನಪದಾರ್ಥಯೋಃ ಅಲೌಕಿಕತ್ವಂ ಪ್ರಸಜ್ಯೇತ । ಅಥ ನಿಷ್ಪ್ರಮಾಣಕಮಪಿ ಆಶ್ರೀಯತೇ ತದಾಪಿ ಉಭಯಪಕ್ಷಾಭ್ಯುಪಗಮಾತ್ ಅಭೇದಪಕ್ಷೇ ದುಃಖಿ ಬ್ರಹ್ಮ ಸ್ಯಾತ್ । ಅತ ಆಹ –

ಭಿನ್ನಾಭಿನ್ನಂ ವಿಶೇಷೈಶ್ಚೇದ್ದುಃಖಿ ಸ್ಯಾದ್ಬ್ರಹ್ಮ ತೇ ಧ್ರುವಮ್ ।
ಅಶೇಷದುಃಖಿತಾ ಚ ಸ್ಯಾದಹೋ ಪ್ರಜ್ಞಾತ್ಮವೇದಿನಾಮ್ ॥೭೮॥

(ಅರ್ಥ)

(ಆಕ್ಷೇಪ) :- ಹಾಗಾದರೆ ಬ್ರಹ್ಮವು ಭಿನ್ನಾಭಿನ್ನಾತ್ಮಕವಾಗಲಿ.[1] ಹಾಗಾದರೆ ಜ್ಞಾನಕರ್ಮಗಳೆರಡೂ ಸಂಭವಿಸುತ್ತವೆ ; ಏಕೆಂದರೆ ಅವು ಭೇದಾಭೇದವಿಷಯಕವಾಗಿರುತ್ತವೆ[2].

(ಪರಿಹಾರ) :- ಮೊದಲನೆಯದಾಗಿ ಈ ಪಕ್ಷವೇ ಸಂಭವಿಸುವದಿಲ್ಲ. ಯಾವ ಕಾರಣದಿಂದ ? ಎಂದರೆ ಇದು ಭಿನ್ನವಾದದ್ದು ಎಂಬ ಭೇದಬುದ್ಧಿಯು ಅಭೇದಬುದ್ಧಿಯನ್ನು ತೊಲಗಿಸದೆ ಪದಾರ್ಥವನ್ನು ಮುಟ್ಟುವದೇ ಇಲ್ಲವಷ್ಟೆ. ಹೀಗೆಂದು ಒಪ್ಪದಿದ್ದರೆ ಭಿನ್ನ, ಅಭಿನ್ನ –ಎಂಬ ಪದಾರ್ಥಗಳಿಗೆ ಅಲೌಕಿಕತ್ವವು ಪ್ರಸಕ್ತವಾಗುವದು[3]. ಇನ್ನು ನಿಷ್ಪ್ರಮಾಣಕವಾದರೂ (ಈ ಭೇದಾಭೇದಪಕ್ಷವನ್ನು) ಆಶ್ರಯಿಸುವದಾದರೆ, ಆಗಲೂ ಎರಡು ಪಕ್ಷಗಳನ್ನೂ ಒಪ್ಪಿರುವದರಿಂದ[4] ಅಭೇದಪಕ್ಷದಲ್ಲಿ ಬ್ರಹ್ಮವು ದುಃಖಿಯಾಗುವದು. ಆದ್ದರಿಂದ ಹೇಳುತ್ತಾರೆ[5]:

1. ಭಿನ್ನ, ಅಭಿನ್ನ –ಎಂಬ ಪಕ್ಷಗಳಲ್ಲಿ ದೋಷವನ್ನು ಹೇಳಿದ್ದರಿಂದ ಪೂರ್ವವಾದಿ ಈ ಪಕ್ಷವನ್ನು ಅವಲಂಬಿಸಿರುತ್ತಾನೆ.

2. ಜ್ಞಾನವು ಅಭೇದವಿಷಯ, ಕರ್ಮವು ಭೇದವಿಷಯ– ಎಂದರ್ಥ.

3. ಆದರೆ ಇದು ಅನಿಷ್ಟ. ಏಕೆಂದರೆ ಲೋಕದಲ್ಲಿ ಅಪ್ರಸಿದ್ಧವಾದ ಅರ್ಥವನ್ನು ವೇದವು ಹೇಳಿದರೂ ಜನರಿಗೆ ತಿಳಿಯಲಾರದು.

4. ಭೇದವನ್ನೂ ಅಭೇದವನ್ನೂ ಒಪ್ಪಿರುವದರಿಂದ.

5. ಸಂಬಂಧೋಕ್ತಿಕಾರರೂ ನೈಷ್ಕರ್ಮ್ಯಸಿದ್ಧಿಕಾರರೂ ತಾವೇ ಆದರೂ ಔಪಾಧಿಕಭೇದವನ್ನು ಕಲ್ಪಿಸಿಕೊಂಡು ಹೀಗೆಂದಿದಾರೆ.

೭೮. ಬ್ರಹ್ಮವು ವಿಶೇಷಗಳಿಗಿಂತ ಭಿನ್ನಾಭಿನ್ನವು ಎಂದರೆ ನಿನ್ನ (ಈ ಬ್ರಹ್ಮವು) ದುಃಖಿಯಾಗುವದು, ಎಲ್ಲಾ ದುಃಖವುಳ್ಳದ್ದೂ ಆಗುವದು. ಆತ್ಮವೇದಿಗಳ ಪ್ರಜ್ಞೆ ಎಂಥ ಅದ್ಭುತವಾದದು[1] !

## ಸಮುಚ್ಚಯನಿರಾಸದ ಉಪಸಂಹಾರ

(ಮೂಲ)

ತಸ್ಮಾತ್ ಸಮ್ಯಗೇವಾಭಿಹಿತಂ ನ ಜ್ಞಾನಕರ್ಮಣೋಃ ಸಮುಚ್ಚಯ ಇತ್ಯುಪಸಂಹ್ರಿಯತೇ[2]–

**ತಮೋಽಙ್ಗತ್ವಂ ಯಥಾ ಭಾನೋರಗ್ನೇಶ್ಶೀತಾಙ್ಗತಾ ಯಥಾ ।**
**ವಾರಿಣಶ್ಚೋಷ್ಣತಾ[3] ಯದ್ವಜ್ಜ್ಞಾನಸ್ಯೈವಂ ಕ್ರಿಯಾಙ್ಗತಾ ॥೭೯॥**

(ಅರ್ಥ)

ಆದ್ದರಿಂದ ಜ್ಞಾನಕರ್ಮಗಳಿಗೆ ಸಮುಚ್ಚಯವಿಲ್ಲ ಎಂದು ಹೇಳಿದ್ದು ಸರಿಯೇ ಆಯಿತು ಎಂದು ಉಪಸಂಹಾರಮಾಡುತ್ತಾರೆ :

೭೯. ಸೂರ್ಯನಿಗೆ ಕತ್ತಲೆಯ ಅಂಗತ್ವವು ಹೇಗೋ ಬೆಂಕಿಗೆ ತಂಪಿನ ಅಂಗತ್ವವು ಹೇಗೋ ನೀರಿಗೆ ಬಿಸಿಯ (ಅಂಗತ್ವವು) ಹೇಗೋ ಹಾಗೆಯೇ ಜ್ಞಾನಕ್ಕೆ ಕರ್ಮಾಂಗತ್ವವು (ಅಸಂಭಾವಿತವು).

---

1. ಜ್ಞಾನಕ್ಕಿಂತ ಮೊದಲು ಪರಿಮಿತವಾದ ದುಃಖವಿತ್ತು ; ಈಗ ಎಲ್ಲರ ದುಃಖವೂ ಗಂಟುಬಿತ್ತು . ಎಂಥ ಜ್ಞಾನವಿದು !- ಎಂದು ಹಾಸ್ಯಮಾಡಿರುತ್ತಾರೆ.

2. ಇಲ್ಲಿ 'ಇತೀತ್ಯುಪಸಂಹ್ರಿಯತೇ' ಎಂದಿದ್ದರೆ ಚೆನ್ನಾಗಿರುತ್ತೆಂದು ತೋರುವದು.

3. 'ತೋಯಸ್ಯೋಷ್ಣಾಙ್ಗತಾ' ಎಂಬ ಪಾಠವೂ ಒಂದು ಇದೆ ; ಅದರಲ್ಲಿ ಪ್ರಕ್ರಮಭಂಗದೋಷವು ತಪ್ಪುತ್ತದೆ.

## ಪೂರ್ವಪಕ್ಷೋಕ್ತಿಗಳ ಖಂಡನೆ

(ಮೂಲ)

ಯಥೋಕ್ತೋಪಪತ್ತಿಬಲೇನೈವ ಪೂರ್ವಪಕ್ಷಸ್ಯ ಉತ್ಸಾರಿತತ್ವಾತ್ ವಕ್ತವ್ಯಂ ನಾವಶೇಷಿತಮ್ ಇತ್ಯತಃ ಪ್ರತಿಪತ್ತಿಕರ್ಮವತ್ ಪೂರ್ವಪಕ್ಷಪರಿಹಾರಾಯ ಯತ್ಕಿಂಚಿದ್ ವಕ್ತವ್ಯಮ್ ಇತ್ಯತ ಇದಮಭಿಧೀಯತೇ –

**ಮುಕ್ತೇಃ ಕ್ರಿಯಾಭಿಃ ಸಿದ್ಧತ್ವಾದಿತ್ಯಾದ್ಯನುಚಿತಂ ಬಹು ।**
**ಯದಭಾಣಿ ತದನ್ಯಾಯ್ಯಂ ಯಥಾ ತದಧುನೋಚ್ಯತೇ ॥೮೦॥**

(ಅರ್ಥ)

ಮೇಲೆ ಹೇಳಿರುವ ಉಪಪತ್ತಿಗಳ ಬಲದಿಂದಲೇ ಪೂರ್ವಪಕ್ಷವನ್ನು ಒತ್ತರಿಸಿದಂತಾಗಿರುವದರಿಂದ (ಅದಕ್ಕಾಗಿ) ಹೇಳತಕ್ಕದ್ದು (ಏನೂ) ಉಳಿದಿರುವದಿಲ್ಲ ; ಆದ್ದರಿಂದ ಪ್ರತಿಪತ್ತಿ ಕರ್ಮದಂತೇ[1] ಪೂರ್ವಪಕ್ಷವನ್ನು ಪರಿಹರಿಸುವದಕ್ಕಾಗಿ ಏನಾದರೊಂದಿಷ್ಟು ಹೇಳೋಣವೆಂದು ಇದನ್ನು ಹೇಳಲಾಗುವದು.

೮೦. 'ಮುಕ್ತಿಯು ಕ್ರಿಯೆಗಳಿಂದಲೇ ಸಿದ್ಧವಾಗಿರುವದರಿಂದ' (೧-೯) ಎಂದು ಮುಂತಾಗಿ ಅಯೋಗ್ಯವಾದ ಬಲು(ಮಾತುಗಳನ್ನು) ಪೂರ್ವಪಕ್ಷದಲ್ಲಿ ಹೇಳಿತ್ತಷ್ಟೆ, ಅದು ಅಯುಕ್ತವೆಂಬುದು ಹೇಗೆಂಬುದನ್ನು ಈಗ ತಿಳಿಸುವೆವು.

(ಮೂಲ)

ಯೋಽಯಂ ಕಾಮ್ಯಾನಾಂ ಪ್ರತಿಷಿದ್ಧಾನಾಂ ಚ ತ್ಯಾಗಃ ಪ್ರತಿಜ್ಞಾಯತೇ ಸಾ ಪ್ರತಿಜ್ಞಾ ತಾವನ್ನ ಶಕ್ಯತೇಽನುಷ್ಠಾತುಮ್ । ಕಿಂ ಕಾರಣಮ್ ? ಕರ್ಮಣೋ ಹಿ ನಿರ್ವೃತ್ತಾತ್ಮನೋ ದ್ವಾಭ್ಯಾಂ ಪ್ರಕಾರಾಭ್ಯಾಂ

---

1. ತಾನೇ ಪ್ರಾಪ್ತವಾಗಿರುವ ಕರ್ಮವನ್ನು ವಿಧಿಸುವಂತೆ, ಮೈತುರಿಸಿಕೊಳ್ಳುವದಕ್ಕೆ ಕೃಷ್ಣಮೃಗದ ಕೋಡನ್ನುಪಯೋಗಿಸಿದ ಬಳಿಕ ಅದನ್ನು ಆಚೆಗೆ ಹಾಕುವದು ತಾನೇ ಪ್ರಪ್ತವಾಗಿರುವಲ್ಲಿ ಚಾತ್ವಾಲವೆಂಬ ಗುಂಡಿಯಲ್ಲಿ ಅದನ್ನು ಹಾಕಬೇಕು ಎಂದು ವಿಧಿಸಿರುವಂತೆ. ಜೈ. ೪-೨-೧೬ ನೋಡಿ.

ನಿವೃತ್ತಿಃ, ಸಂಭವತಿ । ಆರಬ್ಧಫಲಸ್ಯೋಪಭೋಗೇನ ಅನಾರಬ್ಧಫಲಸ್ಯಾಶುಭಸ್ಯ(ಚ) ಪ್ರಾಯಶ್ಚಿತ್ತೈಃ ಇತಿ । ತೃತೀಯೋಽಪಿ ತ್ಯಾಗಪ್ರಕಾರೋಽಕರ್ತ್ರಾತ್ಮಾವಬೋಧಾತ್ । ಸ ತ್ವಾತ್ಮಜ್ಞಾನಾನಭ್ಯುಪಗಮಾತ್ ಭವತಾ ನಾಭ್ಯುಪಗಮ್ಯತೇ । ತತ್ರ ಯಾನ್ಯನುಪಭುಕ್ತಫಲಾನ್ಯನಾರಬ್ಧಫಲಾನಿ ತಾನಿ ಈಶ್ವರೇಣಾಪಿ ಕೇನಚಿದಪಿ ನ ಶಕ್ಯನ್ತೇ ಪರಿತ್ಯುಕ್ತಮ್ । ಅಥ ಆರಬ್ಧಫಲಾನಿ ತ್ಯಜ್ಯನ್ತೇ, ತಾನ್ಯಪಿ ನ ಶಕ್ಯನ್ತೇ ತ್ಯಕ್ತುಮ್ । ಕಿಂ ಕಾರಣಮ್ ? ನಿರ್ವೃತ್ತೇಃ । ಅನಿರ್ವೃತ್ತಂ ಹಿ ಚಿಕೀರ್ಷಿತಂ ಕರ್ಮ ಶಕ್ಯತೇ ತ್ಯಕ್ತುಮ್ । ಪ್ರವೃತ್ತಿನಿವೃತ್ತೀ ಪ್ರತಿ ಕರ್ತುಃ ಸ್ವಾತನ್ತ್ರ್ಯಾತ್ । ನಿರ್ವೃತ್ತೇ ತು ಕರ್ಮಣಿ ತದಸಂಭವಾತ್ ದುರನುಷ್ಠೇಯಃ ಪ್ರತಿಜ್ಞಾತಾರ್ಥಃ । ಅಶಕ್ಯಪ್ರತಿಜ್ಞಾನಾಚ್ಚ । ನ ಚ ಶಕ್ಯತೇ ಪ್ರತಿಜ್ಞಾತುಂ ಯಾವಜ್ಜೀವಂ ಕಾಮ್ಯಾನಿ ಪ್ರತಿಷಿದ್ಧಾನಿ ಚ ಕರ್ಮಾಣಿ ನ ಕರಿಷ್ಯಾಮೀತಿ । ಸುನಿಪುಣಾನಾಮಪಿ ಸೂಕ್ಷ್ಮಾಪರಾಧದರ್ಶನಾತ್ । ಪ್ರಮಾಣಾಭಾವಾಚ್ಚ । ನ ಚ ಪ್ರಮಾಣಮಸ್ತಿ ಮೋಕ್ಷಕಾಮೋ ನಿತ್ಯನೈಮಿತ್ತಿಕೇ ಕರ್ಮಣೀ ಕುರ್ಯಾತ್, ಕಾಮ್ಯಪ್ರತಿಷಿದ್ಧೇ ಚ ವರ್ಜಯೇತ್ ಆರಬ್ಧಫಲೇ ಚ ಉಪಭೋಗೇನ ಕ್ಷಪಯೇತ್ ಇತಿ । ಆನನ್ತ್ಯಾಚ್ಚ । ನ[1] ಚೋಪಚಿತಾನಾಂ ಕರ್ಮಣಾಮ್ ಇಯತ್ತಾಸ್ತಿ । ಸಂಸಾರಸ್ಯಾನಾದಿತ್ವಾತ್ । ನ ಚ ಕಾಮ್ಯೈಃ ಪ್ರತಿಷಿದ್ಧೈರ್ವಾ ತೇಷಾಂ ನಿವೃತ್ತಿರಸ್ತಿ । ಶುದ್ಧ್ಯಶುದ್ಧಿಸಾಮ್ಯೇ ಸತ್ಯವಿರೋಧಾತ್ ಇತಿ । ಅತ ಆಹ –

ನ ಕೃತ್ಸ್ನಕಾಮ್ಯಸಂತ್ಯಾಗೋಽನನ್ತತ್ವಾತ್ ಕರ್ತುರಿಷ್ಯತೇ ।
ನಿಷಿದ್ಧಕರ್ಮಣಶ್ಚೇಹ[2] ವ್ಯತೀತಾನನ್ತಜನ್ಮಸು ॥೮೧॥

(ಅರ್ಥ)

ಕಾಮ್ಯ(ಕರ್ಮ)ಗಳನ್ನೂ ಪ್ರತಿಷಿದ್ಧ(ಕರ್ಮ)ಗಳನ್ನೂ ಬಿಡಬೇಕೆಂದು ಹೇಳುತ್ತೀರಷ್ಟೆ, ಈ ಪ್ರತಿಜ್ಞೆಯನ್ನು ನಡೆಸುವದು ಆಗುವಂತಿಲ್ಲ. ಕಾರಣ ವೇನು ? ಎಂದರೆ ಕರ್ಮವು ಆಗಿಬಿಟ್ಟಮೇಲೆ (ಅದಕ್ಕೆ) ಆರಬ್ಧಫಲವುಳ್ಳ (ಕರ್ಮವನ್ನು) ಅನುಭವಿಸುವದರಿಂದ, ಫಲವು ಆರಂಭವಾಗದೆ ಇರುವ ಅಶುಭ(ಕರ್ಮ)ವನ್ನು ಪ್ರಾಯಶ್ಚಿತ್ತಗಳಿಂದ– (ಹೀಗೆ) ಎರಡು ಪ್ರಕಾರಗಳಿಂದ

1. ಇಲ್ಲಿ ಒಂದು 'ಚ' ಇದ್ದರೆ ಒಳ್ಳೆಯದು.

2. 'ಚೇತ್ತು' ಎಂಬ ಪಾಠಕ್ಕಿಂತ ಇದು ಉತ್ತಮ.

ನಿವೃತ್ತಿಯಾಗಬಹುದಾಗಿದೆ. ಅಕರ್ತ್ರಾತ್ಮಜ್ಞಾನದಿಂದ (ನಿವೃತ್ತಿಯಾಗುವದೆಂಬ) ಮೂರನೆಯ ಪ್ರಕಾರವೂ (ಉಂಟು) ; ಆದರೆ ಆತ್ಮಜ್ಞಾನವನ್ನು ಒಪ್ಪದಿರುವದರಿಂದ ಆ (ಪ್ರಕಾರ)ವನ್ನು ನೀನು ಒಪ್ಪುವಂತಿಲ್ಲ. ಇಲ್ಲಿ ಫಲವನ್ನು ಅನುಭವಿಸದೆ, ಫಲವನ್ನು ಕೊಡದೆ ಇರುವ (ಸಂಚಿತಕರ್ಮ) ಗಳಿರುವವಷ್ಟೆ, ಅವನ್ನು ಸ್ವತಂತ್ರ (ಪುರುಷ)ನಿಂದಲೂ ಪರಿತ್ಯಾಗಮಾಡುವ ದಾಗಲಾರದು. ಹಾಗಿಲ್ಲದೆ ಆರಬ್ಧಫಲವುಳ್ಳವುಗಳನ್ನು ಬಿಡುತ್ತೇನೆಂದರೆ ಅವುಗಳನ್ನೂ ಬಿಡುವದಕ್ಕೆ ಆಗುವದಿಲ್ಲ. ಕಾರಣವೇನು ? ಎಂದರೆ (ಅವು) ಸಿದ್ಧವಾಗಿಬಿಟ್ಟಿರುವದರಿಂದ. (ಇದರ ವಿವರ) : (ಇನ್ನೂ) ಆಗದೆ ಮುಂದೆ ಮಾಡಬೇಕೆಂದಿರುವ ಕರ್ಮವನ್ನಲ್ಲವೆ, ತ್ಯಾಗಮಾಡುವದಾಗುತ್ತದೆ ? ಏಕೆಂದರೆ (ಅಲ್ಲಿ) ಪ್ರವೃತ್ತಿನಿವೃತ್ತಿಗಳ (ವಿಷಯ)ಕ್ಕೆ ಕರ್ತೃವಿಗೆ ಸ್ವಾತಂತ್ರ್ಯ ವಿರುತ್ತದೆ. ಆದರೆ ಕರ್ಮವು ಆಗಿಬಿಟ್ಟಿದ್ದರೆ ಅದು ಆಗಲಾರದಾದ್ದರಿಂದ(ನೀವು) ಪ್ರತಿಜ್ಞೆಮಾಡಿದ ಅರ್ಥವನ್ನು ಅನುಷ್ಠಾನಮಾಡುವದು ಆಗಲಾರದು. (ಹೀಗೆಂದು) ಪ್ರತಿಜ್ಞೆಮಾಡುವದು ಆಗಲಾರದಾದ್ದರಿಂದಲೂ (ಈ ಅಭಿಪ್ರಾಯವೇ ಸರಿ. ಇದರ ವಿವರ) : ಬದುಕಿರುವವರೆಗೂ ಕಾಮ್ಯ(ಕರ್ಮ)ಗಳನ್ನೂ ಪ್ರತಿಷಿದ್ಧ (ಕರ್ಮ)ಗಳನ್ನೂ ನಾನು ಮಾಡುವದಿಲ್ಲ ಎಂದು ಪ್ರತಿಜ್ಞೆ ಮಾಡು ವದಕ್ಕೂ ಆಗಲಾರದು ; ಏಕೆಂದರೆ ಎಂಥ ನಿಪುಣರಾದರೂ (ಅವರೂ) ಸೂಕ್ಷ್ಮ ವಾದ ಅಪರಾಧಗಳನ್ನು ಮಾಡುವದು ಕಂಡುಬರುತ್ತದೆ.[1] ಪ್ರಮಾಣವಿಲ್ಲದ್ದ ರಿಂದಲೂ (ಈ ಪಕ್ಷವೇ ಸರಿ. ಇದರ ವಿವರ) : ಮೋಕ್ಷಕಾಮನಾದವನು ನಿತ್ಯನೈಮಿತ್ತಿಕಕರ್ಮಗಳನ್ನು ಮಾಡಬೇಕು, ಕಾಮ್ಯಪ್ರತಿಷಿದ್ಧ (ಕರ್ಮ) ಗಳನ್ನು ಬಿಡಬೇಕು, ಆರಬ್ಧಫಲವುಳ್ಳವುಗಳನ್ನು ಉಪಭೋಗದಿಂದ ಸವೆಸಿ ಕೊಳ್ಳಬೇಕು– ಎಂದು (ಯಾವ) ಪ್ರಮಾಣ(ವಚನ)ವೂ ಇರುವದಿಲ್ಲ. ಅನಂತವಾಗಿರುವದರಿಂದಲೂ (ಹೀಗೆ ಇದರ ವಿವರ) : (ಮಾಡಿ) ಕೂಡಿ ಹಾಕಿಕೊಂಡಿರುವ ಕರ್ಮಗಳು ಇಷ್ಟೆಂಬ (ಪರಿಮಾಣವೂ) ಇರುವದಿಲ್ಲ ; ಏಕೆಂದರೆ ಸಂಸಾರವು ಅನಾದಿಯಾಗಿರುತ್ತದೆ. ಕಾಮ್ಯ(ಕರ್ಮ)ಗಳಿಂದಲಾಗಲಿ

---

1. ಧರ್ಮರಾಯನಿಗೂ ನರಕದರ್ಶನವಾಯಿತು. ಅಣೀಮಾಂಡವ್ಯನಿಗೂ ಶೂಲಾರೋಪಣವಾಯಿತು - ಎಂದು ಮುಂತಾಗಿರುವ ಪುರಾಣದ ಕಥೆಗಳನ್ನು ಇಲ್ಲಿ ಮನದಂದುಕೊಳ್ಳಬಹುದು.

ನಿಷಿದ್ಧ (ಕರ್ಮ)ಗಳಿಂದಲಾಗಲಿ ಆ (ಹಿಂದಿನ ಕರ್ಮ)ಗಳ ನಿವೃತ್ತಿ ಯಾಗುವುದೂ ಇಲ್ಲ. ಏಕೆಂದರೆ ಶುದ್ಧಿ, ಅಶುದ್ಧಿ - ಇವು ಸಮವಾಗಿರುವದರಿಂದ (ಅವೆರಡಕ್ಕೂ) ವಿರೋಧ(ವೇನೂ) ಇರುವದಿಲ್ಲ[1]. ಆದ್ದರಿಂದ ಹೇಳುತ್ತಾರೆ :

೮೧. ಇಲ್ಲಿ ಕಾಮ್ಯಕರ್ಮಗಳು ಅನಂತವಾಗಿರುವದರಿಂದ (ಅವುಗಳ) ನ್ನೆಲ್ಲ ಬಿಟ್ಟುಬಿಡುವದು ಆಗುವಹಾಗಿಲ್ಲ. ಹಿಂದೆ ಆಗಿಹೋಗಿರುವ ಅನಂತ ಜನ್ಮಗಳಲ್ಲಿ (ಮಾಡಿರುವ) ನಿಷಿದ್ಧಕರ್ಮದ (ತ್ಯಾಗವೂ) ಆಗುವಹಾಗಿಲ್ಲ.

(ಮೂಲ)

ಸ್ಯಾನ್ಮತಮ್, ವ್ಯತೀತಾನನ್ತಜನ್ಮೋಪಾತ್ತಾನಾಂ ಕರ್ಮಣಾಮ್ –

**ಕ್ಷಯೋ ನಿತ್ಯೇನ ತೇಷಾಂ ಚೇತ್ ಪ್ರಾಯಶ್ಚಿತ್ತೈರ್ಯಥೈನಸಃ ।**
**ನಿಷ್ಫಲತ್ವಾನ್ನ ನಿತ್ಯೇನ ಕಾಮ್ಯಾದೇರ್ವಿನಿವಾರಣಮ್ ॥೮೨॥**

(ಅರ್ಥ)

ಹೀಗೆಂದು (ನಿಮ್ಮ) ಮತವಿರಬಹುದು. ಹಿಂದೆ ಆಗಿಹೋಗಿರುವ ಅನಂತಜನ್ಮಗಳಲ್ಲಿ ಮಾಡಿರುವ ಕರ್ಮಗಳಿವೆಯಲ್ಲ :

೮೨. ಅವಕ್ಕೆ ಪ್ರಾಯಶ್ಚಿತ್ತಗಳಿಂದ ಪಾಪಕ್ಕೆ (ಕ್ಷಯ)ವಾಗುವಂತೆ ನಿತ್ಯ(ಕರ್ಮ)ದಿಂದ ಕ್ಷಯವಾಗುತ್ತದೆ ಎನ್ನುವುದಾದರೆ (ಅದು ಸರಿಯಲ್ಲ). ಏಕೆಂದರೆ ನಿತ್ಯ(ಕರ್ಮಕ್ಕೆ)[2] ಫಲವಿಲ್ಲವಾದ್ದರಿಂದ (ಅದರಿಂದ) ಕಾಮ್ಯಾದಿಗಳಿಗೆ ವಿನಾಶವಾಗಲಾರದು.

(ಮೂಲ)

ಪ್ರಮಾಣಾಭಾವಾಚ್ಚ । ಕಥಮ್ ?

**ಪಾಪಾಪನುತ್ತಯೇ ವಾಕ್ಯಾತ್ ಪ್ರಾಯಶ್ಚಿತ್ತಂ ಯಥಾ ತಥಾ ।**
**ಗಮ್ಯತೇ ಕಾಮ್ಯಹಾನಾರ್ಥಂ ನಿತ್ಯಂ ಕರ್ಮ ನ ವಾಕ್ಯತಃ ॥೮೩॥**

---

1. ಶುದ್ಧಕರ್ಮದಿಂದ ಶುದ್ಧಕರ್ಮವೂ ಅಶುದ್ಧಕರ್ಮದಿಂದ ಅಶುದ್ಧಕರ್ಮವೂ ಅದಕ್ಕೆ ವಿರೋಧವಿಲ್ಲದ್ದರಿಂದ ನಾಶವಾಗಲಾರದು ಎಂದರ್ಥ.

2. ಇದು ಪೂರ್ವಪಕ್ಷಿಯ ಮತ. ಸಿದ್ಧಾಂತದಲ್ಲಿ ಅವಕ್ಕೂ ಫಲವುಂಟು. ಸಂ. ವಾ. ೯೭೭ನ್ನು ನೋಡಿ.

(ಅರ್ಥ)

ಪ್ರಮಾಣವಿಲ್ಲವಾದ್ದರಿಂದಲೂ (ಇದು ಸರಿಯಲ್ಲ). ಏಕೆಂದರೆ :

೮೩. ಪಾಪವನ್ನು ಕಳೆಯುವದಕ್ಕೆ ಪ್ರಾಯಶ್ಚಿತ್ತವೆಂದು ಹೇಗೆ ವಾಕ್ಯದಿಂದ ತಿಳಿದುಬರುತ್ತದೆಯೋ ಹಾಗೆ ಕಾಮ್ಯ(ಕರ್ಮ)ವನ್ನು ನಾಶ ಮಾಡುವದಕ್ಕೆ ನಿತ್ಯ (ಕರ್ಮ)ವೆಂದು ವಾಕ್ಯದಿಂದ ತಿಳಿಯಬರುವದಿಲ್ಲ[1].

(ಮೂಲ)

**ಅಥಾಪಿ ಸ್ಯಾತ್ ಕಾಮ್ಯೈರೇವ ಕಾಮ್ಯಾನಾಂ ಪೂರ್ವಜನ್ಮೋಪಚಿತಾನಾಂ ಕ್ಷಯೋ ಭವಿಷ್ಯತೀತಿ (ತನ್ನ) ಯತಃ –**

**ಪಾಪ್ಮನಾಂ ಪಾಪ್ಮಭಿರ್ನಾಸ್ತಿ ಯಥೈವೇಹ ನಿರಾಕ್ರಿಯಾ ।**
**ಕಾಮ್ಯೈರಪಿ ತಥಾ ನಾಸ್ತಿ[2] ಕಾಮ್ಯಾನಾಮವಿರೋಧತಃ ॥೮೪॥**

(ಅರ್ಥ)

ಇನ್ನು (ನಿಮ್ಮ ಮತವು) ಆಗಬಹುದು : (ನೀವು) ಕಾಮ್ಯ(ಕರ್ಮ)ಗಳಿಂದಲೇ ಹಿಂದೆ ಕೂಡಿಹಾಕಿರುವ ಕಾಮ್ಯ (ಕರ್ಮಗಳ ನಾಶವಾಗಲಿ) (ಎನ್ನಬಹುದು). ಅದು ಸರಿಯಲ್ಲ. ಏಕೆಂದರೆ :

೮೪. ಪಾಪಗಳಿಂದ ಪಾಪಗಳನ್ನು ಹೇಗೆ ಇಲ್ಲಿ ತೊಲಗಿಸುವದಾಗದೋ ಕಾಮ್ಯಗಳಿಂದ ಕಾಮ್ಯಗಳನ್ನು ಹಾಗೆಯೇ (ತೊಲಗಿಸುವದಾಗಲಾರದು). ಏಕೆಂದರೆ (ಅವೆರಡಕ್ಕೂ) ವಿರೋಧವಿರುವದಿಲ್ಲ[3].

(ಮೂಲ)

**ಏವಂ ತಾವತ್ 'ಮುಕ್ತೇಃ ಕ್ರಿಯಾಭಿಃ ಸಿದ್ಧತ್ವಾತ್' ಇತಿ ನಿರಾಕೃತಮ್, ಅಥ ಆತ್ಮಜ್ಞಾನಸ್ಯ ಸದ್ಭಾವೇ ಪ್ರಮಾಣಾಸಂಭವ ಉಕ್ತಃ, ತತ್ಪರಿಹಾರಾಯಾಹ –**

---

1. ನಿತ್ಯಕರ್ಮಗಳಿಗೆ ಲೋಕಾಂತರಫಲವೆಂದು ಶತ. ಬ್ರಾ. ಛಾಂದೋಗ್ಯ ೨-೨೩-೧ ಮುಂತಾದ ಕಡೆಗಳಲ್ಲಿ ಹೇಳಿಯೂ ಇದೆ.

2. ''ಕಾಮ್ಯೈರಪಿ ತಥೈವಾಸ್ತು'' ಎಂಬುದಕ್ಕಿಂತ ಈ ಪಾಠವು ಮೇಲು.

3. ''ನ ಚ ಕಾಮ್ಯೈಃ'' (೧-೮೧) ಎಂಬ ಸಂಬಂಧೋಕ್ತಿಯಲ್ಲಿ ಹೇಳಿದ್ದು ಇದೇ. ಇಲ್ಲಿಯವರೆಗೆ ಹೇಳಿರುವ ಗ್ರಂಥದ ಅಭಿಪ್ರಾಯವು ಸೂ. ಭಾ. ೪-೩-೧೪, ತೈ.ಭಾ. ೪-೭ ಇವುಗಳಲ್ಲಿಯೂ ಇದೆ.

**ಶ್ರುತಯಃ ಸ್ಮೃತಿಭಿಃ ಸಾಕಮಾನನ್ತ್ಯಾತ್ ಕಾಮಿನಾಮಿಹ ।**
**ವಿದಧತ್ಯುರುಯತ್ನೇನ ಕರ್ಮಾತೋ ಬಹುಕಾಮದಮ್ ॥೮೫॥**

(ಅರ್ಥ)

ಹೀಗೆ 'ಮುಕ್ತೇಃ ಕ್ರಿಯಾಭಿಃ ಸಿದ್ಧತ್ವಾತ್' (ಮುಕ್ತಿಯು ಕರ್ಮಸಿದ್ಧ) ಎಂಬ ಪಕ್ಷವನ್ನು ನಿರಾಕರಿಸಿದ್ದಾಯಿತು. ಇನ್ನು ಆತ್ಮಜ್ಞಾನವಿದೆ ಎಂಬುದಕ್ಕೆ ಪ್ರಮಾಣವು ಸಂಭವಿಸುವದಿಲ್ಲವೆಂದು ಹೇಳಿತ್ತಷ್ಟೆ, ಅದರ ಪರಿಹಾರಕ್ಕಾಗಿ ಹೇಳುತ್ತಾರೆ :

೮೫. ಕಾಮಿಗಳು ಅನಂತರಾಗಿರುವದರಿಂದ[1] ಶ್ರುತಿಗಳು ಸ್ಮೃತಿಗಳೊಡನೆ ಬಹುಪ್ರಯತ್ನಪೂರ್ವಕವಾಗಿ ಬಹುಕಾಮ್ಯಗಳನ್ನು ಕೊಡುವ ಕರ್ಮವನ್ನು ವಿಧಿಸುತ್ತೇವೆ[2].

(ಮೂಲ)

ನ ಚ ಬಾಹುಲ್ಯಂ ಪ್ರಾಮಾಣ್ಯೇ ಕಾರಣಭಾವಂ ಪ್ರತಿಪದ್ಯತೇ । ಅತ ಆಹ –

**ಪ್ರಾಮಾಣ್ಯಾಯ ನ ಬಾಹುಲ್ಯಂ ನ ಹ್ಯೇಕತ್ರ ಪ್ರಮಾಣತಾಮ್ ।**
**ವಸ್ತುನ್ಯಟನ್ತಿ ಮಾನಾನಿ ತ್ವೇಕತ್ರೈಕಸ್ಯ ಮಾನತಾ ॥೮೬॥**

(ಅರ್ಥ)

ಬಹಳವಾಗಿರುವದೇನೂ ಪ್ರಾಮಾಣ್ಯಕ್ಕೆ ಕಾರಣತ್ವವನ್ನು ಪಡೆಯಲಾರದು. ಆದ್ದರಿಂದ ಹೀಗೆನ್ನುತ್ತಾರೆ :

೮೬. ಪ್ರಮಾಣ್ಯಕ್ಕೆ ಬಾಹುಲ್ಯವು (ಕಾರಣ)ವಲ್ಲ[3], ಏಕೆಂದರೆ

---

1. ಕಾಮಿಗಳು ಅನೇಕರಾದ್ದರಿಂದ ಕಾಮಗಳೂ ಅನೇಕ.

2. ಕಾಮಪ್ರಾಪ್ತಿಗೆ ಉಪಾಯವಾಗಿರುವದರಿಂದ ಕರ್ಮಗಳನ್ನು ವಿಧಿಸುತ್ತವೆ ; ಅದರಿಂದ ಕರ್ಮವು ಮೋಕ್ಷಸಾಧನವೆಂದಾಗಲಿ ಜ್ಞಾನವು ಸಾಧನವಲ್ಲವೆಂದಾಗಲಿ ಸಂಭಾವನಾಯುಕ್ತಿಯನ್ನು ಹೇಳಿದಂತಾಗುವದಿಲ್ಲ.

3. ಬಹಳ ಕಾಮಗಳಿರುವದರಿಂದ ಕರ್ಮವಾಕ್ಯಗಳು ಬಹಳವಾಗಿವೆ ; ಕರ್ಮವು ಮೋಕ್ಷಕ್ಕೆ ಸಾಧನವೆಂಬುದಕ್ಕೆ ಇದೇನೂ ಪ್ರಮಾಣವಾಗಲಾರದು.

ಒಂದೇ ವಸ್ತುವಿನಲ್ಲಿ (ಎಲ್ಲಾ) ಪ್ರಮಾಣಗಳೂ ಪ್ರವರ್ತಿಸುವದಿಲ್ಲ ; ಒಂದರಲ್ಲಿ ಒಂದಕ್ಕೇ ಪ್ರಾಮಾಣ್ಯ (ವಿರುತ್ತದೆ)[1].

(ಮೂಲ)

ಯತ್ತೂಕ್ತಮ್ 'ಯತ್ನತೋ ವೀಕ್ಷಮಾಣೋಽಪಿ' (೧-೧೫) ಇತಿ, ತತ್ರಾಪಿ ಭವತ ಏವಾಪರಾಧಃ । ಕಸ್ಮಾತ್ ? ಯತಃ –

**ಪರೀಕ್ಷ್ಯ ಲೋಕಾನಿತ್ಯಾದ್ಯಾ ಆತ್ಮಜ್ಞಾನವಿಧಾಯಿನೀಃ ।**
**ನೈಷ್ಕರ್ಮ್ಯಪ್ರವಣಾಃ ಸಾಧ್ವೀಃ ಶ್ರುತೀಃ ಕಿಂ ನ ಶೃಣೋಷಿ ತಾಃ ॥೮೭॥**

(ಅರ್ಥ)

''ಇನ್ನು ಯತ್ನದಿಂದ ನೋಡಿದರೂ (ಜ್ಞಾನದ ವಿಧಿಯು ಕಾಣಿಸುವದಿಲ್ಲ)'' (೧-೧೫) ಎಂದು ಹೇಳಿದ್ದೆಯಲ್ಲ, ಅಲ್ಲಿಯೂ ನಿನ್ನದೇ ತಪ್ಪು, ಏಕೆ ? ಏಕೆಂದರೆ :

೮೭. ''(ಕರ್ಮದಿಂದಾಗುವ) ಲೋಕಗಳನ್ನು ಪರೀಕ್ಷಿಸಿ (ಬ್ರಾಹ್ಮಣನು ಅಕೃತವಾದದ್ದು ಕೃತದಿಂದಾಗದೆಂದು ವೈರಾಗ್ಯವನ್ನು ಹೊಂದಬೇಕು ; ಅದನ್ನು ತಿಳಿಯುವದಕ್ಕಾಗಿ ಅವನು ಗುರುವನ್ನೇ ಸೇರಬೇಕು)'' (ಮುಂ. ೧-೨-೧೨) ಮುಂತಾದ ಆತ್ಮಜ್ಞಾನವನ್ನು ವಿಧಿಸುವ[2] ನೈಷ್ಕರ್ಮ್ಯದ ಕಡೆಗೆ ತಿರುಗಿಸುವ[3] ಉತ್ತಮ ಶ್ರುತಿಗಳಿವೆಯಲ್ಲ,[4] ಅವುಗಳನ್ನು ಕೇಳಿಲ್ಲವೇನು ?

---

1. ಆಪ್ತೋಪದೇಶದಿಂದ ಬೆಂಕಿಯಿದೆ ಎಂದು ನಂಬುವದು, ಹೊಗೆಯ ದರ್ಶನದಿಂದ ಅನುಮಾನಿಸುವದು, ಹತ್ತಿರಕ್ಕೆ ಹೋದಾಗ ಅದನ್ನು ಕಾಣುವದು- ಹೀಗೆ ಆಯಾ ವಿಶೇಷವನ್ನೇ ಆಯಾ ಪ್ರಮಾಣವು ತಿಳಿಸುವದರಿಂದ ಅಲ್ಲಿಯೂ ಪ್ರಮಾಣ ಸಂಪ್ಲವವಿಲ್ಲ. ಒಂದೊಂದು ವಿಷಯಕ್ಕೆ ಒಂದೊಂದೇ ಪ್ರಮಾಣವು - ಎಂದು ಭಾವ. ಬೃ. ಭಾ. ದಲ್ಲಿ ಇದನ್ನು ಚರ್ಚಿಸಿದೆ.

2. ಆತ್ಮಜ್ಞಾನವನ್ನು ಉಪದೇಶಿಸುವ ಎಂದರ್ಥ.

3. ನೈಷ್ಕರ್ಮ್ಯದಲ್ಲಿ ಒಲವುಳ್ಳ.

4. ತಾತ್ಪರ್ಯದಿಂದ ಆತ್ಮವಸ್ತುವನ್ನೇ ಪ್ರತಿಪಾದಿಸುವದರಿಂದ ಅಬಾಧ್ಯವಾದ ಶ್ರುತಿಗಳು ಎಂದರ್ಥ.

(ಮೂಲ)

ನನು 'ಆತ್ಮೇತ್ಯೇವೋಪಾಸೀತ ' (ಬೃ . ೧-೪-೭), 'ಆತ್ಮಾ ವಾ ಅರೇ ದ್ರಷ್ಟವ್ಯಃ' (ಬೃ . ೨-೪-೫) ಇತ್ಯಪೂರ್ವವಿಧಿಶ್ರುತೇಃ ಪುರುಷಸ್ಯ ಆತ್ಮ ದರ್ಶನಕ್ರಿಯಾಯಾಂ ನಿಯೋಗೋಽವಸೀಯತ ಇತಿ । ನೈವಮ್ । ಅಪುರುಷತನ್ತ್ರತ್ವಾತ್ ವಸ್ತುಯಾಥಾತ್ಮ್ಯಜ್ಞಾನಸ್ಯ ಸಕಲಾನರ್ಥಬೀಜಾ ತ್ಮಾನವಬೋಧೋತ್ಸಾರಿಣೋ ಮುಕ್ತಿಹೇತೋರಿತಿ । ವಿಧ್ಯಭ್ಯುಪಗಮೇಽಪಿ ನಾಪೂರ್ವವಿಧಿರಯಮ್ । ಅತ ಆಹ –

ನಿಯಮಃ ಪರಿಸಂಖ್ಯಾ ವಾ ವಿಧ್ಯರ್ಥೋಽಪಿ ಭವೇದ್ಯತಃ ।
ಅನಾತ್ಮಾದರ್ಶನೇನೈವ ಪರಾತ್ಮಾನಮುಪಾಸ್ಮಹೇ ॥೮೮॥

(ಅರ್ಥ)

(ಆಕ್ಷೇಪ) :- 'ಆತ್ಮನೆಂದೇ ಉಪಾಸನೆಮಾಡಬೇಕು' (ಬೃ. ೧-೪-೭) 'ಎಲೈ , ಆತ್ಮನನ್ನೇ ದರ್ಶನಮಾಡಿಕೊಳ್ಳಬೇಕು' (ಬೃ. ೨-೪-೫) ಎಂಬ ಅಪೂರ್ವವಿಧಿಯು ಶ್ರುತಿಯಲ್ಲಿರುವದರಿಂದ ಪುರುಷನನ್ನು ಆತ್ಮದರ್ಶನ ಕ್ರಿಯೆಯಲ್ಲಿ ನಿಯೋಗಮಾಡಿರುತ್ತದೆ ಎಂದು ನಿಶ್ಚಯವಾಗುವದಿಲ್ಲವೆ[1]?

(ಪರಿಹಾರ) :- ಹಾಗಲ್ಲ. ಏಕೆಂದರೆ ಸಕಲಾನರ್ಥಗಳಿಗೂ ಬೀಜ ವಾಗಿರುವ ಆತ್ಮಜ್ಞಾನವನ್ನು ತೊಲಗಿಸುವ ಮುಕ್ತಿಹೇತುವಾದ (ಆತ್ಮ ) ವಸ್ತುತತ್ತ್ವಜ್ಞಾನವು ಪುರುಷತಂತ್ರವಲ್ಲ[2]. ವಿಧಿಯೆಂದು ಒಪ್ಪಿದರೂ (ಇದು) ಅಪೂರ್ವವಿಧಿಯಲ್ಲ. ಆದ್ದರಿಂದ ಹೇಳುತ್ತಾರೆ :

---

1. 'ಉಪಾಸನೆಮಾಡಬೇಕು' ಎಂದು ವಿಧಿಸಿರುವದು ವಾಕ್ಯಜ್ಞಾನವಲ್ಲ; ಏಕೆಂದರೆ ಶ್ರವಣಮಾತ್ರದಿಂದ ಉಂಟಾಗುವ ಅದನ್ನು ವಿಧಿಸುವ ಕಾರಣವಿಲ್ಲ, 'ದರ್ಶನ ಮಾಡಿಕೊಳ್ಳಬೇಕು' ಎಂಬಲ್ಲಿ ವಸ್ತುದರ್ಶನವನ್ನು ವಿಧಿಸಬೇಕಾದದ್ದಿಲ್ಲ; ಏಕೆಂದರೆ ಅದು ನಿತ್ಯಪ್ರಾಪ್ತವಾಗಿದೆ. ಆದ್ದರಿಂದ ಇಲ್ಲಿ ಜ್ಞಾನಾಭ್ಯಾಸದಿಂದ ಆತ್ಮದರ್ಶನವನ್ನು ಅಥವಾ ಅಸಂಸೃಷ್ಟಜ್ಞಾನವನ್ನು ಮಾಡಿಕೊಳ್ಳಬೇಕೆಂದು ವಿಧಿಸಿದೆ ; ಆದ್ದರಿಂದ ಅತ್ಯಂತವಾಗಿ ಅಪ್ರಾಪ್ತವಾದ ಅಭ್ಯಾಸವನ್ನು ವಿಧಿಸಿರುವದರಿಂದ ಇದು ಅಪೂರ್ವವಿಧಿ ಎಂದು ಪೂರ್ವಪಕ್ಷಿಯ ಮತ.

2. ಆತ್ಮಜ್ಞಾನವು ಪುರುಷತಂತ್ರವಲ್ಲ, ಹುಟ್ಟಿದಮಾತ್ರದಿಂದ ಅಜ್ಞಾನವನ್ನು ಕಳೆಯುತ್ತದೆ ಎಂದು (೧-೬೭) ಹಿಂದೆ ಹೇಳಿದೆ.

೮೮. ವಿದ್ಯರ್ಥವೂ ನಿಯಮವೋ ಪರಿಸಂಖ್ಯೆಯೋ ಆಗಬಹುದಾದ್ದರಿಂದ ಅನಾತ್ಮಾದರ್ಶನದಿಂದಲೇ ಪರಮಾತ್ಮನನ್ನು ಉಪಾಸನೆ ಮಾಡುತ್ತೇವೆ[1].

(ಮೂಲ)

ಯಚ್ಚೋಕ್ತಂ 'ವಿಶ್ವಾಸೋ ನಾನ್ಯತೋಽಸ್ತಿ ನಃ' (೧-೧೫) ಇತಿ ತದಪಿ ನಿದ್ರಾತುರಚೇತಸಾ ತ್ವಯಾ ಸ್ವಪ್ನಾಯಮಾನೇನ ಪ್ರಲಪಿತಮ್ । ಕಿಂ ಕಾರಣಮ್ ? ನ ಹಿ ವಯಂ ಪ್ರಮಾಣಬಲೇನ ಐಕಾತ್ಮ್ಯಂ ಪ್ರತಿ ಪದ್ಯಾಮಹೇ । ಐಕಾತ್ಮ್ಯಸ್ಯ ಸ್ವತ ಏವ ಅನುಭವಮಾತ್ರಾತ್ಮಕತ್ವಾತ್ । ಅತ ಏವ ಸರ್ವಪ್ರಮಾಣಾವತಾರಾಸಂಭವಂ ವಕ್ಷ್ಯತಿ । ಪ್ರಮಾಣ ವ್ಯವಸ್ಥಾಯಾಶ್ಚ ಅನುಭವಮಾತ್ರಾಶ್ರಯತ್ವಾತ್ । ಅತ ಆಹ–

ವಾಕ್ಯೈಕಗಮ್ಯಂ ಯದ್ವಸ್ತು ನಾನ್ಯಸ್ಮಾತ್ ತತ್ರ ವಿಶ್ವಸೇತ್ ।
ನಾಪ್ರಮೇಯೇ ಸ್ವತಃಸಿದ್ಧೇಽವಿಶ್ವಾಸಃ ಕಥಮಾತ್ಮನಿ ॥೮೯॥

---

1. 'ವಿಧಿರತ್ಯನ್ತಮಪ್ರಾಪ್ತೇ ನಿಯಮಃ ಪಾಕ್ಷಿಕೇ ಸತಿ । ತತ್ರ ಚಾನ್ಯತ್ರ ಚ ಪ್ರಾಪ್ತೇ ಪರಿಸಂಖ್ಯೇತಿ ಕೀರ್ತ್ಯತೇ' (ತಂ. ವಾ. ೧-೨-೩೪, ಪು. ೧೫೨) ಎಂಬ ಶ್ಲೋಕದಲ್ಲಿ ಮೂರು ಬಗೆಯ ವಿಧಿಗಳನ್ನೂ ವಿವೇಚನೆಮಾಡಿ ತಿಳಿಸಿದೆ. ಅಪ್ರಾಪ್ತವಾದದ್ದನ್ನು ಹೇಳಿಲ್ಲವಾದ್ದರಿಂದ ಇದು ಅಪೂರ್ವವಿಧಿಯಲ್ಲ. ಅಜ್ಞಾನವು ನಿವೃತ್ತವಾದರೂ ಪ್ರಾರಬ್ಧಕರ್ಮವಶದಿಂದ ಶರೀರಸ್ಥಿತಿಹೇತುವಾದ ಕರ್ಮಗಳಲ್ಲಿಯೂ ಪ್ರವೃತ್ತಿಯಾಗುವದರಿಂದ ಜ್ಞಾನಪ್ರವೃತ್ತಿಯು ದುರ್ಬಲವಾಗಬಹುದು ; ಆಗ ಆತ್ಮಜ್ಞಾನವನ್ನು ಬಿಡಬಾರದು ಎಂದು ನಿಯಮವಿಧಿಯಾಗಬಹುದು. ಆತ್ಮದರ್ಶನದಂತೆ ಅನಾತ್ಮದರ್ಶನವೂ ಪ್ರಾಪ್ತವಾಗಬಹುದು, ಅದನ್ನು ಮಾಡಬಾರದು ಎಂದು ಪರಿಸಂಖ್ಯಾವಿಧಿಯೆಂದು ಆಶ್ರಯಿಸಬಹುದು -ಎಂಬುದು ಶ್ಲೋಕದ ಅಭಿಪ್ರಾಯ. ವಿಧಿಯನ್ನು ಒಪ್ಪಿರುವದು ವಿಧಿವಾದಕ್ಕೆ ದೌರ್ಬಲ್ಯವುಂಟಾಗಲೆಂದು ; ನಿಜವಾಗಿ ವಿಧಿಯು ಸಂಭವಿಸುವದೇ ಇಲ್ಲ. ಏಕೆಂದರೆ ಆತ್ಮೋಪಾಸನೆಗೆ ಅಪ್ರಾಪ್ತಿಯಾಗಲಿ, ಪಕ್ಷದಲ್ಲಿ ಅಪ್ರಾಪ್ತಿಯಾಗಲಿ ಆತ್ಮಾನಾತ್ಮೋಪಾಸನೆಗಳೆರಡಕ್ಕೂ ಸಮಪ್ರಾಪ್ತಿಯಾಗಲಿ ಇಲ್ಲ. ಬೃ. ವಾ. ೧-೪-೯೨೧ ರಿಂದ ೯೩೧ರ ವರೆಗಿನ ಗ್ರಂಥಭಾಗವನ್ನು ನೋಡಿ.

(ಅರ್ಥ)

'(ಶ್ರುತಿಸ್ಮೃತಿಗಳನ್ನು ಬಿಟ್ಟು) ಮಿಕ್ಕವುಗಳಲ್ಲಿ ನಮಗೆ ವಿಶ್ವಾಸವಿಲ್ಲ' (೧-೧೫) ಎಂದೆಯಲ್ಲ, ಅದೂ ನಿದ್ರೆಯಿಂದ ನರಳುತ್ತಿರುವ ಚಿತ್ತವುಳ್ಳ ನೀನು ಕನವರಿಕೆಯಿಂದ ಹರಟಿದ್ದು[1]. ಕಾರಣವೇನು ? ಎಂದರೆ ನಾವು ಪ್ರಮಾಣ ಬಲದಿಂದ ಐಕಾತ್ಮ್ಯವನ್ನು ಅರಿತುಕೊಳ್ಳುವದಿಲ್ಲ. ಏಕೆಂದರೆ ಐಕಾತ್ಮ್ಯವು ತಾನೇ ಅನುಭವಮಾತ್ರಸ್ವರೂಪವಾಗಿರುತ್ತದೆ. ಆದ್ದರಿಂದಲೇ ಪ್ರಮಾಣದ ನಿಲುಗಡೆಯೂ ಅನುಭವಮಾತ್ರವನ್ನೇ ಆಶ್ರಯಿಸಿರುವದರಿಂದ ಇಲ್ಲಿ ಯಾವ ಪ್ರಮಾಣವೂ ಬಂದಿಳಿಯುವಂತಿಲ್ಲವೆಂದು ಮುಂದೆ (೨-೩೭) ಹೇಳುವರು. ಆದ್ದರಿಂದ ಹೀಗೆನ್ನುತ್ತಾರೆ :

೮೯. ಯಾವ ವಸ್ತು ಬರಿಯ ವಾಕ್ಯದಿಂದಲೇ ಸಿದ್ಧವಾಗತಕ್ಕದ್ದೋ ಅಲ್ಲಿ ಮತ್ತೊಂದರಿಂದ ನಂಬತಕ್ಕದ್ದಲ್ಲ, ಅಪ್ರಮೇಯ (ವಸ್ತು)ವಿನಲ್ಲಿ ಹೀಗಲ್ಲ. ಸ್ವತಃಸಿದ್ಧವಾದ ಆತ್ಮನಲ್ಲಿ ಅವಿಶ್ವಾಸವಾದರೂ ಹೇಗೆ[2] ?

(ಮೂಲ)

**ಯದಪ್ಯುಕ್ತಮ್ 'ಅನ್ತರೇಣ ವಿಧಿಮ್' (೧-೧೬) ಇತಿ, ತದಪ್ಯ ಬುದ್ಧಿ ಪೂರ್ವಕಮಿವ ನಃ ಪ್ರತಿಭಾತಿ । ಯಸ್ಮಾತ್ ಕಾಲಾನ್ತರಫಲದಾಯಿಷು ಕರ್ಮಸ್ವೇತದ್ ಘಟತೇ । ಆತ್ಮಲಾಭಕಾಲ ಏವ ಫಲದಾಯಿನಿ ತ್ವಾತ್ಮಜ್ಞಾನೇ ನೈತತ್ ಸಮಞ್ಜಸಮ್ ಇತ್ಯಾಹ–**

**ಜ್ಞಾನಾತ್ ಫಲೇ ಹ್ಯವಾಪ್ತೇಽಸ್ಮಿನ್ ಪ್ರತ್ಯಕ್ಷೇ ಭವಘಾತಿನಿ ।**
**ಉಪಕಾರಾಯ ತನ್ನೇತಿ ನ ನ್ಯಾಯ್ಯಂ ಭಾತಿ ನೋ ವಚಃ ॥೯೦॥**

---

1. ಅಜ್ಞಾನನಿದ್ರೆಯಲ್ಲಿ ತಪ್ಪುತಿಳಿವಳಿಕೆಯೆಂಬ ಕನವರಿಕೆಯಾಗಿ ಹೇಳಿದ ಮಾತು.

2. ವಿಶ್ವಾಸವಾಗಲಿ ಅವಿಶ್ವಾಸವಾಗಲಿ, ಪ್ರಮಾಣದಿಂದ ಸಿದ್ಧವಾಗಬೇಕಾಗಿರುವ ಅನಾತ್ಮದಲ್ಲಿ ಆಗಬಹುದು. ಆದರೆ ಸ್ವತಃಸಿದ್ಧನಾದ ಆತ್ಮನಲ್ಲಿ ಅವಿಶ್ವಾಸವಿಲ್ಲ. ಏಕೆಂದರೆ ಪ್ರಮಾಣಗಳ ಸಿದ್ಧಿಯೂ ಅವನಿಂದಲೇ ಆಗಬೇಕಾಗಿದೆ ; ಮತ್ತು ವಿಶ್ವಾಸವಿಲ್ಲವೆಂಬವನಿಗೂ ಅವನು ಆತ್ಮನೇ ಆಗಿರುತ್ತಾನೆ ಎಂದಭಿಪ್ರಾಯ.

(ಅರ್ಥ)

'ವಿಧಿಯಿಲ್ಲದೆ (ಪಾರಲೌಕಿಕಕರ್ಮವನ್ನು ಮಾಡಿದರೆ ಅದರಿಂದ ಯಾವ ಉಪಕಾರವೂ ಇಲ್ಲ)' (೧-೧೬) ಎಂದಿರಲ್ಲ, ಅದು ಬುದ್ಧಿಪೂರ್ವಕವಾಗಿ (ಆಡಿದ ಮಾತಲ್ಲ) ಎಂದು ನಮಗೆ ತೋರುತ್ತದೆ. ಏಕೆಂದರೆ ಕಾಲಾಂತರದಲ್ಲಿ ಫಲವನ್ನು ಕೊಡುವ ಕರ್ಮಗಳಲ್ಲಿ ಈ (ಮಾತು) ಹೊಂದುತ್ತದೆ ; ಆದರೆ ಹುಟ್ಟುವ ಕಾಲದಲ್ಲಿಯೇ ಫಲವನ್ನು ಕೊಡುವ ಆತ್ಮಜ್ಞಾನದ ವಿಷಯದಲ್ಲಿ ಇದು ಸಮಂಜಸವಲ್ಲ[1] ಎಂದು ಹೇಳುತ್ತಾರೆ :

೯೦. ಜ್ಞಾನದಿಂದ ಸಂಸಾರವನ್ನು ನಾಶಮಾಡುವ ಈ ಫಲವು ಪ್ರತ್ಯಕ್ಷವಾಗಿ ಪ್ರಾಪ್ತವಾದ ಬಳಿಕ ಇದು ಉಪಕಾರವನ್ನುಂಟುಮಾಡುವದಿಲ್ಲ ಎಂಬ ಮಾತು ನಮಗೆ ಯುಕ್ತವಾಗಿ ತೋರುವದಿಲ್ಲ.

(ಮೂಲ)

ಯದಪಿ ಜೈಮಿನೀಯಂ ವಚನಮ್ (೧-೧೭) ಉದ್ಘಾಟಯಸಿ ತದಪಿ ತದ್ವಿವಕ್ಷಾಪರಿಜ್ಞಾನಾದೇವೋದ್ಭಾವ್ಯತೇ । ಕಿಂ ಕಾರಣಮ್ ? ಯತೋ ನ ಜೈಮಿನೇರಯಮಭಿಪ್ರಾಯಃ ಆಮ್ನಾಯಃ ಸರ್ವ ಏವ ಕ್ರಿಯಾರ್ಥ ಇತಿ । ಯದಿ ಹ್ಯಯಮ್ ಅಭಿಪ್ರಾಯೋಽಭವಿಷ್ಯತ್ 'ಅಥಾತೋ ಬ್ರಹ್ಮಜಿಜ್ಞಾಸಾ' (ಬ್ರ.ಸೂ. ೧-೧-೧) 'ಜನ್ಮಾದ್ಯಸ್ಯ ಯತಃ' (ಬ್ರ.ಸೂ. ೧-೧-೨) ಇತ್ಯೇವಮಾದಿಬ್ರಹ್ಮವಸ್ತುಸ್ವರೂಪಮಾತ್ರಯಾಥಾತ್ಮ್ಯಪ್ರಕಾಶನಪರಂ ಗಮ್ಭೀರನ್ಯಾಯಸಂದೃಬ್ಧಂ ಸರ್ವವೇದಾನ್ತಾರ್ಥಮೀಮಾಂಸನಂ ಶ್ರೀಮಚ್ಛಾರೀರಕಂ ನಾಸೂತ್ರಯಿಷ್ಯತ್ । ಅಸೂತ್ರಯಚ್ಚ । ತಸ್ಮಾಜ್ಜೈಮಿನೇರೇವಾಯಮಭಿಪ್ರಾಯೋ ಯಥೈವ ವಿಧಿವಾಕ್ಯಾನಾಂ ಸ್ವಾರ್ಥಮಾತ್ರೇ ಪ್ರಾಮಾಣ್ಯಮ್, ಏವಮ್ ಐಕಾತ್ಮ್ಯವಾಕ್ಯಾನಾಮಪಿ ಅನಧಿಗತವಸ್ತುಪರಿಚ್ಛೇದಸಾಮ್ಯಾತ್ ಇತಿ । ಅತ ಇದಮಭಿಧೀಯತೇ –

1. ಸೂ. ಭಾ. ೩-೩-೩೨ನ್ನು ನೋಡಿ.

**ಅಧಿಚೋದನಂ ಯ ಆಮ್ನಾಯ[1]ಸ್ತಸ್ಯೈವ ಸ್ಯಾತ್ ಕ್ರಿಯಾರ್ಥತಾ ।**
**ತತ್ತ್ವಮಸ್ಯಾದಿವಾಕ್ಯಾನಾಂ ಬ್ರೂತ ಕರ್ಮಾರ್ಥತಾ ಕಥಮ್॥೯೧॥**

(ಅರ್ಥ)

ಇನ್ನು ಜೈಮಿನಿಗಳ ವಚನವನ್ನು (೧-೧೭) ತೆಗೆಯುತ್ತಿರುವೆಯಲ್ಲ, ಅದೂ ಅವರ ವಿವಕ್ಷೆಯನ್ನು ಅರಿತುಕೊಳ್ಳದ್ದರಿಂದಲೇ ತೆಗೆದದು. ಕಾರಣವೇನು ? ಏಕೆಂದರೆ ಜೈಮಿನಿಗಳಿಗೆ ಸರ್ವ ಆಮ್ನಾಯವೂ ಕ್ರಿಯಾರ್ಥವೆಂದೇನೂ ಅಭಿಪ್ರಾಯವಿಲ್ಲ. ಇದೇ (ಅವರ)ಅಭಿಪ್ರಾಯವಾಗಿರುತ್ತಿದ್ದರೆ 'ಅಥಾತೋ ಬ್ರಹ್ಮಜಿಜ್ಞಾಸಾ' (ಇನ್ನು ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕು. ಬ್ರ.ಸೂ. ೧-೧-೧), 'ಜನ್ಮಾದ್ಯಸ್ಯ ಯತಃ' (ಯಾವದರಿಂದ ಈ ಜಗತ್ತಿನ ಜನ್ಮಾದಿಗಳುಂಟಾಗುವವೋ ಅದು ಬ್ರಹ್ಮವು, ಬ್ರ.ಸೂ. ೧-೧-೨) ಎಂಬಿದೇ ಮುಂತಾದ ಬ್ರಹ್ಮವಸ್ತುಸ್ವರೂಪಮಾತ್ರದ ತತ್ತ್ವವನ್ನು ಬೆಳಗುವದರಲ್ಲಿ ತಾತ್ಪರ್ಯವುಳ್ಳ ಗಂಭೀರನ್ಯಾಯಸಂದೃಬ್ಧವಾದ ಸರ್ವವೇದಾಂತಾರ್ಥಮೀಮಾಂಸವಾಗಿರುವ ಶ್ರೀಮಚ್ಛಾರೀರಕವನ್ನು (ಬಾದರಾಯಣರು)[2] ಸೂತ್ರಿಸುತ್ತಿರಲಿಲ್ಲ ; ಆದರೆ ಸೂತ್ರಿಸಿರುತ್ತಾರೆ.[3]

---

1. ಛಂದಸ್ಸು ಸರಿಯಾಗುವದಕ್ಕಾಗಿ ಅಧಿಚೋದನಮಾಮ್ನಾಯಃ ಎಂಬ ಪಾಠವನ್ನು ಅಂಗೀಕರಿಸಿರುತ್ತಾರೆ. ಆಗ ಯಚ್ಛಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುವದು.

2. ಮೂಲದಲ್ಲಿರುವಂತೆ ಕನ್ನಡಿಸಿದರೆ ಜೈಮಿನಿಗಳೇ ಈ ಶಾಸ್ತ್ರವನ್ನು ರಚಿಸಿದರೆಂಬ ತಪ್ಪು ಅಭಿಪ್ರಾಯವುಂಟಾಗುತ್ತದೆ. ಆದರೆ ಮೂಲಕಾರರಿಗೆ ಈ ಅಭಿಪ್ರಾಯವಿತ್ತೆಂಬುದಕ್ಕೆ ನಿಶ್ಚಿತವಾದ ಪ್ರಮಾಣವು ಯಾವದೂ ಇರುವದಿಲ್ಲ. ಸಂ. ವಾ. (೧-೨೪೫)ವನ್ನು ನೋಡಿ. ಶಾರೀರಕ ಶಾಸ್ತ್ರವು ವಸ್ತುಮಾತ್ರವನ್ನು ವಿಚಾರಮಾಡುವ ವೇದಾಂತಗಳ ಸಂಬಂಧವಾದ ಬೇರೊಂದು ಶಾಸ್ತ್ರವೆಂದು ಭಾವ. ಶಾರೀರಕದ ವಿಷಯಕ್ಕೆ ಪೀಠಿಕೆಯನ್ನು ನೋಡಿ.

3. ಬ್ರಹ್ಮೋಪಾಸನೆಗಳನ್ನೂ ಪ್ರಾಣೋಪಾಸನಾದಿಗಳನ್ನೂ ಈ ಶಾಸ್ತ್ರದಲ್ಲಿ ಹೇಳಿದೆಯಾದರೂ ಪ್ರಧಾನವಾಗಿ ಬ್ರಹ್ಮವನ್ನೇ ಹೇಳಿದೆ ಎಂಬುದು ಮೊದಲನೆಯ ಎರಡು ಸೂತ್ರಗಳಿಂದ ಗೊತ್ತಾಗುತ್ತದೆ ಎಂದರ್ಥ. 'ಶಾಸ್ತ್ರಯೋನಿತ್ವಾತ್' (೧-೧-೩) ಎಂದು ಅದಕ್ಕೆ ವೇದಪ್ರಾಮಾಣ್ಯವನ್ನು ತೋರಿಸಿರುವದರಿಂದಲೂ ಎಂದು ಸೇರಿಸಿಕೊಳ್ಳಬೇಕು. ಗಂಭೀರ ನ್ಯಾಯಸಂದೃಬ್ಧವಾದ ಸರ್ವವೇದಾರ್ಥಮೀಮಾಂಸಾರ್ಥವಾಗಿರುವ ಎಂಬ ವಿಶೇಷಣವು ಪೂರ್ವಮೀಮಾಂಸಕದಂತೆಯೇ ಇದೂ ನ್ಯಾಯದಿಂದ ವಾಕ್ಯನಿರ್ಣಯವನ್ನು ಮಾಡುವ ಶಾಸ್ತ್ರವೆಂದು ತಿಳಿಸುವದಕ್ಕೆ.

ಆದ್ದರಿಂದ ಜೈಮಿನಿಗಳಿಗೇ ಹೇಗೆ ವಿಧಿವಾಕ್ಯಗಳಿಗೆ ಸ್ವಾರ್ಥಮಾತ್ರದಲ್ಲಿ ಪ್ರಾಮಾಣ್ಯವಿದೆಯೋ ಹಾಗೆಯೇ ಐಕಾತ್ಮ್ಯವಾಕ್ಯಗಳಿಗೂ ಪ್ರಾಮಾಣ್ಯವು. ಏಕೆಂದರೆ ಅಜ್ಞಾತವಸ್ತುವನ್ನು ತಿಳಿಯಪಡಿಸುವದು (ಎರಡಕ್ಕೂ) ಸಮಾನವಾಗಿರುತ್ತದೆ ಎಂಬುದು ಅಭಿಪ್ರಾಯವು[1]. ಆದ್ದರಿಂದ ಇದನ್ನು ಹೇಳುತ್ತಾರೆ.

೯೧. ಚೋದನೆಯ ವಿಷಯದ ಆಮ್ನಾಯವಿದೆಯಲ್ಲ, ಅದಕ್ಕೇ ಕ್ರಿಯಾರ್ಥತ್ವವಾಗಬಹುದು. 'ತತ್ತ್ವಮಸಿ' ಮುಂತಾದ ವಾಕ್ಯಗಳು ಕರ್ಮಾರ್ಥವೆಂಬುದು ಹೇಗೆಂಬುದನ್ನು ಹೇಳಿರಿ.

(ಮೂಲ)

**ಅಪಿ ಚ ಐಕಾತ್ಮ್ಯಪಕ್ಷ ಇವ ಅದೃಷ್ಟಾರ್ಥಕರ್ಮಸು ಭವತ್ಪಕ್ಷೇಽಪಿ ಪ್ರವೃತ್ತಿರ್ದುರ್ಲಕ್ಷ್ಯಾ । ಯತಃ–**

**ಸ್ವರ್ಗಂ ಯಿಯಾಸುರ್ಜುಹುಯಾದಗ್ನಿಹೋತ್ರಂ ಯಥಾವಿಧಿ ।**
**ದೇಹಾದ್ವ್ಯತ್ಥಾಪಿತಸ್ಯೈವಂ ಕರ್ತೃತ್ವಂ ಜೈಮಿನೇಃ ಕಥಮ್ ॥೯೨॥**

(ಅರ್ಥ)

ಇದಲ್ಲದೆ ಅದೃಷ್ಟಾರ್ಥವಾದ ಕರ್ಮಗಳಲ್ಲಿ ಐಕಾತ್ಮ್ಯಪಕ್ಷದಂತೆಯೇ ನಿಮ್ಮ ಪಕ್ಷದಲ್ಲಿಯೂ ಪ್ರವೃತ್ತಿಯನ್ನು ಕಾಣುವದಕ್ಕಾಗಲಾರದು[2]. ಏಕೆಂದರೆ :

೯೨. ಸ್ವರ್ಗಕ್ಕೆ ಹೋಗಬೇಕೆಂಬ ಇಚ್ಛೆಯುಳ್ಳವನು ಯಥಾವಿಧಿಯಾಗಿ ಅಗ್ನಿಹೋತ್ರಹೋಮವನ್ನು ಮಾಡಬೇಕು -ಎಂದಿಂತು ದೇಹದಿಂದ ಬಿಟ್ಟೆಬ್ಬಿಸಿದವನಿಗೆ ಜೈಮಿನಿಯ (ಮತದಲ್ಲಿ) ಕರ್ತೃತ್ವವು ಹೇಗೆ[3] ?

---

1. ಅನಧಿಗತವಾದ ಅಬಾಧಿತವಾದ ಪ್ರಮೇಯವನ್ನು ತಿಳಿಸುವದೇ ಶಾಸ್ತ್ರ ಪ್ರಾಮಾಣ್ಯಕಾರಣವು ಎಂದು ಜೈ. ಸೂ.೧-೧-೫ರಲ್ಲಿ ಸ್ಪಷ್ಟವಾಗಿರುತ್ತದೆ ಎಂದು ಭಾವ.

2. ''ಕುರ್ವನ್ನೇವೇಹ'' ಎಂಬ ಪ್ರಮಾಣವಚನವನ್ನು ಪೂರ್ವಪಕ್ಷಿಯು (೧-೧-೮ರಲ್ಲಿ) ಉದಾಹರಿಸಿದ್ದನು. ಅದು ಅಜ್ಞವಿಷಯವೆಂದು ತಿಳಿಸುವದಕ್ಕೆ ಈ ಗ್ರಂಥಭಾಗವು ಬಂದಿದೆ.

3. ''ನ ಚಾನಧ್ಯಸ್ತಾತ್ಮಭಾವೇನ ದೇಹೇನ ಕಶ್ಚಿದ್ವ್ಯಾಪ್ರಿಯತೇ'' ಎಂಬ ಭಾಷ್ಯವನ್ನು ಇದಕ್ಕೆ ಹೋಲಿಸಿರಿ.

(ಮೂಲ)

ನ ಚ ಪ್ರತ್ಯಾಖ್ಯಾತಾಶೇಷಶರೀರಾದಿಕರ್ಮಸಾಧನಸ್ವಭಾವಸ್ಯ ಆತ್ಮಮಾತ್ರಸ್ಯ ಕರ್ಮಸ್ವಧಿಕಾರಃ । ಯಸ್ಮಾತ್ –

**ಸರ್ವಪ್ರಮಾಣಾಸಂಭಾವ್ಯೋ ಹ್ಯಹಂವೃತ್ತ್ಯೈಕಸಾಧನಃ ।**
**ಯುಷ್ಮದರ್ಥಮನಾದಿತ್ಸುರ್ಜೈಮಿನಿಃ ಪ್ರೇರ್ಯತೇ ಕಥಮ್ ॥೯೩॥**

(ಅರ್ಥ)

ಶರೀರವೇ ಮುಂತಾದ ಕರ್ಮಸಾಧನಗಳು ಯಾವವೂ ಇಲ್ಲದ ಸ್ವಭಾವವುಳ್ಳ ಆತ್ಮಮಾತ್ರಕ್ಕೆ ಕರ್ಮಗಳಲ್ಲಿ ಅಧಿಕಾರವಿಲ್ಲವೂ ಇಲ್ಲ. ಏಕೆಂದರೆ :

೯೩. ಯಾವ ಪ್ರಮಾಣಗಳಿಂದಲೂ ಸಂಭಾವಿತಾಸ್ತಿತ್ವನಲ್ಲದ, ಅಹಂ ವೃತ್ತಿಯೊಂದರಿಂದಲೇ ಸಿದ್ಧನಾಗುವ[1] ನೀನೆಂಬರ್ಥವನ್ನು ತೆಗೆದುಕೊಳ್ಳುವದಕ್ಕಿಚ್ಛಿಸದ[2] ಜೈಮಿನಿಯು[3] ಹೇಗೆತಾನೆ ಪ್ರೇರಿತನಾದಾನು[4]?

(ಮೂಲ)

ಪ್ರವೃತ್ತಿಕಾರಣಾಭಾವಾಚ್ಚ । ಯಸ್ಮಾತ್ –

**ಸುಖದುಃಖಾದಿಭಿರ್ಯೋಗ ಆತ್ಮನೋ ನಾಹಮೀಕ್ಷ್ಯತೇ ।**
**ಪರಾಕ್ತ್ವಾತ್ ಪ್ರತ್ಯಗಾತ್ಮತ್ವಾಜ್ಜೈಮಿನಿಃ ಪ್ರೇರ್ಯತೇ ಕಥಮ್॥೯೪॥**

(ಅರ್ಥ)

ಪ್ರವೃತ್ತಿಗೆ ಕಾರಣವಿಲ್ಲದ್ದರಿಂದಲೂ (ಪ್ರವೃತ್ತಿಯಿಲ್ಲ). ಏಕೆಂದರೆ :

೯೪. ಅಹಂ(ಪ್ರತ್ಯಯಿಯಾದ ಆತ್ಮನು) ತನಗೆಸುಖದುಃಖಾದಿಗಳ ಸಂಬಂಧ(ವಿದೆ ಎಂಬುದನ್ನು) ಕಾಣಲಾರನು. ಏಕೆಂದರೆ (ಅವು)

---

1. ಮೀಮಾಂಸಕರು ಹೀಗೆಂದು ಒಪ್ಪಿರುತ್ತಾರೆ.

2. ಅಹಂಕಾರವ್ಯತಿರಿಕ್ತವಾದ ದೇಹೇಂದ್ರಿಯವಿಷಯಕವೆಲ್ಲವೂ ಯುಷ್ಮದರ್ಥವು, ಅನಾತ್ಮನು, ಎಂದು ಮೀಮಾಂಸಕರ ಮತ.

3. ಕರ್ಮಮೀಮಾಂಸಕನು ಎಂದರ್ಥ.

4. ಅಧಿಕಾರಿಗೆ ಬೇಕಾದ ಶರೀರಾದಿಗಳೇ ಇಲ್ಲವಲ್ಲ!

ಬಾಹ್ಯ(ವಿಷಯ)ಗಳಾಗಿರುತ್ತವೆ, (ಇವನು) ಪ್ರತ್ಯಗ್ರೂಪನಾಗಿರುತ್ತಾನೆ[1]. (ಹೀಗಿರುವಲ್ಲಿ) ಜೈಮಿನಿಯು ಹೇಗೆತಾನೆ ಪ್ರೇರಿತನಾದಾನು[2]?

(ಮೂಲ)

**ಕಿಂ ಚ –**

**ನ ತಾವದ್ಯೋಗ ಏವಾಸ್ತಿ ಶರೀರೇಣಾತ್ಮನಃ ಸದಾ । ವಿಷಯೈ –**
**ರ್ದೂರತೋ ನಾಸ್ತಿ ಸ್ವರ್ಗಾದೌ ಸ್ಯಾತ್ ಕಥಂ ಸುಖಮ್ ॥೯೫॥**

(ಅರ್ಥ)

ಇದಲ್ಲದೆ :

೯೫. ಮೊದಲನೆಯದಾಗಿ ಎಂದಿಗೂ ಆತ್ಮನಿಗೆ ಶರೀರದ ಸಂಬಂಧವು ಯಾವಾಗಲೂ ಇಲ್ಲ. ವಿಷಯಗಳ (ಸಂಬಂಧವು) ಇನ್ನೂ ದೂರವಾದ್ದರಿಂದ ಇಲ್ಲ. (ಇನ್ನು) ಸ್ವರ್ಗಾದಿಗಳಲ್ಲಿ ಸುಖವು ಹೇಗಾದೀತು[3] ?

(ಮೂಲ)

**ಯಸ್ಮಾದನ್ಯಥಾ ನೋಪಪದ್ಯತೇ –**

**ನರಾಭಿಮಾನಿನಂ ತಸ್ಮಾತ್ ಕಾರಕಾದ್ಯಾತ್ಮದರ್ಶಿನಮ್ ।**
**ಮನ್ತ್ರ ಆಹೋರರೀಕೃತ್ಯ ಕುರ್ವನ್ನಿತಿ ನ ನಿರ್ದ್ವಯಮ್ ॥೯೬॥**

---

1. ಅಹಂಕಾರವು ಮಿಕ್ಕ ದೇಹಾದಿಗಳಿಗಿಂತ ಒಳಗಿರುತ್ತದೆ.

2. ವಿಷಯಿಗೆ ವಿಷಯವು ಸಂಬಂಧಿಸುವಹಾಗಿಲ್ಲ ; ತನ್ನನ್ನು ತಾನೇ ನೋಡುವಂತೆಯೂ ಇಲ್ಲ. ಆದ್ದರಿಂದ ವಿಷಯಿಯಾದ ಆತ್ಮನಿಗೆ ವಿಷಯವಾದ ಸುಖದುಃಖಗಳ ಸಂಬಂಧವು ಅನುಭವಕ್ಕೆ ಬರುವಂತಿಲ್ಲ. ಭೋಕ್ತೃತ್ವವೇ ಅನುಭವದಲ್ಲಿಲ್ಲದವನು ಕರ್ಮದಲ್ಲಿ ಹೇಗೆ ತೊಡಗುವನು ?

3. ಶರೀರಕ್ಕೆ ಇಂದ್ರಿಯವಿಷಯಗಳಿಂದಾಗುವ ಸುಖವು ಶರೀರಾದಿಗಳಿಲ್ಲದವನಿಗೆ ಹೇಗಾಗಬೇಕು ? ಅದಿಲ್ಲದಿದ್ದರೆ ಕರ್ಮದಲ್ಲಿ ಯಾವನು ತಾನೆ ತೊಡಗುವನು ? ಧರ್ಮಾಧರ್ಮಗಳಿಂದ ಶರೀರವಾಗಬೇಕು. ಶರೀರದಿಂದ ಧರ್ಮಾಧರ್ಮಗಳಾಗಬೇಕು- ಎಂಬ ಅನ್ಯೋನ್ಯಾಶ್ರಯವಿರುವದರಿಂದ ಅಥವಾ ಧರ್ಮಾಧರ್ಮ, ಶರೀರ - ಇವುಗಳಲ್ಲಿ ಯಾವದು ಮೊದಲೆಂಬುದು ಗೊತ್ತಿಲ್ಲದ ಅನವಸ್ಥಾದೋಷವಿರುವದರಿಂದ ಆತ್ಮನಿಗೆ ಶರೀರಸಂಬಂಧವು ಸಿದ್ಧಿಸುವದೇ ಇಲ್ಲ - ಎಂದು ಭಾವ. ಸೂ. ಭಾ. ೧-೧-೪ ನೋಡಿ.

(ಅರ್ಥ)

ಬೇರೆ (ಯಾವ) ವಿಧದಿಂದಲೂ ಹೊಂದುವದಿಲ್ಲವಾದ್ದರಿಂದ :

೯೬. ಆದ್ದರಿಂದ ಮನುಷ್ಯನು ತಾನೆಂಬ ಅಭಿಮಾನವುಳ್ಳವನಾಗಿ ಕಾರಕಾದ್ಯಾತ್ಮನು ತಾನೆಂಬ ತಿಳಿವಳಿಕೆಯುಳ್ಳ (ಅಜ್ಞನನ್ನು)[1] ಇಟ್ಟುಕೊಂಡು 'ಕುರ್ವನ್' (ಈ.೨) ಎಂಬ ಮಂತ್ರವು ಹೇಳುತ್ತದೆಯೇ ಹೊರತು ಅದ್ವೈತಾತ್ಮನನ್ನು ಇಟ್ಟುಕೊಂಡು ಹೇಳುವದಿಲ್ಲ[2].

(ಮೂಲ)

ಯಚ್ಚೋಕ್ತಮ್ 'ವಿರಹಯ್ಯ' (೧-೧೯) ಇತಿ ತದಪಿ ನಃ ಸಮ್ಯಗೇವ[3] । ತಥಾಪಿ ತು ನ ಯಾ ಕಾಚಿತ್ ಕ್ರಿಯಾ ಯತ್ರ ಕ್ವಚಾಧ್ಯಾ-ಹರಣೀಯಾ ಕಿಂ ತು ಯಾ ಯತ್ರ ಅಭಿಪ್ರೇತಸಂಬನ್ಧಂ ಘಟಯಿತುಂ ಶಕ್ನೋತಿ ಆಕಾಙ್ಕ್ಷಾಂ ಚ ವಾಕ್ಯಸ್ಯ ಪೂರಯತಿ ಸೈವ ಅಧ್ಯಾಹರಣೀಯಾ ಏವಂವಿಶಿಷ್ಟಾ ಚ ಕ್ರಿಯಾ ಅಸ್ಮಾಭಿರಭ್ಯುಪಗತೈವ । ಸಾ ತೂಪಾದಿತ್ಸಿತ ವಾಕ್ಯಾರ್ಥಾವಿರೋಧಿನ್ಯೇವ ನಾಭೂತಾರ್ಥಪ್ರಾದುರ್ಭಾವಫಲೇತಿ ಷಡ್ಭಾವ ವಿಕಾರರಹಿತಾತ್ಮವಸ್ತುನೋ ನಿರ್ಧೂತಾಶೇಷದ್ವೈತಾನರ್ಥಸ್ಯ ಅಪರಾಧೀನ ಪ್ರಕಾಶಸ್ಯ ವಿಜಿಜ್ಞಾಪಯಿಷಿತತ್ವಾತ್ 'ಅಸಿ' 'ಅಸ್ಮಿ' ಇತ್ಯಾದಿ ಕ್ರಿಯಾಪದಂ ಸ್ವಮಹಿಮಸಿದ್ಧಾರ್ಥಪ್ರತಿಪಾದನಸಮರ್ಥಮ್ ಅಭ್ಯುಪಗನ್ತವ್ಯಂ ನ ವಿಪರೀತಾರ್ಥಪ್ರತಿಪಾದನಪರಮ್ ಇತಿ ॥

**ಧಾವೇದಿತಿ ನ ದಾನಾರ್ಥೇ ಪದಂ ಯದ್ವತ್ ಪ್ರಯುಜ್ಯತೇ ।**
**ವಿಧೀತ್ಯಾದಿ ತಥಾ ನೇಚ್ಛೇತ್ ಸ್ವತಃಸಿದ್ಧಾರ್ಥವಾಚಿನಿ ॥೯೭॥**

---

1. ದೇಹವನ್ನೇ ನಾನು ಎಂಬ ಅಭಿಮಾನವುಳ್ಳ ಮಿಥ್ಯಾಜ್ಞಾನಿಯನ್ನು ಎಂದರ್ಥ. ''ನ ಕರ್ಮ ಲಿಪ್ಯತೇ ನರೇ'' ಎಂಬ ವಾಕ್ಯದಲ್ಲಿ ಈ ಅಭಿಪ್ರಾಯವಿದೆ ಎಂದು ಭಾವ.

2. ದೇಹಾತಿರಿಕ್ತಾತ್ಮವಾದಿಗೇ ಕರ್ಮವು ಇಲ್ಲದಿರುವಾಗ ಅದ್ವೈತಾತ್ಮವಾದಿಯನ್ನಿಟ್ಟುಕೊಂಡು ಹೇಳಿಲ್ಲವೆಂಬುದನ್ನು ಹೇಳತಕ್ಕದ್ದೇನು ?

3. ನ ಸಮ್ಯಗೇವ ಎಂಬ ಪಾಠವು ಸರಿಯಲ್ಲ.

(ಅರ್ಥ)

'ಕ್ರಿಯಾಪದವಿಲ್ಲದೆ (ಪದಗಳು ಸಂಹತವಾಗಲಾರವು)' (೧-೧೯) ಎಂದು ಹೇಳಿದಿರಲ್ಲ, ಅದೂ ನಮಗೆ ಸರಿಯೇ (ಆಗಿದೆ)[1]. ಆದರೂ ಯಾವ ದಾದರೊಂದು ಕ್ರಿಯೆಯನ್ನು ಎಲ್ಲೆಂದರೆ ಅಲ್ಲಿ ಅಧ್ಯಾಹಾರಮಾಡತಕ್ಕದ್ದಲ್ಲ, ಮತ್ತೇನೆಂದರೆ ಯಾವ (ಕ್ರಿಯೆಯು) ಎಲ್ಲಿ ಅಭಿಪ್ರೇತವಾಗಿರುವ ಸಂಬಂಧ ವನ್ನು ಹೊಂದಿಸುವದಕ್ಕೆ ಶಕ್ತವಾಗಿರುತ್ತದೆಯೋ ವಾಕ್ಯದ ಆಕಾಂಕ್ಷೆಯನ್ನೂ ಪೂರೈಸುವದೋ ಅದನ್ನೇ ಅಧ್ಯಾಹಾರಮಾಡಿಕೊಳ್ಳಬೇಕು. ಅದು ಬೇಕಾ ಗಿರುವ ವಾಕ್ಯಾರ್ಥಕ್ಕೆ ಅವಿರುದ್ಧವಾಗಿಯೇ ಇರಬೇಕೇ ಹೊರತು ಇಲ್ಲದಿದ್ದ ಅರ್ಥವು ಉಂಟಾಗುವದೆಂಬ ಪ್ರಯೋಜನವುಳ್ಳದ್ದಾಗಿರಬೇಕಾದದ್ದಿಲ್ಲವಾಗಿ [2] ಷಡ್ಭಾವವಿಕಾರರಹಿತವಾದ [3] ಯಾವ ದ್ವೈತಾನರ್ಥವೂ ಇಲ್ಲದ ಸ್ವಯಂಪ್ರಕಾಶ ವಾಗಿರುವ ಆತ್ಮವಸ್ತುವನ್ನೇ ತಿಳಿಸಬೇಕಾಗಿರುವದರಿಂದ 'ಅಸಿ' (ಆಗಿದ್ದೀಯೆ) 'ಅಸ್ಮಿ' (ಆಗಿರುತ್ತೇನೆ)[4] ಮುಂತಾದ, ತನ್ನ, ಮಹಿಮೆಯಿಂದಲೇ ಸಿದ್ಧವಾಗಿರುವ ವಸ್ತುವನ್ನು ಪ್ರತಿಪಾದಿಸುವದಕ್ಕೆ ಸಮರ್ಥವಾದ ಕ್ರಿಯಾಪದವನ್ನೇ ಅಂಗೀಕಾರಮಾಡಬೇಕೇ ಹೊರತು (ಅದಕ್ಕೆ) ವಿಪರೀತವಾದ ಅರ್ಥವನ್ನು [5] ಪ್ರತಿಪಾದಿಸುವದರಲ್ಲಿ ತಾತ್ಪರ್ಯವುಳ್ಳ (ಕ್ರಿಯಾಪದವನ್ನು ಅಂಗೀ

1. "ಅವನೇ ಇವನು", "ರಾಜನ ಭಟನಿವನು" ಮುಂತಾದವುಗಳಲ್ಲಿ ಕ್ರಿಯಾಪದವಿಲ್ಲದೆಯೂ ಅನ್ವಯವಾಗುವದಾದರೂ ಕ್ರಿಯಾಪದವು ಇದ್ದೇ ಇರಬೇಕೆಂದು ಒಪ್ಪಿ ಹೀಗೆ ಹೇಳಿದೆ.

2. ಇಲ್ಲದ್ದು ಉಂಟಾಗುವದೆಂಬ ಪ್ರಯೋಜನವುಳ್ಳದ್ದು ಎಂದರೆ ಸಾಧ್ಯವಾದದ್ದನ್ನು ತಿಳಿಸತಕ್ಕದ್ದು, ಕಾರ್ಯಾರ್ಥವಾದದ್ದು ಎಂದರ್ಥ.

3. ಹುಟ್ಟುತ್ತದೆ, ಇರುತ್ತದೆ, ಬೆಳೆಯುತ್ತದೆ, ಮಾರ್ಪಡುತ್ತದೆ, ಸವೆಯುತ್ತದೆ, ಹಾಳಾಗುತ್ತದೆ -ಎಂಬಿವು ಆರೂ ಭಾವವಿಕಾರಗಳು.

4. "ತತ್ತ್ವಮಸಿ" "ಅಹಂ ಬ್ರಹ್ಮಾಸ್ಮಿ" - ಮುಂತಾದ ವಾಕ್ಯಗಳಲ್ಲಿ ಅಂಥ ಕ್ರಿಯೆ ಇದೆ. ಆದರೆ ಕರ್ತವ್ಯಪರವೇನೂ ಅಲ್ಲ.

5. ಕಾರ್ಯವಾದ ಅರ್ಥವನ್ನು.

ಕರಿಸಬಾರದು). ಆದ್ದರಿಂದ ಇಂಥ [1] ಕ್ರಿಯೆಯನ್ನು ನಾವು ಒಪ್ಪಿಯೇ ಇರುತ್ತೇವೆ.

೯೭. 'ಓಡಬೇಕು' ಎಂಬ ಪದವನ್ನು ಕೊಡುವದೆಂಬರ್ಥದಲ್ಲಿ ಹೇಗೆ ಪ್ರಯೋಗಿಸುವದಿಲ್ಲವೋ ಹಾಗೆಯೇ 'ಇರು' ಮುಂತಾದ ಅರ್ಥವನ್ನು ಸ್ವತಃ ಸಿದ್ಧಾರ್ಥವನ್ನು ಹೇಳುವ (ಪದದಲ್ಲಿ) ಬಯಸಬಾರದು.

(ಮೂಲ)

ನ ಚ ಯಥೋಕ್ತವಸ್ತುವೃತ್ತಪ್ರತಿಪಾದನವ್ಯತಿರೇಕೇಣ ತತ್ತ್ವಮಸ್ಯಾದಿವಾಕ್ಯಂ ವಾಕ್ಯಾರ್ಥಾನ್ತರಂ ವಕ್ತಿ ಇತಿ ಶಕ್ಯಮಧ್ಯವಸಾತುಮ್ ಇತ್ಯಾಹ–

**ತತ್ತ್ವಮಸ್ಯಾದಿವಾಕ್ಯಾನಾಂ ಸ್ವತಃಸಿದ್ಧಾರ್ಥಬೋಧನಾತ್ ।**
**ಅರ್ಥಾನ್ತರಂ ನ ಸಂದ್ರಷ್ಟುಂ ಶಕ್ಯತೇ ತ್ರಿದಶೈರಪಿ ॥೯೮॥**

(ಅರ್ಥ)

ಮೇಲೆ ಹೇಳಿದ ವಸ್ತುಸ್ವಭಾವವನ್ನು ತಿಳಿಸುವದಲ್ಲದೆ 'ತತ್ತ್ವಮಸಿ' ಮುಂತಾದ ವಾಕ್ಯವು ವಾಕ್ಯಾರ್ಥಾಂತರವನ್ನು ಹೇಳುತ್ತದೆ ಎಂದು ನಿಶ್ಚಯಿಸುವದಕ್ಕೆ ಆಗುವದೂ ಇಲ್ಲ -ಎಂದು ಹೇಳುತ್ತಾರೆ :

೯೮. ತತ್ತ್ವಮಸಿ ಮುಂತಾದ ವಾಕ್ಯಗಳಿಗೆ ಸ್ವತಃಸಿದ್ಧವಾದ ಅರ್ಥವನ್ನು ಹೇಳುವದಲ್ಲದೆ ಮತ್ತೊಂದು ಅರ್ಥವನ್ನು ಕಾಣುವದು ದೇವತೆಗಳಿಂದಲೂ ಆಗಲಾರದು.

## ಉಪಸಂಹಾರ

(ಮೂಲ)

ಯಸ್ಮಾದೇವಮ್–

**ಅತಃ ಸರ್ವಾಶ್ರಮಾಣಾಂ ತು ವಾಙ್ಮನಃಕಾಯಕರ್ಮಭಿಃ ।**
**ಸ್ವನುಷ್ಠಿತೈರ್ನ ಮುಕ್ತಿಃ ಸ್ಯಾಜ್ಜ್ಞಾನಾದೇವ ಹಿ ಸಾ ಯತಃ ॥೯೯॥**

---

1. ಅಭಿಪ್ರೇತಸಂಬಂಧವನ್ನು ತಿಳಿಸುವ ಮತ್ತು ವಾಕ್ಯದ ಆಕಾಂಕ್ಷೆಯನ್ನು ಪೂರೈಸುವ ಗುಣವುಳ್ಳ ಅಸಿ, ಅಸ್ಮಿ ಮುಂತಾದ.

(ಅರ್ಥ)

ಹೀಗಿರುವದರಿಂದ :

೯೯. ಆದ್ದರಿಂದ ಯಾವ ಆಶ್ರಮದವರಿಗೂ ವಾಙ್ಮನಃಕಾಯಗಳಿಂದ ಕರ್ಮಗಳನ್ನು ಚೆನ್ನಾಗಿ ಮಾಡಿದರೂ ಮುಕ್ತಿಯಾಗಲಾರದು. ಏಕೆಂದರೆ ಆ ಮುಕ್ತಿಯು ಜ್ಞಾನದಿಂದಲೇ ಆಗುವದು.

(ಮೂಲ)

ತಸ್ಮಾಚ್ಚ ಕಾರಣಾತ್ ಏತದಪ್ಯುಪಪನ್ನಮ್ –

**ಸ್ವಮನೋರಥಸಂಕ್ಲಿಪ್ತ ಪ್ರಜ್ಞಾಧ್ಮಾತಧಿಯಾಮತಃ ।**
**ಶ್ರೋತ್ರಿಯೇಷ್ವೇವ ವಾಚಸ್ತಾಃ ಶೋಭನ್ತೇ ನಾತ್ಮವೇದಿಷು ॥೧೦೦॥**

(ಅರ್ಥ)

ಈ ಕಾರಣದಿಂದಲೇ ಇದೂ ಯುಕ್ತವಾಗಿರುತ್ತದೆ :

೧೦೦. ಆದ್ದರಿಂದ ತಮ್ಮತಮ್ಮ ಮನೋರಥಗಳಿಂದ ಕಲ್ಪಿತವಾಗಿರುವ ತಿಳಿವಳಿಕೆಯಿಂದ ಉಬ್ಬಿರುವ ಅಂತಃಕರಣವುಳ್ಳ ಶ್ರೋತ್ರಿಯರಲ್ಲಿಯೇ [1] ಆ ವಚನಗಳು ಶೋಭಿಸುತ್ತವೆಯೇ ಹೊರತು ಆತ್ಮಜ್ಞಾನಿಗಳ ಬಳಿಯಲ್ಲಿ (ಶೋಭಿಸುವದಿಲ್ಲ).

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಚ್ಛಙ್ಕರ
ಭಗವತ್ಪಾದಶಿಷ್ಯ ಶ್ರೀಸುರೇಶ್ವರಾಚಾರ್ಯವಿರಚಿತಾಯಾಂ
ನೈಷ್ಕರ್ಮ್ಯಸಿದ್ಧೌ ಸಸಂಬನ್ಧೋಕ್ತೌ
ಪ್ರಥಮೋಽಧ್ಯಾಯಃ

---

1. ಕಲ್ಪಿತದ್ವೈತವಿಷಯವಾದ ಕರ್ಮವಾದವು ಎಲ್ಲಿಯವರೆಗೆ ಒಪ್ಪುವದೆಂದರೆ ಪರಮಾರ್ಥಾತ್ಮವಾದವು ಬುದ್ಧಿಗೆ ಹತ್ತದೆ ಇರುವವರೆಗೆ ಎಂದು ಅಭಿಪ್ರಾಯ. ಇಲ್ಲಿರುವ ಶ್ರೋತ್ರಿಯ ಶಬ್ದವನ್ನು ಹಾಸ್ಯಗರ್ಭಿತವಾಗಿ ಉಪಯೋಗಿಸಿರುವದಕ್ಕೆ ಗೌ. ಮಾಂ. ಕಾ. ೪-೪೨ ಭಾಷ್ಯವನ್ನು ನೋಡಿ.

# ಎರಡನೆಯ ಅಧ್ಯಾಯ

## ಅಧ್ಯಾಯದ ಸಂಬಂಧ

(ಮೂಲ)

ಪ್ರತ್ಯಕ್ಷಾದೀನಾಮ್ ಅನೇವಂವಿಷಯತ್ವಾತ್ ತೇಷಾಂ ಸ್ವಾರಮ್ಭಕ ವಿಷಯೋಪನಿಪಾತಿತ್ವಾತ್, ಆತ್ಮನಶ್ಚ ಅಶೇಷಪ್ರಮೇಯವೈಲಕ್ಷಣ್ಯಾತ್ ಸರ್ವಾನರ್ಥೈಕಹೇತ್ವಜ್ಞಾನಾಪನೋದಿಜ್ಞಾನದಿವಾಕರೋದಯಹೇತುತ್ವಂ ವಸ್ತುಮಾತ್ರಯಾಥಾತ್ಮ್ಯಪ್ರಕಾಶನಪಟೀಯಸಃ ತತ್ತ್ವಮಸ್ಯಾದೇರ್ವಚಸ ಏವೇತಿ ಬಹ್ವೀಭಿರುಪಪತ್ತಿಭಿಃ ಪ್ರದರ್ಶಿತಮ್ । ಅತಃ ತದರ್ಥಾಪ್ರತಿಪತ್ತೌ ಯತ್ಕಾರಣಮ್ ತದಪನಯನಾಯ ದ್ವಿತೀಯೋಽಧ್ಯಾಯ ಆರಭ್ಯತೇ–

**ಶ್ರಾವಿತೋ ವೇತ್ತಿ ವಾಕ್ಯಾರ್ಥಂ ನ ಚೇತ್ ತತ್ತ್ವಮಸೀತ್ಯತಃ ।**
**ತ್ವಂಪದಾರ್ಥಾನಭಿಜ್ಞತ್ವಾದತಸ್ತತ್ಪ್ರಕ್ರಿಯೋಚ್ಯತೇ ॥೧॥**

(ಅರ್ಥ)

ಪ್ರತ್ಯಕ್ಷಾದಿಗಳು[1] ಇಂಥ ವಿಷಯವನ್ನು[2] (ತಿಳಿಸುವ)ವಲ್ಲವಾದ್ದರಿಂದಲೂ, ಅವು ತಮಗೆ ಕಾರಣವಾಗಿರುವ ವಿಷಯಗಳನ್ನು ಮಾತ್ರ ವಿಷಯೀಕರಿಸಬಲ್ಲವಾದ್ದರಿಂದಲೂ[3] ಆತ್ಮನು ಎಲ್ಲಾ ಪ್ರಮೇಯಗಳಿಗಿಂತಲೂ

---

1. ಪ್ರತ್ಯಕ್ಷ, ಅನುಮಾನ, ಉಪಮಾನ - ಮುಂತಾದವುಗಳು.

2. ಸ್ವತಃಸಿದ್ಧವಾದ ಆತ್ಮವಸ್ತುವನ್ನು.

3. ತಮಗೆ ಕಾರಣಭೂತವಾದ ರೂಪಾದಿವಿಷಯಗಳಲ್ಲಿಯೇ ಅವು ವರ್ತಿಸಬಲ್ಲವಾದ್ದರಿಂದಲೂ ಎಂದರ್ಥ. ಇದು ಇಂದ್ರಿಯಗಳಿಗೆ ಮಾತ್ರ ಅನ್ವಯಿಸುವ ಹೇತು. ಚಕ್ಷುರಾದಿಗಳ ಗತಿಯೇ ಹೀಗಿರುವಲ್ಲಿ ಅವುಗಳನ್ನು ಅನುಸರಿಸಿಕೊಂಡಿರುವ ಅನುಮಾನಾದಿಗಳ ಗತಿಯನ್ನು ಹೇಳುವದೇನಿದೆ ಎಂಬ ಭಾವದಿಂದ ಅವುಗಳು ಆತ್ಮವಸ್ತುವನ್ನು ತಿಳಿಸಲಾರವೆಂಬುದಕ್ಕೆ ಬೇರೆ ಕಾರಣವನ್ನು ಕೊಟ್ಟಿಲ್ಲ. ಇಲ್ಲಿ 'ತಮಗೆ' ಎಂಬ ಶಬ್ದವು ಪ್ರತ್ಯಕ್ಷವೆಂಬ ಒಂದೇ ಮಾತಿನಲ್ಲಿ ಅನ್ವಯವಾಗಿದೆ. ಪ್ರತ್ಯಕ್ಷಾದಿ ಎಂದರೆ ಶ್ರೋತ್ರಾದಿಗಳು ಎಂಬ ವ್ಯಾಖ್ಯಾನವು ಸರಿಯಲ್ಲ; ಆಗ ಶಬ್ದಕ್ಕೆ ಸಮಾಸೈಕದೇಶಪರಾಮರ್ಶಿತ್ವದೋಷವಿರುವದಿಲ್ಲವಾದರೂ ಅನುಮಾನಾದಿಗಳು ಆತ್ಮವಸ್ತುವನ್ನು ತಿಳಿಸಲಾರವೆಂಬರ್ಥವು ತಪ್ಪಿಹೋಗುವದು.

# ಎರಡನೆಯ ಅಧ್ಯಾಯ

## ಅಧ್ಯಾಯದ ಸಂಬಂಧ

(ಮೂಲ)

ಪ್ರತ್ಯಕ್ಷಾದೀನಾಮ್ ಅನೇವಂವಿಷಯತ್ವಾತ್ ತೇಷಾಂ ಸ್ವಾರಮ್ಭಕ ವಿಷಯೋಪನಿಪಾತಿತ್ವಾತ್, ಆತ್ಮನಶ್ಚ ಅಶೇಷಪ್ರಮೇಯವೈಲಕ್ಷಣ್ಯಾತ್ ಸರ್ವಾನರ್ಥೈಕಹೇತ್ವಜ್ಞಾನಾಪನೋದಿಜ್ಞಾನದಿವಾಕರೋದಯಹೇತುತ್ವಂ ವಸ್ತು ಮಾತ್ರ ಯಾಥಾತ್ಮ್ಯಪ್ರಕಾಶನಪಟೀಯಸಃ ತತ್ತ್ವಮಸ್ಯಾದೇರ್ವಚಸ ಏವೇತಿ ಬಹ್ವೀಭಿರುಪಪತ್ತಿಭಿಃ ಪ್ರದರ್ಶಿತಮ್ । ಅತಃ ತದರ್ಥಾಪ್ರತಿಪತ್ತೌ ಯತ್ಕಾರಣಮ್ ತದಪನಯನಾಯ ದ್ವಿತೀಯೋಽಧ್ಯಾಯ ಆರಭ್ಯತೇ –

**ಶ್ರಾವಿತೋ ವೇತ್ತಿ ವಾಕ್ಯಾರ್ಥಂ ನ ಚೇತ್ ತತ್ತ್ವಮಸೀತ್ಯತಃ ।**
**ತ್ವಂಪದಾರ್ಥಾನಭಿಜ್ಞತ್ವಾದತಸ್ತತ್ಪ್ರಕ್ರಿಯೋಚ್ಯತೇ ॥೧॥**

(ಅರ್ಥ)

ಪ್ರತ್ಯಕ್ಷಾದಿಗಳು[1] ಇಂಥ ವಿಷಯವನ್ನು[2] (ತಿಳಿಸುವ)ವಲ್ಲವಾದ್ದರಿಂದಲೂ, ಅವು ತಮಗೆ ಕಾರಣವಾಗಿರುವ ವಿಷಯಗಳನ್ನು ಮಾತ್ರ ವಿಷಯೀಕರಿಸಬಲ್ಲವಾದ್ದರಿಂದಲೂ[3] ಆತ್ಮನು ಎಲ್ಲಾ ಪ್ರಮೇಯಗಳಿಗಿಂತಲೂ

---

1. ಪ್ರತ್ಯಕ್ಷ, ಅನುಮಾನ, ಉಪಮಾನ - ಮುಂತಾದವುಗಳು.

2. ಸ್ವತಃಸಿದ್ಧವಾದ ಆತ್ಮವಸ್ತುವನ್ನು.

3. ತಮಗೆ ಕಾರಣಭೂತವಾದ ರೂಪಾದಿವಿಷಯಗಳಲ್ಲಿಯೇ ಅವು ವರ್ತಿಸಬಲ್ಲವಾದ್ದರಿಂದಲೂ ಎಂದರ್ಥ. ಇದು ಇಂದ್ರಿಯಗಳಿಗೆ ಮಾತ್ರ ಅನ್ವಯಿಸುವ ಹೇತು. ಚಕ್ಷುರಾದಿಗಳ ಗತಿಯೇ ಹೀಗಿರುವಲ್ಲಿ ಅವುಗಳನ್ನು ಅನುಸರಿಸಿಕೊಂಡಿರುವ ಅನುಮಾನಾದಿಗಳ ಗತಿಯನ್ನು ಹೇಳುವದೇನಿದೆ ಎಂಬ ಭಾವದಿಂದ ಅವುಗಳು ಆತ್ಮವಸ್ತುವನ್ನು ತಿಳಿಸಲಾರವೆಂಬುದಕ್ಕೆ ಬೇರೆ ಕಾರಣವನ್ನು ಕೊಟ್ಟಿಲ್ಲ. ಇಲ್ಲಿ 'ತಮಗೆ' ಎಂಬ ಶಬ್ದವು ಪ್ರತ್ಯಕ್ಷವೆಂಬ ಒಂದೇ ಮಾತಿನಲ್ಲಿ ಅನ್ವಯವಾಗಿದೆ. ಪ್ರತ್ಯಕ್ಷಾದಿ ಎಂದರೆ ಶ್ರೋತ್ರಾದಿಗಳು ಎಂಬ ವ್ಯಾಖ್ಯಾನವು ಸರಿಯಲ್ಲ; ಆಗ ಶಬ್ದಕ್ಕೆ ಸಮಾಸೈಕದೇಶಪರಾಮರ್ಶಿತ್ವದೋಷವಿರುವದಿಲ್ಲವಾದರೂ ಅನುಮಾನಾದಿಗಳು ಆತ್ಮವಸ್ತುವನ್ನು ತಿಳಿಸಲಾರವೆಂಬರ್ಥವು ತಪ್ಪಿಹೋಗುವದು.

ವಿಲಕ್ಷಣನಾಗಿರುವದರಿಂದಲೂ[1] ಎಲ್ಲಾ ಅನರ್ಥಗಳಿಗೂ ಮುಖ್ಯ ಕಾರಣವಾಗಿರುವ ಅಜ್ಞಾನವನ್ನು[2] ತೊಲಗಿಸುವ ಜ್ಞಾನಸೂರ್ಯನು ಉದಯಿಸುವದಕ್ಕೆ ಹೇತುವಾಗಿರುವದು ವಸ್ತುಮಾತ್ರದ ಯಾಥಾತ್ಮ್ಯವನ್ನು ಬೆಳಗಬಲ್ಲ[3] ತತ್ತ್ವಮಸ್ಯಾದಿವಾಕ್ಯವೇ ಎಂದು ಬಹು ಉಪಪತ್ತಿಗಳಿಂದ ತಿಳಿಸಿ ಕೊಟ್ಟಿದ್ದಾಯಿತು. ಆದ್ದರಿಂದ ಆ(ವಾಕ್ಯದ) ಅರ್ಥವನ್ನು ತಿಳಿಯದೆ ಇರಲು ಕಾರಣವು ಯಾವದೋ ಅದನ್ನು ತೆಗೆದುಹಾಕುವದಕ್ಕೆ[4] (ಈ) ಎರಡನೆಯ ಅಧ್ಯಾಯವನ್ನು ಆರಂಭಿಸಲಾಗಿದೆ.

೧. 'ತತ್ತ್ವಮಸಿ' ಎಂಬ (ವಾಕ್ಯ)ದಿಂದ ವಾಕ್ಯಾರ್ಥವನ್ನು ಶ್ರವಣ ಮಾಡಿಸಿದ ಮೇಲೂ ಅರಿತುಕೊಳ್ಳಲಿಲ್ಲವಾದರೆ,[5] (ಅದು) ತ್ವಂಪದಾರ್ಥವನ್ನು ಅರಿತುಕೊಳ್ಳದ್ದರಿಂದ. ಆದ್ದರಿಂದ ಅದರ ಪ್ರಕ್ರಿಯೆಯನ್ನು[6] ಹೇಳಲಾಗುವದು.

## ಪೂ. ಪ. : ವಾಕ್ಯವು ಜ್ಞಾನಕ್ಕೆ ನಿಯತಹೇತುವಲ್ಲ

(ಮೂಲ)

**ಯೋಽಯಮ್ ಅಹಂ ಬ್ರಹ್ಮೇತಿ ವಾಕ್ಯಾರ್ಥಸ್ತತ್ಪ್ರತಿಪತ್ತಿರ್ವಾಕ್ಯಾ**

---

1. ಪ್ರಮೇಯಗಳು ಮತ್ತೊಂದರಿಂದ ಸಿದ್ಧಿಯಾಗತಕ್ಕವು, ಪರಾಗ್ರೂಪವಾಗಿರುವವು, ಶಬ್ದಾದಿಗಳುಳ್ಳವು ; ಆತ್ಮನು ಸ್ವತಃಸಿದ್ಧನು, ಪ್ರತ್ಯಕ್ಸ್ವಭಾವನು, ಶಬ್ದಾದಿರಹಿತನು - ಹೀಗೆ ಪ್ರಮೇಯವಿಲಕ್ಷಣನಾಗಿರುತ್ತಾನೆ.

2. ಜ್ಞಾನಾಭಾವವಲ್ಲದೆ ಸಂಶಯ, ವಿಪರ್ಯಯ – ಇವೂ ಇಲ್ಲಿ ವಿವಕ್ಷಿತ.

3. ಬರಿಯ ವಸ್ತುವಿನ ತತ್ತ್ವವನ್ನು ತಿಳಿಸಬಲ್ಲ, ಹೊಸದಾಗಿ ಯಾವದೊಂದನ್ನೂ ಉಂಟುಮಾಡದೆ ಇದ್ದದ್ದನ್ನೇ ತಿಳಿಸಬಲ್ಲ -ಎಂದರ್ಥ.

4. ಪದಾರ್ಥಾಜ್ಞಾನವೇ ಕಾರಣವು, ಅದನ್ನು ತೊಲಗಿಸುವದಕ್ಕೆ.

5. ವಾಕ್ಯಶ್ರವಣದಿಂದಲೇ ಉತ್ತಮಾಧಿಕಾರಿಗಳಿಗೆ ಜ್ಞಾನವಾಗಬಹುದೆಂಬುದು ಇದರಿಂದ ಸೂಚಿತವಾಗುತ್ತದೆ. ಸೂ.ಭಾ. ೪-೧-೨ನ್ನು ನೋಡಿ.

6. ಪದಾರ್ಥಜ್ಞಾನವಾಗುವ ಪ್ರಕಾರವನ್ನು ಎಂದರ್ಥ. ಇಲ್ಲಿ ತ್ವಂಪದಾರ್ಥವನ್ನು ಉಪಲಕ್ಷಣವಾಗಿ ಹೇಳಿದೆ. ಪದಾರ್ಥಜ್ಞಾನವೇ ವಾಕ್ಯಾರ್ಥಜ್ಞಾನಕ್ಕೆ ಹೇತುವಾದ್ದರಿಂದ ಪದಾರ್ಥದ ಅಜ್ಞಾನವೇ ವಾಕ್ಯಾರ್ಥಜ್ಞಾನಕ್ಕೆ ಪ್ರತಿಬಂಧಕವು.

ದೇವ,[1] ಪ್ರತ್ಯಕ್ಷಾದೀನಾಮನೇವಂವಿಷಯತ್ವಾತ್ ಇತ್ಯವಾದಿಷಮ್ । ತಸ್ಯ ವಿಶುದ್ಧ್ಯರ್ಥಮ್ ಅನ್ಯೈಕಾನ್ತಿಕತ್ವಂ ಪೂರ್ವಪಕ್ಷತ್ವೇನ ಉಪಸ್ಥಾಪ್ಯತೇ –

**ಕೃತ್ಸ್ನಾನಾತ್ಮನಿವೃತ್ತೌ ಚ ಕಶ್ಚಿದಾಪ್ನೋತಿ ನಿರ್ವೃತಿಮ್ ।**
**ಶ್ರುತವಾಕ್ಯಸ್ಮೃತೇಶ್ಚಾನ್ಯಃ ಸ್ಮಾರ್ಯತೇ ಚ ವಚೋಽಪರಃ ॥೨॥**

(ಅರ್ಥ)

ನಾನು ಬ್ರಹ್ಮವಾಗಿರುತ್ತೇನೆ - ಎಂಬೀ ವಾಕ್ಯಾರ್ಥವಿದೆಯಲ್ಲ , ಅದರ ಜ್ಞಾನವು ವಾಕ್ಯದಿಂದಲೇ, ಏಕೆಂದರೆ ಪ್ರತ್ಯಕ್ಷಾದಿಗಳು ಇಂಥ ವಿಷಯವನ್ನು ತಿಳಿಸಲಾರವು ಎಂದು(ಹಿಂದೆ) ಹೇಳಿರುತ್ತೇನೆ. ಅದನ್ನು ವಿಶುದ್ಧಿಗೊಳಿಸುವದಕ್ಕಾಗಿ (ವಾಕ್ಯವು) ಅನೈಕಾಂತಿಕ(ಹೇತು)ವೆಂಬುದನ್ನು ಪೂರ್ವಪಕ್ಷವಾಗಿ (ಇಲ್ಲಿ ) ಒಡ್ಡಲಾಗುತ್ತದೆ :

೨. ಎಲ್ಲಾ ಅನಾತ್ಮವೂ ತೊಲಗಲು[2] ಒಬ್ಬನು ಮುಕ್ತಿಯನ್ನು ಪಡೆದುಕೊಳ್ಳುತ್ತಾನೆ ,[3] ಶ್ರವಣಮಾಡಿದ ವಾಕ್ಯದ ಸ್ಮೃತಿಯಿಂದ ಇನ್ನೊಬ್ಬನು (ಪಡೆದುಕೊಳ್ಳುತ್ತಾನೆ),[4] ಮತ್ತೊಬ್ಬನಿಗೆ (ಮತ್ತೆಮತ್ತೆ ) ಸ್ಮರಣೆಯನ್ನು ಕೊಡಬೇಕಾಗುತ್ತದೆ[5].

(ಮೂಲ)

ಏತತ್ಪ್ರಸಙ್ಗೇನ ಶ್ರೋತ್ರನ್ತರೋಪನ್ಯಾಸಮುಭಯತ್ರಾಪಿ ಸಂಭಾವನಾಯಾಹ–

**ವಾಕ್ಯಶ್ರವಣಮಾತ್ರಾಚ್ಚ ಪಿಶಾಚಕವದಾಪ್ನುಯಾತ್ ।**
**ತ್ರಿಷು ಯಾದೃಚ್ಛಿಕೀ ಸಿದ್ಧಿಃ ಸ್ಮಾರ್ಯಮಾಣೇ ತು ನಿಶ್ಚಿತಾ ॥೩॥**

1. ಇಲ್ಲಿ ಅಚ್ಚಿನ ಪುಸ್ತಕದಲ್ಲಿ ಒಂದು ಇತಿಯು ಹೆಚ್ಚಾಗಿರುವಂತೆ ತೋರುತ್ತದೆ.

2. ಎಲ್ಲವೂ ನಾನೊಬ್ಬನೇ ಎಂಬ ಜ್ಞಾನದಿಂದ ಅನಾತ್ಮವು ತೊಲಗಲು.

3. ವಿರಾಟ್ಪುರುಷನಂತೆ ಎಂದು ದೃಷ್ಟಾಂತವನ್ನು ಸೇರಿಸಿಕೊಳ್ಳಬೇಕು. ಬೃ. ೧-೪-೨ ನೋಡಿ.

4. ಭೃಗುವು ತಂದೆಯ ವಾಕ್ಯವನ್ನು ಸ್ಮರಣೆಮಾಡಿಕೊಂಡು ಮತ್ತೆಮತ್ತೆ ತಪಸ್ಸುಮಾಡಿ ತಿಳಿದುಕೊಂಡು ಮುಕ್ತನಾದಂತೆ ಎಂದು ದೃಷ್ಟಾಂತ.

5. ಶ್ವೇತಕೇತುವಿಗೆ ಮತ್ತೆಮತ್ತೆ ಯುಕ್ತಿಗಳನ್ನು ಹೇಳಿ ವಾಕ್ಯವನ್ನು ತಂದೆಯು ಸ್ಮರಣೆಗೆ ಕೊಟ್ಟಂತೆ ಎಂದು ದೃಷ್ಟಾಂತ.

(ಅರ್ಥ)

ಇದರ ಪ್ರಸಂಗದಿಂದ (ಈಗ) ಮತ್ತೊಬ್ಬ ಶ್ರೋತೃವನ್ನು - ಎರಡು (ಪಕ್ಷದಲ್ಲಿಯೂ) ಆಗಬಹುದೆಂಬುದನ್ನು ತಿಳಿಸುವದಕ್ಕೆ[1] ಹೇಳುತ್ತಾರೆ :

೩. ಬರಿಯ ವಾಕ್ಯಶ್ರವಣದಿಂದಲೇ (ಒಬ್ಬನು) ಪಿಶಾಚದಂತೆ[2] (ಮುಕ್ತಿಯನ್ನು) ಪಡೆಯಬಹುದು. ಮೂರು (ಪಕ್ಷ)ಗಳಲ್ಲಿ ಸಿದ್ಧಿಯು ಯಾದೃಚ್ಛಿಕವಾಗಿ ಆಗುವದು ; ಆದರೆ ಸ್ಮರಣೆಮಾಡಿಸಿಕೊಂಡವನಿಗೆ ನಿಶ್ಚಿತವಾಗಿ (ಆಗುವದು)[3].

## ಸಿದ್ಧಾಂತ : ವಾಕ್ಯವೇ ಬ್ರಹ್ಮಜ್ಞಾನಕ್ಕೆ ಕಾರಣ

(ಮೂಲ)

**ನಾಯಮ್ ಅನೈಕಾನ್ತಿಕೋಹೇತುಃ । ಯತಃ –**

**ಸರ್ವೋಽಯಂ ಮಹಿಮಾ ಜ್ಞೇಯೋ ವಾಕ್ಯಸ್ಯೈವ ಯಥೋದಿತಃ ।**
**ವಾಕ್ಯಾರ್ಥಂ ನ ಹ್ಯೃತೇ ವಾಕ್ಯಾತ್ ಕಶ್ಚಿಜ್ಜಾನಾತಿ ತತ್ತ್ವತಃ ॥೪॥**

(ಅರ್ಥ)

ಇದು ಅನಿಶ್ಚಿತವಾದ ಹೇತುವಲ್ಲ. ಏಕೆಂದರೆ :

೪. ಮೇಲೆ ಹೇಳಿದ ಇದೆಲ್ಲವೂ ವಾಕ್ಯದ ಮಹಿಮೆಯೇ ಎಂದು ತಿಳಿಯಬೇಕು ; ಏಕೆಂದರೆ ವಾಕ್ಯವಿಲ್ಲದೆ ಯಾವನೂ ವಾಕ್ಯಾರ್ಥವನ್ನು

---

1. ವಾಕ್ಯವಿದ್ದರೂ ಇಲ್ಲದಿದ್ದರೂ ಜ್ಞಾನವು ಆಗಬಹುದು ಎಂಬುದನ್ನು ತಿಳಿಸುವದಕ್ಕೆ ಎಂದರ್ಥ.

2. ಪಿಶಾಚಜನ್ಮದಲ್ಲಿ ಮಾಂತ್ರಿಕನ ವಾಕ್ಯದಿಂದಲೇ ಜನ್ಮಾಂತರಸ್ಮರಣೆಬಂದು ಆ ಜನ್ಮದಿಂದ ಮುಕ್ತನಾಗುವಂತೆ ಎಂದರ್ಥ.

3. ಶ್ವೇತಕೇತುವಿನಂತೆ ಸ್ಮರಣೆಯಿಂದಲೇ ನಿಶ್ಚಿತವಾಗಿ ಆಗುವದು ; ಮಿಕ್ಕ ದೃಷ್ಟಾಂತಗಳಲ್ಲಿ ಆದರೆ ಆಗಬಹುದು, ಇಲ್ಲದಿದ್ದರೆ ಇಲ್ಲ - ಎಂದು ಅಭಿಪ್ರಾಯ. ಪೂರ್ವಪಕ್ಷಿಯ ಮತದಲ್ಲಿ ವಾಕ್ಯಾರ್ಥವನ್ನು ಮತ್ತೆಮತ್ತೆ ನೆನಪಿಗೆ ತಂದುಕೊಂಡ ಬಳಿಕವೇ ಜ್ಞಾನಾಭ್ಯಾಸದಿಂದ ಮುಕ್ತಿಯಾಗುವದು ಎಂಬ ಅಭಿಪ್ರಾಯವು ಅಡಗಿದೆ.

ಸರಿಯಾಗಿ ಅರಿತುಕೊಳ್ಳಲಾರನು[1].

## ವಾಕ್ಯಪ್ರಾಮಾಣ್ಯ

(ಮೂಲ)

ವಾಕ್ಯಂ ಚ ಪ್ರತಿಪಾದನಾಯ ಪ್ರವೃತ್ತಂ ಸತ್ ಪ್ರತಿಪಾದಯತ್ಯೇವ । ಸರ್ವಪ್ರಮಾಣಾನಾಮಪಿ ಏವಂ ವೃತ್ತತ್ವಾತ್ –

**ನಾಹಂಗ್ರಾಹ್ಯೇ ನ ತದ್ಧೀನೇ ನ ಪ್ರತ್ಯಜ್ಞಾಪಿ ದುಃಖಿನಿ ।**
**ವಿರೋಧಃ ಸದಸೀತ್ಯಸ್ಮಾದ್ವಾಕ್ಯಾಭಿಜ್ಞಸ್ಯ ಜಾಯತೇ ॥೫॥**

(ಅರ್ಥ)

ವಾಕ್ಯವು ತಿಳಿಸುವದಕ್ಕೆ ಹೊರಟದ್ದು ತಿಳಿಸಿಯೇತೀರುತ್ತದೆ [2]. ಏಕೆಂದರೆ ಎಲ್ಲಾ ಪ್ರಮಾಣಗಳಿಗೂ ಇದೇ ಸ್ವಭಾವವಿರುತ್ತದೆ [3].

---

1. ಶ್ರವಣ, ಸ್ಮೃತಿ, ಸ್ಮಾರಣ- ಇವುಗಳಿಂದ ಜ್ಞಾನೋತ್ಪತ್ತಿಯಾಗುವದೆಲ್ಲವೂ ವಾಕ್ಯದ ಮಹಿಮೆಯೇ ; ಏಕೆಂದರೆ ಸ್ಮರಣಾಸ್ಮರಣದ್ವಾರದಿಂದಾದ ಜ್ಞಾನವು ವಾಕ್ಯಹೇತುಕವಲ್ಲ ವೆನ್ನುವದಕ್ಕಿಲ್ಲ ಎಂದು ಭಾವ. ಪ್ರಜಾಪತಿಗೆ ಸರ್ವಾನಾತ್ಮನಿವೃತ್ತಿಯೇ ಜ್ಞಾನಹೇತುವಲ್ಲ, ಸರ್ವೈಕತ್ವಜ್ಞಾನವೇ ಹೇತು. ಅದು ಹಿಂದಿನ ಜನ್ಮಕರ್ಮೋಪಾಸನೆಗಳ ಫಲವು. ಅವನಿಗೆ ನಾನು ಪ್ರಜಾಪತಿಯು, ಅದ್ವಿತೀಯನು- ಎಂದು ಜ್ಞಾನವಾಗಿದೆ ; ನಿರ್ವಿಶೇಷಬ್ರಹ್ಮವು ನಾನು ಎಂದಾಗಿಲ್ಲವೆಂದೂ ಹೇಳಬಹುದು. ಏಕೆಂದರೆ ಇದು ಜ್ಞಾನಪ್ರಕರಣವಲ್ಲ. ವಾಕ್ಯಶೇಷದಲ್ಲಿ ಭಯ, ಅರತಿ - ಮುಂತಾದವನ್ನು ಹೇಳಿದೆ.

2. ವಾಕ್ಯವೇ ಜ್ಞಾನಕ್ಕೆ ಹೇತುವಾದರೆ ಅದರಿಂದ ಜ್ಞಾನವಾಗದಿರುವದು, ಸಂಶಯವಿರುವದು, ವಿರುದ್ಧಜ್ಞಾನವು ಇರುವದು - ಇವು ಹೇಗೆ ? ಎಂಬ ಆಕ್ಷೇಪಕ್ಕೆ ಉತ್ತರ ವಿದು. ಅಬೋಧಕತ್ವವೆಂಬ ಅಪ್ರಾಮಾಣ್ಯವೇನೂ ಇಲ್ಲ ಎಂದಭಿಪ್ರಾಯ. ಕರ್ಮವಾಕ್ಯದಂತೆ ಬ್ರಹ್ಮಾತ್ಮೈಕತ್ವವಾಕ್ಯದಿಂದಲೂ ಅವಶ್ಯವಾಗಿ ಜ್ಞಾನವಾಗಬೇಕು ; ಏಕೆಂದರೆ ಎರಡೂ ಶಾಸ್ತ್ರವಾಗಿದೆ ಎಂಬ ಭಾವವು ಇದರಲ್ಲಡಗಿದೆ.

3. ಪ್ರತ್ಯಕ್ಷಾದಿಗಳು ತಮ್ಮತಮ್ಮ ವಿಷಯವನ್ನು ತಿಳಿಸಿಕೊಡುವದರಿಂದಲೇ ಪ್ರಮಾಣ ವೆನಿಸಿರುವಂತೆ ವಾಕ್ಯವೂ ತನ್ನ ವಿಷಯವನ್ನು ತಿಳಿಸಿಕೊಡುವದರಿಂದಲೇ ಪ್ರಮಾಣವೆನಿಸಿದೆ ಎಂದು ಭಾವ.

೫. ವಾಕ್ಯಾಭಿಜ್ಞನಾದವನಿಗೆ[1] ಅಹಂಗ್ರಾಹ್ಯವಾದದ್ದರಲ್ಲಿಯಾಗಲಿ[2], ಆ (ಅಹಂತಾ)ರಹಿತವಾದದ್ದರಲ್ಲಿಯಾಗಲಿ[3] ಪ್ರತ್ಯಗಾತ್ಮನಲ್ಲಿಯಾಗಲಿ[4] ದುಃಖಿಯಲ್ಲಾಗಲಿ[5] 'ಸತ್ತೇ ಆಗಿರುವೆ' ಎಂಬ ವಾಕ್ಯದಿಂದ (ಯಾವ) ವಿರೋಧವೂ ಉಂಟಾಗುವದಿಲ್ಲ[6].

## ಪದಾರ್ಥಜ್ಞಾನಕ್ಕಾಗಿ ಉತ್ತರಗ್ರಂಥ

(ಮೂಲ)

ನಾವಿರಕ್ತಸ್ಯ ಸಂಸಾರಾನ್ನಿವೃತ್ತಾ ತತೋ ಭವೇತ್ ।
ನ ಚಾನಿವೃತ್ತತೃಷ್ಣಸ್ಯ ಪುರುಷಸ್ಯ ಮುಮುಕ್ಷುತಾ ॥೬॥

ನ ಚಾಮುಮುಕ್ಷೋರಸ್ತೀಹ ಗುರುಪಾದೋಪಸರ್ಪಣಮ್ ।
ನ ವಿನಾ ಗುರುಸಂಬಂಧಂ ವಾಕ್ಯಸ್ಯ ಶ್ರವಣಂ ಭವೇತ್ ॥೭॥

ತಥಾ ಪದಪದಾರ್ಥೌ ಚ ನ ಸ್ತೋ ವಾಕ್ಯಮೃತೇ ಕ್ವಚಿತ್ ।
ಅನ್ವಯವ್ಯತಿರೇಕೌ ಚ ತಾವೃತೇ ಸ್ತಾಂ ಕಿಮಾಶ್ರಯೌ ॥೮॥

ಅನ್ವಯವ್ಯತಿರೇಕಾಭ್ಯಾಂ ವಿನಾ ವಾಕ್ಯಾರ್ಥಬೋಧನಮ್ ।
ನ ಸ್ಯಾತ್ತೇನ ವಿನಾಜ್ಞಾನಪ್ರಹಾಣಂ ನೋಪಪದ್ಯತೇ[7] ॥೯॥

---

1. ತತ್ತ್ವಮಸ್ಯಾದಿವಾಕ್ಯಗಳ ಸ್ವಭಾವವನ್ನು ಅರಿತುಕೊಂಡವನಿಗೆ.

2. ನಾನು ಎಂಬ ಬುದ್ಧಿಯಿಂದ ಗ್ರಾಹ್ಯವಾದ ದೇಹೇಂದ್ರಿಯಗಳಲ್ಲಿ ವಾಕ್ಯದಿಂದ ಯಾವ ವಿರೋಧವೂ ಇಲ್ಲ ; ಏಕೆಂದರೆ ಅವನ್ನು ಪರಮಾತ್ಮನೇ ಎಂದು ಹೇಳುವದಕ್ಕಾಗಿ ತ್ವಂಪದವನ್ನು ಉಪಯೋಗಿಸಿಲ್ಲ.

3. ಇದು ಎಂಬ ಬುದ್ಧಿಗೆ ಗೋಚರವಾಗಿರುವ ಶಬ್ದಾದಿಗಳ ವಿಷಯದಲ್ಲಂತೂ ಯಾವ ವಿರೋಧವೂ ಇಲ್ಲ. ಅವು ತ್ವಂಪದಾರ್ಥವಲ್ಲವೇ ಅಲ್ಲ.

4. ಪ್ರತ್ಯಗಾತ್ಮನೇ ತ್ವಂಪದಕ್ಕೆ ಲಕ್ಷ್ಯವಾಗಿರುತ್ತಾನೆ ; ಅವನೇ ಪರಮಾತ್ಮನು ಎಂದೇ ವಾಕ್ಯವು ಹೇಳುತ್ತದೆ. ಆದ್ದರಿಂದ ಅಲ್ಲಿಯೂ ವಿರೋಧವಿಲ್ಲ.

5. ದುಃಖಾದಿಸಂಸಾರವುಳ್ಳ ಚಿದಾಭಾಸನು ಅಹಂಪ್ರತ್ಯಗೋಚರನಾದರೂ ತ್ವಂಪದಕ್ಕೆ ಅರ್ಥವಲ್ಲ.

6. ಆದ್ದರಿಂದ ವಿಪರೀತಾರ್ಥಬೋಧಕತ್ವವೆಂಬ ಅಪ್ರಮಾಣ್ಯವೂ ವಾಕ್ಯಕ್ಕಿಲ್ಲ, ಸಂಶಯವೂ ಇಲ್ಲ ಎಂಬರ್ಥಕ್ಕೆ ಇದು ಉಪಲಕ್ಷಣ. ಇದೆಲ್ಲ ಮುಂದೆ ಸ್ಪಷ್ಟವಾಗುವದು.

7. 'ಧ್ವಂಸೋ ನಾಜ್ಞಾನಸ್ಯೋಪಪದ್ಯತೇ' -ಎಂದು ಕೊನೆಯಪದಕ್ಕೆ ಪಾಠಾಂತರ.

**ವಿನಾಜ್ಞಾನಪ್ರಹಾಣೇನ ಪುರುಷಾರ್ಥಃ ಸುದುರ್ಲಭಃ । ತಸ್ಮಾದ್**
**ಯಥೋಕ್ತಸಿದ್ಧ್ಯರ್ಥಂ ಪರೋ ಗ್ರನ್ಥೋಽವತಾರ್ಯತೇ ॥೧೦॥**

೬-೧೦. ಸಂಸಾರದಲ್ಲಿ ವಿರಕ್ತನಾಗದವನಿಗೆ ಅದರಿಂದ ತಪ್ಪಿಸಿಕೊಳ್ಳುವ ಇಚ್ಛೆ ಉಂಟಾಗಲಾರದು. ಆಶೆಯು ತೀರದ ಪುರುಷನಿಗೆ ಮುಮುಕ್ಷುತ್ವ ವಿರುವದಿಲ್ಲ. ಮುಮುಕ್ಷುವಲ್ಲದವನಿಗೆ ಇಲ್ಲಿ ಗುರುಪಾದವನ್ನು ಸೇರುವ ದೆಂಬುದೂ ಇಲ್ಲ. ಗುರುವಿನ ಸಂಬಂಧವಿಲ್ಲದೆ ವಾಕ್ಯಶ್ರವಣವಾಗಲಾರದು. ಇದರಂತೆ ವಾಕ್ಯವಿಲ್ಲದೆ ಎಲ್ಲಿಯೂ ಪದಪದಾರ್ಥಗಳಿರುವಂತಿಲ್ಲ; ಅವುಗಳಿಲ್ಲದೆ ಅನ್ವಯವ್ಯತಿರೇಕಗಳು ಏನನ್ನಾಶ್ರಯಿಸಿ ಇರಬೇಕು ? ಅನ್ವಯವ್ಯತಿರೇಕಗಳಿಲ್ಲದೆ ವಾಕ್ಯಾರ್ಥಜ್ಞಾನವಾಗಲಾರದು ; ಅದಿಲ್ಲದೆ ಅಜ್ಞಾನಪ್ರಹಾಣವು ಆಗುವಂತಿಲ್ಲ. ಅಜ್ಞಾನನಾಶವಿಲ್ಲದೆ ಪುರುಷಾರ್ಥವು ದೊರಕುವದು ಕಷ್ಟ. ಅದ್ದರಿಂದ ಈ ಹೇಳಿದ್ದು ಸಿದ್ಧವಾಗುವದಕ್ಕಾಗಿ[1] ಮುಂದಿನ ಗ್ರಂಥವನ್ನು ತಂದಿಳಿಸಲಾಗಿದೆ.

## ಸ್ಥೂಲದೇಹವಿವೇಕ

(ಮೂಲ)

**ವರ್ಚಸ್ಕಂ ತ್ವನ್ನಕಾರ್ಯತ್ವಾದ್ಯಥಾ ನಾತ್ಮೇತಿ ಗಮ್ಯತೇ ।**
**ತದ್ಭಾಗಃ ಸೇನ್ದ್ರಿಯೋ ದೇಹಸ್ತದ್ವತ್ ಕಿಮಿತಿ ನೇಕ್ಷ್ಯತೇ ॥೧೧॥**

(ಅರ್ಥ)

೧೧. ಹೇಲು ಹೇಗೆ ಅನ್ನದ ಕಾರ್ಯವಾಗಿರುವದರಿಂದ ಆತ್ಮನಲ್ಲವೆಂದು ಗೊತ್ತಾಗಿದೆಯೋ ಆ (ಅನ್ನದ) ಅಂಶವೇ ಆಗಿರುವ ಇಂದ್ರಿಯಸಹಿತವಾದ ದೇಹವು ಅದರಂತೆಯೇ ಎಂದೇಕೆ ತಿಳಿಯಬಾರದು ?

(ಮೂಲ)

ಆದ್ಯನ್ತಯೋರನಾತ್ಮತ್ವೇ ಪ್ರಸಿದ್ಧೇ ಮಧ್ಯೇಽಪಿ ಕಃ ಪ್ರತಿಬನ್ಧಃ ?

1. ಪದಾರ್ಥವಿವೇಕದ ಮೂಲಕ ವಾಕ್ಯಾರ್ಥದ ಸಿದ್ಧಿಯಾಗುವದಕ್ಕಾಗಿ.

ಪ್ರಾಗನಾತ್ಮೈವ ಜಗ್ಧಂ ಸದಾತ್ಮತಾಮೇತ್ಯವಿದ್ಯಯಾ ।
ಸ್ರಗಾಲೇಪನವದ್ದೇಹಂ ತಸ್ಮಾತ್ ಪಶ್ಯೇದ್ವಿವಿಕ್ತಧೀಃ ॥೧೨॥

(ಅರ್ಥ)

ಮೊದಲುಕೊನೆಗಳಲ್ಲಿ ಅನಾತ್ಮವೆಂದು ಸಿದ್ಧವಾಗಿರುವಲ್ಲಿ ನಡುವೆಯಾದರೂ (ಅನಾತ್ಮವೆನ್ನಲು) ಅಡ್ಡಿಯೇನು ?

೧೨. ಮೊದಲು ಅನಾತ್ಮವೇ ; ತಿಂದಬಳಿಕ ಅವಿದ್ಯೆಯಿಂದ ಆತ್ಮನಾಗುವದು. ಆದ್ದರಿಂದ ವಿವೇಕಬುದ್ಧಿಯಿಂದ ದೇಹವನ್ನು ಹೂಗಂಧಗಳಂತೆ [1] (ಅದು ಅನಾತ್ಮವೆಂದೇ) ತಿಳಿಯಬೇಕು.

(ಮೂಲ)

ಅಥೈವಮಪಿ ಮದ್ವಚನಂ ನಾದ್ರಿಯಸೇ ಸ್ವಯಮೇವೈತಸ್ಮಾತ್ ಶರೀರಾತ್ ಅಶುಚಿರಾಶೇರ್ನಿರಾಶೋ ಭವಿಷ್ಯಸಿ –

ಮನ್ಯಸೇ ತಾವದಸ್ಮೀತಿ ಯಾವದಸ್ಮಾನ್ನ ನೀಯಸೇ ।
ಶ್ವಭಿಃ ಕ್ರೋಡೀಕೃತೇ ದೇಹೇ ನೈವಂ ತ್ವಮಭಿಮಂಸ್ಯಸೇ ॥೧೩॥

ಶಿರ ಆಕ್ರಮ್ಯ ಪಾದೇನ ಭರ್ತ್ಸಯತ್ಯಪರಾನ್ ಶುನಃ । ದೃಷ್ಟ್ವಾ
ಸಾಧಾರಣಂ ದೇಹಂ ಕಸ್ಮಾತ್ ಸಕ್ತೋಽಸಿ ತತ್ರ ಭೋಃ ॥೧೪॥

(ಅರ್ಥ)

ಇನ್ನು ಹೀಗೆಂದು (ಗೊತ್ತಾದರೂ) ನನ್ನ ವಚನದಲ್ಲಿ ಅನಾದರವನ್ನು ಮಾಡುವೆಯಾದರೆ ಈ ಅಶುಚಿಯ ರಾಶಿಯ[2] ಶರೀರದ ವಿಷಯದಲ್ಲಿ ನೀನೇ ಮುಂದೆ ನಿರಾಶನಾಗುವೆ.

೧೩-೧೪. ಎಲ್ಲಿಯವರೆಗೆ ಈ (ದೇಹ)ದಿಂದ ನಿನ್ನನ್ನು (ಹೊರಕ್ಕೆ) ಒಯ್ಯುವದಿಲ್ಲವೋ[3] ಅಲ್ಲಿಯವರೆಗೆ (ಇದು) ನಾನಾಗಿರುವೆನು ಎಂದು ಅಭಿಮಾನ

1. ಹೂಗಂಧಗಳು ದೇಹದಲ್ಲಿರುವಾಗಲೂ ಅನಾತ್ಮವೇ ಆಗಿರುವವೆಂದು ವಿವೇಕದಿಂದ ನಿಶ್ಚಯಿಸುವಂತೆ.

2. ಆತ್ಮನು ಶುದ್ಧನು, ದೇಹವು ಅಶುಚಿ-ಅವೆರಡನ್ನೂ ಒಂದೆಂದು ತಿಳಿಯುವದು ಎಂಥ ಮೌಢ್ಯ - ಎಂದು ಭಾವ.

3. ದೇಹವು ಮೊದಲುಕೊನೆಗಳಲ್ಲಿ ಅನಾತ್ಮವೇ ಎಂದಿತ್ತು ; ಮೊದಲು ಅನಾತ್ಮವೆಂಬುದನ್ನು ೧೨ರಲ್ಲಿ ತಿಳಿಸಿತ್ತು ; ಈಗ ಅಂತದಲ್ಲಿ ಅನಾತ್ಮವೆಂಬುದನ್ನು ತಿಳಿಸುತ್ತಾರೆ. ಶರೀರವನ್ನು ಜೀವನು ಬಿಟ್ಟ ಒಡನೆ ಅದು ಅಶುಚಿಯಾಗಿ ನಾಯಿಪಾಲಾಗುವದು.

ಪಡುತ್ತಿರುವೆ. (ಆದರೆ) ನಾಯಿಗಳು ಈ ದೇಹವನ್ನು ವಶಪಡಿಸಿಕೊಳ್ಳಲು ಹೀಗೆ ನೀನು (ಇದರಲ್ಲಿ) ಅಭಿಮಾನಪಡುವದಿಲ್ಲ[1]. (ಒಂದು ನಾಯಿಯು) ತಲೆಯನ್ನು ಕಾಲಿನಿಂದ ತುಳಿದುಕೊಂಡು ಇನ್ನುಳಿದ ನಾಯಿಗಳನ್ನು ಹೆದರಿಸುತ್ತಿರುತ್ತದೆ. (ಹೀಗೆ) ದೇಹವು (ಸರ್ವ) ಸಾಧಾರಣವೆಂದು ಕಂಡ ಮೇಲೆ[2] (ಇದರಲ್ಲಿ) ಏತಕ್ಕೆ ಸಕ್ತನಾಗಿರುವೆಯಯ್ಯ ?

(ಮೂಲ)

ಶ್ರುತಿಪರಿಪ್ರಾಪಿತೋಽಯಮರ್ಥೋಽನಾತ್ಮಾ ಬುದ್ಧ್ಯಾದಿದೇಹಾನ್ತ ಇತೀದಮಾಹ –

**ಬುಸವ್ರೀಹಿಪಲಾಲಾಂಶೈರ್ಬೀಜಮೇಕಂ ತ್ರಿಧಾ ಯಥಾ ।**
**ಬುದ್ಧಿಮಾಂಸಪುರೀಷಾಂಶೈರನ್ನಂ ತದ್ವದವಸ್ಥಿತಮ್ ॥೧೫॥**

(ಅರ್ಥ)

ಬುದ್ಧಿಯಿಂದ ಮೊದಲಾಗಿ ದೇಹದವರೆಗಿನ[3] (ದೆಲ್ಲ) ಅನಾತ್ಮವೆಂಬುದು ಶ್ರುತಿಯಿಂದ ಪ್ರಾಪ್ತವಾದ ವಿಷಯವು ಎಂಬುದನ್ನು ಹೇಳುತ್ತಾರೆ :

೧೫. ಹುಲ್ಲು, ಬತ್ತ, ಜಳ್ಳು- ಎಂಬ ಮೂರು ಬಗೆಯಿಂದ ಒಂದೇ ಬೀಜವು ಹೇಗೆ (ಪರಿಣಮಿಸಿ)ರುವದೋ ಹಾಗೆ ಬುದ್ಧಿ, ಮಾಂಸ, ಹೇಲು - ಎಂಬ ಮೂರು ಬಗೆಯಿಂದ ಅನ್ನವು (ಪರಿಣಮಿಸಿ)ರುತ್ತದೆ[4].

---

1. ಸತ್ತಮೇಲೆ ತನ್ನ ದೇಹವನ್ನು ತಾನು ನೋಡುವ ಸಂಭವವೇ ಇಲ್ಲ; ಆಗ ಅದರಲ್ಲಿ ಅಭಿಮಾನವೆಲ್ಲಿಯದು ?

2. ಈ ದೇಹವು ನನ್ನದೇ ಎನ್ನಲು ಕಾರಣವೇನು ? ನರಿನಾಯಿಗಳೂ ಇದರಲ್ಲಿ ಅಭಿಮಾನಪಡುತ್ತಿರುವವಲ್ಲ ! ಅಭಿಮಾನವು ಅವಿದ್ಯಾಹೇತುಕವೇ ಎಂದು ನಿಶ್ಚಯವಾಗಲಿಲ್ಲವೆ ?

3. ಇಲ್ಲಿ ದೇಹವೇ ಪ್ರಕೃತವಾದರೂ ಶ್ರುತಿಯನ್ನನುಸರಿಸಿ ಅಂತಃಕರಣವನ್ನೂ ಹೇಳಿದೆ.

4. ಛಾ. ೬-೫-೧ರ ಅಭಿಪ್ರಾಯವಿದು. ಅಲ್ಲಿ 'ಅನ್ನದ ಸ್ಥೂಲಭಾಗವು ಪುರೀಷವಾಗುವದು, ನಡುತರದ ಭಾಗವು ಮಾಂಸವಾಗುವದು, ಸೂಕ್ಷ್ಮಭಾಗವು ಮನಸ್ಸಾಗುವದು'- ಎಂದಿದೆ. ಇದರಿಂದ ದೇಹಾದಿಗಳು ಭೌತಿಕವೇ ಎಂಬುದು ಗಟ್ಟಿಯಾಯಿತು.

(ಮೂಲ)

ಯಥೋಕ್ತಾರ್ಥಪ್ರತಿಪತ್ತೌ ಸತ್ಯಾಂ ನ ರಾಗದ್ವೇಷಾಭ್ಯಾಂ ವಿಕ್ರಿಯತೇ ವಿಪಶ್ಚಿತ್ ಇತ್ಯಸ್ಯಾರ್ಥಸ್ಯ ಪ್ರತಿಪತ್ತಯೇ ದೃಷ್ಟಾನ್ತಃ–

ವರ್ಚಸ್ಕೇ ಸಂಪರಿತ್ಯಕ್ತೇ ದೋಷತಶ್ಚಾವಧಾರಿತೇ ।
ಯದಿ ದೋಷಂ ವದೇತ್ತಸ್ಮೈ ಕಿಂ ತತ್ರೋಚ್ಚರಿತುರ್ಭವೇತ್ ॥೧೬॥
ತದ್ವತ್ ಸೂಕ್ಷ್ಮೇ ತಥಾ ಸ್ಥೂಲೇ ದೇಹೇ ತ್ಯಕ್ತೇ ವಿವೇಕತಃ । ಯದಿ
ದೋಷಂ ವದೇತ್ ತಾಭ್ಯಾಂ ಕಿಂ ತತ್ರ ವಿದುಷೋ ಭವೇತ್ ॥೧೭॥

(ಅರ್ಥ)

ಮೇಲೆ ಹೇಳಿದ ಅರ್ಥವನ್ನು ತಿಳಿದುಕೊಂಡಮೇಲೆ ವಿವೇಕಿಯಾದವನಿಗೆ ರಾಗದ್ವೇಷಗಳಿಂದ ವಿಕಾರವಾಗುವದಿಲ್ಲ ಎಂಬೀ ವಿಷಯವನ್ನು ತಿಳಿಸುವದಕ್ಕೆ (ಈ) ದೃಷ್ಟಾಂತ(ವನ್ನು ಕೊಟ್ಟಿದೆ) :

೧೬-೧೭. ಮಲವನ್ನು ವಿಸರ್ಜನೆಮಾಡಿ (ಅದು) ಕೆಟ್ಟದ್ದೆಂದು ನಿಶ್ಚಯಿಸಿದ ಮೇಲೆ ಅದರ ವಿಷಯಕ್ಕೆ (ಯಾವನಾದರೂ) ದೋಷವನ್ನು ಹೇಳಿದರೆ ಮಲವಿಸರ್ಜನೆಮಾಡಿದವನಿಗೆ ಅದರಿಂದ ಯಾವ (ಹಾನಿ) ಆದೀತು ? ಇದರಂತೆ ಸ್ಥೂಲದೇಹವನ್ನೂ ಸೂಕ್ಷ್ಮದೇಹವನ್ನೂ ವಿವೇಕದಿಂದ ಕೈಬಿಟ್ಟ ಮೇಲೆ ಅವುಗಳ ವಿಷಯಕ್ಕೆ (ಯಾವನಾದರೂ) ದೋಷವನ್ನು ಹೇಳಿದರೆ ವಿವೇಕಿಯಾದವನಿಗೆ ಅದರಿಂದ ಯಾವ (ಹಾನಿ)ಯಾದೀತು[1] ?

(ಮೂಲ)

ಏತಾವದೇವ ಹಿ 'ಅಹಂ ಬ್ರಹ್ಮಾಸ್ಮಿ' ಇತಿ ವಾಕ್ಯಾರ್ಥಾಪ್ರತಿಪತ್ತೌ ಕಾರಣಂ ಯದುತ ಬುದ್ಧ್ಯಾದೌ ದೇಹಾನ್ತೇ ಅಹಂ ಮಮೇತಿ ನಿಃಸನ್ಧಿಬನ್ಧನೋ ಗ್ರಹಃ । ತದ್ವ್ಯತಿರೇಕೇ ಹಿ ನ ಕುತಶ್ಚಿದ್ ವಿಭಜ್ಯತೇ । ಏಕಲ ಏವ ಪ್ರತ್ಯಗಾತ್ಮನ್ಯವತಿಷ್ಠತ ಇತ್ಯಾಹ–

ರಿಪೌ ಬನ್ಧೌ ಸ್ವದೇಹೇ ಚ ಸಮೈಕಾತ್ಮ್ಯಂ ಪ್ರಪಶ್ಯತಃ ।
ವಿವೇಕಿನಃ ಕುತಃ ಕೋಪಃ ಸ್ವದೇಹಾವಯವೇಷ್ವಿವ ॥೧೮॥

1. ಸ್ಥೂಲದೇಹವಿವೇಕವೇ ಪ್ರಕೃತ ; ಮುಂದೆ ಹೇಳಲಾಗುವ ಸೂಕ್ಷ್ಮದೇಹವಿವೇಕವನ್ನೂ ಆದಂತೆ ಇಟ್ಟುಕೊಂಡು ಸ್ಥೂಲಸೂಕ್ಷ್ಮಗಳೆರಡರ ವಿವೇಕದ ಫಲವನ್ನು ಹೇಳಿದೆ.

(ಅರ್ಥ)

'ನಾನು ಬ್ರಹ್ಮವಾಗಿದೇನೆ' ಎಂಬ ವಾಕ್ಯದ ಅರ್ಥವನ್ನು ತಿಳಿಯದೆ ಇರುವದಕ್ಕೆ ಬುದ್ಧ್ಯಾದಿಯಾಗಿ ದೇಹದವರೆಗಿನ (ದೃಶ್ಯಗಳಲ್ಲಿ ), 'ನಾನು' 'ನನ್ನದು' ಎಂದು ಅಬಾಧಿತವಾಗಿ ನಿರಂತರವಾದ ಅಭಿಮಾನವೆಂಬಿಷ್ಟೇ ಅಲ್ಲವೆ, ಕಾರಣವು ? ಏಕೆಂದರೆ ಅವುಗಳಿಂದ ಬೇರ್ಪಟ್ಟರೆ ಏತರಿಂದಲೂ (ತಾನು) ವಿಭಕ್ತನಾಗಿರುವದಿಲ್ಲ, ತಾನೊಬ್ಬನೇ ಪ್ರತ್ಯಗಾತ್ಮ (ಸ್ವರೂಪ)ದಲ್ಲಿಯೇ ನಿಂತುಬಿಡುತ್ತಾನೆ ಎಂದು ಹೇಳುತ್ತಾರೆ :

೧೮. ಶತ್ರುವಿನಲ್ಲಿಯೂ ಮಿತ್ರನಲ್ಲಿಯೂ ತನ್ನ ದೇಹದಲ್ಲಿಯೂ ಸಮವಾಗಿಯೇ ಒಬ್ಬಾತ್ಮನನ್ನೇ ಕಾಣುತ್ತಿರುವ ವಿವೇಕಿಗೆ ತನ್ನ ದೇಹದ ಅವಯವಗಳಲ್ಲಿ (ತನಗೆ ಹೇಗೆ ಕೋಪವಿಲ್ಲವೋ) ಹಾಗೆ, ಹೇಗೆತಾನೆ ಕೋಪ ಉಂಟಾದೀತು ?

(ಮೂಲ)

ಇತಶ್ಚಾನಾತ್ಮಾ ದೇಹಾದಿಃ –

**ಘಟಾದಿವಚ್ಚ ದೃಶ್ಯತ್ವಾತ್ತೈರೇವ ಕರಣೈರ್ದೃಶೇಃ । ಸ್ವಪ್ನೇ**
**ಚಾನನ್ವಯಾಜ್ಜ್ಞೇಯೋ ದೇಹೋಽನಾತ್ಮೇತಿ ಸೂರಿಭಿಃ ॥೧೯॥**

(ಅರ್ಥ)

ದೇಹಾದಿಯು ಈ (ಕಾರಣ)ದಿಂದಲೂ ಅನಾತ್ಮವು ;

೧೯. ಗಡಿಗೆ ಮುಂತಾದವುಗಳಂತೆ ದ್ರಷ್ಟೃವಿನ ಅದೇ ಕರಣಗಳಿಗೇ ದೃಶ್ಯವಾಗಿರುವದರಿಂದಲೂ ಸ್ವಪ್ನದಲ್ಲಿ (ಅದರ) ಅನ್ವಯವಿಲ್ಲದ್ದರಿಂದಲೂ ದೇಹವು ಅನಾತ್ಮವೆಂದು ವಿವೇಕಿಗಳು ತಿಳಿದುಕೊಳ್ಳಬೇಕು.

(ಮೂಲ)

ದೇಹಾದಿಕಾರ್ಯಕರಣಸಂಘಾತವ್ಯತಿರೇಕಾವ್ಯತಿರೇಕದರ್ಶಿನಃ ಪ್ರತ್ಯಕ್ಷತ ಏವ ವಿರುದ್ಧಂ ಕಾರ್ಯಮುಪಲಭ್ಯತೇ –

**ಚತುರ್ಭಿರುಹ್ಯತೇ ಯತ್ತತ್ಸರ್ವಶಕ್ತ್ಯಾ ಶರೀರಕಮ್ ।**
**ತೂಲಾಯತೇ ತದೇವಾಹಂಧಿಯಾಘ್ರಾತಮಚೇತಸಾಮ್ ॥೨೦॥**

(ಅರ್ಥ)

ದೇಹವೇ ಮುಂತಾದ ಕಾರ್ಯಕರಣಸಂಘಾತಕ್ಕಿಂತ[1] ವ್ಯತಿರೇಕವನ್ನು ಕಂಡವನಿಗೂ ಕಾಣದವನಿಗೂ ಪ್ರತ್ಯಕ್ಷವಾಗಿಯೇ ವಿರುದ್ಧಕಾರ್ಯವು ಕಂಡು ಬರುತ್ತದೆ :

೨೦. ಯಾವ ಕುತ್ಸಿತಶರೀರವು ನಾಲ್ಕು ಜನರಿಂದ ಎಲ್ಲಾ ಶಕ್ತಿಯನ್ನೂ ಉಪಯೋಗಿಸಿ ಹೊರತಕ್ಕದ್ದಾಗಿರುವದೋ, ಅದೇ ನಾನೆಂಬ ಅಭಿಮಾನಕ್ಕೆ ಸಿಕ್ಕಿಬಿದ್ದಿರುವ ಬುದ್ಧಿಹೀನರಿಗೆ ಹತ್ತಿ (ಯಂತೆ ಹಗುರ)ವಾಗಿರುತ್ತದೆ[2].

(ಮೂಲ)

ಪ್ರಸಿದ್ಧತ್ವಾತ್ ಪ್ರಕರಣಾರ್ಥೋಪಸಂಹಾರಾಯಾಹ –

**ಸ್ಥೂಲಂ ಯುಕ್ತ್ಯಾ ನಿರಸ್ಯೈವಂ ನಭಸೋ ನೀಲತಾಮಿವ ।**
**ದೇಹಂ ಸೂಕ್ಷ್ಮಂ ನಿರಾಕುರ್ಯಾದತೋ ಯುಕ್ತಿಭಿರಾತ್ಮನಃ ॥೨೧॥**

(ಅರ್ಥ)

ಪ್ರಸಿದ್ಧವಾಗಿರುವದರಿಂದ[3] (ಈ) ಪ್ರಕರಣದ ಅರ್ಥವನ್ನು[4] ಉಪಸಂಹಾರಮಾಡುವದಕ್ಕಾಗಿ ಹೇಳುತ್ತಾರೆ :

೨೧. ಹೀಗೆ ಸ್ಥೂಲದೇಹವನ್ನು ಆಕಾಶದ ನೀಲತ್ವವನ್ನು ನಿರಾಕರಿಸುವಂತೆ ಯುಕ್ತಿಯಿಂದ ನಿರಾಕರಿಸಿ ಆ ಬಳಿಕ ಸೂಕ್ಷ್ಮದೇಹವನ್ನು ಆತ್ಮನಿಂದ ಯುಕ್ತಿಗಳಿಂದ ನಿರಾಕರಿಸಬೇಕು[5].

---

1. ಸ್ಥೂಲದೇಹವಿವೇಕವೇ ಪ್ರಕೃತವಾದರೂ ಸೂಕ್ಷ್ಮದೇಹಕ್ಕೂ ಇದು ಅನ್ವಯಿಸುತ್ತದೆ ಎಂದು ಅಭಿಪ್ರಾಯ.

2. ದೇಹವು ಹಗುರವಾಗಿರುವದು ಅಭಿಮಾನದಿಂದ, ಭಾರವಾಗಿರುವದು ನಿರಭಿಮಾನದಿಂದ.

3. ಲೋಕದೃಷ್ಟಿಯಿಂದಲೇ ಸಿದ್ಧವಾಗಿರುವದರಿಂದಲೂ ವಾದಿಗಳನೇಕರು ಒಪ್ಪಿರುವದರಿಂದಲೂ ಸ್ಥೂಲದೇಹವು ಅನಾತ್ಮವೆಂಬುದು ಪ್ರಸಿದ್ಧ.

4. ಸ್ಥೂಲದೇಹದ ವಿವೇಕವನ್ನು .

5. ಇದುವರೆಗೆ ಪ್ರಧಾನವಾಗಿ ನಿರಾಕರಣೆಮಾಡಿರುವದು ಸ್ಥೂಲದೇಹವನ್ನೇ ಎಂಬುದು ಈ ಪ್ರತಿಜ್ಞಾವಾಕ್ಯದಿಂದಲೂ ನಿರ್ಣಯವಾಗುತ್ತದೆ.

## ಸೂಕ್ಷ್ಮದೇಹವಿವೇಕ

(ಮೂಲ)

ಕಥಂ ದೇಹಂ ಸೂಕ್ಷ್ಮಂ ನಿರಾಕುರ್ಯಾತ್ ಇತಿ ? ಉಚ್ಯತೇ –

**ಅಹಂ ಮಮತ್ವಯತ್ನೇಚ್ಛಾ ನಾತ್ಮಧರ್ಮಾಃ ಕೃಶತ್ವವತ್ ।**
**ಕರ್ಮತ್ವೇನೋಪಲಭ್ಯತ್ವಾದಪಾಯಿತ್ವಾಚ್ಚ ವಸ್ತ್ರವತ್ ॥೨೨॥**

(ಅರ್ಥ)

ಸೂಕ್ಷ್ಮದೇಹವನ್ನು ನಿರಾಕರಿಸಬೇಕು ಎಂದರೆ ಹೇಗೆ ? ಎಂಬುದನ್ನು (ಈಗ) ತಿಳಿಸುತ್ತಾರೆ :

೨೨. ಅಹಂಕಾರ, ಮಮಕಾರ, ಯತ್ನ , ಇಚ್ಛೆ - ಇವುಗಳು[1] ಆತ್ಮಧರ್ಮವಲ್ಲ . ಏಕೆಂದರೆ ಕೃಶತ್ವದಂತೆ ವಿಷಯವಾಗಿ ಕಾಣಬರುತ್ತವೆ. ವಸ್ತ್ರದಂತೆ (ಬಿಟ್ಟು ) ಹೊರಟುಹೋಗುತ್ತವೆ[2].

(ಮೂಲ)

ವೈಧರ್ಮ್ಯೇ ದೃಷ್ಟಾನ್ತಃ–

**ನೋಷ್ಣಿಮಾನಂ ದಹತ್ಯಗ್ನಿಃ ಸ್ವರೂಪತ್ವಾದ್ಯಥಾ ಜ್ವಲನ್ ।**
**ತಥೈವಾತ್ಮಾತ್ಮನೋ ವಿದ್ಯಾದಹಂ ನೈವಾವಿಶೇಷತಃ ॥೨೩॥**

---

1. ಅಹಂಕಾರ, ಮಮಕಾರ, ಬುದ್ಧಿ , ಸುಖದುಃಖ, ಇಚ್ಛೆ, ದ್ವೇಷ , ಯತ್ನ - ಮುಂತಾದವುಗಳನೆಲ್ಲ ಇಲ್ಲಿ ಗ್ರಹಿಸಬೇಕು. ವೈಶೇಷಿಕಾದಿಗಳು ಇವನ್ನು ಆತ್ಮಧರ್ಮವೆಂದು ಒಪ್ಪಿರುತ್ತಾರೆ.

2. ಅಹಂಕಾರಾದಿಗಳು ಅನಾತ್ಮವೆಂಬುದಕ್ಕೆ ವಿಷಯತ್ವ, ಆಗಮಾಪಾಯಿತ್ವ-ಎಂಬ ಹೇತುಗಳನ್ನು ಕೊಟ್ಟಿದೆ. ಇವುಗಳನ್ನುಳ್ಳ ಸೂಕ್ಷ್ಮದೇಹವು ಅನಾತ್ಮವೇ ಎಂಬುದು ಇದರಿಂದಲೇ ಸಿದ್ಧವಾಗುತ್ತದೆ. 'ಯುಕ್ತಿಭಿಃ' (೨-೨೧) ಎಂದು ಬಹುವಚನವನ್ನು ಕೊಟ್ಟಿರುವದು ಈ ಮುಂದೆ ಹೇಳಿರುವ ಯುಕ್ತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಎಂದು ತಿಳಿಯಬೇಕು.

(ಅರ್ಥ)

ವೈಧರ್ಮ್ಯಕ್ಕೆ[1] ದೃಷ್ಟಾಂತ(ವಿದು) :

೨೩. ಹೇಗೆ ಉರಿಯುವ ಬೆಂಕಿಯು ಬಿಸಿಯು (ತನ್ನ) ಸ್ವರೂಪವೇ ಆಗಿರುವದರಿಂದ ಅದನ್ನು ಸುಡಲಾರದೋ ಹಾಗೆಯೇ ಆತ್ಮನು ತನ್ನ (ಸ್ವರೂಪ)ವಾಗಿರುವು(ದಾದರೆ) ಅಹಂಕಾರವನ್ನು ಅರಿಯಲೇ ಆರನು. ಏಕೆಂದರೆ (ಇಲ್ಲಿ) ಯಾವ ವಿಶೇಷವೂ ಇಲ್ಲ[2].

(ಮೂಲ)

ಏಕಸ್ಯಾತ್ಮನಃ ಕರ್ಮಕರ್ತೃಭಾವಃ ಸರ್ವಥಾ ನೋಪಪದ್ಯತ ಇತಿ ಶ್ರುತ್ವಾ ಮೀಮಾಂಸಕಃ ಪ್ರತ್ಯವತಿಷ್ಠತೇ ಅಹಂಪ್ರತ್ಯಯಗ್ರಾಹ್ಯತ್ವಾತ್ ಗ್ರಾಹಕ ಆತ್ಮೇತಿ । ತನ್ನಿವೃತ್ತ್ಯರ್ಥಮಾಹ–

**ಯತ್ಕರ್ಮಕೋ ಹಿ ಯೋ ಭಾವೋ ನಾಸೌ ತತ್ಕರ್ತೃಕೋ ಯತಃ ।**
**ಘಟಪ್ರತ್ಯಯವತ್ತಸ್ಮಾನ್ನಾಹಂ ಸ್ಯಾದ್ದ್ರಷ್ಟೃಕರ್ಮಕಃ ॥೨೪॥**

(ಅರ್ಥ)

ಒಬ್ಬನೇ ಆತ್ಮನಿಗೆ ಕರ್ಮಕರ್ತೃಭಾವವು[3] ಹೇಗೂ ಹೊಂದುವದಿಲ್ಲ ಎಂದದ್ದನ್ನು ಕೇಳಿದ ಮೀಮಾಂಸಕನು ಅಹಂಪ್ರತ್ಯಯಗ್ರಾಹ್ಯನಾಗಿರುವದರಿಂದ

---

1. ಹಿಂದೆ ಅಹಂಕಾರಾದಿಗಳು ಆತ್ಮಧರ್ಮವಲ್ಲ ಎಂಬುದಕ್ಕೆ ದೃಷ್ಟಾಂತವನ್ನು ಕೊಟ್ಟಿತ್ತು ; ಇಲ್ಲಿ ಆತ್ಮಧರ್ಮವೆಂದರೆ ಇಂಥ ಅನಿಷ್ಟವು ಬಂದೊದಗುತ್ತದೆ ಎಂಬುದಕ್ಕೆ ದೃಷ್ಟಾಂತವನ್ನು ಕೊಟ್ಟಿದೆ.

2. ಏಕೆಂದರೆ ಪೂರ್ವಪಕ್ಷಿಯ ಮತದಂತೆ ಎರಡಕ್ಕೂ ತನ್ನ ಸ್ವರೂಪವೇ ಆಗಿರುವದೆಂಬ ಹೋಲಿಕೆಯೇ ಇದೆ ಎಂದರ್ಥ. ಇಲ್ಲಿ ಆತ್ಮಧರ್ಮ, ಆತ್ಮಸ್ವರೂಪ - ಇವೆರಡನ್ನೂ ಪರ್ಯಾಯವಾಗಿಯೇ ಉಪಯೋಗಿಸಿದೆ. ಸ್ವರೂಪವ್ಯತಿರಿಕ್ತಧರ್ಮವನ್ನೊಪ್ಪಿದರೂ ಇದೇ ದೃಷ್ಟಾಂತವನ್ನು ಕೊಡಬೇಕು.

3. ಆತ್ಮನೇ ಅರಿಯುವವನು, ಆತ್ಮನೇ ಅರಿಯಲ್ಪಡುವವನು ಎಂದು ಅವನಿಗೆ ಕರ್ತೃವೂ ಕರ್ಮವೂ ತಾನೇ ಆಗಿರುವದು.

ಆತ್ಮನು ಗ್ರಾಹಕನಾಗಿರುತ್ತಾನೆ[1] ಎಂದು ಎದುರುನಿಲ್ಲುತ್ತಾನೆ. ಅವನನ್ನು ನಿರಾಕರಿಸುವದಕ್ಕಾಗಿ (ಇದನ್ನು) ಹೇಳುತ್ತಾರೆ :

೨೪. ಯಾವ ಪದಾರ್ಥಕ್ಕೆ ಯಾವದು ಕರ್ಮವೋ ಅದಕ್ಕೆ ಅದೇ ಕರ್ತೃವಾಗಿರಲಾರದು. (ಇದಕ್ಕೆ) ಘಟಪ್ರತ್ಯಯವೇ ದೃಷ್ಟಾಂತವು. ಆದ್ದರಿಂದ ಅಹಂ(ಪ್ರತ್ಯಯಕ್ಕೆ) ದ್ರಷ್ಟೃವು ಕರ್ಮವಲ್ಲ[2].

(ಮೂಲ)

**ಅತ್ರಾಹ । ಪ್ರತ್ಯಕ್ಷೇಣಾತ್ಮನಃ ಕರ್ಮಕರ್ತೃತ್ವಾಭ್ಯುಪಗಮೇ ತತ್ಪಾದೋಪಜೀವಿನಾ ಅನುಮಾನೇನ ಪ್ರತ್ಯಕ್ಷೋತ್ಸಾರಣಮ್ ಅಯುಕ್ತಮಿತಿ[3] । ತನ್ನಿರಾಕರಣಾಯ ಪ್ರತ್ಯಕ್ಷೋಪನ್ಯಾಸಃ–**

**ಯತ್ರ ಯೋ ದೃಶ್ಯತೇ ದ್ರಷ್ಟ್ರಾ ತಸ್ಯೈವಾಸೌ ಗುಣೋ ನ ತು ।**
**ದ್ರಷ್ಟೃಸ್ಥಂ ದೃಶ್ಯತಾಂ ಯಸ್ಮಾನ್ನೈವೇಯಾದ್ ದ್ರಷ್ಟೃಬೋಧವತ್ ॥೨೫॥**

(ಅರ್ಥ)

ಇಲ್ಲಿ (ಮೀಮಾಂಸಕನು) ಎನ್ನುತ್ತಾನೇನೆಂದರೆ, ಆತ್ಮನಲ್ಲಿ ಕರ್ಮಕರ್ತೃತ್ವವು ಇದೆಯೆಂಬುದನ್ನು ಪ್ರತ್ಯಕ್ಷಪ್ರಮಾಣದಿಂದ ಒಪ್ಪಿರುವಲ್ಲಿ ಅದರ ಪಾದವನ್ನು ಆಶ್ರಯಿಸಿಕೊಂಡಿರುವ ಅನುಮಾನದಿಂದ (ಆ) ಪ್ರತ್ಯಕ್ಷವನ್ನು

---

1. ನಾನು ಎಂಬ ಪ್ರತ್ಯಯಕ್ಕೆ ವಿಷಯನಾಗಿರುವವನು ಗ್ರಾಹಕನು, ಇದು ಎಂಬ ಪ್ರತ್ಯಯಕ್ಕೆ ವಿಷಯವಾಗಿರುವದು ಗ್ರಾಹ್ಯವು ; ಪ್ರಕೃತದಲ್ಲಿ ಅಹಂಪ್ರತ್ಯಯಕ್ಕೆ ಆಶ್ರಯನೂ ವಿಷಯನೂ ಒಬ್ಬನೇ ಆಗಿರುವದು ಅನುಭವದಲ್ಲಿರುವದರಿಂದ ದೋಷವಿಲ್ಲ ಎಂದು ಭಾವ.

2. ಘಟಪ್ರತ್ಯಯಕ್ಕೆ ಘಟವು ಕರ್ಮ ; ಆದರೆ ಅದು ಆ ಪ್ರತ್ಯಯಕ್ಕೆ ತಾನೇ ಕರ್ತೃವಾಗಿರುವದಿಲ್ಲ. ಪ್ರಕೃತದಲ್ಲಿ ದ್ರಷ್ಟೃವು ಅಹಂಪ್ರತ್ಯಯಕ್ಕೆ ಕರ್ತೃವಾಗಿರುತ್ತಾನೆ ; ಆದ್ದರಿಂದ ಅವನು ಅದಕ್ಕೆ ಕರ್ಮವಲ್ಲ ಎಂದರ್ಥ. ಕರ್ಮತ್ವವಿದ್ದರೆ ಕರ್ತೃತ್ವವೂ ಇರಲಾರದು ಎಂಬ ತರ್ಕವು ತನ್ನ ಅನುಮಾನಕ್ಕೆ ಅನುಕೂಲವಾಗಿದೆ ಎಂದು ಸಿದ್ಧಾಂತಿಯು ತೋರಿಸಿಕೊಟ್ಟಿರುತ್ತಾನೆ.

3. ಅಚ್ಚಿನ ಪುಸ್ತಕದಲ್ಲಿರುವ ಚೋದ್ಯಮ್ ಎಂಬ ಮಾತು ಬೇಕಿಲ್ಲ.

ನಿರಾಕರಿಸುವದು ಸರಿಯಲ್ಲ[1]. ಈ (ಆಕ್ಷೇಪವನ್ನು) ತಿರಸ್ಕರಿಸುವದಕ್ಕಾಗಿ ಪ್ರತ್ಯಕ್ಷವನ್ನೇ ಹೇಳುತ್ತಾರೆ :

೨೫. ಎಲ್ಲಿ ಯಾವದನ್ನು ದ್ರಷ್ಟೃವು ಕಾಣುತ್ತದೆಯೋ ಅದು ಅದರದೇ ಗುಣವೇ ಹೊರತು ಅದೇ (ದ್ರಷ್ಟೃವಿನ) ಗುಣವಲ್ಲ[2]. ಏಕೆಂದರೆ ದ್ರಷ್ಟೃವಿನ ಜ್ಞಾನದಂತೆ ದ್ರಷ್ಟೃವಿನಲ್ಲಿರುವದು ಎಂದಿಗೂ ದೃಶ್ಯತ್ವವನ್ನು ಹೊಂದಲಾರದು[3].

(ಮೂಲ)

ಪ್ರತ್ಯಕ್ಷೇಣೈವ ಭವದಭಿಮತಸ್ಯ ಪ್ರತ್ಯಕ್ಷಸ್ಯ ಆಭಾಸೀಕೃತತ್ವಾತ್ ಸುಸ್ಥಮೇವ ಅನುಮಾನಮ್ । ಅತಸ್ತದೇವ ಪ್ರಕ್ರಿಯತೇ । ತತ್ರ ಚ ವಿಕಲ್ಪ್ಯ ದೂಷಣಾಭಿಧಾನಮ್ –

ನಾತ್ಮನಾ ನ ತದಂಶೇನ ಗುಣಃ ಸ್ವಸ್ಥೋಽವಗಮ್ಯತೇ ।
ಅಭಿನ್ನತ್ವಾತ್ ಸಮತ್ವಾಚ್ಚ ನಿರಂಶತ್ವಾದಕರ್ಮತಃ ॥೨೬॥

(ಅರ್ಥ)

ಪ್ರತ್ಯಕ್ಷದಿಂದಲೇ ನಿನಗೆ ಅಭಿಮತವಾಗಿರುವ ಪ್ರತ್ಯಕ್ಷವನ್ನು ಆಭಾಸ

---

1. ಅಹಂಪ್ರತ್ಯಯಕ್ಕೆ ಆತ್ಮನು ಕರ್ಮವಾಗಿರುವದು ಪ್ರತ್ಯಕ್ಷವಾಗಿದೆ ; ಹೀಗಿರುವಲ್ಲಿ ಕರ್ಮವಾಗಿರಲಾರನು ಎಂದು ಅನುಮಾನಮಾಡಿದ್ದು ಸರಿಯಲ್ಲ ಎಂದರ್ಥ.

2. 'ತಸ್ಯೈವ' ಎಂಬ ಮಾತನ್ನು ಮತ್ತೆ ಸೇರಿಸಿಕೊಂಡು ನ ತು ತಸ್ಯೈವ (ಕರ್ತುಃ)-ಎಂದು ಅನ್ವಯಮಾಡಿದೆ. 'ಗುಣೋ ಮತಃ' ಎಂಬ ಪಾಠವಿದ್ದರೆ ಗುಣವೆನಿಸುವದು-ಎಂದು ಸುಲಭವಾಗಿ ಅನ್ವಯವಾಗುತ್ತದೆ. ಇಲ್ಲಿ ಅಹಂಪ್ರತ್ಯಯವು ದ್ರಷ್ಟೃವಿಗೆ ಅಂತಃಕರಣದಲ್ಲಿ ಕಾಣುತ್ತದೆ ; ಆದ್ದರಿಂದ ಅದು ಅಂತಃಕರಣಧರ್ಮವೇ- ಎಂಬ ಪ್ರತ್ಯಕ್ಷವನ್ನು ಉದಾಹರಿಸಿದಂತಾಯಿತು.

3. ದ್ರಷ್ಟೃವಿನ ಧರ್ಮವಾದ ಜ್ಞಾನವು ಎಂದಿಗೂ ದೃಶ್ಯವಾಗುವದಿಲ್ಲ ; ಆದರೆ ಅಹಂಪ್ರತ್ಯಯವು ದೃಶ್ಯವಾಗಿದೆ. ಆದ್ದರಿಂದ ಅದು ದ್ರಷ್ಟೃವಿನ ಧರ್ಮವಲ್ಲ.

ವಾಗಿಸಿದ್ದಾಯಿತಾದ್ದರಿಂದ[1] ಅನುಮಾನವು ಸರಿಯಾಗಿದೆಯೆಂಬುದೇ ನಿಂತಿತು. ಆದ್ದರಿಂದ ಅದನ್ನೇ[2] (ಮತ್ತೆ) ಪ್ರಾರಂಭಿಸಲಾಗುತ್ತದೆ. ಇಲ್ಲಿ ವಿಕಲ್ಪಿಸಿ ದೂಷಣವನ್ನು ಹೇಳಲಾಗುತ್ತದೆ[3]:

೨೬. ಆತ್ಮನು ತನ್ನ ಗುಣವನ್ನು[4] ಅರಿಯುವದಿಲ್ಲ. ಅವನ ಅಂಶವೂ (ಅರಿಯು)ವದಿಲ್ಲ ; ಏಕೆಂದರೆ (ತಾನು ತನ್ನಿಂದ) ಅಭಿನ್ನನಾಗುತ್ತಾನೆ[5] (ಎರಡು ಅಂಶಗಳೂ) ಸಮವಾಗಿರುತ್ತವೆ[6]. (ಆತ್ಮನು) ನಿರಂಶನಾಗಿರುತ್ತಾನೆ[7], (ಏತಕ್ಕೂ) ಕರ್ಮವಲ್ಲ[8].

---

1. ಅಂತಃಕರಣವಿಲ್ಲದೆ ದೃಶ್ಯತ್ವವು ಕಾಣಿಸುವದಿಲ್ಲವಾದ್ದರಿಂದ ಅದು ಅಂತಃಕರಣದ್ದೇ ಧರ್ಮವು ಎಂದು ತೋರಿಸಿ ಆತ್ಮನು ಅಹಂಪ್ರತ್ಯಯಗಮ್ಯನೆಂಬುದು ಭ್ರಾಂತಿಯೆಂದು ಸಾಧಿಸಿರುವದರಿಂದ ಎಂದರ್ಥ. ಆತ್ಮನು ದ್ರಷ್ಟೃ ಎಂಬುದು ಅಂತಃಕರಣಾದ್ಯುಪಾಧಿ ನಿಮಿತ್ತವಾದ್ದರಿಂದ ಅದನ್ನು ಇಟ್ಟುಕೊಂಡೇ ದೃಶ್ಯತ್ವವನ್ನು ನಿರಾಕರಿಸಿದೆ ; ಈ ದೃಷ್ಟಿ ಕರ್ತೃತ್ವವನ್ನು ಕೂಡ ಮುಂದೆ ೫೮ರಲ್ಲಿ ನಿರಾಕರಿಸಲಾಗುವದು.

2. ಅಹಂಕಾರವು ಅನಾತ್ಮಧರ್ಮವೆಂದು ಸಾಧಿಸಿರುವದನ್ನೇ ವಿಶದೀಕರಿಸುವದಕ್ಕೆ.

3. ಮುಂದಿನ ಶ್ಲೋಕದಲ್ಲಿ ಆತ್ಮನು ತನ್ನ ಅಹಂಧರ್ಮವನ್ನು ಅರಿಯುತ್ತಾನೆಂಬುದು ಹೀಗೊ, ಹೀಗೊ ? - ಎಂದು ವಿಂಗಡಿಸಿ ದೂಷಿಸಲಾಗುತ್ತದೆ ಎಂದರ್ಥ.

4. ಆತ್ಮನ ಗುಣವೆಂದು ನೀವು ಹೇಳುತ್ತಿರುವ ಅಹಂಪ್ರತ್ಯಯವನ್ನು ಎಂದರ್ಥ.

5. ತನ್ನನ್ನು ತಾನು ಅರಿಯುವಂತಿಲ್ಲ ; ಅರಿಯದೆ ತನ್ನ ಗುಣವನ್ನು ಅರಿಯುವದಕ್ಕೂ ಆಗುವದಿಲ್ಲ.

6. ಆತ್ಮನು ತನ್ನನ್ನೇ ತಾನು ಅರಿಯುವನೆಂದರೆ ಅರಿಯುವ ಆತ್ಮ, ಅರಿಯಲ್ಪಡುವ ಆತ್ಮ - ಎಂದು ಇಬ್ಬರಾಗುವರು. ಅಥವಾ ಒಬ್ಬನೇ ಎರಡು ಅಂಶಗಳಾಗಿರುತ್ತಾನೆ - ಎಂಬ ಎರಡನೆಯ ವಿಕಲ್ಪವನ್ನು ಒಪ್ಪಬೇಕಾಗುವದು. ಆಗ ಎರಡೂ ಚೇತನವಾಗಿರುವದರಿಂದ ಒಂದು ದೀಪವು ಮತ್ತೊಂದನ್ನು ಪ್ರಕಾಶಿಸುತ್ತದೆ ಎಂಬುದು ಹೇಗೆ ಹೊಂದುವದಿಲ್ಲವೋ ಹಾಗೆಯೇ ಒಂದಂಶವು ಮತ್ತೊಂದನ್ನು ಅರಿಯುತ್ತದೆ ಎಂಬುದೂ ಹೊಂದುವದಿಲ್ಲ.

7. ಆತ್ಮನು ನಿರಂಶನಾದ್ದರಿಂದ ಅವನಲ್ಲಿ ಕರ್ತ್ರಂಶಕರ್ಮಾಂಶಗಳನ್ನು ಒಪ್ಪುವದು ಸರಿಯೇ ಅಲ್ಲ.

8. ಆತ್ಮನು ಜ್ಞಾನಕರ್ತೃವಾದ್ದರಿಂದ ಕರ್ಮವಲ್ಲ.

(ಮೂಲ)

ನ ಯುಗಪತ್, ನಾಪಿ ಕ್ರಮೇಣ ಉಭಯಥಾ ಚೈಕಸ್ಯ[1] ಧರ್ಮಿಣೋ ಗ್ರಾಹ್ಯಗ್ರಾಹಕತ್ವಮುಪಪದ್ಯತ ಇತಿ ಪ್ರತಿಪಾದನಾಯ ಆಹ–

ದ್ರಷ್ಟೃತ್ವೇನೋಪಯುಕ್ತತ್ವಾತ್ ತದೈವ ಸ್ಯಾನ್ನ ದೃಶ್ಯತಾ ।
ಕಾಲಾನ್ತರೇ ಚೇತ್ ದೃಶ್ಯತ್ವಂ ನ ಹ್ಯದ್ರಷ್ಟೃಕಮಿಷ್ಯತೇ ॥೨೭॥

(ಅರ್ಥ)

ಒಟ್ಟಿಗೆಯಾಗಲಿ ಕ್ರಮದಿಂದಲಾಗಲಿ ಒಂದೇ ಧರ್ಮಿಗೆ ಗ್ರಾಹ್ಯಗ್ರಾಹಕತ್ವವು ಎರಡು ಬಗೆಯಿಂದಲೂ ಹೊಂದುವದಿಲ್ಲ ಎಂದು ತಿಳಿಸುವದಕ್ಕೆ ಹೇಳುತ್ತಾನೆ :

೨೭. ದ್ರಷ್ಟೃವಾಗಿಯೇ ಉಪಯುಕ್ತವಾಗಿರುವದರಿಂದ ಆಗಲೇ ದೃಶ್ಯತ್ವವಿರಲಾರದು[2]. ಕಾಲಾಂತರದಲ್ಲಿ ದೃಶ್ಯತ್ವವು (ಇರಬಹುದು) ಎಂದರೆ ದ್ರಷ್ಟೃವಿಲ್ಲದ (ದೃಶ್ಯತ್ವವನ್ನು) ಒಪ್ಪುವಂತಿಲ್ಲ[3].

(ಮೂಲ)

ಸನ್ತು ಕಾಮಮ್ ಅನಾತ್ಮಧರ್ಮಾ ಮಮತ್ವಾದಯಃ । ಯಥೋಕ್ತ ನ್ಯಾಯಬಲಾತ್, ಅನಾತ್ಮತಯೈವ ತೇಷು ವ್ಯವಹಾರಾತ್ । ಅಹಂ ರೂಪಸ್ಯ ತು ಪ್ರತ್ಯಗಾತ್ಮಸಂಬನ್ಧಿತಯೈವ ಪ್ರಸಿದ್ಧೇಃ, 'ಅಹಂ ಬ್ರಹ್ಮಾಸ್ಮಿ' ಇತಿ ಶ್ರುತೇಶ್ಚ ಅನಾತ್ಮಧರ್ಮತ್ವಮ್ ಅಯುಕ್ತಮ್ ಇತಿ ಚೇತ್, ತನ್ನ–

ಅಹಂಧರ್ಮಸ್ತ್ವಭಿನ್ನಶ್ಚೇದಹಂ ಬ್ರಹ್ಮೇತಿವಾಕ್ಯತಃ ।
ಗೌರೋಽಹಮಿತ್ಯನೈಕಾನ್ತ್ಯೋ ವಾಕ್ಯಂ ತದ್ವ್ಯಪನೇತೃ ತತ್ ॥೨೮॥

---

1. 'ಉಭಯಥಾ ನೈಕಸ್ಯ' ಎಂದಿದ್ದರೆ ಚೆನ್ನಾಗಿರುತ್ತದೆ ; ಈಗ ಇರುವಂತೆ ಹಿಂದಿನ ನಞ್‌ಶಬ್ದವನ್ನೇ ಇಲ್ಲಿಗೆ ಅನ್ವಯಿಸಬೇಕಾಗಿದೆ.

2. ಏಕೆಂದರೆ ದ್ರಷ್ಟೃವು ದೃಶ್ಯವನ್ನು ನೋಡುವದರಲಿಯೇ ವ್ಯಾಪೃತನಾಗಿರುವದರಿಂದ ತನ್ನನ್ನು ನೋಡುವದಕ್ಕೆ ಅವನಿಗೆ ಅವಕಾಶವೇ ಇರುವದಿಲ್ಲ.

3. ಆಗ ಮತ್ತೊಬ್ಬ ದ್ರಷ್ಟೃವನ್ನು ಒಪ್ಪಿದರೆ ಅನವಸ್ಥೆಯೂ ಆಗುವದು ಎಂದು ಭಾವ. ಇಲ್ಲಿರುವ ಯುಕ್ತಿಗಳು ಐತರೇಯಭಾಷ್ಯದ ಒಂದನೆಯ ಅಧ್ಯಾಯದ ಕೊನೆಯಲ್ಲಿವೆ.

(ಅರ್ಥ)

ಮಮತ್ವವೇ ಮುಂತಾದವು[1] ಮೇಲೆ ಹೇಳಿರುವ ಯುಕ್ತಿಯ ಬಲದಿಂದಲೂ ಅವುಗಳಲ್ಲಿ ಅನಾತ್ಮವೆಂದೇ ವ್ಯವಹಾರ(ವಿರುವ)ದರಿಂದಲೂ ಅನಾತ್ಮಧರ್ಮಗಳೇ ಎಂದು ಬೇಕಾದರೆ ಆಗಲಿ. ಅಹಂರೂಪವಾದರೋ ಪ್ರತ್ಯಗಾತ್ಮಸಂಬಂಧಿಯಾಗಿಯೇ ತಿಳಿದುಬರುತ್ತಿರುವದರಿಂದಲೂ[2] 'ಅಹಂ ಬ್ರಹ್ಮಾಸ್ಮಿ' (ನಾನು ಬ್ರಹ್ಮವಾಗಿರುವೆನು) ಎಂಬ ಶ್ರುತಿ (ಪ್ರಾಮಾಣ್ಯ)ದಿಂದಲೂ[3] (ಅದು) ಅನಾತ್ಮಧರ್ಮವು ಎಂಬುದು ಅಯುಕ್ತವು ಎಂದರೆ ಅದು ಸರಿಯಲ್ಲ :

೨೮. 'ಅಹಂ ಬ್ರಹ್ಮ' ಎಂಬ ವಾಕ್ಯದಿಂದ ಅಹಂಧರ್ಮವು (ಆತ್ಮನಿಗಿಂತ) ಭಿನ್ನವಲ್ಲವೇ ಅಲ್ಲ ಎನ್ನುವುದಾದರೆ 'ನಾನು ಬೆಳ್ಳಗಿರುವವನು' ಎಂಬಲ್ಲಿ ಅನೈಕಾಂತಿಕತ್ವ(ವಿದೆ)[4]. ಆ ವಾಕ್ಯವು ಅದಕ್ಕೆ ಭಾದಕವು[5].

(ಮೂಲ)

**ಕಥಂ ವಾಕ್ಯಂ ತದ್ವ್ಯಪನೇತೃ ತತ್ ಇತಿ ? ಉಚ್ಯತೇ –**

**ಯೋಽಯಂ ಸ್ಥಾಣುಃ ಪುಮಾನೇಷಃ ಪುಂಧಿಯಾ ಸ್ಥಾಣುಧೀರಿವ ।**
**ಬ್ರಹ್ಮಾಸ್ಮೀತಿ ಧಿಯಾಶೇಷಾ ಹ್ಯಹಂಬುದ್ಧಿರ್ನಿವರ್ತ್ಯತೇ ॥೨೯॥**

---

1. ಮಮತ್ವ, ಯತ್ನ, ಇಚ್ಛೆ - ಮುಂತಾದವು.

2. ವಿಷಯವೆಂದು ತೋರುವದಿಲ್ಲವೆಂದು ಅಭಿಪ್ರಾಯವಲ್ಲ ; ಇದು ಎಂದು ತೋರುವದೇ ಇಲ್ಲ, ಒಳಗಿರುವ ಆತ್ಮನೇ ನಾನು -ಎಂದು ತೋರುತ್ತದೆ ಎಂದು ಭಾವ.

3. ಲೌಕಿಕವ್ಯವಹಾರವು ಹೇಗಾದರೂ ಇರಲಿ. ವೇದೋಪದೇಶವು ಅಪ್ರಮಾಣವಾಗಬಾರದು. ಆದರೆ 'ಅಹಂ ಬ್ರಹ್ಮಾಸ್ಮಿ' (ನಾನು ಬ್ರಹ್ಮವಾಗಿದೇನೆ) ಎಂದು ತಿಳಿದುಕೊಳ್ಳಬೇಕು ಎಂದೇ ಶ್ರುತಿ ಹೇಳುತ್ತಿದೆ.

4. ಒಂದೇ ವಸ್ತುವಿನ ಧರ್ಮವೆಂಬುದಕ್ಕೆ ಸಾಮಾನಾಧಿಕರಣ್ಯವ್ಯಪದೇಶವು ಹೇತುವೆನ್ನಬಾರದು ; ಏಕೆಂದರೆ ನಾನು ಬೆಳ್ಳಗಿರುವೆನು ಎಂಬ ವ್ಯವಹಾರವಿದೆ, ಆದರೂ ಬಿಳುಪು ಎಂಬುದು ದೇಹದ ಧರ್ಮವೇ, ಆತ್ಮನ ಧರ್ಮವಲ್ಲ ಎಂದು ನೀವೂ ಒಪ್ಪುತ್ತೀರಿ.

5. ಶ್ರುತಿಯು ಅಹಂಕಾರವನ್ನು ಬಾಧಿಸುತ್ತದೆ. ಆದ್ದರಿಂದ ಅಹಂಕಾರವು ಅನಾತ್ಮವೆಂದರೆ ಶ್ರುತಿವಿರೋಧವಿಲ್ಲ.

(ಅರ್ಥ)

ಆ ವಾಕ್ಯವು ಆ (ಅಹಂಬುದ್ಧಿಯ) ಬಾಧಕವೆಂಬುದು ಹೇಗೆ ? – ಎಂದರೆ ಹೇಳುತ್ತೇವೆ :

೨೯. 'ಈ ಮೋಟುಮರವೆಂಬುದಿದೆಯಲ್ಲ, ಇದು ಮನುಷ್ಯನು' ಎಂದು ಮನುಷ್ಯಬುದ್ಧಿಯಿಂದ ಸ್ಥಾಣುಬುದ್ಧಿಯು (ಬಾಧಿತವಾಗುವಂತೆ) ಬ್ರಹ್ಮವಾಗಿರುತ್ತೇನೆ ಎಂಬ ಬುದ್ಧಿಯಿಂದ ಅಹಂಬುದ್ಧಿಯು ನಿಶ್ಶೇಷವಾಗಿ ಬಾಧಿತವಾಗುತ್ತದೆ.

(ಮೂಲ)

ಅಹಂಪರಿಚ್ಛೇದವ್ಯಾವೃತ್ತೌ ನ ಕಿಂಚಿದವ್ಯಾವೃತ್ತಂ ದ್ವೈತಜಾತಮ್ ಅವಶಿಷ್ಯತೇ । ದ್ವಿತೀಯಸಂಬನ್ಧಸ್ಯ ತನ್ಮೂಲತ್ವಾತ್ । ಅತ ಆಹ–

**ನಿವೃತ್ತಾಯಾಮಹಂಬುದ್ಧೌ ಮಮಧೀಃ ಪ್ರವಿಲೀಯತೇ ।**
**ಅಹಂಬೀಜಾ ಹಿ ಸಾ ಸಿಧ್ಯೇತ್ ತಮೋಽಭಾವೇ ಕುತಃ ಫಣೀ ॥೩೦॥**

(ಅರ್ಥ)

ಅಹಂಬುದ್ಧಿಯು ತೊಲಗಲು ತೊಲಗದೆ ಇರುವ ದ್ವೈತಜಾತವು ಯಾವದೊಂದೂ ಉಳಿಯುವದಿಲ್ಲ, ಏಕೆಂದರೆ ದ್ವಿತೀಯಸಂಬಂಧಕ್ಕೆ ಅದೇ ಮೂಲ[1]. ಆದ್ದರಿಂದ (ಹೀಗೆಂದು) ಹೇಳುತ್ತಾರೆ :

೩೦. ಅಹಂಬುದ್ಧಿಯು ತೊಲಗಲು ನನ್ನದು ಎಂಬ ಬುದ್ಧಿಯೂ ಹೋಗಿಬಿಡುತ್ತದೆ. ನಾನು ಎಂಬ ಬೀಜದಿಂದಲೇ ಅಲ್ಲವೆ, ಅದು ಉಂಟಾಗುವದು ? ತಮಸ್ಸಿಲ್ಲದಿದ್ದರೆ [2] ಹಾವೆಲ್ಲಿಯದು ?

(ಮೂಲ)

ವಿವಕ್ಷಿತದೃಷ್ಟಾನ್ತಾಂಶಜ್ಞಾಪನಾಯ ದೃಷ್ಟಾನ್ತವ್ಯಾಖ್ಯಾ–

**ತಮೋಽಭಿಭೂತಚಿತ್ತೋ ಹಿ ರಜ್ಜ್ವಾಂ ಪಶ್ಯತಿ ರೋಷಣಮ್ ।**
**ಭ್ರಾನ್ತ್ಯಾ ಭ್ರಾನ್ತ್ಯಾ ವಿನಾ ತಸ್ಮಾನ್ನೋರಗಂ ಸ್ರಜಿ ವೀಕ್ಷತೇ ॥೩೧॥**

---

1. ನಾನು ಎಂಬ ಬುದ್ಧಿಯಿಲ್ಲದೆ ಅದು, ನನ್ನದು ಮುಂತಾದ ದ್ವೈತಬುದ್ಧಿಯಿರುವದಿಲ್ಲ.
2. ಅಜ್ಞಾನವಿಲ್ಲದಿದ್ದರೆ.

(ಅರ್ಥ)

ದೃಷ್ಟಾಂತದಲ್ಲಿ ವಿವಕ್ಷಿತವಾಗಿರುವ ಅಂಶವನ್ನು ತಿಳಿಸುವದಕ್ಕಾಗಿ ದೃಷ್ಟಾಂತವನ್ನು ವಿವರಿಸುತ್ತಾರೆ :

೩೧. ಅಜ್ಞಾನಕ್ಕೆ ವಶವಾಗಿರುವ ಚಿತ್ತವುಳ್ಳವನೇ ಅಲ್ಲವೆ, ಹಗ್ಗದಲ್ಲಿ ಹಾವನ್ನು ಭ್ರಾಂತಿಯಿಂದ ಕಾಣುವನು ? ಆದ್ದರಿಂದ ಭ್ರಾಂತಿಯಿಲ್ಲದೆ ಹಗ್ಗದಲ್ಲಿ ಹಾವನ್ನು ಕಾಣುವದಿಲ್ಲ .

(ಮೂಲ)

ಅನನ್ವಯಾಚ್ಚ ನಾತ್ಮಧರ್ಮೋಽಹಂಕಾರಃ –

ಆತ್ಮನಶ್ಚೇದಹಂ ಧರ್ಮೋ ಯಾಯಾನ್ಮುಕ್ತಿಸುಷುಪ್ತಯೋಃ ।
ಯತೋ ನಾನ್ವೇತಿ ತೇನಾಯಮನ್ಯದೀಯೋ ಭವೇದಹಮ್ ॥೩೨॥

(ಅರ್ಥ)

ಅನುಸರಿಸಿಕೊಂಡು ಬರದೆ ಇರುವದರಿಂದಲೂ ಅಹಂಕಾರವು ಆತ್ಮ ಧರ್ಮವಲ್ಲ :

೩೨. ಅಹಂಕಾರವು ಆತ್ಮನ ಧರ್ಮವಾಗಿದ್ದರೆ ಮುಕ್ತಿಯಲ್ಲಿಯೂ ಸುಷುಪ್ತಿಯಲ್ಲಿಯೂ[1] ಬೆಂಬಿಡಿದು ಬರಬೇಕಾಗುವದು. ಆದರೆ ಅದು ಅನುಸರಿಸಿ ಕೊಂಡು ಬರುವದಿಲ್ಲ ; ಆದ್ದರಿಂದ ಈ ಅಹಂಕಾರವು ಮತ್ತೊಂದರ ಧರ್ಮವೇ[2].

(ಮೂಲ)

ಆತ್ಮಧರ್ಮತ್ವಾಭ್ಯುಪಗಮೇಽಪರಿಹಾರ್ಯದೋಷಪ್ರಸಕ್ತಿಶ್ಚ–

ಯದ್ಯಾತ್ಮಧರ್ಮೋಽಹಂಕಾರೋ ನಿತ್ಯತ್ವಂ ತಸ್ಯ ಬೋಧವತ್ ।
ನಿತ್ಯತ್ವೇ ಮೋಕ್ಷಶಾಸ್ತ್ರಾಣಾಂ ವೈಯರ್ಥ್ಯಂ ಪ್ರಾಪ್ನುಯಾದ್ ಧ್ರುವಮ್ ॥೩೩॥

---

1. ಸುಷುಪ್ತಿಯಲ್ಲಿ ನಾನು, ಇದು - ಎಂಬ ಯಾವ ಬುದ್ಧಿಯೂ ಇರುವದೇ ಇಲ್ಲವೆಂಬುದು ಅನುಭವ. 'ಅಲ್ಲಿ ಏತರಿಂದ ಏನನ್ನು ನೋಡಿಯಾನು ?' (ಬೃ) ಎಂಬ ಶ್ರುತಿಪ್ರಮಾಣದಿಂದ ಮುಕ್ತಿಯಲ್ಲಿಯೂ ಅಹಂಕಾರವಿಲ್ಲವೆಂದು ಸಿದ್ಧವಾಗುತ್ತದೆ. ಇಲ್ಲಿ ಆತ್ಮನ ಅನ್ವಯವಿದ್ದರೂ ಅಹಂಕಾರದ ವ್ಯತಿರೇಕವನ್ನು ತೋರಿಸಿದಂತೆ ಆಯಿತು.

2. ಅಂತಃಕರಣದ ಧರ್ಮವೇ.

(ಅರ್ಥ)

(ಅಹಂಕಾರವು) ಆತ್ಮನ ಧರ್ಮವೆಂದು ಇಟ್ಟುಕೊಂಡರೆ ಪರಿಹರಿಸಿ ಕೊಳ್ಳಲಾರದ ದೋಷವೂ ಉಂಟಾಗುತ್ತದೆ :

೩೩. ಅಹಂಕಾರವು ಆತ್ಮಧರ್ಮವಾಗಿದ್ದರೆ (ಆತ್ಮ )ಚೈತನ್ಯದಂತೆ ಅದೂ ನಿತ್ಯವಾಗಿರಬೇಕಾಗುವದು. (ಅದು) ನಿತ್ಯವಾದರೆ ಮೋಕ್ಷಶಾಸ್ತ್ರಗಳಿಗೆ ಅವಶ್ಯವಾಗಿ ವ್ಯರ್ಥತ್ವವುಂಟಾಗುವದು[1].

(ಮೂಲ)

ಸ್ಯಾತ್ ಪರಿಹಾರಃ ಸ್ವಾಭಾವಿಕಧರ್ಮತ್ವಾಭ್ಯುಪಗಮೇಽಪಿ ಆಮ್ರಾದಿ ಫಲವತ್ ಇತಿ ಚೇತ್ ತನ್ನ –

**ಆಮ್ರಾದೇಃ ಪರಿಣಾಮಿತ್ವಾದ್ಗುಣಹಾನಿರ್ಗುಣಾನ್ತರೈಃ ।**
**ಅವಿಕಾರಿ ತು ತದ್ಬ್ರಹ್ಮ ನ ಹಿ ದ್ರಷ್ಟುರಿತಿ ಶ್ರುತೇಃ ॥೩೪॥**

(ಅರ್ಥ)

(ಅಹಂಕಾರವು) ಸ್ವಾಭಾವಿಕವೆಂದೊಪ್ಪಿದರೂ ಮಾವಿನಕಾಯಿಯೇ ಮುಂತಾದವುಗಳ (ಗುಣ)ದಂತೆ[2] (ಅನಿತ್ಯವಾಗ)ಬಹುದು ಎಂಬ ಪರಿಹಾರ ವಾಗಬಹುದಲ್ಲ !- ಎಂದರೆ ಅದು ಸರಿಯಲ್ಲ :

೩೪. ಮಾವು ಮುಂತಾದದ್ದು ಪರಿಣಾಮಿಯಾಗಿರುವದರಿಂದ ಬೇರೆ ಗುಣಗಳಿಂದ (ಮೊದಲಿದ್ದ ) ಗುಣವು ನಾಶವಾಗಬಹುದು[3]. ಆದರೆ 'ನ ಹಿ ದ್ರುಷ್ಟುಃ' (ನೋಡುವವನ ನೋಟಕ್ಕೆ ವಿಪರಿಲೋಪವಿಲ್ಲ ಬೃ. ೪-೩-೨೩) ಎಂಬ ಶ್ರುತಿ (ಪ್ರಾಮಾಣ್ಯ)ದಿಂದ ಆ ಬ್ರಹ್ಮವು ಅವಿಕಾರಿ(ಯಾಗಿದೆ).

---

1. ಏಕೆಂದರೆ ಅಹಂಕಾರವನ್ನು ಕಳೆಯುವದೇ ಮೋಕ್ಷಶಾಸ್ತ್ರಗಳ ಉದ್ದೇಶ ; ಅಹಂಕಾರವಿರುವವರೆಗೆ ದ್ವೈತವಿದ್ದೇ ಇರುತ್ತದೆಯಾದ್ದರಿಂದ ಮೋಕ್ಷಕ್ಕೆ ಅವಕಾಶವೇ ಇರುವದಿಲ್ಲ.

2. ಮಾವಿನಕಾಯಿಗೆ ಸ್ವಾಭಾವಿಕವಾಗಿರುವ ಹಸರುಬಣ್ಣ, ಹುಳಿಸವಿ- ಮುಂತಾದವು ಹೋಗುವದೂ ಉಂಟು.

3. ಹಳದಿಯಬಣ್ಣ, ಸಿಹಿಸವಿ - ಮುಂತಾದವು ಬಂದು ಮೊದಲಿನ ಗುಣಗಳು ಹೋಗಬಹುದು.

(ಮೂಲ)

**ಅಹಂಕಾರಸ್ಯ ಚ ಆಗಮಾಪಾಯಿತ್ವಾತ್ ತದ್ಧರ್ಮಿಣಶ್ಚ ಅನಿತ್ಯತ್ವಂ ಪ್ರಾಪ್ನೋತಿ –**

**ಆಗಮಾಪಾಯಿನಿಷ್ಠತ್ವಾದನಿತ್ಯತ್ವಮಿಯಾದ್ದೃಶಿಃ ।**
**ಉಪಯನ್ನಪಯನ್ ಧರ್ಮೋ ವಿಕರೋತಿ ಹಿ ಧರ್ಮಿಣಮ್ ।।೩೫।।**

(ಅರ್ಥ)

ಅಹಂಕಾರವು ಆಗಮಪಾಯಿಯಾಗಿರುವದರಿಂದ ಅದರ ಧರ್ಮಿಯಾದ (ಆತ್ಮನು) ಅನಿತ್ಯನೆಂದೂ ಆಗುತ್ತದೆ :

೩೫. ಆಗಮಪಾಯಿ(ಯಾದ ಅಹಂಕಾರಕ್ಕೆ) ಆಧಾರವಾಗಿರುವದರಿಂದ, ದೃಷ್ಟೃ(ವಾದ ಆತ್ಮನು) ಅನಿತ್ಯತ್ವವನ್ನು ಹೊಂದಬೇಕಾಗುವದು. ಏಕೆಂದರೆ ಬಂದೂಹೋಗಿ ಮಾಡುವ ಧರ್ಮವು ಧರ್ಮಿಯನ್ನು ವಿಕಾರಗೊಳಿಸುತ್ತದೆ [1].

(ಮೂಲ)

**ಅಸ್ತ್ವನಿತ್ಯತ್ವಂ ಕಮುಪಾಲಭೇಮಹಿ ? ಪ್ರಮಾಣೋಪಪನ್ನತ್ವಾತ್ ಇತಿ ಚೇತ್ ತನ್ನ –**

**ಸದಾವಿಲುಪ್ತಸಾಕ್ಷಿತ್ವಂ ಸ್ವತಃಸಿದ್ಧಂ ನ ಪಾರ್ಯತೇ ।**
**ಅಪಹ್ನೋತುಂ ಘಟಸ್ಯೇವ ಕುಶಾಗ್ರೀಯಧಿಯಾತ್ಮನಃ ।।೩೬।।**

(ಅರ್ಥ)

ಅನಿತ್ಯತ್ವವೇ ಆಗಲಿ, ಪ್ರಮಾಣದಿಂದ ಉಪಪನ್ನವಾಗಿರುವದರಿಂದ (ಇಲ್ಲಿ) ಯಾರನ್ನು ದೂರೋಣ[2] ? - ಎಂದರೆ ಅದು ಸರಿಯಲ್ಲ :

1. ಬಂದಾಗ ದೊಡ್ಡದಾಗುವದು, ಹೋದಾಗ ಸಣ್ಣದಾಗುವದು- ಹೀಗೆ ವಿಕಾರವಾಗಬೇಕು. ವಿಕಾರವಾದರೆ ಅನಿತ್ಯವಾಗಲೇಬೇಕು.

2. ಅಹಂಪ್ರತ್ಯಯಗಮ್ಯತ್ವವು ಪ್ರತ್ಯಕ್ಷಸಿದ್ಧವಾಗಿರುವದರಿಂದ ಅನಿತ್ಯತ್ವವು ಬಂದರೆ ನಾವೇನು ಮಾಡೋಣ ?- ಎಂದು ಶಂಕೆ. ಇಲ್ಲಿ ಪೂರ್ವಪಕ್ಷಿಯು ತನ್ನ ಸಿದ್ಧಾಂತವನ್ನೇ ಬಿಟ್ಟಿರುತ್ತಾನೆ.

೩೬. ಎಂದಿಗೂ ಲೋಪವಿಲ್ಲದ ಸಾಕ್ಷಿತ್ವವು[1] ಆತ್ಮನಿಗೆ ಸ್ವತಃಸಿದ್ಧವಾಗಿರುವಲ್ಲಿ [2] ಗಡಿಗೆಯನ್ನು ಇಲ್ಲವೆನ್ನುವಂತೆ [3] ಅದನ್ನು ಕುಶಾಗ್ರಬುದ್ಧಿಯಾದ (ನೀನು)[4] ಇಲ್ಲವೆನ್ನುವದು ಆಗಲಾರದು.

(ಮೂಲ)

ಏತಸ್ಮಾಚ್ಚ ಹೇತೋರಹಂಕಾರಸ್ಯ ಅನಾತ್ಮಧರ್ಮತ್ವಮವಸೀಯತಾಮ್ –

**ಪ್ರಮಾಣೈಶ್ಚಾವಗಮ್ಯತ್ವಾದ್ಘಟಾದಿವದಹಂ ದೃಶೇಃ ।**
**ಯತೋ ರಾದ್ಧಿಃ ಪ್ರಮಾಣಾನಾಂ ಸ ಕಥಂ ತೈಃ ಪ್ರಸಿಧ್ಯತಿ ॥೩೭॥**

(ಅರ್ಥ)

ಈ ಕಾರಣದಿಂದಲೂ[5] ಅಹಂಕಾರವು ಅನಾತ್ಮಧರ್ಮವೆಂದು ನಿಶ್ಚಯಿಸಬೇಕು :

೩೭. ಪ್ರಮಾಣಗಳಿಂದ ನಿಶ್ಚಯಿಸತಕ್ಕದ್ದಾದ್ದರಿಂದ ಅಹಂಕಾರವು ಘಟಾದಿಗಳಂತೆ ದೃಷ್ಟೃವಿಗೆ (ವಿಷಯವೇ)[6]. ಯಾವನಿಂದಲೇ ಪ್ರಮಾಣಗಳ

---

1. ಅಹಂಕಾರವ್ಯತಿರಿಕ್ತನಾದ ಸಾಕ್ಷಿಯು ಇಲ್ಲದಿದ್ದರೆ ಅಹಂಕಾರವೇ ಸಿದ್ಧವಾಗುವದಿಲ್ಲ ; ಅಹಂಕಾರದಲ್ಲಿ ವಿಕಾರವಿದ್ದರೂ ಸಾಕ್ಷಿಯು ನಿರ್ವಿಕಾರಿಯಾಗಿ ಅದನ್ನು ನೋಡುತ್ತಲೇ ಇರುತ್ತಾನೆ.

2. ಪ್ರಮೇಯದಂತೆ ಆತ್ಮನು ಅಪ್ರಸಿದ್ಧನಲ್ಲ , ಸ್ವತಃಸಿದ್ಧನು ; ಏಕೆಂದರೆ ಯಾರೂ ತಾನು ಇಲ್ಲವೆನ್ನುವದಕ್ಕಾಗುವದೇ ಇಲ್ಲ .

3. ಗಡಿಗೆಯನ್ನು 'ಈಗ ಇಲ್ಲ' ಎನ್ನುವದಕ್ಕೆ ಬರುತ್ತದೆ.

4. ಕುಶಾಗ್ರಬುದ್ಧಿ ಎಂದದ್ದು ಹಾಸ್ಯಕ್ಕೆ ; ಮಂದಬುದ್ಧಿಯವನು ಎಂದರ್ಥ.

5. ಹಿಂದಿನ ಶ್ಲೋಕದಲ್ಲಿ ಆತ್ಮನು ಸ್ವತಃಸಿದ್ಧನಾದ ಸಾಕ್ಷಿಯು ಎಂದಿತ್ತಷ್ಟೆ ; ಕಾರಣವನ್ನು ತಿಳಿಸಿ ಇಲ್ಲಿ ಅದನ್ನೇ ವಿಶದಗೊಳಿಸಿದೆ.

6. ಅಹಂಪ್ರತ್ಯಯಕ್ಕೆ ವಿಷಯವಾಗಿರುವದರಿಂದ ಪ್ರತ್ಯಕ್ಷದಿಂದ ಸಿದ್ಧ ; ಪ್ರಮಾಣಗಳಿಗೆ ಆಶ್ರಯವಾಗಿದೆ ಎಂದು ಅನುಮಾನದಿಂದಲೂ 'ಅಹಮಸ್ಮೀತ್ಯಗ್ರೇ ವ್ಯಾಹರತ್' (ಬೃ. ೧-೪-೧) ಮುಂತಾದ ಶ್ರುತಿಪ್ರಮಾಣದಿಂದಲೂ ಅದು ಸಿದ್ಧವಾಗತಕ್ಕದ್ದು.

ಸಿದ್ಧಿಯಾಗ(ಬೇಕಾಗಿದೆಯೋ)[1] ಆ (ಆತ್ಮನು) ಅವುಗಳಿಂದ ಹೇಗೆ ಸಿದ್ಧನಾಗುವನು ?

(ಮೂಲ)

ಧರ್ಮಧರ್ಮಿಣೋಶ್ಚೇತರೇತರವಿರುದ್ಧಾತ್ಮಕತ್ವಾದಸಙ್ಗತಿಃ –

**ಧರ್ಮಿಣಶ್ಚ ವಿರುದ್ಧತ್ವಾನ್ನ ದೃಶ್ಯಗುಣಸಙ್ಗತಿಃ ।**
**ಮಾರುತಾನ್ದೋಲಿತಜ್ವಾಲಂ ಶೈತ್ಯಂ ನಾಗ್ನಿಂ ಸಿಸೃಪ್ಸತಿ ॥೩೮॥**

(ಅರ್ಥ)

ಧರ್ಮಧರ್ಮಿಗಳು ಒಂದಕ್ಕೊಂದು ವಿರುದ್ಧಸ್ವಭಾವವಾಗಿರುವದರಿಂದಲೂ[2] (ಒಂದಕ್ಕೊಂದರ) ಸಂಬಂಧ(ವಿರುವಂತಿಲ್ಲ) :

೩೮. ಧರ್ಮಿಯಾದ (ಆತ್ಮನಿಗೆ) ವಿರುದ್ಧವಾಗಿರುವದರಿಂದ ದೃಶ್ಯ (ವಾದ ಅಹಂಕಾರರೂಪ) ಗುಣದ ಸಂಬಂಧವಿರಲಾರದು. ಗಾಳಿಯಿಂದ ಎದ್ದುಕೊಂಡು ನಲಿದಾಡುತ್ತಿರುವ ಉರಿಯುಳ್ಳ ಬೆಂಕಿಯನ್ನು ತಂಪು ಸಮೀಪಿಸಲಾರದು.

(ಮೂಲ)

ತಸ್ಮಾದ್ ವಿಸ್ರಬ್ಧಮ್ ಉಪಗಮ್ಯತಾಮ್ –

**ದ್ರಷ್ಟೃತ್ವಂ ದೃಶ್ಯತಾಚೈವ ನೈಕಸ್ಮಿನ್ನೇಕದಾ ಕ್ವಚಿತ್ ।**
**ದೃಶ್ಯದೃಶ್ಯೋ ನ ಚ ದ್ರಷ್ಟಾ ದ್ರಷ್ಟುರ್ದರ್ಶೀ ದೃಶಿರ್ನ ಚ ॥೩೯॥**

(ಅರ್ಥ)

ಆದ್ದರಿಂದ ವಿಶ್ವಾಸದಿಂದ (ಹೀಗೆಂದು) ಒಪ್ಪಬೇಕು :

೩೯. ಒಂದೇ (ಧರ್ಮಿಯಲ್ಲಿ) ಒಂದೇ ಕಾಲಕ್ಕೆ ದ್ರಷ್ಟೃತ್ವವೂ

---

1. ಇವು ಪ್ರಮಾಣಗಳು, ಪ್ರಮಾಣಸಿದ್ಧತ್ವ ಎಂದು ತಿಳಿಯುವ ಆತ್ಮನು ಅವುಗಳಿಂದ ಪ್ರಮೇಯವನ್ನು ಅರಿಯಬಹುದೇ ಹೊರತು, ಅವುಗಳಿಂದ ತಾನು ಸಿದ್ಧನಾಗಬೇಕಾಗಿರುವದಿಲ್ಲ.

2. ಹೀಗೆ ಸ್ವತಃಸಿದ್ಧತ್ವ, ಪ್ರಮಾಣಸಿದ್ಧತ್ವ, ಚೇತನತ್ವ, ಅಚೇತನತ್ವ - ಎಂಬ ವಿರುದ್ಧ ಸ್ವಭಾವವುಳ್ಳ ಇವೆರಡಕ್ಕೂ ಧರ್ಮಧರ್ಮಿಭಾವವೆಲ್ಲಿಯದು ? ಕತ್ತಲುಬೆಳಕುಗಳಿಗೆ ಧರ್ಮಧರ್ಮಿಭಾವವಿರಲಾರದಷ್ಟೆ ಎಂದರ್ಥ. ಅಧ್ಯಾಸಭಾಷ್ಯದಲ್ಲಿ ಮೊದಲನೆಯ ವಾಕ್ಯದ ಅಭಿಪ್ರಾಯವಿದು.

ದೃಶ್ಯತ್ವವೂ ಎಲ್ಲಿಯೂ ಇರಲಾರದು[1]. ದ್ರಷ್ಟೃವಾದ (ಆತ್ಮನು) ದೃಶ್ಯವಾದ (ಅಹಂಕಾರಕ್ಕೆ) ದೃಶ್ಯವಲ್ಲ[2]; ದ್ರಷ್ಟೃವಾದ (ಆತ್ಮನು) ದ್ರಷ್ಟೃವಾದ (ತನ್ನನ್ನೇ ತಾನೂ) ನೋಡಲಾರನು[3].

(ಮೂಲ)

**ಸರ್ವಸಂವ್ಯವಹಾರಲೋಪಶ್ಚ ಪ್ರಾಪ್ನೋತಿ । ಯಸ್ಮಾತ್ –**

**ದ್ರಷ್ಟಾಪಿ ಯದಿ ದೃಶ್ಯಾಯಾ ಆತ್ಮೀಯಾತ್ ಕರ್ಮತಾಂ ಧಿಯಃ ।**
**ಯೌಗಪದ್ಯಮದೃಶ್ಯತ್ವಂ ವೈಯರ್ಥ್ಯಂ ಚಾಪ್ನುಯಾಚ್ಛ್ರುತಿಃ ॥೪೦॥**

(ಅರ್ಥ)

(ನಿಮ್ಮ ಪಕ್ಷದಲ್ಲಿ) ಎಲ್ಲಾ ವ್ಯವಹಾರವೂ ಲೋಪವಾಗಬೇಕಾಗುವದು. ಏಕೆಂದರೆ :

೪೦. ದ್ರಷ್ಟೃವಾಗಿರುವ ಆತ್ಮನು ಕೂಡ ದೃಶ್ಯವಾದ ಬುದ್ಧಿಗೆ ಕರ್ಮವಾಗುವದಾದರೆ ಯೌಗಪದ್ಯವಾಗುವದು[4]; ದೃಶ್ಯವೇ ಇಲ್ಲವೆಂದಾಗುವದು,[5] ಮತ್ತು ಶ್ರುತಿಯು ವ್ಯರ್ಥತೆಯನ್ನೇ ಹೊಂದುವದು[6].

---

1. ಆದ್ದರಿಂದ ಆತ್ಮನು ಅಹಂಪ್ರತ್ಯಯವಿಷಯನೆಂಬುದು ಸರಿಯಲ್ಲ.

2. ದೃಶ್ಯವು ದ್ರಷ್ಟೃವನ್ನು ನೋಡುವದು ಶಕ್ಯವಲ್ಲ.

3. ಏಕೆಂದರೆ ಆಗ ಕರ್ಮಕರ್ತೃತ್ವವಿರೋಧವಾಗುವದು. 'ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ' ಎಂಬ (ಬೃ. ೩-೪-೨) ಶ್ರುತಿಯು ಹಿಂದಿನ ಅಭಿಪ್ರಾಯಕ್ಕೆ ಪ್ರಮಾಣ ; 'ಯೇನೇದಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾತ್' (ಬೃ. ೨-೪-೧೪) ಎಂಬುದು ಈ ವಾಕ್ಯಕ್ಕೆ ಪ್ರಮಾಣವು. ತಾನೂ ತನ್ನನ್ನು ಅರಿಯದಿರುವ, ಮತ್ತೊಂದೂ ತನ್ನನ್ನು ಅರಿಯದಿರುವ ಆತ್ಮನು ದೃಶ್ಯವೆಂಬುದು ಹಾಸ್ಯಾಸ್ಪದವೆಂದು ಭಾವ. ಅಥವಾ ಈ ಶ್ಲೋಕದ ಕೊನೆಯ ಪಾದವನ್ನು ಹೀಗೂ ಕನ್ನಡಿಸಬಹುದು : ದ್ರಷ್ಟೃವನ್ನು ನೋಡುವ (ಮತ್ತೊಬ್ಬ) ದಷ್ಟೃವೂ ಇಲ್ಲ.

4. ದ್ರಷ್ಟೃವು ದೃಶ್ಯ, ದೃಶ್ಯವೂ ದ್ರಷ್ಟೃ-ಎಂದಾದರೆ ಒಂದೇ ಕಾಲದಲ್ಲಿ ಎರಡೂ ದ್ರಷ್ಟೃವೂ ದೃಶ್ಯವೂ ಆಗಿದೆ ಎಂದಾಗುವದು. ಇದು ಯೌಗಪದ್ಯವೆಂಬ ದೋಷ.

5. ದೃಶ್ಯವೂ ದ್ರಷ್ಟೃವೆಂದೊಪ್ಪಿದರೆ ಎರಡೂ ದ್ರಷ್ಟೃವೇ ಆಗಿರುವದರಿಂದ ಜಗತ್ತಿನಲ್ಲಿ ದೃಶ್ಯವೇ ಇಲ್ಲವೆಂದಾಗುತ್ತದೆ. ''ಇದು'' ಎಂದು ಗೊತ್ತಾಗುವ ದೃಶ್ಯವಿದೆಯಲ್ಲ! ಎನ್ನಬಾರದು; ಏಕೆಂದರೆ ಅದೂ ದ್ರಷ್ಟೃವೇ ಆಗಿರಬೇಕೆಂದು ಅಹಂಕಾರ ರೂಪದೃಶ್ಯದ ಹೋಲಿಕೆಯಿಂದ ಅನುಮಾನಿಸಬಹುದಾಗುತ್ತದೆ.

6. ಅಲುಪ್ತದೃಷ್ಟಿಯುಳ್ಳ ಆತ್ಮನು ದೃಶ್ಯವೆಂಬುದು ಶ್ರುತಿವಿರುದ್ಧ ; ಏಕೆಂದರೆ ಆತ್ಮನ ದೃಷ್ಟಿಯೂ ದೃಶ್ಯವೆಂದೊಪ್ಪಿದರೆ ದೃಷ್ಟಿಗೆ ಲೋಪವನ್ನೇ ಒಪ್ಪಿದಂತೆ ಆಗುವದು.

(ಮೂಲ)

ಕುತಃ ? ಯಸ್ಮಾತ್ –

**ನಾಲುಪ್ತದೃಷ್ಟೇರ್ದೃಶ್ಯತ್ವಂ ದೃಶ್ಯತ್ವೇ ದ್ರಷ್ಟೃತಾ ಕುತಃ ।**
**ಸ್ಯಾಚ್ಚೇದ್ದೃಗೇಕಂ ನಿರ್ದೃಶ್ಯಂ ಜಗದ್ವಾ ಸ್ಯಾದಸಾಕ್ಷಿಕಮ್ ॥೪೧॥**

(ಅರ್ಥ)

ಏಕೆ ? ಎಂದರೆ :[1]

೪೧. ಅಲುಪ್ತದೃಷ್ಟಿಯುಳ್ಳ (ಆತ್ಮನಿಗೆ) ದೃಶ್ಯತ್ವವಿರಲಾರದು ;[2] ದೃಶ್ಯತ್ವವಿದ್ದರೆ ದೃಷ್ಟೃತ್ವವೆಲ್ಲಿಯದು ? (ಆಗ) ಇಂಥ ಒಂದು (ದ್ರಷ್ಟೃವು)[3] ದೃಶ್ಯವಿಲ್ಲದೆಯೇ ಇರುವದೆಂದಾಗುವದು ; ಅಥವಾ ಜಗತ್ತಿಗೆ ಯಾವ ಸಾಕ್ಷಿಯೂ ಇಲ್ಲವಾಗಬೇಕಾಗುವದು .[4]

(ಮೂಲ)

ಉಕ್ತಯುಕ್ತಿಂ ದೃಢೀಕರ್ತುಮ್ ಆಗಮೋದಾಹರಣೋಪನ್ಯಾಸಃ –

**ಆರ್ತಮನ್ಯದ್ದೃಶೇಃ ಸರ್ವಂ ನೇತಿನೇತೀತಿ ಚಾಸಕೃತ್ ।**
**ವದನ್ತೀ ನಿರ್ಗುಣಂ ಬ್ರಹ್ಮ ಕಥಂ ಶ್ರುತಿರುಪೇಕ್ಷ್ಯತೇ ॥೪೨॥**

**ಮಹಾಭೂತಾನ್ಯಹಂಕಾರ ಇತ್ಯೇತತ್ ಕ್ಷೇತ್ರಮುಚ್ಯತೇ ।**
**ನ ದೃಶೇದ್ವೈತಯೋಗೋಽಸ್ತಿ ವಿಶ್ವೇಶ್ವರಮತಾದಪಿ ॥೪೩॥**

---

1. ''ಆತ್ಮನನ್ನು ನೋಡಬೇಕು'' ಎಂಬ ಶ್ರುತಿಯೇ ಆತ್ಮನು ದೃಶ್ಯನಾಗಬಹುದೆಂದು ಹೇಳುತ್ತದೆಯಲ್ಲವೆ ? -ಎಂಬ ಶಂಕೆಗೆ ಪರಿಹಾರವನ್ನು ಹೇಳುತ್ತಾರೆ ಎಂದರ್ಥ.

2. ಏಕೆಂದರೆ ಆಗ ದೃಷ್ಟಿಗೆ ಲೋಪವಾಗುತ್ತದೆ.

3. ದ್ರಷ್ಟೃವೂ ದೃಶ್ಯವೂ ಆದ ಒಂದೇ ದ್ರಷ್ಟೃವಿದೆ ; ಅದಕ್ಕೆ ದೃಶ್ಯವಿಲ್ಲ ಎಂದಾಗುವದು.

4. ದ್ರಷ್ಟೃವೂ ದೃಶ್ಯವೆಂದರೆ ಅದನ್ನು ನೋಡುವವನೇ ಇಲ್ಲವೆಂದಾಗಿ ಯಾವದೂ ಸಿದ್ಧಿಸದೆ ಹೋಗುವದು ಎಂದರ್ಥ.

(ಅರ್ಥ)

ಹಿಂದೆ ಹೇಳಿದ ಯುಕ್ತಿಯನ್ನು ಗಟ್ಟಿಗೊಳಿಸುವದಕ್ಕಾಗಿ ಆಗಮವನ್ನು ಉದಾಹರಿಸುತ್ತಾರೆ :

೪೨-೪೩. ದ್ರಷ್ಟೃ(ವಾದ ಆತ್ಮನಿಗಿಂತ) ಬೇರೆಯಾದದ್ದೆಲ್ಲವೂ ಆರ್ತವು (ಬೃ. ೩-೭-೨೨)[1]. 'ಇದಲ್ಲ, ಇದಲ್ಲ' ಎಂದು (ಬೃ. ೨-೩-೬, ೩-೯-೨೬, ೪-೨-೪, ೪-೫-೧೫)[2]. ಬ್ರಹ್ಮವು ನಿರ್ಗುಣವೆಂದು ಅನೇಕ ವೇಳೆ ಹೇಳುವ ಶ್ರುತಿಯನ್ನು ಉಪೇಕ್ಷಿಸುವದು ಹೇಗೆ ? 'ಮಹಾಭೂತಗಳು, ಅಹಂಕಾರವು.... ಇದು ಕ್ಷೇತ್ರವೆನಿಸುತ್ತದೆ ' (ಗೀ. ೧೩-೫, ೬) ಎಂಬ (ವಚನದಿಂದ) ವಿಶ್ವೇಶ್ವರನಾದ (ಶ್ರೀ ಕೃಷ್ಣನ) ಮತದಲ್ಲಿಯೂ ದ್ರಷ್ಟೃವಾದ (ಆತ್ಮನಿಗೆ) ದ್ವೈತದ ಸಂಬಂಧವಿಲ್ಲ[3].

(ಮೂಲ)

**ಅಧುನಾ ಪ್ರಕೃತಾರ್ಥೋಪಸಂಹಾರಃ –**

**ಏವಮೇತದ್ ಹಿರುಗ್ಜ್ಞೇಯಂ ಮಿಥ್ಯಾಸಿದ್ಧಮನಾತ್ಮಕಮ್ ।**
**ಮೋಹಮೂಲಂ ಸುದುರ್ಬೋಧಂ ದ್ವೈತಂ ಯುಕ್ತಿಭಿರಾತ್ಮನಃ ॥೪೪॥**

(ಅರ್ಥ)

ಈಗ ಪ್ರಕೃತಾರ್ಥವನ್ನು[4] ಉಪಸಂಹಾರಮಾಡುತ್ತಾರೆ :

೪೪. ಈ ರೀತಿಯಲ್ಲಿ ಮಿಥ್ಯಾಸಿದ್ಧವೂ ಅನಾತ್ಮವೂ ಮೋಹಮೂಲಕವೂ

---

1. ಈ ಶ್ರುತಿಯಲ್ಲಿ 'ಇವನಿಗಿಂತ ಬೇರೆ ದ್ರಷ್ಟೃವಿಲ್ಲ' ಎಂದು ಉಪಕ್ರಮಿಸಿ 'ಈ ನಿನ್ನ ಆತ್ಮನೇ ಅಂತರ್ಯಾಮಿಯು, ಅಮೃತನು' ಎಂದಿದೆ ; ಇದಕ್ಕಿಂತ ಮಿಕ್ಕದ್ದೆಲ್ಲ ಆರ್ತವು, ವಿನಾಶಿ- ಎಂದಿದೆ. ಆದ್ದರಿಂದ ಆತ್ಮನಿಗೆ ಮತ್ತೊಂದು ಧರ್ಮವಿಲ್ಲವೆಂದಾಯಿತು.

2. ಈ ವಾಕ್ಯವು ಮತ್ತೆ ಮತ್ತೆ ಉದಾಹೃತವಾಗಿರುವದರಿಂದ ಆತ್ಮನು ನಿರ್ವಿಶೇಷನು, ನಿರ್ಗುಣನು ಎಂಬುದರಲ್ಲಿ ಶ್ರುತಿಯ ತಾತ್ಪರ್ಯವು ಕಾಣುತ್ತದೆ.

3. ಈ ವಾಕ್ಯದಲ್ಲಿ ಅಹಂಕಾರವು ಕ್ಷೇತ್ರವೇ, ಕ್ಷೇತ್ರಜ್ಞನಾದ ಆತ್ಮನ ಧರ್ಮವಲ್ಲ - ಎಂದು ಹೇಳಿದೆ. ಆದ್ದರಿಂದ ಅಹಂಪ್ರತ್ಯಯಗಮ್ಯತಾವಾದವು ಶ್ರುತಿಸ್ಮೃತಿಗಳಿಗೂ ವಿರುದ್ಧ.

4. ಸ್ಥೂಲಸೂಕ್ಷ್ಮದೇಹಗಳ ವಿವೇಕವನ್ನು ಎಂದರ್ಥ.

ಅತ್ಯಂತದುರ್ಬೋಧವೂ ಆಗಿರುವ [1] ಈ ದ್ವೈತವನ್ನು ಯುಕ್ತಿಗಳಿಂದ ಆತ್ಮನಿಂದ ಬೇರ್ಪಡಿಸಿ ತಿಳಿದುಕೊಳ್ಳಬೇಕು.

## ಆತ್ಮನು ಅದ್ವಿತೀಯನು

(ಮೂಲ)

**ಕುತೋ ಮಿಥ್ಯಾಸಿದ್ಧತ್ವಂ ದ್ವೈತಸ್ಯೇತಿ ಚೇತ್ –**

**ನ ಪೃಥಙ್ಞಾತ್ಮನಾ ಸಿದ್ಧಿರಾತ್ಮನೋಽನ್ಯಸ್ಯ ವಸ್ತುನಃ ।**
**ಆತ್ಮವತ್ಕಲ್ಪಿತಸ್ತಸ್ಮಾದಹಂಕಾರಾದಿರಾತ್ಮನಿ ॥೪೫॥**

(ಅರ್ಥ)

ದ್ವೈತವು ಮಿಥ್ಯಾಸಿದ್ಧವೆಂಬುದು ಹೇಗೆ ? ಎಂದರೆ –

೪೫. ಆತ್ಮನಿಗಿಂತ ಬೇರೆಯಾದ ವಸ್ತುವಿಗೆ ಬೇರೆಯಾಗಿ (ಸ್ವತಂತ್ರವಾಗಿಯೇ) ಸಿದ್ಧಿಯಿಲ್ಲ ; ಆತ್ಮನಂತೆ ಆತ್ಮರೂಪದಿಂದಲೂ ಸಿದ್ಧಿಯಿಲ್ಲ [2]. ಆದ್ದರಿಂದ ಅಹಂಕಾರವೇ ಮುಂತಾದ (ದ್ವೈತವು) ಆತ್ಮನಲ್ಲಿ ಕಲ್ಪಿತವಾಗಿರುತ್ತದೆ [3].

---

1. ಇಲ್ಲಿರುವ ವಿಶೇಷಣಗಳು ದ್ವೈತದ ಮಿಥ್ಯಾತ್ವವನ್ನು ತಿಳಿಸುವವದರ ಮೂಲಕ ತ್ವಂಪದಾರ್ಥಕ್ಕೆ ತತ್ಪದಾರ್ಥಭಾವವು ಅವಿರುದ್ಧವೆಂಬುದನ್ನು ತಿಳಿಸುತ್ತವೆ. ಮಿಥ್ಯಾಸಿದ್ಧ ಎಂದರೆ ತೋರಿಕೆಯಿಂದ ಮಾತ್ರವೇ ಸಿದ್ಧ ; ಅನಾತ್ಮಕವೆಂದರೆ ಯಾವ ಸ್ವರೂಪವೂ ನಿಜವಾಗಿಲ್ಲದ್ದು ; ಅದು ತೋರುವದಕ್ಕೆ ಕಾರಣವು ಮೋಹವು ಮಾತ್ರವೇ ಎಂಬುದನ್ನು ಮೋಹಮೂಲ ಎಂಬ ವಿಶೇಷಣವು ತಿಳಿಸುತ್ತದೆ. ಅಜ್ಞಾನದಿಂದಲೇ ಆತ್ಮನಲ್ಲಿ ಅಧ್ಯಸ್ತವಾಗಿದೆ ಎಂದರ್ಥ. ಸುದುರ್ಬೋಧವೆಂದರೆ ತೋರುವ ರೂಪದಿಂದ ಆತ್ಮನೆಂದಾಗಲಿ ಅವನಿಗಿಂತ ಬೇರೆಯೆಂದಾಗಲಿ ನಿರ್ಣಯಿಸಿ ಹೇಳುವದಕ್ಕೆ ಬಾರದ್ದು ಎಂದರ್ಥ. ''ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯಮ್'' ಎಂಬ ಭಾಷ್ಯಕಾರರ ವಚನವು ಇದನ್ನೇ ತಿಳಿಸುವದು.

2. ಆತ್ಮನಂತೆ ನಿತ್ಯಚೈತನ್ಯರೂಪವುಳ್ಳದ್ದಾಗಿ ಸಿದ್ಧವಾಗಿಲ್ಲ.

3. ಆದ್ದರಿಂದ, ಎಂದರೆ ಆತ್ಮನೆಂದಾಗಲಿ ಆತ್ಮನಿಗಿಂತ ಬೇರೆಯಾಗಿರುವ ಸ್ವತಂತ್ರವಸ್ತುವೆಂದಾಗಲಿ ಸಿದ್ಧವಾಗದೆ ಇರುವದರಿಂದ, ಹಗ್ಗದಲ್ಲಿ ಹಾವಿನಂತೆ ಕಲ್ಪಿತವಾಗಿರುತ್ತದೆ ಎಂದರ್ಥ.

(ಮೂಲ)

ತಸ್ಮಾದ್ ಅಜ್ಞಾನವಿಜೃಮ್ಭಿತಮೇತತ್ –

ದೃಶ್ಯಾಃ ಶಬ್ದಾದಯಃ ಕ್ಲಿಪ್ತಾ ದ್ರಷ್ಟೃ ಚ ಬ್ರಹ್ಮ ನಿರ್ಗುಣಮ್ ।
ಅಹಂ ತದುಭಯಂ ಬಿಭ್ರದ್ ಭ್ರಾನ್ತಿಮಾತ್ಮನಿ ಯಚ್ಛತಿ ॥೪೬॥

(ಅರ್ಥ)

ಆದ್ದರಿಂದ ಇದು ಅಜ್ಞಾನದ ಕಾರ್ಯವು :

೪೬. ಶಬ್ದವೇ ಮುಂತಾದವುಗಳು ದೃಶ್ಯವೆಂದೇ ಗೊತ್ತಾಗಿರುವವು. ಬ್ರಹ್ಮವು ದ್ರಷ್ಟೃವು, ನಿರ್ಗುಣವು[1] (ಎಂದೇ ಗೊತ್ತಾಗಿರುವದು). ಅಹಂಕಾರವು ಆ ಎರಡನ್ನೂ ಸೇರಿಸಿ ಧರಿಸಿಕೊಂಡಿರುವದರಿಂದ[2] ಆತ್ಮನಲ್ಲಿ ಭ್ರಾಂತಿಯನ್ನುಂಟು ಮಾಡುತ್ತದೆ[3].

(ಮೂಲ)

ತತ ಏವೇಯಮಭಿನ್ನಸ್ಯಾತ್ಮನೋ ಭೇದಬುದ್ಧಿಃ–

ದೃಗೇಕಾ ಸರ್ವಭೂತೇಷು ಭಾತಿ ದೃಶ್ಯೈರನೇಕವತ್ ।
ಜಲಭಾಜನಭೇದೇನ ಮಯೂಖಸ್ರಗ್ವಿಭೇದವತ್ ॥೪೭॥

(ಅರ್ಥ)

ಇದರಿಂದಲೇ ಈ ಅಭಿನ್ನನಾದ ಆತ್ಮನಲ್ಲಿ ಅನೇಕತ್ವಬುದ್ಧಿಯೂ (ಆಗಿರುತ್ತದೆ) :

೪೭. ಒಂದೇ ಆಗಿರುವ ದೃಗ್ರೂಪ(ನಾದ ಆತ್ಮನು) ದೃಶ್ಯ(ವಾದ ಅಂತಃಕರಣ)ಗಳಿಂದ ಸರ್ವಭೂತಗಳಲ್ಲಿಯೂ ಅನೇಕವಾಗಿರುವಂತೆ - ನೀರಿನ ಪಾತ್ರೆಗಳ ಭೇದದಿಂದ ಸೂರ್ಯಭೇದವು ಹೇಗೋ ಹಾಗೆ - ತೋರುತ್ತಿರುತ್ತಾನೆ.

1. ಧರ್ಮರಹಿತವಾದದ್ದು, ದೃಶ್ಯಸಂಬಂಧವಿಲ್ಲದ್ದು.

2. ಅಹಂಕಾರದಲ್ಲಿ ದೃಶ್ಯತ್ವವೂ ದ್ರಷ್ಟೃತ್ವವೂ ಎರಡೂ ಸೇರಿರುತ್ತವೆ.

3. ಕನ್ನಡಿಯಲ್ಲಿ ಹಸುರುಬಣ್ಣವೂ ಮುಖವೂ ಸೇರಿ ಪ್ರತಿಬಿಂಬಿತವಾಗಿದ್ದರೆ ಮುಖವು ಹಸುರಾಗಿದೆ ಎಂಬ ಭ್ರಾಂತಿಯಾಗುವಂತೆ ಆತ್ಮನಲ್ಲಿಯೂ ಅಹಂಕಾರದಲ್ಲಿಯೂ ಇರುವ ದ್ರಷ್ಟೃದೃಶ್ಯತ್ವಗಳು ಆತ್ಮನೇ ಅಹಂಪ್ರತ್ಯಯಗಮ್ಯನೆಂಬ ಭ್ರಾಂತಿಯನ್ನು ಮಾಡುತ್ತವೆ. ಇದಕ್ಕೆ ದ್ರಷ್ಟೃದೃಶ್ಯವಿವೇಕಾಭಾವವೇ ಕಾರಣ ಎಂದಭಿಪ್ರಾಯ.

(ಮೂಲ)

ಯಥೋಕ್ತಾರ್ಥಸ್ಯ ಪ್ರತಿಪತ್ತಯೇ ದೃಷ್ಟಾನ್ತಃ –

ಮಿತ್ರೋದಾಸೀನಶತ್ರುತ್ವಂ ಯಥೈಕಸ್ಯಾನ್ಯಕಲ್ಪನಾತ್ ।
ಅಭಿನ್ನಸ್ಯ ಚಿತೇಸ್ತದ್ವದ್ಭೇದೋಽನ್ತಃಕರಣಾಶ್ರಯಃ ॥೪೮॥

ಅಪಹಾರೋ ಯಥಾ ಭಾನೋಃ ಸರ್ವತೋ ಜಲಪಾತ್ರಕೈಃ ।
ತತ್ಕ್ರಿಯಾಕೃತಿದೇಶಾಪ್ತಿಸ್ತಥಾ ಬುದ್ಧಿಭಿರಾತ್ಮನಃ ॥೪೯॥

(ಅರ್ಥ)

ಮೇಲೆ ಹೇಳಿದ ವಿಷಯವನ್ನು ತಿಳಿಸುವದಕ್ಕೆ ದೃಷ್ಟಾಂತ(ವನ್ನು ಹೇಳುತ್ತಾರೆ) :

೪೮-೪೯. ಒಬ್ಬನಿಗೇ ಮತ್ತೊಬ್ಬರ ಕಲ್ಪನೆಯಿಂದ ಮಿತ್ರತ್ವ, ಶತ್ರುತ್ವ, ಉದಾಸೀನತ್ವ - ಇವು ಹೇಗೆ (ಆಗುವವೋ), ಅದರಂತೆ ಅಭಿನ್ನನಾಗಿರುವ ಚಿದ್ರೂಪನಾದ ಆತ್ಮನಿಗೆ ಅಂತಃಕರಣವಶದಿಂದ ಭೇದ(ವಾಗಿರುತ್ತದೆ). ಹೇಗೆ ಸೂರ್ಯನಿಗೆ ಎಲ್ಲಾ ಕಡೆಯಲ್ಲಿಯೂ ಇರುವ ನೀರಿನ ಪಾತ್ರೆಗಳಿಂದ (ಸ್ವಭಾವದ) ಅಪಹಾರವಾಗುವದೋ[1], ಅವುಗಳ ಕ್ರಿಯೆ, ಆಕೃತಿ, ಸ್ಥಲ -ಮುಂತಾದವುಗಳು ಬರುವವೋ[2] ಹಾಗೆಯೇ. ಬುದ್ಧಿಗಳಿಂದ ಆತ್ಮನಿಗೆ (ಸ್ವರೂಪದ ಅಪಹಾರವೂ ಭೇದವೂ ಕಾಣಿಸುತ್ತಿರುವದು)[3].

---

1. ಸ್ವಭಾವಕ್ಕೆ ನಿಜವಾಗಿ ಅಪಹಾರವಿಲ್ಲ ; ಏಕೆಂದರೆ ಸೂರ್ಯನು ತನ್ನ ಸ್ವಭಾವದಿಂದ ಇದ್ದೇ ಇರುತ್ತಾನೆ ; ಆದ್ದರಿಂದ ಅಪಹಾರವಾಗಿರುವಂತೆ ಕಾಣುವದೋ ಎಂದರ್ಥ.

2. ಸೂರ್ಯನಿಗೆ ನೀರಿನ ಕ್ರಿಯೆ, ಆಕಾರ, ಸ್ಥಲ – ಇವು ಯಾವುವೂ ಇಲ್ಲ , ಆದರೂ ಇದೆಲ್ಲ ನೀರಿನ ಉಪಾಧಿಯಿಂದ ಅಪಹಾರವಾಗಿರುವಂತೆ ಅಜ್ಞಾನಕಲ್ಪಿತವಾಗಿ ತೋರುತ್ತದೆ.

3. ಆತ್ಮನ ಆಭಾಸವು ಅಂತಃಕರಣದಲ್ಲಿ ತೋರುತ್ತಿದ್ದರೂ ಆತ್ಮನ ಸ್ವರೂಪಕ್ಕೆ ಚ್ಯುತಿಯಿಲ್ಲ ; ಅನೇಕತ್ವವು ಅಂತಃಕರಣಭೇದದಿಂದ ತೋರುತ್ತಿದ್ದರೂ ಆತ್ಮನು ಒಬ್ಬನೇ ಆಗಿರುತ್ತಾನೆ – ಎಂದರ್ಥ.

(ಮೂಲ)

ನ ಚ ವಿರುದ್ಧಧರ್ಮಾಣಾಮ್ ಏಕತ್ರಾನುಪಪತ್ತಿಃ । ಕಿಂ ಕಾರಣಮ್ ?

**ಕಲ್ಪಿತಾನಾಮವಸ್ತುತ್ವಾತ್ ಸ್ಯಾದೇಕತ್ರಾಪಿ ಸಂಭವಃ ।**
**ಕಮನೀಯಾಽಶುಚಿಃ ಸ್ವಾದ್ವಿತ್ಯೇಕಸ್ಯಾಮಿವ ಯೋಷಿತಿ ॥೫೦॥**

(ಅರ್ಥ)

ವಿರುದ್ಧಧರ್ಮಗಳು ಒಂದೇ ಕಡೆಯಲ್ಲಿರಲಾರವು ಎಂಬುದು ಸರಿಯಲ್ಲ[1]. ಯಾವ ಕಾರಣದಿಂದಲೆಂದರೆ –

೫೦. ಕಲ್ಪಿತವಾಗಿರುವ (ಧರ್ಮಗಳು ಪರಮಾರ್ಥ) ವಸ್ತುವಲ್ಲವಾದ್ದರಿಂದ ಒಂದೇ ಕಡೆಯಲ್ಲಿಯೂ ಇರಬಹುದು. ಒಬ್ಬಳೇ ಹೆಂಗಸಿನಲ್ಲಿ ಕಮನೀಯಳು, ಅಶುಚಿ, ಸವಿಯಾಗಿರುವಳು - ಎಂಬ (ಕಲ್ಪನೆಗಳು ಹೇಗಿರಬಹುದೋ) ಹಾಗೆ[2].

(ಮೂಲ)

ನ ಚಾಯಂ ಕ್ರಿಯಾಕಾರಕಫಲಾತ್ಮಕ ಆಭಾಸ ಈಷದಪಿ ಪರಮಾರ್ಥವಸ್ತು ಸ್ಪೃಶತಿ । ತಸ್ಯ ಮೋಹಮಾತ್ರೋಪಾದಾನತ್ವಾತ್ -

**ಅಭೂತಾಭಿನಿವೇಶೇನ ಸ್ವಾತ್ಮಾನಂ ವಞ್ಚಯತ್ಯಯಮ್ ।**
**ಅಸತ್ಯಪಿ ದ್ವಿತೀಯೇಽರ್ಥೇ ಸೋಮಶರ್ಮಪಿತಾ ಯಥಾ ॥೫೧॥**

---

1. ಒಂದೇ ಸಲಕ್ಕೆ ಆತ್ಮನು ದೃಗ್ರೂಪನಾಗಿಯೂ ದೃಶ್ಯರೂಪನಾಗಿಯೂ ತೋರುವದು ಹೇಗೆ ? ಆತ್ಮರು ಅನೇಕರೆಂದು ತೋರುತ್ತಿದ್ದರೂ ಅವರೆಲ್ಲ ಒಬ್ಬನೇ ಆಗಿದ್ದರೆ ಒಬ್ಬರಿಗೊಬ್ಬರು ವಿರುದ್ಧವಾದ ಜ್ಞಾನಾಜ್ಞಾನಸುಖದುಃಖಾದಿಗಳುಳ್ಳವರಾಗಿ ತೋರುತ್ತಿರುವರಲ್ಲ, ಇದು ಹೇಗೆ ? - ಎಂಬುದು ಸರಿಯಲ್ಲ ಎಂದರ್ಥ.

2. ಕಾಮುಕನು ಕಮನೀಯಳಾಗಿರುವಳೆಂಬುದೂ ವಿರಕ್ತನು ಇದು ಅಶುಚಿಯೆಂಬುದೂ ನಾಯಿಯು ಒಳ್ಳೆ ಸವಿಯಾದ ಆಹಾರವೆಂದು ಕಲ್ಪಿಸುವದೂ ಒಂದೇ ಹೆಂಗಸಿನ ಹೆಣದಲ್ಲಿ ಕಂಡುಬರುತ್ತದೆ.

(ಅರ್ಥ)

ಈ ಕ್ರಿಯಾಕಾರಕಫಲರೂಪವಾದ ಹುಸಿತೋರಿಕೆಯು ಪರಮಾರ್ಥ ವಸ್ತು (ವಾದ ಆತ್ಮನನ್ನು ) ಒಂದಿಷ್ಟೂ ಸೋಂಕುವದಿಲ್ಲ. ಏಕೆಂದರೆ ಈ (ತೋರಿಕೆಗೆ) ಮೋಹಮಾತ್ರವೇ ಉಪಾದಾನವಾಗಿದೆ [1].

೫೧. ಇಲ್ಲದಿರುವ (ವಸ್ತು )ವಿನಲ್ಲಿ ಅಭಿಮಾನದಿಂದ, ಎರಡನೆಯ ಪದಾರ್ಥವೇ ಇಲ್ಲವಾದರೂ ಸೋಮಶರ್ಮನ ತಂದೆಯಂತೆ [2] ತನ್ನನ್ನು ತಾನೆ ವಂಚಿಸಿಕೊಳ್ಳುತ್ತಾನೆ.

(ಮೂಲ)

ವಸ್ತುಯಾಥಾತ್ಮ್ಯಾನವಬೋಧಪಟಲಾವನದ್ಧಾಕ್ಷಃ ಸನ್ –

**ಸುಭ್ರೂಃ ಸುನಾಸಾ ಸುಮುಖೀ ಸುನೇತ್ರಾ ಚಾರುಹಾಸಿನೀ ।**
**ಕಲ್ಪನಾಮಾತ್ರಸಂಮೋಹಾದ್ರಾಮೇತ್ಯಾಲಿಙ್ಗತೇಽಶುಚಿಮ್ ॥೫೨॥**

(ಅರ್ಥ)

ವಸ್ತುತತ್ತ್ವವನ್ನು ಅರಿಯದ್ದೆಂಬ ಕಣ್ಣುಪರೆಯಿಂದ ಕಣ್ಣಿಗೆ ಮರೆಯಾಗಿರುವದರಿಂದ :

೫೨. ಒಳ್ಳೆಯ ಹುಬ್ಬುಳ್ಳವಳು, ಒಳ್ಳೆಯ ಮೂಗಿನವಳು, ಒಳ್ಳೆಯ ಮುಖದವಳು, ಒಳ್ಳೆಯ ಕಣ್ಣಿನವಳು, ಚೆನ್ನಾಗಿ ನಗುವವಳು, ಅಭಿರಾಮಳಾಗಿರುವವಳು-ಎಂದು ಕಲ್ಪನೆಯಿಂದಾದ ಮೋಹದಿಂದ ಅಶುಚಿಯಾಗಿರುವವಳನ್ನೇ ಅಪ್ಪಿಕೊಳ್ಳುತ್ತಾನೆ [3].

1. ಕಾರಣವಾಗಿದೆ ಎಂದರ್ಥ. ಅಜ್ಞಾನದಿಂದಲೇ ಅದು ತೋರುತ್ತದೆ, ನಿಜವಾಗಿಲ್ಲ.

2. ಹುಟ್ಟದಿರುವ ಮಗುವಿಗೆ ಸೋಮಶರ್ಮನೆಂಬ ಹೆಸರನ್ನಿಟ್ಟುಕೊಂಡು ಅವನಲ್ಲಿರುವ ಪ್ರೀತಿಯಿಂದ ಮನೋರಥಕಲ್ಪಿತಳಾದ ಹೆಂಡತಿಯನ್ನು ಹೊಡೆಯುವದಕ್ಕೆ ಹೋಗಿ ಭಿಕ್ಷೆಯ ಹಿಟ್ಟಿನ ಗಡಿಗೆಯನ್ನು ಒಡೆದುಕೊಂಡ ಬ್ರಹ್ಮಚಾರಿಯಂತೆ. ಪಂಚತಂತ್ರ ೫-೯ನ್ನು ನೋಡಿ.

3. ಅಜ್ಞಾನದಿಂದ ದೇಹದಲ್ಲಿಲ್ಲದ ಗುಣಗಳನ್ನು ಕಲ್ಪಿಸಿಕೊಂಡು ಮೋಹಪಡುವಂತೆ ಆತ್ಮನಲ್ಲಿ ಕ್ರಿಯಾಕಾರಕಫಲರೂಪವಾದ ಸಂಸಾರವನ್ನು ಕಲ್ಪಿಸಿಕೊಂಡು ಮೋಸಹೋಗುತ್ತಾನೆ ಎಂದರ್ಥ.

(ಮೂಲ)

ಸರ್ವಸ್ಯಾನರ್ಥಜಾತಸ್ಯ ಜಿಹಾಸಿತಸ್ಯ ಮೂಲಮ್ ಅಹಂಕಾರ ಏವ । ತಸ್ಯಾತ್ಮಾನಾತ್ಮೋಪರಾಗಾತ್ । ನ ತು ಪರಮಾರ್ಥತ ಆತ್ಮನೋಽವಿದ್ಯಯಾ ತತ್ಕಾರ್ಯೇಣ ವಾ ಸಂಬನ್ಧೋಽಭೂದ್ ಅಸ್ತಿ ಭವಿಷ್ಯತಿ ವಾ ತಸ್ಯಾಪರಿಲುಪ್ತದೃಷ್ಟಿಸ್ವಾಭಾವ್ಯಾತ್ –

**ದೃಶ್ಯಾನುರಕ್ತಂ ತದ್ದ್ರಷ್ಟೃ ದೃಶ್ಯಂ ದ್ರಷ್ಟ್ರನುರಞ್ಜಿತಮ್ ।**
**ಅಹಂವೃತ್ತ್ಯುಭಯಂ ರಕ್ತಂ ತನ್ನಾಶೇಽದ್ವೈತತಾತ್ಮನಃ ॥೫೩॥**

(ಅರ್ಥ)

ತಪ್ಪಿಸಿಕೊಳ್ಳಬೇಕಾಗಿರುವ ಅನರ್ಥಸಮೂಹಕ್ಕೆಲ್ಲ ಮೂಲವು ಅಹಂಕಾರವು ; ಏಕೆಂದರೆ ಅದು ಆತ್ಮಾನಾತ್ಮ (ಗಳೆರಡಕ್ಕೂ) ಸಂಬದ್ಧವಾಗಿರುತ್ತದೆ[1]. ಆದರೆ ನಿಜವಾಗಿ ಆತ್ಮನಿಗೆ ಅವಿದ್ಯೆಯ ಅಥವಾ ಅದರ ಕಾರ್ಯದ ಸಂಬಂಧವು (ಹಿಂದೆ) ಇರಲೂ ಇಲ್ಲ, (ಈಗ) ಇರುವದೂ ಇಲ್ಲ, (ಮುಂದೆ) ಉಂಟಾಗುವದೂ ಇಲ್ಲ ; ಏಕೆಂದರೆ ಅವನು ಎಂದೆಂದಿಗೂ ನಾಶವಾಗದ (ಚೈತನ್ಯ) ದೃಷ್ಟಿಸ್ವರೂಪನಾಗಿರುತ್ತಾನೆ[2].

೫೩. ಅದು ದೃಶ್ಯಕ್ಕೆ ಸಂಬದ್ಧವಾಗಿ ದ್ರಷ್ಟೃವಾಗಿರುತ್ತದೆ, ದ್ರಷ್ಟೃವಿಗೆ ಸಂಬದ್ಧವಾಗಿ ದೃಶ್ಯವಾಗಿರುತ್ತದೆ[3]. ಅಹಂವೃತ್ತಿಗೆ (ಈ)

---

1. ಅದರ ಸಂಬಂಧದಿಂದಲೇ ಆತ್ಮನಲ್ಲಿ ಅಹಂಪ್ರತ್ಯಯಗಮ್ಯನೆಂದೂ ಅಜ್ಞನೆಂದೂ ಅನೇಕನೆಂದೂ ಸಂಸಾರಿಯೆಂದೂ ಭ್ರಾಂತಿಯು ಉಂಟಾಗುತ್ತದೆ, ೨-೪೬ ನೋಡಿ.

2. ಅಜ್ಞಾನವನ್ನೂ ಬೆಳಗಿ ತೋರಿಸುತ್ತಿರುವ ಕೂಟಸ್ಥನಿತ್ಯಚೈತನ್ಯಸ್ವರೂಪದಲ್ಲಿ ಅಜ್ಞಾನದ ಸಂಬಂಧವಿರುವದಿಲ್ಲ ; ಆದ್ದರಿಂದ ಅಜ್ಞಾನದ ಕಾರ್ಯವಾದ ಸಂಸಾರವೂ ಇರುವಂತಿಲ್ಲ.

3. ಅಹಂಕಾರರೂಪವಾದ ಅಂತಃಕರಣವು ಆತ್ಮಸಂಬಂಧದಿಂದ ದೃಶ್ಯವೂ ಶಬ್ದಾದಿಗಳ ಸಂಬಂಧದಿಂದ ದ್ರಷ್ಟೃವೂ ಆಗಿರುತ್ತದೆ.

ಎರಡೂ ಸಂಬದ್ಧವಾಗಿರುತ್ತದೆ[1]. ಅದು ನಾಶವಾದರೆ ಆತ್ಮನಿಗೆ ಅದ್ವೈತತತ್ವವು (ಸಿದ್ಧವಾಗುತ್ತದೆ)[2].

## ಆತ್ಮನಲ್ಲಿ ಅಹಂಶಬ್ದದ ವೃತ್ತಿ ಹೇಗೆ ?

(ಮೂಲ)

ಇಹ ಕೇಚಿಚ್ಚೋದಯನ್ತಿ । ಯೋಽಯಮ್ ಅನಾತ್ಮತಯಾ ಉತ್ಸಾರಿತೋಽಹಂಕಾರೋ ವಾಕ್ಯಾರ್ಥಪ್ರತಿಪತ್ತಯೇ, ಸೋಽಯಂ ವಿಪರೀತಾರ್ಥಃ ಸಂವೃತ್ತಃ । ಯಸ್ಮಾತ್ 'ಅಹಂ ಬ್ರಹ್ಮಾಸ್ಮಿ' ಇತಿ ಬ್ರಹ್ಮಾಹಂಪದಾರ್ಥಯೋಃ ಸಾಮಾನಾಧಿಕರಣ್ಯಶ್ರವಣಾತ್ ಅನಾತ್ಮಾರ್ಥೇನ ಸಾಮಾನಾಧಿಕರಣ್ಯಂ ಪ್ರಾಪ್ನೋತಿ । ವಕ್ತವ್ಯಾ ವಾ[3] ಪ್ರತ್ಯಗಾತ್ಮನಿ ತಸ್ಯ ವೃತ್ತಿರಿತಿ। ಸೋಽಚ್ಯತೇ ಪ್ರಸಿದ್ಧಲಕ್ಷಣಾಗುಣವೃತ್ತಿಭಿಃ–

ನಾಜ್ಞಾನಿಷಮಿತಿ ಪ್ರಾಹ ಸುಷುಪ್ತಾದುತ್ಥಿತೋಽಪಿ ಹಿ ।
ಅಯೋದಾಹಾದಿವತ್ ತೇನ ಲಕ್ಷಣಂ ಪರಮಾತ್ಮನಃ ॥೫೪॥

ಪ್ರತ್ಯಕ್ತ್ವಾದತಿಸೂಕ್ಷ್ಮತ್ವಾದಾತ್ಮದೃಷ್ಟ್ಯನುಶೀಲನಾತ್ ।
ಅತೋ ವೃತ್ತೀರ್ವಿಹಾಯಾನ್ಯಾ ಹ್ಯಹಂವೃತ್ತ್ಯೋಪಲಕ್ಷ್ಯತೇ ॥೫೫॥

ಆತ್ಮನಾ ಚಾವಿನಾಭಾವಮಥವಾ ವಿಲಯಂ ವ್ರಜೇತ್ ।
ನ ತು ಪಕ್ಷಾನ್ತರಂ ಯಾಯಾದತಶ್ಚಾಹಂಧಿಯೋಚ್ಯತೇ ॥೫೬॥

---

1. ಆದ್ದರಿಂದ ಆತ್ಮನಿಗೆ ದ್ವೈತಸಂಬಂಧವಿರುವಂತೆ ತೋರುತ್ತದೆ ಎಂದರ್ಥ. 'ನಾನು ಇದನ್ನು ಅರಿಯುತ್ತಿದೇನೆ' ಎಂಬಲ್ಲಿ ಅಹಂಸಂಬಂಧವಿಲ್ಲದಿದ್ದರೆ ಆತ್ಮನಿಗೆ ಜ್ಞಾನಕರ್ತೃತ್ವವಿರುವದಕ್ಕೆ ಅವಕಾಶವಿರುತ್ತಿರಲಿಲ್ಲ ; ಏಕೆಂದರೆ ಆತ್ಮನು ಅವಿಕಾರಿ. ಅಹಂಕಾರವು ವಿಕಾರಿಯಾದರೂ ಅದಕ್ಕೆ ಚೈತನ್ಯವಿಲ್ಲದ್ದರಿಂದ ಅದೂ ಜ್ಞಾತೃವಾಗಲಾರದು. ಆದ್ದರಿಂದ ಆತ್ಮಾಹಂಕಾರಸಂಬಂಧವೇ ದ್ವೈತಜ್ಞಾನಕ್ಕೆ ಕಾರಣವೆಂದಾಯಿತು.

2. ಅಹಂಕಾರವು ನಾಶವಾಗುವದೆಂದರೆ ವಿದ್ಯೆಯಿಂದ ಅದು ಮಿಥ್ಯೆಯೆಂಬ ನಿಶ್ಚಯವಾಗುವದು.

3. ''ವಕ್ತವ್ಯಾ ಚ'' ಎಂಬ ಪಾಠಕ್ಕಿಂತ ಇದು ಮೇಲು.

(ಅರ್ಥ)

ಇಲ್ಲಿ ಕೆಲವರು ಆಕ್ಷೇಪಿಸುತ್ತಾರೇನೆಂದರೆ : ವಾಕ್ಯಾರ್ಥಜ್ಞಾನಕ್ಕೆಂದು ಅನ್ವಯವ್ಯತಿರೇಕಗಳಿಂದ ಅಹಂಕಾರವನ್ನು ತಿರಸ್ಕರಿಸಲಾಯಿತಷ್ಟೆ, ಅದು ವಿಪರೀತಪ್ರಯೋಜನವುಳ್ಳದ್ದೇ ಆಯಿತು[1]. ಏಕೆಂದರೆ ಅಹಂ ಬ್ರಹ್ಮಾಸ್ಮಿ 'ನಾನು ಬ್ರಹ್ಮವಾಗಿರುತ್ತೇನೆ' ಎಂದು ಬ್ರಹ್ಮ, ಅಹಂ- ಎಂಬೀ ಪದಾರ್ಥಗಳಿಗೆ ಸಾಮಾನಾಧಿಕರಣ್ಯವನ್ನು ಶ್ರುತಿಯಲ್ಲಿ ಹೇಳಿರುವದರಿಂದ ಅನಾತ್ಮವಾದ ಪದಾರ್ಥದೊಡನೆ (ಆತ್ಮನಿಗೆ) ಸಾಮಾನಾದಿಕರಣ್ಯವು ಬಂದೊದಗಿತು[2] ! ಹಾಗಿಲ್ಲದಿದ್ದರೆ ಪ್ರತ್ಯಗಾತ್ಮನಲ್ಲಿ ಆ (ಅಹಂಶಬ್ದ)ಕ್ಕೆ ವೃತ್ತಿಯನ್ನಾದರೂ ಹೇಳಬೇಕು[3] ಎನ್ನುತ್ತಾರೆ. (ಆದ್ದರಿಂದ) ಪ್ರಸಿದ್ಧಲಕ್ಷಣಾಗೌಣ (ಎಂಬ) ವೃತ್ತಿಗಳಿಂದ ಆ (ಶಬ್ದಪ್ರವೃತ್ತಿ)ಯನ್ನು ಹೇಳುತ್ತೇವೆ :

೫೪-೫೬. ಸುಷುಪ್ತಿಯಿಂದ ಎದ್ದವನು, ('ನನಗೆ ಏನೂ) ತಿಳಿಯಲಿಲ್ಲ' ಎಂದು ಹೇಳುತ್ತಾನಲ್ಲವೆ[4]? ಅದರಿಂದ (ಅಹಂಕಾರವು) 'ಕಬ್ಬಿಣವು ಸುಡುತ್ತದೆ' ಎಂಬುದೇ ಮುಂತಾದದ್ದರಂತೆ[5] ಪರಮಾತ್ಮನಿಗೆ ಲಕ್ಷಣ

---

1. ವಾಕ್ಯಾರ್ಥಜ್ಞಾನಕ್ಕೆ ಬದಲು ಅದಕ್ಕೆ ಅಡ್ಡಿಯೇ ಆಯಿತು.

2. ಅಹಂಶಬ್ದವು ಅನಾತ್ಮವನ್ನೂ ಬ್ರಹ್ಮಶಬ್ದವು ಆತ್ಮನನ್ನೂ ಹೇಳಿದರೆ ಒಂದೇ ವಸ್ತು ಆತ್ಮಾನಾತ್ಮರೂಪವಾಗಿರುವದೆಂದು ಹೇಳಿದಂತೆ ಆಗುವದು. ಇದು ವಿರುದ್ಧವು. ಆದ್ದರಿಂದ ವಾಕ್ಯಾರ್ಥಜ್ಞಾನವೇ ಆಗಲಾರದು.

3. ಹಾಗೆ ಶಬ್ದಕ್ಕೆ ಪ್ರವೃತ್ತಿಯಿದ್ದರೆ ಆತ್ಮನನ್ನೇ ಅಹಂಶಬ್ದದಿಂದ ಹೇಳಿದಂತಾಗುವದರಿಂದ ಯಾವ ವಿರೋಧವೂ ಇರುವದಿಲ್ಲ – ಎಂದರ್ಥ. ನಾನು ಎಂಬುದು ಸಾಮಾನಾಧಿಕರಣ್ಯದಿಂದ ಹೇಳಿದ್ದೆಂದು ೨-೨೮, ೨೯ರಲ್ಲಿ ಹೇಳಿಯೇ ಇದೆ. ಈಗ ಶಬ್ದವು ಲಕ್ಷಣೆಯಿಂದ ಆತ್ಮನನ್ನೂ ಹೇಳುವದೆಂದು ತಿಳಿಸುತ್ತಾರಾದ್ದರಿಂದ ಈ ಆಕ್ಷೇಪಸಮಾಧಾನಗಳು ಅವಶ್ಯವಾಗಿವೆ.

4. ಸುಷುಪ್ತಿಯಲ್ಲಿ ಅಹಂಕಾರವಿಲ್ಲ, ಆದರೂ ''ನನಗೆ ಆಗ ಏನೂ ತಿಳಿಯಲಿಲ್ಲ'' ಎಂದು ತನಿನಿದ್ರೆಯಿಂದ ಎಚ್ಚತ್ತವನು ಪರಾಮರ್ಶಿಸಿ ಹೇಳುತ್ತಾನೆ.

5. ಕಬ್ಬಿಣವು ಸುಡುವುದಿಲ್ಲ, ಕಬ್ಬಿಣದಲ್ಲಿರುವ ಬೆಂಕಿಯೇ ಸುಡುತ್ತದೆ. ಆದರೂ ''ಕಬ್ಬಿಣವು ಸುಡುತ್ತದೆ'' ಎಂದು ವಿಶಿಷ್ಟವಾಚಕವಾದ ಕಬ್ಬಿಣ ಎಂಬ ಶಬ್ದವನ್ನು ಬರಿಯ ಬೆಂಕಿಯೆಂಬರ್ಥದಲ್ಲಿ ಪ್ರಯೋಗಿಸುತ್ತಾರೆ ; ಹೀಗೆಯೇ ಸುಷುಪ್ತಿಯಲ್ಲಿ ಅಹಂಕಾರವಿಲ್ಲದಿದ್ದರೂ 'ನಾನು ಏನೂ ಅರಿಯಲಿಲ್ಲ' ಎಂದು ಬರಿಯ ಆತ್ಮನನ್ನೇ ತಿಳಿಸುವದಕ್ಕೆ ಲಕ್ಷಣೆಯಿಂದ ನಾನು ಎಂಬ ಶಬ್ದವನ್ನು ಪ್ರಯೋಗಿಸುತ್ತಾರೆ.

ವಾಯಿತು[1]. (ಅಹಂಕಾರವು) ಒಳಗಿರುವದರಿಂದಲೂ ಅತಿಸೂಕ್ಷ್ಮವಾಗಿರುವದರಿಂದಲೂ ಆತ್ಮದೃಷ್ಟಿಯನ್ನು ಅನುಸರಿಸುವದರಿಂದಲೂ[2] ಮಿಕ್ಕ ವೃತ್ತಿಗಳನ್ನು ಬಿಟ್ಟು ಅಹಂವೃತ್ತಿಯಿಂದಲೇ (ಆತ್ಮನು) ಉಪಲಕ್ಷಣನಾಗುತ್ತಾನೆ.[3] (ಅಹಂಕಾರವು) ಆತ್ಮನೊಡನೆ ಅವಿನಾಭಾವವನ್ನು ಅಥವಾ ವಿಲಯವನ್ನು ಹೊಂದೀತೇ[4] ಹೊರತು ಬೇರೆ ಪಕ್ಷವನ್ನು ಹೊಂದಲಾರದು[5]; ಆದ್ದರಿಂದಲೂ (ಆತ್ಮನು) ಅಹಂವೃತ್ತಿಯಿಂದ ಉಕ್ತನಾಗುತ್ತಾನೆ.[6]

(ಮೂಲ)

ಕೀದೃಕ್ಪುನರ್ವಸ್ತು ಲಕ್ಷ್ಯಮ್–

ನಾಮಾದಿಭ್ಯಃ ಪರೋ ಭೂಮಾ ನಿಷ್ಕಲೋಽಕಾರಕೋಽಕ್ರಿಯಃ ।
ಸ ಏವಾತ್ಮವತಾಮಾತ್ಮಾ ಸ್ವತಃಸಿದ್ಧಃ ಸ ಏವ ನಃ ॥೫೭॥

---

1. ಆದ್ದರಿಂದ ಅಹಂಶಬ್ದಕ್ಕೆ ಆತ್ಮನಲ್ಲಿ ಲಕ್ಷಣಾವೃತ್ತಿಯಿದೆ ಎಂದಾಯಿತು ಎಂದರ್ಥ.

2. ಅಹಂಕಾರವು ಮಿಕ್ಕ ಪದಾರ್ಥಗಳ ಅಪೇಕ್ಷೆಯಿಂದ ಒಳಗಿದೆ, ಸೂಕ್ಷ್ಮವಾಗಿದೆ, ಆತ್ಮನೆನಿಸಿಕೊಂಡಿದೆ, ಏಕೆಂದರೆ ಆತ್ಮದೃಷ್ಟಿಯಾದ ಚೈತನ್ಯದ ಆಭಾಸದಿಂದೊಡಗೂಡಿದೆ. ಆತ್ಮನು ಒಳಗಿರುವದೇ ಮುಂತಾದವುಗಳಲ್ಲಿ ಅಹಂಕಾರದಂತೆ ಇರುವದರಿಂದ ಗೌಣವೃತ್ತಿಯಿಂದಲೂ ಅಹಂಶಬ್ದಕ್ಕೆ ಆತ್ಮನಲ್ಲಿ ವೃತ್ತಿಯಿದೆ ಎಂದಾಯಿತು.

3. ಅಹಂವೃತ್ತಿ ವಾಚಕವಾದ ಶಬ್ದದಿಂದಲೇ ಆತ್ಮನನ್ನು ಹೇಳುತ್ತಾರೆ ಎಂದರ್ಥ.

4. ಅಹಂಕಾರವು ತೋರಿಕೊಳ್ಳವಾಗಲೆಲ್ಲ ಆತ್ಮನಲ್ಲಿ ಬೆರೆತಿರುತ್ತದೆ ; ತೋರದೆ ಇರುವಾಗ ಆತ್ಮನಲ್ಲಿಯೇ ಲಯವಾಗಿರುತ್ತದೆ.

5. ಮಿಕ್ಕ ಹೊರಗಿನ ಪದಾರ್ಥಗಳಂತೆ 'ಇದು' ಎಂದು ಆತ್ಮನಿಂದ ವಿಂಗಡವಾಗಿ ತೋರಿಕೊಳ್ಳುವದಿಲ್ಲ.

6. ಅಹಂಶಬ್ದವು ಮುಖ್ಯವೃತ್ತಿಯಿಂದ ಆತ್ಮನಲ್ಲಿ ಪ್ರಯುಕ್ತವಾಗುತ್ತದೆ ಎಂದರ್ಥ. ಹೀಗೆ ಲೋಕದಲ್ಲಿ ಗೌಣಲಕ್ಷಣಾವೃತ್ತಿಗಳಿಂದಲೂ ಮುಖ್ಯವೃತ್ತಿಯಿಂದಲೂ ಅಹಂಶಬ್ದವನ್ನು ಆತ್ಮನಲ್ಲಿ ಉಪಯೋಗಿಸುವದುಂಟು ; ಇದನ್ನನುಸರಿಸಿ ಶ್ರುತಿಯು ಅಹಂಶಬ್ದವನ್ನು ಬ್ರಹ್ಮದಲ್ಲಿ ಪ್ರಯೋಗಿಸಬಹುದು. ಆದರೆ ಅಲ್ಲಿ ಲಕ್ಷಣಾವೃತ್ತಿಯಿಂದಲೇ ಪ್ರಯೋಗಿಸಿದೆ ; ಇದು ಎಂಬ ಅಂಶದ ಅಹಂಕಾರವನ್ನು ಬಿಟ್ಟೇ ಪ್ರಯೋಗಿಸಿದೆ. ಉ. ಸಾ.ಪ. ೬-೬ ನೋಡಿ.

(ಅರ್ಥ)

ಇನ್ನು (ಅಹಂಶಬ್ದಕ್ಕೆ) ಲಕ್ಷ್ಯವಾಗಿರುವ ವಸ್ತು ಎಂಥದ್ದು ? ಎಂದರೆ :

೫೭. ನಾಮಾದಿಗಳಿಗಿಂತ ಹೆಚ್ಚಿನದಾದ ಭೂಮನೆಂಬ[1] ನಿಷ್ಕಲನೂ ಅಕಾರಕನೂ ಕ್ರಿಯಾರಹಿತನೂ ಆಗಿರುವ (ಪರಮಾತ್ಮನೇ) ಪ್ರಾಣಿಗಳಿಗೆಲ್ಲ ಆತ್ಮನು,[2] ಅವನೇ ಸ್ವತಃಸಿದ್ಧನೆಂದು ನಮ್ಮ ಮತವು.[3]

## ಆತ್ಮನು ಕೂಟಸ್ಥನಿತ್ಯನು

(ಮೂಲ)

ಅಜ್ಞಾನೋತ್ಥಬುದ್ಧ್ಯಾದಿಕರ್ತೃತ್ವೋಪಾಧಿಮ್ ಆತ್ಮಾನಂ ಪರಿಗೃಹ್ಯೈವ ಅನ್ವಯವ್ಯತಿರೇಕಾಭ್ಯಾಮ್ ಅಹಂ ಸುಖೀ ದುಃಖೀ ಚ ಇತ್ಯಹಂಕಾರಾದೇ ರನಾತ್ಮಧರ್ಮತ್ವಮ್ ಉಕ್ತಮ್ । ಕೇವಲಾತ್ಮಾಭ್ಯುಪಗಮೇ ಅಶಕ್ಯತ್ವಾತ್, ಫಲಾಭಾವಾಚ್ಚ । ಅಥೇದಾನೀಮ್ ಅವಿದ್ಯಾಪರಿಕಲ್ಪಿತಂ ಸಾಕ್ಷಿತ್ವಮ್ ಆಶ್ರಿತ್ಯ ಕರ್ತೃತ್ವಾದ್ಯಶೇಷಪರಿಣಾಮಪ್ರತಿಷೇಧಾಯ ಆಹ–

ಏಷ ಸರ್ವಧಿಯಾಂ ನೃತ್ತಮವಿಲುಪ್ತೈಕದರ್ಶನಃ ।
ವೀಕ್ಷತೇಽವೀಕ್ಷಮಾಣೋಽಪಿ ನಿಮಿಷತ್ ತದ್ಧ್ರುವೋಽಧ್ರುವಮ್ ॥

1. ನಾರದರಿಗೆ ಸನತ್ಕುಮಾರರು ನಾಮದಿಂದ ಹಿಡಿದು ಆಶೆಯವರೆಗಿನ ವಸ್ತುಗಳನ್ನು ಒಂದಕ್ಕಿಂತ ಒಂದು ಹೆಚ್ಚಿನದೆಂದು ಹೇಳಿ ಅವುಗಳನ್ನು ಬ್ರಹ್ಮವೆಂದು ಉಪಾಸನೆಮಾಡಿದವನಿಗೆ ಫಲವನ್ನು ಹೇಳಿ ಕೊನೆಗೆ ಅವೆಲ್ಲಕ್ಕಿಂತಲೂ ಹೆಚ್ಚಿನದಾದ ಪ್ರಾಣವನ್ನು ಬ್ರಹ್ಮವೆಂದು ಉಪಾಸನೆಮಾಡಿದವನು ಅತಿವಾದಿಯಾಗುವನೆಂದರು. ಬಳಿಕ ಪ್ರಾಣಕ್ಕಿಂತ ಹೆಚ್ಚಿನದಾದ ಪರಬ್ರಹ್ಮವನ್ನು ಉಪದೇಶಿಸಿ ಅದು ಸತ್ಯವೆಂದೂ ಅದನ್ನು ಅರಿತವನೇ ನಿಜವಾಗಿ ಅತಿವಾದಿ ಎಂದೂ ತಿಳಿಸಿದರು. ಆ ಬಳಿಕ ಅದೇ ಎಲ್ಲಕ್ಕೂ ಹೆಚ್ಚಿನ ಭೂಮವು ಎಂದು ಹೇಳಿ ಎಲ್ಲಿ ಎರಡನೆಯದನ್ನು ಕಾಣುವದೇ ಇಲ್ಲವೋ ಅದೇ ಭೂಮವು ಎಂದು ಲಕ್ಷಣವನ್ನು ತಿಳಿಸಿದರು. ಈ ಭೂಮವೇ ಸ್ವತಃಸಿದ್ಧನಾದ ನಮ್ಮ ಆತ್ಮನು. ಇವನೇ ಅಹಂ ಬ್ರಹ್ಮಾಸ್ಮಿ ಎಂಬಲ್ಲಿ ಅಹಂಪದಕ್ಕೆ ಲಕ್ಷ್ಯಾರ್ಥವು ಎಂದರ್ಥ.

2. ಕ್ರಿಯಾಕಾರಕಫಲರಹಿತವಾದ ಭೂಮವೇ ಪರಮಾತ್ಮನು.

3. ಭೂಮವೆಂದು ಹೇಳಿದ ಪರಮಾತ್ಮನೇ ಎಲ್ಲರ ಆತ್ಮನು ; ಅವನು ಸ್ವತಃಸಿದ್ಧನಾಗಿರುವದರಿಂದ ಅವನ ಸಿದ್ಧಿಗೆ ಅಹಂಪ್ರತ್ಯಯವಾಗಲಿ ಮತ್ತೊಂದಾಗಲಿ ಬೇಕಿಲ್ಲ.

(ಅರ್ಥ)

ಅಜ್ಞಾನದಿಂದುಂಟಾಗಿರುವ ಬುದ್ಧ್ಯಾದಿಗಳ ಕರ್ತೃತ್ವವೆಂಬ ಉಪಾಧಿಯುಳ್ಳವನೆಂದು ಆತ್ಮನನ್ನು ಸ್ವೀಕರಿಸಿಯೇ[1] ಅನ್ವಯವ್ಯತಿರೇಕಗಳಿಂದ ನಾನು ಸುಖಿಯು, ದುಃಖಿಯು – ಎಂಬ ಅಹಂಕಾರಾದಿಗಳು ಆತ್ಮಧರ್ಮವಲ್ಲವೆಂದು ಹೇಳಿದ್ದಾಯಿತು.[2] ಏಕೆಂದರೆ ಬರಿಯ ಆತ್ಮನನ್ನು ಒಪ್ಪಿದರೆ (ಹಾಗೆಂದು ತಿಳಿಸುವದು) ಅಶಕ್ಯವು ; (ಅದರಿಂದ) ಪ್ರಯೋಜನವೂ ಇರುವುದಿಲ್ಲ.[3] ಇನ್ನು ಈಗ ಅವಿದ್ಯಾಪರಿಕಲ್ಪಿತವಾಗಿರುವ ಸಾಕ್ಷಿತ್ವವನ್ನು[4] ಆಶ್ರಯಿಸಿಕೊಂಡು ಕರ್ತೃತ್ವವೇ ಮುಂತಾದ ಎಲ್ಲಾ ಪರಿಣಾಮಗಳನ್ನೂ ಅಲ್ಲಗಳೆಯುವದಕ್ಕಾಗಿ ಹೇಳುತ್ತಾರೆ[5] :

---

1. ಆತ್ಮನು ದ್ರಷ್ಟೃ (ನೋಡುವವನು), ಅನಾತ್ಮವು ದೃಶ್ಯ (ನೋಡಲ್ಪಡತಕ್ಕದ್ದು ) ಎಂಬ ಸಂಬಂಧವನ್ನು ಇಟ್ಟುಕೊಂಡೇ ಎಂದರ್ಥ.

2. ಸುಖಿತ್ವದುಃಖಿತ್ವದಿಂದ ಕೂಡಿದ ಅಹಂಕಾರ, ಮಮಕಾರ, ಯತ್ನ , ಇಚ್ಛೆ – ಮುಂತಾದ ದೃಶ್ಯಗಳ ವ್ಯತಿರೇಕವಾದರೂ, ಅವು ಇಲ್ಲವಾದರೂ ದ್ರಷ್ಟೃವಿನ ಅನ್ವಯವಿರುತ್ತದೆ – ಎಂದು ದ್ರಷ್ಟನ್ವಯ ದೃಶ್ಯವ್ಯತಿರೇಕ -ಎಂಬ ಯುಕ್ತಿಯಿಂದ ಅಹಂಕಾರಾದಿಗಳು ಆತ್ಮನ ಧರ್ಮವಲ್ಲವೆಂದು ತಿಳಿಸಿದ್ದಾಯಿತು.

3. ಬರಿಯ ಆತ್ಮನು ಅದ್ವಯನಾದ್ದರಿಂದ ಅನ್ವಯವೂ ಇಲ್ಲ, ವ್ಯತಿರೇಕವೂ ಇಲ್ಲ ; ಅಲ್ಲಿ ಅನ್ವಯವ್ಯತಿರೇಕಗಳಿಂದ ಆಗಬೇಕಾದ ಫಲವೂ ಇಲ್ಲ. ಏಕೆಂದರೆ ಅದ್ವೈತವು ಸಿದ್ಧವೇ ಆಗಿಬಿಟ್ಟಿರುತ್ತದೆ.

4. ಬುದ್ಧಿ (ಅಂತಃಕರಣ)ವೇ ಮುಂತಾದವುಗಳು ಅವಿದ್ಯೋತ್ಥ, ಅಜ್ಞಾನದಿಂದ ತೋರತಕ್ಕವು ; ಅವುಗಳ ಕರ್ತೃತ್ವವೆಂದರೆ ಜ್ಞಾತೃತ್ವವೇ ಮುಂತಾದದ್ದು. ಅದನ್ನಿಟ್ಟುಕೊಂಡು ಜ್ಞೇಯವಾದದ್ದು ಅನಾತ್ಮವೆಂದು ಈವರೆಗೆ ತಿಳಿಸಲಾಯಿತು. ಈಗ ಸಾಕ್ಷಿಯಾದ ಆತ್ಮನಿಗೆ ಸಾಕ್ಷ್ಯವಾಗಿರುವ ಜ್ಞಾತೃತ್ವವೇ ಮುಂತಾದದ್ದೆಲ್ಲವೂ ಅನಾತ್ಮವೆಂದು ಹೇಳಲಾಗುವದು. ಸಾಕ್ಷಿತ್ವವೂ ಅವಿದ್ಯಾಕಲ್ಪಿತ, ಏಕೆಂದರೆ ಸಾಕ್ಷ್ಯವು ನಿಜವಾಗಿಲ್ಲ.

5. ಇದು ಸಾಕ್ಷ್ಯನ್ವಯಸಾಕ್ಷ್ಯವ್ಯತಿರೇಕವೆಂಬ ಯುಕ್ತಿ .

೫೮. ಲೋಪವಿಲ್ಲದ ಅದ್ವಯವಾದ ದರ್ಶನ(ಸ್ವರೂಪ)ನಾದ ಈ (ಆತ್ಮನು) ನೋಡುತ್ತಿರುವವನಲ್ಲವಾದರೂ[1] ವ್ಯಾಪಾರವುಳ್ಳ, ನಿತ್ಯನಾಗಿ ಅನಿತ್ಯವಾಗಿರುವ - ಸರ್ವಬುದ್ಧಿಗಳ ನೃತ್ತವನ್ನೂ[2] ನೋಡುತ್ತಿರುವನು.[3]

(ಮೂಲ)

ನನು ಸರ್ವಸಿದ್ಧಾನ್ತಾನಾಮಪಿ ಸ್ವಸ್ವದೃಷ್ಟ್ಯಪೇಕ್ಷಯಾ ಉಪಪನ್ನತ್ವಾತ್, ಇತರೇತರದೃಷ್ಟ್ಯಪೇಕ್ಷಯಾ ದುಃಸ್ಥಿತಸಿದ್ಧಿಕತ್ವಾತ್, ನೈಕತ್ರಾಪಿ ವಿಶ್ವಾಸಂ ಪಶ್ಯಾಮಃ । ನ ಚ ಸರ್ವತಾರ್ಕಿಕೈರದೂಷಿತಂ ಸಮರ್ಥಿತಂ ಸರ್ವತಾರ್ಕಿಕೋಪದ್ರವಾಪಸರ್ಪಣಾಯ ವರ್ತ್ಮ ಸಂಭಾವಯಾಮಃ । ಉಚ್ಯತೇ । ವಿಸ್ರಬ್ಧೈಃ ಸಂಭಾವ್ಯತಾಮ್ । ಅನುಭವಮಾತ್ರಶರಣತ್ವಾತ್ ಸರ್ವತಾರ್ಕಿಕಪ್ರಸ್ಥಾನಾನಾಮ್ । ತದಭಿಧೀಯತೇ –

ಇಮಂ ಪ್ರಾಶ್ನಿಕಮುದ್ದಿಶ್ಯ ತರ್ಕಜ್ವರಭೃಶಾತುರಾಃ ।
ತ್ವಾಚ್ಚಿರಸ್ಕವಚೋಜಾಲೈರ್ಮೋಹಯನ್ತೀತರೇತರಮ್ ॥೫೯॥

(ಅರ್ಥ)

(ಆಕ್ಷೇಪ) :- ಎಲ್ಲಾ ಸಿದ್ಧಾಂತಗಳೂ ತಮ್ಮ ತಮ್ಮ ದೃಷ್ಟಿಯ ಅಪೇಕ್ಷೆಯಿಂದ ಯುಕ್ತವಾಗಿರುವದರಿಂದಲೂ ಒಬ್ಬರೊಬ್ಬರ ದೃಷ್ಟಿಯಿಂದ (ಅವು ಯಾವವೂ) ಸಿದ್ಧಿಯಾಗುವದೆಂಬ ನಿಲುಗಡೆಯಿಲ್ಲದ್ದರಿಂದಲೂ ಯಾವದೊಂದು (ಸಿದ್ಧಾಂತ)ದಲ್ಲಿಯೂ (ನಮಗೆ) ವಿಶ್ವಾಸವು ಕಾಣಿಸುವದಿಲ್ಲವಲ್ಲ ! ಯಾವ ತಾರ್ಕಿಕರೂ ದೋಷವನ್ನು ಹೇಳದಿರುವ (ಎಲ್ಲರೂ) ಸಮರ್ಥನೆಮಾಡುವ ಮಾರ್ಗವೂ ತಾರ್ಕಿಕರೆಲ್ಲರ ಉಪದ್ರವವು ತೊಲಗುವದಕ್ಕೆ (ತಕ್ಕದ್ದಾಗಿ) ನಮಗೆ ಸಂಭಾವಿತವಾಗಿರುವದಿಲ್ಲವಲ್ಲ !

(ಪರಿಹಾರ) :- ವಿಶ್ವಾಸವಿಟ್ಟು (ಇದನ್ನು) ಸಂಭಾವಿತವೆಂದೆಣಿಸಿರಿ. ಏಕೆಂದರೆ ಎಲ್ಲಾ ತಾರ್ಕಿಕಪ್ರಸ್ಥಾನಗಳೂ ಅನುಭವವನ್ನೇ ಶರಣು

1. ನೋಡುವದೆಂಬ ವ್ಯಾಪಾರವೂ ಇಲ್ಲದವನಾದರೂ.

2. ಕುಣಿತವನ್ನೂ , ವೃತ್ತಿಗಳನ್ನೂ ಎಂದರ್ಥ.

3. ನೋಡುವಂತೆ ಚೈತನ್ಯರೂಪದಿಂದ ಬೆಳಗುತ್ತಿರುವನು ಎಂದರ್ಥ. ಇದರ ವಿವರವು ಇನ್ನು ಮುಂದೆ ಬರುವದು.

ಹೊಂದಿರುತ್ತವೆ.[1] ಅದನ್ನು (ಶ್ಲೋಕದಲ್ಲಿ) ಹೇಳಲಾಗುತ್ತದೆ :

೫೯. ಈ ಪ್ರಾಶ್ನಿಕನನ್ನು[2] ಉದ್ದೇಶಿಸಿ ತರ್ಕಜ್ವರದಿಂದ ಹೆಚ್ಚಾಗಿ ನರಳುತ್ತಿರುವವರು ತ್ವಾತ್ (ಎಂಬ ಪ್ರತ್ಯಯವು) ಕೊನೆಯಲ್ಲಿರುವ ವಚನ ಜಾಲಗಳಿಂದ[3] ಒಬ್ಬರನ್ನೊಬ್ಬರು ಮೋಹಗೊಳಿಸುತ್ತಿರುವರು.

(ಮೂಲ)

ಅತ್ರಾಪಿ ಚೋದಯನ್ತಿ । ಅನುಭವಾತ್ಮನೋऽಪಿ ವಿಕ್ರಿಯಾಭ್ಯುಪಗಮೇ ಅನುಭ್ಯುಪಗಮೇऽಪಿ ದೋಷ ಏವ । ಯಸ್ಮಾದಾಹ –

**ವರ್ಷಾತಪಾಭ್ಯಾಂ ಕಿಂ ವ್ಯೋಮ್ನಶ್ಚರ್ಮಣ್ಯೇವ ತಯೋಃ ಫಲಮ್ ।**
**ಚರ್ಮೋಪಮಶ್ಚೇತ್ಸೋऽನಿತ್ಯಃ ಖತುಲ್ಯಶ್ಚೇದಸತ್ಸಮಃ[4] ॥೬೦॥**

**ಬುದ್ಧಿಜನ್ಮನಿ ಪುಂಸಶ್ಚ ವಿಕೃತಿರ್ಯದ್ಯನಿತ್ಯತಾ ।**
**ಅಥಾವಿಕೃತಿರೇವಾಯಂ ಪ್ರಮಾತೇತಿ ನ ಯುಜ್ಯತೇ ॥೬೧॥**

(ಅರ್ಥ)

ಇಲ್ಲಿಯೂ (ಕೆಲವರು) ಆಕ್ಷೇಪಿಸುತ್ತಾರೇನೆಂದರೆ, ಅನುಭವ(ರೂಪನಾದ) ಆತ್ಮನಿಗೂ ವಿಕಾರವನ್ನೊಪ್ಪಿದರೂ ಒಪ್ಪದಿದ್ದರೂ ದೋಷವೇ ಬಂದೊದಗುವದು. ಏಕೆಂದರೆ (ಅವರು) ಹೇಳುವದೇನೆಂದರೆ :

೬೦-೬೧. ಮಳೆಬಿಸಿಲುಗಳಿಂದ ಆಕಾಶಕ್ಕೇನು (ಫಲ) ? ಚರ್ಮದಲ್ಲಿಯೇ ಅವುಗಳ ಫಲವಾಗುತ್ತದೆ. (ಆತ್ಮನು) ಚರ್ಮದಂತಿದ್ದರೆ ಅವನು

---

1. ಆ ಅನುಭವವೇ ನಾವು ಒಪ್ಪಿರುವ ಆತ್ಮನು ಎಂದು ಭಾವ.

2. ಮಧ್ಯಸ್ಥಗಾರನನ್ನು . ವಾದಮಾಡುತ್ತಿರುವ ತಾರ್ಕಿಕರಿಬ್ಬರಿಗೆ ನಡುವೆ ಇದ್ದು ಒಬ್ಬರ ಅಭಿಪ್ರಾಯವನ್ನೊಬ್ಬರಿಗೆ ಕೇಳಿ ತಿಳಿಸುವವನು ಪ್ರಾಶ್ನಿಕನು.

3. ತರ್ಕದಲ್ಲಿ ಧೂಮವತ್ತ್ವಾತ್, ಘಟತ್ವಾತ್ - ಎಂದು ಮುಂತಾಗಿ ಪಂಚಮೀವಿಭಕ್ತಿಯಿಂದ ಹೇತುವನ್ನು ಹೇಳುವ ಮಾತುಗಳು ತುಂಬಿರುವವು. ಆ ಹೇತುವಚನಗಳಿಗೆ ಅನುಭವವೇ ಆಧಾರವಾಗಿರುವದೆಂದು ಇಬ್ಬರೂ ಒಪ್ಪಬೇಕು ಇಲ್ಲದಿದ್ದರೆ ಅದು ಸರಿಯಾದ ಹೇತುವಾಗುವದಿಲ್ಲ.

4. ಈ ಶ್ಲೋಕವನ್ನು ನ್ಯಾಯವಾರ್ತಿಕ (೩-೧-೫)ದಲ್ಲಿ ಬೌದ್ಧರ ಕಾರಿಕೆಯೆಂದು ಉದಾಹರಿಸಿದೆ. ಅಲ್ಲಿ 'ತಯೋರ್ಭಯಮ್' ಎಂದು ಪಾಠ.

ಅನಿತ್ಯ(ನಾಗುವನು).[1] ಆಕಾಶದಂತಿದ್ದರೆ ಅಸತ್ತಿಗೆ ಸಮಾನನಾಗುವನು.[2] ಬುದ್ಧಿಯುಂಟಾಗುವಲ್ಲಿ ಪುರುಷನಿಗೆ ವಿಕಾರವುಂಟಾದರೆ ಅನಿತ್ಯತ್ವವುಂಟಾಗುವದು ; ಹಾಗಿಲ್ಲದೆ ವಿಕಾರವೇ ಇಲ್ಲವೆಂದರೆ ಇವನು ಪ್ರಮಾತೃವೆಂಬುದು ಸರಿಯಾಗುವದಿಲ್ಲ .

(ಮೂಲ)

ಅಸ್ಯ ಪರಿಹಾರಃ –

**ಊರ್ಧ್ವಂ ಗಚ್ಛತಿ ಧೂಮೇ ಖಂ ಭಿದ್ಯತೇ ಸ್ವಿನ್ನ ಭಿದ್ಯತೇ ।**
**ನ ಭಿದ್ಯತೇ ಚೇತ್ ಸ್ಥಾಸ್ನುತ್ವಂ ಭಿದ್ಯತೇ ಚೇದ್ಭಿದಾಸ್ಯ ಕಾ ॥೬೨॥**

(ಅರ್ಥ)

ಇದಕ್ಕೆ ಪರಿಹಾರವೇನೆಂದರೆ :

೬೨. ಹೊಗೆಯು ಮೇಲಕ್ಕೇರುತ್ತಿರುವಲ್ಲಿ ಆಕಾಶದಲ್ಲಿ ಭೇದವಾಗುವದೊ ಇಲ್ಲವೊ ?[3] ಭೇದವಾಗದೆ ಇದ್ದರೆ (ಹೊಗೆಯು) ಇದ್ದಂತಿರುವದೆಂದಾಗುವದು ; ಭೇದವಾದರೆ ಅದರಲ್ಲಾಗುವ ಭೇದವು ಯಾವದು ?[4]

(ಮೂಲ)

ಇತ್ಯೇತತ್ಪ್ರತಿಪತ್ತ್ಯರ್ಥಮಾಹ –

**ಅವಿಕ್ರಿಯಸ್ಯ ಭೋಕ್ತೃತ್ವಂ ಸ್ಯಾದಹಂಬುದ್ಧಿವಿಭ್ರಮಾತ್ ।**
**ನೌಯಾನವಿಭ್ರಮಾದ್ಯದ್ವನ್ನಗೇಷು ಗತಿಕಲ್ಪನಮ್ ॥೬೩॥**

(ಅರ್ಥ)

ಹೀಗೆಂದ (ವಿಷಯವನ್ನು) ತಿಳಿಸುವದಕ್ಕೆ ಹೇಳುತ್ತಾರೆ :

೬೩. ಅವಿಕಾರನಾದ (ಆತ್ಮನಿಗೆ) ಭೋಕ್ತೃತ್ವವು ಅಹಂಬುದ್ಧಿ

---

1. ಚರ್ಮದಂತೆ ಸುಖದುಃಖಗಳಿಂದ ವಿಕಾರವಾಗುತ್ತಿದ್ದರೆ ಅನಿತ್ಯನೆಂದಾಗುವನು.

2. ಆಕಾಶದಂತೆ ವಿಕಾರವಾಗದೆ ಇದ್ದರೆ ಅವನು ಪ್ರಮಾತೃವೇ ಅಲ್ಲವೆಂದಾಗುವದು. ಈ ಶ್ಲೋಕದ ಅರ್ಥವನ್ನೇ ಮುಂದಿನ ಶ್ಲೋಕದಲ್ಲಿ ಸ್ಪಷ್ಟಪಡಿಸಿದೆ.

3. ಎರಡು ಪಾಲಾಗುತ್ತದೆಯೊ ಇಲ್ಲವೊ ?

4. ಆಕಾಶದಲ್ಲಿ ಯಾವ ಭೇದವೂ ಕಾಣುವದಿಲ್ಲವಲ್ಲ ! ಹೊಗೆಯಿರುವ ಸ್ಥಳದಲ್ಲಿಯೂ ಆಕಾಶವಿರಲೇಬೇಕಲ್ಲವೆ ?- ಎಂದು ಪ್ರಶ್ನೆ .

(ಕೃತ) ಭ್ರಾಂತಿಯಿಂದ - ಹಡಗಿನ ಸಂಚಾರದ ಭ್ರಾಂತಿಯಿಂದ ಮರಗಳಲ್ಲಿ ಗಮನವನ್ನು ಕಲ್ಪಿಸುವಂತೆ - ಆಗಬಹುದು.[1]

(ಮೂಲ)

**ಯಥೋಕ್ತಾರ್ಥಾವಿಷ್ಕರಣಾಯ ದೃಷ್ಟಾನ್ತಾನ್ತರೋಪಾದಾನಮ್ –**

**ಯಥಾ ಜಾತ್ಯಮಣೇಃ ಶುಭ್ರಾ ಜ್ವಲನ್ತೀ ನಿಶ್ಚಲಾ ಶಿಖಾ ।**
**ಸಂನಿಧ್ಯಸಂನಿಧಾನೇಷು ಘಟಾದೀನಾಮವಿಕ್ರಿಯಾ ॥೬೪॥**

(ಅರ್ಥ)

ಮೇಲೆ ಹೇಳಿದ ಅರ್ಥವನ್ನು ಸ್ಪಷ್ಟಪಡಿಸುವದಕ್ಕಾಗಿ ಮತ್ತೊಂದು ದೃಷ್ಟಾಂತವನ್ನು ತೆಗೆದುಕೊಳ್ಳುತ್ತಾರೆ :

೬೪. ಹೇಗೆ ಜಾತಿಯ ರತ್ನದ ಶಿಖೆಯು ಗಡಿಗೆಯೇ ಮುಂತಾದವು ಸಮೀಪದಲ್ಲಿದ್ದರೂ ಇಲ್ಲದಿದ್ದರೂ ವಿಕಾರವಿಲ್ಲದೆ ಶುಭ್ರವಾಗಿ ಥಳಗುಟ್ಟುತ್ತಾ ನಿಶ್ಚಲವಾಗಿರುವದೋ [2] –

(ಮೂಲ)

**ಅಯಮತ್ರಾಂಶೋ ವಿವಕ್ಷಿತ ಇತಿ ಜ್ಞಾಪನಾಯಾಹ –**

**ಯದವಸ್ಥಾ ವ್ಯನಕ್ತೀತಿ ತದವಸ್ಥೈವ ಸಾ ಪುನಃ ।**
**ಭಣ್ಯತೇ ನ ವ್ಯನಕ್ತೀತಿ ಘಟಾದೀನಾಮಸಂನಿಧೌ ॥೬೫॥**

(ಅರ್ಥ)

ಇಲ್ಲಿ ಈ ಅಂಶವು ವಿವಕ್ಷಿತವಾಗಿದೆ ಎಂಬುದನ್ನು[3] ತಿಳಿಸುವದಕ್ಕಾಗಿ ಹೇಳುತ್ತಾರೆ :

1. ಉಪ. ಸಾ. ೫-೩ ನೋಡಿ.

2. ಕಶ್ಮಲಪದಾರ್ಥಗಳನ್ನು ಬೆಳಗುವದರಿಂದ ತಾನು ಮಲಿನವಾಗುವದಿಲ್ಲ ; ಪ್ರಕಾಶವಿಲ್ಲದ ವಸ್ತುಗಳನ್ನು ಬೆಳಗುವದರಿಂದ ತಾನು ಬೆಳಕಿಲ್ಲದ್ದಾಗುವದಿಲ್ಲ ; ಚಂಚಲವಾದ ವಿಷಯಗಳನ್ನು ಬೆಳಗುವದರಿಂದ ತಾನು ಅಲುಗಾಡುವದಿಲ್ಲ - ಹೀಗಿರುವದೋ ಎಂದರ್ಥ.

3. ಯಾವ ಅಂಶದಲ್ಲಿ ಎರಡಕ್ಕೂ ಹೋಲಿಕೆಯಿದೆ ಎಂಬುದನ್ನು.

೬೫. ಯಾವ ಅವಸ್ಥೆಯಲ್ಲಿದ್ದು 'ತೋರಿಸುತ್ತದೆ' (ಎಂದು ಹೇಳುವರೋ) ಘಟಾದಿಗಳು ಹತ್ತಿರದಲ್ಲಿಲ್ಲದಾಗ ಅದೇ ಅವಸ್ಥೆಯಲ್ಲಿದ್ದು 'ತೋರಿಸುವದಿಲ್ಲ' ಎನ್ನಿಸಿಕೊಳ್ಳುತ್ತದೆ.

ತತ್ರ ಚ–

**ಸರ್ವಧೀವ್ಯಞ್ಜಕಸ್ತದ್ವತ್ ಪರಮಾತ್ಮಾ ಪ್ರದೀಪಕಃ ।**
**ಸಂನಿಧ್ಯಸಂನಿಧಾನೇಷು ಧೀವೃತ್ತೀನಾಮವಿಕ್ರಿಯಃ ॥೬೬॥**

**ನ ಪ್ರಕಾಶಕ್ರಿಯಾ ಕಾಚಿದಸ್ಯ ಸ್ವಾತ್ಮನಿ ವಿದ್ಯತೇ ।**
**ಉಪಚಾರಾತ್ ಕ್ರಿಯಾ ಸಾಸ್ಯ ಯಃ ಪ್ರಕಾಶ್ಯಸ್ಯ ಸಂನಿಧಿಃ ॥೬೭॥**

(ಅರ್ಥ)

ಅಲ್ಲಿಯೂ[1] :

೬೬-೬೭. ಇದರಂತೆಯೇ ಪರಮಾತ್ಮನು ಬುದ್ಧಿವೃತ್ತಿಗಳ ಹತ್ತಿರವಿರಲಿ, ಹತ್ತಿರವಿಲ್ಲದಿರಲಿ, ಯಾವ ವಿಕಾರವೂ ಇಲ್ಲದೆ ಎಲ್ಲಾ ಬುದ್ಧಿಗಳನ್ನೂ[2] ತೋರಿಸುವ ದೀಪವಾಗಿರುತ್ತಾನೆ. ಇವನಿಗೆ ತನ್ನ ಸ್ವರೂಪದಲ್ಲಿ ಬೆಳಗುವದೆಂಬ ಕ್ರಿಯೆಯು ಯಾವದೂ ಇರುವದಿಲ್ಲ. ಪ್ರಕಾಶ್ಯವಾದ ವಸ್ತುವಿನ ಸಂನಿಧಿಯಿರುವದಲ್ಲ, ಅದೇ ಉಪಚಾರದಿಂದ ಇವನ ಕ್ರಿಯೆಯಾಗಿರುವದು.[3]

(ಮೂಲ)

ಮೈವಂ ಶಙ್ಕಿಷ್ಠಾಃ ಸಾಂಖ್ಯರಾದ್ಧಾನ್ತೋಽಯಮಿತಿ । ಯತಃ–

**ಯಥಾ ವಿಶುದ್ಧ ಆಕಾಶೇ ಸಹಸೈವಾಭ್ರಮಣ್ಡಲಮ್ ।**
**ಭೂತ್ವಾ ವಿಲೀಯತೇ ತದ್ವದಾತ್ಮನೀಹಾಖಿಲಂ ಜಗತ್ ॥೬೮॥**

---

1. ದಾರ್ಷ್ಟಾಂತಿಕದಲ್ಲಿಯೂ.

2. ಒಬ್ಬನ ಬುದ್ಧಿವೃತ್ತಿಗಳಿಗೆ ಮಾತ್ರವೇ ಅಲ್ಲ, ಎಲ್ಲರ ಬುದ್ಧಿವೃತ್ತಿಗಳಿಗೂ ಇವನು ಸಾಕ್ಷಿ. ಉಪ. ಸಾ. ೭-೨ ನೋಡಿ.

3. ರತ್ನವು ಬೆಳಗಿ ತೋರಿಸುವಾಗಲೂ ತೋರಿಸದಿರುವಾಗಲೂ ಒಂದೇ ಆಗಿರುವಂತೆ ಆತ್ಮನೂ ಒಂದೇ ರೂಪದಿಂದಿರುತ್ತಾನೆ. ಪ್ರಕಾಶ್ಯವಾದ ಬುದ್ಧಿವೃತ್ತಿಗಳು ಎದುರಿಗಿದ್ದರೆ 'ಅರಿಯುತ್ತಾನೆ' ಎಂಬ ಔಪಚಾರಿಕಪ್ರಯೋಗವಾಗುತ್ತದೆ.

(ಅರ್ಥ)

ಇದು ಸಾಂಖ್ಯರ ಸಿದ್ಧಾಂತವೆಂದಿಂತು ಶಂಕಿಸಬೇಡ. ಏಕೆಂದರೆ :

೬೮. ಹೇಗೆ ವಿಶುದ್ಧವಾದ ಆಕಾಶದಲ್ಲಿ ತಟ್ಟನೆ ಮೇಘಗಳ ಮಂಡಲವು ತೋರಿಕೊಂಡು ಅಡಗುತ್ತದೆಯೋ ಇಲ್ಲಿ ಹಾಗೆಯೇ ಆತ್ಮನಲ್ಲಿಯೂ ಜಗತ್ತೆಲ್ಲವೂ ತೋರಿಕೊಂಡು ಅಡಗುತ್ತಿರುವದು.[1]

(ಮೂಲ)

**ತಸ್ಮಾದೇಷ ಕೂಟಸ್ಥೋ ನ ದ್ವೈತಂ ಮನಾಗಪಿ ಸ್ಪೃಶತಿ । ಯತಃ –**

**ಶಬ್ದಾದ್ಯಾಕಾರನಿರ್ಭಾಸಾಃ ಕ್ಷಣಪ್ರಧ್ವಂಸಿನೀರ್ದೃಶಾ ।**
**ನಿತ್ಯೋಽಕ್ರಮದೃಗಾತ್ಮೈಕೋ ವ್ಯಾಪ್ನೋತೀವ ಧಿಯೋಽನಿಶಮ್ ॥೬೯॥**

(ಅರ್ಥ)

ಆದ್ದರಿಂದ ಈ ಕೂಟಸ್ಥ (ನಾದ ಆತ್ಮನು) ದ್ವೈತವನ್ನು ಒಂದಿಷ್ಟೂ ಸೋಂಕುವದಿಲ್ಲ. ಏಕೆಂದರೆ :

೬೯. ಶಬ್ದವೇ ಮುಂತಾದವುಗಳ ಆಕಾರದಿಂದ ತೋರುತ್ತಿರುವ ಕ್ಷಣಕ್ಕೆ ನಾಶವಾಗುವ ಬುದ್ಧಿಗಳನ್ನು ನಿತ್ಯನೂ ಕ್ರಮವಿಲ್ಲದೆ (ಒಮ್ಮೆಗೇ) ನೋಡುತ್ತಿರುವವನೂ ಆಗಿರುವ ಆತ್ಮನು ತಾನೊಬ್ಬನೇ ಯಾವಾಗಲೂ ವ್ಯಾಪಿಸಿಕೊಂಡಿರುವಂತೆ[2] ಇರುವನು.

(ಮೂಲ)

**ಏವಂ ಚ ಸತಿ ಬುದ್ಧೇಃ ಪರಿಣಾಮಿತ್ವಂ ಯುಕ್ತಮ್ –**

---

1. ಮೋಡಗಳ ಸೃಷ್ಟಿಸ್ಥಿತಿಲಯಗಳಾದರೂ ಆಕಾಶವು ಇದ್ದಂತೆಯೇ ಇರುವದು. ಇದರಂತೆ ಆತ್ಮನಲ್ಲಿ ಬುದ್ಧ್ಯಾದಿದ್ವೈತವು ತೋರಿ ಅಡಗಿದರೂ ಆತ್ಮನು ಹಾಗೆಯೇ ಇರುವನು. ಆತ್ಮನೇ ಎಲ್ಲಾ ಜಗತ್ತೂ ಆಗಿರುವನೆಂದು ವೇದಾಂತಿಗಳ ಮತವು, ಸಾಂಖ್ಯರು ಇದನ್ನೊಪ್ಪುವದಿಲ್ಲ.

2. ಶಬ್ದಾದಿರೂಪದಿಂದ ಪರಿಣತವಾಗಿಯೇ ಬುದ್ಧಿಗಳು ಆತ್ಮನ ಆಭಾಸವುಳ್ಳವಾಗಿಯೇ ಶಬ್ದಾದಿಗಳನ್ನು ತೋರಿಸುವವು ; ಬುದ್ಧಿವೃತ್ತಿಗಳು ಕ್ಷಣಕ್ಕೆ ಬದಲಾಯಿಸುತ್ತಿರುವವು, ಎರಡು ವೃತ್ತಿಗಳು ಒಂದೇ ಕಾಲದಲ್ಲಿರುವದಿಲ್ಲ. ಆತ್ಮನು ವೃತ್ತಿಗಳನ್ನು ವ್ಯಾಪಿಸಿಕೊಂಡಿರುವಂತೆ ತೋರಿದರೂ ಅವುಗಳ ಆಕಾರವಾಗಿ ಪರಿಣಮಿಸಿರುವದಿಲ್ಲ ; ಇದ್ದಂತೆಯೇ ಇರುತ್ತಾನೆ. ಆದ್ದರಿಂದ ಅವನಿಗೆ ಅವುಗಳ ಸ್ಪರ್ಶವಿಲ್ಲ.

**ಅತೀತಾನಾಗತೇಹತ್ಯಾನ್ ಯುಗಪತ್ ಸರ್ವಗೋಚರಾನ್ ।**
**ವೇತ್ತ್ಯಾತ್ಮವನ್ನ ಧೀರ್ಯಸ್ಮಾತ್ ತೇನೇಯಂ ಪರಿಣಾಮಿನೀ ॥೭೦॥**

(ಅರ್ಥ)

ಹೀಗಾದ ಪಕ್ಷದಲ್ಲಿ ಬುದ್ಧಿಯೇ ಪರಿಣಾಮಿ ಎಂಬುದು ಯುಕ್ತವೂ ;[1]

೭೦. ಹಿಂದೆ ಆಗಿಹೋಗಿರುವ, ಮುಂದೆ ಬರುವ, ಈಗ ಇರುವ ಎಲ್ಲಾ ವಿಷಯಗಳನ್ನೂ ಆತ್ಮನಂತೆ[2] ಬುದ್ಧಿಯು ಅರಿಯಲಾರದು.[3] ಆದ್ದರಿಂದ ಇದು ಪರಿಣಾಮಿ(ಯಾಗಿರುತ್ತದೆ).

(ಮೂಲ)

ತತಶ್ಚೈತತ್ ಸಿದ್ಧಮ್ –

**ಅಪಶ್ಯನ್ ಪಶ್ಯತೀಂ ಬುದ್ಧಿಮಶೃಣ್ವನ್ ಶೃಣ್ವತೀಂ ತಥಾ ।**
**ನಿರ್ಯತ್ನೋಽವಿಕ್ರಿಯೋಽನಿಚ್ಛನ್ನಿಚ್ಛನ್ತೀಂ ಚಾಪ್ಯಲುಪ್ತದೃಕ್ ॥೭೧॥**

**ದ್ವಿಷನ್ತೀಮದ್ವಿಷನ್ನಾತ್ಮಾ ಕುಪ್ಯನ್ತೀಂ ಚಾಪ್ಯಕೋಪನಃ ।**
**ನಿರ್ದುಃಖೋ ದುಃಖಿನೀಂ ಚೈವ ನಿಃಸುಖಃ ಸುಖಿನೀಮಪಿ ॥೭೨॥**

**ಅಮುಹ್ಯಮಾನೋ ಮುಹ್ಯನ್ತೀಂ ಕಲ್ಪಯನ್ತೀಮಕಲ್ಪಯನ್ ।**
**ಸ್ಮರನ್ತೀಮಸ್ಮರಂಶ್ಚೈವ ಶಯಾನಾಮಸ್ವಪನ್ ಮುಹುಃ ॥೭೩॥**

**ಸರ್ವಾಕಾರಾಂ ನಿರಾಕಾರಃ ಸ್ವಾರ್ಥೋಽಸ್ವಾರ್ಥಾಂ ನಿರಿಙ್ಗನಃ ।**
**ನಿಸ್ತ್ರಿಕಾಲಸ್ತ್ರಿಕಾಲಸ್ಥಾಂ ಕೂಟಸ್ಥಃ ಕ್ಷಣಭಙ್ಗುರಾಮ್ ॥೭೪॥**

---

1. ಆತ್ಮನಿಗೆ ಯಾವ ದ್ವೈತಸಂಪರ್ಕವೂ ಇಲ್ಲದ್ದರಿಂದ ದ್ವೈತಸಂಬಂಧವಿರುವ ಬುದ್ಧಿಯೇ ಪರಿಣಾಮವಾಗತಕ್ಕದ್ದು ಎಂಬುದು ಯುಕ್ತ ಎಂದರ್ಥ. ವೇದಾಂತ ದರ್ಶನದಲ್ಲಿ ಬುದ್ಧಿಯೇ ಪ್ರಮಾತೃ, ಕರ್ತೃ, ಭೋಕ್ತೃ - ಎಂದು ತಾತ್ಪರ್ಯದಿಂದ ಹೇಳಿಲ್ಲ ; ಆತ್ಮನು ಕೂಟಸ್ಥನಿತ್ಯನೆಂದು ತಿಳಿಸುವದಕ್ಕಾಗಿ ಅದೆಲ್ಲವನ್ನೂ ಬುದ್ಧಿಯಲ್ಲಿ ಆರೋಪಿಸಿರುತ್ತದೆ. ನಿಜವಾಗಿ ಬುದ್ಧಿಯು ಅಚೇತನ, ಕಲ್ಪಿತ ; ಆದ್ದರಿಂದ ಅದಕ್ಕೆ ಕರ್ತೃತ್ವವು ಹೊಂದುವದೇ ಇಲ್ಲ. ಆದರೂ ಸಾಂಖ್ಯಪ್ರಕ್ರಿಯೆಯನ್ನನುಸರಿಸಿ ಬುದ್ಧಿಯೇ ಪರಿಣಾಮಿ ಎಂದು ಈ ಗ್ರಂಥಭಾಗದಲ್ಲಿ ಒತ್ತಿ ಹೇಳಿದೆ.

2. ಆತ್ಮನು ಕಾಲಕ್ಕೂ ಸಾಕ್ಷಿಯಾದ್ದರಿಂದ ಎಲ್ಲವನ್ನೂ ಒಮ್ಮೆಗೇ ಅರಿಯುವಂತೆ.

3. ಒಂದನ್ನೇ ಒಂದು ಸಲಕ್ಕೆ ಅರಿಯುತ್ತದೆ.

**ನಿರಪೇಕ್ಷಶ್ಚ ಸಾಪೇಕ್ಷಾಂ ಪರಾಚೀಂ ಪ್ರತ್ಯಗದ್ವಯಃ ।**
**ಸಾವಧಿಂ ನಿರ್ಗತೇಯತ್ತಃ ಸರ್ವದೇಹೇಷು ಪಶ್ಯತಿ ॥೭೫॥**

(ಅರ್ಥ)

ಇದರಿಂದ ಇದೂ[1] ಸಿದ್ಧವಾಯಿತು :

೭೧-೭೫. (ತಾನು) ನೋಡದೆ[2] ನೋಡುತ್ತಿರುವ[3] ಬುದ್ಧಿಯನ್ನು ಮತ್ತು (ತಾನು) ಕೇಳದವನಾಗಿ ಕೇಳುತ್ತಿರುವ (ಬುದ್ಧಿಯನ್ನು) ಯತ್ನ ರಹಿತನೂ ಅವಿಕ್ರಿಯನೂ ಆಗಿ (ಯತ್ನವನ್ನು ಮಾಡುವ), ವಿಕ್ರಿಯೆಯುಳ್ಳ (ಬುದ್ಧಿಯನ್ನು), ಇಚ್ಛಿಸದವನಾಗಿ ಇಚ್ಛಿಸುತ್ತಿರುವ (ಬುದ್ಧಿಯನ್ನು), ಲೋಪ ವಿಲ್ಲದ ದೃಷ್ಟಿಯವನಾಗಿ (ಆಗಾಗ್ಗೆ) ಲೋಪವಾಗುತ್ತಲೇ ಇರುವ ದೃಷ್ಟಿಯ (ಬುದ್ಧಿಯನ್ನು), ದ್ವೇಷಿಸದವನಾಗಿ ದ್ವೇಷಿಸುತ್ತಿರುವ (ಬುದ್ಧಿಯನ್ನು), ಕೋಪಿಸದವನಾಗಿ ಕೋಪಿಸುತ್ತಿರುವ[4] (ಬುದ್ಧಿಯನ್ನು) (ತಾನು) ದುಃಖ ರಹಿತನಾಗಿದ್ದು ದುಃಖಿಯಾಗಿರುವ (ಬುದ್ಧಿಯನ್ನು), ಸುಖರಹಿತನಾಗಿದ್ದು ಸುಖಿಯಾಗಿರುವ (ಬುದ್ಧಿಯನ್ನು), ಮೋಹವಿಲ್ಲದವನಾಗಿ ಮೋಹಗೊಳ್ಳುತ್ತಿರುವ (ಬುದ್ಧಿಯನ್ನು[5]), ಕಲ್ಪಿಸದವನಾಗಿ ಕಲ್ಪಿಸುತ್ತಿರುವ[6] (ಬುದ್ಧಿಯನ್ನು), ಸ್ಮರಿಸದವನಾಗಿ ಸ್ಮರಿಸುತ್ತಿರುವ (ಬುದ್ಧಿಯನ್ನು), ನಿದ್ರಿಸದವನಾಗಿ[7] ಮತ್ತೆ ಮತ್ತೆ ನಿದ್ರಿಸುವ (ಬುದ್ದಿಯನ್ನು) ಯಾವ ಆಕಾರವೂ

---

1. ಹಿಂದಿನ ಶ್ಲೋಕದಲ್ಲಿ ಬುದ್ಧಿಯು ಪರಿಣಾಮಿ ಎಂದು ಹೇಳಿತ್ತು ; ಈಗ ಆತ್ಮನು ಕೂಟಸ್ಥನೆಂಬುದೂ ಇದರಿಂದಲೇ ಸಿದ್ಧವಾಗುತ್ತದೆ ಎಂದು ಹೇಳಿದೆ.

2. ನೋಡದೆ, ಕೇಳದೆ - ಮುಂತಾದವುಗಳಿಗೆ ದರ್ಶನಾದಿವಿಕಾರವಿಲ್ಲದವನಾಗಿ ಎಂದರ್ಥ. 'ದೃಷ್ಟೇರ್ದ್ರಷ್ಟಾ' (ಬೃ. ೩-೪-೨) ಎಂಬ ಶ್ರುತಿಗೆ ಇದೇ ಅರ್ಥ.

3. ಬುದ್ಧಿಯೇ (ಅಂತಃಕರಣವೇ) ಆಯಾ ಇಂದ್ರಿಯಗಳ ವ್ಯಾಪಾರವನ್ನು ಮಾಡಿ ಚಕ್ಷುರಾದಿನಾಮಗಳನ್ನು ಪಡೆಯುತ್ತದೆ.

4. ದುಃಖವೂ ದುಃಖಹೇತುವೂ ಬಂದೊದಗಿದಾಗ ಆಗುವ ವೃತ್ತಿಯು ದ್ವೇಷವು ; ಕಾಮಕ್ಕೆ ಅಡ್ಡಿಯಾದರೆ ಆಗುವ ವೃತ್ತಿಯು ಕೋಪವು.

5. ಮೋಹವೆಂದರೆ ಅವಿವೇಕದಿಂದಾದ ಭ್ರಮವು.

6. ಕಲ್ಪನೆ ಎಂದರೆ ಸಂಕಲ್ಪವಿಕಲ್ಪಾದಿಗಳು.

7. ಸ್ಮರಣೆಯವರಗೆ ಹೇಳಿರುವ ವೃತ್ತಿಗಳು ಎಲ್ಲಾ ವೃತ್ತಿಗಳಿಗೂ ಉಪಲಕ್ಷಣ ; ಸುಪ್ತಿ ಎಂಬ ನಿದ್ರೆಯು ವೃತ್ತ್ಯಭಾವ.

ಇಲ್ಲದವನಾಗಿ ಎಲ್ಲಾ ಆಕಾರವನ್ನೂ ತಳೆಯುವ[1] (ಬುದ್ಧಿಯನ್ನು) ಸ್ವಾರ್ಥನಾಗಿ ಅಸ್ವಾರ್ಥವಾಗಿರುವ[2] (ಬುದ್ಧಿಯನ್ನು), ಯಾವ ವ್ಯಾಪಾರವೂ ಇಲ್ಲದವನಾಗಿ (ವ್ಯಾಪಾರಶೀಲವಾದ ಬುದ್ಧಿಯನ್ನು), ನಿಸ್ತ್ರಿಕಾಲವಾಗಿ ತ್ರಿಕಾಲದಲ್ಲಿರುವ (ಬುದ್ಧಿಯನ್ನು)[3] ಕೂಟಸ್ಥನಾಗಿ ಕ್ಷಣಭಂಗುರವಾದ[4] (ಬುದ್ಧಿಯನ್ನು), ನಿರಪೇಕ್ಷನಾಗಿ[5] ಸಾಪೇಕ್ಷವಾಗಿರುವ (ಬುದ್ಧಿಯನ್ನು), ಪ್ರತ್ಯಗ್ರೂಪನಾಗಿ[6] ಪರಾಗ್ರೂಪವಾಗಿರುವ (ಬುದ್ಧಿಯನ್ನು), ಅದ್ವಯನಾಗಿ (ಸದ್ವಯವಾದ ಬುದ್ಧಿಯನ್ನು), ಯಾವ ಪರಿಚ್ಛೇದವೂ ಇಲ್ಲದವನಾಗಿ ಸಾವಧಿಯಾಗಿರುವ (ಬುದ್ಧಿಯನ್ನು) ಎಲ್ಲಾ ದೇಹಗಳಲ್ಲೂ ಕಾಣುತ್ತಿರುವನು.[7]

(ಮೂಲ)

ಏತಸ್ಮಾಚ್ಚ ಕಾರಣಾತ್ ಅಯಮರ್ಥೋ ವ್ಯವಸೀಯತಾಮ್–

**ದುಃಖೀ ಯದಿ ಭವೇದಾತ್ಮಾ ಕಃ ಸಾಕ್ಷೀ ದುಃಖಿನೋ ಭವೇತ್ ।**
**ದುಃಖಿನಃ ಸಾಕ್ಷಿತಾಽಯುಕ್ತಾ ಸಾಕ್ಷಿಣೋ ದುಃಖಿತಾ ತಥಾ ॥೭೬॥**

(ಅರ್ಥ)

ಈ ಕಾರಣದಿಂದಲೂ ಈ ಅರ್ಥವನ್ನು ನಿಶ್ಚಯಿಸಬಹುದು :

೭೬. ಆತ್ಮನು ದುಃಖಿಯಾದರೆ ದುಃಖಿಗೆ ಸಾಕ್ಷಿ ಯಾರು ? ದುಃಖಿಗೆ ಸಾಕ್ಷಿತ್ವವು ಹೊಂದುವದಿಲ್ಲ ; ಸಾಕ್ಷಿಗೆ ದುಃಖಿತ್ವವೂ ಹಾಗೆಯೇ ಹೊಂದದು.

---

1. ಆಯಾ ವಿಷಯದ ಆಕಾರವನ್ನು ತಳೆದೇ ಬುದ್ಧಿಯು ಅರಿಯುವದು.

2. ಬುದ್ಧಿಯು ಶುಕ್ತಿರಜತಾದಿಗಳಂತೆ ಅಸ್ವಾರ್ಥ, ಮತ್ತೊಂದನ್ನವಲಂಬಿಸಿರತಕ್ಕದ್ದು ; ಆತ್ಮನು ಸ್ವಾರ್ಥ.

3. ಬುದ್ಧಿಯು ತ್ರೈಕಾಲ್ಯವೃತ್ತಿ ; ಆತ್ಮನು ಕಾಲಾತೀತ, ಕಾಲಕ್ಕೂ ಸಾಕ್ಷಿ.

4. ಕೂಟದಂತೆ, ಅಡಿಗಲ್ಲಿನಂತೆ, ಒಂದೇ ರೂಪದಿಂದ ನಿತ್ಯನಾಗಿರುವವನು ಆತ್ಮನು, ಕ್ಷಣಪರಿಣಾಮಿಯು ಬುದ್ಧಿಯು.

5. ಮತ್ತೊಂದರ ಹಂಗಿಲ್ಲದೆ ಅದ್ವಿತೀಯನಾಗಿರಬಲ್ಲವನು.

6. ಸರ್ವಾಂತರನಾಗಿ.

7. ಇದ್ದಂತಿದ್ದು ಬೆಳಗುವದರಿಂದ ಕಾಣುವಂತಿರುವನು.

(ಮೂಲ)

ಪೂರ್ವಸ್ಯೈವ ವ್ಯಾಖ್ಯಾನಾರ್ಥಮಾಹ–

ನರ್ತೇ ಸ್ಯಾದ್ವಿಕ್ರಿಯಾಂ ದುಃಖೀ ಸಾಕ್ಷಿತಾ ಕಾ ವಿಕಾರಿಣಃ ।
ಧೀವಿಕ್ರಿಯಾಸಹಸ್ರಾಣಾಂ ಸಾಕ್ಷ್ಯತೋಽಹಮವಿಕ್ರಿಯಃ ॥೭೭॥

(ಅರ್ಥ)

ಹಿಂದಿನ (ಶ್ಲೋಕವನ್ನೇ) ವ್ಯಾಖ್ಯಾನಮಾಡುವದಕ್ಕೆ (ಹೀಗೆ) ಹೇಳುತ್ತಾರೆ :

೭೭. ವಿಕಾರವಿಲ್ಲದೆ ದುಃಖಿಯಾಗಲಾರನು.[1] ವಿಕಾರಿಗೆ ಸಾಕ್ಷಿತ್ವವೆಂದರೇನು ?[2] ಆದ್ದರಿಂದ ಬುದ್ಧಿಯ ವಿಕಾರಸಹಸ್ರಗಳಿಗೂ ಸಾಕ್ಷಿಯಾಗಿರುವ ನಾನು ಅವಿಕಾರನೇ.

(ಮೂಲ)

ಏವಂ ಸರ್ವಸ್ಮಿನ್ ವ್ಯಭಿಚಾರಿಣಿ ಆತ್ಮವಸ್ತ್ವೇವ ಅವ್ಯಭಿಚಾರಿ ಇತ್ಯನುಭವತೋ ವ್ಯವಸ್ಥಾಪನಾಯಾಹ–

ಪ್ರಮಾಣತನ್ನಿಭೇಷ್ವಸ್ಯಾ ನೋಚ್ಛಿತ್ತಿರ್ಮಮ ಸಂವಿದಃ ।
ಮತ್ತೋಽನ್ಯದ್ರೂಪಮಾಭಾತಿ ಯತ್ ತತ್ ಸ್ಯಾತ್ ಕ್ಷಣಭಙ್ಗಿ ಹಿ ॥೭೮॥

ಉತ್ಪತ್ತಿಸ್ಥಿತಿಭಙ್ಗೇಷು ಕುಮ್ಭಸ್ಯ ವಿಯತೋ ಯಥಾ ।
ನೋತ್ಪತ್ತಿ ಸ್ಥಿತಿನಾಶಾಃ ಸ್ಯುರ್ಬುದ್ಧೇರೇವಂ ಮಮಾಪಿ ಚ ॥೭೯॥

(ಅರ್ಥ)

ಹೀಗೆ ಎಲ್ಲವೂ ಬೇರ್ಪಡುತ್ತಿರುವಲ್ಲಿ[3] ಆತ್ಮವಸ್ತು (ವೊಂದೇ) ಬೇರ್ಪಡದೆ ಇರುವದೆಂದು ಅನುಭವದಿಂದ ಗೊತ್ತುಪಡಿಸುವದಕ್ಕಾಗಿ ಹೇಳುತ್ತಾರೆ :

---

1. ಏಕೆಂದರೆ ದುಃಖಿಯೆಂದರೇ ದುಃಖವೆಂಬ ವಿಕಾರಕ್ಕೆ ಆಶ್ರಯನಾಗಿರುವದು.

2. ಸಾಕ್ಷ್ಯವು ವಿಕಾರವಾಗುತ್ತಿರಲು ತಾನು ಹಾಗೇ ಇದ್ದು ನೋಡಿದರೆ ಸಾಕ್ಷಿಯೆನಿಸುತ್ತದೆ ; ಆಗಲೇ ತಾನೂ ವಿಕಾರವನ್ನು ಹೊಂದುತ್ತಿದ್ದರೆ ಸಾಕ್ಷ್ಯದ ವಿಕಾರಗಳನ್ನು ಹೇಗೆ ನೋಡೀತು ?

3. ತನ್ನ ಸ್ವರೂಪವನ್ನು ಮಾರ್ಪಡಿಸುತ್ತಿರಲು.

೭೮-೭೯. ಪ್ರಮಾಣ, ಆ (ಪ್ರಮಾಣದ) ಆಭಾಸ[1] - ಇವುಗಳು (ನಾಶವಾದರೂ) ನನ್ನ ಅರಿವಿಗೆ ನಾಶವಿಲ್ಲ. ನನಗಿಂತ ಬೇರೆಯಾಗಿ ಯಾವ ರೂಪವು ತೋರುತ್ತಿರುವದೋ ಅದು ಕ್ಷಣಭಂಗುರವೇ ಆಗಿರುತ್ತದೆಯಷ್ಟೆ.[2] ಗಡಿಗೆಯ ಉತ್ಪತ್ತಿ, ಸ್ಥಿತಿ, ನಾಶ- ಇವುಗಳು ಆದರೆ ಆಕಾಶಕ್ಕೆ ಹೇಗೆ ಉತ್ಪತ್ತಿ, ಸ್ಥಿತಿ, ನಾಶ - ಇವುಗಳು ಆಗಲಾರವೋ ಹಾಗೆಯೇ ಬುದ್ಧಿಯ (ಉತ್ಪತ್ತಿಸ್ಥಿತಿ ನಾಶಗಳಾದರೂ) ನನಗೂ (ಉತ್ಪತ್ತಿಸ್ಥಿನಾಶಗಳು ಆಗಲಾರವು).

(ಮೂಲ)

**ಸುಖದುಃಖತತ್ಸಂಬನ್ಧಾನಾಂ ಚ ಪ್ರತ್ಯಕ್ಷತ್ವಾತ್ ನ ಶ್ರದ್ಧಾಮಾತ್ರಗ್ರಾಹ್ಯ ಮೇತತ್ –**

**ಸುಖದುಃಖಾದಿಸಂಬದ್ಧಾಂ ಯಥಾ ದಣ್ಡೇನ ದಣ್ಡಿನಮ್ ।**
**ರಾಧಕೋ ವೀಕ್ಷತೇ ಬುದ್ಧಿಂ ಸಾಕ್ಷೀ ತದ್ವದಸಂಹತಃ ॥೮೦॥**

(ಅರ್ಥ)

ಸುಖದುಃಖಗಳೂ ಅವುಗಳ ಸಂಬಂಧವೂ ಪ್ರತ್ಯಕ್ಷವಾಗಿರುವದರಿಂದ ಇದು ಬರಿಯ ಶ್ರದ್ಧೆಯಿಂದ ತಿಳಿಯತಕ್ಕದ್ದಲ್ಲ.

೮೦. ಆರಾಧಕನಾದವನು ದಂಡದಿಂದೊಡಗೂಡಿದ (ಸಂನ್ಯಾಸಿ)ಯನ್ನು ಹೇಗೆ ನೋಡುತ್ತಾನೋ[3] ಅದರಂತೆ ಸಾಕ್ಷಿಯು ಸುಖದುಃಖಾದಿಗಳಿಗೆ ಸಂಬದ್ಧವಾಗಿರುವ ಬುದ್ಧಿಯನ್ನು[4] ಸಂಹತನಾಗದೆಯೇ[5] ನೋಡುತ್ತಿರುತ್ತಾನೆ.

(ಮೂಲ)

**ಏತಸ್ಮಾಚ್ಚ ಹೇತೋರ್ಧಿಯಃ ಪರಿಣಾಮಿತ್ವಂ ಯುಕ್ತಮ್ –**

---

1. ಪ್ರಮಾಣ, ಪ್ರಮಾಣಾಭಾಸ, ಪ್ರಮಾಣಾಭಾವ – ಎಂದು ಅಭಾವವನ್ನೂ ಸೇರಿಸಿಕೊಂಡು ಅರ್ಥಮಾಡಬೇಕು. ಬೃ.ವಾ. ೨-೪-೧೪ನ್ನು ನೋಡಿ.

2. ವಿಕಾರಿಯೇ ಆಗಿರುವದಷ್ಟೆ ಎಂದರ್ಥ.

3. ದಂಡವಿಶಿಷ್ಟದಂಡಿಯನ್ನು ತನಗಿಂತ ಬೇರೆಯಾಗಿರುವನೆಂದು ತಟಸ್ಥನಾಗಿ ನೋಡುವನೋ ಎಂದರ್ಥ.

4. ಬುದ್ಧಿಯನ್ನೂ ಅದಕ್ಕೆ ಸೇರಿಕೊಂಡಿರುವ ಸುಖಾದಿಗಳನ್ನೂ ಎಂದರ್ಥ.

5. ಬುದ್ಧಿಯಂತೆ ಮತ್ತೊಂದರೊಡನೆ ಸೇರಿಕೊಂಡು ಮತ್ತೊಂದಕ್ಕಾಗಿ ವ್ಯಾಪಾರಮಾಡದೆಯೇ.

**ಯೇನೈವಾಸ್ಯಾ ಭವೇದ್ಯೋಗಃ ಸುಖಕುಮ್ಭಾದಿನಾ ಧಿಯಃ ।**
**ತಂ ವಿದನ್ತೀ ತದೈವಾನ್ಯಂ ವೇತ್ತಿ ನಾತೋ ವಿಕಾರಿಣೀ ॥೮೧॥**

(ಅರ್ಥ)

ಈ ಕಾರಣದಿಂದಲೂ ಬುದ್ಧಿಯು ಪರಿಣಾಮಿಯೆಂಬುದು ಯುಕ್ತವು :

೮೧. ಈ ಬುದ್ಧಿಗೆ ಯಾವ ಸುಖ, ಗಡಿಗೆ ಮುಂತಾದದ್ದರೊಡನೆ ಸಂಬಂಧವಾಗುವದೋ, ಅದನ್ನು ಅರಿಯುವಾಗ ಆಗಲೇ ಮತ್ತೊಂದನ್ನು (ಅದು) ಅರಿಯಲಾರದು. (ಆದ್ದರಿಂದ ಇದು) ವಿಕಾರಿಯು.[1]

(ಮೂಲ)

ಅಸ್ಯಾಶ್ಚ ಕ್ಷಣಭಙ್ಗುರತ್ವೇ ಸ್ವಯಮೇವಾತ್ಮಾ ಸಾಕ್ಷೀ । ನ ಹಿ ಕೂಟಸ್ಥಾವಬೋಧಮನ್ತರೇಣ ಬುದ್ಧೇರೇವಾವಿರ್ಭಾವತಿರೋಭಾವಾದಿಸಿದ್ಧಿರಸ್ತಿ –

**ಪರಿಣಾಮಿಧಿಯಾಂ ವೃತ್ತಂ ನಿತ್ಯಾಕ್ರಮದೃಗಾತ್ಮನಾ ।**
**ಷಡ್ಭಾವವಿಕ್ರಿಯಾಮೇತಿ ವ್ಯಾಪ್ತಂ ಖೇನಾಙ್ಕುರೋ ಯಥಾ ॥೮೨॥**

(ಅರ್ಥ)

ಇದು ಕ್ಷಣಭಂಗುರವೆಂಬುದಕ್ಕೆ ಆತ್ಮನು ತಾನೇ ಸಾಕ್ಷಿಯಾಗಿರುತ್ತಾನೆ.[2] ಏಕೆಂದರೆ ಕೂಟಸ್ಥವಾಗಿರುವ ಚೈತನ್ಯವಿಲ್ಲದೆ ಬುದ್ಧಿಗೇ ತೋರಿಕೊಳ್ಳುವದು, ಮರೆಯಾಗುವದು – ಮುಂತಾದವುಗಳ ಸಿದ್ಧಿಯಾಗಲಾರದಷ್ಟೆ ?[3]

೮೨. ಪರಿಣಮಿಸುತ್ತಿರುವ ಬುದ್ಧಿಗಳ ಸ್ವರೂಪವು ನಿತ್ಯನಾಗಿ ಅಕ್ರಮದೃಷ್ಟಿಸ್ವರೂಪನಾದ[4] ಆತ್ಮನಿಂದ ವ್ಯಾಪ್ತವಾಗಿಯೇ, ಆಕಾಶದಿಂದ

1. ಒಂದೊಂದನ್ನು ಅರಿಯುವಾಗಲೂ ಮತ್ತೊಂದನ್ನು ಅರಿಯುವ ರೂಪವನ್ನು ಬಿಟ್ಟು ಈ ವಸ್ತುವಿನ ಆಕಾರವನ್ನು ಹೊಂದಬೇಕಾಗಿರುವದರಿಂದ ವಿಕಾರಿಯೇ.

2. ಆತ್ಮನೇ ಪ್ರಮಾಣವು ; ಯುಕ್ತಿಯಲ್ಲದೆ ಆತ್ಮಾನುಭವರೂಪಪ್ರಮಾಣವೂ ಇದೆ ಎಂದರ್ಥ.

3. ತಾನು ತನ್ನ ವಿಕಾರವನ್ನು ಕಾಣಲಾರದು, ಅದನ್ನು ಕಾಣುವ ಮತ್ತೊಂದು ವಿಕಾರಿಯನ್ನೊಪ್ಪಿದರೆ ಅನವಸ್ಥಾದೋಷವುಂಟಾಗುವದು. ಆದ್ದರಿಂದ ಉಳಿದಿರುವ ಕೂಟಸ್ಥಾತ್ಮನೇ ಬುದ್ಧಿಯ ಪರಿಣಾಮವನ್ನು ಕಾಣುವ ಸಾಕ್ಷಿಯೆಂದಾಯಿತು.

4. ಒಂದೊಂದಾಗಿ ಅರಿಯಬೇಕಾಗಿರುವ ಸ್ವಭಾವದವನಲ್ಲದ, ಎಲ್ಲವನ್ನೂ ಒಂದೇ ಕಾಲದಲ್ಲಿ ಅರಿಯಬಲ್ಲ .

ವ್ಯಾಪ್ತವಾಗುವ ಮೊಳಕೆಯ ಹಾಗೆ [1] ಷಡ್ಭಾವವಿಕಾರಗಳನ್ನು ಹೊಂದುತ್ತದೆ.

(ಮೂಲ)

ಸತ ಆತ್ಮನಶ್ಚ ಅವಿಕಾರಿತ್ವೇ ಯುಕ್ತಿಃ–

ಸ್ಮೃತಿಸ್ವಪ್ನಪ್ರಬೋಧೇಷು ನ ಕಶ್ಚಿತ್ ಪ್ರತ್ಯಯೋ ಧಿಯಃ ।
ದೃಶಾವ್ಯಾಪ್ತೋಽಸ್ತ್ಯತೋ ನಿತ್ಯಮವಿಕಾರೀ ಸ್ವಯಂದೃಶಿಃ ॥೮೩॥

(ಅರ್ಥ)

ಸದ್ರೂಪನಾದ ಆತ್ಮನು ವಿಕಾರಿಯಲ್ಲವೆಂಬುದಕ್ಕೆ (ಇದು) ಯುಕ್ತಿಯು :

೮೩. ಸ್ಮೃತಿ, ಸ್ವಪ್ನ, ಎಚ್ಚರ– ಇವುಗಳಲ್ಲಿ [2] ಯಾವದೊಂದು ಬುದ್ಧಿಯ ಪ್ರತ್ಯಯವೂ ದೃಕ್ಕಿನಿಂದ [3] ವ್ಯಾಪ್ತವಾಗದೆ ಇರುವದಿಲ್ಲ. ಆದ್ದರಿಂದ ಸ್ವಯಂದೃಗ್ರೂಪನಾದ [4] (ಆತ್ಮನು) ಯಾವಾಗಲೂ ವಿಕಾರರಹಿತನೇ.

(ಮೂಲ)

ಏವಂ ತಾವತ್ ಪರಾಭ್ಯುಪಗತಪ್ರಕ್ರಿಯಾಪ್ರಸ್ಥಾನೇನ ನಿರಸ್ತಾಶೇಷ ವಿಕಾರ್ಯೈಕಾತ್ಮ್ಯಂ ಪ್ರತಿಪಾದಿತಮುಪಪತ್ತಿಭಿಃ । ಅಥಾಧುನಾ ಶ್ರೌತೀಂ ಪ್ರಕ್ರಿಯಾಮವಲಮ್ಬ್ಯೋಚ್ಯತೇ–

ಅಸ್ತು ವಾ ಪರಿಣಾಮೋಽಸ್ಯ ದೃಶೇಃ ಕೂಟಸ್ಥರೂಪತಃ ।
ಕಲ್ಪಿತೋಽಪಿ ಮೃಷೈವಾಸೌ ದಣ್ಡಸ್ಯೇವಾಪ್ಸು ವಕ್ರತಾ ॥೮೪॥

ಷಟ್ಸು ಭಾವವಿಕಾರೇಷು ನಿಷಿದ್ಧೇಷ್ವೇವಮಾತ್ಮನಿ ।
ದೋಷಃ ಕಶ್ಚಿದಿಹಾಸಕ್ತುಂ ನ ಶಕ್ಯಸ್ತಾರ್ಕಿಕಶ್ವಭಿಃ ॥೮೫॥

---

1. ಮೊಳಕೆಯು ಹುಟ್ಟುವದು, ಇರುವದು, ಬೆಳೆಯುವದು, ಮಾರ್ಪಡುವದು, ಕ್ಷೀಣವಾಗುವದು, ನಾಶವಾಗುವದು – ಇವೆಲ್ಲವೂ ಅವಿಕಾರಿಯಾದ ಆಕಾಶದಲ್ಲಿಯೇ ಆಗುವಂತೆ ಎಂದರ್ಥ. ಇಲ್ಲಿಯವರೆಗೂ ೫೮ನೆಯ ಶ್ಲೋಕದ ಅರ್ಥವನ್ನು ವಿವರಿಸಿದ್ದಾಯಿತು.

2. ಪ್ರಮಾಣ, ಭ್ರಾಂತಿ, ಸ್ಮೃತಿ - ಎಂಬ ವ್ಯಭಿಚಾರಿಪ್ರತ್ಯಯಗಳೊಳಗೆ.

3. ಆತ್ಮಚೈತನ್ಯದಿಂದ.

4. ಸ್ವಯಂಪ್ರಕಾಶವಾದ, ಪ್ರತ್ಯಯನಿರಪೇಕ್ಷವಾಗಿಯೇ ಸಿದ್ಧವಾಗಿರುವ.

(ಅರ್ಥ)

ಹೀಗೆ (ಇಲ್ಲಿಯವರೆಗೆ) ಪರರು ಒಪ್ಪಿರುವ ಪ್ರಕ್ರಿಯೆಯ(ನ್ನವಲಂಬಿಸಿ) ಹೊರಟು[1] ಯಾವ ವಿಕಾರವೂ ಇಲ್ಲದ ಏಕಾತ್ಮತ್ವವನ್ನು ಉಪಪತ್ತಿಗಳಿಂದ ಪ್ರತಿಪಾದಿಸಿದ್ದಾಯಿತು. ಇನ್ನು ಈಗ ಶ್ರೌತಪ್ರಕ್ರಿಯೆಯನ್ನೇ[2] ಅವಲಂಬಿಸಿ ಹೇಳುತ್ತಾರೆ :

೮೪-೮೫. ಅಥವಾ ಈ ಚೈತನ್ಯಕ್ಕೆ ಕೂಟಸ್ಥರೂಪವಿರುವದರಿಂದ ಕಲ್ಪಿತಪರಿಣಾಮವೂ ಇದೆಯೆಂದೇ ಆಗಲಿ. ಅದು ನೀರಿನಲ್ಲಿ ಕೋಲಿಗೆ (ಕಾಣುವ) ಡೊಂಕಿನಂತೆ ಹುಸಿಯೇ ಆಗಿರುತ್ತದೆ.[3] ಹೀಗೆ ಆತ್ಮನಲ್ಲಿ ಆರು ವಿಕಾರಗಳೂ ಇಲ್ಲವೆಂದ ಬಳಿಕ, ತಾರ್ಕಿಕನಾಯಿಗಳು ಇಲ್ಲಿ ಯಾವ ದೋಷವನ್ನೂ ಅಂಟಿಸುವದಕ್ಕೆ ಆಗಲಾರದು[4].

---

1. ಸಾಂಖ್ಯರು ಪುರುಷನು ನಿರ್ಲೇಪನು, ಪ್ರಕೃತಿಯೇ ಪರಿಣಾಮಿ – ಎಂದು ಒಪ್ಪಿರುತ್ತಾರೆ. ಇದನ್ನು ಒಪ್ಪಿ ಅಂತಃಕರಣವು ವಿಷಯಾಕಾರವಾಗಿ ಪರಿಣಮಿಸಿಯೇ ತಿಳಿಸುತ್ತದೆ ; ಆತ್ಮಚೈತನ್ಯದ ಆಭಾಸವಿಲ್ಲದೆ, ಚಿದ್ವ್ಯಾಪ್ತಿಯಿಲ್ಲದೆ ಅದರ ಸಿದ್ಧಿಯಿಲ್ಲ. ಆತ್ಮನು ಎಲ್ಲವನ್ನೂ ಒಮ್ಮೆಗೆ ತಿಳಿಸುವ ಚೈತನ್ಯಸ್ವರೂಪನು, ಅಪರಿಚ್ಛಿನ್ನಸ್ವರೂಪನು, ಎಲ್ಲಾ ಬುದ್ಧಿಗಳನ್ನೂ ತಿಳಿಯುವನಾದ್ದರಿಂದ ಏಕನು, ಅದ್ವಿತೀಯನು– ಎಂದು ತಿಳಿಸಿದ್ದಾಗಿದೆ.

2. ಸಾಂಖ್ಯರ ಪ್ರಕ್ರಿಯೆಯು ಅಯುಕ್ತವು. ಏಕೆಂದರೆ ಸ್ವತಂತ್ರವಾದ ಪ್ರಕೃತಿಗೆ ಪ್ರವೃತ್ತಿಯು ಹೊಂದುವದಿಲ್ಲವಾಗಿ ಅದು ಪರಿಣಮಿಸಲಾರದು. ಯಾವ ಅತಿಶಯವೂ ಆಗಲಾರದ ಪುರುಷನಿಗೆ ಪ್ರಕೃತಿಯಿಂದ ಭೋಗಾಪವರ್ಗಗಳೂ ಆಗಲಾರವು. ಆದ್ದರಿಂದಲೇ ಪುರುಷಬಹುತ್ವವನ್ನು ಕಲ್ಪಿಸುವದೂ ಅಯುಕ್ತ ; ಅದು ಶ್ರುತಿವಿರುದ್ಧವೂ ಆಗುತ್ತದೆ. ಆದ್ದರಿಂದ ಒಬ್ಬ ಆತ್ಮನಲ್ಲಿಯೇ ಅವಿದ್ಯಾವಶದಿಂದ ಭೇದವೂ ಪರಿಣಾಮವೂ ಭೋಗಾಪವರ್ಗಗಳೂ ಕಲ್ಪಿತವಾಗಿ ತೋರುತ್ತವೆ– ಎಂಬುದು ಶ್ರೌತಪ್ರಕ್ರಿಯೆ.

3. ನೀರಿನಲ್ಲಿರುವ ಕೋಲಿಗೆ ನಿಜವಾಗಿ ಡೊಂಕು ಉಂಟಾಗಿರುವದಿಲ್ಲ ; ಹೀಗೆಯೇ ಆತ್ಮನಿಗೆ ನಿಜವಾದ ಸಂಸಾರಿತ್ವವಾಗಿರುವದಿಲ್ಲ.

4. ಭಾವವಿಕಾರಗಳೆಲ್ಲ ಮಿಥ್ಯೆಯೆಂದೇ ಅಲ್ಲಗಳೆದಿರುವದರಿಂದ ಅವುಗಳಿಂದ ಯಾವ ದೋಷವೂ ಆತ್ಮನಿಗಾಗುವದಿಲ್ಲ. ಸುಖಾದಿಗಳು ಆತ್ಮಧರ್ಮವೆಂದು ತಾರ್ಕಿಕರು ತೋರಿಸುವದಕ್ಕೆ ಆಗಲಾರದು ಎಂದರ್ಥ.

(ಮೂಲ)

**ಪ್ರಕೃತಮೇವೋಪಾದಾಯ ಬುದ್ಧೇಃ ಪರಿಣಾಮಿತ್ವಮ್ ಆತ್ಮನಶ್ಚ ಕೂಟಸ್ಥತ್ವಂ ಯುಕ್ತಿಭಿರುಚ್ಯತೇ–**

**ಪ್ರತ್ಯರ್ಥಂ ತು ವಿಭಿದ್ಯನ್ತೇ ಬುದ್ಧಯೋ ವಿಷಯೋನ್ಮುಖಾಃ ।**
**ನ ಭಿದಾವಗತೇಸ್ತದ್ವತ್ ಸರ್ವಾಸ್ತಾಶ್ಚಿನ್ನಿಭಾ ಯತಃ ॥೮೬॥**

(ಅರ್ಥ)

ಪ್ರಕೃತವನ್ನೇ ಇಟ್ಟುಕೊಂಡು[1] ಬುದ್ಧಿಗೆ ಪರಿಣಾಮಿತ್ವವನ್ನೂ ಆತ್ಮನಿಗೆ ಕೂಟಸ್ಥತ್ವವನ್ನೂ ಯುಕ್ತಿಗಳಿಂದ ಹೇಳುತ್ತಾರೆ :

೮೬. ವಿಷಯಗಳಿಗೆ ಅಭಿಮುಖವಾಗಿರುವ[2] ಬುದ್ಧಿಗಳು ಪ್ರತಿಯೊಂದು ವಿಷಯಕ್ಕೂ ಬೇರೆಬೇರೆಯಾಗಿರುತ್ತವೆ[3]. ಅದರಂತೆ ಅವಗತಿಗೆ (ಯಾವ) ಭೇದವೂ ಆಗಿರುವದಿಲ್ಲ[4]. ಏಕೆಂದರೆ ಆ (ಬುದ್ಧಿಗಳೆಲ್ಲ ) ಚಿತ್ತಿನಂತೆಯೇ ತೋರುತ್ತಿರುತ್ತವೆ[5].

(ಮೂಲ)

**ಸ್ವಸಂಬದ್ಧಾರ್ಥ ಏವ–**

---

1. ಪ್ರಾಸಂಗಿಕವಾಗಿ ಹೇಳಿದ ವೇದಾಂತಪ್ರಕ್ರಿಯೆಯನ್ನು ಬಿಟ್ಟು, ಸಾಂಖ್ಯ ಪ್ರಕ್ರಿಯೆಯನ್ನೇ ಇಟ್ಟುಕೊಂಡು ಎಂದರ್ಥ.

2. ವಿಷಯಾಕಾರವಾಗಿರುವ.

3. ಘಟಬುದ್ಧಿ ಬೇರೆ, ಪಟಬುದ್ಧಿ ಬೇರೆ ; ಒಂದೇ ಬುದ್ಧಿ ಘಟಪಟಗಳೆರಡನ್ನೂ ಅರಿಯುವದಿಲ್ಲ.

4. ಅವಗತಿಯೆಂದರೆ ಬುದ್ಧಿಯಿಂದ ಘಟಪಟಾದಿಗಳನ್ನು ಅರಿತದ್ದರಿಂದ ಆಗುವ ಜ್ಞಪ್ತಿ ರೂಪವಾದ ಫಲ. ಆ ಫಲವು ಯಾವಾಗಲೂ ಚೈತನ್ಯರೂಪವಾಗಿಯೇ ಇರುತ್ತದೆ. ಘಟನಿಮಿತ್ತವಾಗಿರಲಿ ಪಟನಿಮಿತ್ತವಾಗಿರಲಿ ಅಭಿವ್ಯಕ್ತವಾದ ಚೈತನ್ಯದ ಸ್ವರೂಪದಲ್ಲಿ ಯಾವ ಭೇದವೂ ಇರುವದಿಲ್ಲ.

5. ಘಟಬುದ್ಧಿಯೂ ಚಿದ್ರೂಪವಾಗಿಯೇ ಬೆಳಗುತ್ತದೆ, ಪಟಬುದ್ಧಿಯೂ ಹಾಗೆಯೇ. ಹೀಗೆ ಎಲ್ಲಾ ಬುದ್ಧಿಗಳಲ್ಲಿ ಚಿದಾಭಾಸವಿದ್ದೇ ಇರುವದರಿಂದ ಚಿದ್ರೂಪವಾದ ಅವಗತಿಯು ಯಾವಾಗಲೂ ಒಂದೇ ಎಂದಾಗುತ್ತದೆ. ಎಲ್ಲಾ ಕನ್ನಡಿಗಳಲ್ಲಿಯೂ ಒಂದೇ ಬಗೆಯ ಪ್ರತಿಬಿಂಬವಾದರೆ ಬಿಂಬವು ಒಂದೇ ಎಂದು ನಿರ್ಣಯಿಸುವಂತೆಯೇ ಇದು.

**ಸಾವಶೇಷಪರಿಚ್ಛೇದಿನ್ಯತ ಏವ ನ ಕೃತ್ಸ್ನವಿತ್ ।**
**ನೋ ಚೇತ್ ಪರಿಣಮೇದ್ಬುದ್ಧಿಃ ಸರ್ವಜ್ಞಾ ಸ್ಯಾತ್ಮವದ್ಭವೇತ್ ॥೮೭॥**

(ಅರ್ಥ)

ತನಗೆ ಸಂಬದ್ಧವಾಗಿರುವ ಅರ್ಥದಲ್ಲಿಯೇ [1] :

೮೭. ಬುದ್ಧಿಯು ಸಾವಶೇಷವಾಗಿಯೇ ಗೊತ್ತುಪಡಿಸತಕ್ಕದ್ದಾಗಿರುತ್ತದೆ. ಆದ್ದರಿಂದಲೇ ಅದು ಎಲ್ಲವನ್ನೂ ಬಲ್ಲದ್ದಲ್ಲ. (ಅದು) ಪರಿಣಮಿಸದೆ ಇದ್ದಿದ್ದರೆ ತನ್ನ ಆತ್ಮನಂತೆ ಸರ್ವಜ್ಞವೇ ಆಗಿರಬೇಕಾಗಿತ್ತು[2].

(ಮೂಲ)

**ಅತೋಽವಗತೇರೇಕತ್ವಾತ್ –**

**ಚಣ್ಡಾಲಬುದ್ಧೇರ್ಯದ್ದ್ರಷ್ಟೃ ತದೇವ ಬ್ರಹ್ಮಬುದ್ಧಿದೃಕ್ ।**
**ಏಕಂ ತದುಭಯೋರ್ಜ್ಯೋತಿರ್ಭಾಸ್ಯಭೇದಾದನೇಕವತ್ ॥೮೮॥**

(ಅರ್ಥ)

ಆದ್ದರಿಂದ ಅವಗತಿಯು ಒಂದೇ ಆಗಿರುವದರಿಂದ :

೮೮. ಚಂಡಾಲನ ಬುದ್ಧಿಯನ್ನು ನೋಡುವ (ಚೈತನ್ಯವು) ಯಾವದೋ ಅದೇ ಬ್ರಹ್ಮನ[3] ಬುದ್ಧಿಯನ್ನು ಕಾಣುವ (ಚೈತನ್ಯವು). ಇವೆರಡಕ್ಕೂ ಜ್ಯೋತಿಯಾಗಿರುವದು ಒಂದೇ ಆಗಿದ್ದು ಭಾಸ್ಯವಾದದ್ದು ಬೇರೆ ಬೇರೆಯಾಗಿರುವದರಿಂದ ಅನೇಕವಾಗಿರುವಂತೆ ಇರುತ್ತದೆ.

(ಮೂಲ)

**ಕಸ್ಮಾತ್ ?**

**ಅವಸ್ಥಾದೇಶಕಾಲಾದಿಭೇದೋ ನಾಸ್ತ್ಯನಯೋರ್ಯತಃ ।**
**ತಸ್ಮಾಜ್ಜಗದ್ಧಿಯಾಂ ವೃತ್ತಂ ಜ್ಯೋತಿರೇಕಂ ಸದೇಕ್ಷತೇ ॥೮೯॥**

---

1. ತನಗೆ ಸಂಬಂಧಪಟ್ಟ ವಸ್ತುವನ್ನೇ ಬುದ್ಧಿಯು ಅಪೂರ್ಣವಾಗಿ ತಿಳಿಸುತ್ತದೆ.
2. ಎಲ್ಲವನ್ನೂ ಒಮ್ಮೆಗೇ ತಿಳಿಸಬಲ್ಲದ್ದಾಗಿರಬೇಕಾಗುತ್ತಿತ್ತು.
3. ಅಥವಾ ಬ್ರಾಹ್ಮಣನೆಂಬ ಬುದ್ಧಿ.

(ಅರ್ಥ)

ಏಕೆ ? ಎಂದರೆ :

೮೯. ಅವಸ್ಥೆ, ದೇಶ, ಕಾಲ– ಮುಂತಾದವುಗಳ ಭೇದವು ಈ (ಎರಡ)ಕ್ಕೂ ಇರುವದಿಲ್ಲವಷ್ಟೆ[1]. ಆದ್ದರಿಂದ ಜಗತ್ತಿನ ಬುದ್ಧಿಗಳ ನಡತೆಯನ್ನು ಒಂದು ಜ್ಯೋತಿಯೇ ಯಾವಾಗಲೂ ನೋಡುತ್ತಿರುತ್ತದೆ.

(ಮೂಲ)

ಸರ್ವದೇಹೇಷು ಆತ್ಮೈಕತ್ವೇ ಪ್ರತಿಬುದ್ಧಪರಮಾರ್ಥತತ್ತ್ವಸ್ಯಾಪಿ ಅಪ್ರತಿಬುದ್ಧದೇಹಸಂಬನ್ಧಾತ್ ಅಶೇಷದುಃಖಸಂಬನ್ಧಃ ಇತಿ ಚೇತ್, ತನ್ನ–

**ಬೋಧಾತ್ ಪ್ರಾಗಪಿ ದುಃಖಿತ್ವಂ ನಾನ್ಯದೇಹೋತ್ಥಮಸ್ತಿ ನಃ ।**
**ಬೋಧಾದೂರ್ಧ್ವಂ ಕುತಸ್ತತ್ ಸ್ಯಾದ್ಯತ್ರ ಸ್ವಗತಮಪ್ಯಸತ್ ॥೯೦॥**

(ಅರ್ಥ)

(ಆಕ್ಷೇಪ) :- ಎಲ್ಲಾ ದೇಹಗಳಲ್ಲಿಯೂ ಆತ್ಮನು ಒಬ್ಬನೇ ಆದರೆ ಪರಮಾರ್ಥತತ್ತ್ವವನ್ನು ತಿಳಿದುಕೊಂಡವನಿಗೂ ತಿಳಿಯದವನ ದೇಹದ ಸಂಬಂಧವಿರುವದರಿಂದ ಎಲ್ಲಾ ದುಃಖಗಳ ಸಂಬಂಧವೂ ಆಗುವದಲ್ಲ !

(ಪರಿಹಾರ) :- ಅದು (ಸರಿ)ಯಲ್ಲ :

೯೦. ಜ್ಞಾನವಾಗುವ ಮುಂಚೆಯೂ ಮತ್ತೊಬ್ಬನ ದೇಹದಲ್ಲಿ ಉಂಟಾಗುವ ದುಃಖಿತ್ವವು ನಮಗಿರುವದಿಲ್ಲ. (ಹೀಗಿರುವಲ್ಲಿ) ಜ್ಞಾನ ವುಂಟಾದ ಮೇಲೆ, ಆಗ ತನ್ನ (ದೇಹ)ದಲ್ಲಿರುವ (ದುಃಖಿತ್ವ)ವೂ ಹುಸಿಯಾಗಿರುವಲ್ಲಿ, ಆ (ಮತ್ತೊಬ್ಬರ ದೇಹದ ದುಃಖಿತ್ವವು) ಹೇಗೆ ಆದೀತು[2] ?

---

1. ಏಕೆಂದರೆ ಈ ಎರಡೂ ಒಂದೇ ಚೈತನ್ಯವಾಗಿದ್ದು ಎಲ್ಲಾ ಅವಸ್ಥೆ, ದೇಶ, ಕಾಲಗಳನ್ನು ನೋಡುತ್ತಿರುತ್ತವೆ.

2. ಅಜ್ಞನಿಗೆ ಮತ್ತೊಬ್ಬರ ದೇಹವಿದ್ದರೂ ಅವರ ದುಃಖವಿಲ್ಲವೆಂಬುದು ಅನುಭವ ಸಿದ್ಧವಾಗಿದೆ. ಜ್ಞಾನಿಗೆ ದೇಹವಾಗಲಿ ದುಃಖಿತ್ವವಾಗಲಿ ಇರುವದೇ ಇಲ್ಲ, ಅದು ಮಿಥ್ಯೆಯೆಂಬ ನಿಶ್ಚಯವಾದರೆ ಮತ್ತೊಬ್ಬರ ದುಃಖಿತ್ವವಾಗುವದೆಂಬುದೆಲ್ಲಿ ಬಂತು ?

(ಮೂಲ)

ನ ಚೇಯಂ ಸ್ವಮನೀಷಿಕೇತಿ ಗ್ರಾಹ್ಯಮ್ । ಕುತಃ ? ಶ್ರುತ್ಯವಷ್ಟಮ್ಭಾತ್ –

ಶಬ್ದಾದ್ಯಾಕಾರನಿರ್ಭಾಸಾ ಹಾನೋಪಾದಾನಧರ್ಮಿಣೀ ।
ಭಾಸ್ಯೇತ್ಯಾಹ ಶ್ರುತಿರ್ದೃಷ್ಟಿರಾತ್ಮನೋಽಪರಿಣಾಮಿನಃ ॥೬೦॥

(ಅರ್ಥ)

ಇದು ನಮ್ಮ (ಸ್ವಂತ) ಬುದ್ಧಿಯು ಎಂದು ತಿಳಿಯಬಾರದು. ಏಕೆ ? ಎಂದರೆ ಶ್ರುತಿಯನ್ನು ಅವಲಂಬಿಸಿರುತ್ತೇವೆ :

೬೦. ಶಬ್ದಾದಿಗಳ ಆಕಾರದಿಂದ ಹೊಳೆಯುತ್ತಿರುವ[1] ಹಾನೋಪಾದಾನಧರ್ಮಗಳುಳ್ಳ[2] ದೃಷ್ಟಿಯು[3] ಅಪರಿಣಾಮಿಯಾದ ಆತ್ಮನಿಗೆ ಭಾಸ್ಯವು ಎಂದು ಶ್ರುತಿ ಹೇಳುತ್ತಿದೆ.

(ಮೂಲ)

ಕಾ ನ್ವಸೌ ಶ್ರುತಿಃ ?

ದೃಷ್ಟೇರ್ದ್ರಷ್ಟಾರಮಾತ್ಮಾನಂ ನ ಪಶ್ಯೇರ್ದೃಶ್ಯಮಾನಯಾ ।
ವಿಜ್ಞಾತಾರಮರೇ ಕೇನ ವಿಜಾನೀಯಾದ್ಧಿಯಾಂ ಪತಿಮ್ ॥೬೧॥

(ಅರ್ಥ)

ಆ ಶ್ರುತಿ ಯಾವದೊ ?

೬೧. ದೃಷ್ಟಿಯ ದ್ರಷ್ಟೃವಾದ ಆತ್ಮನನ್ನು ದೃಶ್ಯವಾದ (ದೃಷ್ಟಿಯಿಂದ)

---

1. ಶಬ್ದಾದಿರೂಪವಾಗಿ ಪರಿಣಮಿಸಿ ಚಿದಾಭಾಸದಿಂದ ಕೂಡಿರುವ.

2. ತೆಗೆದುಕೊಳ್ಳುವುದಕ್ಕೂ ಬಿಡುವದಕ್ಕೂ ಬರುವ ಸ್ವಭಾವವುಳ್ಳ.

3. ಬುದ್ಧಿವೃತ್ತಿಯು. ದೃಷ್ಟ್ಯಾದಿಶಬ್ದವಾಚ್ಯವಾಗಿರುವದೂ ಬುದ್ಧಿಯೇ ಎಂದು ಭಾವ.

ನೋಡಲಾರೆ[1]. ಎಲೆ, ಬುದ್ಧಿಗಳ ಪತಿಯಾದ ವಿಜ್ಞಾತೃವನ್ನು ಏತರಿಂದ ಅರಿತುಕೊಳ್ಳುವದಕ್ಕಾದೀತು ?

(ಮೂಲ)

ಯಸ್ಮಾತ್ ಸರ್ವಪ್ರಮಾಣೋಪಪನ್ನೋಽಯಮರ್ಥಃ, ತಸ್ಮಾತ್ ಅತೋಽನ್ಯಥಾವಾದಿನೋ ಜಾತ್ಯನ್ಧಾ ಇವ ಅನುಕಮ್ಪನೀಯಾಃ ಇತ್ಯಾಹ –

**ತದೇತದದ್ವಯಂ ಬ್ರಹ್ಮ ನಿರ್ವಿಕಾರಂ ಕುಬುದ್ಧಿಭಿಃ ।**
**ಜಾತ್ಯನ್ಧಗಜದೃಷ್ಟ್ಯೇವ ಕೋಟಿಶಃ ಪರಿಕಲ್ಪ್ಯತೇ ॥೯೩॥**

(ಅರ್ಥ)

ಈ ಅರ್ಥವು (ಹೀಗೆ) ಸರ್ವಪ್ರಮಾಣಗಳಿಂದಲೂ[2] ಉಪಪನ್ನವಾಗಿರುವದಷ್ಟೆ. ಆದ್ದರಿಂದ ಇದಕ್ಕಿಂತ ಬೇರೆಯಾಗಿ ಹೇಳುವ ವಾದಿಗಳು[3] ಹುಟ್ಟುಕುರುಡರಂತೆ ಮರುಕಕ್ಕೆ ಅರ್ಹರು ಎಂದು ಹೇಳುತ್ತಾರೆ :

೯೩. ಈ ಅದ್ವಯವಾದ ನಿರ್ವಿಕಾರವಾದ ಬ್ರಹ್ಮವು ಕುಬುದ್ಧಿಗಳಾದವರಿಂದ ಜಾತ್ಯಂಧರ ಗಜದೃಷ್ಟಿಯಿಂದಲೋ ಎಂಬಂತೆ[4] ಕೋಟಿಗಟ್ಟಲೆಯ (ಪ್ರಕಾರ)ಗಳಿಂದ ವಿಕಲ್ಪಿತವಾಗುತ್ತಿದೆ.

---

1. ''ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ'' (ದೃಷ್ಟಿಯ ದ್ರಷ್ಟೃವನ್ನು ನೋಡಲಾರೆ ಬೃ. ೩-೪-೨) ಎಂಬ ಶ್ರುತಿಯು ದೃಶ್ಯವಾದ ಪರಿಣಾಮಿದೃಷ್ಟಿಯಿಂದ ಕೂಟಸ್ಥಸಾಕ್ಷಿಯನ್ನು ರೂಪಾದಿಗಳಂತೆ ನೋಡಲಾರೆ - ಎನ್ನುತ್ತದೆ. ''ವಿಜ್ಞಾತಾರಮರೇ ಕೇನ ವಿಜಾನೀಯಾತ್'' (ಬೃ. ೨-೪-೧೪) ಎಂಬುದು ಕೂಟಸ್ಥ ವಿಜ್ಞಾನಸ್ವಭಾವನಾದ ಆತ್ಮನನ್ನು ಯಾವ ಕರಣದಿಂದ ನೋಡಬಹುದು ? ಅವನು ಬುದ್ಧಿಗಳಿಗೆಲ್ಲ ಒಡೆಯನು ಎಂದರೆ ಚಿದಾಭಾಸಾನುಗತವಾಗಿಯೇ ಶಬ್ದಾದಿಗಳನ್ನು ಬುದ್ಧಿಗಳು ತಿಳಿಸುತ್ತವೆಯಲ್ಲ !- ಎಂದು ತಿಳಿಸುತ್ತದೆ.

2. ಸಾಕ್ಷಿ, ಶ್ರುತಿ, ಉಪಪತ್ತಿಗಳನ್ನು ಇಲ್ಲಿ ಸರ್ವಪ್ರಮಾಣಗಳೆಂದಿದೆ. ಶ್ರುತ್ಯುಪಪತ್ತಿಗಳು ಅಜ್ಞಾನವನ್ನು ಕಳೆಯುವ ಮೂಲಕ ಉಪಕಾರಿಗಳಾಗಿವೆ.

3. ಆತ್ಮನು ಅಹಂಪ್ರತ್ಯಯಗಮ್ಯನು, ಜ್ಞಾನಸುಖದುಃಖಾದಿಗುಣಗಳುಳ್ಳವನು, ಕ್ಷಣಿಕವಿಜ್ಞಾನರೂಪನು, ಶೂನ್ಯರೂಪನು, ಎಂದು ಹೇಳುವ ವಾದಿಗಳು.

4. ಹುಟ್ಟುಕುರುಡರು ಕೆಲವರು ಆನೆಯ ಸೊಂಡಿಲು, ಕಿವಿ- ಮುಂತಾದ ಅವಯವಗಳನ್ನೇ ಆನೆಯೆಂದು ಬಗೆದು ಬಗೆಬಗೆಯಾಗಿ ಕಲ್ಪಿಸಿದಂತೆ ಅಪೂರ್ಣದೃಷ್ಟಿಯಿಂದ ಎಂದರ್ಥ.

(ಮೂಲ)

ಪ್ರಮಾಣೋಪಪನ್ನಸ್ಯಾರ್ಥಸ್ಯ ಅಸಂಭಾವನಾತ್ ತದನುಕಮ್ಪನೀಯತ್ವಸಿದ್ಧಿಃ । ತದೇತದಾಹ –

ಯದ್ಯದ್ವಿಶೇಷಣಂ ದೃಷ್ಟಂ ನಾತ್ಮನಸ್ತದನನ್ವಯಾತ್ ।
ಖಸ್ಯ ಕುಂಭಾದಿವತ್ ತಸ್ಮಾದಾತ್ಮಾ ಸ್ಯಾನ್ನಿರ್ವಿಶೇಷಣಃ ॥೯೪॥

(ಅರ್ಥ)

ಪ್ರಮಾಣೋಪಪನ್ನವಾದ ಅರ್ಥವನ್ನೇ ಅಸಂಭಾವಿತವೆಂದು ಬಗೆಯುವದರಿಂದ ಅವರು ಮರುಕಕ್ಕೆ ತಕ್ಕವರೆಂದು ಸಿದ್ಧವಾಗುತ್ತದೆ. ಆ ಇದನ್ನೇ ಹೇಳುತ್ತಾರೆ :

೯೪. ಯಾವಯಾವ ವಿಶೇಷಣವು ಕಾಣುತ್ತದೆಯೋ ಅದು ಆತ್ಮನದಲ್ಲ , ಏಕೆಂದರೆ ಅನುಗತವಾಗಿರುವದಿಲ್ಲ . ಆಕಾಶಕ್ಕೆ ಗಡಿಗೆಯೇ ಮುಂತಾದವುಗಳು (ವಿಶೇಷಣವಲ್ಲದಿರುವಂತೆಯೇ ಇದು)[1]. ಆದ್ದರಿಂದ ಆತ್ಮನು ನಿರ್ವಿಶೇಷಣನು.

(ಮೂಲ)

ಅತಶ್ಚಾತ್ಮನೋ ಭೇದಾಸಂಸ್ಪರ್ಶಃ । ಭೇದಸ್ಯ ಮಿಥ್ಯಾಸ್ವಾಭಾವ್ಯಾತ್ । ಅತ ಆಹ –

ಅವಗತ್ಯಾತ್ಮನೋ ಯಸ್ಮಾದಾಗಮಾಪಾಯಿ ಕುಮ್ಭವತ್ ।
ಸಾಹಂಕಾರಮಿದಂ ವಿಶ್ವಂ ತಸ್ಮಾತ್ ತತ್ಸ್ಯಾತ್ ಕಚಾದಿವತ್ ॥೯೫॥

(ಅರ್ಥ)

ಈ (ಕಾರಣ)ದಿಂದಲೂ ಆತ್ಮನಿಗೆ ಭೇದದ ಸೋಂಕಿರುವದಿಲ್ಲ. ಏಕೆಂದರೆ ಭೇದವು ಮಿಥ್ಯಾಸ್ವರೂಪದ್ದಾಗಿತುತ್ತದೆ. ಆದ್ದರಿಂದ (ಹೀಗೆ)ನ್ನುತ್ತಾರೆ :

---

1. ಗಡಿಗೆಯ ಆಕಾಶ, ಕುಡಿಕೆಯ ಆಕಾಶ- ಎಂದು ಮುಂತಾಗಿ ಆಕಾಶಕ್ಕೆ ವಿಶೇಷಣವಾಗಿ ತೋರಿದರೂ ಗಡಿಗೆ, ಕುಡಿಕೆ- ಮುಂತಾದವು ಬೇರೆಬೇರೆಯಾಗಿರುವದರಿಂದ ಹೇಗೆ ಆಕಾಶದ ಧರ್ಮಗಳಲ್ಲವೋ, ಆಕಾಶವು ಮಾತ್ರ ಒಂದೇ ಆಗಿರುವದೋ ಹಾಗೆಯೇ ಆತ್ಮನ ವಿಶೇಷಣವೆಂದು ತೋರುವದು ಅನುಗತವಾಗಿಲ್ಲವಾದ್ದರಿಂದ ವಿಶೇಷಣವಲ್ಲ .

೯೫. ಅಹಂಕಾರದೊಡಗೂಡಿದ ಈ ವಿಶ್ವವು ಅವಗತಿಸ್ವರೂಪನಾದ ಆತ್ಮನಿಂದ ಗಡಿಗೆಯಂತೆಯೇ ಬಂದು ಹೋಗತಕ್ಕದ್ದು[1]. ಆದ್ದರಿಂದ ಅದು ಕೇಶೋಂಡ್ರಕವೇ ಮುಂತಾದದ್ದರಂತೆ (ಮಿಥ್ಯೆ)ಯಾಗಿರುವದು[2].

## ಅನ್ವಯವ್ಯತಿರೇಕದ ಉಪಸಂಹಾರ

(ಮೂಲ)

ಸರ್ವಸ್ಯೈವಾನುಮಾನವ್ಯಾಪಾರಸ್ಯ ಫಲಮಿದಮೇವ ಯದ್ವಿವೇಕ ಗ್ರಹಣಮ್ । ತದುಚ್ಯತೇ–

**ಬುದ್ಧೇರನಾತ್ಮಧರ್ಮತ್ವಮನುಮಾನಾತ್ ಪ್ರಸಿಧ್ಯತಿ ।**
**ಆತ್ಮನೋಽಪ್ಯದ್ವಿತೀಯತ್ವಮಾತ್ಮತ್ವಾದೇವ ಸಿಧ್ಯತಿ ॥೯೬॥**

(ಅರ್ಥ)

(ಈ) ಅನುಮಾನದ ವ್ಯಾಪಾರಕ್ಕೆಲ್ಲ ವಿಂಗಡಿಸಿ ಅರಿತುಕೊಳ್ಳುವದೆಂಬುದೇ ಫಲವು[3]. ಅದನ್ನು ಹೇಳುತ್ತಾರೆ :

೯೬. ಬುದ್ಧಿಯು ಅನಾತ್ಮಧರ್ಮವೆಂಬುದು ಅನುಮಾನದಿಂದ ಸಿದ್ಧವಾಗಿರುತ್ತದೆ[4]. ಆತ್ಮನು ಅದ್ವಿತೀಯನೆಂಬುದೂ (ಅವನು) ಆತ್ಮನೆಂಬುದರಿಂದಲೇ ಸಿದ್ಧವಾಗುತ್ತದೆ[5].

---

1. ಗಡಿಗೆ ಮುಂತಾದವು ಆಗಮಾಪಾಯಿಗಳು, ಹುಟ್ಟುಹೊಂದುಗಳುಳ್ಳವು ; ಆಕಾಶವು ಹಾಗೆಯೇ ಇರುತ್ತದೆ. ಆದ್ಯಂತಗಳಲ್ಲಿದ್ದು ನಡುವೆಯೂ ನಿಜವಾಗಿರುವದಿಲ್ಲ.

2. ಬಿಸಿಲಿನಲ್ಲಿ ತೋರಿಹಾರುವ ಕೇಶೋಂಡ್ರಕಗಳಂತೆ- ಬಿಸಿಲಿನಲ್ಲಿ ಕಣ್ಣಿನ ದೋಷದಿಂದ ಬಗೆಬಗೆಯ ಆಕಾರದಿಂದ ತೋರುವ ಹುಸಿತೋರಿಕೆಗಳಂತೆ - ಅಹಂಕಾರಾದಿ ಜಗತ್ತೂ ಬರಿಯ ತೋರಿಕೆ. ಆತ್ಮನಲ್ಲಿ ತೋರಿಹಾರುವದೆಂಬುದೇ ಇದಕ್ಕೆ ಹೇತು.

3. ನಿಜವಾದ ಆತ್ಮಜ್ಞಾನವಲ್ಲ.

4. ಅಹಂಕಾರಾದಿಯಾಗಿ ಎಲ್ಲವೂ ಅನಾತ್ಮವೆಂಬುದು ದ್ರಷ್ಟ್ರನ್ವಯದೃಶ್ಯವ್ಯತಿರೇಕ, ಸಾಕ್ಷ್ಯನ್ವಯಸಾಕ್ಷ್ಯವ್ಯತಿರೇಕ - ಎಂಬ ಅನುಮಾನದಿಂದ ಸಿದ್ಧವಾಗುತ್ತದೆ.

5. ಅದಕ್ಕೆ ಪ್ರಮಾಣವೇನೂ ಬೇಕಿಲ್ಲ ; ಏಕೆಂದರೆ ಆತ್ಮನು ಸ್ವತಃಸಿದ್ಧನಾಗಿರುತ್ತಾನೆ. ದ್ವಿತೀಯವಸ್ತು ಆತ್ಮನನ್ನು ಬಿಟ್ಟಿರುವದಿಲ್ಲವೆಂಬುದಕ್ಕೂ ಆತ್ಮನೇ ಪ್ರಮಾಣವಾಗಿರುತ್ತಾನೆ.

# ಆತ್ಮನು ಸ್ವತಃಸಿದ್ಧಾದ್ವಿತೀಯನು

(ಮೂಲ)

ಯದ್ಯಪ್ಯಯಂ ಗ್ರಹೀತೃಗ್ರಹಣಗ್ರಾಹ್ಯಗೃಹೀತಿತತ್ಫಲಾತ್ಮಕಃ ಆಬ್ರಹ್ಮಸ್ತಮ್ಬಪರ್ಯನ್ತಃ ಸಂಸಾರೋಽನ್ವಯವ್ಯತಿರೇಕಾಭ್ಯಾಮ್ ಅನಾತ್ಮತಯಾ ನಿರ್ಮಾಲ್ಯವತ್ ಅಪವಿದ್ಧಃ । ತಥಾಪಿ ತು ನೈವಾಸೌ ಸ್ವತಃಸಿದ್ಧಾತ್ಮವ್ಯತಿರಿಕ್ತಾನಾತ್ಮಪ್ರಕೃತಿಪದಾರ್ಥವ್ಯಪಾಶ್ರಯಃ ಸಾಂಖ್ಯಾನಾಮಿವ । ಕಿಂ ತರ್ಹಿ, ಸ್ವತಃಸಿದ್ಧಾನುದಿತಾನಸ್ತಮಿತಕೂಟಸ್ಥಾತ್ಮಪ್ರಜ್ಞಾನಮಾತ್ರಶರೀರಪ್ರತಿಬಿಮ್ಬಿತಾವಿಚಾರಿತಸಿದ್ಧಾತ್ಮಾನವಬೋಧಮಾತ್ರಾಶ್ರಯ ಏವ । ತದುಪಾದಾನತ್ವಾತ್ ತಸ್ಯ । ಇತೀಮಮರ್ಥಂ ನಿರ್ವಕ್ತುಕಾಮ ಆಹ –

ಋತೇ ಜ್ಞಾನಂ ನ ಸನ್ತ್ಯರ್ಥಾ ಅಸ್ತಿ ಜ್ಞಾನಮೃತೇಽಪಿ ತಾನ್ ।
ಏವಂ ಧಿಯೋ ಹಿರುಗ್ಜ್ಯೋತಿರ್ವಿವಿಂಚ್ಯಾದನುಮಾನತಃ ॥೯೭॥

(ಅರ್ಥ)

ಈ ಗ್ರಹೀತೃ, ಗ್ರಹಣ, ಗ್ರಾಹ್ಯ, ಗೃಹೀತಿ, ತತ್ಫಲ[1]- (ಈ) ರೂಪವಾಗಿರುವ ಬ್ರಹ್ಮನಿಂದ ಹಿಡಿದು ಸ್ತಂಬದ ಪರ್ಯಂತವಾಗಿರುವ ಸಂಸಾರವು

1. ಗೃಹೀತಿ ಎಂದರೆ ಅರ್ಥಜ್ಞಾನವು, ತತ್ಫಲವೆಂದರೆ ಅರ್ಥಾವಚ್ಛಿನ್ನವಾದ ಸ್ಫುರಣವು- ಎಂದು ವ್ಯಾಖ್ಯಾನದಲ್ಲಿದೆ. ಆದರೆ ಗೃಹೀತೃ (ಪ್ರಮಾತೃ), ಗ್ರಹಣ (ಪ್ರಮಾಣ), ಗ್ರಾಹ್ಯ (ಪ್ರಮೇಯ), ಗೃಹೀತಿ (ಪ್ರಮಿತಿ)- ಎಂಬೀ ನಾಲ್ಕನ್ನೇ ಮುಂದಿನ ಅಧ್ಯಾಯದ ಸಂಬಂಧೋಕ್ತಿಯಲ್ಲಿ ಹೇಳಿದೆ. ಪ್ರಮಿತಿಗಿಂತ ಬೇರೆಯಾಗಿ ಫಲವನ್ನು ವಾರ್ತಿಕದಲ್ಲಿ ಹೇಳಿಯೂ ಇಲ್ಲ. ಸಂಬಂಧವಾರ್ತಿಕದಲ್ಲಿ ಈ ಶ್ಲೋಕವಿದೆ : ಪರಾಗರ್ಥಪ್ರಮೇಯೇಷು ಯಾ ಫಲತ್ವೇನ ಸಂಮತಾ । ಸಂವಿತ್ಸೈವೇಹ ಮೇಯೋಽರ್ಥೋ ವೇದಾನ್ತೋಕ್ತಿಪ್ರಮಾಣತಃ ॥ (೧೫೫) (ಹೊರಗಿನ ವಿಷಯಗಳೆಂಬ ಪ್ರಮೇಯಗಳಿಗೆ ಯಾವದು ಫಲವೋ ಆ ಚೈತನ್ಯವೇ ವೇದಾಂತೋಕ್ತಿಪ್ರಮಾಣದಿಂದ ಪ್ರಮೇಯವೆನಿಸುವದು). ಮುಂದೆ ೯೮ನೆಯ ಶ್ಲೋಕದಲ್ಲಿಯೂ ಆತ್ಮನೇ ಅನುಭವರೂಪವಾದ ಫಲವೆಂದಿದೆ. ಆದ್ದರಿಂದ ಗೃಹೀತಿತತ್ಫಲವೆಂಬುದೆರಡೂ ಒಂದನ್ನೇ ಹೇಳುತ್ತವೆ ಎಂದು ಕಲ್ಪಿಸಬೇಕು ; 'ಗೃಹೀತಿಫಲ' ಎಂದೋ 'ಗೃಹೀತಿ' ಎಂದಿಷ್ಟೇ ಎಂದೋ ಪಾಠವನ್ನಾದರೂ ಕಲ್ಪಿಸಬೇಕು.

ಅನ್ವಯವ್ಯತಿರೇಕಗಳಿಂದ ಅನಾತ್ಮವೆಂದು ನಿರ್ಮಾಲ್ಯದಂತೆ (ಅದನ್ನು) ಆಚೆಗೆಸೆದದ್ದಾಯಿತಷ್ಟೆ ; ಆದರೂ ಅದು ಸಾಂಖ್ಯರ(ಮತದಲ್ಲಿ ಹೇಳಿರು)ವಂತೆ ಸ್ವತಃಸಿದ್ಧನಾದ ಆತ್ಮವ್ಯತಿರಿಕ್ತವಾದ[1] ಅನಾತ್ಮಪ್ರಕೃತಿಯೆಂಬ ಪದಾರ್ಥವನ್ನು ಆಶ್ರಯಿಸಿಕೊಂಡಿರುವದಲ್ಲ, ಮತ್ತೇನೆಂದರೆ ಸ್ವತಃಸಿದ್ಧವಾಗಿ ಹುಟ್ಟದೆ ಹೊಂದದೆ ಇರುವ ಕೂಟಸ್ಥಾತ್ಮಚೈತನ್ಯಮಾತ್ರಶರೀರದಲ್ಲಿ[2] ಪ್ರತಿಬಿಂಬಿತವಾಗಿರುವ[3] ಅವಿಚಾರಿತಸಿದ್ಧವಾದ[4] ಆತ್ಮಾನವಬೋಧಮಾತ್ರವನ್ನೇ ಆಶ್ರಯಿಸಿರತಕ್ಕದ್ದೇ[5] (ಆಗಿದೆ) ; ಏಕೆಂದರೆ ಅದಕ್ಕೆ ಆ (ಅನವಬೋಧವೇ) ಉಪಾದಾನವು[6]- ಎಂಬೀ ಅರ್ಥವನ್ನು ಗೊತ್ತುಪಡಿಸಿ ಹೇಳಬೇಕೆಂಬ ಇಚ್ಛೆಯಿಂದ (ಈ ಶ್ಲೋಕವನ್ನು) ಹೇಳುತ್ತಾರೆ :

೯೭. ಜ್ಞಾನವಿಲ್ಲದೆ ಅರ್ಥಗಳು ಇರುವದೇ ಇಲ್ಲ ; ಅವುಗಳಿಲ್ಲದಿದ್ದರೂ ಜ್ಞಾನವಿರುತ್ತದೆ. ಹೀಗೆಯೇ ಅನುಮಾನದಿಂದ ಬುದ್ಧಿಗಿಂತಲೂ ಬೇರೆಯಾದ ಜ್ಯೋತಿಯನ್ನು ವಿಂಗಡಿಸಿಕೊಳ್ಳಬೇಕು[7].

---

1. ಆತ್ಮನಿಗಿಂತ ಸ್ವತಂತ್ರವಾಗಿ ಬೇರೆಯಾದ.

2. ಚಿನ್ಮಾತ್ರಸ್ವರೂಪದಲ್ಲಿ. 3. ಹುಸಿತೋರಿಕೆಯಾಗಿ ತೋರಿಕೊಳ್ಳುವ.

4. ವಿಚಾರಮಾಡದೆ ಇರುವದರಿಂದ ಮಾತ್ರವೇ ಕಾಣುತ್ತಿರುವ ಎಂದರ್ಥ. ಚೈತನ್ಯಕ್ಕೆ ನಿಜವಾಗಿ ಅಜ್ಞಾನದ ಸಂಬಂಧವು ಎಂದಿಗೂ ಇಲ್ಲ. ಸ್ವತಃಸಿದ್ಧನೇ ಆಗಿರುವ ಆತ್ಮನಿಗೂ ತತ್ತ್ವಜ್ಞಾನಕ್ಕಿಂತ ಮೊದಲು ಅಜ್ಞಾನಸಂಬಂಧವು ಸ್ವಾನುಭವ ಸಿದ್ಧವಾಗಿರುತ್ತದೆ ಎಂಬುದನ್ನು ಬೃ.ವಾ.ದಲ್ಲಿಯೂ ಹೇಳಿದೆ. ತಸ್ಮಿನ್ನಪಹತಧ್ವಾನ್ತೇಽಪ್ಯವಿದ್ಯಾ ಸ್ವಾನುಭೂತಿತಃ । ಸ್ವಾನುಭೂತಿರ್ನ ವೇದ್ಮೀತಿ ಜ್ಞಾನೈಕಾತ್ಮಪ್ರಬೋಧತಃ ॥ (೧-೪-೨೧೬).

5. ಆತ್ಮನನ್ನು ಅರಿಯದ್ದೆಂಬ ಅಜ್ಞಾನದಿಂದ ಮಾತ್ರವೇ ತೋರತಕ್ಕದ್ದು.

6. ಅಜ್ಞಾನವೇ ಕಾರಣವು, ನಿಜವಾಗಿ ದ್ವೈತವಿಲ್ಲವೇ ಇಲ್ಲ.

7. ಘಟಜ್ಞಾನ, ಪಟಜ್ಞಾನ- ಎಂದು ಅರ್ಥಗಳು ಬೇರೆಬೇರೆಯಾದರೂ ಜ್ಞಾನವಿರುತ್ತದೆ, ಯಾವ ಅರ್ಥವೂ ಇಲ್ಲದಿದ್ದರೂ ಅವುಗಳ ಅಭಾವವನ್ನು ತಿಳಿಸುತ್ತಾ ಜ್ಞಾನವಿರುತ್ತದೆ. ಹೀಗೆಯೇ ಬುದ್ಧಿಯಿಲ್ಲದೆಯೂ ಚೈತನ್ಯಜ್ಯೋತಿಯಿರುತ್ತದೆ. ಆದರೆ ಜ್ಞಾನವಿಲ್ಲದೆ ಬಾಹ್ಯವಸ್ತುಸಿದ್ಧಿಯಿಲ್ಲ ; ಇದರಂತೆ ಚೈತನ್ಯಜ್ಯೋತಿಯಿಲ್ಲದೆ ಬುದ್ಧಿಸಿದ್ಧಿಯೂ ಇಲ್ಲ- ಎಂದು ಅನ್ವಯವ್ಯತಿರೇಕಗಳಿಂದ ಚೈತನ್ಯಜ್ಯೋತಿಯನ್ನು ವಿಂಗಡಿಸಿಕೊಳ್ಳಬೇಕು ಎಂದರ್ಥ.

(ಮೂಲ)

ಯಸ್ಮಾತ್ ಪ್ರಮಾಣಪ್ರಮೇಯವ್ಯವಹಾರ ಆತ್ಮಾನವಬೋಧಾಶ್ರಯ ಏವ ತಸ್ಮಾತ್ ಸಿದ್ಧಮಾತ್ಮನೋಽಪ್ರಮೇಯತ್ವಮ್ । ನೈವ ಹಿ ಕಾರ್ಯಂ ಸ್ವಕಾರಣಮತಿಲಙ್ಘ್ಯ ಅನ್ಯತ್ರಾಕಾರಕೇ ಆಸ್ಪದಮುಪನಿಬಧ್ನಾತಿ । ಅತ ಆಹ –

**ವ್ಯವಧೀಯನ್ತ ಏವಾಮೀ ಬುದ್ಧಿದೇಹಘಟಾದಯಃ ।**
**ಆತ್ಮತ್ವಾದಾತ್ಮನಃ ಕೇನ ವ್ಯವಧಾನಂ ಮನಾಗಪಿ ॥೯೮॥**

(ಅರ್ಥ)

ಪ್ರಮಾಣಪ್ರಮೇಯವ್ಯವಹಾರವು ಆತ್ಮನ ಅಜ್ಞಾನವನ್ನೇ ಆಶ್ರಯಿಸಿರುವದಷ್ಟೆ. ಆದ್ದರಿಂದ ಆತ್ಮನು ಅಪ್ರಮೇಯನೆಂದು ಸಿದ್ಧವಾಯಿತು[1]. ಏಕೆಂದರೆ ಕಾರ್ಯವು ತನ್ನ ಕಾರಣವನ್ನು ಮೀರಿ ಕಾರಕವಲ್ಲದ ಮತ್ತೊಂದರಲ್ಲಿ ಆಶ್ರಯವನ್ನು ಪಡೆಯಲೇ ಆರದು[2]. ಆದ್ದರಿಂದ (ಹೀಗೆಂದು) ಹೇಳುತ್ತಾರೆ :

೯೮. ಈ ಬುದ್ಧಿ, ದೇಹ, ಘಟ – ಮುಂತಾದವುಗಳು ವ್ಯವಹಿತವಾಗಿಯೇ ಇರುತ್ತವೆ. ಆತ್ಮನೇ ಆಗಿರುವದರಿಂದ ಆತ್ಮನಿಗೆ ಏತರಿಂದ ಇಷ್ಟಾದರೂ ವ್ಯವಧಾನವಾದೀತು[3] ?

---

1. ಪ್ರಮಾಣಪ್ರಮೇಯಗಳೆರಡೂ ಆತ್ಮಾಜ್ಞಾನದಿಂದ ತೋರತಕ್ಕವು. ಆದ್ದರಿಂದ ಮೊದಲೇ ಸಿದ್ಧನಾಗಿರುವ ಆತ್ಮನು ಅಪ್ರಮೇಯನೆಂದಾಯಿತು.

2. ಕಾರ್ಯವು ಯಾವಾಗಲೂ ತನ್ನ ಕಾರಣವನ್ನೇ ಆಶ್ರಯಿಸಿರುತ್ತದೆಯಾಗಿ ಅಜ್ಞಾನವನ್ನು ದಾಟಿ ಪ್ರಮಾಣಪ್ರಮೇಯವ್ಯವಹಾರವು ಕಾರಕಶೂನ್ಯನಾದ ಆತ್ಮನಲ್ಲಿರಲಾರದು.

3. ಬುದ್ಧಿಯು ಅಜ್ಞಾನಕೃತವಾದ್ದರಿಂದ ಅದಕ್ಕೆ ಅಜ್ಞಾನವು ವ್ಯವಧಾನವು ; ದೇಹಕ್ಕೆ ಬುದ್ಧೀಂದ್ರಿಯಗಳು ವ್ಯವಧಾನವು ; ಘಟಾದಿಗಳಂತೂ ಇನ್ನೂ ಹೊರಗಿನವು, ಅವು ಬುದ್ಧೀಂದ್ರಿಯದೇಹಗಳನ್ನಪೇಕ್ಷಿಸಿ ಸಿದ್ಧವಾಗುವವು. ಬುದ್ಧ್ಯಾದಿಗಳಿಗೆ ನೇರಾಗಿ ಆತ್ಮನ ಸಂಬಂಧವಿಲ್ಲವಾಗಿ ಅವು ಅಜ್ಞಾತವಾದ ಪ್ರಮೇಯವಾಗಬಹುದು. ಆತ್ಮನು ಆತ್ಮನಿಗೆ ಏತರಿಂದಲೂ ವ್ಯವಹಿತನಾಗಿಲ್ಲ ; ಆದ್ದರಿಂದ ಅವನು ಪ್ರಮೇಯವಾಗಲಾರನು.

(ಮೂಲ)

ಸ್ವಯಮನವಗಮಾತ್ಮಕತ್ವಾತ್ । ಅನವಗಮಾತ್ಮಕತ್ವಂ ಚ ಮೋಹ-ಮಾತ್ರೋಪಾದಾನತ್ವಾತ್ –

ಪ್ರಮಾಣಮನ್ತರೇಣ್ಯೈಷಾಂ ಬುದ್ಧ್ಯಾದೀನಾಮಸಿದ್ಧತಾ ।
ಅನುಭೂತಿಫಲಾರ್ಥಿತ್ವಾದಾತ್ಮಾ ಜ್ಞಃ ಕಿಮಪೇಕ್ಷತೇ ॥೯೯॥

(ಅರ್ಥ)

(ಅವು) ತಾವೇ ಅಜ್ಞಾನರೂಪವಾಗಿರುವದರಿಂದ (ಪ್ರಮೇಯವಾಗಿರುತ್ತವೆ)[1]. ಅಜ್ಞಾನರೂಪವಾಗಿರುತ್ತವೆ ಎಂಬುದೂ ಮೋಹಮಾತ್ರವೇ (ಅವಕ್ಕೆ) ಉಪಾದಾನವಾಗಿರುವದರಿಂದ[2] :

೯೯. ಪ್ರಮಾಣವಿಲ್ಲದೆ ಈ ಬುದ್ಧ್ಯಾದಿಗಳಿಗೆ ಸಿದ್ಧಿಯಿಲ್ಲ ; ಏಕೆಂದರೆ (ಅವು ಸಿದ್ಧವಾಗುವದಕ್ಕೆ) ಅನುಭವವೆಂಬ ಫಲವನ್ನು ಬಯಸುತ್ತವೆ[3]. ಚೈತನ್ಯರೂಪನಾದ ಆತ್ಮನು (ಮತ್ತೆ ) ಏನನ್ನು ಬಯಸುತ್ತಾನೆ[4]?

---

1. ಅಜ್ಞಾತವಾಗಿರುವದನ್ನಲ್ಲವೆ, ಪ್ರಮೇಯವೆನ್ನಬೇಕು ? ಬುದ್ಧ್ಯಾದಿಗಳೆಲ್ಲವೂ ಅಜ್ಞಾತರೂಪವೇ ಆಗಿರುತ್ತವೆ.

2. ಅಜ್ಞಾನವೇ ಉಪಾದಾನವೆಂದದ್ದರಿಂದ ಅಜ್ಞಾನವೊಂದಲ್ಲದೆ ಅವುಗಳಲ್ಲಿ ಮತ್ತೇನೂ ತಿರುಳಿಲ್ಲವೆಂದಾಯಿತು. ಪೀಠಿಕೆಯನ್ನು ನೋಡಿ.

3. ಬುದ್ಧಿಯೇ ಮುಂತಾದವುಗಳ ವಿಷಯಕ್ಕೆ ಪ್ರಮಾಣದಿಂದ ಪ್ರಮಿತಿಯಾಗಬೇಕು ; ಪ್ರಮಿತಿಯೆಂಬ ಫಲವು ಅನುಭವರೂಪನಾದ ಆತ್ಮನೇ. ೯೭ನೆಯ ಶ್ಲೋಕದ ಅವತರಣಿಕೆಯಲ್ಲಿ 'ತತ್ಫಲ' ಎಂಬುದರ ಟಿಪ್ಪಣಿಯನ್ನು ನೋಡಿ.

4. ಆತ್ಮನನ್ನು ಅರಿಯುವಾಗ ಜ್ಞೇಯ, ಜ್ಞಾತೃ, ಜ್ಞಾನರೂಪಕರಣ- ಯಾವದೂ ಬೇಕಿರುವದಿಲ್ಲ ; ಅನುಭವರೂಪಫಲವೂ ಬೇಕಿಲ್ಲ. ಏಕೆಂದರೆ ತಾನೇ ಫಲರೂಪ-ನಾಗಿರುತ್ತಾನೆ. ಬೃ.ವಾ.ದಲ್ಲಿ ಈ ಶ್ಲೋಕವಿದೆ ; ಆತ್ಮನೈವಾತ್ಮವಿಜ್ಞಾನಂ ಜ್ಞೇಯಜ್ಞಾತ್ರಾದಿ-ವರ್ಜಿತಮ್ । ಸ್ವಯಮೇವ ಫಲಾತ್ಮತ್ವಾತ್ ಫಲಂ ಚಾಸ್ಮಾನ್ನಭಿದ್ಯತೇ ॥ (ಬೃ. ವಾ. ೧-೪-೧೪೦೧).

## ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸವು ಅವಿದ್ಯಾನಿಮಿತ್ತ

(ಮೂಲ)

ವಕ್ಷ್ಯಮಾಣೇತರೇತರಾಧ್ಯಾಸಸಿದ್ಧ್ಯರ್ಥಮ್ ಉಕ್ತವ್ಯತಿರೇಕಾನುವಾದಃ–

ಘಟಬುದ್ಧೇರ್ಘಟಾಚ್ಚಾರ್ಥಾದ್ದ್ರಷ್ಟುರ್ಯದ್ವದ್ವಿಭಿನ್ನತಾ ।
ಅಹಂಬುದ್ಧೇರಹಂಗಮ್ಯಾದ್ದುಃಖಿನಶ್ಚ ತಥಾ ದೃಶೇಃ ॥೧೦೦॥

(ಅರ್ಥ)

ಮುಂದೆ ಹೇಳಲಿರುವ ಅನ್ಯೋನ್ಯಾಧ್ಯಾಸವು ಸಿದ್ಧಿಯಾಗುವುದಕ್ಕಾಗಿ ಹಿಂದೆ ಹೇಳಿದ ವ್ಯತಿರೇಕವನ್ನು ಅನುವಾದ (ಮಾಡಿಕೊಳ್ಳುತ್ತಾರೆ) :

೧೦೦. ಘಟಬುದ್ಧಿಗಿಂತಲೂ ಘಟವೆಂಬ ಅರ್ಥಕ್ಕಿಂತಲೂ ದ್ರಷ್ಟೃವು ಹೇಗೆ ಬೇರೆಯಾಗಿರುತ್ತಾನೋ ಹಾಗೆಯೇ ಅಹಂಬುದ್ಧಿಗಿಂತಲೂ ಅಹಂ ಪ್ರತ್ಯಯಗಮ್ಯನಾದ ದುಃಖಿಗಿಂತಲೂ ದೃಗ್ರೂಪನಾದ (ಆತ್ಮನು ಬೇರೆ ಯಾಗಿರುತ್ತಾನೆ).

(ಮೂಲ)

ಏವಮೇತಯೋರಾತ್ಮಾನಾತ್ಮನೋಃ ಸ್ವತಃ ಪರತಃ ಸಿದ್ಧಯೋ ರ್ಲೌಕಿಕರಜ್ಜುಸರ್ಪಾಧ್ಯಾರೋಪವತ್ ಅವಿದ್ಯೋಪಾಶ್ರಯ ಏವ ಇತರೇ ತರಾಧ್ಯಾರೋಪ ಇತ್ಯೇತದಾಹ–

ಅಭ್ರಯಾನಂ ಯಥಾ ಮೋಹಾಚ್ಛಶಭೃತ್ಯಧ್ಯವಸ್ಯತಿ ।
ಸುಖಿತ್ವಾದೀನ್ ಧಿಯೋ ಧರ್ಮಾಂಸ್ತದ್ವದಾತ್ಮನಿ ಮನ್ಯತೇ ॥೧೦೧॥

ದಗ್ಧೃತ್ವಂ ಚ ಯಥಾ ವಹ್ನೇರಯಸೋ ಮನ್ಯತೇ ಕುಧೀಃ ।
ಚೈತನ್ಯಂ ತದ್ವದಾತ್ಮೀಯಂ ಮೋಹಾತ್ ಕರ್ತರಿ ಮನ್ಯತೇ ॥೧೦೨॥

(ಅರ್ಥ)

ಹೀಗೆ (ಕ್ರಮವಾಗಿ) ಸ್ವತಃಸಿದ್ಧವೂ ಪರತಃಸಿದ್ಧವೂ ಆಗಿರುವ ಈ ಆತ್ಮಾನಾತ್ಮಗಳಿಗೆ[1] ಲೋಕದಲ್ಲಿ ಹಗ್ಗ, ಹಾವು – ಇವುಗಳಿಗಾಗುವ ಅಧ್ಯಾರೋಪದಂತೆ[2] ಅವಿದ್ಯಾಶ್ರಯವಾಗಿಯೇ ಒಂದರಲ್ಲೊಂದರ ಅಧ್ಯಾರೋಪವಾಗಿರುತ್ತದೆ[3] ಎಂಬುದನ್ನು ಹೇಳುತ್ತಾರೆ :

೧೦೧-೧೦೨. ಹೇಗೆ ಮೋಡದ ಓಡಾಟವನ್ನು ಮೋಹದಿಂದ ಚಂದ್ರನಲ್ಲಿ ನಿಶ್ಚಯಿಸುತ್ತಾರೋ, ಹಾಗೆ ಬುದ್ಧಿಯ ಧರ್ಮಗಳಾದ ಸುಖಿತ್ವಾದಿಗಳನ್ನು ಆತ್ಮನಲ್ಲಿವೆ ಎಂದು ತಿಳಿಯುತ್ತಾರೆ. ಮತ್ತು ಬೆಂಕಿಯ ಸುಡುವಿಕೆಯನ್ನು ಕುಬುದ್ಧಿಯಾದವನು ಹೇಗೆ ಕಬ್ಬಿಣದ್ದೆಂದು ತಿಳಿದುಕೊಳ್ಳುತ್ತಾನೋ ಅದರಂತೆ ಆತ್ಮನ ಚೈತನ್ಯವನ್ನು ಮೋಹದಿಂದ ಅಹಂಕಾರದಲ್ಲಿದೆ ಎಂದು ತಿಳಿಯುತ್ತಾನೆ.

## ಆತ್ಮಜ್ಞಾನದಿಂದ ಅವಿದ್ಯೆಯ ನಿವೃತ್ತಿ

(ಮೂಲ)

ಸರ್ವ ಏವಾಯಮ್ ಆತ್ಮಾನಾತ್ಮವಿಭಾಗಃ ಪ್ರತ್ಯಕ್ಷಾದಿಪ್ರಮಾಣವರ್ತ್ಮನ್ಯನುಪತಿತೋಽವಿದ್ಯೋತ್ಸಙ್ಗವರ್ತ್ಯೇವ ನ ಪರಮಾತ್ಮವ್ಯಪಾಶ್ರಯಃ । ಅಸ್ಯಾಶ್ಚ ಅವಿದ್ಯಾಯಾಃ ಸರ್ವಾನರ್ಥಹೇತೋಃ ಕುತೋ ನಿವೃತ್ತಿರಿತಿ ಚೇತ್ ತದಾಹ –

**ದುಃಖರಾಶೇರ್ವಿಚಿತ್ರಸ್ಯ ಸೇಯಂ ಭ್ರಾನ್ತಿಶ್ಚಿರನ್ತನೀ ।**
**ಮೂಲಂ ಸಂಸಾರವೃಕ್ಷಸ್ಯ ತದ್ಬಾಧಸ್ತತ್ತ್ವದರ್ಶನಾತ್ ॥೧೦೩॥**

---

1. ಆತ್ಮನು ಸ್ವತಃಸಿದ್ಧ, ಅನಾತ್ಮವು ಆತ್ಮನಿಂದ ಸಿದ್ಧ.

2. ಹಗ್ಗವು ತಾನೇ ಇರುತ್ತದೆ. ಅದನ್ನರಿಯದ್ದರಿಂದ ಅದರಲ್ಲಿ ಹಾವು ಅಧ್ಯಸ್ತವಾಗಿರುತ್ತದೆ. ಆ ಹಾವಿನಲ್ಲಿ ಹಗ್ಗದ ಇದಮಂಶವನ್ನು ಅಧ್ಯಾಸಮಾಡಿ 'ಇದು ಹಾವು' ಎಂದು ವ್ಯವಹರಿಸುತ್ತಾರೆ. ಅದರಂತೆ.

3. ಆತ್ಮನನ್ನರಿಯದ್ದರಿಂದಲೇ ಆತ್ಮನನ್ನು ಅನಾತ್ಮವೆಂದೂ ಅನಾತ್ಮವಾದ ಅಹಂಕಾರಾದಿಗಳನ್ನು ಚೈತನ್ಯವೆಂದೂ ಬಗೆಯುತ್ತಾರೆ.

(ಅರ್ಥ)

ಈ ಆತ್ಮಾನಾತ್ಮವಿಭಾಗವೆಲ್ಲ ಪ್ರತ್ಯಕ್ಷಾದಿಪ್ರಮಾಣಗಳ ಮಾರ್ಗದಲ್ಲಿ ಬಿದ್ದಿರತಕ್ಕದ್ದಾದ್ದರಿಂದ ಅವಿದ್ಯೆಯ ಉಡಿಯಲ್ಲಿರತಕ್ಕದ್ದೇ ಹೊರತು ಪರಮಾತ್ಮನನ್ನು ಆಶ್ರಯಿಸಿರುವದಿಲ್ಲ[1]. ಈ ಸರ್ವಾನರ್ಥಗಳಿಗೂ ಹೇತುವಾದ ಅವಿದ್ಯೆಯ ನಿವೃತ್ತಿಯು ಏತರಿಂದ (ಆಗುವದು) ಎಂದರೆ, ಅದನ್ನು ಹೇಳುತ್ತಾರೆ :

೧೦೩. ಬಗೆಬಗೆಯ ದುಃಖರಾಶಿಯಾದ ಸಂಸಾರವೃಕ್ಷಕ್ಕೆ ಆ ಈ ಅನಾದಿಯಾದ ಭ್ರಾಂತಿಯೇ ಮೂಲವು. ಅದರ ನಾಶವು ತತ್ತ್ವಜ್ಞಾನದಿಂದ (ಆಗುತ್ತದೆ).

(ಮೂಲ)

**ತದ್ಬಾಧಸ್ತತ್ತ್ವದರ್ಶನಾತ್ ಇತಿ ಕುತಃ ಸಂಭಾವ್ಯತ ಇತಿ ಚೇತ್ ಅತ ಆಹ । ಆಗೋಪಾಲಾವಿಪಾಲಪಣ್ಡಿತಮ್ ಇಯಮೇವ ಪ್ರಸಿದ್ಧಿಃ –**

**ಅಪ್ರಮೋತ್ಥಂ ಪ್ರಮೋತ್ಥೇನ ಜ್ಞಾನಂ ಜ್ಞಾನೇನ ಬಾಧ್ಯತೇ ।**
**ಅಹಿರಜ್ಜ್ವಾದಿವದ್ ಬಾಧೋ ದೇಹಾದ್ಯಾತ್ಮಮತೇಸ್ತಥಾ ॥೧೦೪॥**

(ಅರ್ಥ)

'ಅದರ ಬಾಧವು ತತ್ತ್ವಜ್ಞಾನದಿಂದ' ಎಂದು ಏತರಿಂದ ಸಂಭಾವಿತವಾಗಿದೆ ? ಎಂದರೆ ಅದಕ್ಕೆ ಹೇಳುತ್ತಾರೆ. (ಏಕೆಂದರೆ) ದನಕಾಯುವವರು ಕುರಿಕಾಯುವವರು ಮೊದಲಾಗಿ ಪಂಡಿತರವರೆಗೂ ಇದೇ ಪ್ರಸಿದ್ಧಿಯಿದೆ :

೧೦೪. ಅಪ್ರಮೆಯಿಂದುಂಟಾದ (ಮಿಥ್ಯಾ)ಜ್ಞಾನವು ಪ್ರಮೆಯಿಂದಾಗಿರುವ (ಸರಿಯಾದ) ಜ್ಞಾನದಿಂದ ಅಹಿರಜ್ಜ್ವಾದಿಗಳಂತೆ[2] ಬಾಧಿತವಾಗುತ್ತದೆ. ದೇಹಾದಿಗಳಲ್ಲಿರುವ ಆತ್ಮಬುದ್ಧಿಯೂ ಹಾಗೆಯೇ[3].

---

1. ಆತ್ಮಾನಾತ್ಮವಿಭಾಗವು ಅಜ್ಞಾತಾತ್ಮನಿಗೆ ಮಾತ್ರ ಗೋಚರವಾಗುವದರಿಂದ ಆತ್ಮನಿಗೆ ಸಂಬಂಧಪಟ್ಟದ್ದಲ್ಲ. ಬೃ.ವಾ. ೧-೪-೭೨೪.

2. ಹಾವೆಂಬ ಮಿಥ್ಯಾಜ್ಞಾನವು ಅಜ್ಞಾನದಿಂದಾಗಿರುವದರಿಂದ ಇದು ಹಗ್ಗವೆಂಬ ಸರಿಯಾದ ತಿಳಿವಳಿಕೆಯಿಂದಾದ ಸಮ್ಯಗ್ಜ್ಞಾನದಿಂದ ಬಾಧಿತವಾಗುವಂತೆ.

3. ದೇಹಾದಿಗಳಲ್ಲಿರುವ ಆತ್ಮಬುದ್ಧಿಯು ನಿಜವಾದ ಆತ್ಮನನ್ನು ಅರಿಯದ್ದರಿಂದ ಆಗಿರುವ ಮಿಥ್ಯಾಜ್ಞಾನವು. ಆತ್ಮನನ್ನೇ ಆತ್ಮನೆಂದು ಅರಿತುಕೊಳ್ಳುವದರಿಂದಾಗುವ ಸಮ್ಯಗ್ಜ್ಞಾನದಿಂದ ಅದು ಬಾಧಿತವಾಗುವದು ಯುಕ್ತ .

(ಮೂಲ)

**ಲೌಕಿಕಪ್ರಮೇಯವೈಲಕ್ಷಣ್ಯಾತ್ ಆತ್ಮನೋ ನೇಹಾನಧಿಗತಾಧಿಗಮಃ ಪ್ರಮಾಣಫಲಮ್ –**

**ಅವಿದ್ಯಾನಾಶಮಾತ್ರಂ ತು ಫಲಮಿತ್ಯುಪಚರ್ಯತೇ ।**
**ನಾಜ್ಞಾತಜ್ಞಾಪನಂ ನ್ಯಾಯ್ಯಮವಗತ್ಯೇಕರೂಪತಃ ॥೧೦೫॥**

(ಅರ್ಥ)

ಲೌಕಿಕಪ್ರಮೇಯಗಳಿಗೂ ಆತ್ಮನಿಗೂ ವೈಲಕ್ಷಣ್ಯವಿರುವದರಿಂದ ಇಲ್ಲಿ ತಿಳಿಯದೆ ಇದ್ದದ್ದನ್ನು ತಿಳಿದುಕೊಳ್ಳುವದೆಂಬುದು ಪ್ರಮಾಣಫಲವಲ್ಲ :

೧೦೫. ಅವಿದ್ಯೆಯ ನಾಶವೊಂದನ್ನೇ (ಇಲ್ಲಿ) ಫಲವೆಂದು ಉಪಚಾರಕ್ಕೆ ಕರೆದಿರುತ್ತದೆ. ಅವಗತಿ ಎಂಬ ಒಂದೇ ರೂಪದಲ್ಲಿರುವದರಿಂದ ಅರಿಯದೆ ಇದ್ದದ್ದನ್ನು ತಿಳಿಸಿಕೊಡುವದೆಂಬುದು (ಫಲವೆಂಬುದು) ಯುಕ್ತವಲ್ಲ[1].

(ಮೂಲ)

**ಯಸ್ಮಾದಾತ್ಮಾನವಬೋಧಮಾತ್ರೋಪಾದಾನಾಃ ಪ್ರಮಾತ್ರಾದಯಃ, ತಸ್ಮಾತ್ –**

**ನ ವಿದನ್ತ್ಯಾತ್ಮನಃ ಸತ್ತಾಂ ದ್ರಷ್ಟೃದರ್ಶನಗೋಚರಾಃ ।**
**ನ ಚಾನ್ಯೋನ್ಯಮತೋಽಮೀಷಾಂ ಜ್ಞೇಯತ್ವಂ ಭಿನ್ನಸಾಧನಮ್ ॥೧೦೬॥**

1. ಮಿಕ್ಕ ವಸ್ತುಗಳು ಮೊದಲು ಅಜ್ಞಾತವಾಗಿರುತ್ತವೆ ; ಆಮೇಲೆ ಅವಗತಿ ರೂಪವಾದ ಫಲದಿಂದ ವ್ಯಾಪ್ತವಾಗಿ ಜ್ಞಾತವೆನಿಸುತ್ತವೆ. ಆದರೆ ಆತ್ಮನು ಮೊದಲೂ ಅವಗತಿಯ ರೂಪದಿಂದಲೇ ಇರುತ್ತಾನೆ ; ಆದ್ದರಿಂದ ಅವನಲ್ಲಿ ಫಲದ ಅಪೇಕ್ಷೆಯಿಲ್ಲ. ೯೯ನೆಯ ಶ್ಲೋಕವನ್ನೂ 'ಅನುಭೂತಿಫಲಾರ್ಥಿತ್ವಾತ್' ಎಂಬುದರ ಟಿಪ್ಪಣಿಯನ್ನೂ ನೋಡಿರಿ. ಆದ್ದರಿಂದ ಆತ್ಮನ ವಿಷಯದಲ್ಲಿ ಅಜ್ಞಾನನಾಶವೇ ಫಲವೆನ್ನಬೇಕು ಎಂದು ಅಭಿಪ್ರಾಯ. ನಿಜವಾಗಿ ಘಟಾದಿಗಳ ಅರಿವೆಂಬುದೂ ಅಜ್ಞಾನನಾಶವೇ, ಜ್ಞಾತತ್ವವೆಂಬ ವಿಶೇಷವೇನೂ ಅವುಗಳಲ್ಲಿ ಆಗುವದಿಲ್ಲ ಎಂದು ಮಾಂ.ಭಾ. ೭ರಲ್ಲಿ ಹೇಳಿದೆ. ಇಲ್ಲಿ ಮೀಮಾಂಸಕಮತವನ್ನು ಒಪ್ಪಿ ವಾರ್ತಿಕಕಾರರು ಹೀಗೆ ಹೇಳಿರುತ್ತಾರೆಂದು ತಿಳಿಯಬೇಕು.

(ಅರ್ಥ)

ಪ್ರಮಾತೃವೇ ಮುಂತಾದವುಗಳಿಗೆ ಆತ್ಮಾಜ್ಞಾನವೇ ಉಪಾದಾನವಾಗಿರುವದಷ್ಟೆ, ಆದ್ದರಿಂದ :

೧೦೬. ದ್ರಷ್ಟೃ, ದರ್ಶನ, ಗೋಚರ– ಇವು ತಮ್ಮ ಸತ್ತೆಯನ್ನು (ತಾವೇ) ಅರಿತುಕೊಳ್ಳಲಾರವು, ಒಂದನ್ನೊಂದೂ (ಅರಿತುಕೊಳ್ಳಲಾರವು). ಆದ್ದರಿಂದ ಇವುಗಳ ಜ್ಞೇಯತ್ವವು ಮತ್ತೊಂದರಿಂದ ಸಿದ್ಧಿಯಾಗತಕ್ಕದ್ದು[1].

## ಶೋಧಿತ ತ್ವಂಪದಾರ್ಥವು ಅದ್ವಿತೀಯವು

(ಮೂಲ)

ದ್ರಷ್ಟ್ರಾದೇರಸಾಧಾರಣರೂಪಜ್ಞಾಪನಾಯ ಆಹ –

**ಬಾಹ್ಯ ಆಕಾರವಾನ್ ಗ್ರಾಹ್ಯೋ ಗ್ರಹಣಂ ನಿಶ್ಚಯಾದಿಮತ್ ।**
**ಅನ್ವಯ್ಯಹಮಿತಿ ಜ್ಞೇಯಃ ಸಾಕ್ಷೀ ತ್ವಾತ್ಮಾ ಧ್ರುವಃ ಸದಾ ॥೧೦೭॥**

(ಅರ್ಥ)

ದ್ರಷ್ಟೃವೇ ಮುಂತಾದವುಗಳ ವಿಶೇಷರೂಪವನ್ನು ತಿಳಿಸುವದಕ್ಕೆ ಹೇಳುತ್ತಾರೆ :

೧೦೭. ಹೊರಗೆ ಆಕಾರವುಳ್ಳದ್ದು ಗ್ರಾಹ್ಯವು, ಗೊತ್ತುಪಡಿಸುವದೇ ಮುಂತಾದ (ವೃತ್ತಿ)ಗಳುಳ್ಳದ್ದು ಗ್ರಹಣವು, (ಇವುಗಳಲ್ಲಿ) ಅನ್ವಯಿಯಾಗಿರುವದು ನಾನೆಂಬ ಗ್ರಹೀತೃ. (ಇವುಗಳಲ್ಲಿ) ಸಾಕ್ಷಿಯಾಗಿ ಯಾವಾಗಲೂ ಸ್ಥಿರನಾಗಿರುವವನೇ ಆತ್ಮನು – ಎಂದು ತಿಳಿಯಬೇಕು[2].

---

1. ಅಜ್ಞಾನದಿಂದಾಗಿರುವದರಿಂದ ಅವು ತಮ್ಮನ್ನಾಗಲಿ ಮತ್ತೊಂದನ್ನಾಗಲಿ ಅರಿಯಲಾರವು ; ಕನಸಿನಲ್ಲಿ ಕಾಣುವ ಪುರುಷರೂ ವಸ್ತುಗಳೂ ಒಂದನ್ನೊಂದು ಅರಿಯದಿರುವಂತೆ – ಎಂದು ಇಲ್ಲಿ ದೃಷ್ಟಾಂತವನ್ನು ಕೊಡಬಹುದು.

2. ಸಾಮಾನ್ಯವಿಶೇಷರೂಪದಿಂದ ಕಾಣಿಸುವದು ಗ್ರಾಹ್ಯ ; ನಿಶ್ಚಯಸ್ಮರಣಸಂಶಯಾದಿರೂಪಗಳಿಂದ ತೋರುವದು ಗ್ರಹಣ ; ನಾನು ಅರಿತೆನು, ಸ್ಮರಿಸಿದೆನು- ಎಂದು ಮುಂತಾಗಿ ನಿಶ್ಚಯಾದಿಗಳಲ್ಲಿ ಅನುಗತನಾಗಿರುವ ಅಹಂಕಾರವೇ ಗೃಹೀತೃ. ಈ ಪ್ರಮಾತೃಪ್ರಮಾಣಪ್ರಮೇಯಗಳು ತೋರಿದರೂ ತೋರದಿದ್ದರೂ ಯಾವಾಗಲೂ ಎಲ್ಲಕ್ಕೂ ಸಾಕ್ಷಿಯಾಗಿ ಕೂಟಸ್ಥನಾಗಿರುವವನೇ ಆತ್ಮನು.

(ಮೂಲ)

ಸರ್ವಕಾರಕಕ್ರಿಯಾಫಲವಿಭಾಗಾತ್ಮಕಸಂಸಾರಶೂನ್ಯ ಆತ್ಮಾ[1] ಕಾರಕ ಕ್ರಿಯಾಫಲವಿಭಾಗಸಾಕ್ಷಿತ್ವಾದಾತ್ಮನಃ । ತದಾಹ –

**ಗ್ರಾಹಕಗ್ರಹಣಗ್ರಾಹ್ಯವಿಭಾಗೇ ಯೋಽವಿಭಾಗವಾನ್ ।**
**ಹಾನೋಪಾದಾನಯೋಃ ಸಾಕ್ಷೀ ಹಾನೋಪಾದಾನವರ್ಜಿತಃ ॥**

(ಅರ್ಥ)

ಯಾವ ಕಾರಕಕ್ರಿಯಾಫಲವಿಭಾಗರೂಪವಾದ ಸಂಸಾರವೂ ಆತ್ಮನ ನಲ್ಲಿಲ್ಲ[2]. ಏಕೆಂದರೆ ಆತ್ಮನು ಕಾರಕಕ್ರಿಯಾಫಲವಿಭಾಗಕ್ಕೆ ಸಾಕ್ಷಿಯಾಕಿರುತ್ತಾನೆ. ಅದನ್ನು ಹೇಳುತ್ತಾರೆ :

೧೦೮. ಗ್ರಾಹಕ, ಗ್ರಹಣ, ಗ್ರಾಹ್ಯ– ಎಂಬ ವಿಭಾಗವಿರುವಲ್ಲಿ ಯಾವನು (ಯಾವ) ವಿಭಾಗವೂ ಇಲ್ಲದೆ ಇರುವನೋ ಅವನು ಹಾನೋಪಾದಾನಗಳಿಗೆ ಸಾಕ್ಷಿಯಾಗಿರುವದರಿಂದ ಹಾನೋಪಾದಾನಗಳಿಲ್ಲದವನು[3].

(ಮೂಲ)

ಗ್ರಾಹಕಾದಿನಿಷ್ಠೈವ ಗ್ರಾಹಕಾದಿಭಾವಾಭಾವವಿಭಾಗಸಿದ್ಧಿಃ ಕಸ್ಮಾನ್ನೇತಿ ಚೇತ್ ತದಾಹ –

**ಸ್ವಸಾಧನಂ ಸ್ವಯಂ ನಷ್ಟೋ ನ ನಾಶಂ ವೇತ್ತ್ಯಭಾವತಃ ।**
**ಅತ ಏವ ನ ಚಾನ್ಯೇಷಾಮತೋಽಸೌ ಭಿನ್ನಸಾಕ್ಷಿಕಃ ॥೧೦೯॥**

(ಅರ್ಥ)

ಗ್ರಾಹಕಾದಿಭಾವಾಭಾವಗಳ ಸಿದ್ಧಿಯು ಗ್ರಾಹಕಾದಿಗಳಲ್ಲಿಯೇ ಇರುವ ದೆಂದು[4] ಏತಕ್ಕಾಗಬಾರದು - ಎಂದರೆ ಅದನ್ನು ಹೇಳುತ್ತಾರೆ :

---

1. ಇಲ್ಲಿಂದ ಮುಂದೆ ಒಂದು ಇತಿಯು ಹೆಚ್ಚಾಗಿದೆ ; ಅದಿದ್ದರೆ ''ಸಿಧ್ಯತಿ'' ಎಂದು ಅಧ್ಯಾಹಾರಮಾಡಿಕೊಂಡು ಕ್ಲೇಶದಿಂದ ಅನ್ವಯಮಾಡಿಕೊಳ್ಳಬೇಕು.

2. ಪ್ರಮಾತೃತ್ವಾದಿ ವಿಭಾಗದಂತೆ ಕಾರಕಾದಿವಿಭಾಗವೂ ಇಲ್ಲ.

3. ಗ್ರಾಹಕಾದಿಗಳು ಇಲ್ಲದಿದ್ದಾಗ ಸುಷುಪ್ತ್ಯಾದಿಗಳಲ್ಲಿ ಅವುಗಳ ಹಾನಿ, ಅವುಗಳಿದ್ದಾಗ ಅವುಗಳ ಉಪಾದಾನ- ಇವೆರಡಕ್ಕೂ ಸಾಕ್ಷಿಯಾಗಿರುವದರಿಂದ ಆತ್ಮನಿಗೆ ಹಾನೋ-ಪಾದಾನಗಳಿಲ್ಲ.

4. ಗ್ರಾಹಕಾದಿಗಳು ಇರುವದು, ಇಲ್ಲದ್ದು- ಇವೆರಡನ್ನೂ ಅವೇ ಅರಿತುಕೊಳ್ಳು ತ್ತವೆಯೆಂದು ಏತಕ್ಕೆ ಹೇಳಬಾರದು ?- ಎಂದು ಆಕ್ಷೇಪ.

೧೦೯. ತನ್ನ ಸಿದ್ಧಿಯನ್ನು ತಾನೇ (ಅರಿಯಲಾರದು), (ತಾನು) ನಷ್ಟವಾದರೆ (ತನ್ನ)ನಾಶವನ್ನೂ ಅರಿಯಲಾರದು ; ಏಕೆಂದರೆ (ತಾನೇ) ಇರುವದಿಲ್ಲ[1]. ಆದ್ದರಿಂದಲೇ ಮತ್ತೊಬ್ಬರ (ಸಿದ್ಧಿಯನ್ನಾಗಲಿ ನಾಶವನ್ನಾಗಲಿ) ಅರಿಯಲಾರದು. ಆದ್ದರಿಂದ ಅದು ಮತ್ತೊಂದರಿಂದ ಅರಿಯಲ್ಪಡಬೇಕು[2].

(ಮೂಲ)

ಗ್ರಾಹಕಾದೇರನ್ಯಸಾಕ್ಷಿಪೂರ್ವಕತ್ವಸಿದ್ಧೇಃ ಸ್ವಸಾಕ್ಷಿಣೋಽಪಿ ಅನ್ಯಸಾಕ್ಷಿಪೂರ್ವಕತ್ವಾತ್ ಅನವಸ್ಥಾ ಇತಿ ಚೇತ್ ತನ್ನ । ಸಾಕ್ಷಿಣೋ ವ್ಯತಿರಿಕ್ತಹೇತ್ವನಪೇಕ್ಷತ್ವಾತ್ । ಅತ ಆಹ –

**ಧೀವನ್ನಾಪೇಕ್ಷತೇ ಸಿದ್ಧಿಮಾತ್ಮಾನ್ಯಸ್ಮಾದವಿಕ್ರಿಯಃ ।**
**ನಿರಪೇಕ್ಷಮಪೇಕ್ಷ್ಯೈವ ಸಿಧ್ಯನ್ತ್ಯನ್ಯೇ ನ ತು ಸ್ವಯಮ್ ॥೧೧೦॥**

(ಅರ್ಥ)

ಗ್ರಾಹಕವೇ ಮುಂತಾದದ್ದಕ್ಕೆ ಮತ್ತೊಂದು ಸಾಕ್ಷಿಯು ಮೊದಲಿರಬೇಕೆಂದು ಸಿದ್ಧವಾಗಿರುವದರಿಂದ ಅದರ ಸಾಕ್ಷಿಯೂ ಮತ್ತೊಂದು ಸಾಕ್ಷಿಯಿಂದ (ಸಿದ್ಧವಾಗಬೇಕಾದುವದರಿಂದ)[4] ಅನವಸ್ಥಾ (ದೋಷವುಂಟಾಗುವದು) ಎಂದರೆ ಅದು ಸರಿಯಲ್ಲ. ಏಕೆಂದರೆ ಸಾಕ್ಷಿಯು (ತನಗಿಂತ) ಬೇರೆಯಾದ ಹೇತುವನ್ನು ಬಯಸುವದಿಲ್ಲ. ಆದ್ದರಿಂದ (ಹೀಗೆಂದು) ಹೇಳುತ್ತಾರೆ :

---

1. ತನ್ನ ಸಿದ್ಧಿಯನ್ನು ಎಂದರೆ ತನ್ನ ಭಾವವನ್ನು ತಾನೇ ನೋಡಲಾರದು, ಏಕೆಂದರೆ ಸಿದ್ಧಿಗೆ ಪೂರ್ವದಲ್ಲಿ ತಾನಿರುವದಿಲ್ಲ ; ತನ್ನ ನಾಶವನ್ನೂ ತಾನು ನೋಡಲಾರದು, ಏಕೆಂದರೆ ನಾಶವಾದಮೇಲೆ ತಾನು ಇರುವದಿಲ್ಲ.

2. ಯಾವಾಗಲೂ ಇರುವದಿಲ್ಲವಾದ್ದರಿಂದಲೇ.

3. ಯಾವದು ಮತ್ತೊಂದರ ಇರವನ್ನೂ ಅಭಾವವನ್ನೂ ನೋಡುವದಕ್ಕೆ ತಕ್ಕ ಕೂಟಸ್ಥನಿತ್ಯವಾಗಿರುವದೋ ಅದೇ ಇವೆಲ್ಲದರ ಸಿದ್ಧಿಗೆ ಬೇಕು.

4. ಗ್ರಾಹಕಕ್ಕೆ ಸಿದ್ಧಿಯು ಸಾಕ್ಷಿಯಿಂದಾಗಬೇಕು, ಆದ್ದರಿಂದ ಸಿದ್ಧಿಗೆ ಸಾಕ್ಷಿಯೇ ಬೇಕೆಂದಾಯಿತು ; ಆದ್ದರಿಂದ ಸಾಕ್ಷಿಸಿದ್ಧಿಗೂ ಮತ್ತೊಬ್ಬ ಸಾಕ್ಷಿ ಬೇಕು- ಎಂದು ಅನುಮಾನಿಸಬಹುದು ಎಂದು ಭಾವ.

೧೧೦. ನಿರ್ವಿಕಾರನಾದ ಆತ್ಮನು ಬುದ್ಧಿಯಂತೆ ಮತ್ತೊಂದರಿಂದ ಸಿದ್ಧಿಯನ್ನು ಬಯಸುವದಿಲ್ಲ[1]. ನಿರಪೇಕ್ಷನಾದ (ಆತ್ಮನನ್ನು) ಬಯಸಿಯೇ ಮಿಕ್ಕವು ಸಿದ್ಧಿಯಾಗುವವೇ[2] ಹೊರತು ತಾವೇ (ಸಿದ್ಧವಾಗುವ)ದಿಲ್ಲ.

(ಮೂಲ)

ಯತೋ ಗ್ರಾಹಕಾದಿಷ್ವಾತ್ಮಭಾವೋಽವಿದ್ಯಾನಿಬನ್ಧನ ಏವ । ತಸ್ಮಾತ್ ಅನ್ವಯವ್ಯತಿರೇಕಾಭ್ಯಾಂ ವಿಭಜ್ಯಾನಾತ್ಮನಃ ಸ್ವಯಮ್ –

**ಉತ್ಪತ್ತಿಸ್ಥಿತಿನಾಶೇಷು ಯೋಽವಗತ್ಯೈವ ವರ್ತತೇ ।**
**ಜಗತೋಽವಿಕಾರಯಾವೇಹಿ ತಮಸ್ಮೀತಿ ನ ನಶ್ವರಮ್ ॥೧೧೧॥**

(ಅರ್ಥ)

ಗ್ರಾಹಕಾದಿಗಳಲ್ಲಿ ನಾನೆಂಬ ಬುದ್ಧಿಯು ಅವಿದ್ಯಾನಿಮಿತ್ತವಾಗಿಯೇ (ಆಗುತ್ತಿರು)ವದಷ್ಟೆ ; ಆದ್ದರಿಂದ ಅನ್ವಯವ್ಯತಿರೇಕಗಳಮೂಲಕ[3] ಅನಾತ್ಮಗಳಿಂದ ವಿಂಗಡವಾಗಿ, ತಾನು[4] :

೧೧೧. ಜಗತ್ತಿನ ಉತ್ಪತ್ತಿಸ್ಥಿತಿನಾಶಗಳಾಗುತ್ತಿರುವಲ್ಲಿ ಯಾವನು ಅವಿಕಾರವಾದ ಅವಗತಿರೂಪದಿಂದಲೇ ಇದ್ದುಕೊಂಡಿರುತ್ತಾನೋ ಅವನೇ ನಾನೆಂದು ತಿಳಿದುಕೊ, ನಶ್ವರವಾದ (ಪ್ರಮಾತ್ರಾದಿಗಳೆಂದು ತಿಳಿಯ)ಬೇಡ.

---

1. ಬುದ್ಧ್ಯಾದಿಗಳು ಸವಿಕಾರವಾದ್ದರಿಂದ ಅವಕ್ಕೆ ಅನ್ಯಾಪೇಕ್ಷ ಸಿದ್ಧಿ ; ಆದರೆ ಸಾಕ್ಷಿಯು ನಿರ್ವಿಕಾರನು.

2. ಬುದ್ಧ್ಯಾದಿಗಳು ಮತ್ತೊಂದರಿಂದ ಸಿದ್ಧಿಯಾಗುವವು ಎಂದೇನೂ ನಾವು ಹೇಳಿಲ್ಲ. ನಿರಪೇಕ್ಷಸಿದ್ಧವಾದ ಮತ್ತೊಂದರಿಂದ ಸಿದ್ಧಿಯಾಗುವವು ಎಂದಿದೇವೆ. ಸಾಪೇಕ್ಷವಾದ ಮತ್ತೊಂದರಿಂದ ಸಿದ್ಧವಾಗುವಂತಿದ್ದರೆ ತಮ್ಮಿಂದಲೇ ತಾವು ಸಿದ್ಧವಾಗಬಹುದಾಗಿತ್ತು. ಆದ್ದರಿಂದ ಸಾಪೇಕ್ಷವಾದದ್ದು ಮತ್ತೊಂದರ ಸಿದ್ಧಿಗೆ ಸಾಧನವಾಗಲಾರದೆಂಬ ಯುಕ್ತಿಯೇ ಸಾಕ್ಷಿಯ ನಿರಪೇಕ್ಷತ್ವಕ್ಕೆ ಸಾಕು ಎಂದು ಭಾವ. ಸಾಕ್ಷಿಯು ಸಾಕ್ಷಿಯಾದ್ದರಿಂದಲೇ ಮತ್ತೊಬ್ಬ ಸಾಕ್ಷಿಯಿರುವಂತಿಲ್ಲ ಎಂದೂ ಹೇಳಬಹುದು ; ಶ್ವೇತ (೬-೧೧)ದಲ್ಲಿ 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' ಎಂದು ಹೇಳಿರುವದನ್ನು ಇಲ್ಲಿ ಉದಾಹರಿಸಬಹುದು.

3. ಸಾಕ್ಷ್ಯನ್ವಯ ಸಾಕ್ಷ್ಯವ್ಯತಿರೇಕಗಳಿಂದ ಎಂದರ್ಥ.

4. 'ಯಾವನು ತಾನೇ ಅವಗತಿರೂಪದಿಂದ ಇದ್ದುಕೊಂಡಿರುತ್ತಾನೋ' ಎಂದು ಶ್ಲೋಕದಲ್ಲಿರುವ ಪದಗಳಿಗೆ 'ಸ್ವಯಂ' (ತಾನು) ಎಂಬ ಮಾತನ್ನು ಅನ್ವಯಿಸಬೇಕು.

(ಮೂಲ)

ಸ್ವತಃಸಿದ್ಧಾತ್ಮಚೈತನ್ಯಪ್ರತಿಬಿಮ್ಬಿತಾವಿಚಾರಿತಸಿದ್ಧಿಕಾತ್ಮಾನವಬೋಧೋತ್ಥೇತರೇತರಸ್ವಭಾವಾಪೇಕ್ಷಸಿದ್ಧತ್ವಾತ್ ಸ್ವತಶ್ಚಾಸಿದ್ಧೇರನಾತ್ಮನೋ ದ್ವೈತೇನ್ದ್ರಜಾಲಸ್ಯ –

**ನ ಸ್ವಯಂ ಸ್ವಸ್ಯ ನಾನಾತ್ವಂ ನಾವಗತ್ಯಾತ್ಮನಾ ಯತಃ ।**
**ನೋಭಾಭ್ಯಾಮಪ್ಯತಃ ಸಿದ್ಧಮದ್ವೈತಂ ದ್ವೈತಬಾಧಯಾ ॥೧೧೨॥**

(ಅರ್ಥ)

ಸ್ವತಃಸಿದ್ಧವಾದ ಆತ್ಮಚೈತನ್ಯದಲ್ಲಿ ಪ್ರತಿಬಿಂಬಿತವಾದ ಅವಿಚಾರಿತಸಿದ್ಧವಾದ ಆತ್ಮಾಜ್ಞಾನದಿಂದ ಎದ್ದುಕೊಂಡಿರುವ ಒಂದರ ಸ್ವಭಾವವನ್ನೊಂದು ಬಯಸಿ ಸಿದ್ಧವಾಗುತ್ತಿರುವದರಿಂದಲೂ (ನಾನಾತ್ವವು) ತನಗೆ ತಾನೇ ಸಿದ್ಧವಾಗುವದಿಲ್ಲವಾದ್ದರಿಂದಲೂ ಅನಾತ್ಮವಾದ ದ್ವೈತೇಂದ್ರಜಾಲಕ್ಕೆ[1]:

೧೧೨. ತನ್ನ ನಾನಾತ್ವವು ತನಗೆ ತಾನೇ (ಸಿದ್ಧವಾಗು)ವದಿಲ್ಲ, ಅವಗತಿ ರೂಪದಿಂದಲೂ (ಸಿದ್ಧವಾಗು)ವದಿಲ್ಲ, ಎರಡೂ ರೂಪದಿಂದಲೂ (ಸಿದ್ಧವಾಗು)ವದಿಲ್ಲ[2]. ಆದ್ದರಿಂದ ದ್ವೈತವನ್ನು ಬಾಧಿಸಿ ಅದ್ವೈತವು ಸಿದ್ಧವಾಯಿತು.

(ಮೂಲ)

ಯಥೋಕ್ತಾರ್ಥಪ್ರತಿಪತ್ತಿದ್ರಢಿಮ್ನೇ ಶ್ರುತ್ಯುದಾಹರಣೋಪನ್ಯಾಸಃ –

**ನಿತ್ಯಾವಗತಿರೂಪತ್ವಾತ್ ಕಾರಕಾದಿರ್ನ ಚಾತ್ಮನಃ ।**
**ಅಸ್ಥೂಲಂ ನೇತಿ ನೇತೀತಿ ನ ಜಾಯತ ಇತಿ ಶ್ರುತಿಃ ॥೧೧೩॥**

(ಅರ್ಥ)

ಮೇಲೆ ಹೇಳಿರುವ ಅರ್ಥದ ಜ್ಞಾನವು ಗಟ್ಟಿಯಾಗುವದಕ್ಕೆ[3] ಶ್ರುತ್ಯುದಾಹರಣೆಯನ್ನು ಹೇಳಿದೆ :

---

1. "ತನ್ನ" ಎಂಬ ಶ್ಲೋಕಸ್ಥ ಪದಕ್ಕೆ ಇದರ ಅನ್ವಯ.

2. ದ್ವೈತಾದ್ವೈತರೂಪದಿಂದಲೂ ಎಂದರ್ಥ. ದ್ವೈತಾದ್ವೈತರೂಪವು ತನಗೆ ತಾನೇ ವಿರುದ್ಧವಾದದ್ದು. ೨-೪೫ನೆಯ ಶ್ಲೋಕದಲ್ಲಿ ಹೇಳಿದರ್ಥವನ್ನೇ ಇಲ್ಲಿ ಉಪಸಂಹಾರಕ್ಕಾಗಿ ಹೇಳಿಕೊಂಡಿದೆ.

3. ಇದು ಶ್ರುತಿಯಸಿದ್ಧಾಂತವಾದ್ದರಿಂದ ಅವಶ್ಯವಾಗಿ ಇದನ್ನು ನಂಬಬೇಕೆಂಬ ನಿಶ್ಚಯವುಂಟಾಗುವದಕ್ಕಾಗಿ.

೧೧೩. ನಿತ್ಯವಾದ ಅವಗತಿಯ ರೂಪವಾಗಿರುವದರಿಂದ ಆತ್ಮನಿಗೆ ಕಾರಕವೇ ಮುಂತಾದದ್ದು ಇರುವದಿಲ್ಲ. 'ಅಸ್ಥೂಲಮ್' (ಬೃ. ೩-೮-೮ ಸ್ಥೂಲವಲ್ಲ, ಅಣುವಲ್ಲ ....) 'ನೇತಿ ನೇತಿ' (ಇದಲ್ಲ, ಇದಲ್ಲ. ಬೃ. ೧-೨-೧೪) 'ನ ಜಾಯತೇ' (ಹುಟ್ಟುವದಿಲ್ಲ .... ಕ. ೧-೨-೧೮) ಎಂದು ಶ್ರುತಿಯಿದೆ.

(ಮೂಲ)

ಸರ್ವಸ್ಯಾಸ್ಯ ಗ್ರಾಹಕಾದೇರ್ದ್ವೈತಪ್ರಪಞ್ಚಸ್ಯ ಆತ್ಮಾನವಬೋಧಮಾತ್ರೋಪಾದಾನಸ್ಯ ಸ್ವಯಂಸೇದ್ಧುಮಶಕ್ಯತ್ವಾತ್, ಆತ್ಮಸಿದ್ಧೇಶ್ಚಾನುಪಾದೇಯತ್ವಾತ್ –

**ಆತ್ಮನಶ್ಚೇನ್ನಿವಾರ್ಯನ್ತೇ ಬುದ್ಧಿದೇಹಘಟಾದಯಃ ।**
**ಷಷ್ಠಗೋಚರಕಲ್ಪಾಸ್ತೇ ವಿಜ್ಞೇಯಾಃ ಪರಮಾರ್ಥತಃ ॥೧೧೪॥**

(ಅರ್ಥ)

ಗ್ರಾಹಕನೇ ಮುಂತಾದ ಈ ದ್ವೈತಪ್ರಪಂಚಕ್ಕೆಲ್ಲ ಆತ್ಮಾಜ್ಞಾನಮಾತ್ರವೇ ಉಪಾದಾನವಾಗಿರುವದರಿಂದ [1], (ಅದು) ತಾನೇ ಸಿದ್ಧವಾಗಲಾರದಾದ್ದರಿಂದಲೂ ಆತ್ಮಸಿದ್ಧಿಯನ್ನು (ಇಲ್ಲಿ) ಸ್ವೀಕರಿಸತಕ್ಕದ್ದಲ್ಲವಾದ್ದರಿಂದಲೂ [2]:

೧೧೪. ಬುದ್ಧಿ, ದೇಹ, ಘಟಾದಿಗಳು – (ಇವು) ಆತ್ಮನಿಂದ ಬಿಡಿಸಿದರೆ [3] ಅವು ನಿಜವಾಗಿ ಆರನೆಯ (ಪ್ರಮಾಣದ) ವಿಷಯದಂತೆಯೇ ಎಂದು ತಿಳಿಯಬೇಕಾಗುವದು [4].

---

1. ಆತ್ಮನನ್ನು ಅರಿಯದ್ದರಿಂದ ಮಾತ್ರವೇ ಇದು ತೋರುತ್ತಿರುವದರಿಂದ, ಮತ್ತು ಅಜ್ಞಾನದ ಕಾರ್ಯವಾಗಿ ಇದು ಜಡವಾಗಿರುವದರಿಂದ ಎಂದರ್ಥ. ಜಡಪದಾರ್ಥಗಳು ಚೇತನದ ಸಹಾಯದಿಂದಲೇ ಸಿದ್ಧವಾಗಬೇಕು.

2. ಆತ್ಮರೂಪದಿಂದಲೇ ಅವು ಸತ್ಯವಾಗಿರುತ್ತವೆ ; ಆದರೆ ಅವು ಆತ್ಮನೆಂದು ತಿಳಿದಾಗ ಅವುಗಳ ತೋರಿಕೆಯ ರೂಪವು ಇರುವದೇ ಇಲ್ಲ.

3. ಹಗ್ಗಕ್ಕಿಂತ ಬೇರೆಯಾಗಿ ಹಾವು ಹೇಗಿರುವದೆಂದು ಪರೀಕ್ಷಿಸುವಂತೆ ಆತ್ಮನಿಗಿಂತ ಬೇರೆಯಾಗಿ ಅವುಗಳನ್ನು ವಿಂಗಡಿಸಿ ನೋಡಿದರೆ.

4. ಅಭಾವವೇ, ಇಲ್ಲವೇ ಇಲ್ಲ, ಎಂದು ತಿಳಿಯಬೇಕಾಗುವದು.

(ಮೂಲ)

**ಕುತೋ ನ್ಯಾಯಬಲಾತ್ ಏವಂ ನಿಶ್ಚಿತಂ ಪ್ರತೀಯತೇ ಯಸ್ಮಾತ್ –**

**ನಿತ್ಯಾಂ ಸಂವಿದಮಾಶ್ರಿತ್ಯ ಸ್ವತಃಸಿದ್ಧಾಮವಿಕ್ರಿಯಾಮ್ ।**
**ಸಿದ್ಧ್ಯಂತೇ ಧಿಯೋ ಬೋಧಾಸ್ತಾಂಶ್ಚಾಶ್ರಿತ್ಯ ಘಟಾದಯಃ ॥೧೧೫॥**

(ಅರ್ಥ)

(ಪ್ರಶ್ನೆ) :- ಯಾವ ನ್ಯಾಯಬಲದಿಂದ ಹೀಗೆಂದು ನಿಶ್ಚಿತವಾಗಿ ತಿಳಿಯುತ್ತದೆ ?

(ಉತ್ತರ) :- ಏಕೆಂದರೆ :

೧೧೫. ಸ್ವತಃಸಿದ್ಧವಾಗಿ (ಯಾವ) ವಿಕಾರವೂ ಇಲ್ಲದಿರುವ ನಿತ್ಯವಾದ ಚೈತನ್ಯವನ್ನು ಆಶ್ರಯಿಸಿ ಬುದ್ಧಿಯ (ವೃತ್ತಿ )ಜ್ಞಾನಗಳು ಸಿದ್ಧಿಸುತ್ತವೆ ; ಅವುಗಳನ್ನು ಆಶ್ರಯಿಸಿ ಗಡಿಗೆಯೇ ಮುಂತಾದ (ವಿಷಯಗಳು ಸಿದ್ಧವಾಗುತ್ತವೆ).

(ಮೂಲ)

**ಯಸ್ಮಾತ್ ನ ಕಯಾಚಿದಪಿ ಯುಕ್ತ್ಯಾ ಆತ್ಮನಃ ಕಾರಕತ್ವಂ ಕ್ರಿಯಾತ್ವಂ ಫಲತ್ವಂ ಚೋಪಪದ್ಯತೇ, ತಸ್ಮಾತ್ ಆತ್ಮವಸ್ತುಯಾಥಾತ್ಮ್ಯಾನವಬೋಧ ಮಾತ್ರೋಪಾದಾನತ್ವಾತ್ - ನಭಸೀವ ರಜೋಧೂಮತುಷಾರನೀಹಾರನೀಲ ತ್ವಾದ್ಯಧ್ಯಾಸೋ ಯಥೋಕ್ತಾತ್ಮನಿ ಸರ್ವೋಽಯಂ ಕ್ರಿಯಾಕಾರಕಫಲಾ ತ್ಮಕಸಂಸಾರೋಽಹಂಮಮತ್ವಯತ್ನೇಚ್ಛಾದಿರ್ಮಿಥ್ಯಾಧ್ಯಾಸ[1] ಏವೇತಿ ಸಿದ್ಧಮ್ । ಇಮಮರ್ಥಮಾಹ –**

**ಅಹಂಮಿಥ್ಯಾಭಿಶಾಪೇನ ದುಃಖ್ಯಾತ್ಮಾ ತಚ್ಛುಶುತ್ಸಯಾ[2] ।**
**ಇತಃ ಶ್ರುತಿಂ ತಯಾ ನೇತೀತ್ಯುಕ್ತಃ ಕೈವಲ್ಯಮಾಸ್ಥಿತಃ ॥೧೧೬॥**

(ಅರ್ಥ)

ಯಾವ ಯುಕ್ತಿಯಿಂದ (ನೋಡಿದರೂ) ಆತ್ಮನಿಗೆ ಕಾರಕತ್ವವೂ ಕ್ರಿಯಾತ್ವವೂ ಫಲತ್ವವೂ ಹೊಂದುವದಿಲ್ಲವಷ್ಟೆ ; ಆದ್ದರಿಂದ ಆತ್ಮವಸ್ತುವಿನ

1. 'ಇಚ್ಛಾದಿಮಿಥ್ಯಾಧ್ಯಾಸ ಏವ ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

2. ''ತತ್ಬುಭುತ್ಸಯಾ'' ಎಂಬ ಪಾಠಕ್ಕಿಂತ ಇದು ಮೇಲು.

ತತ್ತ್ವವನ್ನು ಅರಿಯದ್ದರಿಂದಲೇ ಆಗಿರುವ ಕಾರಣ ಈ (ಮೇಲೆ) ಹೇಳಿದ ಆತ್ಮನಲ್ಲಿ ಈ ಕ್ರಿಯಾಕಾರಕಫಲಸ್ವರೂಪವಾದ ಅಹಂಕಾರ, ಮಮಕಾರ, ಯತ್ನ, ಇಚ್ಛೆ- ಮುಂತಾದದ್ದು ಆಕಾಶದಲ್ಲಿ ಧೂಳು, ಹೊಗೆ, ಮಂಜು, ಕಾವಳ, ನೀಲವರ್ಣ- ಮುಂತಾದದ್ದರ ಅಧ್ಯಾಸದಂತೆ ಮಿಥ್ಯಾಧ್ಯಾಸವೇ ಎಂದು ಸಿದ್ಧವಾಯಿತು. ಈ ಅರ್ಥವನ್ನು ಹೇಳುತ್ತಾರೆ :

೧೧೬. ಅಹಂಕಾರವೆಂಬ ಹುಸಿಯ ಅಪವಾದದಿಂದ ದುಃಖಿಯಾಗಿರುವ ಆತ್ಮನು ಶ್ರುತಿಯ ಬಳಿಗೆ ಬಂದವನಾಗಿ ಆ (ಶ್ರುತಿ)ಯಿಂದ ನೇತಿ (ಹಾಗಿಲ್ಲ) ಎಂದು ಉಕ್ತನಾಗಿ ಕೈವಲ್ಯವನ್ನು ಪಡೆಯುತ್ತಾನೆ[1].

(ಮೂಲ)

ತಸ್ಯಾಸ್ಯ ಮುಮುಕ್ಷೋಃ ಶ್ರೌತಾದ್ ವಚಸಃ ಸ್ವಪ್ನನಿಮಿತ್ತೋತ್ಸಾರಿತನಿದ್ರಸ್ಯೇವ ಇಯಂ ನಿಶ್ಚಿತಾರ್ಥಾ ಪ್ರಮಾ ಜಾಯತೇ -

**ನಾಹಂ ನ ಚ ಮಮಾತ್ಮತ್ವಾತ್ ಸರ್ವದಾನಾತ್ಮವರ್ಜಿತಃ ।**
**ಭಾನಾವಿವ ತಮೋऽಧ್ಯಾಸೋऽಪಹ್ನವಶ್ಚ ತಥಾ ಮಯಿ ॥೧೧೭॥**

(ಅರ್ಥ)

ಆ ಈ ಮುಮುಕ್ಷುವಿಗೆ ಕನಸಿನಲ್ಲಿರುವ ನಿಮಿತ್ತದಿಂದ ಹೋದ ನಿದ್ರೆಯವನಂತೆ[2] ಶ್ರುತಿಯ ವಚನದಿಂದ ಈ ನಿಶ್ಚಿತಾರ್ಥರೂಪವಾದ ಪ್ರಮೆಯು ಉಂಟಾಗುತ್ತದೆ :

---

1. ಅಹಂಕಾರವೇ ಮುಂತಾದವು ನಿಜವಾಗಿ ಆತ್ಮನಲ್ಲಿಲ್ಲವಾದರೂ ಇವೆ ಎಂಬ ಅಧ್ಯಾರೋಪದಿಂದ ಜೀವನು ಸಂಸಾರಿಯಾಗಿರುತ್ತಾನೆ. ತತ್ತ್ವಮಸಿ ಮುಂತಾದ ಶ್ರುತಿಯಿಂದಾದ ಜ್ಞಾನವು ಅದನ್ನು ಕಳೆಯುತ್ತದೆ.

2. ಕನಸಿನಲ್ಲಿ ಸಿಂಹವು ಗರ್ಜಿಸಿದ್ದನ್ನು ಕೇಳಿ ಎಚ್ಚರವನ್ನು ಪಡೆಯುವಹಾಗೆ ಮಿಥ್ಯಾರೂಪವಾದ ಶ್ರುತಿವಾಕ್ಯವೂ ಅಜ್ಞಾನವನ್ನು ಕಳೆದು ಜ್ಞಾನವನ್ನುಂಟುಮಾಡುತ್ತದೆ. ಪ್ರಮಾಣವ್ಯವಹಾರವು ಬ್ರಹ್ಮಾತ್ಮಜ್ಞಾನಕ್ಕಿಂತ ಪೂರ್ವದಲ್ಲಿ ಸತ್ಯವಾಗಿರುವಂತೆ ತೋರುತ್ತದೆ, ಶ್ರುತಿಯು ಪ್ರಮಾಣವ್ಯವಹಾರವನ್ನೇ ಕಳೆಯುವ ಅಂತ್ಯಪ್ರಮಾಣವು ಎಂಬುದನ್ನು ಈ ದೃಷ್ಟಾಂತವು ಸೂಚಿಸುತ್ತದೆ.

೧೧೭. (ನನ್ನಲ್ಲಿ) ಅಹಂಕಾರವಾಗಲಿ ಮಮಕಾರವಾಗಲಿ ಇರುವದಿಲ್ಲ. ಏಕೆಂದರೆ (ನಾನು) ಆತ್ಮನಾಗಿರುವದರಿಂದ ಯಾವಾಗಲೂ ಅನಾತ್ಮರಹಿತನಾಗಿರುವೆನು[1]. ಸೂರ್ಯನಲ್ಲಿ ಕತ್ತಲೆಯ ಅಧ್ಯಾಸವೂ ನಿಷೇಧವೂ (ಹೇಗೋ)[2] ಹಾಗೆಯೇ ನನ್ನಲ್ಲಿಯೂ (ಆಗುತ್ತವೆ)[3].

(ಮೂಲ)

**ಸೋಽಯಮೇವಂ ಪ್ರತಿಪನ್ನಸ್ವಭಾವಮ್ ಆತ್ಮಾನಂ ಪ್ರತಿಪನ್ನೋಽನುಕ್ರೋಶತಿ –**

**ಯತ್ರ ತ್ವಸ್ಯೇತಿ ಸಾಟೋಪಂ ಕೃತ್ಸ್ನದ್ವೈತನಿಷೇಧಿನೀಮ್ ।**
**ಪ್ರೋತ್ಸಾರಯನ್ತೀಂ ಸಂಸಾರಮಪ್ಯಶ್ರೌಷಂ ನ ಕಿಂ ಶ್ರುತಿಮ್॥೧೧೮॥**

(ಅರ್ಥ)

(ನಿತ್ಯ) ಜ್ಞಾತಸ್ವರೂಪನಾದ ಆತ್ಮನನ್ನು ಹೀಗೆ ಅರಿತುಕೊಂಡ ಆ ಇವನು (ಹೀಗೆ ತನ್ನಲ್ಲಿ ತಾನೇ) ಮರುಕವನ್ನು ಹೊಂದುತ್ತಾನೆ :

೧೧೮. ಎಲ್ಲಿಯಾದರೆ ಇವನಿಗೆ (ಎಲ್ಲವೂ ಆತ್ಮನೇ ಆಯಿತೋ ಅಲ್ಲಿ ಏತರಿಂದ ಯಾರನ್ನು ನೋಡಿಯಾನು ? ಬೃ. ೪-೫-೧೫)- ಎಂದು ಸಂರಂಭದಿಂದ ದ್ವೈತವನ್ನೆಲ್ಲ ಅಲ್ಲಗಳೆಯುತ್ತಿರುವ ಸಂಸಾರವನ್ನು ನಿರಾಕರಿಸುವ ಶ್ರುತಿಯನ್ನು ಕೂಡ (ನಾನು) ಏತಕ್ಕೆ ಕೇಳಲಿಲ್ಲ !

---

1. ಆತ್ಮನಲ್ಲಿ ಅನಾತ್ಮ ಸಂಬಂಧವು ಎಂದಿಗೂ ಇಲ್ಲವೇ ಇಲ್ಲ.

2. ಗೂಬೆಯೇ ಮುಂತಾದ ಪ್ರಾಣಿಗಳು ನಡುಹಗಲಿನ ಸೂರ್ಯನಲ್ಲಿಯೂ ಕತ್ತಲೆಯನ್ನು ಕಾಣುವಂತೆ ಅಜ್ಞರು ಆತ್ಮನಲ್ಲಿ ಅಜ್ಞಾನವನ್ನು ಕಲ್ಪಿಸುತ್ತಾರೆ. ಸರಿಯಾಗಿ ಕಣ್ಣು ಕಾಣುವವರು ಸೂರ್ಯನಲ್ಲಿ ಕತ್ತಲೆ ಇಲ್ಲ ಎಂದು ಹೇಳುವಂತೆ ಶ್ರುತಿಯು ಅಜ್ಞಾನವನ್ನು ನಿಷೇಧಿಸುತ್ತದೆ.

3. ಅಜ್ಞಾನ ಮತ್ತು ಅದರ ಕಾರ್ಯಗಳ ಅಧ್ಯಾಸವೂ ಅಪವಾದವೂ ದೃಷ್ಟಾಂತದ ಕತ್ತಲೆಯಂತೆ ಆತ್ಮನಿಗೆ ಅತ್ಯಂತವಾಗಿ ಅಪ್ರಾಪ್ತವಾಗಿರುತ್ತದೆ.

## ಅಧ್ಯಾಯಾರ್ಥದ ಉಪಸಂಹಾರ

(ಮೂಲ)

ಇತ್ಯೋಮಿತ್ಯವಬುದ್ಧಾತ್ಮಾ ನಿಷ್ಕಲೋಽಕಾರಕೋಽಕ್ರಿಯಃ ।
ವಿರಕ್ತ ಇವ ಬುದ್ಧ್ಯಾದೇರೇಕಾಕಿತ್ವಮುಪೇಯಿವಾನ್ ॥೧೧೯॥

(ಅರ್ಥ)

೧೧೯. ಹೀಗೆ ಓಮ್ (ಆಗಲಿ ! ಎಂದು) ಆತ್ಮನನ್ನು ಅರಿತುಕೊಂಡು[1] ನಿಷ್ಕಲನೂ ಅಕಾರಕನೂ ಅಕ್ರಿಯನೂ ಆಗಿ ವಿರಕ್ತನಂತೆ[2] ಬುದ್ಧ್ಯಾದಿಗಳನ್ನು ಬಿಟ್ಟಿದ್ದು ಏಕಾಕಿತ್ವವನ್ನು ಹೊಂದುತ್ತಾನೆ[3].

---

1. ಜ್ಞಾನದಿಂದ ತಿಳಿದುಬರುವ ಆತ್ಮಸ್ವರೂಪವನ್ನೇ ಆನಂದದಿಂದ ಪರಮಾರ್ಥವೆಂದು ಸ್ವೀಕರಿಸಿ ಎಂದರ್ಥ.

2. ವಿರಕ್ತನಾದವನು ಏಷಣಾತ್ರಯವನ್ನು ಬಿಟ್ಟು ಪರಮಹಂಸಪರಿವ್ರಾಜಕನಾಗಿ ಒಬ್ಬನೇ ಸಂಚರಿಸುವಂತೆ ಎಂದರ್ಥ.

3. ಅದ್ವಿತೀಯವಾದ ಬ್ರಹ್ಮಸ್ವರೂಪದಲ್ಲಿಯೇ ನಿಷ್ಠೆಯನ್ನು ಪಡೆಯುತ್ತಾನೆ, ತ್ವಂಪದಾರ್ಥವನ್ನು ವಿವೇಕದಿಂದ ತಿಳಿದೊಡನೆ ಅದ್ವಿತೀಯಬ್ರಹ್ಮವು ಎಂಬ ಅವಾಕ್ಯಾರ್ಥವು ತಾನೇ ಸಿದ್ಧಿಸುತ್ತದೆ ಎಂದು ಅಭಿಪ್ರಾಯ.

# ಮೂರನೆಯ ಅಧ್ಯಾಯ

## ಅಧ್ಯಾಯದ ಸಂಬಂಧ

(ಮೂಲ)

ಸರ್ವೋಽಯಂ ಪ್ರಮಿತಿಪ್ರಮಾಣಪ್ರಮೇಯಪ್ರಮಾತೃಲಕ್ಷಣ ಆಬ್ರಹ್ಮಸ್ತಮ್ಬಪರ್ಯನ್ತೋ ಮಿಥ್ಯಾಧ್ಯಾಸ ಏವ ಇತಿ ಬಹುಶ ಉಪಪತ್ತಿಭಿಃ ಪ್ರತಿಷ್ಠಾಪಿತಮ್ [1] । ಆತ್ಮಾ ಚ ಜನ್ಮಾದಿಷಡ್ಭಾವವಿಕಾರವರ್ಜಿತಃ ಕೂಟಸ್ಥ ಬೋಧ ಏವೇತಿ ಸ್ಫುಟೀಕೃತಮ್ । ತಯೋಶ್ಚ ಮಿಥ್ಯಾಧ್ಯಾಸಕೂಟಸ್ಥಾತ್ಮನೋರ್ನಾನ್ತರೇಣಾಜ್ಞಾನಂ ಸಂಬನ್ಧೋಽನ್ಯತ್ರ ಚೋದನಾಪರಿಪ್ರಾಪಿತಾತ್ ಯಥಾ 'ಇಯಮೇವರ್ಗಗ್ನಿಃ ಸಾಮ' (ಛಾಂ. ೧-೬-೧) ಇತಿ । ತಚ್ಚಾಜ್ಞಾನಂ ಸ್ವಾತ್ಮಮಾತ್ರನಿಮಿತ್ತಂ ನ ಸಂಭವತಿ ಇತಿ ಕಸ್ಯಚಿತ್ ಕಸ್ಮಿಂಶ್ಚಿದ್ವಿಷಯೇ ಭವತಿ ಇತ್ಯಭ್ಯುಪಗನ್ತವ್ಯಮ್ । ಇಹ ಚ ಪದಾರ್ಥದ್ವಯಂ ನಿರ್ಧಾರಿತಮ್ ಆತ್ಮಾ, ಅನಾತ್ಮಾ ಚ । ತತ್ರ ಅನಾತ್ಮನಸ್ತಾವತ್ ನಾಜ್ಞಾನೇನ ಅಭಿಸಂಬನ್ಧಃ । ತಸ್ಯ ಹಿ ಸ್ವರೂಪಮೇವಾಜ್ಞಾನಮ್ ನ ಹಿ ಸ್ವತೋಽಜ್ಞಾನಸ್ಯ ಅಜ್ಞಾನಂ ಘಟತೇ । ಸಂಭವದಪಿ ಅಜ್ಞಾನಸ್ವಭಾವೇ ಅಜ್ಞಾನಂ ಕಮತಿಶಯಂ ಜನಯೇತ್ ? ನ ಚ ತತ್ರ ಜ್ಞಾನಪ್ರಾಪ್ತಿರಸ್ತಿ ಯೇನ ತತ್ಪ್ರತಿಷೇಧಾತ್ಮಕಮ್ ಅಜ್ಞಾನಂ ಸ್ಯಾತ್ । ಅನಾತ್ಮನಶ್ಚ ಅಜ್ಞಾನಪ್ರಸೂತತ್ವಾತ್ । ನ ಹಿ ಪೂರ್ವಸಿದ್ಧಂ ಸತ್ ತತೋ ಲಬ್ಧಾತ್ಮಲಾಭಸ್ಯ ಸೇತ್ಸ್ಯತ ಆಶ್ರಯಸ್ಯ ಆಶ್ರಯಿ ಸಂಭವತಿ । ತದನಪೇಕ್ಷಸ್ಯ ಚ ತಸ್ಯ ನಿಃಸ್ವಭಾವತ್ವಾತ್ । ಏತೇಭ್ಯ ಏವ ಹೇತುಭ್ಯೋ ನಾನಾತ್ಮವಿಷಯಮ್ ಅಜ್ಞಾನಮ್ ಸಂಭವತಿ ಇತಿ ಗ್ರಾಹ್ಯಮ್ । ಏವಂ ತಾವತ್ ನಾನಾತ್ಮನೋಽಜ್ಞಾನಿತ್ವಮ್, ನಾಪಿ ತದ್ವಿಷಯಮ್ ಅಜ್ಞಾನಮ್ । ಪಾರಿಶೇಷ್ಯಾತ್

---

1. 'ಅತಿಷ್ಠಿಪಮ್' ಎಂದು ಅಚ್ಚಿನ ಪುಸ್ತಕದಲ್ಲಿದೆ. ಮುಂದೆ 'ಸ್ಫುಟೀಕೃತಮ್' ಎಂದಿರುವದಕ್ಕೆ ಅನುಗಣವಾಗಿ ಇಲ್ಲಿಯೂ ಒಂದು ಭೂತಕೃದಂತವಿರಬೇಕೆಂದು ಈ ಶಬ್ದವನ್ನು ಕಲ್ಪಿಸಿ ಬರೆದಿದೆ.

# ಮೂರನೆಯ ಅಧ್ಯಾಯ

## ಅಧ್ಯಾಯದ ಸಂಬಂಧ

(ಮೂಲ)

ಸರ್ವೋಽಯಂ ಪ್ರಮಿತಿಪ್ರಮಾಣಪ್ರಮೇಯಪ್ರಮಾತೃಲಕ್ಷಣ ಆಬ್ರಹ್ಮಸ್ತಮ್ಬಪರ್ಯನ್ತೋ ಮಿಥ್ಯಾಧ್ಯಾಸ ಏವ ಇತಿ ಬಹುಶ ಉಪಪತ್ತಿಭಿಃ ಪ್ರತಿಷ್ಠಾಪಿತಮ್ [1] । ಆತ್ಮಾ ಚ ಜನ್ಮಾದಿಷಡ್ಭಾವವಿಕಾರವರ್ಜಿತಃ ಕೂಟಸ್ಥಬೋಧ ಏವೇತಿ ಸ್ಫುಟೀಕೃತಮ್ । ತಯೋಶ್ಚ ಮಿಥ್ಯಾಧ್ಯಾಸಕೂಟಸ್ಥಾತ್ಮನೋರ್ನಾನ್ತರೇಣಾಜ್ಞಾನಂ ಸಂಬನ್ಧೋಽನ್ಯತ್ರ ಚೋದನಾಪರಿಪ್ರಾಪಿತಾತ್ ಯಥಾ 'ಇಯಮೇವರ್ಗಗ್ನಿಃ ಸಾಮ' (ಛಾಂ. ೧-೬-೧) ಇತಿ । ತಚ್ಚಾಜ್ಞಾನಂ ಸ್ವಾತ್ಮಮಾತ್ರನಿಮಿತ್ತಂ ನ ಸಂಭವತಿ ಇತಿ ಕಸ್ಯಚಿತ್ ಕಸ್ಮಿಂಶ್ಚಿದ್ವಿಷಯೇ ಭವತಿ ಇತ್ಯಭ್ಯುಪಗನ್ತವ್ಯಮ್ । ಇಹ ಚ ಪದಾರ್ಥದ್ವಯಂ ನಿರ್ಧಾರಿತಮ್ ಆತ್ಮಾ, ಅನಾತ್ಮಾ ಚ । ತತ್ರ ಅನಾತ್ಮನಸ್ತಾವತ್ ನಾಜ್ಞಾನೇನ ಅಭಿಸಂಬನ್ಧಃ । ತಸ್ಯ ಹಿ ಸ್ವರೂಪಮೇವಾಜ್ಞಾನಮ್ ನ ಹಿ ಸ್ವತೋಽಜ್ಞಾನಸ್ಯ ಅಜ್ಞಾನಂ ಘಟತೇ । ಸಂಭವದಪಿ ಅಜ್ಞಾನಸ್ವಭಾವೇ ಅಜ್ಞಾನಂ ಕಮತಿಶಯಂ ಜನಯೇತ್ ? ನ ಚ ತತ್ರ ಜ್ಞಾನಪ್ರಾಪ್ತಿರಸ್ತಿ ಯೇನ ತತ್ಪ್ರತಿಷೇಧಾತ್ಮಕಮ್ ಅಜ್ಞಾನಂ ಸ್ಯಾತ್ । ಅನಾತ್ಮನಶ್ಚ ಅಜ್ಞಾನಪ್ರಸೂತತ್ವಾತ್ । ನ ಹಿ ಪೂರ್ವಸಿದ್ಧಂ ಸತ್ ತತೋ ಲಬ್ಧಾತ್ಮಲಾಭಸ್ಯ ಸೇತ್ಸ್ಯತ ಆಶ್ರಯಸ್ಯ ಆಶ್ರಯಿ ಸಂಭವತಿ । ತದನಪೇಕ್ಷಸ್ಯ ಚ ತಸ್ಯ ನಿಃಸ್ವಭಾವತ್ವಾತ್ । ಏತೇಭ್ಯ ಏವ ಹೇತುಭ್ಯೋ ನಾನಾತ್ಮವಿಷಯಮ್ ಅಜ್ಞಾನಮ್ ಸಂಭವತಿ ಇತಿ ಗ್ರಾಹ್ಯಮ್ । ಏವಂ ತಾವತ್ ನಾನಾತ್ಮನೋಽಜ್ಞಾನಿತ್ವಮ್, ನಾಪಿ ತದ್ವಿಷಯಮ್ ಅಜ್ಞಾನಮ್ । ಪಾರಿಶೇಷ್ಯಾತ್

---

1. 'ಅತಿಷ್ಠಿಪಮ್' ಎಂದು ಅಚ್ಚಿನ ಪುಸ್ತಕದಲ್ಲಿದೆ. ಮುಂದೆ 'ಸ್ಫುಟೀಕೃತಮ್' ಎಂದಿರುವದಕ್ಕೆ ಅನುಗಣವಾಗಿ ಇಲ್ಲಿಯೂ ಒಂದು ಭೂತಕೃದಂತವಿರಬೇಕೆಂದು ಈ ಶಬ್ದವನ್ನು ಕಲ್ಪಿಸಿ ಬರೆದಿದೆ.

ಆತ್ಮನ ಏವಾಸ್ತು ಅಜ್ಞಾನಮ್ । ತಸ್ಯ 'ಅಜ್ಞೋಽಸ್ಮಿ' ಇತ್ಯನುಭವದರ್ಶನಾತ್, 'ಸೋಽಹಂ ಭಗವೋ ಮನ್ತ್ರವಿದೇವಾಸ್ಮಿ ನಾತ್ಮವಿತ್' (ಛಾ. ೭-೧-೩) ಇತಿ ಶ್ರುತೇಃ । ನ ಚಾತ್ಮನೋಽಜ್ಞಾನಸ್ವರೂಪತಾ । ತಸ್ಯ ಚೈತನ್ಯಮಾತ್ರಸ್ವಾಭಾವ್ಯಾತ್ । ಅತಿಶಯಶ್ಚ ಸಂಭವತಿ ಜ್ಞಾನವಿಪರಿಲೋಪಃ । ಜ್ಞಾನಪ್ರಾಪ್ತೇಶ್ಚ ಸಂಭವಃ । ತಸ್ಯ ಜ್ಞಾನಕಾರಿತ್ವಾತ್ । ನ ಚಾಜ್ಞಾನಕಾರ್ಯತ್ವಮ್ । ಕೂಟಸ್ಥಾತ್ಮಸ್ವಾಭಾವ್ಯಾತ್ । ಅಜ್ಞಾನಾನಪೇಕ್ಷಸ್ಯ ಚ ಆತ್ಮನಃ ಸ್ವತ ಏವ ಸ್ವರೂಪಸಿದ್ಧೇರ್ಯುಕ್ತಮ್ ಆತ್ಮನ ಏವಾಜ್ಞತ್ವಮ್ । ಕಿಂವಿಷಯಂ ಪುನಸ್ತದಾತ್ಮನೋಽಜ್ಞಾನಮ್ ? ಆತ್ಮವಿಷಯಮ್ ಇತಿ ಬ್ರೂಮಃ । ನನು ಆತ್ಮನೋಽಪಿ ಜ್ಞಾನಸ್ವರೂಪತ್ವಾತ್, ಅನನ್ಯತ್ವಾಚ್ಚ, ಜ್ಞಾನಪ್ರಕೃತಿತ್ವಾದಿಭ್ಯಶ್ಚ ಹೇತುಭ್ಯೋ ನೈವಾಜ್ಞಾನಂ ಘಟತೇ । ಘಟತ ಏವ । ಕಥಮ್ ? ಅಜ್ಞಾನಮಾತ್ರನಿಮಿತ್ತತ್ವಾತ್ ತದ್ವಿಭಾಗಸ್ಯ ಸರ್ಪಾತ್ಮತೇವ ರಜ್ಜ್ವಾಃ । ತಸ್ಮಾತ್ ತದಪನುತ್ತೌ ದ್ವೈತಾನರ್ಥಾಭಾವಃ । ತದಪನೋದಶ್ಚ ವಾಕ್ಯಾದೇವ ತತ್ಪದಪದಾರ್ಥಾಭಿಜ್ಞಸ್ಯ । ಅತೋ ವಾಕ್ಯವ್ಯಾಖ್ಯಾನಾಯ ಅಧ್ಯಾಯ[1] ಆರಭ್ಯತೇ ॥

(ಅರ್ಥ)

ಪ್ರಮಿತಿ, ಪ್ರಮಾಣ, ಪ್ರಮೇಯ, ಪ್ರಮಾತೃ- ಎಂಬ ಸ್ವರೂಪದ ಬ್ರಹ್ಮನಿಂದ ಹಿಡಿದು ಸ್ತಂಬದವರೆಗಿನ ಈ (ದ್ವೈತ)ವೆಲ್ಲವೂ ಮಿಥ್ಯಾಧ್ಯಾಸವೇ[2] ಎಂದು ಬಹಳವಾಗಿ ಉಪಪತ್ತಿಗಳಿಂದ ಸ್ಥಾಪಿಸಿದ್ದಾಯಿತು. ಆತ್ಮನು ಜನ್ಮವೇ ಮುಂತಾದ ಆರು ಭಾವವಿಕಾರಗಳೂ ಇಲ್ಲದವನು, ಕೂಟಸ್ಥ ಚೈತನ್ಯರೂಪನೇ ಎಂದು ಸ್ಫುಟಗೊಳಿಸಲಾಯಿತು. ಈ ಮಿಥ್ಯಾಧ್ಯಾಸ, ಕೂಟಸ್ಥಾತ್ಮ- ಇವುಗಳಿಗೆ ಅಜ್ಞಾನವಿಲ್ಲದೆ 'ಈ ಪೃಥಿವಿಯೇ ಋಕ್ಕು, ಅಗ್ನಿಯೇ ಸಾಮ' (ಛಾ. ೧-೬-೧) ಎಂಬಂತೆ[3] ವಿಧಿಯಿಂದ ಪರಿಪ್ರಾಪಿತ

1. 'ಅಧ್ಯಾಯಸ್ತೃತೀಯೋಽಯಮ್' ಎಂದು ಪಾಠಾಂತರ.

2. ಇಲ್ಲಿ ಅಧ್ಯಾಸಶಬ್ದವನ್ನು ಅರ್ಥಾಧ್ಯಾಸವೆಂಬರ್ಥದಲ್ಲಿ ಉಪಯೋಗಿಸಿದೆ. ಪೀಠಿಕೆಯನ್ನು ನೋಡಿ.

3. ಈ ಶ್ರುತಿಯಲ್ಲಿ ಋಕ್ಕಿನಲ್ಲಿ ಪೃಥಿವೀದೃಷ್ಟಿಯನ್ನೂ ಸಾಮದಲ್ಲಿ ಅಗ್ನಿದೃಷ್ಟಿಯನ್ನೂ ಮಾಡಬೇಕೆಂದು ವಿಧಿಸಿದೆ. ಸೂ.ಭಾ. ೪-೧-೬ನ್ನು ನೋಡಿ.

ವಾದ (ಕಡೆಗಳನ್ನು) ಬಿಟ್ಟು[1] (ಮಿಕ್ಕಕಡೆಗಳಲ್ಲಿ ಯಾವ) -ಸಂಬಂಧವೂ ಇರುವದಿಲ್ಲ[2].

ಈ ಅಜ್ಞಾನವು ತನ್ನ ಸ್ವರೂಪಮಾತ್ರನಿಮಿತ್ತದಿಂದ ಇರುವಹಾಗಿಲ್ಲ ವಾದ್ದರಿಂದ[3] ಯಾರಿಗೋ ಒಬ್ಬನಿಗೆ ಯಾವದೋ ಒಂದು ವಿಷಯದಲ್ಲಿರ ಬೇಕು- ಎಂದು ಒಪ್ಪಬೇಕು[4]. ಇಲ್ಲಿ ಆತ್ಮ, ಅನಾತ್ಮ- ಎಂಬ ಎರಡು ಪದಾರ್ಥಗಳನ್ನು ನಿಶ್ಚಯಿಸಿದ್ದಾಗಿದೆ. ಇವುಗಳೊಳಗೆ ಮೊದಲನೆಯದಾಗಿ ಅನಾತ್ಮಕ್ಕೆ ಅಜ್ಞಾನದ ಸಂಬಂಧವಿರುವಹಾಗಿಲ್ಲ. ಏಕೆಂದರೆ ಆ (ಅನಾತ್ಮದ) ಸ್ವರೂಪವೇ ಅಜ್ಞಾನವು[5]; ತಾನೇ ಅಜ್ಞಾನವಾಗಿರುವದಕ್ಕೆ ಅಜ್ಞಾನವೆಂಬುದು ಹೊಂದುವದಿಲ್ಲವಷ್ಟೆ. ಅಜ್ಞಾನರೂಪ(ವಾಗಿರುವ ಪದಾರ್ಥ)ಕ್ಕೆ ಅಜ್ಞಾನವು ಇರಬಹುದೆಂದರೂ ಯಾವ ಅತಿಶಯವನ್ನುಂಟುಮಾಡೀತು[6] ? ಅದರಲ್ಲಿ ಜ್ಞಾನಪ್ರಾಪ್ತಿಯೂ ಇಲ್ಲ ; ಹಾಗಿದ್ದರಲ್ಲವೆ ಆ (ಜ್ಞಾನದ) ಅಭಾವರೂಪ

---

1. ಈ ಉದಾಹರಣೆಗಳಲ್ಲಿ ಶ್ರುತಿಯಲ್ಲಿ ಉಪಾಸನೆಯನ್ನು ವಿಧಿಸಿರುವದರಿಂದ ಇದು ಮಿಥ್ಯಾಧ್ಯಾಸವಲ್ಲ. ಅದಕ್ಕೆ ಅಜ್ಞಾನವೂ ಕಾರಣವಲ್ಲ.

2. ಮಿಥ್ಯಾಧ್ಯಾಸವನ್ನು ಮತ್ತೊಂದು ವಸ್ತುವಿನಲ್ಲಿ ಆರೋಪಿಸುವದು ಭ್ರಾಂತಿಯಿಂದ ; ಆದ್ದರಿಂದ ಅಲ್ಲಿ ಅಧಿಷ್ಠಾನವಸ್ತುವಿನ ಅಜ್ಞಾನವೇ ಕಾರಣವಾಗಿರುತ್ತದೆ- ಎಂದರ್ಥ. ಇಲ್ಲಿಯವರೆಗೆ ಎರಡನೆಯ ಅಧ್ಯಾಯದ ಅರ್ಥವನ್ನು ಹೇಳಿದ್ದಾಯಿತು.

3. ಅಜ್ಞಾನವೆಂಬುದು ಸ್ವತಂತ್ರಪದಾರ್ಥವಲ್ಲ ! ಜ್ಞಾನೇಚ್ಛಾದಿಗಳಂತೆಯೇ ಅದು ಮತ್ತೊಂದನ್ನು ಅವಲಂಬಿಸಿಕೊಂಡಿರುವ ಪದಾರ್ಥವಾಗಿದೆ.

4. ಯಾರಿಗೆ ಅಜ್ಞಾನವೋ ಅವನು ಆಶ್ರಯನು, ಅವನಿಗೆ ಯಾವದರ ಅಜ್ಞಾನವೋ ಅದು ವಿಷಯವು, ಅಜ್ಞಾನಕ್ಕೆ ಆಶ್ರಯವು ಯಾವದು, ವಿಷಯವು ಯಾವದು- ಎಂಬುದನ್ನು ನಿಶ್ಚಯಿಸಬೇಕಾಗಿದೆ ಎಂದರ್ಥ. ಲೋಕದಲ್ಲಿ ಜ್ಞಾನಾಜ್ಞಾನಗಳಿಗೆ ಆಶ್ರಯಕ್ಕಿಂತ ವಿಷಯವು ಬೇರೆಯಾಗಿರುತ್ತದೆ. ಇಲ್ಲಿಯೂ ಹಾಗೆಯೇ ಇರಬೇಕು, ಆದರೆ ಸಿದ್ಧಾಂತದಲ್ಲಿ ಆತ್ಮಜ್ಞಾನವೇ ಆಗಬೇಕಾಗಿರುವದರಿಂದ ಆತ್ಮನೇ ವಿಷಯವೆಂದಾಗುತ್ತದೆಯಲ್ಲ ಇದು ಹೇಗೆ ?- ಎಂಬ ಭಾವದಿಂದ ಈ ವಿಚಾರವು ಪ್ರಾರಂಭವಾಗಿದೆ.

5. ಅಜ್ಞಾನದಿಂದ ಆದದ್ದು ಅಜ್ಞಾನವೇ, ಕತ್ತಲೆಯಲ್ಲಿ ಕಾಣುವ ಹುಸಿತೋರಿಕೆಯು ಕತ್ತಲೆಯಲ್ಲದೆ ಮತ್ತೇನು ?

6. ಅಜ್ಞಾನಿಗೆ ಅಜ್ಞಾನವೆಂದರೆ ವಿಷಯವು ಅವನಿಗೆ ಮರೆಯೆಂದರ್ಥ. ಅಜ್ಞಾನಕ್ಕೂ ಅಜ್ಞಾನ ಎಂದರೆ ಅರ್ಥವಿಲ್ಲ.

ವಾದ ಅಜ್ಞಾನವು[1] (ಅದಕ್ಕೆ) ಆದೀತು ? ಅನಾತ್ಮವು ಅಜ್ಞಾನದಿಂದ ಹುಟ್ಟಿರುವದರಿಂದಲೂ (ಹೀಗೆ). ಮೊದಲೇ ಇದ್ದುಕೊಂಡಿರುವದು ತನ್ನಿಂದ ಜನ್ಮವನ್ನು ಪಡೆದುಕೊಂಡು ಸಿದ್ಧಿಯಾಗುವ ಆಶ್ರಯಕ್ಕೆ ಆಶ್ರಯಿಯಾಗ ಲಾರದಷ್ಟೆ[2]? ಏಕೆಂದರೆ ಅದರ ಅಪೇಕ್ಷೆಯಿಲ್ಲದೆ ಇದ್ದರೆ ಅದಕ್ಕೆ ಸ್ವಭಾವವೇ ಇರುವದಿಲ್ಲ[3]. ಅದೇ ಕಾರಣಗಳಿಂದಲೇ ಅಜ್ಞಾನವು ಅನಾತ್ಮವಿಷಯಕವಾಗಿರ ಲಾರದೆಂದು ಸಿದ್ಧವಾಗುತ್ತದೆ[4].

**ಮೊದಲನೆಯದಾಗಿ ಹೀಗೆ ಅನಾತ್ಮವು ಅಜ್ಞಾನಿಯೂ ಅಲ್ಲ, ಅಜ್ಞಾನವು ಅದರ ವಿಷಯದ್ದೂ ಅಲ್ಲ- (ಎಂದು ಏರ್ಪಟ್ಟಿತು)[5].** ಪಾರಿಶೇಷ್ಯದಿಂದ[6] ಆತ್ಮನಿಗೇ ಅಜ್ಞಾನವೆಂದಾಗಬೇಕಾಯಿತು ; ಏಕೆಂದರೆ

---

1. ಈ ಪ್ರಸ್ಥಾನದಲ್ಲಿ ಅಜ್ಞಾನವೆಂದರೆ ಜ್ಞಾನದ ಅಭಾವ ; ಪೀಠಿಕೆಯನ್ನು ನೋಡಿ.

2. ಮೊದಲು ಅಜ್ಞಾನವಿರುತ್ತದೆ, ಆಮೇಲೆ ಇದರಿಂದ ಅನಾತ್ಮವುಂಟಾಗುತ್ತದೆ. ಹೀಗಿರುವಲ್ಲಿ ಅನಾತ್ಮವೆಂಬ ಆಶ್ರಯಕ್ಕೆ ಆಜ್ಞಾನವು ಆಶ್ರಯಿಯೆಂಬುದು ಹೇಗೆ ಹೊಂದೀತು ? ಈ ವಾಕ್ಯದಿಂದ ಸಂಕ್ಷೇಪಶಾರೀರಕದ ಪ್ರಕ್ರಿಯೆಯನ್ನು ಕೆಲವರು ತೆಗೆದಿದ್ದಾರೆ. ಅದು ಸರಿಯಲ್ಲ. ಪೀಠಿಕೆಯನ್ನು ನೋಡಿ.

3. ಆಶ್ರಯವು ಆಶ್ರಯಿಯ ಅಪೇಕ್ಷೆಯಿಲ್ಲದೆ ಇರಬೇಕು ; ಆದರೆ ಅಜ್ಞಾನದ ಅಪೇಕ್ಷೆಯಿಲ್ಲದಿದ್ದರೆ ಅನಾತ್ಮಕ್ಕೆ ಸ್ವರೂಪವೇ ಇರುವದಿಲ್ಲ, ಅದು ಶೂನ್ಯವೇ ಆಗಿಬಿಡುತ್ತದೆ.

4. ಅನಾತ್ಮವು ಅಜ್ಞಾನಸ್ವರೂಪವಾಗಿರುವದರಿಂದಲೂ ಅದರಲ್ಲಿ ಅಜ್ಞಾನ ದಿಂದಾಗುವ ಅತಿಶಯವಿಲ್ಲದ್ದರಿಂದಲೂ ಅಜ್ಞಾನದ ವಿಷಯವು ಮೊದಲು ಇದ್ದುಕೊಂಡೇ ಇರಬೇಕಾಗಿರುವದರಿಂದ ಮೊದಲೇ ಸಿದ್ಧವಾಗಿರುವ ಅಜ್ಞಾನವು ತನ್ನಿಂದಲೇ ಹುಟ್ಟಿರುವ ಅನಾತ್ಮವನ್ನು ವಿಷಯೀಕರಿಸಲಾರದೆ ಇರುವದರಿಂದಲೂ ಅಜ್ಞಾನಾಪೇಕ್ಷೆಯಿಲ್ಲದ ಅನಾತ್ಮಕ್ಕೆ ಸ್ವರೂಪವೇ ಇಲ್ಲವಾದ್ದರಿಂದಲೂ ಅಜ್ಞಾನಕ್ಕೆ ಅನಾತ್ಮವು ವಿಷಯವಾಗಲಾರದು ಎಂದು ಅಭಿಪ್ರಾಯ.

5. ಲೋಕದಲ್ಲಿ ಘಟಪಟಾದ್ಯನಾತ್ಮವಿಷಯಕವಾದ ಅಜ್ಞಾನವು ಇರಬಹು ದೆಂಬುದಕ್ಕೆ ಇದು ವಿರುದ್ಧವಲ್ಲ. ಏಕೆಂದರೆ ಇದು ಆತ್ಮಾನಾತ್ಮಗಳೆರಡೇ ಪದಾರ್ಥ ಗಳೆಂದು ನಿಶ್ಚಯಿಸಿದ ಮೇಲೆ ಮಾಡುವ ವಿಚಾರವಾಗಿದೆ.

6. ಉಳಿದಿರುವದು ಆತ್ಮನೇ ಆದ್ದರಿಂದ.

ಅವನಿಗೆ 'ಅಜ್ಞನಾಗಿದೇನೆ' ಎಂಬ ಅನುಭವವು ಕಂಡುಬರುತ್ತದೆ ; 'ಭಗವಂತನೆ, ಆ ನಾನು ಮಂತ್ರವಿದನೇ ಆಗಿರುತ್ತೇನೆ, ಆತ್ಮನನ್ನು ಅರಿತಿಲ್ಲ' (ಛಾಂ. ೭-೧-೩) ಎಂದು ಶ್ರುತಿಯೂ ಇದೆ[1]. ಆತ್ಮನು ಅಜ್ಞಾನಸ್ವರೂಪನೂ ಅಲ್ಲ ; ಏಕೆಂದರೆ ಅವನಿಗೆ ಚೈತನ್ಯಮಾತ್ರವೇ ಸ್ವರೂಪವಾಗಿರುತ್ತದೆ. (ಅವನಲ್ಲಿ) ಜ್ಞಾನವಿಪರಿಲೋಪವೆಂಬ ಅತಿಶಯವೂ ಸಂಭವಿಸುತ್ತದೆ. (ಅವನಿಗೆ) ಜ್ಞಾನಪ್ರಾಪ್ತಿಯ ಸಂಭವವೂ ಇದೆ, ಏಕೆಂದರೆ ಅವನು ಜ್ಞಾನ ಕಾರಿಯಾಗಿರುತ್ತಾನೆ[2]. ಅವನು ಅಜ್ಞಾನದ ಕಾರ್ಯವೂ ಅಲ್ಲ ; ಏಕೆಂದರೆ ಕೂಟಸ್ಥನಾದ ಆತ್ಮಸ್ವರೂಪವಾಗಿರುತ್ತಾನೆ. ಅಜ್ಞಾನದ ಅಪೇಕ್ಷೆಯಿಲ್ಲದೆ ಆತ್ಮನಿಗೆ ಸ್ವಂತವಾಗಿಯೇ ಸ್ವರೂಪವು ಸಿದ್ಧವಾಗಿರುತ್ತದೆ. (ಆದ್ದರಿಂದ) ಆತ್ಮನಿಗೆ ಅಜ್ಞತ್ವವು ಯುಕ್ತವಾಗಿರುತ್ತದೆ.

ಹಾಗಾದರೆ (ಈ) ಆತ್ಮನ ಅಜ್ಞಾನಕ್ಕೆ ವಿಷಯವು ಯಾವದು ? ಎಂದರೆ ಆತ್ಮನೇ ವಿಷಯವು ಎನ್ನುತ್ತೇವೆ .

**(ಆಕ್ಷೇಪ) :- ಆತ್ಮನೂ ಜ್ಞಾನಸ್ವರೂಪವಾಗಿರುವದರಿಂದಲೂ ಅನನ್ಯವಾಗಿರುವದರಿಂದಲೂ ಜ್ಞಾನಪ್ರಕೃತಿಯಾಗಿರುವದೇ ಮುಂತಾದ ಹೇತುಗಳಿಂದಲೂ[3] (ಆವನಿಗೂ) ಅಜ್ಞಾನವು ಹೊಂದುವದಿಲ್ಲವಲ್ಲ !**

---

1. ಇಲ್ಲಿ ಆತ್ಮನೇ ಅಜ್ಞಾನಕ್ಕೆ ಆಶ್ರಯನೂ ವಿಷಯನೂ ಎಂಬುದನ್ನು ಶ್ರುತಿಯು ಅನುವಾದಮಾಡಿಕೊಂಡಿದೆ- ಎಂದು ಭಾವ.

2. ಅಜ್ಞಾನವನ್ನು ಕಳೆಯುವ ಜ್ಞಾನಾಭಾಸವನ್ನು ಅಂತಃಕರಣದಲ್ಲಿ ಉಂಟು ಮಾಡುತ್ತಾನೆ . ಆ ಚಿದಾಭಾಸವುಂಟಾಗುವದೇ ಜ್ಞಾನಪ್ರಾಪ್ತಿ .

3. ಆತ್ಮನು ಜ್ಞಾನಸ್ವರೂಪನಾಗಿರುವದರಿಂದ ಜ್ಞಾನವಿರುದ್ಧವಾದ ಅಜ್ಞಾನವು ಅವನಿಗೆ ಹೊಂದುವದಿಲ್ಲ . ಅಜ್ಞಾನವೆಂಬುದು ಅದ್ವಿತೀಯಾತ್ಮನಿಗಿಂತ ಅನ್ಯವಾಗಿ ಸಿದ್ಧಿಸುವದಿಲ್ಲ , ಆತ್ಮನು ಅಜ್ಞಾನವನ್ನು ಕಳೆಯುವ ಪ್ರಮಾಣಜ್ಞಾನಕ್ಕೆ ಕಾರಣನಾಗಿರುತ್ತಾನೆ- ಇವೇ ಮುಂತಾದ ಹೇತುಗಳಿಂದ ಅವನಿಗೆ ಅಜ್ಞಾನವು ಹೊಂದುವದಿಲ್ಲ . ''ಮುಂತಾದ'' ಎಂಬ ಮಾತಿನಿಂದ ಆಕಾಶದಂತೆ ಅಸಂಸರ್ಗಿಸ್ವಭಾವದವನಾಗಿರುವದರಿಂದ ಯಾವ ವಿಶೇಷವೂ ಅವನಲ್ಲಿ ಆಗುವಂತಿಲ್ಲವಾದ್ದರಿಂದಲೂ ನಿರಪೇಕ್ಷಸಿದ್ಧನಾದ ಆತ್ಮನಲ್ಲಿ ಸಾಪೇಕ್ಷಸಿದ್ಧವಾದ ಅಜ್ಞಾನವು ಸಂಭವಿಸದೆ ಇರುವದರಿಂದಲೂ ಆಗಂತುಕ ಪ್ರಮಾಣಜ್ಞಾನದ ಅಪೇಕ್ಷೆಯಿಲ್ಲದ್ದರಿಂದಲೂ- ಎಂಬಿವೇ ಮುಂತಾದ ಹೇತುಗಳನ್ನು ಸೇರಿಸಿಕೊಳ್ಳಬೇಕು.

(ಪರಿಹಾರ) :- ಹೊಂದಿಯೇ ಹೊಂದುತ್ತದೆ. ಹೇಗೆಂದರೆ, ಹಗ್ಗಕ್ಕೆ ಹಾವಿನ ರೂಪವಾಗಿರುವಂತೆ ಆ ವಿಭಾಗವು ಅಜ್ಞಾನಮಾತ್ರ ನಿಮಿತ್ತದಿಂದ ಆಗಿರುತ್ತದೆ[1]. ಆದ್ದರಿಂದ ಅದು ನಾಶವಾದರೆ ದ್ವೈತವೆಂಬ ಅನರ್ಥವು ಇರುವದಿಲ್ಲ. ಆ (ಅಜ್ಞಾನದ) ನಾಶವೋ ಆ (ವಾಕ್ಯದ) ಪದಗಳು, ಪದಾರ್ಥಗಳು- ಇವುಗಳನ್ನು ಅರಿತುಕೊಂಡಿರುವವನಿಗೆ ವಾಕ್ಯದಿಂದಲೇ (ಆಗುತ್ತದೆ). ಆದ್ದರಿಂದ ವಾಕ್ಯದ ವ್ಯಾಖ್ಯಾನಕ್ಕಾಗಿ (ಈ) ಅಧ್ಯಾಯವನ್ನು ಆರಂಭಿಸಿರುತ್ತದೆ.

## ವಾಕ್ಯದಿಂದಲೇ ಅವಾಕ್ಯಾರ್ಥಜ್ಞಾನ

(ಮೂಲ)

ತತ್ರ ಯಥೋಕ್ತೇನ ಪ್ರಕಾರೇಣ ತತ್ತ್ವಮಸ್ಯಾದಿವಾಕ್ಯೋಪನಿವಿಷ್ಟಪದಪದಾರ್ಥಯೋಃ ಕೃತಾನ್ವಯವ್ಯತಿರೇಕಃ–

**ಯದಾ ನಾ ತತ್ತ್ವಮಸ್ಯಾದೇರ್ಬ್ರಹ್ಮಾಸ್ಮೀತ್ಯವಗಚ್ಛತಿ ।**
**ಪ್ರಧ್ವಸ್ತಾಹಂಮಮೋ ನೈತಿ ತದಾ ಗೀರ್ಮನಸೋಃ ಸೃತಿಮ್ ॥೧॥**

(ಅರ್ಥ)

ಇಲ್ಲಿ ಹಿಂದೆ ಹೇಳಿರುವ ಪ್ರಕಾರದಿಂದ 'ತತ್ತ್ವಮಸಿ' ಮುಂತಾದ ವಾಕ್ಯದಲ್ಲಿರುವ ಪದಪದಾರ್ಥಗಳ ಅನ್ವಯವ್ಯತಿರೇಕವನ್ನು ಮಾಡಿಕೊಂಡು :

೧. ಮನುಷ್ಯನು 'ತತ್ತ್ವಮಸಿ' ಮುಂತಾದ (ವಾಕ್ಯ)ದಿಂದ 'ಬ್ರಹ್ಮ (ವಾಗಿರುತ್ತೇನೆ)' ಎಂದು ಯಾವಾಗ ಗೊತ್ತುಮಾಡಿಕೊಳ್ಳುತ್ತಾನೋ ಆಗ

---

1. ಅಜ್ಞಾನಕ್ಕೆ ಆಶ್ರಯವಿಷಯನಾಗಿರುವನೆಂಬ ವಿಭಾಗವು ಅಜ್ಞಾನನಿಮಿತ್ತದಿಂದಲೇ ಆಗಿದೆ, ನಿಜವಾಗಿರುವದಿಲ್ಲ. ಆದ್ದರಿಂದ ಹಗ್ಗದ ಹಾವಿನಂತೆ ಕಲ್ಪಿತವಾದ ಇದು ಆತ್ಮನ ಸ್ವಭಾವವಲ್ಲ ಎಂದು ಭಾವ. ಸಂ.ವಾ. ೧೭೫, ೧೭೬, ೧೭೭- ಇವನ್ನೂ ಪೀಠಿಕೆಯನ್ನೂ ನೋಡಿ.

ಅಹಂಮಮಗಳನ್ನು ನಾಶಗೊಳಿಸಿಕೊಂಡು ವಾಙ್ಮನಸ್ಸುಗಳ ಮಾರ್ಗವನ್ನು ಹೊಂದುವದಿಲ್ಲ.

(ಮೂಲ)

ಯದೈವ ತದರ್ಥಂ ತ್ವಮರ್ಥೇಽವೈತಿ ತದೈವ ಅವಾಕ್ಯಾರ್ಥತಾಂ ಪ್ರತಿಪದ್ಯತೇ ಗೀರ್ಮನಸೋಃ ಸೃತಿಂ ನ ಪ್ರತಿಪದ್ಯತ ಇತಿ ಕುತ ಏತದಧ್ಯವಸೀಯತೇ ? ಯಸ್ಮಾತ್ –

ತತ್ಪದಂ ಪ್ರಕೃತಾರ್ಥಂ ಸ್ಯಾತ್ ತ್ವಂಪದಂ ಪ್ರತ್ಯಗಾತ್ಮನಿ ।
ನೀಲೋತ್ಪಲವದೇತಾಭ್ಯಾಂ ದುಃಖ್ಯನಾತ್ಮತ್ವವಾರಣೇ ॥೨॥

(ಅರ್ಥ)

(ಪ್ರಶ್ನೆ) :- ಯಾವಾಗ ತತ್ಪದಾರ್ಥವನ್ನು ತ್ವಂಪದಾರ್ಥದಲ್ಲಿ ಅರಿತುಕೊಳ್ಳುವನೋ ಆಗಲೆ ಅವಾಕ್ಯಾರ್ಥವನ್ನು ಅರಿತುಕೊಳ್ಳುತ್ತಾನೆ. ವಾಙ್ಮನಸ್ಸುಗಳ ಮಾರ್ಗವನ್ನು ಹೊಂದುವದಿಲ್ಲ ಎಂಬಿದು ಏತರಿಂದ ನಿಶ್ಚಿತವಾಗುತ್ತದೆ ? ಏತರಿಂದೆಂದರೆ :

೨. ತತ್ಪದಕ್ಕೆ ಪ್ರಕೃತವಾದದ್ದೇ ಅರ್ಥವಾಗಿರುತ್ತದೆ, ತ್ವಂಪದವು ಪ್ರತ್ಯಗಾತ್ಮನಲ್ಲಿ (ವರ್ತಿಸುತ್ತದೆ)[1]. ಈ ಎರಡು ಪದಗಳಿಂದ ಕನ್ನೈದಿಲೆ ಎಂಬ (ವಾಕ್ಯದಲ್ಲಿ ಹೇಗೋ) ಹಾಗೆ ದುಃಖಿತ್ವ, ಅನಾತ್ಮತ್ವ- ಇವುಗಳು ನಿವರ್ತಿತವಾಗುತ್ತವೆ.

---

1. ತತ್ತ್ವಮಸಿವಾಕ್ಯದಲ್ಲಿ ತತ್ಪದವು ಪ್ರಕೃತವಾದ ಸದ್ಬ್ರಹ್ಮವನ್ನು ಹೇಳುತ್ತದೆ. ತ್ವಂಪದವು ಶ್ವೇತಕೇತುವಿನ ಆತ್ಮನಲ್ಲಿ ವರ್ತಿಸುತ್ತದೆ. ಇವೆರಡೂ ಒಟ್ಟಿಗೆ ಒಂದು ಪದಾರ್ಥವನ್ನು ಹೇಳುವದರಿಂದ ತತ್ಪದದಿಂದ ದುಃಖಿತ್ವದ ನಿವೃತ್ತಿಯೂ ತ್ವಂಪದದಿಂದ ಅನಾತ್ಮತ್ವದ ನಿವೃತ್ತಿಯೂ ಆಗುವವು. ಕನ್ನೈದಿಲೆ ಎಂಬಲ್ಲಿ ಹೇಗೆ ಕರಿದು ಎಂಬುದು ನೈದಿಲೆಯೆಂಬ ಪದದ ಸಾಂನಿಧ್ಯದಿಂದ ನೈದಿಲೆಯಲ್ಲದ ವಸ್ತುಗಳನ್ನೆಲ್ಲ ಬಿಡುವದೋ, ನೈದಿಲೆಯೆಂಬ ಪದವು ಕರಿದು ಎಂಬುದರ ಸಾಂನಿಧ್ಯದಿಂದ ಕೆಂಪು, ಮುಂತಾದವನ್ನು ಬಿಡುವದೋ ಹಾಗೆಯೇ ಇದು. ಉ.ಸಾ. ೧೮-೧೬೪.

## ವಾಕ್ಯವ್ಯಾಖ್ಯಾನಸೂತ್ರ

(ಮೂಲ)

ಏವಂ ಕೃತಾನ್ವಯವ್ಯತಿರೇಕೋ ವಾಕ್ಯಾದೇವ ಅವಾಕ್ಯಾರ್ಥಂ ಪ್ರತಿಪದ್ಯತ ಇತ್ಯುಕ್ತಮ್ । ಅತಸ್ತದ್ವ್ಯಾಖ್ಯಾನಾಯ ಸೂತ್ರೋಽಪನ್ಯಾಸಃ –

ಸಾಮಾನಾಧಿಕರಣ್ಯಂ ಚ ವಿಶೇಷಣವಿಶೇಷ್ಯತಾ ।
ಲಕ್ಷ್ಯಲಕ್ಷಣಸಂಬನ್ಧಃ ಪದಾರ್ಥಪ್ರತ್ಯಗಾತ್ಮನಾಮ್ ॥೩॥

(ಅರ್ಥ)

ಹೀಗೆ ಅನ್ವಯವ್ಯತಿರೇಕಗಳನ್ನು ಮಾಡಿಕೊಂಡವನು ವಾಕ್ಯದಿಂದಲೇ ಅವಾಕ್ಯಾರ್ಥವನ್ನು ಅರಿತುಕೊಳ್ಳುತ್ತಾನೆ ಎಂದು ಹೇಳಿದ್ದಾಯಿತು. ಆದ್ದರಿಂದ ಆ (ವಾಕ್ಯದ) ವ್ಯಾಖ್ಯಾನಕ್ಕಾಗಿ ಸೂತ್ರವನ್ನು (ಮೊದಲು) ಹೇಳುತ್ತಾರೆ :

೩. ಪದಗಳು, ಅರ್ಥಗಳು, ಪ್ರತ್ಯಗಾತ್ಮ- ಇವುಗಳಿಗೆ ಕ್ರಮವಾಗಿ ಸಾಮಾನಾಧಿಕರಣ್ಯ, ವಿಶೇಷಣವಿಶೇಷ್ಯಭಾವ, ಲಕ್ಷ್ಯಲಕ್ಷಣಸಂಬಂಧ[1].

## ಶ್ರವಣಮನನಗಳು ವಿಹಿತವಾಗಿವೆ

(ಮೂಲ)

ಅಸ್ಮಿನ್ ಸೂತ್ರೇ ಉಪನ್ಯಸ್ತೇ ಕಶ್ಚಿತ್ ಚೋದಯತಿ । ಯೋಽಯಂ ವಾಕ್ಯಾರ್ಥಪ್ರತಿಪತ್ತೌ ಪೂರ್ವಾಧ್ಯಾಯೇನ ಅನ್ವಯವ್ಯತಿರೇಕಲಕ್ಷಣೋ ನ್ಯಾಯಃ ಸರ್ವಕರ್ಮಸಂನ್ಯಾಸಪೂರ್ವಕೋಽಭಿಹಿತಃ, ಕಿಮಯಂ ವಿಧಿಪರಿಪ್ರಾಪಿತಃ ಕಿಂ ವಾ ಸ್ವರಸತ ಏವಾತ್ರ ಪುಮಾನ್ ಪ್ರವರ್ತತ ಇತಿ ? ಕಿಂ ಚಾತಃ ? ಶೃಣು । ಯದ್ಯಾತ್ಮವಸ್ತುಸಾಕ್ಷಾತ್ಕರಣಾಯ ವಿಧಿಪರಿಪ್ರಾಪಿತೋಽಯಂ ನ್ಯಾಯಃ, ತದಾ ಅವಶ್ಯಮ್ ಆತ್ಮವಸ್ತುಸಾಕ್ಷಾತ್ಕರಣಾಯ ವ್ಯಾವೃತ್ತಶುಭಾಶುಭಕರ್ಮರಾಶಿಃ, ಏಕಾಗ್ರಮನಾಃ, ಅನ್ವಯವ್ಯತಿರೇಕಾಭ್ಯಾಂ

1. ಪದಗಳಿಗೆ ಸಾಮಾನಾಧಿಕರಣ್ಯವೂ ಪದಾರ್ಥಗಳಿಗೆ ವಿಶೇಷ್ಯವಿಶೇಷಣಭಾವವೂ, ಅವಕ್ಕೂ ಪ್ರತ್ಯಗಾತ್ಮನಿಗೂ ಲಕ್ಷ್ಯಲಕ್ಷಣಭಾವವೂ ಇರುತ್ತದೆ.

ಯಥೋಕ್ತಾಭ್ಯಾಮ್ ಆತ್ಮದರ್ಶನಂ ಕರೋತಿ । ಅಪರಿಸಮಾಪ್ಯ ಆತ್ಮದರ್ಶನಂ ತತಃ ಪ್ರಚ್ಯವಮಾನಃ ಆರೂಢಪತಿತೋ ಭವತಿ । ಯದಿ ಪುನರ್ಯಾದೃಚ್ಛಾತಃ ಪ್ರವರ್ತತೇ ತದಾ ನ ಕಶ್ಚಿದ್ದೋಷ ಇತಿ । ವಿಧಿಪರಿ ಪ್ರಾಪಿತ ಇತಿ ಬ್ರೂಮಃ । ಯತ ಆಹ –

ಶಮಾದಿಸಾಧನಃ ಪಶ್ಯೇದಾತ್ಮನ್ಯಾತ್ಮಾನಮಞ್ಜಸಾ ।
ಅನ್ವಯವ್ಯತಿರೇಕಾಭ್ಯಾಂ ತ್ಯಕ್ತ್ವಾ ಯುಷ್ಮದಶೇಷತಃ ॥೪॥
ಯುಷ್ಮದರ್ಥೇ ಪರಿತ್ಯಕ್ತೇ ಪೂರ್ವೋಕ್ತೈರ್ಹೇತುಭಿಃ ಶ್ರುತಿಃ ।
ವೀಕ್ಷಾಪನ್ನಸ್ಯ ಕೋಽಸ್ಮೀತಿ ತತ್ತ್ವಮಿತ್ಯಾಹ ಸೌಹೃದಾತ್ ॥೫॥

(ಅರ್ಥ)

ಈ ಸೂತ್ರವನ್ನು ಹೇಳಿದ್ದನ್ನು (ನೋಡಿ) ಒಬ್ಬನು ಆಕ್ಷೇಪಿಸುತ್ತಾನೆ ; ಏನೆಂದರೆ : ವಾಕ್ಯಾರ್ಥಜ್ಞಾನಕ್ಕಾಗಿ ಸರ್ವಕರ್ಮಸಂನ್ಯಾಸಪೂರ್ವಕವಾಗಿ [1] (ಮಾಡುವ) ಅನ್ವಯವ್ಯತಿರೇಕರೂಪವಾದ ಈ ನ್ಯಾಯವನ್ನು ಹಿಂದಿನ ಅಧ್ಯಾಯದಲ್ಲಿ ಹೇಳಿದೆಯಲ್ಲ , ಇದು ವಿಧಿಯಿಂದ ಬಂದೊದಗಿದ್ದೊ , ಅಥವಾ ಇದರಲ್ಲಿ ಪುರುಷನು ತಾನೆ ತೊಡಗುತ್ತಾನೊ ?

(ಪ್ರಶ್ನೆ) :- ಇದರಿಂದೇನು [2] ?

(ಉತ್ತರ) :- ಕೇಳು. ಆತ್ಮವಸ್ತುವಿನ ಸಾಕ್ಷಾತ್ಕಾರಕ್ಕಾಗಿ ಈ ನ್ಯಾಯವು ವಿಧಿಯಿಂದ ಬಂದೊದಗಿದೆ ಎನ್ನುವದಾದರೆ ಆಗ ಆತ್ಮವಸ್ತುವಿನ ಸಾಕ್ಷಾತ್ಕಾರಕ್ಕಾಗಿ ಒಳ್ಳೆಯ ಕೆಟ್ಟ ಕರ್ಮರಾಶಿಯನ್ನೆಲ್ಲ ಬಿಟ್ಟು ಏಕಾಗ್ರವಾದ ಮನಸ್ಸಿನಿಂದ [3] ಹಿಂದೆ ಹೇಳಿರುವ ಅನ್ವಯವ್ಯತಿರೇಕಗಳಿಂದ ಆತ್ಮದರ್ಶನವನ್ನು

---

1. ಒಂದನೆಯ ಅಧ್ಯಾಯದಲ್ಲಿ ಕರ್ಮಜ್ಞಾನಗಳ ಸಮುಚ್ಚಯದಿಂದ ಮೋಕ್ಷವೆಂಬ ವಾದಗಳನ್ನು ವಿಸ್ತಾರವಾಗಿ ಖಂಡಿಸಿರುವದರಿಂದಲೇ ಇದು ಸಿದ್ಧವಾಗುತ್ತದೆ. ಆ ಅಧ್ಯಾಯದ ೫೨ನೆಯ ಶ್ಲೋಕದ ಸಂಬಂಧೋಕ್ತಿಯನ್ನೂ ಎರಡನೆಯ ಅಧ್ಯಾಯದಲ್ಲಿ ೨-೬ ರಿಂದ ೯ರ ವರೆಗಿನ ಶ್ಲೋಕಗಳನ್ನೂ ನೋಡಿ.

2. ವಿಧಿಪ್ರಾಪ್ತವಾದರೇನು, ಅಲ್ಲದಿದ್ದರೇನು ?

3. ಸಂನ್ಯಾಸವಾದ ಬಳಿಕ ಯೋಗಾಭ್ಯಾಸವನ್ನು ಮಾಡಬೇಕೆಂದು ೧-೫೨ನೆಯ ಶ್ಲೋಕದ ಸಂಬಂಧೋಕ್ತಿಯಲ್ಲಿ ಹೇಳಿರುವದು ಇದಕ್ಕಾಗಿಯೇ.

ಮಾಡಿಕೊಳ್ಳುತ್ತಾನೆ. ಆತ್ಮದರ್ಶನವನ್ನು ಪೂರ್ತಿಯಾಗಿ ಪಡೆದುಕೊಳ್ಳದೆ ಅದರಿಂದ ಜಾರಿದರೆ ಆರೂಢಪತಿತನಾಗುತ್ತಾನೆ[1]. ಹಾಗಿಲ್ಲದೆ ತಾನೇ ತೊಡಗಿದ್ದರೆ ಆಗ ಯಾವ ದೋಷವೂ ಇರುವದಿಲ್ಲ[2].

(ಸಿದ್ಧಾಂತ) :- (ಈ ನ್ಯಾಯವು) ವಿಧಿಯಿಂದ ಬಂದೊದಗಿದ್ದು ಎಂದು ಹೇಳುತ್ತೇವೆ. ಏಕೆಂದರೆ (ಈ ಮುಂದಿನ ಉತ್ತರವನ್ನು) ಹೇಳುತ್ತಾರೆ :

೪-೫. ಶಮಾದಿಸಾಧನಗಳಿಂದೊಡಗೂಡಿ ಅನ್ವಯವ್ಯತಿರೇಕಗಳಿಂದ ಯುಷ್ಮದಂಶವನ್ನು[3] ಸಂಪೂರ್ಣವಾಗಿಬಿಟ್ಟು ತನ್ನಲ್ಲಿಯೇ ಆತ್ಮನನ್ನು ಚೆನ್ನಾಗಿ ನೋಡಬೇಕು[4]. ಹಿಂದೆ ಹೇಳಿರುವ ಹೇತುಗಳಿಂದ ಯುಷ್ಮದರ್ಥವನ್ನು ಬಿಟ್ಟಬಳಿಕ ಯಾರಾಗಿರುವೆನೆಂದು ಪರ್ಯಾಲೋಚನೆಮಾಡುತ್ತಿರುವವನಿಗೆ ಶ್ರುತಿಯು ಸೌಹಾರ್ದದಿಂದ 'ಅದು ನೀನು' ಎಂದು ಹೇಳುತ್ತದೆ[5].

## ವಾಕ್ಯದಿಂದ ತೊಲಗುವ ಅಜ್ಞಾನದ ಸ್ವರೂಪ

(ಮೂಲ)

ಅತ್ರಾಪಿ ಚೋದಯನ್ತಿ ಸಾಂಖ್ಯಾಃ । ಶರೀರೇನ್ದ್ರಿಯಮನೋಬುದ್ಧಿಷು ಅನಾತ್ಮಸು ನಿಸ್ಸನ್ನಿಬನ್ಧನಂ ಮಿಥ್ಯಾಜ್ಞಾನಮಜ್ಞಾನಮ್ । ತನ್ನಿಬನ್ಧನೋ ಹಿ ಆತ್ಮನೋಽನೇಕಾನರ್ಥಸಂಬನ್ಧಃ । ತಸ್ಯ ಚ ಅನ್ವಯವ್ಯತಿರೇಕಾಭ್ಯಾಮೇವ ನಿರಸ್ತತ್ವಾತ್ ನಿರ್ವಿಷಯಂ ತತ್ತ್ವಮಸ್ಯಾದಿವಾಕ್ಯಂ

1. ಸೂ.ಭಾ. ೩-೪-೪೦ನ್ನು ನೋಡಿ.

2. ಬೇಕಾದರೆ ಅನ್ವಯವ್ಯತಿರೇಕವನ್ನು ಮಾಡಬಹುದು, ಇಲ್ಲದಿದ್ದರೆ ಇಲ್ಲ. ಶಾಸ್ತ್ರದ ಕಟ್ಟೇನೂ ಇರುವದಿಲ್ಲ- ಎಂದರ್ಥ.

3. ಅನಾತ್ಮಾಂಶವನ್ನು

4. ಬೃ. ೪-೪-೨೩ ಮಾಧ್ಯಂದಿನ ಪಾಠ. ಈ ಶ್ರುತಿಯಲ್ಲಿ 'ಪಶ್ಯೇತ್' (ನೋಡಬೇಕು) ಎಂದು ವಿಧಿಯು ದರ್ಶನದಲ್ಲಿದ್ದರೂ ದರ್ಶನವು ವಿಧೇಯವಲ್ಲದ್ದರಿಂದ ದರ್ಶನವಾಗುವಂತೆ ಶಮಾದಿಗಳನ್ನು ಮಾಡಿಕೊಳ್ಳಬೇಕು ಎಂದು ವಿಧಿಯನ್ನು ಕಲ್ಪಿಸಿಕೊಳ್ಳಬೇಕು ಎಂದು ಭಾವ.

5. ಅನ್ವಯವ್ಯತಿರೇಕಗಳಿಂದ ನಾನು ಯಾರು ?- ಎಂಬ ಪ್ರಶ್ನೆಗೆ ಉತ್ತರವು ಸಿಕ್ಕಿರುವದಿಲ್ಲ. ಅದು ವಾಕ್ಯದಿಂದಲೇ ಸಿಕ್ಕಬೇಕಾಗಿರುತ್ತದೆ ಎಂದರ್ಥ.

ಪ್ರಾಪ್ತಮ್ । ತಸ್ಮಾತ್ ವಾಕ್ಯಸ್ಯ ಚ ಏಷ ಮಹಿಮಾ ಯೋಽಯಮ್ ಆತ್ಮಾನಾತ್ಮನೋರ್ವಿಭಾಗ ಇತಿ । ತನ್ನಿರಾಕರಣಾಯ ಇದಮುಚ್ಯತೇ –

ಭೇದಸಂವಿದಿದಂಜ್ಞಾನಂ ಭೇದಾಭಾವಶ್ಚ ಸಾಕ್ಷಿಣಿ ।
ಕಾರ್ಯಮೇತದವಿದ್ಯಾಯಾ ಜ್ಞಾತ್ಮನಾ ತ್ಯಾಜಯೇದ್ವಚಃ ॥೬॥

(ಅರ್ಥ)

ಇಲ್ಲಿಯೂ ಸಾಂಖ್ಯರು ಆಕ್ಷೇಪಿಸುತ್ತಾರೇನೆಂದರೆ : 'ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ- ಎಂಬ ಅನಾತ್ಮಗಳಲ್ಲಿ ಆತ್ಮ ಎಂದು ಗಟ್ಟಿಯಾಗಿ ಬಿಗಿದುಕೊಂಡಿರುವ ಮಿಥ್ಯಾಜ್ಞಾನವೇ ಅಜ್ಞಾನವು. ಅದರ ನಿಮಿತ್ತದಿಂದಲೇ ಅಲ್ಲವೆ, ಆತ್ಮನಿಗೆ ಅನೇಕಾನರ್ಥಗಳ ಸಂಬಂಧ (ವಾಗಿರುತ್ತದೆ)? ಅದು ಅನ್ವಯ ವ್ಯತಿರೇಕಗಳಿಂದಲೇ ತೊಲಗಿರುವದರಿಂದ ತತ್ತ್ವಮಸಿ ಮುಂತಾದ ವಾಕ್ಯಕ್ಕೆ ವಿಷಯವೇ ಇಲ್ಲವೆಂದಾಗುವದು [1]. ಆದ್ದರಿಂದ ಈ ಆತ್ಮಾನಾತ್ಮರುಗಳ ವಿಭಾಗವೆಂಬುದೇ ವಾಕ್ಯದ ಮಹಿಮೆಯು (ಎಂದೊಪ್ಪಬೇಕು) [2]. ಈ (ಮತದ) ನಿರಾಕರಣೆಗಾಗಿ ಇದನ್ನು ಹೇಳಲಾಗಿರುತ್ತದೆ :

೬. ಇದಂಜ್ಞಾನವು [3] ಭೇದಜ್ಞಾನವು [4], ಸಾಕ್ಷಿಯಲ್ಲಿ ಭೇದದ ಅಭಾವವಿರುವದು- ಎಂಬೀ ಅವಿದ್ಯೆಯ ಕಾರ್ಯವನ್ನು [5] ವಾಕ್ಯವು ಜ್ಞಸ್ವರೂಪ (ದ ತಿಳಿವಳಿಕೆ) ಯಿಂದ [6] ಬಿಡಿಸಿಕೊಡುವದು.

---

1. ಸಾಂಖ್ಯರ ಮತದಲ್ಲಿ ಆತ್ಮಾನಾತ್ಮರ ಅವಿವೇಕವೇ ಬಂಧಕ್ಕೆ ಕಾರಣವು, ವಿವೇಕವೇ ಮೋಕ್ಷಕ್ಕೆ ಕಾರಣವು. ಈ ವಿವೇಕವಾದ ಬಳಿಕ ಮಾಡತಕ್ಕದ್ದೇನೂ ಇಲ್ಲ.

2. ತರ್ಕದಿಂದ ಆದ್ದದ್ದನ್ನೇ ವಾಕ್ಯವೂ ಹೇಳುತ್ತದೆ ಎಂದು ಭಾವ. ಸಾಂಖ್ಯರಿಗೆ ತರ್ಕವೇ ಪ್ರಧಾನವಾಗಿರುತ್ತದೆ. ವೇದಾಂತಿಗಳಿಗೆ ವಾಕ್ಯವೇ ಪ್ರಧಾನವಾಗಿರುತ್ತದೆ.

3. ಅನಾತ್ಮಜ್ಞಾನವು.

4. ಕ್ರಿಯಾಕಾರಕಫಲಭೇದರೂಪವಾಗಿರುತ್ತದೆ.

5. ಅನಾತ್ಮಜ್ಞಾನವು ಭೇದರೂಪವಾಗಿದೆ, ಸಾಕ್ಷಿಯಲ್ಲಿ ಭೇದದ ಅಭಾವವಿದೆ- ಎಂಬೀ ವಿವೇಕವು ಅವಿದ್ಯೆಯ ಕಾರ್ಯವು.

6. ವಾಕ್ಯವು ಅದ್ವಿತೀಯಚೈತನ್ಯಮಾತ್ರವನ್ನು ತಿಳಿಸುವ ಜ್ಞಾನದಿಂದ ಅಜ್ಞಾನವನ್ನೂ ಅದರ ಕಾರ್ಯವಾದ ಆತ್ಮಾನಾತ್ಮವಿಭಾಗವನ್ನೂ ತೊಲಗಿಸುತ್ತದೆ ಎಂದಭಿಪ್ರಾಯ. ವಿಭಾಗವು ಮಾತ್ರ ಅನ್ವಯವ್ಯತಿರೇಕಗಳಿಂದಾಗುತ್ತದೆ ; ಅದು ಅವಿದ್ಯಾ ವಿಷಯವೇ ಆಗಿದೆ ಎಂದರ್ಥ. ೨-೧೦೩ರ ಸಂಬಧೋಕ್ತಿಯನ್ನು ನೋಡಿರಿ.

(ಮೂಲ)

'ಜ್ಞಾತ್ಮನಾ ತ್ಯಾಜಯೇದ್ವಚಃ' ಇತ್ಯುಪಶ್ರುತ್ಯ ಆಹ ಕಶ್ಚಿತ್ । ಮಿಥ್ಯಾಜ್ಞಾನವ್ಯತಿರೇಕೇಣಾತ್ಮಾನವಬೋಧಸ್ಯ ಅಭಾವಾತ್ ಕಿಂ ವಾಕ್ಯೇನ ನಿವರ್ತ್ಯತೇ । ಅಜ್ಞಾನಂ ಹಿ ನಾಮ ಜ್ಞಾನಾಭಾವಃ । ತಸ್ಯ ಚ ಅವಸ್ತುಸ್ವಾಭಾವ್ಯಾತ್ ಕುತಃ ಸಂಸಾರಕಾರಣತ್ವಮ್ ? ನ ಹಿ ಅಸತಃ ಸಜ್ಜನ್ಮೇಷ್ಯತೇ । 'ಕುತಸ್ತು ಖಲು ಸೌಮ್ಯೇವಂ ಸ್ಯಾದಿತಿ । ....ಕಥಮಸತಃ ಸಜ್ಜಾಯೇತ' (ಛಾಂ. ೬-೨-೨) ಇತಿ ಶ್ರುತೇರಿತಿ । ಅತ್ರೋಚ್ಯತೇ –

ಅಜ್ಞಾತ ಏವ ಸರ್ವೋಽರ್ಥಃ ಪ್ರಾಗ್ಯತೋ ಬುದ್ಧಿಜನ್ಮನಃ ।<br>
ಏಕೇನೈವ ಸತಾ ಸಂಶ್ಚ ಸನ್ನಜ್ಞಾತೋ ಭವೇತ್ತತಃ ॥೭॥

(ಅರ್ಥ)

'ಜ್ಞಾತ್ಮನಾ ತ್ಯಾಜಯೇದ್ ವಚಃ' (ವಾಕ್ಯವು ಜ್ಞಸ್ವರೂಪದ ತಿಳಿವಳಿಕೆಯಿಂದ ಬಿಡಿಸುವದು) ಎಂಬ (ಮಾತನ್ನು) ಕೇಳಿ ಒಬ್ಬನು[1] ಹೇಳುತ್ತಾನೇನೆಂದರೆ, ಮಿಥ್ಯಾಜ್ಞಾನಕ್ಕಿಂತ ವ್ಯತಿರಿಕ್ತವಾಗಿ ಆತ್ಮಾಜ್ಞಾನವೇ ಇಲ್ಲದಿರುವದರಿಂದ ವಾಕ್ಯದಿಂದ ತೊಲಗಿಸಿಕೊಳ್ಳಬೇಕಾದದ್ದು ಏನು (ಇದೆ) ? ಅಜ್ಞಾನವು ಎಂದರೆ ಜ್ಞಾನಾಭಾವವಷ್ಟೆ[2]. ಅದು ಅವಸ್ತುಸ್ವಭಾವವುಳ್ಳದ್ದಾಗಿರುವದರಿಂದ (ಅದಕ್ಕೆ) ಸಂಸಾರಕಾರಣತ್ವವೆಲ್ಲಿಯದು[3] ? ಅಸತ್ತಿನಿಂದ

1. ಈ ಪೂರ್ವಪಕ್ಷಿಯು ಯಾರೆಂಬುದು ಸ್ಪಷ್ಟವಾಗಿಲ್ಲ. ಇವನು ಪೂರ್ವಮೀಮಾಂಸಕರ ಅಭಿಪ್ರಾಯವನ್ನು ಉಪಯೋಗಿಸಿಕೊಂಡಿರುತ್ತಾನೆ.

2. ನಿಮ್ಮ ಅಭಿಪ್ರಾಯದಲ್ಲಿ ಮಿಥ್ಯಾಜ್ಞಾನಕ್ಕಿಂತ ವ್ಯತಿರಿಕ್ತವಾಗಿರುವ ಅಜ್ಞಾನವೆಂದರೆ ಜ್ಞಾನಾಭಾವವೇ ಎಂದರ್ಥ.

3. ಮಿಥ್ಯಾಜ್ಞಾನ, ಸಂಶಯ, ಅಜ್ಞಾನ- ಎಂಬ ಮೂರು ಬಗೆಯ ಅಪ್ರಮಾಣಗಳಲ್ಲಿ ಮೊದಲನೆಯ ಎರಡು ದುಷ್ಟಕಾರಣದಿಂದುಂಟಾಗುವದರಿಂದ ವಸ್ತುಸ್ವರೂಪವಾದ ಅವೆರಡರಿಂದಲೂ ಕಾರ್ಯವುಂಟಾಗಬಹುದು. ಅಜ್ಞಾನವು ಅವಸ್ತು- ಎಂದು ಭಟ್ಟಪಾದರು ಹೇಳಿರುತ್ತಾರೆ. ಅದನ್ನನುಸರಿಸಿ ಈ ಆಕ್ಷೇಪವನ್ನೆತ್ತಿದೆ. ಅಗ್ರಹಣಕ್ಕಿಂತ ಬೇರೆಯಾದ ಭಾವರೂಪಾನಾದ್ಯವಿದ್ಯೆಯಿದೆ ಎಂಬ ಅಭಿಪ್ರಾಯದಿಂದ ಈ ಆಕ್ಷೇಪಣೆ ಬಂದಿದೆ ಎಂದು ವ್ಯಾಖ್ಯಾನಕಾರರು ಬರೆದಿರುತ್ತಾರೆ. ಈ ಅಭಿಪ್ರಾಯವು ಮೂಲದಲ್ಲಿ ಇಲ್ಲಿ ಕಾಣುವದಿಲ್ಲ. ಈ ಗ್ರಂಥದಲ್ಲಿ ಎಲ್ಲಿಯೂ ಅಗ್ರಹಣವ್ಯತಿರಿಕ್ತವಾದ ಭಾವಾವಿದ್ಯೆಯ ವಿಷಯದ ಆಕ್ಷೇಪವಾಗಲಿ ಸಮಾಧಾನವಾಗಲಿ ಪರಾಮರ್ಶವಾಗಲಿ ಇರುವದೇ ಇಲ್ಲವೆಂಬುದನ್ನು ಲಕ್ಷಿಸಬೇಕು. ಪೀಠಿಕೆಯನ್ನು ನೋಡಿ.

ಸತ್ತಿನ ಜನ್ಮವು ಆಗಲೇ ಆರದು ; ಏಕೆಂದರೆ 'ಸೋಮ್ಯನೆ, ಹೇಗೆತಾನೆ ಹಾಗಾದೀತು ?.... ಅಸತ್ತಿನಿಂದ ಸತ್ತು ಹೇಗೆ ಜನಿಸೀತು ?' (ಛಾಂ. ೬-೨-೨) ಎಂದು ಶ್ರುತಿ ಹೇಳುತ್ತದೆ. ಇದಕ್ಕೆ ಹೇಳುತ್ತಾರೆ :

೭. ಪ್ರತಿಯೊಂದು ವಸ್ತುವೂ ಜ್ಞಾನವುಂಟಾಗುವ ಮುಂಚೆ ಅಜ್ಞಾತವೇ ಆಗಿರುತ್ತದೆ [1] ; ಮತ್ತು ಒಂದೇ ಸತ್ತಿನಿಂದ ಸತ್ತೆನಿಸಿರುತ್ತದೆಯಷ್ಟೆ [2]. ಆದ್ದರಿಂದ ಸತ್ತೇ ಅಜ್ಞಾತವಾಗಿರಬೇಕು [3].

(ಮೂಲ)

'ಸನ್ನಜ್ಞಾತೋ ಭವೇತ್ತತಃ' ಇತ್ಯುಕ್ತಮಧಸ್ತನೇನ ಶ್ಲೋಕೇನ । ಕೋಽಸೌ ಸನ್ನಜ್ಞಾತ ಇತ್ಯಪೇಕ್ಷಾಯಾಂ ತತ್ಸ್ವರೂಪಪ್ರತಿಪಾದನಾಯಾಹ –

**ಪ್ರಮಿತ್ಸಾಯಾಂ ಯ ಆಭಾತಿ ಸ್ವಯಂ ಮಾತೃಪ್ರಮಾಣಯೋಃ ।**
**ಸ್ವಮಹಿಮ್ನಾ ಚ ಯಃ ಸಿದ್ಧಃ ಸೋಽಜ್ಞಾತಾರ್ಥೋಽವಸೀಯತಾಮ್॥**

---

1. ಅಜ್ಞಾನವೆಂದರೆ ಪ್ರಮಿತಿಯುಂಟಾಗದಿರುವದು. ಆದ್ದರಿಂದ ಪ್ರಮಿತಿಯಿಂದ ಅದು ತೊಲಗುವದು. ಅಜ್ಞಾನವಿಲ್ಲದೆ ಸಂಶಯಮಿಥ್ಯಾಜ್ಞಾನಗಳು ಇರುವದೇ ಇಲ್ಲ, ಅದು ಹೋದ ಮೇಲೆ ಅವುಗಳನ್ನು ತೊಲಗಿಸಬೇಕಾದದ್ದು ಇಲ್ಲ ; ಆದ್ದರಿಂದ ಅವುಗಳ ತತ್ತ್ವವು ಅಜ್ಞಾನವೇ. ಆದ್ದರಿಂದ ಮಿಥ್ಯಾಜ್ಞಾನಕ್ಕಿಂತ ಬೇರೆಯ ಅಜ್ಞಾನವಿಲ್ಲವೆನ್ನಬಾರದು ಎಂದು ಭಾವ. ಬೃ.ವಾ. ೧-೪-೪೩೭, ೪೩೮, ೪೪೦ ಇವನ್ನು ನೋಡಿ.

2. ಅಜ್ಞಾತವಸ್ತುವು ಯಾವಾಗಲೂ ಸದ್ (ಇರುವದು) ಎಂದೇ ಭಾಸವಾಗುತ್ತದೆ ; ಆ ಇರವಿನಲ್ಲಿ ಭೇದವೂ ಇಲ್ಲ ಎಂದರ್ಥ. ಗೀ.ಭಾ. ೨-೧೬ನ್ನು ನೋಡಿ.

3. ಆದ್ದರಿಂದ ಅಜ್ಞಾತವಾದ ಸತ್ತೇ ಸಂಸಾರಕ್ಕೆ ಕಾರಣ ; ಹೀಗಿರುವದರಿಂದ ಅವಸ್ತುವು ಕಾರಣವಾಗುವದು ಹೇಗೆ ?- ಎಂಬ ಆಕ್ಷೇಪಣೆಗೆ ಅವಕಾಶವಿಲ್ಲ. ಅಜ್ಞಾನ, ಸಂಶಯ, ಮಿಥ್ಯಾಜ್ಞಾನ- ಇವು ಮೂರೂ ತಮ್ಮ ರೂಪದಿಂದ ಅಸತ್ತು, ಆತ್ಮರೂಪದಿಂದ ಸತ್ತು. ಜ್ಞಾನದಿಂದ ನಾಶವಾಗುವದು ಅಸತ್ತೇ ಆಗಿರಬೇಕು. ಬೃ.ವಾ. ೧-೪-೪೨೦, ೪೨೪, ೪೪೨, ೪೪೪ ಇವನ್ನು ನೋಡಿ. ಹಿಂದಿನ ಸಂಬಂಧೋಕ್ತಿಯಂತೆ ಈ ಉತ್ತರಕ್ಕೂ ಭಾವಾವಿದ್ಯೆಯ ಪರವಾದ ತಾತ್ಪರ್ಯವನ್ನು ವ್ಯಾಖ್ಯಾನದಲ್ಲಿ ತೆಗೆಯುವದಕ್ಕೆ ಪ್ರಯತ್ನಿಸಿದೆ. ಅದು ಮೂಲಗ್ರಂಥಕ್ಕೂ ಬೃ. ವಾರ್ತಿಕಕ್ಕೂ ಅನನುಗುಣವಾದ್ದರಿಂದ ನಾವು ಅದನ್ನು ಕೈಬಿಟ್ಟಿರುತ್ತೇವೆ.

(ಅರ್ಥ)

''ಆದ್ದರಿಂದ ಸತ್ತೆ ಅಜ್ಞಾತವಾಗಿರಬೇಕು'' ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದೆಯಷ್ಟೆ. ಈ ಅಜ್ಞಾತವಾದ ಸತ್ತು ಯಾವದು ?- ಎಂಬ ಅಪೇಕ್ಷೆಯುಂಟಾಗಲಾಗಿ ಅದರ ಸ್ವರೂಪವನ್ನು ತಿಳಿಸುವದಕ್ಕಾಗಿ ಹೇಳುತ್ತಾರೆ :

೮. ಪ್ರಮಿತ್ಸೆಯುಂಟಾಗಲಾಗಿ ಪ್ರಮಾತೃಪ್ರಮೇಯಗಳಲ್ಲಿ ಯಾವನು ತಾನೇ ತೋರುತ್ತಿರುವನೋ[1], ಯಾವನು ತನ್ನ ಮಹಿಮೆಯಿಂದಲೇ ಸಿದ್ಧನಾಗಿರುವನೋ[2] ಅವನೇ ಅಜ್ಞಾತಾರ್ಥವೆಂದು ನಿಶ್ಚಯಿಸಿರಿ[3].

## ವಾಕ್ಯದಿಂದ ಅವಾಕ್ಯಾರ್ಥಜ್ಞಾನವಾಗುವ ಬಗೆ

(ಮೂಲ)

**ಅತ್ರ ಕೇಚಿದಾಹುಃ । ಯತ್ಕಿಂಚಿದಿಹ ವಾಕ್ಯಂ ಲೌಕಿಕಂ ವೈದಿಕಂ ವಾ ತತ್ಸರ್ವಂ ಸಂಸರ್ಗಾತ್ಮಕಮೇವ ವಾಕ್ಯಾರ್ಥಂ ಗಮಯತಿ । ಅತಸ್ತತ್ತ್ವಮಸ್ಯಾದಿವಾಕ್ಯೇಭ್ಯಃ ಸಂಸರ್ಗಾತ್ಮಕಮ್ 'ಅಹಂ ಬ್ರಹ್ಮ' ಇತಿ ವಿಜ್ಞಾಯ ತಾವನ್ನಿದಿಧ್ಯಾಸೀತ ಯಾವತ್ ಅವಾಕ್ಯಾರ್ಥಾತ್ಮಕಃ ಪ್ರತ್ಯಗಾತ್ಮವಿಷಯೋಽವಬೋಧಃ 'ಅಹಂ ಬ್ರಹ್ಮ' ಇತಿ ಸಮಭಿಜಾಯತೇ । ತಸ್ಮಾದೇವ ವಿಜ್ಞಾನಾತ್ ಕೈವಲ್ಯಮ್ ಆಪ್ನೋತೀತಿ । ತನ್ನಿರಾಕರಣಾಯ ಇದಮುಚ್ಯತೇ–**

---

1. ಪ್ರಮಾತೃವಿಗೆ ಪ್ರಮೇಯವನ್ನು ಗೊತ್ತುಪಡಿಸಿಕೊಳ್ಳಬೇಕೆಂಬ ಇಚ್ಛೆಯುಂಟಾಗಲು ಪ್ರಮಾಣವನ್ನು ಬಯಸುತ್ತಾನಲ್ಲ, ಅದೇ ಪ್ರಮಿತ್ಸೆ. ಅದು ಉಂಟಾದಾಗ ಪ್ರಮಾಣದಲ್ಲಿಯೂ ಪ್ರಮೇಯದಲ್ಲಿಯೂ ಚೈತನ್ಯರೂಪವೇ ಪ್ರಕಾಶಿಸುತ್ತದೆ. ಆ ಚಿತ್ಪ್ರಕಾಶವಿಲ್ಲದೆ ಪ್ರಮಾತೃವಾಗಲಿ ಪ್ರಮೇಯವಾಗಲಿ ನಮಗೆ ತಿಳಿಯುವಂತೆಯೇ ಇಲ್ಲ. ಅದೇ ಅವುಗಳ ತತ್ತ್ವವು. ಬೃ.ವಾ. ೧-೪-೨೮೨.

2. ಆತ್ಮನು ಸ್ವತಃಸಿದ್ಧನು, ಅಜ್ಞಾನತತ್ಕಾರ್ಯಗಳು ಅವಿಚಾರಿತಸಿದ್ಧ, ಪರತಃಸಿದ್ಧ.

3. ಆತ್ಮನೇ ಅಜ್ಞಾತನು, ಆತ್ಮವಿಷಯಕವಾದ ಅಜ್ಞಾನವನ್ನು ಕಳೆದುಕೊಂಡರೆ ಎಲ್ಲವನ್ನೂ ಅರಿತಂತೆ- ಎಂಬುದು ವಾರ್ತಿಕಪ್ರಸ್ಥಾನದಲ್ಲಿ ಮತ್ತೆ ಮತ್ತೆ ಬರುತ್ತದೆ.

**ಸಾಮಾನಾಧಿಕರಣ್ಯಾದೇರ್ಘಟೇತರಖಯೋರಿವ ।**
**ವ್ಯಾವೃತ್ತೇಃ ಸ್ಯಾದವಾಕ್ಯಾರ್ಥಃ ಸಾಕ್ಷಾನ್ನಸ್ತತ್ತ್ವಮರ್ಥಯೋಃ ॥೯॥**

(ಅರ್ಥ)

ಇಲ್ಲಿ ಕೆಲವರು ಹೇಳುತ್ತಾರೇನೆಂದರೆ : ಲೌಕಿಕವಾಗಲಿ ವೈದಿಕವಾಗಲಿ ಯಾವ ವಾಕ್ಯವಾದರೂ ಸಂಸರ್ಗಾತ್ಮಕವಾದ [1] ವಾಕ್ಯಾರ್ಥವನ್ನೇ ತಿಳಿಸುತ್ತದೆ. ಆದ್ದರಿಂದ ತತ್ತ್ವಮಸಿ ಮುಂತಾದ ವಾಕ್ಯಗಳಿಂದ ಸಂಸರ್ಗಾತ್ಮಕವಾದ 'ಅಹಂ ಬ್ರಹ್ಮ' ಎಂದು ಅರಿತುಕೊಂಡು ಅವಾಕ್ಯಾರ್ಥಾತ್ಮಕವಾಗಿ 'ನಾನು ಬ್ರಹ್ಮವು' ಎಂಬ ಪ್ರತ್ಯಗಾತ್ಮವಿಷಯವಾದ ಜ್ಞಾನವು ಉಂಟಾಗುವ ವರೆಗೂ ನಿದಿಧ್ಯಾಸನಮಾಡುತ್ತಿರಬೇಕು [2]. ಆ ವಿಜ್ಞಾನದಿಂದಲೇ ಕೈವಲ್ಯವನ್ನು (ಸಾಧಕನು) ಹೊಂದುತ್ತಾನೆ.

ಈ (ಮತವನ್ನು) ನಿರಾಕರಿಸುವದಕ್ಕಾಗಿ ಇದನ್ನು ಹೇಳಿರುತ್ತದೆ :

೯. ಸಾಮಾನಾಧಿಕರಣ್ಯವೇ ಮುಂತಾದದ್ದರಿಂದ ಗಡಿಗೆಯ ಆಕಾಶ, ಮತ್ತೊಂದು ಆಕಾಶ- ಇವುಗಳಂತೆ [3] ತತ್ತ್ವಮರ್ಥಗಳ ವ್ಯಾವೃತ್ತಿಯಾಗಲು ನಮ್ಮ (ಮತದಲ್ಲಿ) ಅವಾಕ್ಯಾರ್ಥವು ಸಾಕ್ಷಾತ್ತಾಗಿಯೇ [4] ಆಗುವದು.

(ಮೂಲ)

**ಕುತೋಽವಾಕ್ಯಾರ್ಥೋಽವಸೀಯತೇ ಇತಿ ಚೇತ್ ತತ್ತ್ವಂಪತ್ಯರ್ಥಂ ವಿಶೇಷಣವಿಶೇಷ್ಯಯೋಃ ಸಾಮರ್ಥ್ಯೋಕ್ತಿಃ –**

---

1. ಪದಾರ್ಥಗಳ ಸಂಬಂಧರೂಪವಾದ ಎಂದರ್ಥ. ಪದಾರ್ಥಗಳ ಸಂಸರ್ಗ ವಿಶೇಷವನ್ನೇ ವಾಕ್ಯವು ಹೇಳುತ್ತದೆ. ಆದರೆ ಆತ್ಮನಲ್ಲಿ ಎರಡನೆಯ ವಸ್ತುವಿನ ಸಂಬಂಧವೇ ಇಲ್ಲ ಎಂದರ್ಥ.

2. ಈ ಮತದಲ್ಲಿ ನಿದಿಧ್ಯಾಸನವೆಂದರೆ ವಾಕ್ಯಾರ್ಥಜ್ಞಾನದ ಅಭ್ಯಾಸವೇ. ಈ ಮತವು ಯಾರದೆಂಬ ವಿಷಯಕ್ಕೆ ಪೀಠಿಕೆಯನ್ನು ನೋಡಿ.

3. ಗಡಿಗೆಯ ಆಕಾಶವೇ ಮಹಾಕಾಶವು ಎಂಬ ವಾಕ್ಯದಲ್ಲಿ ಆಕಾಶ, ಮಹಾಕಾಶಗಳ ಸಾಮಾನಾಧಿಕರಣ್ಯ, ವಿಶೇಷಣವಿಶೇಷ್ಯಭಾವ- ಇವುಗಳಿಂದ ಬೇರೆಬೇರೆ ಆಕಾಶಗಳ ಅವಿವಕ್ಷಿತಧರ್ಮಗಳನ್ನು ಬಿಟ್ಟು ಆಕಾಶಮಾತ್ರವನ್ನು ಗ್ರಹಿಸುವಂತೆ ಇಲ್ಲಿಯೂ ತತ್ತ್ವಮರ್ಥಗಳಲ್ಲಿ ಅವಿವಕ್ಷಿತಾಂಶಗಳು ತೊಲಗಿ ಲಕ್ಷ್ಯಲಕ್ಷಣಭಾವದಿಂದ ಪ್ರತ್ಯಗಾತ್ಮ ಮಾತ್ರವೇ ಗೃಹೀತವಾಗುತ್ತದೆ.

4. ಅಭ್ಯಾಸಾದಿಸಾಧನವನ್ನು ಬಯಸದೆಯೇ ಎಂದರ್ಥ.

**ನಿರ್ದುಃಖಿತ್ವಂ ತ್ವಮರ್ಥಸ್ಯ ತದರ್ಥೇನ ವಿಶೇಷಣಾತ್ ।**
**ಪ್ರತ್ಯಕ್ತಾ ಚ ತದರ್ಥಸ್ಯ ತ್ವಂಪದೇನಾಸ್ಯ ಸಂನಿಧೇಃ ॥೧೦॥**

(ಅರ್ಥ)

ಏತರಿಂದ ಅವಾಕ್ಯಾರ್ಥದ ನಿಶ್ಚಯವಾಗುತ್ತದೆ ?- ಎಂದರೆ, ಅದರ ಜ್ಞಾನಕ್ಕಾಗಿ ವಿಶೇಷಣವಿಶೇಷ್ಯಗಳ ಸಾಮರ್ಥ್ಯವನ್ನು (ಇಲ್ಲಿ) ಹೇಳಿರುತ್ತದೆ :

೧೦. ತ್ವಮರ್ಥಕ್ಕೆ ತದರ್ಥದ ವಿಶೇಷಣವಿರುವದರಿಂದ ನಿರ್ದುಃಖಿತ್ವವೂ ತದರ್ಥಕ್ಕೆ ತ್ವಂಪದಾರ್ಥದ ಸಂನಿಧಿಯಿರುವದರಿಂದ ಅದಕ್ಕೆ ಪ್ರತ್ಯಗಾತ್ಮತ್ವವೂ (ಅಭಿಪ್ರೇತವಾಗುವದು)[1].

(ಮೂಲ)

**ಉಕ್ತಂ ಸಾಮಾನಾಧಿಕರಣ್ಯಂ ವಿಶೇಷಣವಿಶೇಷ್ಯಭಾವಶ್ಚ ಸಂಕ್ಷೇಪತಃ । ಅಥ ಲಕ್ಷ್ಯಲಕ್ಷಣವ್ಯಾಖ್ಯಾನಾಯ ಆಹ–**

**ಕೂಟಸ್ಥಬೋಧಪ್ರತ್ಯಕ್ತ್ವಮನಿಮಿತ್ತಂ ಸದಾತ್ಮನಃ ।**
**ಬೋದ್ಧೃತಾಹಂತಯೋರ್ಹೇತುಸ್ತಾಭ್ಯಾಂ ತೇನೋಪಲಕ್ಷ್ಯತೇ॥೧೧॥**

ಸಾಮಾನಾಧಿಕರಣ್ಯವನ್ನೂ ವಿಶೇಷಣವಿಶೇಷ್ಯಭಾವವನ್ನೂ ಸಂಕ್ಷೇಪವಾಗಿ[2] ಹೇಳಿದ್ದಾಯಿತು. ಇನ್ನು ಲಕ್ಷ್ಯಲಕ್ಷಣವನ್ನು ವಿವರಿಸುವದಕ್ಕಾಗಿ[3] ಹೇಳುತ್ತಾರೆ :

---

1. ತತ್ತ್ವಂಪದಗಳು ಸಮಾನಾಧಿಕರಣವಾಗಿ ಒಂದೇ ವಸ್ತುವನ್ನು ಹೇಳುವದರಿಂದ ಅವುಗಳ ಅರ್ಥಗಳು ವಿಶೇಷಣವಿಶೇಷ್ಯಭಾವದಿಂದ ಹೊಂದಿಕೊಳ್ಳಬೇಕು. ತ್ವಮರ್ಥಕ್ಕೆ ಸಂಸಾರಿ ಎಂಬರ್ಥವಿದ್ದರೂ ಜಗತ್ಕಾರಣವಾದ ಸದ್ಬ್ರಹ್ಮವೆಂಬ ಅರ್ಥಕ್ಕೆ ವಿರುದ್ಧವಾಗಿರುವದರಿಂದ ಅದನ್ನು ಬಿಡಬೇಕು. ಹೀಗೆಯೇ ತತ್ (ಅದು) ಎಂಬ ಪದಕ್ಕೆ ಪರೋಕ್ಷ್ಯವೆಂಬ ಅರ್ಥವಿದ್ದರೂ ಅದು ತ್ವಂ (ನೀನು) ಎಂಬರ್ಥಕ್ಕೆ ವಿರುದ್ಧವಾಗುವದರಿಂದ ಅದನ್ನು ಬಿಡಬೇಕು. ಹೀಗೆ ನಿರ್ದುಃಖಿಯಾದ ಆತ್ಮನೆಂಬರ್ಥವು ಹೊರಡುತ್ತದೆ.

2. ಮುಂದೆ ವಿಸ್ತಾರವಾಗಿ ಹೇಳಲಾಗುವದು ಎಂದು ಅಭಿಪ್ರಾಯ.

3. ಸೂತ್ರವಾಕ್ಯದಲ್ಲಿ (ಶ್ಲೋ. ೩) ಹೇಳಿದ್ದ ಮೂರರಲ್ಲಿ ಇದು ಮೂರನೆಯದು.

೧೧. ಸದ್ರೂಪಾತ್ಮನಿಗೆ ಕೂಟಸ್ಥಬೋಧವೂ ಪ್ರತ್ಯಗಾತ್ಮತ್ವವೂ (ಯಾವ) ನಿಮಿತ್ತವೂ ಇಲ್ಲದೆ (ಇರುತ್ತದೆ[1]. ಅದು ) ಬೋದ್ಧೃತ್ವ, ಅಹಂತೆ-ಇವುಗಳಿಗೆ ಕಾರಣವು[2]. ಆದ್ದರಿಂದ ಅವೆರಡರಿಂದ (ಆತ್ಮನು) ಉಪಲಕ್ಷಿತನಾಗುತ್ತಾನೆ[3].

(ಮೂಲ)

ಬುದ್ಧೇಃ ಕೂಟಸ್ಥಬೋಧಪ್ರತ್ಯಕ್ತ್ವನಿಮಿತ್ತೇ ಬೋದ್ಧೃತಾಪ್ರತ್ಯಕ್ತ್ವೇ ಯೇ ತ್ವಸಾಧಾರಣೇ ತಯೋರ್ವಿಶೇಷವಚನಮ್ –

**ಬೋದ್ಧೃತಾ ಕರ್ತೃತಾ ಬುದ್ಧೇಃ ಕರ್ಮತಾ ಸ್ಯಾದಹಂ ತಥಾ ।**
**ತಯೋರೈಕ್ಯಂ ಯಥಾ ಬುದ್ಧೌ ಪೂರ್ವಯೋರೇವಮಾತ್ಮನಿ ॥೧೨॥**

(ಅರ್ಥ)

(ಆತ್ಮನ) ಕೂಟಸ್ಥಬೋಧ ಮತ್ತು ಪ್ರತ್ಯಕ್ತ್ವ- ಇವುಗಳ ನಿಮಿತ್ತದಿಂದ ಬುದ್ಧಿಗೆ ಅಸಾಧಾರಣವಾಗಿರುವ ಬೋದ್ಧೃತ್ವ, ಪ್ರತ್ಯಕ್ತ್ವ- ಇವುಗಳಿವೆಯಲ್ಲ, ಅವುಗಳ ವಿಶೇಷವನ್ನು ಹೇಳುತ್ತಾರೆ :

೧೨. ಬುದ್ಧಿಯ ಬೋದ್ಧೃತ್ವವೆಂಬುದು ಕರ್ತೃತ್ವವು[4], ಹಾಗೆಯೇ ಅಹಂತ್ವವು ಕರ್ಮತ್ವವು[5]. ಅವೆರಡಕ್ಕೂ ಹೇಗೆ ಬುದ್ಧಿಯಲ್ಲಿ ಐಕ್ಯವಿರುವದೋ, ಹಾಗೆಯೇ ಮೊದಲಿನೆರಡಕ್ಕೂ ಆತ್ಮನಲ್ಲಿ ಏಕತ್ವವಿರುವದು.

---

1. ಅವನ ಸ್ವರೂಪವೇ ಆಗಿರುತ್ತದೆ.

2. ಅಹಂಕಾರದಲ್ಲಿರುವ ಜ್ಞಾತೃತ್ವ, ಅಹಂತ್ವ- ಇವುಗಳು ಆತ್ಮನ ಕೂಟಸ್ಥಚೈತನ್ಯ ಮತ್ತು ಪ್ರತ್ಯಕ್ತ್ವ- ಇವುಗಳಿಂದಲೇ ಆಗಿದೆ ; ಸ್ವತಃ ಅದಕ್ಕೆ ಜ್ಞಾತೃತ್ವವೂ ಇಲ್ಲ , ಪ್ರತ್ಯಕ್ತ್ವವೂ ಇಲ್ಲ .

3. ಜ್ಞಾತೃತ್ವಾಹಂತೆಗಳು ಲಕ್ಷಣವು, ಆತ್ಮನು ಲಕ್ಷ್ಯವು ಎಂದರ್ಥ.

4. ಆಯಾ ವಿಷಯದ ಆಕಾರವಾಗಿ ಪರಿಣಮಿಸುವಿಕೆಯು.

5. ಚಿದಾಭಾಸಯುಕ್ತ ಬೋದ್ಧೃತ್ವಕ್ಕೆ ವಿಷಯವಾಗಿರುವಿಕೆ. 'ಅಹಂತಯಾ' ಎಂಬ ಪಾಠವೂ ಅಹಂರೂಪವಾದ ವ್ಯವಧಾನದಿಂದ ಚೈತನ್ಯಕ್ಕೆ ಕರ್ಮವಾಗಿರುವಿಕೆ- ಎಂಬ ವ್ಯಾಖ್ಯಾನವೂ ಸರಿಯಲ್ಲ ; ಏಕೆಂದರೆ ಬೋದ್ಧೃತ್ವವೂ ಹಾಗೆ ಕರ್ಮವೇ ಆಗಿದೆ.

(ಮೂಲ)

'ಯಥಾ ಬುದ್ಧೌ, ಪೂರ್ವಯೋರೇವಮಾತ್ಮನಿ' ಇತ್ಯತಿದೇಶೇನ ಬುದ್ಧಿಸಾಧರ್ಮ್ಯವಿಧಾನಾತ್ ನಾನಾತ್ವಪ್ರಸಕ್ತೌ ತದಪವಾದಾರ್ಥಮಾಹ –

ಧರ್ಮಧರ್ಮಿತ್ವಭೇದೋಽಸ್ಯಾಃ ಸೋಽಪಿ ನೈವಾತ್ಮನೋ ಯತಃ ।
ಪ್ರತ್ಯಗ್ಜ್ಯೋತಿರತೋಽಭಿನ್ನಂ ಭೇದಹೇತೋರಸಂಭವಾತ್ ॥೧೩॥

(ಅರ್ಥ)

'ಬುದ್ಧಿಯಲ್ಲಿ ಹೇಗೆ (ಐಕ್ಯವಿರುವದೋ), ಮೊದಲಿನವೆರಡೂ ಹಾಗೆಯೇ ಆತ್ಮನಲ್ಲಿ' ಎಂದು ಅತಿದೇಶಮಾಡಿ ಬುದ್ಧಿಯ ಸಾಧರ್ಮ್ಯವನ್ನು ಹೇಳಿರುವದರಿಂದ (ಅದಕ್ಕೂ) ನಾನಾತ್ವವು ಪ್ರಸಕ್ತವಾಗಲು ಅದನ್ನು ಅಲ್ಲಗಳೆಯುವದಕ್ಕಾಗಿ ಹೇಳುತ್ತಾರೆ :

೧೩. ಈ (ಬುದ್ಧಿಗೆ) ಧರ್ಮಧರ್ಮಿತ್ವಭೇದವುಂಟು [1], ಅದೂ ಆತ್ಮನಿಗೆ ಇಲ್ಲವಷ್ಟೆ [2] ; ಆದ್ದರಿಂದ ಪ್ರತ್ಯಗ್ಜ್ಯೋತಿಯು ಅಭಿನ್ನವಾಗಿರುತ್ತದೆ. ಏಕೆಂದರೆ ಭೇದಹೇತುವು ಸಂಭವಿಸುವದಿಲ್ಲ .

(ಮೂಲ)

ಭೇದಹೇತ್ವಸಂಭವಂ ದರ್ಶಯನ್ನಾಹ–

ನ ಕಸ್ಯಾಂಚಿದವಸ್ಥಾಯಾಂ ಬೋಧಪ್ರತ್ಯಕ್ತ್ವಯೋರ್ಭಿದಾ ।
ವ್ಯಭಿಚಾರೋಽಥವಾ ದೃಷ್ಟೋ ಯಥಾಹಂತದ್ವಿದೋಃ ಸದಾ ॥೧೪॥

(ಅರ್ಥ)

ಭೇದಹೇತುವಿನ ಅಸಂಭವವನ್ನು ತಿಳಿಸುವದಕ್ಕಾಗಿ ಹೇಳುತ್ತಾರೆ :

೧೪. (ಆತ್ಮನ) ಬೋಧ, ಪ್ರತ್ಯಕ್ತ್ವ - ಇವುಗಳಿಗೆ ಅಹಂತೆ ಮತ್ತು ಅದರ ಬೋಧ- ಇವುಗಳಿಗೆ ಹೇಗೆ ಯಾವಾಗಲೂ ಭೇದವಿರುವದೋ ಹಾಗೆ

---

1. ಬುದ್ಧಿಯು ಬೋದ್ಧೃವೆಂಬ ಧರ್ಮಿ, ಅಹಂತೆಯು ಕರ್ಮವಾಗಿರುವ ಧರ್ಮ-ಎಂಬ ಭೇದವುಂಟು. ಅಥವಾ ಬುದ್ಧಿಯು ಧರ್ಮಿ ; ಬೋದ್ಧೃತ್ವಾಹಂತೆಗಳು ಧರ್ಮಗಳು-ಎಂಬ ಭೇದವುಂಟು.

2. ಆತ್ಮನಲ್ಲಿ ಪ್ರತ್ಯಕ್ತ್ವವು ಬೋಧಕ್ಕಿಂತ ಭಿನ್ನವಾಗಿದ್ದರೆ ಅದು ಅಚೇತನವಾದ್ದರಿಂದ ಆತ್ಮನೇ ಆಗುವದಿಲ್ಲ . ಆದ್ದರಿಂದ ಬೋಧವೇ ಪ್ರತ್ಯಕ್ತ್ವ

ಯಾವ ಅವಸ್ಥೆಯಲ್ಲಿಯೂ ಭೇದವಾಗಲಿ ವ್ಯಭಿಚಾರವಾಗಲಿ ಕಂಡಿರುವದೇ ಇಲ್ಲ[1].

(ಮೂಲ)

ಯಸ್ಮಾದಜ್ಞಾನೋಪಾದಾನಾಯಾ ಏವ ಬುದ್ಧೇರ್ಭೇದೋ ನಾತ್ಮನಃ, ತಸ್ಮಾದೇತತ್ಸಿದ್ಧಮ್–

**ಕೂಟಸ್ಥಬೋಧತೋಽದ್ವೈತಂ ಸಾಕ್ಷಿತ್ವಂ ಪ್ರತ್ಯಗಾತ್ಮನಃ ।**
**ಕೂಟಸ್ಥಬೋಧಾದ್ಬೋದ್ಧ್ರೀ ಧೀಃ ಸ್ವತೋ ಹೀಯಂ ವಿನಶ್ವರೀ ॥೧೫॥**

(ಅರ್ಥ)

ಅಜ್ಞಾನವೆಂಬ ಉಪಾದಾನವುಳ್ಳ ಬುದ್ಧಿಗೇ ಭೇದವೇ ಹೊರತು ಆತ್ಮನಿಗಿಲ್ಲವಷ್ಟೆ[2], ಆದ್ದರಿಂದ ಇದು ಸಿದ್ಧವಾಯಿತು :

೧೫. ಪ್ರತ್ಯಗಾತ್ಮನು ಕೂಟಸ್ಥಬೋಧರೂಪನಾಗಿರುವದರಿಂದ ಅದ್ವೈತತ್ವವೂ ಸಾಕ್ಷಿತ್ವವೂ (ಸಿದ್ಧವಾಗಿರುತ್ತದೆ)[3]. ಬುದ್ಧಿಯು ಕೂಟಸ್ಥಬೋಧದಿಂದ ಬೋದ್ಧೃವಾಗಿರುತ್ತದೆ ; ಏಕೆಂದರೆ ಇದು ಸ್ವತಃ ವಿನಶ್ವರವಾಗಿರುತ್ತದೆ.

---

1. ಕರ್ತೃವಾಗಿ ತೋರುವ ಬೋದ್ಧೃತ್ವಕ್ಕಿಂತ ಕರ್ಮವಾಗಿ ತೋರುವ ಬುದ್ಧಿಯ ಅಹಂತೆಯು ಯಾವಾಗಲೂ ಭಿನ್ನವಾಗಿರುತ್ತದೆ. ಬೋದ್ಧೃತ್ವಕ್ಕೆ ವಿಷಯವು ಬೇಕೇಬೇಕಾದರೂ ಯಾವಾಗಲೂ ಅಹಂತೆಯೇ ವಿಷಯವಲ್ಲ. ಮಮತ್ವೇಚ್ಛಾದಿಗಳೂ ಅದಕ್ಕೆ ವಿಷಯವಾಗಬಹುದು. ಆದ್ದರಿಂದ ಅಹಂಕಾರಕ್ಕೂ ಅದರ ಜ್ಞಾತೃವಿಗೂ ಭೇದವೂ ವ್ಯಭಿಚಾರವೂ ಕಂಡಿದೆ. ಆತ್ಮನಿಗೆ ಹೀಗೆ ಎಲ್ಲಿಯೂ ಕಂಡಿಲ್ಲ. ವ್ಯಾಖ್ಯಾನದಲ್ಲಿ ''ಬುದ್ಧಿಗೂ ಬೋದ್ಧೃತ್ವವೇ ಪ್ರತ್ಯಕ್ತ್ವವು ; ಬೋಧ್ಯಾಕಾರಬಾಹ್ಯಾಕಾರಗಳು ಭಿನ್ನವಾಗಿರುವದರಿಂದ ಭಿನ್ನವೆನ್ನುವರು''- ಎಂದಿರುವದು ಮೂಲ ಗ್ರಂಥಕ್ಕೆ ವಿರುದ್ಧವೆಂಬುದು ಸ್ಪಷ್ಟ.

2. ಬೋಧರೂಪಕ್ಕಿಂತ ಪ್ರತ್ಯಕ್ತ್ವವು ಬೇರೆಯಿಲ್ಲ, ಬುದ್ಧ್ಯಾದಿಗಳು ಎರಡನೆಯವೆನ್ನುವದಕ್ಕಿಲ್ಲ, ಏಕೆಂದರೆ ಅವು ಅಜ್ಞಾನನಿಮಿತ್ತವಾಗಿ ತೋರುತ್ತವೆ. ಆದ್ದರಿಂದ ಆತ್ಮನು ಅದ್ವಿತೀಯನೂ ಅಪರೋಕ್ಷನೂ ಆಗಿದ್ದಾನೆ.

3. ಚಿದಾಭಾಸದಿಂದೊಡಗೂಡಿರುವದರಿಂದಲೇ ಅದು ಬೋದ್ಧೃವೆನಿಸಿದೆ, ಅನಿತ್ಯವಾಗಿದೆ. ಆದ್ದರಿಂದ ಅದಕ್ಕೆ ಸ್ವತಃ ಬೋದ್ಧೃತವಿಲ್ಲ, ಅದು ಸದ್ವಿತೀಯವೆಂಬುದನ್ನೂ ಅಹಂತೆಯ ಕರ್ಮತ್ವವನ್ನೂ ಆಗಲೇ ತಿಳಿಸಿ ತೋರಿಸಿಕೊಟ್ಟಿದ್ದಾಗಿದೆ ಎಂದು ಭಾವ.

(ಮೂಲ)

ಅಥಾಧುನಾ ಪ್ರಕೃತಸ್ಯೈವ ಪರಿಣಾಮಿನಃ ಕೂಟಸ್ಥಸ್ಯ ಚ ಲಕ್ಷಣ ಮುಚ್ಯತೇ–

ವಿಶೇಷಂ ಕಂಚಿದಾಶ್ರಿತ್ಯ ಯತ್ಸ್ವರೂಪಂ ಪ್ರತೀಯತೇ ।
ಪ್ರತ್ಯಭಿಜ್ಞಾಪ್ರಮಾಣೇನ ಪರಿಣಾಮೀ ಸ ದೇಹವತ್ ॥೧೬॥

ಸಾಮಾನ್ಯಾಚ್ಚ ವಿಶೇಷಾಚ್ಚ ಸ್ವಮಹಿಮ್ನೈವ ಯೋ ಭವೇತ್ ।
ವ್ಯಾವೃತ್ತೋಽಪ್ಯವಿಕಾರೀ ಸ್ಯಾತ್ ಕುಮ್ಭಾಕಾಶಾದಿವತ್ತು ಸಃ ॥೧೭॥

(ಅರ್ಥ)

ಇನ್ನು ಈಗ ಪ್ರಕೃತವಾಗಿರುವ ಪರಿಣಾಮಿ ಮತ್ತು ಕೂಟಸ್ಥ- ಇವುಗಳ ಲಕ್ಷಣವನ್ನೇ ಹೇಳುತ್ತಾರೆ [1]:

೧೬-೧೭. ಯಾವದಾದರೊಂದು ವಿಶೇಷವನ್ನಾಶ್ರಯಿಸಿ ಯಾವದರ ಸ್ವರೂಪವು ಪ್ರತ್ಯಭಿಜ್ಞಾ ಪ್ರಮಾಣದಿಂದ ತಿಳಿದುಬರುತ್ತದೆಯೋ ಅದು ದೇಹದಂತೆ ಪರಿಣಾಮಿ [2]. ಸಾಮಾನ್ಯದಿಂದಲೂ ವಿಶೇಷದಿಂದಲೂ ಬಿಟ್ಟಿದ್ದರೂ ಯಾವದು ತನ್ನ ಮಹಿಮೆಯಿಂದಲೇ ಇದ್ದುಕೊಂಡಿರುವದೋ ಅದು ಘಟಾಕಾಶವೇ ಮುಂತಾದದ್ದರಂತೆ ಅವಿಕಾರಿಯು [3].

---

1. ಹಿಂದಿನ ಅಧ್ಯಾಯದಲ್ಲಿ ಹೇಳಿರುವ ಪರಿಣಾಮಿಕೂಟಸ್ಥಗಳ ಲಕ್ಷಣವನ್ನು ಇಲ್ಲಿ ಹೇಳಿರುವದು ಲಕ್ಷಣಲಕ್ಷ್ಯಗಳ ವಿವೇಕಕ್ಕಾಗಿ.

2. ಹಿಂದೆ ಬಾಲ್ಯದಲ್ಲಿ ತಂದೆಯನ್ನು ಅನುಭವಿಸಿದ ನಾನೇ ಈಗ ವಾರ್ಧಕದಲ್ಲಿ ಮೊಮ್ಮಗನನ್ನು ಅನುಭವಿಸುತ್ತಿದೇನೆ- ಎಂಬ ಪ್ರತ್ಯಭಿಜ್ಞಾಪ್ರಮಾಣದಿಂದ ಬಾಲ್ಯ, ವಾರ್ಧಕ- ಎಂಬ ಅವಸ್ಥಾವಿಶೇಷವನ್ನಾಶ್ರಯಿಸಿ ಅದೇ ದೇಹವೆಂದು ತಿಳಿಯುತ್ತಾರೆ. ಅದ್ದರಿಂದ ದೇಹವು ಪರಿಣಾಮಿ. ಇದರಂತೆ ಬುದ್ಧಿಯೂ ಪರಿಣಾಮಿ ಎಂದಾಯಿತು.

3. ಸಾಮಾನ್ಯವಿಶೇಷಗಳೆರಡನ್ನೂ ಬಿಟ್ಟು, ಅನುವೃತ್ತವೂ ಅಲ್ಲದೆ ವ್ಯಾವೃತ್ತವೂ ಅಲ್ಲದೆ, ತನ್ನಿಂದ ತಾನು ಮತ್ತೊಂದರ ಅವಲಂಬನೆಯಿಲ್ಲದೆ ಇರುವದೇ ಅವಿಕಾರಿ, ಕೂಟಸ್ಥ. ಇದಕ್ಕೆ ದೃಷ್ಟಾಂತವು ಘಟಾಕಾಶಾದಿಗಳು. ಇವುಗಳು ವಿಶೇಷಗಳನ್ನೆಲ್ಲ ಬಿಟ್ಟು, ಎಲ್ಲದರಲ್ಲಿಯೂ ಅನುಗತವಾಗಿರುವದೆಂಬ ರೂಪವನ್ನೂ ಬಿಟ್ಟು, ಆಕಾಶವೆಂಬ ಅದೇ ಸ್ವರೂಪದಿಂದ ಇರುತ್ತವೆ. ಆ ಸ್ವರೂಪಕ್ಕೆ ಘಟವೇ ಮುಂತಾದವುಗಳ ಅವಲಂಬನೆಯಿಲ್ಲ. ಇದರಂತೆ ಆತ್ಮನು ಬುದ್ಧಿಗಳು, ಅವುಗಳಲ್ಲಿ ಚಿದಾಭಾಸ- ಇವುಗಳಿಗಿಂತ ವಿಲಕ್ಷಣನಾದ ಕೂಟಸ್ಥನು ಎಂದಾಯಿತು.

(ಮೂಲ)

ಆತ್ಮನೋ ಬುದ್ಧೇಶ್ಚ ಬೋಧಪ್ರತ್ಯಗಾತ್ಮತ್ವಮ್ ಅಭಿಹಿತಮ್ । ತಯೋರಸಾಧಾರಣಲಕ್ಷಣಾಭಿಧಾನಾರ್ಥಮ್ ಆಹ –

ಬುದ್ಧೇರ್ಯತ್ಪ್ರತ್ಯಗಾತ್ಮತ್ವಂ ತತ್ ಸ್ಯಾದ್ದೇಹಾದ್ಯುಪಾಶ್ರಯಾತ್ ।
ಆತ್ಮನಸ್ತು ಸ್ವರೂಪಂ ತನ್ನಭಸಃ ಸುಷಿತಾ ಯಥಾ ॥೧೮॥

ಬೋದ್ಧೃತ್ವಂ ತದ್ವದೇವಾಸ್ಯಾಃ ಪ್ರತ್ಯಯೋತ್ಪತ್ತಿಹೇತುತಃ ।
ಆತ್ಮನಸ್ತು ಸ್ವರೂಪಂ ತತ್ತಿಷ್ಠನ್ತೀವ ಮಹೀಭೃತಃ ॥೧೯॥

(ಅರ್ಥ)

ಆತ್ಮನಿಗೂ ಬುದ್ಧಿಗೂ ಬೋಧವೂ ಪ್ರತ್ಯಗಾತ್ಮತ್ವವೂ ಉಕ್ತವಾಗಿದೆಯಷ್ಟೆ. ಅವೆರಡಕ್ಕೂ ಅಸಾಧಾರಣಲಕ್ಷಣವನ್ನು ಹೇಳುವದಕ್ಕೆ (ಈ ಶ್ಲೋಕಗಳನ್ನು) ಹೇಳಿದಾರೆ [1] :

೧೮-೧೯. ಬುದ್ಧಿಯ ಪ್ರತ್ಯಗಾತ್ಮತ್ವವಿದೆಯಲ್ಲ [2], ಅದು ದೇಹಾದಿಗಳನ್ನು ಆಶ್ರಯಿಸಿರತಕ್ಕದ್ದು [3]. ಆದರೆ ಆತ್ಮನಿಗೆ ಅದು ಆಕಾಶಕ್ಕೆ ರಂಧ್ರವಾಗಿರುವದೆಂಬುದು ಹೇಗೋ (ಹಾಗೆ) ಸ್ವರೂಪವೇ ಆಗಿರುತ್ತದೆ [4]. ಇದರಂತೆಯೇ ಈ ಬುದ್ಧಿಗೆ ಪ್ರತ್ಯಯಗಳು ಹುಟ್ಟುವದೆಂಬ ಕಾರಣದಿಂದ

---

1. ಹೇತುವಾಗಿರುವ ಆತ್ಮನ ಬೋಧಪ್ರತ್ಯಗಾತ್ಮತ್ವಕ್ಕೂ ಆ ಹೇತುವಿನಿಂದಾಗಿರುವ ಬುದ್ಧಿಯ ಬೋಧಪ್ರತ್ಯಗಾತ್ಮತ್ವಕ್ಕೂ ಇರುವ ಹೆಚ್ಚುಕಡಿಮೆಯನ್ನು ತಿಳಿಸುವದು ಇಲ್ಲಿ ಉದ್ದೇಶವು.

2. ಅಂತಃಕರಣದಲ್ಲಿ 'ನಾನು' ಎಂಬುದೇ ಅದರ ಪ್ರತ್ಯಗಾತ್ಮವು.

3. ದೇಹಾದಿಗಳಿಗಿಂತ ಒಳಗಿರುವದರಿಂದ ಅದು ಪ್ರತ್ಯಗಾತ್ಮವು. ಅದು ಎಲ್ಲಕ್ಕೂ ಒಳಗಿನ ಆತ್ಮನಾಗಿರುವದರಿಂದಲ್ಲ.

4. ಆಕಾಶವನ್ನೇ ನಾವು ರಂಧ್ರವೆಂದು ವ್ಯವಹರಿಸುವದು ; ಹೀಗೆ ಆತ್ಮನನ್ನೇ ಪ್ರತ್ಯಗಾತ್ಮನೆಂದು ವ್ಯವಹರಿಸುವದು, ಆತ್ಮನಿಗೆ ಮತ್ತೆ ಬೇರೆ ಯಾವ ನಿಮಿತ್ತದಿಂದಲೂ ಅದು ಬಂದಿರುವದಿಲ್ಲ.

ಬೋದ್ಧೃತ್ವ(ವಾಗುತ್ತದೆ)[1] ; ಆದರೆ ಆತ್ಮನಿಗೋ ಎಂದರೆ ಅದು ಸ್ವರೂಪವೇ ; ಬೆಟ್ಟಗಳು ನಿಂತಂತೆ ಇರುತ್ತವೆ[2].

(ಮೂಲ)

ತಯೋಃ ಕೂಟಸ್ಥಪರಿಣಾಮಿನೋರಾತ್ಮಾನವಬೋಧ ಏವ ಸಂಬನ್ಧ ಹೇತುಃ, ನ ಪುನರ್ವಾಸ್ತವಃ ಕಶ್ಚಿದಪಿ ಸಂಬನ್ಧ ಉಪಪದ್ಯತ ಇತ್ಯಾಹ–

**ಸಮ್ಯಕ್ಸಂಶಯಮಿಥ್ಯಾತ್ವೈರ್ಧೀರೇವೇಯಂ ವಿಭಜ್ಯತೇ ।**
**ಹಾನೋಪಾದಾನತಾಮೇಷಾಂ ಮೋಹಾದಧ್ಯಸ್ಯತೇ ದೃಶೌ ॥೨೦॥**

(ಅರ್ಥ)

ಆ ಕೂಟಸ್ಥಪರಿಣಾಮಿಗಳಿಗೆ ಆತ್ಮಾಜ್ಞಾನವೇ ಸಂಬಂಧ ಕಾರಣವೇ ಹೊರತು[3] ವಾಸ್ತವವಾದ ಯಾವ ಸಂಬಂಧವೂ ಹೊಂದುವಂತಿಲ್ಲ ಎಂದು ಹೇಳುತ್ತಾರೆ :

೨೦. ಸಮ್ಯಗ್ಜ್ಞಾನ, ಸಂಶಯಜ್ಞಾನ, ಮಿಥ್ಯಾಜ್ಞಾನ – ಎಂಬೀ ರೂಪಗಳಿಂದ ಈ ಬುದ್ಧಿಯೇ ವಿಭಕ್ತವಾಗಿರುತ್ತದೆ[4]. ಇವುಗಳ ಹಾನತ್ವ,

---

1. ಅಂತಃಕರಣಕ್ಕೆ ಪ್ರತ್ಯಯಗಳುಂಟಾದರೆ ಅದು ಜ್ಞಾತೃವೆನಿಸುತ್ತದೆ ; ಜ್ಞಾತೃತ್ವವು ಚಿದಾಭಾಸಸಹಿತವಾದ ಪ್ರತ್ಯಯಗಳ ಉತ್ಪತ್ತಿಯೆಂಬ ವಿಕಾರದಿಂದಾದದ್ದು.

2. ಆತ್ಮನಲ್ಲಿ ಜ್ಞಾನವು ಸ್ವರೂಪವಾಗಿಯೇ ಇದೆ ; ಅದರಿಂದಲೇ ಅವನನ್ನು ಜ್ಞಾತೃವೆನ್ನುತ್ತೇವೆ. ನಿಲ್ಲುವದೆಂದರೆ ಓಡಾಡುವದು ಇಲ್ಲವಾಗುವದು ; ಆದರೆ ಬೆಟ್ಟಗಳು ನಿಂತಿವೆ ಎಂದರೆ ಯಾವಾಗಲೂ ಇರುವ ಸ್ವಭಾವವನ್ನೇ ತಿಳಿಸುತ್ತದೆ, ಓಡಾಡಿ ನಿಲ್ಲುವದನ್ನಲ್ಲ. ಇದರಂತೆಯೇ ಆತ್ಮನನ್ನು ಜ್ಞಾತೃವೆನ್ನುವದು, ಜ್ಞಾನವು ಹುಟ್ಟುವದೆಂಬ ಕಾರಣದಿಂದೇನೂ ಅಲ್ಲ.

3. ಆತ್ಮನು ಕೂಟಸ್ಥನಾಗಿರುವ ಪರಮಾರ್ಥವು, ಬುದ್ಧಿಯು ಪರಿಣಾಮಿಯಾದ ಅಧ್ಯಾಸವು ; ಅವೆರಡಕ್ಕೂ ಆತ್ಮಾಜ್ಞಾನವೇ ಸಂಬಂಧವು.

4. ಬೇರೆಬೇರೆಯ ಪ್ರತ್ಯಯಗಳಿಂದ ಬುದ್ಧಿಯಲ್ಲಿ ಈ ವಿಭಾಗಗಳಾಗುತ್ತವೆ, ಪ್ರತ್ಯಯಗಳಲ್ಲೆಲ್ಲ ಚಿದಾಭಾಸವಿರುತ್ತದೆ.

ಉಪಾದಾನತ್ವ- ಇವುಗಳನ್ನು ಮೋಹದಿಂದ ದೃಗ್ರೂಪ(ನಾದ ಆತ್ಮ )ನಲ್ಲಿ ಅಧ್ಯಾಸಮಾಡುತ್ತಾರೆ [1].

(ಮೂಲ)

**ಕುತಃ ಕೂಟಸ್ಥಾತ್ಮಸಿದ್ಧಿರಿತಿ ಚೇತ್ । ಯತಃ –**

**ನ ಹಾನಂ ಹಾನಮಾತ್ರೇಣ ನೋದಯೋಽಪೀಯತಾ ಯತಃ ।**
**ತತ್ಸಿದ್ಧಿಃ ಸ್ಯಾತ್ತು ತದ್ಧೀನೇ ಹಾನಾದಾನವಿಧರ್ಮಕೇ ॥೨೧॥**

(ಅರ್ಥ)

ಕೂಟಸ್ಥಾತ್ಮನ ಸಿದ್ಧಿಯು ಹೇಗೆ ? ಎಂದರೆ (ಹೇಳುತ್ತಾರೆ). ಹೇಗೆಂದರೆ :

೨೧. ಹಾನಮಾತ್ರದಿಂದ [2] (ಆತ್ಮನಿಗೆ) ಹಾನವಿಲ್ಲ ; ಇಷ್ಟರಿಂದಲೇ [3] (ಆತ್ಮನ) ಉಪಾದಾನವೂ ಇಲ್ಲ [4]. ಯಾವದರಿಂದ ಅವುಗಳ ಸಿದ್ಧಿಯಾಗ ಬಹುದೋ ಅದಿಲ್ಲದ [5] ಹಾನಾದಾನಧರ್ಮರಹಿತನಾದ (ಆತ್ಮ )ನಲ್ಲಿ (ಇವೆ ರಡೂ ಇಲ್ಲ ) [6].

---

1. ಸಮ್ಯಜ್ಞಾನವು ಬೇಕು, ಸಂಶಯಮಿಥ್ಯಾಜ್ಞಾನಗಳು ಬೇಡ- ಎಂಬ ವಿಂಗಡವು ಪ್ರತ್ಯಯಗಳಿಗೆ ಸೇರಿದ್ದು. ಆದರೂ ನಿಜವಾದ ಜ್ಞಾನದಲ್ಲಿಯೇ ಬೇಕುಬೇಡಗಳಿರುವವೆಂದು ತಪ್ಪಾಗಿ ಜನರು ಭಾವಿಸಿಕೊಂಡಿರುತ್ತಾರೆ ಎಂದರ್ಥ.

2. ಸಂಶಯಮಿಥ್ಯಾಜ್ಞಾನಗಳನ್ನು ತೊಲಗಿಸಿಕೊಂಡ ಮಾತ್ರದಿಂದ.

3. ಸಮ್ಯಗ್ಜ್ಞಾನವನ್ನು ಸ್ವೀಕರಿಸಿದ ಮಾತ್ರದಿಂದಲೇ.

4. ಇಲ್ಲಿರುವ ಉದಯವೆಂಬ ಮಾತನ್ನು ಉಪಾದಾನವೆಂಬರ್ಥದಲ್ಲಿಯೇ ತೆಗೆದುಕೊಳ್ಳಬೇಕು.

5. ಬುದ್ಧಿಯ ಧರ್ಮಗಳ ಅಧ್ಯಾಸದಿಂದ ಆತ್ಮನಲ್ಲಿ ಹಾನೋಪಾದಾನಗಳು ಸಿದ್ಧವಾಗುವವು. ಆ ಬುದ್ಧಿಯೂ ವೃತ್ತಿಗಳೂ ಆತ್ಮನಲ್ಲಿಲ್ಲ.

6. ಸ್ವತಃ ಆತ್ಮನು ಹಾನೋಪಾದಾನರಹಿತನು ; ಅನಾತ್ಮಕ್ಕೇ ಹಾನೋಪಾದಾನಗಳು. ಆದ್ದರಿಂದ ಆತ್ಮನು ಯಾವಾಗಲೂ ಇದ್ದಂತಿರುವ ಕೂಟಸ್ಥನು ಎಂದು ಅಭಿಪ್ರಾಯ. ಅಥವಾ ಹೀಗೂ ಕನ್ನಡಿಸಬಹುದು ; ''ಹಾನವು ಹಾನಮಾತ್ರದಿಂದ, ಉಪಾದಾನವೂ ಅಷ್ಟುಮಾತ್ರ ದಿಂದಲೇ (ಸಿದ್ಧಿಯಾಗದು). ಏಕೆಂದರೆ ಹಾನಾದಾನ ಧರ್ಮಗಳಿಲ್ಲದ ಆತ್ಮನು (ಸಿದ್ಧನಾದರೇ) ಅವುಗಳ ಸಿದ್ಧಿಯಾಗುವದು'' ೨-೧೦೬, ೧೦೯ ಇವುಗಳ ಅನುವಾದವನ್ನು ನೋಡಿ.

(ಮೂಲ)

ಏವಮ್ –

ಆಗಮಾಪಾಯಹೇತುಭ್ಯಾಂ[1] ಧೂತ್ವಾ ಸರ್ವಾನನಾತ್ಮನಃ ।
ತತಸ್ತತ್ತ್ವಮಸೀತ್ಯೇತದ್ಧನ್ತ್ಯಸ್ಮದಿ ನಿಜಂ ತಮಃ ॥೨೨॥

(ಅರ್ಥ)

ಹೀಗೆ :

೨೨. ಅನ್ವಯವ್ಯತಿರೇಕಗಳೆಂಬ ಹೇತುಗಳಿಂದ ಅನಾತ್ಮಗಳನ್ನೆಲ್ಲ ಕೊಡವಿಕೊಂಡಿರುವವನಿಗೆ ಆ ಬಳಿಕ 'ತತ್ತ್ವಮಸಿ' ಎಂಬೀ ವಾಕ್ಯವು ಅಸ್ಮದರ್ಥದಲ್ಲಿರುವ ಆತ್ಮಾಜ್ಞಾನವನ್ನು ನಾಶಗೊಳಿಸುತ್ತದೆ[2].

(ಮೂಲ)

ಇತ್ಯಾದಿ ಪುನಃಪುನರುಚ್ಯತೇ ಗ್ರನ್ಥಲಾಘವಾದ್ ಬುದ್ಧಿಲಾಘವಂ ಪ್ರಯೋಜಕಮಿತಿ । ತತ್ರ ಯದ್ಯಪಿ ತತ್ತ್ವಮಸ್ಯಾದಿವಾಕ್ಯಾತ್ ಉಪಾದಿತ್ಸಿತಾದ್ವಿತೀಯಾತ್ಮಾರ್ಥವತ್ ಪಾರೋಕ್ಷ್ಯಸದ್ವಿತೀಯಾರ್ಥಃ ಪ್ರತೀಯತೇ । ತಥಾಪಿ ತು ನೈವಾಸಾವರ್ಥಃ ಶ್ರುತ್ಯಾ ತಾತ್ಪರ್ಯೇಣ ಪ್ರತಿಪಿಪಾದಯಿಷಿತಃ । ಪ್ರಾಗಪ್ಯೇತಸ್ಯ ಪ್ರತೀತತ್ವಾತ್ ಇತೀಮಮರ್ಥಮ್ ಆಹ –

ತದಿತ್ಯೇತತ್ಪದಂ ಲೋಕೇ ಬಹ್ವರ್ಥಪ್ರತಿಪಾದಕಮ್ ।
ಅಪರಿತ್ಯಜ್ಯ ಪಾರೋಕ್ಷ್ಯಮಭಿಧಾನೋತ್ಥಮೇವ ತತ್ ॥೨೩॥

ತ್ವಮಿತ್ಯಪಿ ಪದಂ ತದ್ವತ್ಸಾಕ್ಷಾನ್ಮಾತ್ರಾರ್ಥವಾಚಿ ತು ।
ಸಂಸಾರಿತಾಮಸಂತ್ಯಜ್ಯ ಸಾಪಿ ಸ್ಯಾದಭಿಧಾನಜಾ ॥೨೪॥

(ಅರ್ಥ)

ಹೀಗೆಂದು ಮುಂತಾಗಿ ಮತ್ತೆಮತ್ತೆ ಹೇಳುತ್ತಿದೇವೆ ; ಏಕೆಂದರೆ

1. 'ಆಗಮಾಪಾಯಿಹೇತುಭ್ಯಾಮ್' ಎಂಬ ಪಾಠಕ್ಕಿಂತ ಇದು ಮೇಲು.

2. ಅದರಿಂದ ಅದ್ವೈತಾತ್ಮಜ್ಞಾನವಾಗುತ್ತದೆ ಎಂದರ್ಥ.

ಗ್ರಂಥಲಾಘವಕ್ಕಿಂತ ಬುದ್ಧಿಲಾಘವವೇ ಪ್ರಯೋಜಕವು[1]. ಇಲ್ಲಿ 'ತತ್ತ್ವಮಸಿ' ಮುಂತಾದ ವಾಕ್ಯದಿಂದ ತೆಗೆದುಕೊಳ್ಳಬೇಕಾಗಿರುವ ಅದ್ವಿತೀಯಾತ್ಮನೆಂಬ ಅರ್ಥದಂತೆ ಪರೋಕ್ಷಸದ್ವಿತೀಯವೆಂಬರ್ಥವೂ ತೋರುತ್ತದೆಯೆಂಬುದೇನೋ (ಉಂಟು)[2]; ಆದರೂ ಈ ಅರ್ಥವನ್ನು ಶ್ರುತಿಯು ತಾತ್ಪರ್ಯದಿಂದ ತಿಳಿಸಿ ಕೊಡಬೇಕೆಂದು ಹೊರಟಿಲ್ಲ. ಏಕೆಂದರೆ ಈ (ಅರ್ಥವು) ಮೊದಲೂ ತೋರುತ್ತಿತ್ತು[3]. ಹೀಗೆಂಬೀ ಅರ್ಥವನ್ನು ಹೇಳುತ್ತಿದಾರೆ :

೨೩-೨೪. ಲೋಕದಲ್ಲಿ ತತ್ (ಅದು) ಎಂಬೀ ಪದವು ಪಾರೋಕ್ಷ್ಯವನ್ನು ಬಿಡದೆ[4] ಬಹಳ ಅರ್ಥಗಳನ್ನು ತಿಳಿಸುತ್ತದೆ. ಆ (ಪಾರೋಕ್ಷ್ಯವೆಂಬುದು) ಅಭಿಧಾನದಿಂದ ಉಂಟಾದದ್ದೇ[5]. ಇದರಂತೆ ತ್ವಮ್ ಎಂಬ ಪದವೂ ಸಂಸಾರಿತ್ವವನ್ನು ಬಿಡದೆ ಅಪರೋಕ್ಷಸ್ವಭಾವದ ವಸ್ತುವನ್ನು ಹೇಳುತ್ತದೆ ; ಆ (ಸಂಸಾರಿತ್ವವೂ) ಅಭಿಧಾನದಿಂದ ಉಂಟಾದದ್ದೇ[6].

---

1. ಬಹಳ ಗ್ರಂಥದಿಂದ ಒಂದೇ ಕಡೆಯಲ್ಲಿ ಹೇಳತಕ್ಕದ್ದನ್ನೆಲ್ಲ ಹೇಳಿಬಿಟ್ಟರೆ ಗ್ರಂಥಲಾಘವವಾಗುತ್ತದೆ. ಏಕೆಂದರೆ ಹೆಚ್ಚು ವಾಕ್ಯಗಳಿಗೆ ಅವಕಾಶವಿರುವದಿಲ್ಲ. ಆದರೆ ಅದರಿಂದ ಬುದ್ಧಿಗೌರವವಾಗುತ್ತದೆ. ಏಕೆಂದರೆ ಆಗ ಸೂಕ್ಷ್ಮವಾಗಿರುವ ತತ್ತ್ವವನ್ನು ತಿಳಿಯುವದು ಬುದ್ಧಿಗೆ ಕಷ್ಟವಾಗುತ್ತದೆ. ಆದರೆ ಸಣ್ಣ ಸಣ್ಣ ವಾಕ್ಯಗಳಿಂದ ಮತ್ತೆಮತ್ತೆ ಬೇರೆಬೇರೆಯ ರೀತಿಯಿಂದ ತಿಳಿಸಿದರೆ ಗ್ರಂಥಗೌರವವಾದರೂ ಬುದ್ಧಿಲಾಘವವಾಗುತ್ತದೆ ? ಏಕೆಂದರೆ ಸುಲಭವಾಗಿ ವಿಷಯವು ಬುದ್ಧಿಗೆ ಹಿಡಿಯುತ್ತದೆ. ಆದ್ದರಿಂದ ಇಲ್ಲಿ ಅನ್ವಯವ್ಯತಿರೇಕದಿಂದ ಪದಾರ್ಥಶೋಧನೆಯೂ ವಾಕ್ಯದಿಂದ ಅಜ್ಞಾನನಾಶವೂ ಆಗುವದೆಂಬ ವಿಷಯದ ಪುನರುಕ್ತಿಯು ದೋಷವಲ್ಲ ಎಂಬ ಭಾವ. ಬುದ್ಧಿಲಾಘವವೇ ಪುನರುಕ್ತಿಗೆ ಪ್ರಯೋಜಕವು ಎಂದರೆ ಹೇತು ಎಂದರ್ಥ. ಪುನರುಕ್ತಿಯ ವಿಷಯಕ್ಕೆ ಶಾ. ಭಾ. ೪-೨-೧೩, ಗೀ. ಭಾ. ೨-೨೪ ಇವನ್ನು ನೋಡಿ.

2. ತತ್ ಎಂಬುದು ಪಾರೋಕ್ಷ್ಯವನ್ನು ತ್ವಂ ಎಂಬುದು ಸದ್ವಿತೀಯತ್ವವನ್ನೂ ಹೇಳುತ್ತದೆ.

3. ವಾಕ್ಯದ ಜ್ಞಾನವಾಗುವ ಮೊದಲೇ ಪದದ ವಾಚ್ಯಾರ್ಥಜ್ಞಾನದೆಶೆಯಲ್ಲಿಯೇ ತೋರುತ್ತಿತ್ತು.

4. ಪಾರೋಕ್ಷ್ಯವನ್ನು ಸೇರಿಸಿಕೊಂಡೇ.

5. ವಾಚ್ಯಾರ್ಥವೇ ; ಎಲ್ಲವೂ ವಿವಕ್ಷಿತವಲ್ಲ.

6. ವಿವಕ್ಷಿತವಲ್ಲ.

(ಮೂಲ)

ವಿರುದ್ಧೋದ್ದೇಶನತ್ವಾಚ್ಚ ಪಾರೋಕ್ಷ್ಯದುಃಖಿತ್ವಯೋರವಿವಕ್ಷಿತತ್ವಮ್ ಇತ್ಯಾಹ –

**ಉದ್ದಿಶ್ಯಮಾನಂ ವಾಕ್ಯಸ್ಥಂ ನೋದ್ದೇಶನಗುಣಾನ್ವಿತಮ್ ।**
**ಆಕಾಙ್ಕ್ಷಿತಪದಾರ್ಥೇನ ಸಂಸರ್ಗಂ ಪ್ರತಿಪದ್ಯತೇ ॥೨೫॥**

(ಅರ್ಥ)

ಪಾರೋಕ್ಷ್ಯ, ದುಃಖಿತ್ವ- ಇವು ವಿವಕ್ಷಿತವಲ್ಲವೆಂಬುದು ವಿರುದ್ಧವಾಗಿ ಉದ್ದಿಷ್ಟವಾಗಿರುವದರಿಂದಲೂ (ಆಗಿದೆ) ಎಂದು ಹೇಳುತ್ತಾರೆ :

೨೫. ವಾಕ್ಯದಲ್ಲಿ ಉದ್ದಿಶ್ಯಮಾನವಾದ ವಸ್ತುವು ಉದ್ದೇಶನಗುಣದಿಂದ ಕೂಡಿಕೊಂಡೇ[1] ಆಕಾಂಕ್ಷಿತಪದಾರ್ಥದೊಡನೆ[2] ಸಂಸರ್ಗವನ್ನು ಹೊಂದಲಾರದು[3].

(ಮೂಲ)

ಯತ ಏತದೇವಮ್ ಅತೋऽನುಪಾದಿತ್ಸಿತಯೋರಪಿ ತತ್ತ್ವಮರ್ಥಯೋರ್ವಿಶೇಷಣವಿಶೇಷ್ಯಭಾವೋ ಭೇದಸಂಸರ್ಗರಹಿತಾವಾಕ್ಯಾರ್ಥಲಕ್ಷಣಾಯೈವ[4] ಇತ್ಯುಪಸಂಹಾರಃ –

**ತದೋ ವಿಶೇಷಣಾರ್ಥತ್ವಂ ವಿಶೇಷ್ಯತ್ವಂ ತ್ವಮಸ್ತಥಾ ।**
**ಲಕ್ಷ್ಯಲಕ್ಷಣಸಂಬನ್ಧಸ್ತಯೋಃ ಸ್ಯಾತ್ ಪ್ರತ್ಯಗಾತ್ಮನಾ ॥೨೬॥**

---

1. ಉದ್ದೇಶನಾವಸ್ಥೆಯಲ್ಲಿ ತೋರುವ ಎಲ್ಲಾ ಗುಣಗಳಿಂದಲೂ ಕೂಡಿ.

2. ತನ್ನ ಆಕಾಂಕ್ಷೆಯನ್ನು ಪೂರ್ತಿಮಾಡುವ ಪದಾರ್ಥದೊಡನೆ.

3. ಅನುಗುಣವಾದ ಗುಣದಿಂದ ಕೂಡಿಯೇ ಅನ್ವಯವಾಗುತ್ತದೆ. ಆದ್ದರಿಂದ ಇಲ್ಲಿಯೂ ವಿರುದ್ಧಗುಣವನ್ನು ಬಿಟ್ಟೇ ತತ್ಪದದೊಡನೆ ತ್ವಂಪದವೂ ಅನ್ವಯವಾಗಬೇಕು.

4. 'ಭೇದಸಂಸರ್ಗರಹಿತವಾಕ್ಯಾರ್ಥಃ' ಎಂಬ ಪಾಠಕ್ಕಿಂತ ಇದೇ ಮೇಲು.

(ಅರ್ಥ)

ಇದು ಹೀಗಿದೆಯಷ್ಟೆ. ಆದ್ದರಿಂದ[1] ತೆಗೆದುಕೊಳ್ಳಬೇಕಾದದ್ದಿಲ್ಲದ ತತ್ತ್ವಂಪದಾರ್ಥಗಳಿಗೂ ವಿಶೇಷಣವಿಶೇಷ್ಯಭಾವವುಂಟಾಗಿರುವದು ಭೇದ ಸಂಸರ್ಗಗಳಿಲ್ಲದ[2] ಅವಾಕ್ಯಾರ್ಥವನ್ನು ಲಕ್ಷಣೆಯಿಂದ (ತಿಳಿಸುವದಕ್ಕೇ) ಎಂದು ಉಪಸಂಹಾರಮಾಡುತ್ತಾರೆ :

೨೬. ತತ್ಪದಾರ್ಥವು ವಿಶೇಷಣಕ್ಕಾಗಿದೆ, ತ್ವಂಪದಾರ್ಥವು ವಿಶೇಷ್ಯವು. ಅವುಗಳಿಗೆ ಪ್ರತ್ಯಗಾತ್ಮನೊಡನೆ[3] ಲಕ್ಷ್ಯಲಕ್ಷಣಸಂಬಂಧ(ವಿರುತ್ತದೆ).

(ಮೂಲ)

ಕಥಂ ಪುನರವಿವಕ್ಷಿತವಿರುದ್ಧನಿರಸ್ಯಮಾನಸ್ಯ ಲಕ್ಷಣಾರ್ಥತ್ವಮ್ ?

**ಲಕ್ಷಣಂ ಸರ್ಪವದ್ರಜ್ಜ್ವಾಃ ಪ್ರತೀಚಃ ಸ್ಯಾದಹಂ ತಥಾ ।**
**ತದ್ಬಾಧೇನೈವ ವಾಕ್ಯಾರ್ಥಂ ವೇತ್ತಿ ಸೋಽಪಿ ತದಾಶ್ರಯಾತ್ ॥೨೭॥**

(ಅರ್ಥ)

(ಆಕ್ಷೇಪ) :- ಅವಿವಕ್ಷಿತವೂ ವಿರುದ್ಧವೂ ತಿರಸ್ಕರಿಸತಕ್ಕದ್ದೂ ಆಗಿರುವದು ಲಕ್ಷಣಾರ್ಥವಾಗಿದೆ ಎಂಬುದು ಹೇಗೆ ?

---

1. ಹೀಗೆ ಉದ್ದಿಷ್ಟಾಕಾಂಕ್ಷಿತಗಳಿಗೆ ಸಂಬಂಧವಾಗುವದರಿಂದ.

2. ತತ್ತ್ವಂಪದಾರ್ಥಗಳಿಗೆ ಭೇದವಾಗಲಿ ಅದಕ್ಕೆ ಸಂಸರ್ಗವಾಗಲಿ ವಾಕ್ಯದಲ್ಲಿ ವಿವಕ್ಷಿತವಲ್ಲ ; ಆದ್ದರಿಂದ ಭೇದವಿಲ್ಲದ್ದರಿಂದ ಆತ್ಮನು ಪದಾರ್ಥವಲ್ಲ, ಸಂಸರ್ಗ ವಿಲ್ಲದ್ದರಿಂದ ವಾಕ್ಯಾರ್ಥವೂ ಅಲ್ಲ. ನಿವರ್ತ್ಯವಾದ ಪರೋಕ್ಷತ್ವಸದ್ವಿತೀಯತ್ವ ದುಃಖಿತ್ವ- ಇವುಗಳ ಭೇದದಿಂದಲೇ ಪದಗಳಿಗೆ ಭಿನ್ನಾರ್ಥತ್ವವನ್ನು ಕಲ್ಪಿಸಿದೆ. ಅವಿವಕ್ಷಿತವಾದ ತತ್ತ್ವಮರ್ಥಗಳಿಗೆ ವಿಶೇಷಣವಿಶೇಷ್ಯಭಾವವನ್ನು ಕಲ್ಪಿಸಿರುವದೂ ಲಕ್ಷಣಕ್ಕಾಗಿ ಮಾತ್ರ, ಸಂಸರ್ಗಕ್ಕಾಗಿಯಲ್ಲ. ಬೃ. ವಾ. ೧-೪-೧೪೦೮, ೧೪೨೬, ೧೪೨೭, ೧೪೨೯- ಇವನ್ನು ನೋಡಿ.

3. ಅದ್ವಿತೀಯಪ್ರತ್ಯಗಾತ್ಮನೊಡನೆ ಎಂದರ್ಥ.

೨೭. ಹಾವು ಹಗ್ಗಕ್ಕೆ ಹೇಗೋ ಹಾಗೆ ಪ್ರತ್ಯಗಾತ್ಮನಿಗೆ ಅಹಂಕಾರವು ಲಕ್ಷಣವಾಗಬಹುದು [1]. ಹಾಗೆಯೇ ಅವನೂ[2] ಅಹಂಕಾರವನ್ನಾಶ್ರಯಿಸಿ ಅದರ ಬಾಧದಿಂದಲೇ ವಾಕ್ಯಾರ್ಥವನ್ನು ತಿಳಿದುಕೊಳ್ಳುತ್ತಾನೆ [3].

(ಮೂಲ)

ಇಯಂ ಚಾವಾಕ್ಯಾರ್ಥಪ್ರತಿಪತ್ತಿರನ್ವಯವ್ಯತಿರೇಕಾಭಿಜ್ಞಸ್ಯೈವ । ಯಸ್ಮಾತ್ –

**ಯಾವದ್ಯಾವನ್ನಿರಸ್ಯಾಯಂ ದೇಹಾದೀನ್ ಪ್ರತ್ಯಗಞ್ಚತಿ ।**
**ತಾವತ್ತಾವತ್ತದರ್ಥೋಽಪಿ ತ್ವಮರ್ಥಂ ಪ್ರವಿವಿಕ್ಷತಿ ॥೨೮॥**

(ಅರ್ಥ)

ಈ ಅವಾಕ್ಯಾರ್ಥದ ಜ್ಞಾನವಾದರೂ ಅನ್ವಯವ್ಯತಿರೇಕವನ್ನು ಅರಿತಿರುವವನಿಗೇ. ಏಕೆಂದರೆ :

೨೮. ಎಲ್ಲಿ ಎಷ್ಟೆಷ್ಟರಮಟ್ಟಿಗೆ ಇವನು ದೇಹಾದಿಗಳನ್ನು ತಿರಸ್ಕರಿಸಿ ಪ್ರತ್ಯಗಾತ್ಮನ ಕಡೆಗೆ ತಿರುಗುತ್ತಾನೋ ಅಷ್ಟಷ್ಟು ಮಟ್ಟಿಗೆ ತದರ್ಥವೂ ತ್ವಮರ್ಥವೂ ಹೊಗುವದಕ್ಕೆಳೆಸುವದು.

(ಮೂಲ)

ಕಸ್ಮಾತ್ ಪುನಃ ಕಾರಣಾದ್ ದೇಹಾದ್ಯನಾತ್ಮತ್ವಪ್ರತಿಪತ್ತಾವೇವ ಆತ್ಮಾ ತದರ್ಥಮ್ ಆತ್ಮತ್ವೇನ ಅಭಿಲಿಙ್ಗತೇ ನ ವಿಪರ್ಯಯೇ ಇತಿ ?

---

1. 'ಗಂಗೆಯಲ್ಲಿ ಹಳ್ಳಿ' ಎಂಬಲ್ಲಿ ಅವಿವಕ್ಷಿತತ್ವವಾಗಲಿ ವಿರುದ್ಧತ್ವವಾಗಲಿ ವಾಕ್ಯಜ್ಞಾನನಿರಸ್ಯತ್ವವಾಗಲಿ ಇರುವದಿಲ್ಲ. ಆದರೆ ''ಹಾವು ಹಗ್ಗವು'' ಎಂಬಲ್ಲಿ ಈ ಧರ್ಮಗಳೆಲ್ಲ ಇದ್ದೇ ಲಕ್ಷ್ಯಲಕ್ಷಣಭಾವವಿದೆ. ಇದರಂತೆ ಅಹಂಕಾರವೂ ಆತ್ಮನಿಗೆ ಲಕ್ಷಣವಾಗಬಹುದು. 2. ವಾಕ್ಯಾರ್ಥವನ್ನು ತಿಳಿಯಬೇಕೆನ್ನುವವನೂ.

3. ಹಾವನ್ನು ಅವಲಂಬಿಸಿ ಅದರ ಬಾಧದಿಂದಲೇ ಹಗ್ಗವನ್ನು ಅರಿಯುವಂತೆ ಅಹಂಕಾರವನ್ನವಲಂಬಿಸಿ ಅದರ ಬಾಧದಿಂದಲೇ ಆತ್ಮನನ್ನು ಅರಿತುಕೊಳ್ಳಬಹುದು. ತದರ್ಥದಲ್ಲಿ ಅವಿವಕ್ಷಿತಾಂಶವನ್ನೂ ಹೀಗೆಯೇ ಲಕ್ಷಣವೆಂದು ತಿಳಿಯಬೇಕು. ಅದ್ವಿತೀಯಾತ್ಮನು ಪದಾರ್ಥವೂ ಅಲ್ಲ, ವಾಕ್ಯಾರ್ಥವೂ ಅಲ್ಲ ; ಆದರೂ ಅವಿವಕ್ಷಿತ ಪದಾರ್ಥವನ್ನು ಲಕ್ಷಣವೆಂದಿಟ್ಟುಕೊಂಡು ವಿವಕ್ಷಿತಾರ್ಥವನ್ನು ತಿಳಿದುಕೊಳ್ಳಬಹುದು ಎಂಬುದಕ್ಕೆ ಮಾತ್ರ ದೃಷ್ಟಾಂತವನ್ನು ಕೊಟ್ಟಿದೆ ಎಂದು ತಿಳಿಯಬೇಕು.

ಉಚ್ಯತೇ । ಪ್ರತ್ಯಗಾತ್ಮಾನವಬೋಧಸ್ಯ ಅನಾತ್ಮಸ್ವಾಭಾವ್ಯಾತ್ । ತದಭಿನಿರ್ವೃತ್ತಶ್ಚಾಯಂ ಬುದ್ಧ್ಯಾದಿದೇಹಾನ್ತಃ । ತಸ್ಮಿನ್ ಆತ್ಮತ್ವಮವಿದ್ಯಾಕೃತಮೇವ । ಆತ್ಮತ್ವಮಿವ ಅನಾತ್ಮತ್ವಮಪಿ ಸಾವಿದ್ಯಸ್ಯೈವ । ಯತೋ ನಿರವಿದ್ಯೋ ವಿದ್ವಾನ್ ಅವಾಕ್ಯಾರ್ಥರೂಪ ಏವ ಕೇವಲೋಽವಶಿಷ್ಯತೇ । ತಸ್ಮಾದುಚ್ಯತೇ –

ದೇಹಾದಿವ್ಯವಧಾನತ್ವಾತ್ ತದರ್ಥಂ ಸ್ವಯಮಪ್ಯತಃ ।
ಪಾರೋಕ್ಷ್ಯೇಣೈವ ಜಾನಾತಿ ಸಾಕ್ಷಾತ್ತ್ವಂ ತದನಾತ್ಮನಃ ॥೨೯॥

(ಅರ್ಥ)

(ಪ್ರಶ್ನೆ) :- ದೇಹಾದಿಗಳನ್ನು ಅನಾತ್ಮವೆಂದು ಅರಿತುಕೊಂಡರೇ ಆತ್ಮನು ತತ್ಪದಾರ್ಥವನ್ನು ತಾನೆಂದು ಆಶ್ರಯಿಸುತ್ತಾನೆ, ಹಾಗಿಲ್ಲದಿದ್ದರೆ ಆಶ್ರಯಿಸುವದಿಲ್ಲವೆಂಬುದೇಕೆ [1] ?

(ಉತ್ತರ) :- ಹೇಳುತ್ತೇವೆ. ಏಕೆಂದರೆ ಪ್ರತ್ಯಗಾತ್ಮನ ಅಜ್ಞಾನವು ಅನಾತ್ಮಸ್ವಭಾವದ್ದಾಗಿರುತ್ತದೆ [2]. ಈ ಬುದ್ಧ್ಯಾದಿದೇಹಾಂತವೆಂಬುದು ಆ (ಅಜ್ಞಾನ)ದಿಂದ ಆದದ್ದು. ಅದು ಆತ್ಮನೆಂಬುದು ಅವಿದ್ಯಾಕೃತವೇ (ಆಗಿರುತ್ತದೆ) ; (ಅದರಲ್ಲಿ) ಆತ್ಮತ್ವವು ಹೇಗೋ ಹಾಗೆ ಅನಾತ್ಮತ್ವವೂ ಅವಿದ್ಯಾಸಹಿತನಾದವನಿಗೇ ಆಗಿರುತ್ತದೆ [3]. ನಿರವಿದ್ಯನಾದ ಜ್ಞಾನಿಯು ಅವಾಕ್ಯಾರ್ಥರೂಪನಾಗಿಯೇ ಕೇವಲನಾಗಿ ಉಳಿದುಕೊಳ್ಳುತ್ತಾನಷ್ಟೆ. ಆದ್ದರಿಂದ (ಹೀಗೆಂದು) ಹೇಳುತ್ತಾರೆ :

---

1. ದೇಹಾದಿಗಳೂ ಸದ್ಬ್ರಹ್ಮದ ಕಾರ್ಯವೇ ಅಲ್ಲವೆ ? ಅವುಗಳನ್ನು ಆತ್ಮವೆಂದರೆ ತಪ್ಪೇನು ?

2. ಅಜ್ಞಾನವು ಆತ್ಮಚೈತನ್ಯಕ್ಕೇ ತೋರತಕ್ಕದ್ದಾದ್ದರಿಂದಲೂ ಆತ್ಮಜ್ಞಾನದಿಂದ ತೊಲಗತಕ್ಕದ್ದಾದ್ದರಿಂದಲೂ ಅನಾತ್ಮಸ್ವರೂಪವಾಗಿದೆ.

3. ದೇಹಾದಿಗಳು ಆತ್ಮನಲ್ಲ ಎಂದು ತಿಳಿದಮಾತ್ರಕ್ಕೆ ಜ್ಞಾನವಾದಂತಲ್ಲ ; ಹಾಗೆನ್ನುವದು ಸಾಂಖ್ಯಸಿದ್ಧಾಂತ. ಅವು ಅಜ್ಞಾನಕಾರ್ಯವಾದ್ದರಿಂದ ಮಿಥ್ಯೆಯೆಂದು ತಿಳಿದು ಆತ್ಮಸ್ವರೂಪದಲ್ಲಿ ನೆಲೆಸಿಲ್ಲುವದೇ ಆತ್ಮಜ್ಞಾನವು.

೨೯. ಆದ್ದರಿಂದ ದೇಹಾದಿಗಳ ವ್ಯವಧಾನವಿರುವದರಿಂದ [1] ತದರ್ಥವು ತನ್ನ ಸ್ವರೂಪವೇ ಆಗಿದ್ದರೂ ಅದನ್ನು ಪರೋಕ್ಷವಾಗಿಯೇ ಅರಿಯುತ್ತಾನೆ. ಅವು ಅನಾತ್ಮವಾದವನಿಗೇ (ವಾಕ್ಯದಿಂದ) ಸಾಕ್ಷಾತ್ಕಾರವಾಗುವದು [2].

(ಮೂಲ)

ಯಥೋಕ್ತಾರ್ಥಪ್ರತಿಪತ್ತಿಸೌಕರ್ಯಾಯ ದೃಷ್ಟಾನ್ತೋಪಾದಾನಮ್ –

ಪ್ರತ್ಯಗುದ್ಭೂತಪಿತ್ತಸ್ಯ ಯಥಾ ಬಾಹ್ಯಾರ್ಥಪೀತತಾ ।
ಚೈತನ್ಯಂ ಪ್ರತ್ಯಗಾತ್ಮೀಯಂ ಬಹಿರ್ವದ್ದೃಶ್ಯತೇ ತಥಾ ॥೩೦॥

(ಅರ್ಥ)

ಈ ಹೇಳಿದ ವಿಷಯವನ್ನು ತಿಳಿದುಕೊಳ್ಳುವದಕ್ಕೆ [3] ಸುಖಕರವಾಗಲೆಂದು ದೃಷ್ಟಾಂತವನ್ನು ತೆಗೆದುಕೊಳ್ಳುತ್ತಾರೆ :

೩೦. ಒಳಗೆ ಉಂಟಾಗಿರುವ ಪಿತ್ತದವನಿಗೆ ಹೊರಗಿನ ಪದಾರ್ಥಗಳು ಹೇಗೆ ಹಳದಿಯಾಗಿರುವವೋ ಹಾಗೆ ಪ್ರತ್ಯಗಾತ್ಮನ ಚೈತನ್ಯವು ಹೊರಗಿರುವಂತೆ ಕಾಣುತ್ತದೆ [4].

(ಮೂಲ)

ಯಸ್ಮಾದೇವಮ್, ಅತೋ ವಿಸ್ರಬ್ಧಮವಸೀಯತಾಮ್ [5] –

ಪದಾನ್ಯುದ್ಧೃತ್ಯ ವಾಕ್ಯೇಭ್ಯೋ ಹ್ಯನ್ವಯವ್ಯತಿರೇಕತಃ ।
ಪದಾರ್ಥಾಲ್ಲೋಕತೋ ಬುದ್ಧ್ವಾ ವೇತ್ತಿ ವಾಕ್ಯಾರ್ಥಮಞ್ಜಸಾ ॥೩೧॥

---

1. ಅನಾತ್ಮವಾದ ದೇಹಾದಿಗಳಲ್ಲಿ ಆತ್ಮಬುದ್ಧಿಯಿದ್ದರೂ ಅನಾತ್ಮಬುದ್ಧಿಯಿದ್ದರೂ ದೇಹಾದಿಗಳ ವ್ಯವಧಾನವಾದಂತೆಯೇ.

2. ಅನ್ವಯವ್ಯತಿರೇಕಗಳಿಂದ ದೇಹಾದಿಗಳು ಅನಾತ್ಮವೆಂದು ತಿಳಿದವನಿಗೇ ವಾಕ್ಯದಿಂದ ಆತ್ಮನ ಅಪರೋಕ್ಷಜ್ಞಾನವಾಗುವದು ಎಂದರ್ಥ. ''ಅನಾತ್ಮಪ್ರತಿಪತ್ತಿಯನ್ನು ಸಾಕ್ಷಾತ್ತೆಂದು ತಿಳಿಯುತ್ತಾನೆ'' ಎಂಬ ವ್ಯಾಖ್ಯಾನವು ಸಂಬಂಧೋಕ್ತಿಗೆ ಹೊಂದುವದಿಲ್ಲ.

3. ಆತ್ಮಜ್ಞಾನದಿಂದ ಬುದ್ಧ್ಯಾದಿದೇಹಾಂತವಾಗಿರುವ ಅನಾತ್ಮವು ಆತ್ಮನಾಗಿ ಕಾಣುವದೆಂಬುದನ್ನು ತಿಳಿಯುವದಕ್ಕೆ.

4. ಬುದ್ಧ್ಯಾದಿಗಳು ಆತ್ಮನೆಂದು ಕಾಣುತ್ತವೆ.

5. 'ವಿಶುದ್ಧಮವಸೀಯತಾಮ್' ಎಂದು ಪಾಠಾಂತರವು.

(ಅರ್ಥ)

ಹೀಗಿದೆಯಷ್ಟೆ [1], ಆದ್ದರಿಂದ ವಿಶ್ವಾಸವಿಟ್ಟು (ಹೀಗೆಂದು) ನಿಶ್ಚಯಿಸಬಹುದು :

೩೧. ವಾಕ್ಯಗಳಿಂದ ಪದಗಳನ್ನು ಎತ್ತಿಕೊಂಡು, ಅನ್ವಯವ್ಯತಿರೇಕಗಳಿಂದ ಪದಾರ್ಥಗಳನ್ನು ಲೋಕ(ವ್ಯವಹಾರ)ದಿಂದ ತಿಳಿದುಕೊಂಡು [2] ವಾಕ್ಯಾರ್ಥವನ್ನು ಸರಿಯಾಗಿ ಅರಿತುಕೊಳ್ಳುತ್ತಾನೆ.

(ಮೂಲ)

ಕುತಃ ಪುನಃ ಸಾಮಾನ್ಯಮಾತ್ರವೃತ್ತೇಃ ಪದಸ್ಯ ವಾಕ್ಯಾರ್ಥಪ್ರತಿಪತ್ತಿಹೇತುತ್ವಮಿತಿ ? ಬಾಢಮ್ –

**ಸಾಮಾನ್ಯಂ ಹಿ ಪದಂ ಬ್ರೂತೇ ವಿಶೇಷೋ ವಾಕ್ಯಕರ್ತೃಕಃ ।**
**ಶ್ರುತ್ಯಾದಿಪ್ರತಿಬದ್ಧಂ ಸದ್ವಿಶೇಷಾರ್ಥಂ ಭವೇತ್ ಪದಮ್ ॥೩೨॥**

(ಅರ್ಥ)

(ಆಕ್ಷೇಪ) :- ಸಾಮಾನ್ಯಮಾತ್ರದಲ್ಲಿ ವೃತ್ತಿಯುಳ್ಳ ಪದವು ವಾಕ್ಯಾರ್ಥವನ್ನು ಅರಿತುಕೊಳ್ಳುವದಕ್ಕೆ ಕಾರಣವಾಗುವದು ಹೇಗೆ [3] ?

(ಪರಿಹಾರ) :- ನಿಜ :

---

1. ದೇಹಾದಿಗಳನ್ನು ಅನಾತ್ಮವೆಂದು ಅರಿತುಕೊಂಡಮೇಲೆಯೇ ವಾಕ್ಯದಿಂದ ಅವಾಕ್ಯಾರ್ಥಜ್ಞಾನವಾಗುವದಷ್ಟೆ.

2. 'ಎತ್ತನ್ನು ಹೊಡೆದುಕೊಂಡು ಬಾ', 'ಎತ್ತನ್ನು ಕಟ್ಟಿಹಾಕು', 'ಎತ್ತನ್ನು ಮೇಯಿಸು'- ಮುಂತಾದವುಗಳಲ್ಲಿ ಎತ್ತು ಎಂಬ ಪದದ ಅನ್ವಯವಿದೆ ; ಎತ್ತೆಂಬ ಪ್ರಾಣಿಯನ್ನೇ ಅದು ಹೇಳುತ್ತದೆ. ಕುದುರೆಯನ್ನು ಹೊಡೆದುಕೊಂಡು ಬಾ ಮುಂತಾದ ವಾಕ್ಯಗಳಲ್ಲಿ ಎತ್ತೆಂಬ ಪದದ ವ್ಯತಿರೇಕವಾಗುತ್ತಲೂ ಕುದುರೆಯೆಂಬ ಮಾತು ಆ ಪ್ರಾಣಿಯನ್ನು ಹೇಳುವದಿಲ್ಲ- ಎಂಬುದು ಈ ವಾಕ್ಯವನ್ನು ಕೇಳಿ ಜನರು ಮಾಡುವ ವ್ಯವಹಾರದಿಂದ ಗೊತ್ತಾಗುತ್ತದೆ. ಲೋಕದಲ್ಲಿ ಉಪಯೋಗಿಸುವ ಶಬ್ದಗಳನ್ನೇ ವೇದದಲ್ಲಿ ಉಪಯೋಗಿಸುವದರಿಂದ ಅಲ್ಲಿಯೂ ಹೀಗೆಯೇ ತಿಳಿದುಕೊಳ್ಳಬಹುದು.

3. ತತ್, ತ್ವಮ್- ಈ ಪದಗಳಿಗೆ ಅದು, ನೀನು- ಎಂಬ ಸಾಮಾನ್ಯಾರ್ಥವಿದೆ ; ಅದ್ವಿತೀಯಪ್ರತ್ಯಗಾತ್ಮನೆಂಬರ್ಥವು ಯಾವ ಪದಕ್ಕೂ ಇಲ್ಲ. ಈ ವಿಶೇಷಾರ್ಥವು ಏತರಿಂದ ಗೊತ್ತಾಗುತ್ತದೆ ?

೩೨. ಪದವು ಸಾಮಾನ್ಯವನ್ನೇ ಹೇಳುತ್ತದೆ, ವಿಶೇಷವು ವಾಕ್ಯದಿಂದಾಗುವದು. ಪದವು ಶ್ರುತ್ಯಾದಿಗಳ ಸಂಬಂಧವುಳ್ಳದ್ದಾಗಿ ವಿಶೇಷಾರ್ಥವುಳ್ಳದ್ದಾಗುವದು [1].

(ಮೂಲ)

ಅನ್ವಯವ್ಯತಿರೇಕಪುರಸ್ಸರಂ ವಾಕ್ಯಮೇವ ಸಾಮಾನಾಧಿಕರಣ್ಯಾದಿನಾ ಅವಿದ್ಯಾಪಟಲಪ್ರಧ್ವಂಸದ್ವಾರೇಣ ಮುಮುಕ್ಷುಂ ಸ್ವಾರಾಜ್ಯೇಽಭಿಷೇಚಯತಿ । ನ ತು ಅನ್ವಯವ್ಯತಿರೇಕಮಾತ್ರಸಾಧ್ಯೋಽಯಮರ್ಥಃ ಇತ್ಯಾಹ–

**ಬುದ್ಧ್ಯಾದೀನಾಮನಾತ್ಮತ್ವಂ ಲಿಙ್ಗಾದಪಿ ಚ ಸಿಧ್ಯತಿ ।**
**ನಿವೃತ್ತಿಸ್ತಾವತಾ ನೇತೀತ್ಯತೋ ವಾಕ್ಯಂ ಸಮಾಶ್ರಯೇತ್ ॥೩೩॥**

(ಅರ್ಥ)

ಅನ್ವಯವ್ಯತಿರೇಕಪೂರ್ವಕವಾಗಿ ವಾಕ್ಯವೇ ಸಾಮಾನಾಧಿಕರಣ್ಯಾದಿಗಳಿಂದ ಅವಿದ್ಯಾನೇತ್ರರೋಗವನ್ನು ನಾಶಮಾಡುವದರ ಮೂಲಕ ಮುಮುಕ್ಷುವನ್ನು ಸ್ವರಾಜ್ಯದಲ್ಲಿ ಅಭಿಷೇಕಮಾಡಿಸುತ್ತದೆಯೇ [2] ಹೊರತು ಬರಿಯ ಅನ್ವಯವ್ಯತಿರೇಕದಿಂದ ಈ ಅರ್ಥವನ್ನು ಸಾಧಿಸುವದಾಗಲಾರದು ಎಂದು ಹೇಳುತ್ತಾರೆ :

೩೩. ಬುದ್ಧಿಯೇ ಮುಂತಾದವುಗಳು ಅನಾತ್ಮವೆಂಬುದು ಲಿಂಗದಿಂದಲೂ [3] ಸಿದ್ಧಿಸುತ್ತದೆ. (ಆದರೆ) ಅಷ್ಟರಿಂದ (ಅಜ್ಞಾನದ) ನಿವೃತ್ತಿಯಾಗುವದಿಲ್ಲವಾದ್ದರಿಂದ [4] ವಾಕ್ಯವನ್ನು ಆಶ್ರಯಿಸಬೇಕು.

(ಮೂಲ)

ನ ಕೇವಲಮ್ ಅನುಮಾನಮಾತ್ರಶರಣೋಽಭಿಲಷಿತಮರ್ಥಂ ನ ಪ್ರಾಪ್ನೋತೀತಿ, ಅನರ್ಥಂ ಚಾಪ್ನೋತಿ ಇತ್ಯಾಹ–

---

1. ಶ್ರುತಿ, ಲಿಂಗ, ವಾಕ್ಯ, ಪ್ರಕರಣ- ಮುಂತಾದವುಗಳಿಂದ ಪದದ ಅರ್ಥವನ್ನು ಗೊತ್ತುಪಡಿಸಬೇಕೆಂದು ಮೀಮಾಂಸಕರ ನ್ಯಾಯ.

2. ಜ್ಞಾನವನ್ನು ಕೊಟ್ಟು ಮುಕ್ತನನ್ನಾಗಿ ಮಾಡುತ್ತದೆ.

3. ಲಿಂಗಜ್ಞಾನದಿಂದಾಗುವ ಅನುಮಾನದಿಂದಲೂ ಎಂದರ್ಥ.

4. ಏಕೆಂದರೆ ಅನಾತ್ಮಜ್ಞಾನವೂ ಆತ್ಮಾನಾತ್ಮವಿಭಾಗವೂ ಅದರಿಂದ ತೊಲಗುವದಿಲ್ಲ; ಅದಕ್ಕೆ ಅಜ್ಞಾನವೇ ಕಾರಣವೆಂದು ಆಗಲೆ ಹೇಳಿದ್ದಾಗಿದೆ.

**ಅನಾದೃತ್ಯ ಶ್ರುತಿಂ ಮೋಹಾದತೋ ಬೌದ್ಧಾಸ್ತಮಸ್ವಿನಃ ।**
**ಆಪೇದಿರೇ ನಿರಾತ್ಮತ್ವಮನುಮಾನೈಕಚಕ್ಷುಷಃ ॥೩೪॥**

(ಅರ್ಥ)

ಅನುಮಾನವನ್ನು ಮಾತ್ರ ಶರಣುಹೊಂದಿದವನು ಇಷ್ಟಾರ್ಥವನ್ನು ಪಡೆಯಲಾರನೆಂಬುದಷ್ಟೇ ಅಲ್ಲ, ಅನರ್ಥವನ್ನೂ ಹೊಂದುತ್ತಾನೆ ಎಂದು ಹೇಳುತ್ತಾರೆ :

೩೪. ಅಜ್ಞಾನಿಗಳಾದ ಬೌದ್ಧರು ಶ್ರುತಿಯನ್ನು ಅವಿವೇಕದಿಂದ ಅನಾದರಿಸಿ, ಅನುಮಾನವೆಂಬುದೊಂದೇ ಕಣ್ಣನವರಾಗಿ[1] ಅದರಿಂದ ನಿರಾತ್ಮತ್ವವನ್ನು ಹೊಂದಿದರು[2].

## ವಾಕ್ಯವು ಅಜ್ಞಾನವನ್ನು ತೊಲಗಿಸುವದು

(ಮೂಲ)

**ನ ಚಾನಾದರೇ ಕಾರಣಮಸ್ತಿ । ಯಸ್ಮಾತ್ ಸರ್ವತ್ರೈವ ಅನಾದರ ನಿಮಿತ್ತಂ ಪ್ರಮಾಣಸ್ಯ ಪ್ರಮಾಣಾನ್ತರಪ್ರತಿಪನ್ನಪ್ರತಿಪಾದನಂ ವಾ, ವಿಪರೀತಪ್ರತಿಪಾದನಂ ವಾ, ಸಂಶಯಿತಪ್ರತಿಪಾದನಂ ವಾ, ನ ವಾ ಪ್ರತಿ ಪಾದನಮಿತಿ[3] । ನ ಚೈತೇಷಾಮ್ ಅನ್ಯತಮದಪಿ[4] ಕಾರಣಮಸ್ತಿ । ಯತ ಆಹ –**

**ಮಾನಾನ್ತರಾನವಷ್ಟಬ್ಧಂ ನಿರ್ದುಃಖ್ಯಾತ್ಮಾನಮಞ್ಜಸಾ ।**
**ಬೋಧಯನ್ತೀ ಶ್ರುತಿಃ ಕೇನ ನ ಪ್ರಮಾಣಮಿತೀರ್ಯತೇ ॥೩೫॥**

(ಅರ್ಥ)

ಅನಾದರಿಸುವದಕ್ಕೆ ಕಾರಣವೂ ಇಲ್ಲ. ಏಕೆಂದರೆ, ಎಲ್ಲಿಯೇ ಆಗಲಿ ಅನಾದರಕ್ಕೆ ನಿಮಿತ್ತವೇನೆಂದರೆ, ಪ್ರಮಾಣವು ಮತ್ತೊಂದು ಪ್ರಮಾಣದಿಂದ

---

1. ಬರಿಯ ತರ್ಕವನ್ನವಲಂಬಿಸಿ ಎಂದರ್ಥ. ಬರಿಯ ತರ್ಕವು ನಿಲುಗಡೆಯಿಲ್ಲದ್ದೆಂಬುದನ್ನು ಸೂ.ಭಾ. ೨-೧-೧೧ರಲ್ಲಿ ವಿವರಿಸಿದೆ.

2. ಆತ್ಮಜ್ಞಾನವನ್ನು ಪಡೆಯಲಿಲ್ಲವೆಂಬುದೊಂದೇ ಅಲ್ಲ ; ಶೂನ್ಯವೇ ತತ್ತ್ವವೆಂಬ ಸಿದ್ಧಾಂತಕ್ಕೆ ಬಂದರು.

3. ''ಇತಿ'' ಇಲ್ಲದಿದ್ದರೂ ಆಗುತ್ತದೆ.

4. ಇದು ಪಾಣಿನೀಯವಾಗುವದಕ್ಕೆ ಅನ್ಯತಮಮ್ ಎಂದಿರಬೇಕು.

ತಿಳಿದದ್ದನ್ನೇ ಹೇಳುವದಾಗಲಿ [1] (ಅದಕ್ಕೆ) ವಿರುದ್ಧವಾದದ್ದನ್ನು ಪ್ರತಿಪಾದನ ಮಾಡುವದಾಗಲಿ, ಸಂಶಯಕ್ಕೆ ಕಾರಣವಾಗಿರುವದನ್ನು ತಿಳಿಸುವದಾಗಲಿ [2], ತಿಳಿಸದೆಯೇ ಇರುವದಾಗಲಿ (ಆಗಿರುತ್ತದೆ)[3]. ಇವುಗಳಲ್ಲಿ ಯಾವದೊಂದು ಕಾರಣವೂ (ಶ್ರುತಿಯಲ್ಲಿ) ಇಲ್ಲ. ಏಕೆಂದರೆ ಹೇಳುತ್ತಾರೆ :

೩೫. ಮತ್ತೊಂದು ಪ್ರಮಾಣಕ್ಕೆ ಸಿಕ್ಕದೆ ಇರುವ ನಿರ್ದುಃಖನಾದ ಆತ್ಮನನ್ನು ಸ್ಪಷ್ಟವಾಗಿ ತಿಳಿಸುವ ಶ್ರುತಿಯನ್ನು ಯಾವ ಕಾರಣದಿಂದ ಪ್ರಮಾಣವಲ್ಲವೆನ್ನುತ್ತೀರಿ [4].

(ಮೂಲ)

ನ ಚ ಸಂಶಯಿತವ್ಯಮ್ ಅವಗಮಯತಿ । ಯತಃ –

**ಸರ್ವಸಂಶಯಹೇತೌ ಹಿ ನಿರಸ್ತೇ ಕಥಮಾತ್ಮನಿ ।**
**ಜಾಯೇತ ಸಂಶಯೋ ವಾಕ್ಯಾದನುಮಾನೇನ ಯುಷ್ಮದಿ ॥೩೬॥**

(ಅರ್ಥ)

ಸಂಶಯಕ್ಕೆಡೆಯಾಗುವ (ವಸ್ತುವನ್ನೂ) ತಿಳಿಸುವದಿಲ್ಲ. ಏಕೆಂದರೆ :

೩೬. ಯುಷ್ಮದರ್ಥದಲ್ಲಿ [5] ಎಲ್ಲಾ (ಬಗೆಯ) ಸಂಶಯಹೇತುವನ್ನೂ [6] ಅನುಮಾನದಿಂದ [7] ತಿರಸ್ಕಾರಮಾಡಿದಮೇಲೆಯೇ (ಪ್ರವೃತ್ತವಾಗುವ)

---

1. ತಿಳಿದದ್ದನ್ನೇ ಹೇಳಿದರೆ ಅನುವಾದವಾಗುವದರಿಂದ ಅಪ್ರಮಾಣವು.

2. ವಿರುದ್ಧಸಂಶಯಿತಾರ್ಥಗಳನ್ನು ಹೇಳುವದು ಇದ್ದದ್ದನ್ನು ಇದ್ದಂತೆ ತಿಳಿಸದೆ ಇರುವದರಿಂದ ಅಪ್ರಮಾಣವು.

3. ತಿಳಿಸದೆ ಇದ್ದರೆ ಸರಿಯಾದ ತಿಳಿವಳಿಕೆಗೆ ಕಾರಣವಲ್ಲದ್ದರಿಂದ ಅಪ್ರಮಾಣವು.

4. ಮತ್ತೊಂದು ಪ್ರಮಾಣವನ್ನು ಅವಲಂಬಿಸದ ವಿಷಯವನ್ನು ಹೇಳಿದರೆ ಅನುವಾದವೂ ಆಗುವದಿಲ್ಲ, ವಿಪರೀತಪ್ರತಿಪಾದನವೂ ಆಗುವದಿಲ್ಲ. ಶ್ರುತಿಯು ಪ್ರಮಾಣವೆಂಬುದು ಶ್ರುತಿಯಾದ್ದರಿಂದಲಲ್ಲ ; ಅಪ್ರಮಾಣಹೇತುಗಳು ಯಾವದೂ ಇಲ್ಲವಾದ್ದರಿಂದ ಎಂದು ಅಭಿಪ್ರಾಯ. ಬೃ. ವಾ. ೨-೪-೩೨೫ನ್ನು ನೋಡಿ.

5. ತ್ವಂಪದಾರ್ಥದಲ್ಲಿ.

6. ಬುದ್ಧ್ಯಾದಿದೇಹಾಂತವಾಗಿರುವ ಅನಾತ್ಮದಲ್ಲಿ ಆತ್ಮಬುದ್ಧಿಯಿರುವದೇ ಸಂಶಯಹೇತು.

7. ಅನ್ವಯವ್ಯತಿರೇಕನ್ಯಾಯದಿಂದ.

ವಾಕ್ಯದಿಂದ ಆತ್ಮನಲ್ಲಿ ಹೇಗೆತಾನೆ ಸಂಶಯವುಂಟಾದೀತು [1] ?

(ಮೂಲ)

ಅಪಿ ಚ –

**ಯತ್ರ ಸ್ಯಾತ್ ಸಂಶಯೋ ನಾಸೌ ಜ್ಞೇಯ ಆತ್ಮೇತಿ ಪಣ್ಡಿತೈಃ ।**
**ನ ಯತಃ ಸಂಶಯಪ್ರಾಪ್ತಿರಾತ್ಮನೋಽವಗತಿತ್ವತಃ ॥೩೭॥**

(ಅರ್ಥ)

ಮತ್ತು [2]

೩೭. ಎಲ್ಲಿ ಸಂಶಯವಾಗುವದೋ ಅದು ಆತ್ಮನಲ್ಲವೆಂದು ವಿವೇಕಿಗಳು ತಿಳಿಯಬೇಕು. ಏಕೆಂದರೆ ಆತ್ಮನು ಅವಗತಿರೂಪನಾಗಿರುವದರಿಂದ (ಅವನಲ್ಲಿ) ಸಂಶಯಪ್ರಾಪ್ತಿಯೇ ಇರುವದಿಲ್ಲ [3].

(ಮೂಲ)

ಅನವಬೋಧಕತ್ವಂ ತು ದೂರೋತ್ಸಾರಿತಮೇವ । ಯತ ಆಹ –

**ಬೋಧೇಽಪ್ಯನುಭವೋ ಯಸ್ಯ ನ ಕಥಂಚನ ಜಾಯತೇ ।**
**ತಂ ಕಥಂ ಬೋಧಯೇಚ್ಛಾಸ್ತ್ರಂ ಲೋಷ್ಟಂ ನರಸಮಾಕೃತಿಮ್ ॥೩೮॥**

(ಅರ್ಥ)

(ವಿಷಯವನ್ನು) ತಿಳಿಸದೆ ಇರುವದೆಂಬುದನ್ನಂತೂ ದೂರಕ್ಕೆ ತಳ್ಳಿದಂತಾಗಿದೆ. ಏಕೆಂದರೆ ಹೇಳುತ್ತಾರೆ :

---

1. ಅನ್ವಯವ್ಯತಿರೇಕದಿಂದ ಬುದ್ಧ್ಯಾದ್ಯನಾತ್ಮಗಳನ್ನು ಆತ್ಮನಲ್ಲವೆಂದು ನಿಶ್ಚಯಿಸಿದ ಮೇಲೆ ನಾನು ಯಾರು ?- ಎಂದು ಆಲೋಚಿಸುತ್ತಿರುವವನಿಗಾಗಿಯೇ ವೇದಾಂತವಾಕ್ಯವು ಪ್ರವೃತ್ತವಾಗುತ್ತದೆ.

2. ಹಿಂದೆ ಪ್ರಮಾಣವಾದ ವಾಕ್ಯಸ್ವಭಾವವನ್ನು ನೋಡಿದರೆ ಸಂಶಯಕ್ಕೆ ಅವಕಾಶವಿಲ್ಲವೆಂದಿತ್ತು ; ಈಗ ಪ್ರಮೇಯವಾದ ಆತ್ಮನ ಸ್ವಭಾವವನ್ನು ನೋಡಿದರೂ ಸಂಶಯಕ್ಕೆ ಕಾರಣವಿಲ್ಲವೆಂದು ಹೇಳುತ್ತಾರೆ.

3. ಆತ್ಮನು ನಿತ್ಯನಿಶ್ಚಿತನಾದ ಚೈತನ್ಯಸ್ವರೂಪನಾಗಿರುತ್ತಾನೆ ; ವೇದಾಂತ ವಾಕ್ಯದಿಂದಾಗುವ ನಿಶ್ಚಯವೂ ಆತ್ಮನಿಗಿಂತ ಅಭಿನ್ನವಾಗಿದೆಯಾಗಿ ಅವಗತಿಯೇ ಆಗಿರುವದರಿಂದ ಅದರಲ್ಲಿ ಯಾವ ಸಂಶಯಕ್ಕೂ ಎಡೆಯಿಲ್ಲ.

೩೮. ಬೋಧದಲ್ಲಿಯೂ ಯಾವನಿಗೆ ಅನುಭವವು ಹೇಗೂ ಆಗುವದೇ ಇಲ್ಲವೋ[1], ಅಂಥ ಮನುಷ್ಯಸಮಾನಾಕೃತಿಯುಳ್ಳ ಮಣ್ಣುಹೆಂಟೆಗೆ ಶಾಸ್ತ್ರವು ಹೇಗೆ ತಾನೆ ಬೋಧಿಸೀತು[2] ?

## ಅನ್ವಯವ್ಯತಿರೇಕನ್ಯಾಯವು ಶ್ರುತ್ಯನುಗೃಹೀತ

(ಮೂಲ)

ಅನ್ವಯವ್ಯತಿರೇಕಪುರಃಸರಂ ವಾಕ್ಯಮೇವಾವಾಕ್ಯಾರ್ಥರೂಪಮ್ ಆತ್ಮಾನಂ ಪ್ರತಿಪಾದಯತಿ ಇತ್ಯಸ್ಯ ಪಕ್ಷಸ್ಯ ದ್ರಢಿಮ್ನೇ ಶ್ರುತ್ಯುದಾಹರಣ ಮುಪನ್ಯಸ್ಯತಿ–

**ಜಿಘ್ರಾಣೀಮಮಹಂ ಗನ್ಧಮಿತಿ ಯೋ ವೇತ್ತ್ಯವಿಕ್ರಿಯಃ ।**
**ಸ ಆತ್ಮಾ ತತ್ಪರಂ ಜ್ಯೋತಿಃ ಶಿರಸೀದಂ ವಚಃ ಶ್ರುತೇಃ ॥೩೯॥**

(ಅರ್ಥ)

ಅನ್ವಯವ್ಯತಿರೇಕಪೂರ್ವಕವಾಗಿ ವಾಕ್ಯವೇ[3] ಅವಾಕ್ಯಾರ್ಥರೂಪನಾದ ಆತ್ಮನನ್ನು ಪ್ರತಿಪಾದಿಸುತ್ತದೆಯೆಂಬೀ ಪಕ್ಷವು ಗಟ್ಟಿಯಾಗುವದಕ್ಕಾಗಿ ಶ್ರುತ್ಯುದಾಹರಣವನ್ನು ಹೇಳುತ್ತಾರೆ :

---

1. ಆತ್ಮನು ನಿತ್ಯಾದ್ವಿತೀಯಬೋಧರೂಪನಾಗಿರುತ್ತಾನೆ ಎಂದು ವಾಕ್ಯದಲ್ಲಿ ಉಪದಿಷ್ಟವಾಗಿರುತ್ತದೆ. ಬೋಧದಲ್ಲಿ (ತಿಳಿವಳಿಕೆಯ ವಿಷಯದಲ್ಲಿ) ತಿಳಿವಳಿಕೆ ಯಾಗಲಿಲ್ಲವೆಂಬುದು ತನಗೆ ತಾನೇ ವಿರುದ್ಧವಾದ ವಚನವು ; ಏಕೆಂದರೆ ನಿತ್ಯೋತ್ಪನ್ನ ಬೋಧದಲ್ಲಿ ತಿಳಿವಳಿಕೆಯಾಗಬೇಕೆಂಬ ಅಪೇಕ್ಷೆಯೇ ಇಲ್ಲ. ಶಾಸ್ತ್ರವು ಅಜ್ಞಾನನಾಶ ಮಾತ್ರದಿಂದ ಬೋಧಕವೆಂದು ೨-೧೦೫ರಲ್ಲಿ ಹೇಳಿಯೇ ಇವೆ.

2. ಇಷ್ಟು ದಡ್ಡನಾದವನಿಗೆ ತಿಳಿವಳಿಕೆಯನ್ನು ಕೊಡಲಾರದಿದ್ದರೆ ಅದು ಶಾಸ್ತ್ರದ ತಪ್ಪಲ್ಲ ; ಕುರುಡನಿಗೆ ರೂಪವು ಕಾಣದಿದ್ದರೆ ಸೂರ್ಯನ ತಪ್ಪಿಲ್ಲವಷ್ಟೆ ? ಎಂದು ಭಾವ.

3. ಶ್ರುತಿಯೇ ಅನ್ವಯವ್ಯತಿರೇಕಕ್ರಮವನ್ನು ಸೂಚಿಸುತ್ತದೆ. ಪುರುಷಮತಿಕಲ್ಪಿತವಾದ ಅನುಮಾನವಲ್ಲ, ನಾವು ವಾಕ್ಯಜ್ಞಾನಾಂಗವಾದ ಅನ್ವಯವ್ಯತಿರೇಕವೆಂದು ಹೇಳಿರುವದು- ಎಂದು ಭಾವ.

೩೯. (ನಾನು) ಈ ವಾಸನೆಯನ್ನು ಮೂಸುವೆನು ಎಂದು ಯಾವನು ಅವಿಕ್ರಿಯನಾಗಿಯೇ ಅರಿಯುತ್ತಾನೋ[1] ಅವನೇ ಆತ್ಮನು, ಅದೇ ಪರಂ ಜ್ಯೋತಿಯು- ಎಂಬೀ ವಚನವು ಶ್ರುತಿಯ ಶಿರಸ್ಸಿನಲ್ಲಿದೆ[2].

(ಮೂಲ)

ಯಥಾ ''ತತ್ಸತ್ಯಂ ಸ ಆತ್ಮಾ ತತ್ತ್ವಮಸಿ'' (ಛಾಂ. ೬-೮-೭) ಇತ್ಯಸ್ಯ ಶೇಷತ್ವೇನ ಅನ್ವಯವ್ಯತಿರೇಕಶ್ರುತಿರ್ಯಥಾ ''ಯ ಏಷೋಽಕ್ಷಿಣಿ ಪುರುಷೋ ದೃಶ್ಯತೇ'' (ಛಾಂ. ೮-೭-೪) ಇತ್ಯಾದ್ಯಾ ''ಅಥ ಯೋ ವೇದೇದಂ ಜಿಘ್ರಾಣಿ'' (ಛಾಂ. ೮-೧೨-೪) ಇತ್ಯನ್ತಾ , ತಥಾ ''ಅಹಂ ಬ್ರಹ್ಮಾಸ್ಮಿ'' (ಬೃ. ೧-೪-೧೦) ಇತ್ಯಸ್ಯ ಶೇಷಃ–

ಅಹಮಃ ಪ್ರತ್ಯಗಾತ್ಮಾರ್ಥೋಽ ನಿರಸ್ತಾಶೇಷಯುಷ್ಮದಃ ।
ಬಮ್ಭಣೇತಿ ಶ್ರುತಿರ್ನ್ಯಾಯ್ಯಾ ಯೋಽಯಮಿತ್ಯಾದಿನಾಸಕೃತ್ ॥೪೦॥

(ಅರ್ಥ)

ಹೇಗೆ ''ಅದು ಸತ್ಯವು, ಅದೆ ಆತ್ಮನು, ಅದೆ ನೀನು'' (ಛಾಂ. ೬-೮-೭) ಎಂಬೀ ವಾಕ್ಯಕ್ಕೆ ಶೇಷವಾಗಿ ''ಅಕ್ಷಿಯಲ್ಲಿ ಈ ಪುರುಷನು ಕಾಣಿಸುತ್ತಾನೋ'' (ಛಾಂ. ೮-೭-೪) ಎಂದು ಮೊದಲಾಗಿ ''ಇನ್ನು ಯಾವನು ಇದನ್ನು ಮೂಸುವೆನು ಎಂದು ಅರಿಯುತ್ತಾನೋ''

1. 'ನಾನು' ಎಂದು ವಿಕಾರಿಯಾದ ಪ್ರಮಾತೃವನ್ನು , 'ಈ ವಾಸನೆಯನ್ನು' ಎಂದು ವಿಷಯವನ್ನು , 'ಮೂಸುವೆನು' ಎಂದು ಮೂಸುವ ಕ್ರಿಯೆ, ಕರಣ, ಪ್ರಮಿತಿ ಇವುಗಳನ್ನು - ಯಾವ ಕೂಟಸ್ಥಸಾಕ್ಷಿಯು ಅರಿಯುತ್ತಾನೋ ಎಂದರ್ಥ.

2. ಅವನೇ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ಹೇಳಿರುವ ಆತ್ಮನು, ಅವನನ್ನೇ ''ಈ ಶರೀರದಿಂದ ಎದ್ದು ಪರಂಜ್ಯೋತಿಯನ್ನು ಸೇರಿ ತನ್ನ ಸ್ವರೂಪ ದಿಂದ ನಿಲ್ಲುತ್ತಾನೆ'' (ಛಾಂ. ೮-೧೨-೩) ಎಂಬಲ್ಲಿ ಹೇಳಿದೆ ಎಂದು ಈ ಛಾಂದೋಗ್ಯ (ಛಾಂ. ೮-೧೨-೪) ವೇದಾಂತವಾಕ್ಯದಲ್ಲಿದೆ ಎಂದರ್ಥ.

(ಛಾಂ. ೮-೧೨-೪)- ಎಂಬವರೆಗಿನ ಅನ್ವಯವ್ಯತಿರೇಕಶ್ರುತಿಯಿರುವದೋ[1] ಹಾಗೆಯೇ 'ನಾನು ಬ್ರಹ್ಮವಾಗಿರುವೆನು' (ಬೃ. ೧-೪-೧೦) ಎಂಬಿದರ ಶೇಷವು (ಇದು) :-

೪೦. ಎಲ್ಲಾ ಯುಷ್ಮದಂಶವನ್ನೂ ಕಳೆದ[2] ಅಹಮ್ಮಿಗೆ ಪ್ರತ್ಯಗಾತ್ಮನೇ ಅರ್ಥವು- ಎಂದು ಯುಕ್ತಿಯುಕ್ತವಾದ ಶ್ರುತಿಯು 'ಯಾವ ಇವನು....[3]' (ಬೃ. ೪-೩-೭) ಎಂದು ಮುಂತಾದ (ವಾಕ್ಯ)ದಿಂದ ಮತ್ತೆಮತ್ತೆ ಹೇಳುತ್ತಲೇ ಇರುತ್ತದೆ[4].

(ಮೂಲ)

ಕಥಂ ಪುನರಯಮರ್ಥೋಽವಸೀಯತೇ ಅಹಂವ್ಯಾಜೇನ ಅತ್ರ ಆತ್ಮಾರ್ಥೋ ಬುಬೋಧಯಿಷಿತಃ ಇತಿ ? ಯತಃ –

**ಏಷ ಆತ್ಮಾ ಸ್ವಯಂಜ್ಯೋತೀ ರವಿಸೋಮಾಗ್ನಿವಾಕ್ಸು ಸಃ ।**
**ಇತೀಷ್ವಸ್ತಂ ದೃಗೇವಾಸ್ತೇ ಭಾಸಯಂಶ್ಚಿತ್ತಚೇಷ್ಟಿತಮ್ ॥೪೧॥**

(ಅರ್ಥ)

(ಪ್ರಶ್ನೆ) :- ಇಲ್ಲಿ ಅಹಂಕಾರವನ್ನು ನಿಮಿತ್ತವಾಗಿ (ಮಾಡಿಕೊಂಡು) ಆತ್ಮಾರ್ಥವನ್ನೇ ತಿಳಿಸಬೇಕೆಂದು ಹೊರಟಿದೆ ಎಂಬೀ ಅರ್ಥವನ್ನು ಹೇಗೆ ನಿಶ್ಚಯಿಸಬೇಕು[5] ?

---

1. ನಿಜವಾಗಿ ನೋಡಿದರೆ 'ಯ ಏಷೋಽಕ್ಷಿಣಿ' (ಛಾಂ. ೮-೭-೪) ಎಂಬೀ ವಾಕ್ಯವು 'ಯ ಆತ್ಮಾಽಪಹತಪಾಪ್ಮಾ' (ಛಾಂ. ೮-೭-೧) ಎಂಬಿದರ ಶೇಷವಾಗಿದೆ. 'ಅಥ ಯೋ ವೇದೇದಂ ಜಿಘ್ರಾಣಿ' (ಛಾಂ. ೮-೧೨-೪) ಎಂಬಿದು 'ಪರಂ ಜ್ಯೋತಿರುಪಸಂಪದ್ಯ' (ಛಾಂ. ೮-೧೨-೩) ಎಂಬುದಕ್ಕೆ ಶೇಷವಾಗಿರುತ್ತದೆ. "ತತ್ತ್ವಮಸಿ" ಎಂಬ ವಾಕ್ಯಕ್ಕೆ ಶೇಷವಾಗಿ "ಅನ್ನಮಯಂ ಹಿ ಸೋಮ್ಯ ಮನಃ" (ಛಾಂ. ೬-೭-೬) "ಸ್ವಪ್ನಾನ್ತಂ ಮೇ ವಿಜಾನೀಹಿ (ಛಾಂ. ೬-೮-೧) ಮುಂತಾದ ಆ ಪ್ರಕರಣದಲ್ಲಿರುವ ವಾಕ್ಯಗಳನ್ನೇ ಉದಾಹರಿಸಲೂಬಹುದು. ಆದರೂ ತತ್ತ್ವಂಪದಾರ್ಥೈಕ್ಯಪರವಾಕ್ಯಕ್ಕೆ ಶೇಷವಾಗಿ ಅನ್ವಯವ್ಯತಿರೇಕಗಳನ್ನು ಶ್ರುತಿಯಲ್ಲಿಯೇ ಮಾಡಿದೆ ಎಂಬುದಿಷ್ಟೇ ಇಲ್ಲಿ ವಿವಕ್ಷಿತವಾದ್ದರಿಂದ ಯಾವ ವಿರೋಧವೂ ಇಲ್ಲ.

2. ಅನಾತ್ಮಾಂಶಗಳನ್ನೆಲ್ಲ ಕಳೆದ.

3. 'ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯನ್ತರ್ಜ್ಯೋತಿಃ' (ಬೃ. ೪-೩-೭) ಎಂಬೀ ವಾಕ್ಯವು.

4. ತಾತ್ಪರ್ಯದಿಂದ ಹೇಳುತ್ತದೆ ಎಂದರ್ಥ.

5. ಅಹಂಕಾರಕ್ಕೆ ಪ್ರತ್ಯಗಾತ್ಮನೇ ಇಲ್ಲಿ ಲಕ್ಷ್ಯಾರ್ಥವೆಂದು ಹೇಗೆ ಗೊತ್ತು ?

(ಉತ್ತರ) :- ಹೇಗೆಂದರೆ :

೪೧. ಈ ಆತ್ಮನು ಸ್ವಯಂಜ್ಯೋತಿಯು. ಸೂರ್ಯ, ಚಂದ್ರ, ಅಗ್ನಿ, ವಾಕ್ಕು - ಇವುಗಳು ಅಸ್ತಮಿತವಾಗಲು ಇವನು ಚಿತ್ತವ್ಯಾಪಾರವನ್ನು ಬೆಳಗುತ್ತಾ ದೃಗ್ರೂಪನಾಗಿಯೇ ಇರುತ್ತಾನೆ[1].

(ಮೂಲ)

ನಿರ್ಣೇನೇಕ್ತಿ ಚ ಪೃಷ್ಟೋ ಮುನಿಃ –

**ಆತ್ಮನೈವೇತ್ಯುಪಶ್ರುತ್ಯ ಕೋಽಯಮಾತ್ಮೇತ್ಯುದೀರಿತೇ ।**
**ಬುದ್ಧೇಃ ಪರಂ ಸ್ವತೋ ಮುಕ್ತಮಾತ್ಮಾನಂ ಮುನಿರಭ್ಯಧಾತ್॥೪೨॥**

(ಅರ್ಥ)

ಕೇಳಿದ್ದಕ್ಕೆ ಮುನಿಯು (ಹೀಗೆಂದು) ನಿರ್ಣಯಿಸಿಯೂ ಇರುತ್ತಾನೆ :

೪೨. ''ಆತ್ಮನೆಂಬ (ಜ್ಯೋತಿ)ಯಿಂದಲೇ....''[2] (ಬೃ. ೪-೩-೬) ಎಂಬ (ಯಾಜ್ಞವಲ್ಕ್ಯವಚನವನ್ನು) ಕೇಳಿ, ''ಈ ಆತ್ಮನು ಯಾರು ?'' ಎಂದು (ಜನಕನು) ಕೇಳಲು, (ಯಾಜ್ಞವಲ್ಕ್ಯ) ಮುನಿಯು ಬುದ್ಧಿಗಿಂತಲೂ ಪರನಾದ, ಸ್ವತೋಮುಕ್ತನಾದ ಆತ್ಮನನ್ನೇ ಹೇಳಿರುತ್ತಾನೆ[3].

---

1. ಈ (ಬೃ. ೪-೩-೭) ವಾಕ್ಯದ ಹಿಂದಿನ ವಾಕ್ಯದಲ್ಲಿ ''ಆದಿತ್ಯನು ಅಸ್ತಮಿತನಾಗಲು ಚಂದ್ರನೂ ಅಸ್ತನಾಗಲು ಅಗ್ನಿಯು ಶಾಂತವಾಗಲು ವಾಕ್ಕೂ ಶಾಂತವಾಗಲು ಈ ಪುರುಷನು ಯಾವದೊಂದೇ ಜ್ಯೋತಿಯುಳ್ಳವನಾಗಿರುತ್ತಾನೆ ?'' ಎಂಬ ಪ್ರಶ್ನೆಗೆ ''ಆತ್ಮನೆಂಬ ಜ್ಯೋತಿಯಿಂದಲೇ ಇವನು ಕುಳಿತಿರುತ್ತಾನೆ, ಹೋಗುತ್ತಾನೆ ; ಕರ್ಮವನ್ನು ಮಾಡುತ್ತಾನೆ, ಬರುತ್ತಾನೆ'' (ಬೃ. ೪-೩-೬) ಎಂದು ಮಿಕ್ಕ ಎಲ್ಲಾ ಬೆಳಕುಗಳು ಅಸ್ತಮಿತವಾದರೂ ಆತ್ಮಜ್ಯೋತಿಯಿರುತ್ತದೆ- ಎಂದು ನಿರ್ಣಯವಾಗಿರುತ್ತದೆ. ಹೀಗೆಯೇ ಮುಂದಿನ ವಾಕ್ಯದಲ್ಲಿ ''ಇಲ್ಲಿ ಈ ಪುರುಷನು ಸ್ವಯಂಜ್ಯೋತಿಯಾಗಿರುತ್ತಾನೆ'' (ಬೃ. ೪-೩-೧೪) ಎಂದಿದೆ ಎಂದೂ ಸೇರಿಸಿಕೊಳ್ಳಬೇಕು.

2. ಮೇಲಿನ ಟಿಪ್ಪಣಿಯಲ್ಲಿ ಈ ವಾಕ್ಯವನ್ನು ಪೂರ ಬರೆದಿದೆ.

3. 'ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯನ್ತರ್ಜ್ಯೋತಿಃ ಪುರುಷಃ' (ಬೃ. ೪-೩-೭) ಎಂಬುದು ಪೂರ್ಣವಾಕ್ಯ. ಇಲ್ಲಿ 'ವಿಜ್ಞಾನಮಯ'ನೆಂಬುದರಿಂದ ದೇಹವನ್ನು, 'ಪ್ರಾಣೇಷು' ಎಂಬುದರಿಂದ ಇಂದ್ರಿಯಪ್ರಾಣಗಳನ್ನು, 'ಹೃದ್ಯನ್ತಃ' ಎಂಬುದರಿಂದ ಬುದ್ಧಿಯನ್ನು, 'ಜ್ಯೋತಿಃ' ಎಂಬುದರಿಂದ ಬುದ್ಧಿವೃತ್ತಿಗಳನ್ನು ಮೀರಿ ಅವುಗಳನ್ನು ಬೆಳಗುವ ಸಾಕ್ಷಿಚೈತನ್ಯವನ್ನೇ ಹೇಳಿದೆ. ಈ ಚೈತನ್ಯಕ್ಕೆ ಯಾವ ಪರಿಚ್ಛೇದವೂ ಇಲ್ಲದ್ದರಿಂದ ಇದು ಸ್ವತೋಮುಕ್ತವಾಗಿದೆ.

(ಮೂಲ)

ಯಸ್ಮಾಚ್ಚ ಆತ್ಮಾತ್ರ ಅಹಂವ್ಯಾಜೇನ ಪ್ರತ್ಯಜ್ಮಾತ್ರೋ ಜಿಗ್ರಾಹಯಿಷಿತಃ । ತಸ್ಮಾತ್, ಅಹಂವೃತ್ತಿಃ ಸ್ವರೂಪಸ್ಯ ವಿಲಯೇನೈವ ಅವಾಕ್ಯಾರ್ಥಾವಗಮಾಯ[1] ಕಾರಣತ್ವಂ ಪ್ರತಿಪದ್ಯತ ಇತೀಮಮರ್ಥಮಾಹ–

**ಅಹಂವೃತ್ತ್ಯೈವ ತದ್ಬ್ರಹ್ಮ ಯಸ್ಮಾದೇಷೋಽವಗಚ್ಛತಿ ।**
**ತತ್ಸ್ವರೂಪಲಯೇನಾತಃ ಕಾರಣಂ ಸ್ಯಾದಹಂಕೃತಿಃ ॥೪೩॥**

(ಅರ್ಥ)

ಪ್ರತ್ಯಜ್ಮಾತ್ರನಾದ ಆತ್ಮನನ್ನೇ ಇಲ್ಲಿ ಅಹಂಕಾರದ ನೆಪದಿಂದ ತಿಳಿಸಿಕೊಡಬೇಕೆಂದಿದೆಯಾದ್ದರಿಂದಲೇ ಅಹಂವೃತ್ತಿಯು ಸ್ವರೂಪದ ವಿಲಯದಿಂದಲೇ ಅವಾಕ್ಯಾರ್ಥದ ಜ್ಞಾನಕ್ಕೆ ಕಾರಣತ್ವವನ್ನು ಪಡೆದುಕೊಳ್ಳುತ್ತದೆ[2]- ಎಂಬೀ ಅರ್ಥವನ್ನು ಹೇಳುತ್ತಾರೆ :

೪೩. ಇವನು ಅಹಂವೃತ್ತಿಯಿಂದಲೇ ಆ ಬ್ರಹ್ಮವನ್ನು ನಿಶ್ಚಯಿಸಿಕೊಳ್ಳುತ್ತಾನಷ್ಟೆ, ಆದ್ದರಿಂದ ಆ (ಅಹಂಕಾರ)ರೂಪದ ಲಯದಿಂದಲೇ ಅಹಂಕಾರವು ಕಾರಣವಾಗುವದು[3].

(ಮೂಲ)

ಅತ ಏವ ಚ ಯಃ ಪ್ರತಿಜ್ಞಾತೋಽರ್ಥೋ ''ನಾಹಂಗ್ರಾಹ್ಯೇ ನ ತದ್ಧೀನೇ'' (೨-೫) ಇತ್ಯಾದಿಃ ಸ ಯುಕ್ತಿಭಿರುಪಪಾದಿತಃ ಇತಿ ಕೃತ್ವಾ ಉಪಸಂಹ್ರಿಯತೇ–

1. 'ವ್ಯಕ್ಯಾರ್ಥಾವಗಮಾಯ' ಎಂಬ ಪಾಠಕ್ಕಿಂತ ಇದು ಮೇಲು.

2. ಅಹಂವೃತ್ತಿಯು ಲಕ್ಷಣವು, ಅದ್ವಯಾತ್ಮನೇ ಲಕ್ಷ್ಯವು- ಎನ್ನುತ್ತೀರಷ್ಟೆ. ಅಹಂವೃತ್ತಿ ಎಂಬ ಲಕ್ಷಣವಿದ್ದರೆ ಸದ್ವಿತೀಯತ್ವವೇ ಆಗುತ್ತದೆ ; ಅದಿಲ್ಲದಿದ್ದರೆ ಲಕ್ಷ್ಯವೆಂಬುದೆಲ್ಲಿಂದ ಬಂತು ?- ಎಂಬ ಆಕ್ಷೇಪಕ್ಕೆ ಹಿಂದೆ (೩-೨೭)ರಲ್ಲಿ ಹೇಳಿದ್ದ ಉತ್ತರವನ್ನೇ ಇಲ್ಲಿ ನೆನಪುಕೊಟ್ಟಿದೆ. ಅಹಂಕಾರವೇ ಆತ್ಮಜ್ಞಾನಕ್ಕೆ ದ್ವಾರವು ; ಅದು ತನ್ನ ರೂಪದ ಲಯದಿಂದಲೇ ಲಕ್ಷಣವಾಗಿರುತ್ತದೆ ಎಂದರ್ಥ.

3. ಅಹಂಕಾರವು ಇದ್ದುಕೊಂಡೇ ಬ್ರಹ್ಮಾತ್ಮಸ್ವರೂಪಕ್ಕೆ ಲಕ್ಷಣವಾಗಬೇಕಾದದ್ದೇನೂ ಇಲ್ಲ ಎಂದು ಅಭಿಪ್ರಾಯ.

**ಗೃಹೀತಾಹಂಪದಾರ್ಥಶ್ಚೇತ್ ಕಸ್ಮಾಜ್ಜ್ಞೋ ನ ಪ್ರಪದ್ಯತೇ ।**
**ಪ್ರತ್ಯಕ್ಷಾದಿವಿರೋಧಾಚ್ಚೇತ್ ಪ್ರತೀಚ್ಯುಕ್ತಿರ್ನ ಯುಷ್ಮದಿ ॥೪೪॥**

(ಅರ್ಥ)

ಆದ್ದರಿಂದಲೇ ''ಅಹಂಗ್ರಾಹ್ಯವಾದದ್ದರಲ್ಲಿಯಾಗಲಿ ಆ (ಅಹಂ ಗ್ರಾಹ್ಯತ್ವ)ವಿಲ್ಲದ್ದರಲ್ಲಿಯಾಗಲಿ.... (ವಿರೋಧವಾಗುವದಿಲ್ಲ)'' (೨-೫) ಎಂದು ಮುಂತಾದ (ವಾಕ್ಯದಲ್ಲಿ) ಪ್ರತಿಜ್ಞೆ ಮಾಡಿತ್ತಷ್ಟೆ, ಅದನ್ನು ಯುಕ್ತಿಗಳಿಂದ ಉಪಪಾದನೆಮಾಡಿದಂತಾಯಿತೆಂದು (ಈಗ ಅದನ್ನು) ಉಪಸಂಹಾರಮಾಡುತ್ತಾರೆ :

೪೪. ಅಹಂಪದದ ಅರ್ಥವನ್ನು ಗ್ರಹಿಸಿದ್ದರೆ ಜ್ಞಾತೃವಾದವನು ಏತಕ್ಕೆ (ವಾಕ್ಯಾರ್ಥವನ್ನು) ತಿಳಿಯಲಾರನು ? ಪ್ರತ್ಯಕ್ಷಾದಿವಿರೋಧವಾಗುವದರಿಂದ (ತಿಳಿಯಲಾರನು) ಎನ್ನುವದಾದರೆ ವಾಕ್ಯವು ಪ್ರತ್ಯಗಾತ್ಮನಲ್ಲಿ , ಅನಾತ್ಮದಲ್ಲಲ್ಲ [1].

(ಮೂಲ)

**ಪೂರ್ವಸ್ಯೈವ ಶ್ಲೋಕಾರ್ಥಸ್ಯ ವಿಸ್ಪಷ್ಟಾರ್ಥಮಾಹ–**

**ಪರಾಞ್ಚ್ಯೇವ ತು ಸರ್ವಾಣಿ ಪ್ರತ್ಯಕ್ಷಾದೀನಿ ಸಾತ್ಮನಿ ।**
**ಪ್ರತೀಚ್ಯೇವ ಪ್ರವೃತ್ತಂ ತತ್ ಸದಸೀತಿ ವಚೋಽಞ್ಜಸಾ ॥೪೫॥**

(ಅರ್ಥ)

ಹಿಂದಿನ ಶ್ಲೋಕಾರ್ಥವೇ ವಿಸ್ಪಷ್ಟವಾಗಲೆಂದು (ಈ ಶ್ಲೋಕವನ್ನು) ಹೇಳಿದ್ದಾರೆ :

---

1. ಅಹಮರ್ಥವು ಸಂಸಾರಿ ಎಂಬುದು ಪ್ರತ್ಯಕ್ಷಾದಿಪ್ರಮಾಣಗಳಿಂದ ಸಿದ್ಧವಾಗಿದೆಯಾಗಿ ಅದಕ್ಕೆ ವಿರುದ್ಧವಾಗಿರುವದರಿಂದ ವಾಕ್ಯಾರ್ಥವನ್ನು ತಿಳಿಯುವದಕ್ಕೆ ಆಗಲಾರದು-ಎಂದರೆ ಹಾಗಲ್ಲ. ವಾಕ್ಯವು ಅಹಂಪ್ರತ್ಯಯಗಮ್ಯವಾದದ್ದನ್ನು ಬ್ರಹ್ಮವೆಂದೇನೂ ಹೇಳುವದಿಲ್ಲವಾದ್ದರಿಂದ ಪ್ರತ್ಯಕ್ಷಾದಿವಿರೋಧವಿಲ್ಲ ಎಂದರ್ಥ.

೪೫. ಪ್ರತ್ಯಕ್ಷಾದಿಸರ್ವ(ಪ್ರಮಾಣ)ಗಳೂ ಹೊರಮುಖವಾಗಿಯೇ ಇವೆ[1]. ಆ ಸತ್ತಾಗಿರುವೆ ಎಂಬ ವಾಕ್ಯವು ತಾತ್ಪರ್ಯದಿಂದ ಪ್ರತ್ಯಗಾತ್ಮನಲ್ಲಿಯೇ [2] ಪ್ರವೃತ್ತವಾಗಿದೆ.

(ಮೂಲ)

ತಸ್ಮಾತ್ ಪ್ರಮಾತೃಪ್ರಮಾಣಪ್ರಮೇಯೇಭ್ಯೋ ಹೇಯಮಾನೋಪಾದೀಯಮಾನೇಭ್ಯೋಽನ್ವಯವ್ಯತಿರೇಕಾಭ್ಯಾಂ ಮುಞ್ಜೇಷೀಕಾವತ್ ಅಶೇಷಬುದ್ಧಿವಿಕ್ರಿಯಾಸಾಕ್ಷಿತಯಾ ಆತ್ಮಾನಂ ನಿಷ್ಕೃಷ್ಯ ತತ್ತ್ವಮಸ್ಯಾದಿ ವಾಕ್ಯೇಭ್ಯೋಽಪೂರ್ವಾದಿಲಕ್ಷಣಮ್ ಆತ್ಮಾನಂ ವಿಜಾನೀಯಾತ್ । ತದೇತದಾಹ –

**ಅಹಂ ದುಃಖೀ ಸುಖೀ ಚೇತಿ ಯೇನಾಯಂ ಪ್ರತ್ಯಯೋಽಧ್ರುವಃ ।**
**ಅವಗತ್ಯನ್ತ ಆಭಾತಿ ಸ ಮ ಆತ್ಮೇತಿ ವಾಕ್ಯಧೀಃ ॥೪೬॥**

(ಅರ್ಥ)

ಆದ್ದರಿಂದ ಪ್ರಮಾತೃ, ಪ್ರಮಾಣ, ಪ್ರಮೇಯ- ಎಂಬೀ ಬಿಡುವದಕ್ಕೂ ತೆಗೆದುಕೊಳ್ಳುವದಕ್ಕೂ ತಕ್ಕವಾಗಿರುವ (ಅನಾತ್ಮಗಳಿಂದ) ನೊದೆಹುಲ್ಲಿನಿಂದ ಅದರ ಗಟ್ಟಿಯಾದ ಕಡ್ಡಿಯನ್ನು (ಎಳೆದುಕೊಳ್ಳು)ವಂತೆ [3] ಆತ್ಮನನ್ನು ಎಲ್ಲಾ ಬುದ್ಧಿವಿಕಾರಗಳಿಗೂ ಸಾಕ್ಷಿಯೆಂದು[4] ಅನ್ವಯವ್ಯತಿರೇಕಗಳಿಂದ ಎಳೆದುಕೊಂಡು 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದ 'ಅಪೂರ್ವ'.... ಮುಂತಾದ (ಬೃ. ೨-೫-೧೯) ಲಕ್ಷಣದ[5] ಆತ್ಮನನ್ನು ಅರಿತುಕೊಳ್ಳಬೇಕು. ಆ ಇದನ್ನು ಹೇಳುತ್ತಾರೆ :

1. ಕ. ೨-೧-೧ರ ಅಭಿಪ್ರಾಯವಿದು.

2. ಆದ್ದರಿಂದ ಪ್ರತ್ಯಕ್ಷಾದಿವಿರೋಧವಿಲ್ಲ ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದರ್ಥವನ್ನು ಇಲ್ಲಿ ಸ್ಪಷ್ಟಗೊಳಿಸಿದೆ.

3. ಕ. ೨-೩-೧೭ರ ಸೂಚನೆ.

4. ಸಾಕ್ಷ್ಯನ್ವಯಸಾಕ್ಷ್ಯವ್ಯತಿರೇಕಗಳಿಂದ ಇದು ಗೊತ್ತಾಗುತ್ತದೆ.

5. ಅಪೂರ್ವ-ಕಾರಣವಿಲ್ಲದ್ದು, ಅನಪರ- ಕಾರ್ಯವಿಲ್ಲದ್ದು, ಅನಂತರ- ನಡುವೆ ಜಾತ್ಯಂತರವಿಲ್ಲದೆ ಏಕರಸವಾಗಿರತಕ್ಕದ್ದು, ಅಬಾಹ್ಯ- ತನಗಿಂತ ಬೇರೆಯಾದದ್ದಿಲ್ಲದ್ದು- ಎಂಬ ಬ್ರಹ್ಮರೂಪವಾದ ಆತ್ಮನನ್ನು.

೪೬. ನಾನು ಸುಖಿಯು, ದುಃಖಿಯು– ಎಂಬೀ ಅನಿತ್ಯವಾದ ಪ್ರತ್ಯಯವು ಯಾವದರಿಂದ ಅವಗತ್ಯಂತವಾಗಿ[1] ತೋರುತ್ತಿರುವದೋ ಅದೇ ನನ್ನ ಆತ್ಮನು ಎಂಬುದು ವಾಕ್ಯಜ್ಞಾನವು.

## ಅಭಿಧಾಶ್ರುತಿಯಾದ ವಾಕ್ಯಕ್ಕೂ ಪ್ರಾಮಾಣ್ಯವುಂಟು

(ಮೂಲ)

ಪ್ರಮಾಣನ್ತರಾನವಷ್ಟಬ್ಧಂ ನಿರಸ್ತಾಶೇಷಕಾರ್ಯಕಾರಣಾತ್ಮಕ ದ್ವೈತಪ್ರಪಞ್ಚಂ ಸತ್ಯಜ್ಞಾನಾನನ್ದಲಕ್ಷಣಮ್ ಆತ್ಮಾನಂ 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಇತ್ಯಾದಿವಾಕ್ಯಂ ಸಂಶಯಿತಮಿಥ್ಯಾಜ್ಞಾನಾಜ್ಞಾನ ಪ್ರಧ್ವಂಸಮುಖೇನ ಸಾಕ್ಷದಪರೋಕ್ಷಾತ್ ಕರತಲನ್ಯಸ್ತಾಮಲಕವತ್ ಪ್ರತಿಪಾದಯತ್ಯೇವ ಇತ್ಯಸಕೃದಭಿಹಿತಮ್ । ತತ್ರ ಕೇಚಿದಾಹುಃ । ತತ್ತ್ವಮಸ್ಯಾದಿವಾಕ್ಯೈರ್ಯಥಾವಸ್ಥಿತವಸ್ತುಯಾಥಾತ್ಮ್ಯನ್ವಾಖ್ಯಾನನಿಷ್ಠೈರ್ನ ಯಥೋಕ್ತೋಽರ್ಥಃ ಪ್ರತಿಪತ್ತುಂ ಶಕ್ಯತೇ । ಅಭಿಧಾಶ್ರುತಿತ್ವಾತ್ ತೇಷಾಮ್ । ನ ಹಿ ಲೋಕೇ ಅಭಿಧಾಶ್ರುತೇಃ ಪ್ರಮಾಣಾನ್ತರನಿರಪೇಕ್ಷಾಯಾಃ 'ನದ್ಯಾಸ್ತೀರೇ ಫಲಾನಿ ಸನ್ತಿ' ಇತ್ಯಾದಿಕಾಯಾಃ ಪ್ರಾಮಾಣ್ಯಮ್ ಅಭ್ಯುಪಗತಮ್ । ಅತೋ ನಿಯೋಗಮುಖೇನೈವ ಅಭಿಧಾಶ್ರುತೇಃ ಪ್ರಾಮಾಣ್ಯಂ ಯುಕ್ತಮ್ । ಪ್ರಮಾಣಾನ್ತರನಿರಪೇಕ್ಷತ್ವಾತ್ ನಿಯೋಗಸ್ಯ[2] । ಅಸ್ಯ ಪರಿಹಾರಾರ್ಥಮ್ ಅಶೇಷಪ್ರತ್ಯಕ್ಷಾದಿಪ್ರಮೇಯತ್ವನಿರಾಕರಣದ್ವಾರೇಣ ಅತೀನ್ದ್ರಿಯವಿಷಯತ್ವಾತ್ ಅಭಿಧಾಶ್ರುತೇಃ ಪ್ರಾಮಾಣ್ಯಂ ಸುಪ್ತ ಪುರುಷಪ್ರಬೋಧಕವಾಕ್ಯಸ್ಯೇವ ವಕ್ತವ್ಯಮ್ ಇತ್ಯಯಮಾರಮ್ಭಃ–

ನಿತ್ಯಾವಗತಿರೂಪತ್ವಾದನ್ಯಮಾನಾನಪೇಕ್ಷಣಾತ್ ।
ಶಬ್ದಾದಿಗುಣಹೀನತ್ವಾತ್ ಸಂಶಯಾನವತಾರತಃ ॥೪೭॥

---

1. ಪ್ರಮಿತಿಯವರೆಗಿನ - ಪ್ರಮಾತೃಪ್ರಮಾಣಪ್ರಮೇಯಪ್ರಮಿತಿ ಎಂಬ ರೂಪದಲ್ಲಿ ಕಾಣುವದೆಲ್ಲವೂ ಯಾವ ಸಾಕ್ಷಿಚೈತನ್ಯದಿಂದಲೇ ಬೆಳಗುತ್ತದೆಯೋ ಅದೇ ಪ್ರತ್ಯಗಾತ್ಮವಸ್ತು . ಬೃ.ವಾ. ೪-೪-೪೬೭ ನೋಡಿ.

2. ಇಲ್ಲೊಂದು 'ಇತಿ' ಇದ್ದರೆ ಚೆನ್ನಾಗಿತ್ತೆಂದು ತೋರುತ್ತದೆ.

**ತೃಷ್ಣಾನಿಷ್ಠೀವನೈರ್ನಾತ್ಮಾ ಪ್ರತ್ಯಕ್ಷಾದ್ಯೈಃ ಪ್ರಮೀಯತೇ ।**
**ಪ್ರತ್ಯಗಾತ್ಮತ್ವಹೇತೋಶ್ಚ ಸ್ವಾರ್ಥತ್ವಾದಪ್ರಮೇಯತಃ ॥೪೮॥**

(ಅರ್ಥ)

ಮತ್ತೊಂದು ಪ್ರಮಾಣವನ್ನು ಅವಲಂಬಿಸದ [1], ಯಾವ ಕಾರ್ಯಕಾರಣ ಭಾವದ ದ್ವೈತಪ್ರಪಂಚವೂ ಇಲ್ಲದ ಸತ್ಯಜ್ಞಾನಾನಂದಸ್ವರೂಪನಾದ ಆತ್ಮನನ್ನು 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ', ಮುಂತಾದ ವಾಕ್ಯವು ಸಂಶಯ, ಮಿಥ್ಯಾಜ್ಞಾನ, ಅಜ್ಞಾನ- ಇವುಗಳನ್ನು ನಾಶಮಾಡುವದರ ಮೂಲಕ ನೇರಾಗಿ ಅಪರೋಕ್ಷವಾಗಿ ಅಂಗೈಯಲ್ಲಿಟ್ಟ ನೆಲ್ಲಿಯ ಕಾಯಿಯಂತೆ ಪ್ರತಿಪಾದನೆ ಮಾಡಿಯೇ ಮಾಡುತ್ತದೆ- ಎಂದು ಹಲವು ಸಾರಿ ಹೇಳಿದ್ದಾಗಿದೆಯಷ್ಟೆ. ಇಲ್ಲಿ ಕೆಲವರು ಹೇಳುತ್ತಾರೇನೆಂದರೆ, 'ತತ್ತ್ವಮಸಿ' (ಅದು ನೀನಾಗಿರುವೆ) ಮುಂತಾದ ವಾಕ್ಯಗಳು ಸಿದ್ಧವಸ್ತುವಿನ ತತ್ತ್ವವನ್ನು ಅನುವಾದಮಾಡಿ ಹೇಳುವದರಲಿ ತಾತ್ಪರ್ಯವುಳ್ಳವಾದ್ದರಿಂದ (ಅವುಗಳಿಂದ) ಈ ಹೇಳಿದ ಅರ್ಥವನ್ನು ತಿಳಿಯುವದಕ್ಕೆ ಆಗುವದಿಲ್ಲ. ಏಕೆಂದರೆ ಅವು ಅಭಿಧಾಶ್ರುತಿಯಾಗಿವೆ [2], ಲೋಕದಲ್ಲಿ ಅಭಿಧಾಶ್ರುತಿಯಾದ 'ನದಿಯ ದಡದಲ್ಲಿ ಹಣ್ಣುಗಳಿವೆ [3], ಮುಂತಾದ (ವಾಕ್ಯಕ್ಕೆ) ಮತ್ತೊಂದು ಪ್ರಮಾಣದ ಅಪೇಕ್ಷೆಯಿಲ್ಲದೆ ಪ್ರಮಾಣ್ಯವನ್ನು ಒಪ್ಪುವದಿಲ್ಲವಷ್ಟೆ. ಆದ್ದರಿಂದ ನಿಯೋಗದ ದ್ವಾರದಿಂದಲೇ ಅಭಿಧಾಶ್ರುತಿಗೆ ಪ್ರಾಮಾಣ್ಯವಾಗುವದು ಯುಕ್ತವು ; ಏಕೆಂದರೆ ನಿಯೋಗಕ್ಕೆ ಮತ್ತೊಂದು ಪ್ರಮಾಣದ ಅಪೇಕ್ಷೆಯಿರುವದಿಲ್ಲ [4].

---

1. ಪ್ರತ್ಯಕ್ಷಾದಿಪ್ರಮಾಣಗಳಿಗೆ ನಿಲುಕದ.

2. ಇರುವ ವಸ್ತುವನ್ನು ಹೇಳುವ ವಾಕ್ಯಗಳಾಗಿವೆ.

3. ಶಾ.ಭಾ. ೧-೧-೨೦ರಲ್ಲಿ ಈ ವಾಕ್ಯವನ್ನು ಉದಾಹರಿಸಿದೆ. ಇದು ಪ್ರಮಾಣವೂ ಆಗಬಹುದು, ಅಪ್ರಮಾಣವೂ ಆಗಬಹುದು. ಪ್ರಮಾಣಾಂತರದ ಅಪೇಕ್ಷೆಯಿಂದಲೇ ಈ ವಾಕ್ಯಕ್ಕೆ ಪ್ರಮಾಣ್ಯವುಂಟಾಗುತ್ತದೆ.

4. ಶಾಸ್ತ್ರವು ಯಾವದನ್ನು ವಿಧಿಸುತ್ತದೆಯೋ ಅದು ಧರ್ಮವು ; ಅದನ್ನು ಪ್ರತ್ಯಕ್ಷಾದಿಗಳಿಂದ ತಿಳಿಯುವದಕ್ಕೆ ಬರುವದೇ ಇಲ್ಲ. ಆದ್ದರಿಂದ ''ತತ್ತ್ವಮಸಿ'' ಮುಂತಾದ ವಾಕ್ಯಗಳಲ್ಲಿಯೂ ಹೀಗೆಂದು ಉಪಾಸನೆಮಾಡಬೇಕು- ಎಂದು ವಿಧಿಯನ್ನು ಕಲ್ಪಿಸಬೇಕು ಎಂದು ಅಭಿಪ್ರಾಯ.

ಇದನ್ನು ಪರಿಹರಿಸುವದಕ್ಕಾಗಿ ಪ್ರತ್ಯಕ್ಷವೇ ಮುಂತಾದ ಯಾವ (ಪ್ರಮಾಣಕ್ಕಾದರೂ) ಪ್ರಮೇಯವೆಂಬುದನ್ನು ನಿರಾಕರಿಸುವದರ ಮೂಲಕ, ಅತೀಂದ್ರಿಯವಿಷಯವನ್ನು (ತಿಳಿಸುವದರಿಂದ)[1] ಅಭಿಧಾಶ್ರುತಿಗೆ ನಿದ್ರಿಸಿರುವ ಪುರುಷನನ್ನು ಎಚ್ಚರಿಸುವ ವಾಕ್ಯದಂತೆ[2] ಪ್ರಮಾಣ್ಯವನ್ನು ಹೇಳಬೇಕೆಂದು ಇದನ್ನು ಪ್ರಾರಂಭಿಸಿರುತ್ತದೆ :

೪೭-೪೮. ನಿತ್ಯಾವಗತಿಯ ರೂಪವಾಗಿರುವದರಿಂದ ಮತ್ತೊಂದು ಪ್ರಮಾಣವನ್ನು ಅಪೇಕ್ಷಿಸದೆ ಇರುವದರಿಂದಲೂ ಶಬ್ದವೇ ಮುಂತಾದ ಗುಣಗಳು ಇಲ್ಲದ್ದರಿಂದಲೂ ಸಂಶಯವು ಬರುವಹಾಗಿಲ್ಲವಾದ್ದರಿಂದಲೂ ಪ್ರತ್ಯಗಾತ್ಮನಾಗಿರುವ ಕಾರಣದಿಂದಲೂ ಸ್ವಾರ್ಥವಾಗಿರುವದರಿಂದಲೂ ಪ್ರಮೇಯನಲ್ಲವಾಗಿ ಆಶೆಯ ಉಗುಳಾಗಿರುವ ಪ್ರತ್ಯಕ್ಷಾದಿಗಳಿಂದ ಆತ್ಮನನ್ನು ಅರಿಯುವದಕ್ಕೆ ಆಗಲಾರದು[3].

(ಮೂಲ)

ಶ್ರುತಿರಪಿ ಇಮಮರ್ಥಂ ನಿರ್ವದತಿ—

**ದಿದೃಕ್ಷಿತಪರಿಚ್ಛಿನ್ನಪರಾಗ್ರೂಪಾದಿಸಂಶ್ರಯಾತ್ ।**
**ವಿಪರೀತಮತೋ ದೃಷ್ಟ್ಯಾ ಸ್ವತೋಬುದ್ಧಂ ನ ಪಶ್ಯತಿ　　॥೪೯॥**

---

1. ಇಲ್ಲಿ ಆತ್ಮವಸ್ತು ಪ್ರತ್ಯಕ್ಷಾದಿಗಳಿಗೆ 'ವಿಷಯವಲ್ಲವೆಂದು' ತಿಳಿಸುವದು ಶ್ರುತಿಗೆ ಸಾಪೇಕ್ಷತ್ವವನ್ನು ನಿರಾಕರಿಸುವದಕ್ಕೆ ; ಅತೀಂದ್ರಿಯವೆಂದು ತಿಳಿಸುವದು ಶ್ರುತಿಯೇ ಅದರ ವಿಷಯದಲ್ಲಿ ಪ್ರಮಾಣವೆಂದು ತೋರಿಸುವದಕ್ಕೆ.

2. ಇದರ ಅಭಿಪ್ರಾಯವು ಮುಂದೆ ೩-೧೦೫ರಲ್ಲಿ ಸ್ಪಷ್ಟವಾಗಿದೆ.

3. ನಿತ್ಯಾವಗತಿರೂಪವಾಗಿರುವದರಿಂದ ಪ್ರಮಾಣದ ಅಪೇಕ್ಷೆ ಇಲ್ಲ ; ಏಕೆಂದರೆ ಪ್ರಮಾಣದಿಂದ ಅವಗತಿಯುಂಟಾಗಲೆಂದು ಅದರ ವ್ಯಾಪಾರವನ್ನು ಬಯಸುತ್ತಾರೆ. ಶಬ್ದಾದಿಗಳಿದ್ದರೆ ಶ್ರೋತ್ರಾದಿಗಳಿಗೆ ತಕ್ಕವೆಂದು ನಿಶ್ಚಯಿಸಿ ಪ್ರತ್ಯಕ್ಷಾದಿಗಳನ್ನು ಪ್ರಯೋಗಿಸುತ್ತಾರೆ ; ಆತ್ಮನಿಗೆ ಅದಿಲ್ಲ. ನಾನೊ, ನಾನಲ್ಲವೊ, ಇದೇನೊ, ಇಲ್ಲವೊ ?- ಎಂದು ಮುಂತಾದ ಸಂಶಯವಿಲ್ಲದ್ದರಿಂದ ನಿರ್ಣಯಾರ್ಥವಾಗಿ ಪ್ರಮಾಣಗಳು ಬೇಕಿಲ್ಲ. ಪದಾರ್ಥವಲ್ಲದ್ದರಿಂದ ಪ್ರಮಾಣಗಳಿಂದ ನಿಶ್ಚಯಿಸಿ ಉಪಭೋಗಮಾಡತಕ್ಕದ್ದಲ್ಲ. ಹೀಗೆ ಪ್ರಮೇಯಸ್ವಭಾವ ವಿಲ್ಲದ್ದರಿಂದ ಆತ್ಮನು ಪ್ರಮೇಯನಲ್ಲ. ಆದ್ದರಿಂದ ಪ್ರತ್ಯಕ್ಷಾದಿಗಳು ಆತ್ಮನನ್ನು ಅರಿಯಲಾರವು. ಆಶೆಯ ಪ್ರೇರಣೆಯಿಂದ ಪ್ರವರ್ತಿಸುವದರಿಂದ ಅವನ್ನು ಆಶೆಯ ಉಗುಳು ಎಂದಿದೆ.

**ನ್ಯಾಯಸಿದ್ಧಮತೋ ವಕ್ತಿ ದೃಷ್ಟೇರ್ದ್ರಷ್ಟಾರಮಾತ್ಮನಃ ।**
**ನ ಪಶ್ಯೇಃ[1] ಪ್ರತ್ಯಗಾತ್ಮಾನಂ ಪ್ರಮಾಣಂ ಶ್ರುತಿರಾದರಾತ್ ॥೫೦॥**

(ಅರ್ಥ)

ಶ್ರುತಿಯೂ ಈ ಅರ್ಥವನ್ನು ನಿಶ್ಚಯಿಸಿ ಹೇಳುತ್ತದೆ :

೪೯-೫೦. ಆದ್ದರಿಂದ[2] ನೋಡಬೇಕಾಗಿರುವ, ಪರಿಚ್ಛಿನ್ನವಾಗಿರುವ, ಬಾಹ್ಯರೂಪಾದಿಗಳಿಗೆ ಆಶ್ರಯವಾಗಿರುವ- (ವಸ್ತುವಿಗಿಂತ) ವಿಪರೀತ ವಾಗಿರುವ[3] ಸ್ವತೋಬುದ್ಧನಾಗಿರುವವನನ್ನು[4] ದೃಷ್ಟಿಯಿಂದ[5] ನೋಡಲಾರನು. ಆದ್ದರಿಂದ ಪ್ರಮಾಣವಾಗಿರುವ ಶ್ರುತಿಯು ನಿನ್ನ ದೃಷ್ಟಿಯ ದ್ರಷ್ಟೃವಾಗಿರುವ ಪ್ರತ್ಯಗಾತ್ಮನನ್ನು ನೋಡಲಾರೆ[6] ಎಂದು ನ್ಯಾಯಸಿದ್ಧವಾದದ್ದನ್ನೇ ಆದರಿಂದ ತಿಳಿಸುತ್ತದೆ[7].

(ಮೂಲ)

**ಅನುಮಾನಾವಿಷಯತ್ವೇಽನ್ಯದಪಿ ಕಾರಣಮುಚ್ಯತೇ–**

**ಪ್ರತ್ಯಕ್ಷಸ್ಯ ಪರಾಕ್ತ್ವಾನ್ನ ಸಂಬನ್ಧಗ್ರಹಣಂ ಯತಃ ।**
**ಆತ್ಮನೋಽತೋಽನುಮಿತ್ಯಾಸ್ಯಾನುಭವೋ ನ ಕಥಂಚನ ॥೫೧॥**

---

1. ''ಪಶ್ಯೇತ್'' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

2. ಪ್ರತ್ಯಕ್ಷಾದಿಗಳು ಆಶೆಯ ಉಗುಳಾಗಿ ಬಹಿರ್ವಿಷಯಕವಾಗಿರುವದರಿಂದಲೇ.

3. ದೃಗ್ರೂಪವಾಗಿರುವ, ಅಪರಿಚ್ಛಿನ್ನವಾಗಿರುವ, ರೂಪಾದಿರಹಿತವಾದ- ಅಂತೂ ಯಾವ ಪ್ರಮೇಯಧರ್ಮವೂ ಇಲ್ಲದ ಎಂದರ್ಥ.

4. ನಿತ್ಯಚೈತನ್ಯಸ್ವರೂಪನಾದ ಆತ್ಮನನ್ನು ಎಂದರ್ಥ.

5. ಪ್ರತ್ಯಕ್ಷಾದಿರೂಪವಾದ ಲೌಕಿಕದೃಷ್ಟಿಯಿಂದ ಎಂದರ್ಥ.

6. ''ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ'' (ಬೃ. ೩-೪-೨) ಎಂಬ ಶ್ರುತಿಯ ಅಭಿಪ್ರಾಯವಿದು. ಲೌಕಿಕದೃಷ್ಟಿಯು ವಿಷಯವನ್ನು ಮಾತ್ರ ನೋಡಬಲ್ಲದು, ತನ್ನನ್ನೂ ನೋಡುವ ಆತ್ಮಚೈತನ್ಯವನ್ನು ಕಾಣಲಾರದು ಎಂದರ್ಥ.

7. ಶ್ರುತಿಯು ತಾತ್ಪರ್ಯದಿಂದ ಹೇಳುವದರಿಂದಲೂ ಅದಕ್ಕೆ ಯುಕ್ತಿಯ ಬೆಂಬಲವಿರುವದರಿಂದಲೂ ಅದು ಈ ವಿಷಯದಲ್ಲಿ ಪ್ರಮಾಣವೇ ಎಂದು ಭಾವ.

(ಅರ್ಥ)

ಅನುಮಾನಕ್ಕೆ (ಆತ್ಮನು) ವಿಷಯನಲ್ಲವೆಂಬುದಕ್ಕೆ ಮತ್ತೊಂದು ಕಾರಣವನ್ನೂ[1] ಹೇಳುತ್ತಾರೆ :

೫೧. ಪ್ರತ್ಯಕ್ಷವು ಪರಾಗ್ವಿಷಯವಾಗಿರುವದರಿಂದ ಆತ್ಮನಿಗೆ ಸಂಬಂಧದ ಗ್ರಹಣವಾಗುವದಿಲ್ಲ[2]. ಆದ್ದರಿಂದ ಇವನ ಅನುಭವವು ಅನುಮಾನದಿಂದ ಹೇಗೂ ಆಗಲಾರದು[3].

(ಮೂಲ)

ಏವಮಯಂ ಪ್ರಮಾತೃಪ್ರಮಾಣಪ್ರಮೇಯವ್ಯವಹಾರಃ ಸರ್ವ ಏವ ಪರಾಚೀನವಿಷಯ ಏವ, ನ ಪ್ರತೀಚೀನಮಾತ್ಮಾನಮ್ ಅವಗಾಹಿತುಮಲಮ್, ಏವಂ ಚ ಸತಿ ಅನೇನೈವ ಯಥೋಕ್ತೋಽರ್ಥೋಽವಸಾತುಂ ಶಕ್ಯತ ಇತ್ಯಾಹ–

**ಪ್ರಮಾಣವ್ಯವಹಾರೋಽಯಂ ಸರ್ವ ಏವ ಪರಾಗ್ಯತಃ ।**
**ಸುವಿಚಾರ್ಯೋಪ್ಯತೋಽನೇನ ಯುಷ್ಮದ್ಯೇವ ದಿದೃಕ್ಷತೇ ॥೫೨॥**

(ಅರ್ಥ)

ಈ ರೀತಿಯಲ್ಲಿ ಈ ಪ್ರಮಾತೃಪ್ರಮಾಣಪ್ರಮೇಯವ್ಯವಹಾರವೆಲ್ಲವೂ[4]

---

1. ಪ್ರತ್ಯಕ್ಷಕ್ಕೆ ವಿಷಯನಲ್ಲವೆಂದದ್ದರಿಂದಲೇ ಅನುಮಾನಕ್ಕೆ ವಿಷಯನಲ್ಲವೆಂದಂತೆ ಆಗಿದೆಯಾದರೂ ಮತ್ತೊಂದು ಕಾರಣವನ್ನು ಹೇಳುತ್ತಾರೆ ಎಂದರ್ಥ.

2. ಪರಾಕ್ತ್ವರೂಪವಸ್ತುಗಳಿಗೆ ಸಂಬಂಧವನ್ನು ಗ್ರಹಿಸುವದು ಆಗಲಾರದು. ಪರಾಗ್ರೂಪವಾದ ಲಿಂಗವನ್ನು ಪ್ರತ್ಯಕ್ಷವು ಕಾಣುತ್ತದೆ ; ಆದರೆ ಅದು ಆತ್ಮನನ್ನು ಕಾಣಲಾರದು. ಆದ್ದರಿಂದ ಅವೆರಡರ ಸಂಬಂಧವನ್ನೂ ಕಾಣಲಾರದು. ಲಿಂಗಲಿಂಗಿ ಸಂಬಂದಗ್ರಹಣವಿಲ್ಲದೆ ಅನುಮಾನಕ್ಕೆ ಪ್ರವೃತ್ತಿಯೇ ಇಲ್ಲ .

3. ಅನುಮಾನವು ಪ್ರತ್ಯಕ್ಷವನ್ನವಲಂಬಿಸಿರುತ್ತದೆಯಾದ್ದರಿಂದ ಅದೂ ಪರಾಗ್ವಿಷಯವಾಗಿರುತ್ತದೆ. ಇದು ಮಿಕ್ಕ ಪ್ರಮಾಣಗಳಿಗೂ ಅನ್ವಯಿಸುವದಾಗಿದೆ ಎಂದು ತಿಳಿಯಬೇಕು.

4. ಪರಾಕ್ತ್ವವು (ಹೊರಗಿನ ವಿಷಯಗಳನ್ನು ಅರಿಯುವ ಸ್ವಭಾವವೆಂಬುದು) ಎಲ್ಲಾ ಪ್ರಮಾಣಗಳಿಗೂ ಸಮಾನವಾದದ್ದರಿಂದ ಅನುಮಾನದಂತೆ ಮಿಕ್ಕ ಪ್ರಮಾಣಗಳಿಗೂ ಆತ್ಮನು ಅವಿಷಯನೆಂಬುದು ಈ ಹೇತುವಿನಿಂದಲೇ ಸಿದ್ಧವಾಗುತ್ತದೆ ಎಂದರ್ಥ.

ಪರಾಗ್ವಿಷಯವೇ (ಆಗಿರುತ್ತದೆಯಾದ್ದರಿಂದ) ಪ್ರತ್ಯಗ್ರೂಪನಾಗಿರುವ ಆತ್ಮನನ್ನು ಗೊತ್ತುಪಡಿಸುವದಕ್ಕೆ ಸಾಲದು. ಹೀಗಾಗುವದರಿಂದ ಇದರಿಂದಲೇ ಮೇಲೆ ಹೇಳಿರುವ ಅರ್ಥವನ್ನು[1] ನಿಶ್ಚಯಿಸುವದಕ್ಕಾಗುತ್ತದೆ ಎಂದು ಹೇಳುತ್ತಾರೆ :

೫೨. ಈ ಪ್ರಮಾಣವ್ಯವಹಾರವೆಲ್ಲವೂ ಪರಾಗ್ವಿಷಯವಾಗಿದೆಯಷ್ಟೆ ; ಆದ್ದರಿಂದ (ಎಷ್ಟೇ) ಚೆನ್ನಾಗಿ ವಿಚಾರಮಾಡಿದಮೇಲೂ ಇದರಿಂದ ಅನಾತ್ಮದಲ್ಲಿಯೇ (ಆತ್ಮನನ್ನು ) ಕಾಣುವದಕ್ಕೆಳಸುತ್ತಾನೆ[2].

(ಮೂಲ)

**ಯಸ್ಮಾಲ್ಲೌಕಿಕಪ್ರತ್ಯಕ್ಷಾದಿಪ್ರಮಾಣಾನಧಿಗಮ್ಯೋಽಹಂ ಬ್ರಹ್ಮಾಸ್ಮಿ ಇತಿ ವಾಕ್ಯಾರ್ಥಃ , ತಸ್ಮಾತ್ –**

**ಅನ್ವಯವ್ಯತಿರೇಕಾಭ್ಯಾಂ ನಿರಸ್ಯಾಪ್ರಾಣತೋ ಯತೇಃ ।**
**ವೀಕ್ಷಾಪನ್ನಸ್ಯ ಕೋಽಸ್ಮೀತಿ ಸದಸೀತಿ[3] ಶ್ರುತಿರ್ಜಗೌ ॥೫೩॥**

(ಅರ್ಥ)

ಲೌಕಿಕವಾದ ಪ್ರತ್ಯಕ್ಷಾದಿಪ್ರಮಾಣಗಳಿಂದ 'ನಾನು ಬ್ರಹ್ಮವಾಗಿರುವೆನು' ಎಂಬೀ ವಾಕ್ಯಾರ್ಥವನ್ನು[4] ಅರಿಯುವದಕ್ಕಾಗುವದಿಲ್ಲವಷ್ಟೆ , ಆದ್ದರಿಂದ :

೫೩. ಅನ್ವಯವ್ಯತಿರೇಕಗಳಿಂದ ಪ್ರಾಣನವರೆಗೂ ತಿರಸ್ಕರಿಸಿದ ಬಳಿಕ 'ಯಾವನಿದ್ದೇನು ?' - ಎಂದು ಆಲೋಚನಪರನಾಗಿರುವ ಯತಿಗೆ

---

1. ಆತ್ಮನು ಲೌಕಿಕಪ್ರಮಾಣಗಳಿಗೆ ಗೋಚರನಲ್ಲವೆಂಬುದನ್ನು .

2. ಪ್ರಮಾಣಗಳಿಂದ ಪ್ರಮೇಯವನ್ನು ಹುಡುಕುವದೇ ಮನುಷ್ಯನ ಸ್ವಭಾವ.

3. ಈ ಪಾಠವೇ 'ತದಸಿ' ಎಂಬುದಕ್ಕಿಂತ ಮೇಲೆಂದು ಕಾಣುತ್ತದೆ.

4. ವಾಕ್ಯವೇ ಆತ್ಮನಿಗೆ ಪ್ರಮಾಣವೆಂಬ ಅಭಿಪ್ರಾಯದಿಂದ ವಾಕ್ಯಾರ್ಥವೆಂದಿದೆ. ನಿಜವಾಗಿ ಆತ್ಮನು ವಾಕ್ಯಾರ್ಥವೂ ಅಲ್ಲ .

'ಸತ್ತೇ ಆಗಿರುವೆ' ಎಂದು ಶ್ರುತಿಯು ಹೇಳುತ್ತದೆ[1].

## ಅನ್ವಯವ್ಯತಿರೇಕಮಾತ್ರದಿಂದ ಆತ್ಮದರ್ಶನವಾಗಲಾರದು

(ಮೂಲ)

ಸೋಽಯಮನ್ವಯವ್ಯತಿರೇಕನ್ಯಾಯ ಏತಾವಾನೇವ [2] ಯದವಸಾನೋ ವಾಕ್ಯಾರ್ಥಸ್ತದಭಿಜ್ಞಸ್ಯ 'ಅಹಂ ಬ್ರಹ್ಮಾಸ್ಮಿ' ಇತ್ಯಾವಿರ್ಭವತಿ ದ್ರಷ್ಟೃದೃಶ್ಯವಿಭಾಗೇನ, ಆಗಮಾಪಾಯಿಸಾಕ್ಷಿವಿಭಾಗೇನ ಚ ಶ್ರುತ್ಯಭ್ಯುಪಗಮತಃ ಸಂಕ್ಷಿಪ್ಯೋಚ್ಯತೇ–

ದೃಶ್ಯತ್ವಾದ್ಘಟವದ್ದೇಹೋ ದೇಹವಚ್ಚೇನ್ದ್ರಿಯಾಣ್ಯಪಿ ।
ಮನಶ್ಚೇನ್ದ್ರಿಯವಜ್ಜ್ಞೇಯಂ ಮನೋವನ್ನಿಶ್ಚಯಾದಿಮತ್ ॥೫೪॥

(ಅರ್ಥ)

ಆ ಈ ಅನ್ವಯವ್ಯತಿರೇಕನ್ಯಾಯವ [3] ಇಷ್ಟೇ ; ಇದರ ಕೊನೆಯಲ್ಲಿ ಇದನ್ನರಿತುಕೊಂಡಿರುವವನಿಗೆ 'ನಾನು ಬ್ರಹ್ಮವಾಗಿರುವೆನು' ಎಂಬೀ ವಾಕ್ಯಾರ್ಥವು ಸ್ಪಷ್ಟವಾಗುತ್ತದೆ. (ಇದನ್ನು) ದ್ರಷ್ಟೃದರ್ಶನವಿಭಾಗ,

---

1. ೨-೫೭ನೆಯ ಶ್ಲೋಕದಲ್ಲಿ ಭೂಮಶಬ್ದದ ಟಿಪ್ಪಣಿಯನ್ನು ನೋಡಿ. ಭೂಮವಿದ್ಯೆಯಲ್ಲಿ ಪ್ರಾಣಾಂತವಾಗಿ ವಿಚಾರವನ್ನು ಮಾಡಿ ಅದೆಲ್ಲವೂ ಅನಾತ್ಮವೆಂದು ತಿರಸ್ಕರಿಸಿ ಭೂಮವೇ ಆನಂದವು ಎಂದು ಹೇಳಿದೆ ; ಅದನ್ನೇ ನಾನು ಎಂಬ ಶಬ್ದದಿಂದಲೂ ಆತ್ಮಶಬ್ದದಿಂದಲೂ (ಛಾಂ. ೭-೨೫-೧,೨) ಹೇಳಿರುತ್ತದೆ. 'ಸದಸಿ' ಎಂದು ಮೂಲದಲ್ಲಿರುವದು ಬ್ರಹ್ಮಾತ್ಮೈಕ್ಯವನ್ನು ಹೇಳುವ ವಾಕ್ಯಗಳೆಲ್ಲ ಕೇವಲ ಸದ್ರೂಪನಾಗಿರುವ ಪರಮಾತ್ಮನೇ ನೀನು ಎಂದು ತಿಳಿಸುತ್ತವೆ ಎಂಬುದನ್ನು ಉಪಲಕ್ಷಣದಿಂದ ಸೂಚಿಸುವದಕ್ಕೆ. 'ತದಸಿ' ಎಂಬ ಪಾಠಕ್ಕೂ ಹೀಗೆಯೇ ಅರ್ಥವನ್ನು ಮಾಡಿಕೊಳ್ಳಬೇಕು.

2. ಈ ಮಾತಿಲ್ಲದಿದ್ದರೇ ಚೆನ್ನಾಗಿ ಅನ್ವಯವಾಗುತ್ತದೆ.

3. ಹಿಂದಿನ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಿ ಈ ಅಧ್ಯಾಯದಲ್ಲಿ ಮತ್ತು ವಾಕ್ಯಾರ್ಥವ್ಯಾಖ್ಯಾನಪ್ರಸಂಗದಿಂದ ಹೇಳಿರುವ ಅನ್ವಯವ್ಯತಿರೇಕನ್ಯಾಯವು ಎಂದರ್ಥ.

ಆಗಮಾಪಾಯಿಸಾಕ್ಷಿವಿಭಾಗ- ಎಂದು ಶ್ರುತಿಯ ಅಂಗೀಕಾರಕ್ಕನುಗುಣವಾಗಿ ಸಂಕ್ಷೇಪದಿಂದ[1] ಹೇಳಲಾಗುತ್ತದೆ :

೫೪. ದೃಶ್ಯವಾಗಿರುವದರಿಂದ ದೇಹವು ಗಡಿಗೆಯಂತೆ (ಅನಾತ್ಮವು). ಇಂದ್ರಿಯಗಳೂ ದೇಹದಂತೆ ; ಮನಸ್ಸೂ ಇಂದ್ರಿಯಗಳಂತೆ- ಎಂದು ಅರಿತು ಕೊಳ್ಳಬೇಕು ; ನಿಶ್ಚಯವೇ ಮುಂತಾದ (ವೃತ್ತಿಗಳುಳ್ಳ ಬುದ್ಧಿಯು) ಮನಸ್ಸಿನಂತೆಯೇ (ಅನಾತ್ಮವು)[2].

(ಮೂಲ)

**ತಥಾ ಸಕಲಕಾರ್ಯಕಾರಣಾಗಮಾಪಾಯಿಸಾಕ್ಷಿವಿಭಾಗೇನಾಪಿ[3] –**

**ಪ್ರಾಗಸದ್ ಯಾತಿ ಪಶ್ಚಾತ್ ಸತ್ಸಚ್ಚ ಯಾಯಾದಸತ್ತಥಾ ।**
**ಅನಾತ್ಮಾಭಿಜನಂ ತತ್ಸ್ಯಾದ್ವಿಪರೀತಃ ಸ್ವಯಂದೃಶಿಃ ॥೫೫॥**

(ಅರ್ಥ)

ಹೀಗೆಯೇ ಎಲ್ಲಾ ಕಾರ್ಯಕಾರಣಾಗಮಾಪಾಯಿಸಾಕ್ಷಿವಿಭಾಗ (ರೂಪವಾದ ಅನ್ವಯವ್ಯತಿರೇಕ)ವನ್ನೂ (ಹೇಳಲಾಗುತ್ತದೆ) :

೫೫. ಮೊದಲು ಅಸತ್ತಾಗಿದ್ದು ಆಮೇಲೆ ಸತ್ತಾಗುತ್ತದೆ, ಸತ್ತಾಗಿದ್ದದ್ದು ಅಸತ್ತಾಗುತ್ತದೆ. ಹೀಗಿರುವದೇ ಅನಾತ್ಮಾಂಶದ (ಪದಾರ್ಥವು)[4].

---

1. ಅನ್ವಯವ್ಯತಿರೇಕನ್ಯಾಯವನ್ನು ಎರಡೇ ವಿಧವಾಗಿ ಈ ಗ್ರಂಥದಲ್ಲಿ ವಿವರಿಸಿದೆ. ಪೀಠಿಕೆಯನ್ನು ನೋಡಿ.
2. ಇದು ದ್ರಷ್ಟನ್ವಯದೃಶ್ಯವ್ಯತಿರೇಕವು.
3. "ಸಕಲಕಾರ್ಯಕಾರಣಾಗಮಾಪಾಯಿವಿಭಾಗಸಾಕ್ಷಿತ್ವೇನಾಪಿ" ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ. ಹಿಂದಿನ ಶ್ಲೋಕದ ಸಂಬಂಧೋಕ್ತಿಗೂ ಎರಡನೆಯ ಅಧ್ಯಾಯದಲ್ಲಿ ಹೇಳಿರುವ ಗ್ರಂಥಕ್ಕೂ ನಾವು ಕಲ್ಪಿಸಿರುವ ಪಾಠವೇ ಅನುಗುಣವಾಗಿರುತ್ತದೆ.
4. ಕಾರ್ಯಕಾರಣಾಗಮಾಪಾಯಿತ್ವವೆಂದರೆ ಕಾರ್ಯವು ಆಗಮಾಪಾಯಿ, ಕಾರಣವು ನಿತ್ಯವಾಗಿರುತ್ತದೆ- ಎಂಬುದೇ. ಇಲ್ಲಿ ಕಾರ್ಯವು ತನ್ನ ರೂಪದಿಂದ ಮೊದಲು, ಹುಟ್ಟುವ ಮುಂಚೆ, ಅಸತ್ತಾಗಿರುತ್ತದೆ ; ಆಮೇಲೂ, ನಾಶವಾದಬಳಿಕ, ಅಸತ್ತಾಗುತ್ತದೆ. ಕಾರಣರೂಪದಿಂದಲೇ ಅದು ಸತ್ತು. ಗಡಿಗೆಯು ಈ ಅರ್ಥದಲ್ಲಿ ಆಗಮಾಪಾಯಿ, ಮಣ್ಣು ಕಾರಣವಾದ್ದರಿಂದ ನಿತ್ಯ. ಆದರೆ ಮಣ್ಣೂ ಇದೇ ನ್ಯಾಯದಿಂದ ತನ್ನ ಕಾರಣಕ್ಕಿಂತ ವ್ಯತಿರೇಕವಾಗಿರುವ ರೂಪದಿಂದ ಹುಟ್ಟುವ ಮೊದಲೂ ನಾಶವಾದಬಳಿಕವೂ ಇರುವದಿಲ್ಲವಾದ್ದರಿಂದ ಆಗಮಾಪಾಯಿಯೇ. ಅನಾತ್ಮವಾದದ್ದಕ್ಕೆಲ್ಲ ಈ ಲಕ್ಷಣವು ಹೊಂದುತ್ತದೆ. ಗೀ.ಭಾ. ೨-೧೬ನ್ನು ನೋಡಿ.

ಆತ್ಮನಾದರೋ ಸಾಕ್ಷಿಯಾಗಿರುವದರಿಂದ ಇದಕ್ಕೆ ವಿಪರೀತ (ಸ್ವಭಾವ)ದವನಾಗಿರುತ್ತಾನೆ[1].

(ಮೂಲ)

ತತ್ರ ಘಟಾದೀನಾಂ ದೃಶ್ಯಾನಾಮ್ ಅನಾತ್ಮತ್ವಂ ದ್ರಷ್ಟಾತ್ಮಪೂರ್ವಕಂ ಪ್ರತ್ಯಕ್ಷೇಣೈವ ಪ್ರಮಾಣೇನ ಉಪಲಭ್ಯ ಅನಾತ್ಮನಶ್ಚ ಅಸಾಧಾರಣಾನ್ ಧರ್ಮಾನ್ ಅವಧಾರ್ಯ ತೈರ್ದೃಶ್ಯತ್ವಾಗಮಾಪಾಯಾದಿಭಿರ್ಧರ್ಮೈಃ ಶರೀರೇನ್ದ್ರಿಯಮನೋನಿಶ್ಚಯಾದಿವೃತ್ತೀರನಾತ್ಮತಯಾ ವ್ಯುದಸ್ಯ ಅಹಂವೃತ್ತಿಮತೋಽಪಿ ದೃಶ್ಯತ್ವಾವಿಶೇಷಾತ್ ದ್ರಷ್ಟೃಪೂರ್ವಕತ್ವಮ್ ಅವಸೀಯತೇ । ತದೇತದಾಹ–

ಘಟಾದಯೋ ಯಥಾ ಲಿಙ್ಗಂ ಸ್ಯುಃ ಪರಂಪರಯಾಹಮಃ ।
ದೃಶ್ಯತ್ವಾದಹಮಪ್ಯೇವಂ ಲಿಙ್ಗಂ ಸ್ಯಾದ್ದ್ರಷ್ಟುರಾತ್ಮನಃ ॥೫೬॥

(ಅರ್ಥ)

ಇಲ್ಲಿ[2] ಗಡಿಗೆಯೇ ಮುಂತಾದ ದೃಶ್ಯಗಳು ಅನಾತ್ಮವಾಗಿರುವದು ದ್ರಷ್ಟೃವಾದ ಆತ್ಮಪೂರ್ವಕವಾಗಿರುತ್ತದೆ ಎಂಬುದನ್ನು ಪ್ರತ್ಯಕ್ಷವೆಂಬ ಪ್ರಮಾಣದಿಂದಲೇ ಕಂಡು, ಅನಾತ್ಮಕ್ಕೆ ಅಸಾಧಾರಣವಾಗಿರುವ ಧರ್ಮಗಳನ್ನು ನಿಶ್ಚಯಿಸಿ ಆ ದೃಶ್ಯತ್ವ, ಆಗಮಾಪಾಯಗಳು- ಮುಂತಾದ ಧರ್ಮಗಳಿರುವದರಿಂದ ಶರೀರ, ಇಂದ್ರಿಯಗಳು, ಮನಸ್ಸು, ನಿಶ್ಚಯಾದಿವೃತ್ತಿ(ಗಳುಳ್ಳ ಬುದ್ಧಿ)- ಇವೂ ಅನಾತ್ಮವೆಂದು ತಿರಸ್ಕರಿಸಿ ಅಹಂವೃತ್ತಿಯುಳ್ಳ (ಅಂತಃಕರಣವೂ) ದೃಶ್ಯವಾಗಿರುವದು ಸಮಾನವಾಗಿರುವದರಿಂದ ಅದಕ್ಕೂ ದ್ರಷ್ಟೃವಿರಬೇಕೆಂದು ನಿಶ್ಚಯಿಸಬಹುದಾಗಿರುತ್ತದೆ[3]. ಆ ಇದನ್ನು (ಮುಂದಿನ ಶ್ಲೋಕದಲ್ಲಿ) ಹೇಳುತ್ತಾರೆ :

---

1. ಆಗಮಾಪಾಯಿಸಾಕ್ಷಿಯಾಗಿರುವದರಿಂದಲೇ ಆಗಮಾಪಾಯಿತ್ವರಹಿತನಾಗಿರುತ್ತಾನೆ ಎಂದರ್ಥ.

2. ಅನ್ವಯವ್ಯತಿರೇಕಕ್ರಮದಲ್ಲಿ.

3. ೫೪ನೆಯ ಶ್ಲೋಕದಲ್ಲಿ ಹೇಳಿರುವಂತೆ ಅನುಮಾನದಿಂದ ನಿಶ್ಚಯಿಸಬಹುದಾಗಿದೆ ಎಂದರ್ಥ.

೫೬. ಘಟಾದಿಗಳು ದೃಶ್ಯವಾಗಿ ಹೇಗೆ ಪರಂಪರೆಯಿಂದ ಅಹಂಕಾರಕ್ಕೆ ಲಿಂಗವಾಗಿರುವವೋ ಅಹಂಕಾರವೂ ಹಾಗೆಯೇ ದ್ರಷ್ಟೃವಾದ ಆತ್ಮನಿಗೆ ಲಿಂಗವಾಗಬಹುದಾಗಿದೆ[1].

(ಮೂಲ)

ನನು ದ್ರಷ್ಟೃದರ್ಶನದೃಶ್ಯಾನಾಂ ಜಾಗ್ರತ್ಸ್ವಪ್ನಸುಷುಪ್ತೇಷ್ವಾಗಮಾಪಾಯದರ್ಶನಾತ್ ಯತ್ಸಾಕ್ಷಿಕೌ ತೇಷಾಮಾಗಮಾಪಾಯೌ, ಸ ಆಗಮಾಪಾಯವಿಭಾಗರಹಿತ ಆತ್ಮಾ । ಯಥಾ ಯನ್ನಿಬನ್ಧನೌ ಜಗತಃ ಪ್ರಕಾಶಾಪ್ರಕಾಶೌ ಸ ಪ್ರಕಾಶಾಪ್ರಕಾಶವಿಭಾಗರಹಿತಃ ಸೂರ್ಯಃ ಇತಿ । ಯದಾ ಚೈವಮ್, ತದಾ ವಾಕ್ಯಾವಗಮ್ಯಸ್ಯಾರ್ಥಸ್ಯ ಅನುದಿತಾನಸ್ತಮಿತವಿಜ್ಞಾನಮಾತ್ರಸ್ವಭಾವಸ್ಯ ಅನುಮಾನೇನೈವ ಪ್ರತಿಪನ್ನತ್ವಾತ್ ಪುನರಪಿ ವಾಕ್ಯಸ್ಯ ನಿರ್ವಿಷಯತ್ವಪ್ರಸಙ್ಗಃ । ನೈಷ ದೋಷಃ । ಲಿಙ್ಗವ್ಯವಧಾನೇನ ತತ್ಪ್ರತಿಪತ್ತೇಃ । ನನು ಸಾಕ್ಷಾದಪರೋಕ್ಷಾದಾತ್ಮಸ್ವಭಾವೇನ ಅನಾತ್ಮನೋ ಹಾನೋಪಾದಾನಯೋಃ ಸಂಬನ್ಧಗ್ರಹಣಾತ್ ಕಮತಿಶಯಂ ವಾಕ್ಯಂ ಕುರ್ಯಾತ್ ? ಮೈವಂ ವೋಚಃ, ಲಿಙ್ಗಾಧೀನತ್ವಾತ್ ತತ್ಪ್ರತಿಪತ್ತೇಃ । ನ ಹಿ ಲಿಙ್ಗವ್ಯವಧಾನೇನ ಆತ್ಮಪ್ರತಿಪತ್ತಿಃ ಸಾಕ್ಷಾತ್ಪ್ರತಿಪತ್ತಿರ್ಭವತಿ । ''ಯಮೇವೈಷ ವೃಣುತೇ ತೇನ ಲಭ್ಯಃ'' (ಕ. ೧-೨-೨೩, ಮುಂ. ೩-೨-೩) ಇತಿ ಶ್ರುತೇಃ । ಅತ ಆಹ –

**ಲಿಙ್ಗಮಸ್ತಿತ್ವನಿಷ್ಠತ್ವಾನ್ನ ಸ್ಯಾದ್ವಾಕ್ಯಾರ್ಥಬೋಧಕಮ್ ।**
**ಸದಸದ್ವ್ಯತ್ತಿತಾತ್ಮಾಯಮತೋ ವಾಕ್ಯಾತ್ ಪ್ರತೀಯತೇ ॥೫೭॥**

---

1. ಅಹಂಕಾರವು ಅನುಭವದಲ್ಲಿರವದರಿಂದ ದೃಶ್ಯವಾಗಿದೆ. ದೃಶ್ಯವು ದ್ರಷ್ಟೃಪೂರ್ವಕವಾಗಿರುತ್ತದೆ ಎಂಬ ವ್ಯಾಪ್ತಿಯಿರುವದರಿಂದ ಅದೂ ದ್ರಷ್ಟೃಪೂರ್ವಕವಾಗಿದೆ- ಎಂದು ಆತ್ಮನನ್ನುಅನುಮಾನಿಸಬಹುದಾಗಿದೆ ಎಂದರ್ಥ. ಅಹಂಕಾರವೆಂಬುದು ದೃಶ್ಯವೆಂಬುದನ್ನು ಹಿಂದೆಯೇ ತಿಳಿಸಿದೆ. ಆದರೆ ಅದರ ದೃಶ್ಯತ್ವದಿಂದ ಅನುಮಾನ ಮಾಡಿದಷ್ಟರಿಂದ ಆತ್ಮನ ಪೂರ್ಣಜ್ಞಾನವಾದಂತಲ್ಲವೆಂಬುದನ್ನು ತಿಳಿಸುವದಕ್ಕಾಗಿ ಇಲ್ಲಿ ಮತ್ತೆ ಅದನ್ನು ಅನುವಾದಮಾಡಿಕೊಂಡು ಅನುಮಾನಪ್ರಕಾಶವನ್ನು ವಿಶದಗೊಳಿಸಿದೆ.

(ಅರ್ಥ)

(ಆಕ್ಷೇಪ) :- ದ್ರಷ್ಟೃದರ್ಶನದೃಶ್ಯಗಳಿಗೆ ಎಚ್ಚರಕನಸುತನಿನಿದ್ರೆಗಳಲ್ಲಿ ಆಗಮಾಪಾಯವು ಕಂಡುಬರುವುದರಿಂದ[1], ಅವುಗಳ ಆಗಮಾಪಾಯಗಳಿಗೆ ಯಾವದು ಸಾಕ್ಷಿಯೋ ಅದೇ ಆಗಮಾಪಾಯವಿಭಾಗಗಳಿಲ್ಲದ ಆತ್ಮನು. ಹೇಗೆ ಜಗತ್ತಿನ ಪ್ರಕಾಶಾಪ್ರಕಾಶಗಳು ಯಾವ ಕಾರಣದಿಂದಾಗುವವೋ ಅವನೇ ಪ್ರಕಾಶಾಪ್ರಕಾಶಗಳಿಲ್ಲದ ಸೂರ್ಯನು (ಎಂದು ನಿಶ್ಚಯಿಸುವೆವೋ ಹಾಗೆಯೇ ಇದು). ಯಾವಾಗ ಹೀಗೆಂದಾಯಿತೋ[2] ಆಗ ವಾಕ್ಯದಿಂದ ಅರಿತುಕೊಳ್ಳಬೇಕಾದ ಹುಟ್ಟುಹೋಂದುಗಳಿಲ್ಲದ ವಿಜ್ಞಾನಮಾತ್ರಸ್ವರೂಪನಾದ (ಆತ್ಮನೆಂಬ) ಅರ್ಥವನ್ನು ಅನುಮಾನದಿಂದಲೇ ತಿಳಿದುಕೊಂಡದ್ದಾಯಿತಾದ್ದರಿಂದ ಮತ್ತೂ ವಾಕ್ಯಕ್ಕೆ ವಿಷಯವಿಲ್ಲವೆಂದೇ ಆಯಿತಲ್ಲ[3]!

(ಪರಿಹಾರ) :- ಇದೇನೂ ದೋಷವಲ್ಲ. ಏಕೆಂದರೆ (ಅಲ್ಲಿ) ಲಿಂಗ ವ್ಯವಧಾನದಿಂದ ಆ (ಆತ್ಮನನ್ನು) ಅರಿತದ್ದಾಗಿರುತ್ತದೆ.

(ಆಕ್ಷೇಪ) :- ನೇರಾಗಿ ಅಪರೋಕ್ಷವಾಗಿರುವ ಆತ್ಮಸ್ವರೂಪಕ್ಕೇ ಅನಾತ್ಮದ ಹಾನೋಪಾದಾನಗಳ ಸಂಬಂಧವಿದೆಯೆಂದು ಗ್ರಹಿಸಿದ್ದಾಗಿರುವದರಿಂದ[4] (ಇದಕ್ಕಿಂತ) ಯಾವ ಅತಿಶಯವನ್ನು ವಾಕ್ಯವು ಮಾಡಿಕೊಟ್ಟೀತು ?

---

1. ಎಚ್ಚರಕನಸುಗಳಲ್ಲಿ ದ್ರಷ್ಟ್ರಾದಿವಿಭಾಗವು ಕಾಣುತ್ತದೆ. ತನಿನಿದ್ರೆಯಲ್ಲಿ ಇಲ್ಲದೆ ಹೋಗುತ್ತದೆ. ಆದ್ದರಿಂದ ದ್ರಷ್ಟ್ರಾದಿಗಳು ಆಗಮಾಪಾಯಿಗಳು.

2. ಆಗಮಾಪಾಯಿಸಾಕ್ಷಿತ್ವದಿಂದಲೇ ಆತ್ಮಸಿದ್ಧಿಯೆಂದಾಯಿತೋ.

3. ಹಿಂದೆ ೫, ೬- ಈ ಶ್ಲೋಕಗಳ ಸಂಬಂಧೋಕ್ತಿಯಲ್ಲಿ ಮಿಥ್ಯಾಜ್ಞಾನ ವ್ಯತಿರಿಕ್ತವಾದ ಅಜ್ಞಾನವಿಲ್ಲದ್ದರಿಂದ ವಾಕ್ಯನಿವರ್ತ್ಯವಿಲ್ಲವೆಂಬ ಕಾರಣದಿಂದ ನಿರ್ವಿಷಯತ್ವವನ್ನು ಆಪಾದನೆಮಾಡಿತ್ತು. ಈಗ ಆಗಮಾಪಾಯಿಸಾಕ್ಷಿತ್ವವಿಭಾಗರೂಪವಾದ ಅನ್ವಯವ್ಯತಿರೇಕದಿಂದಲೇ ಆತ್ಮಸಿದ್ಧಿಯಾಗುವದರಿಂದ ವಾಕ್ಯವು ನಿರ್ವಿಷಯವೆಂದು ಆಪಾದಿಸಿದೆ.

4. ಅವಸ್ಥಾತ್ರಯಗಳಿಗೂ ಆತ್ಮನಿಗೂ ಸಾಕ್ಷ್ಯಸಾಕ್ಷಿಭಾವವಿದೆ. ದ್ರಷ್ಟೃತ್ವಾದ್ಯನಾತ್ಮಗಳು ಬರುತ್ತವೆ ಹೋಗುತ್ತವೆ ಎಂಬುದು ಸಾಕ್ಷಿಗೇ ನೇರಾಗಿ ಸಂಬಂಧಿಸಿದೆ ಎಂದು ತಿಳಿಯಿತಲ್ಲ ! ದ್ರಷ್ಟನ್ವಯದಂತೆ ಪ್ರಮಾತೃವಿನ ಮೂಲಕವೇನೂ ತಿಳಿದಿಲ್ಲವಲ್ಲ !- ಎಂದು ಆಕ್ಷೇಪ.

(ಪರಿಹಾರ) :- ಹೀಗೆನ್ನದಿರು. ಏಕೆಂದರೆ ಆ (ಆತ್ಮ)ಜ್ಞಾನವು ಲಿಂಗಕ್ಕೆ ಅಧೀನವಾಗಿರುತ್ತದೆ. ಲಿಂಗದ ವ್ಯವಧಾನದಿಂದ ಆತ್ಮನನ್ನು ಅರಿತದ್ದು ಸಾಕ್ಷಾಜ್ಞ್ಜಾನವಾಗಲೇ ಆರದು[1]. 'ಈತನು ಯಾವನನ್ನೇ ವರಿಸುವನೋ ಅವರಿಗೆ ದೊರೆಯುತ್ತಾನೆ' (ಕ. ೧-೨-೨೩, ಮುಂ. ३-೨-೨) ಎಂದು ಶ್ರುತಿಯಿದೆ[2]. ಆದ್ದರಿಂದ (ಹೀಗೆಂದು) ಹೇಳುತ್ತಾರೆ :

೫೭. ಲಿಂಗವು ಅಸ್ತಿತ್ವದಲ್ಲಿ ಕೊನೆಗಾಣುವದರಿಂದ[3] ವಾಕ್ಯಾರ್ಥವನ್ನು ತಿಳಿಸಿಕೊಡುವದಾಗಲಾರದು. ಆದ್ದರಿಂದ ಸತ್ತು, ಅಸತ್ತು- ಇವೆರಡನ್ನೂ ಬಿಟ್ಟ ಈ ಆತ್ಮನು ವಾಕ್ಯದಿಂದಲೇ ತಿಳಿಯಬರುತ್ತಾನೆ[4].

## ಸುಷುಪ್ತಿಪ್ರಾಪ್ತಿಯಿಂದಲೂ ಆತ್ಮಪ್ರಾಪ್ತಿಯಿಲ್ಲ

(ಮೂಲ)

**ನನು ಯದಿ ವ್ಯಾವೃತ್ತಸದಸದ್ವಿಕಲ್ಪಜಾಲಂ[5] ವಸ್ತ್ವಭೀಷ್ಟಂ ವಾಕ್ಯಾದ್ ಭವತಃ, ತಥಾಪಿ ತು ಉತ್ಸಾರ್ಯತೇ ವಾಕ್ಯವಿಷಯಾ ತೃಷ್ಣಾ ।**

---

1. ಪರ್ವತದಲ್ಲಿ ಹೊಗೆಯನ್ನು ನೋಡಿದರೆ ಹೊಗೆಗೆ ನೇರಾಗಿ ಸಂಬಂಧವುಳ್ಳದ್ದು ಬೆಂಕಿಯಾದ್ದರಿಂದ ಅನುಮಾನದಿಂದ ಅದರ ಜ್ಞಾನವಾಗುವದು ನಿಜ. ಆದರೆ ಅಷ್ಟುಮಾತ್ರದಿಂದ ಬೆಂಕಿಯ ಸಾಕ್ಷಾಜ್ಞ್ಜಾನವಾದಂತಾಗುವದಿಲ್ಲ. ವ್ಯವಧಾನವಾದ ಹೊಗೆಯಮೂಲಕವೇ ಅದನ್ನು ತಿಳಿದುಕೊಂಡಂತೆ ಆಗಿದೆ.

2. ಸಾಕ್ಷಾಜ್ಞ್ಜಾನವೇ ಬೇಕೆಂಬುದಕ್ಕೆ ಈ ಶ್ರುತಿಪ್ರಮಾಣವು ಎಂದು ಅಭಿಪ್ರಾಯ. ''ಆ ಸಾಧಕನಿಗೇ ಈ ಪರಮಾತ್ಮನು ತನ್ನ ಸ್ವರೂಪವನ್ನು ತೋರಿಸುತ್ತಾನೆ'' ಎಂದು ವಾಕ್ಯಶೇಷದಲ್ಲಿದೆ - ಎಂಬುದನ್ನು ಇಲ್ಲಿ ಲಕ್ಷಿಸಬೇಕು.

3. ಲಿಂಗಿಯಾದದ್ದು ಇದೆ ಎಂಬಿಷ್ಟರ ತಿಳಿವಳಿಕೆಯಲ್ಲಿ ಪರ್ಯವಸಾನವಾಗುವದರಿಂದ.

4. ದ್ರಷ್ಟ್ರಾದಿಗಳೇ ಆತ್ಮನೆಂಬ ತಿಳಿವಳಿಕೆಯಲ್ಲಿ ವ್ಯತಿರಿಕ್ತನಾದ ಆತ್ಮನ ಅಭಾವವಿರುತ್ತದೆ ; ದ್ರಷ್ಟ್ರಾದಿಗಳು ಸಾಕ್ಷಿಪೂರ್ವಕವೆಂಬ ಜ್ಞಾನದಲ್ಲಿ ಆತ್ಮನ ಅಸ್ತಿತ್ವವಿರುತ್ತದೆ. ಆತ್ಮನನ್ನು ಸಾಕ್ಷಾತ್ತಾಗಿ ವಾಕ್ಯದಿಂದ ತಿಳಿದಾಗ ಅವನಲ್ಲಿ ಭಾವಾಭಾವಗಳೆರಡೂ ಇರುವದಿಲ್ಲ ; ಅವನೇ ನಾನು ಎಂಬ ರೀತಿಯ ಅನುಭವವಿರುತ್ತದೆ.

5. 'ಸದಸದಾದಿವಿಕಲ್ಪಜಾಲಮ್' ಎಂದಿದ್ದರೆ ಚೆನ್ನಾಗಿರುವದು.

ಯಸ್ಮಾತ್ ಅನ್ತರೇಣಾಪಿ ವಾಕ್ಯಶ್ರವಣಂ ನಿರಸ್ತಾಶೇಷವಿಕಲ್ಪಮ್ ಆಗೋಪಾಲಾವಿಪಾಲಪಣ್ಡಿತಂ ಸುಷುಪ್ತೇ ವಸ್ತು ಸಿದ್ಧಮ್ । ಅತೋ ನಾರ್ಥೋ ವಾಕ್ಯಶ್ರವಣೇನ । ನೈತದೇವಮ್ । ಕಿಂ ಕಾರಣಮ್ । ಸರ್ವಾನರ್ಥಬೀಜಸ್ಯ ಆತ್ಮಾನವಬೋಧಸ್ಯ ಸುಷುಪ್ತೇ ಸಂಭವಾತ್ । ಯದಿ ಹಿ ಸುಷುಪ್ತೇ ಅಜ್ಞಾನಂ ನಾಭವಿಷ್ಯತ್ ಅನ್ತರೇಣಾಪಿ ವೇದಾನ್ತವಾಕ್ಯ ಶ್ರವಣಮನನನಿದಿಧ್ಯಾಸನಾನಿ 'ಅಹಂ ಬ್ರಹ್ಮಾಸ್ಮಿ' ಇತ್ಯಧ್ಯವಸಾಯಾತ್ ಸರ್ವಪ್ರಾಣಭೃತಾಮಪಿ ಸ್ವರಸತ ಏವ ಸುಷುಪ್ತಪ್ರತಿಪತ್ತೇಃ ಸಕಲಸಂಸಾರೋಚ್ಛಿತ್ತಿಪ್ರಸಙ್ಗಃ । ನ ಚ ಕೈವಲ್ಯಾತ್ ಪುನರುತ್ಥಾನಂ ನ್ಯಾಯ್ಯಮ್ । ಅನಿರ್ಮೋಕ್ಷಪ್ರಸಙ್ಗಾತ್ । ನ ಚಾನ್ಯ ಏವ ಸುಷುಪ್ತಃ, ಅನ್ಯ ಏವೋತ್ಥಿತಃ ಇತಿ ಶಕ್ಯಂ ವಕ್ತುಮ್ । 'ನಾದ್ರಾಕ್ಷಮಹಂ ಸುಷುಪ್ತೇಽನ್ಯತ್ ಕಿಂಚಿದಪಿ' ಇತಿ ಉತ್ಥಿತಸ್ಯ ಪ್ರತ್ಯಭಿಜ್ಞಾದರ್ಶನಾತ್ । ತಸ್ಮಾತ್ ಅವಶ್ಯಂ ಸುಷುಪ್ತೇ ಅಜ್ಞಾನಮಭ್ಯುಪಗನ್ತವ್ಯಮ್ । ನನು ಯದಿ ತತ್ರ ಅಜ್ಞಾನಮಭವಿಷ್ಯತ್, ರಾಗದ್ವೇಷಘಟಾಜ್ಞಾನಾದಿವತ್ ಪ್ರತ್ಯಕ್ಷಮಭವಿಷ್ಯತ್ । ಯಥೇಹ ಲೋಕೇ ಘಟಂ ನ ಜಾನಾಮಿ ಇತ್ಯಜ್ಞಾನಮ್ ಅವ್ಯವಹಿತಂ ಪ್ರತ್ಯಕ್ಷಮ್ । ಅತ್ರೋಚ್ಯತೇ । ನ । ಅಭಿವ್ಯಞ್ಜಕಾಭಾವಾತ್ । ಕಥಮಭಿವ್ಯಞ್ಜಕಾಭಾವಃ ಇತಿ ಚೇತ್ । ಶೃಣು –

**ಬಾಹ್ಯಾಂ ವೃತ್ತಿಮನುತ್ಪಾದ್ಯ ವ್ಯಕ್ತಿಃ ಸ್ಯಾನ್ನಾಹಮೋ ಯಥಾ ।**
**ನರ್ತೇಽನ್ತಃಕರಣಂ ತದ್ವದ್ ಧ್ವಾನ್ತಸ್ಯ ವ್ಯಕ್ತಿರಾಞ್ಜಸೀ ॥೫೮॥**

(ಅರ್ಥ)

(ಆಕ್ಷೇಪ) :- ಸತ್ತು, ಅಸತ್ತು (ಮುಂತಾದ) ಯಾವ ವಿಕಲ್ಪ ಸಮೂಹವೂ ಇಲ್ಲದ (ಆತ್ಮ) ವಸ್ತುವು ನಿನಗೆ ವಾಕ್ಯದಿಂದ ಬೇಕಾಗಿದ್ದರೆ, ಆಗಲೂ ವಾಕ್ಯವಿಷಯದ ಆಶೆಯನ್ನು ತೊಲಗಿಸುವೆವು. ಏಕೆಂದರೆ ವಾಕ್ಯಶ್ರವಣವಿಲ್ಲದೆಯೇ ಯಾವ ವಿಕಲ್ಪವೂ ಇಲ್ಲದೆ ಇರುವ ವಸ್ತುವೇ ಸುಷುಪ್ತಿಯಲ್ಲಿ ದನಕಾಯುವವರು, ಕುರಿಕಾಯುವವರು ಮೊದಲಾಗಿ ಪಂಡಿತರವರೆಗೂ ಸಿದ್ಧ (ವಾಗಿರುತ್ತದೆ)[1]. ಆದ್ದರಿಂದ ವಾಕ್ಯಶ್ರವಣದಿಂದ (ಆಗಬೇಕಾದ) ಪ್ರಯೋಜನವೇನೂ ಇರುವದಿಲ್ಲವಲ್ಲ !

---

1. ಸುಷುಪ್ತಿಯಲ್ಲಿ ಯಾರೊಬ್ಬರಿಗೂ ಯಾವ ವಿಕಲ್ಪವೂ ಆತ್ಮನಲ್ಲಿ ಕಾಣುವದಿಲ್ಲ.

(ಪರಿಹಾರ) :- ಇದು ಹೀಗಲ್ಲ. ಏನು ಕಾರಣ ? ಎಂದರೆ ಸರ್ವಾನರ್ಥಗಳಿಗೂ ಕಾರಣವಾಗಿರುವ ಆತ್ಮಾಜ್ಞಾನವು ಸುಷುಪ್ತಿಯಲ್ಲಿ ಇರಬಹುದಾಗಿದೆ [1]. ಸುಷುಪ್ತಿಯಲ್ಲಿ ಅಜ್ಞಾನವು ಇಲ್ಲದಿದ್ದರೆ ವೇದಾಂತವಾಕ್ಯದ ಶ್ರವಣ, ಮನನ, ನಿದಿಧ್ಯಾಸನ- ಇವುಗಳಿಲ್ಲದೆಯೇ [2] 'ನಾನು ಬ್ರಹ್ಮವಾಗಿರುವೆನು' ಎಂದು ನಿಶ್ಚಯವಾಗುವದರಿಂದ ಎಲ್ಲಾ ಜೀವರಿಗೂ ತಾನಾಗಿಯೇ ಸುಷುಪ್ತಿಯು ಪ್ರಾಪ್ತವಾಗುತ್ತಿರುವದರಿಂದ ಸಕಲಸಂಸಾರವೂ ನಾಶವಾಗಬೇಕಾಗಿಬರುವದು. ಕೈವಲ್ಯದಿಂದ ಮತ್ತೆ ಏಳುವದು ಯುಕ್ತವಲ್ಲ [3]. ಏಕೆಂದರೆ ಆಗ ಮೋಕ್ಷವೇ ಇಲ್ಲವೆಂಬ ಪ್ರಸಕ್ತಿಯುಂಟಾಗುವದು [4]. ಸುಷುಪ್ತಿಗೆ ಹೋದವನೇ ಬೇರೆ, ಎಚ್ಚತ್ತವನೇ ಬೇರೆ- ಎಂದು ಹೇಳುವದಕ್ಕಾಗುವಂತಿಲ್ಲ. ''ಸುಷುಪ್ತಿಯಲ್ಲಿ ಮತ್ತೇನನ್ನೂ ನಾನು ಕಾಣಲಿಲ್ಲ'' ಎಂದು ಎಚ್ಚತ್ತವನಿಗೆ ಪ್ರತ್ಯಭಿಜ್ಞೆಯಾಗುವದು ಕಂಡಿದೆ [5]. ಆದ್ದರಿಂದ ಸುಷುಪ್ತಿಯಲ್ಲಿ ಅಜ್ಞಾನವನ್ನು ಅವಶ್ಯವಾಗಿ ಒಪ್ಪಬೇಕು [6].

(ಆಕ್ಷೇಪ) :- ಅಲ್ಲಿ ಅಜ್ಞಾನವಿದ್ದರೆ ರಾಗದ್ವೇಷಗಳಂತೆಯೂ ಘಟಾಜ್ಞಾನವೇ ಮುಂತಾದವುಗಳಂತೆಯೂ ಪ್ರತ್ಯಕ್ಷವಾಗಬೇಕಾಗಿತ್ತಲ್ಲ ! ಈ ಲೋಕದಲ್ಲಿ 'ಗಡಿಗೆಯನ್ನು ಅರಿಯೆನು' ಎಂದು ಅಜ್ಞಾನವು ಹೇಗೆ

---

1. ಇರುವದೆಂಬುದಕ್ಕೆ ಸಂಭಾವನಾಯುಕ್ತಿಯಿದೆ ಎಂದರ್ಥ.

2. ವಾಕ್ಯಶ್ರವಣ, ಶಾಸ್ತ್ರದ ಅರ್ಥವನ್ನು ನಿಶ್ಚಯಮಾಡುವದಕ್ಕೆ ಬೇಕಾದ ತರ್ಕರೂಪವಾದ ಮನನ, ಇವೆರಡರಿಂದಾಗುವ ಅನುಭವ - ಇವುಗಳೇ ಶ್ರವಣಮನನ ನಿದಿಧ್ಯಾಸನಗಳು. ಬೃ.ವಾ. ೨-೪-೨೧೪, ೨೧೭, ೨೯೨ - ಇವನ್ನು ನೋಡಿ.

3. ಸುಷುಪ್ತಿಪ್ರಾಪ್ತಿಮಾತ್ರದಿಂದ ಕೈವಲ್ಯವಾಗುವದಾದರೆ ಮತ್ತೆ ಎಚ್ಚರವಾಗಬಾರದು ; ಆದರೆ ಆಗುತ್ತದೆ.

4. ಏಕೆಂದರೆ ಮೋಕ್ಷವನ್ನು ಪಡೆದವರು ಮತ್ತೆ ಹಿಂತಿರುಗಬಹುದಾದ್ದರಿಂದ ಅದು ಮೋಕ್ಷವೇ ಆಗುವದಿಲ್ಲ.

5. ಸುಷುಪ್ತನಾದವನೇ ಎಚ್ಚರುತ್ತಾನೆಂದು ಒಪ್ಪಿದರೇ ಈ ಪ್ರತ್ಯಭಿಜ್ಞಾನವು ಹೊಂದುತ್ತದೆ.

6. ಆದ್ದರಿಂದ ವಾಕ್ಯಕ್ಕೆ ಅಜ್ಞಾನವನ್ನು ಕಳೆಯುವದೆಂಬ ವಿಷಯವಿದೆ.

ಅವ್ಯವಹಿತವಾಗಿ ಪ್ರತ್ಯಕ್ಷವಾಗುತ್ತದೆಯೋ (ಹಾಗೆ ಆಗಬೇಕಿತ್ತಲ್ಲ )[1] !

(ಪರಿಹಾರ) :- ಇದಕ್ಕೆ ಹೇಳುತ್ತೇವೆ. ಹಾಗಲ್ಲ. ಏಕೆಂದರೆ (ಅಲ್ಲಿ) ಅಭಿವ್ಯಂಜಕವಿಲ್ಲ. ಅಭಿವ್ಯಂಜಕವು ಇಲ್ಲವೆಂಬುದು ಹೇಗೆ ?- ಎಂದರೆ ಕೇಳು :

೫೮. ಹೊರಗಿನ ವೃತ್ತಿಯನ್ನುಂಟುಮಾಡದೆ ಅಹಂಕಾರದ (ಅಭಿ) ವ್ಯಕ್ತಿಯು ಹೇಗೆ ಆಗಲಾರದೋ[2] ಅದರಂತೆ ಅಂತಃಕರಣವಿಲ್ಲದೆ ಅಜ್ಞಾನದ ಸ್ಫುಟವಾದ ಅಭಿವ್ಯಕ್ತಿಯಾಗಲಾರದು[3].

## ಅಹಂಜ್ಞಾತೃಗಳ ವಿವೇಕ

(ಮೂಲ)

**ಕಶ್ಚಿದತಿಕ್ರಾನ್ತಂ ಪ್ರತಿಸ್ಮೃತ್ಯ 'ದೃಶ್ಯತ್ವಾದಹಮಪ್ಯೇವಂ ಲಿಙ್ಗಂ ಸ್ಯಾದ್ ದ್ರಷ್ಟುರಾತ್ಮನಃ' (೩-೫೬) ಇತಿ ನಿರ್ಯುಕ್ತಿಕಮ್ ಅಭಿಹಿತಮ್ ಇತ್ಯಾಹ । ಕಿಂ ಕಾರಣಮ್ ? ಅಹಂತಜ್ಜ್ಞಾತ್ರೋರ್ವಿವೇಕಾಪ್ರಸಿದ್ಧೇಃ । ಯಥಾ ಇಹ ಘಟದೇವದತ್ತಯೋರ್ಗ್ರಾಹ್ಯಗ್ರಾಹಕತ್ವೇನ ಸ್ಫುಟತರೋ ವಿಭಾಗಃ ಪ್ರಸಿದ್ಧೋ ಲೋಕೇ, ನ ತಥೇಹ ಅಹಂಕಾರತಜ್ಜ್ಞಾತ್ರೋರ್ವಿಭಾಗೋಽಸ್ತೀತಿ[4] । ತಸ್ಮಾತ್ ಅಸಾಧ್ವೇತದಭಿಹಿತಮಿತಿ । ಅತ್ರೋಚ್ಯತೇ–**

---

1. ಪ್ರತ್ಯಭಿಜ್ಞಾದಿಗಳ ಮೂಲಕವಾಗಿ ಅರಿತುಕೊಳ್ಳಬೇಕಾದ್ದೇನೂ ಇಲ್ಲದೆ ನೇರಾಗಿ ಅರಿತುಕೊಳ್ಳಬಹುದಾಗಿತ್ತು ಎಂದರ್ಥ. 'ಗಡಿಗೆಯನ್ನು ಅರಿಯೆನು' ಎಂಬುದೇ ಅಜ್ಞಾನದ ಪ್ರತ್ಯಕ್ಷವು.

2. 'ಈ ಗಡಿಗೆಯನ್ನು ನಾನು ಅರಿಯುತ್ತಿದ್ದೇನೆ', 'ಇದು ನನ್ನ ಗಡಿಗೆ' ಎಂದು ಹೊರಗಿನ ವೃತ್ತಿಯಾಗುವದರಿಂದಲೇ ನಾನು ಎಂದು ಅಹಂಕಾರವು ಎದ್ದು ಕಾಣಿಸುತ್ತದೆ.

3. 'ನನಗೆ ರಾಗವುಂಟಾಗಿದೆ, ದ್ವೇಷವುಂಟಾಗಿದೆ, ನಾನು ಇದನ್ನು ಅರಿಯೆನು' ಎಂದು ಸ್ಫುಟವಾಗಿ ಗೊತ್ತಾಗಬೇಕಾದರೆ ಅಂತಃಕರಣವು ಬೇಕು. ಈ ಪ್ರಕರಣದಲ್ಲಿ ಅಜ್ಞಾನವೆಂದರೆ ಅರಿಯದೆ ಇರುವದೆಂಬ ರೂಪದ ಜ್ಞಾನಾಭಾವವೇ ಎಂಬುದನ್ನು ಲಕ್ಷಿಸಬೇಕು. ಪೀಠಿಕೆಯನ್ನು ನೋಡಿ.

4. ಈ ಇತಿಯು ಇಲ್ಲದಿದ್ದರೂ ಆಗುತ್ತದೆ.

**ದಾಹ್ಯದಾಹಕತೈಕತ್ರ ಯಥಾ ಸ್ಯಾದ್ವಹ್ನಿದಾರುಣೋಃ ।**
**ಜ್ಞೇಯಜ್ಞಾತೃಕತೈವಂ ಸ್ಯಾದಹಂಜ್ಞಾತ್ರೋಃ ಪರಸ್ಪರಮ್ ॥೫೯॥**

(ಅರ್ಥ)

(ಯಾವನೋ) ಒಬ್ಬನು [1] ''ದೃಶ್ಯವಾಗಿರುವದರಿಂದ ಅಹಂಕಾರವೂ ಹಾಗೆಯೇ ದೃಷ್ಟೃವಾದ ಆತ್ಮನಿಗೆ ಲಿಂಗವಾಗಬಹುದಾಗಿದೆ'' (೩-೫೬) ಎಂದು ಹಿಂದೆ (ಹೇಳಿರುವದನ್ನು) ನೆನಪಿಗೆ ತಂದುಕೊಂಡು (ಅದು) ಯಾವ ಯುಕ್ತಿಯೂ ಇಲ್ಲದೆ ಹೇಳಿದ್ದು ಎನ್ನುತ್ತಾನೆ. ಕಾರಣವೇನು ? ಎಂದರೆ ಅಹಂಕಾರಕ್ಕೂ ಅದರ ಜ್ಞಾತೃವಿಗೂ ವಿಭಾಗವು ಪ್ರಸಿದ್ಧವಾಗಿಲ್ಲದ್ದರಿಂದ ಇಲ್ಲಿ ಗಡಿಗೆ, ದೇವದತ್ತ ಇವರು ಗ್ರಾಹ್ಯ, ಗ್ರಾಹಕ - ಎಂದು ಸ್ಫುಟತರವಾಗಿ ವಿಂಗಡವಾಗಿರುವದು ಲೋಕದಲ್ಲಿ ಹೇಗೆ ಪ್ರಸಿದ್ಧವಾಗಿರುತ್ತದೆಯೋ ಹಾಗೆ ಇಲ್ಲಿ ಅಹಂಕಾರ, ಅದರ ಜ್ಞಾತೃ- ಇವರಿಗೆ ವಿಭಾಗವು ಇರುವದಿಲ್ಲ. ಆದ್ದರಿಂದ ಹೇಳಿದ್ದು ಸರಿಯಲ್ಲ.

ಇದಕ್ಕೆ (ಉತ್ತರವನ್ನು) ಹೇಳುತ್ತಾರೆ :

೫೯. ಹೇಗೆ ಬೆಂಕಿ, ಕಟ್ಟಿಗೆ - ಇವಕ್ಕೆ ದಾಹ್ಯದಾಹಕತ್ವಭಾವವು ಒಂದೇ ಕಡೆಯಲ್ಲಿರುವದೋ ಹಾಗೆಯೇ ಅಹಂಕಾರ ಅದರ ಜ್ಞಾತೃ- ಇವರಿಬ್ಬರಿಗೂ ಜ್ಞೇಯತ್ವಜ್ಞಾತೃತ್ವವು ಇರಬಹುದು.

(ಮೂಲ)

**ಏವಂ ತಾವತ್ ಅವಿದ್ಯೋತ್ಥಸ್ಯ ಅನ್ತಃಕರಣಸ್ಯ ಬಾಹ್ಯವಿಷಯ ನಿಮಿತ್ತರೂಪಾವಚ್ಛೇದಾಯ ಅಹಂವೃತ್ತಿರ್ವ್ಯಾಪ್ರಿಯತೇ । ತಯಾ ಅವಚ್ಛಿನ್ನಂ ಸತ್ ಕೂಟಸ್ಥಪ್ರತ್ಯಗಾತ್ಮೋಪಾದಾನಾವಬೋಧರೂಪಸ್ಯ ಅವ್ಯವಧಾನತಯಾ ವಿಷಯಭಾವಂ ಪ್ರತಿಪದ್ಯತ ಇತಿ । ತತ್ರ ತಯೋರ್ಜ್ಞಾತ್ರ ಹಂತಾರೂಪಯೋರವಭಾಸಕಾವಭಾಸ್ಯತ್ವಸಂಬನ್ಧವ್ಯತಿರೇಕೇಣ ನಾನ್ಯತ್ ಸಂಬನ್ಧಾನ್ತರಮ್ ಉಪಪದ್ಯತೇ । ಅಹಂತಾರೂಪಂ ತು ಆತ್ಮಸಾತ್ಕೃತ್ವಾ**

1. ಮೀಮಾಂಸಕರಿಗೆ ಆತ್ಮನು ಅಹಂಪ್ರತ್ಯಯವಿಷಯನೇ ; ಅವನಲ್ಲಿ ಯಾವ ವಿಭಾಗವೂ ಇಲ್ಲ.

ಅಹಂಕಞ್ಚುಕಂ ಪರಿಧಾಯ ಉಪಕಾರ್ಯತ್ವಾಪಕಾರ್ಯತ್ವಕ್ಷಮಃ ಸನ್[1] ಬಾಹ್ಯವಿಷಯೇಣ ಉಪಕಾರಿಣಾ ಅಪಕಾರಿಣಾ ವಾ ಆತ್ಮಾತ್ಮೀಯಂ ಸಂಬನ್ಧಂ ಪ್ರತಿಪದ್ಯತೇ । ತದಭಿಧೀಯತೇ–

**ಇದಂಜ್ಞಾನಂ ಭವೇಜ್ಜ್ಞಾತುರ್ಮಮಜ್ಞಾನಂ ತಥಾಹಮಃ ।**
**ಅಜ್ಞಾನೋಪಾಧಿನೇದಂ ಸ್ಯಾದ್ವಿಕ್ರಿಯಾತೋಽಹಮೋ ಮಮ॥೬೦॥**

(ಅರ್ಥ)

ಈ ರೀತಿಯಲ್ಲಿ ಅವಿದ್ಯೆಯಿಂದುಂಟಾದ ಅಂತಃಕರಣದ ಅಹಂವೃತ್ತಿಯು ಹೊರಗಿನ ವಿಷಯಗಳ ನಿವೃತ್ತದಿಂದಾದ ರೂಪದಿಂದ (ವಿಷಯವನ್ನು) ಪರಿಚ್ಛೇದಗೊಳಿಸುವದಕ್ಕೆ ವ್ಯಾಪಾರವನ್ನು ಮಾಡುತ್ತದೆ[2]. ಆದರಿಂದ ಪರಿಚ್ಛಿನ್ನವಾಗಿ (ಹೊರಗಿನ ವಿಷಯರೂಪವಾದ ನಿಮಿತ್ತವು) ಕೂಟಸ್ಥಪ್ರತ್ಯಗಾತ್ಮನೆಂಬ ಉಪಾದಾನವುಳ್ಳ ಅವಬೋಧರೂಪಕ್ಕೆ[3] ವ್ಯವಧಾನವಿಲ್ಲದೆ ವಿಷಯಭಾವವನ್ನು ಹೊಂದುತ್ತದೆ[4]. ಇಲ್ಲಿ ಜ್ಞಾತೃ,

---

1. 'ಉಪಕಾರ್ಯತ್ವೋಪಕಾರಕತ್ವಕ್ಷಮಃ ಸನ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. ವಿಷಯವನ್ನು ಇದೆಂದು ಗೊತ್ತುಪಡಿಸುವದಕ್ಕೆ ಅಹಂಕಾರದ ವ್ಯಾಪಾರವು ಬೇಕು. ಅಂತಃಕರಣದಲ್ಲಿ ಆಯಾ ವಿಷಯದ ನಿಮಿತ್ತದಿಂದ ಒಂದೊಂದು ರೂಪವುಂಟಾಗುತ್ತದೆ.

3. ಅಂತಃಕರಣದಲ್ಲಿ ತೋರುವ ಚಿದಾಭಾಸಕ್ಕೆ ಕೂಟಸ್ಥರೂಪವಾದ ಆತ್ಮ ಚೈತನ್ಯವೇ ಉಪಾದಾನವು. ಅವಿದ್ಯಾಕಲ್ಪಿತಸಾಕ್ಷಿಚೈತನ್ಯದ ಆಭಾಸದಿಂದೊಡಗೂಡಿದ ಅಂತಃಕರಣದಲ್ಲಿ ಜ್ಞಾತೃತ್ವವು ತೋರುತ್ತದೆ. ಇದೇ ಜ್ಞಾನಾದಿವೃತ್ತಿಗಳಿಗೆ ಆಶ್ರಯವು. (ಬೃ.ವಾ. ೩-೪-೧೦೫, ೩-೪-೧೦೬ ಇವನ್ನು ನೋಡಿ). ಇಲ್ಲಿಯೂ ಹಿಂದಿನ ಶ್ಲೋಕದಲ್ಲಿಯೂ ಹೇಳಿರುವ ಜ್ಞಾತೃವು ಅಂತಃಕರಣೋಪಾಧಿಗತವಾದ ಕರ್ತೃತ್ವವಿಶಿಷ್ಟವಾದದ್ದೇ ; ಇದನ್ನೇ ಕರ್ತೃತ್ವೋಪಾಧಿಯಾದ ಆತ್ಮನೆಂದು ೨-೫೮ರ ಸಂಬಂಧೋಕ್ತಿಯಲ್ಲಿ ಹೇಳಿರುವದು. ದ್ರಷ್ಟೃವೆಂದು ಈ ಅಧ್ಯಾಯದ ೫೪ನೆಯ ಶ್ಲೋಕದ ಸಂಬಂಧೋಕ್ತಿಯಲ್ಲಿ ಹೇಳಿರುವದು ಇದೇ.

4. ಅಹಂಕಾರವು ಜ್ಞಾತೃವಿಗೆ ಅವ್ಯವಹಿತವಾದ್ದರಿಂದ ಅಹಂವೃತ್ತಿಪರಿಚ್ಛಿನ್ನ ವಿಷಯವೂ ಅವ್ಯವಹಿತವಾಗುತ್ತದೆ.

ಅಹಂರೂಪ - ಇವುಗಳಿಗೆ ಅವಭಾಸಕಾವಭಾಸ್ಯತ್ವವೆಂಬ ಸಂಬಂಧವಲ್ಲದೆ[1] ಮತ್ತೊಂದು ಬೇರೆಯ ಸಂಬಂಧವು ಹೊಂದುವದಿಲ್ಲ. ಆದರೆ (ಜ್ಞಾತೃವು) ಅಹಂತಾರೂಪವನ್ನು ತನ್ನ ವಶಕ್ಕೆ ತೆಗೆದುಕೊಂಡು[2] ನಾನೆಂಬ ಅಂಗಿಯನ್ನು ತೊಟ್ಟು[3] ಉಪಕಾರ್ಯತ್ವ, ಅಪಕಾರ್ಯತ್ವ- ಇವುಗಳಿಗೆ ತಕ್ಕವನಾಗಿ ಉಪಕಾರಿಯಾದ ಅಥವಾ ಅಪಕಾರಿಯಾದ[4] ಹೊರಗಿನ ವಿಷಯದೊಡನೆ ಆತ್ಮಾತ್ಮೀಯಸಂಬಂಧವನ್ನು[5] ಪಡೆದುಕೊಳ್ಳುತ್ತಾನೆ. ಅದನ್ನು (ಈಗ) ಹೇಳುತ್ತಾರೆ :

೬೦. ಜ್ಞಾತೃವಿಗೆ ಇದು ಎಂಬ ಜ್ಞಾನವಾಗುತ್ತದೆ, ಮತ್ತು ಅಹಂಕಾರಕ್ಕೆ[6] ನನ್ನ ಎಂಬ ಜ್ಞಾನವು (ಆಗತ್ತದೆ). ಅಜ್ಞಾನದ ಉಪಾಧಿಯಿಂದ 'ಇದು' (ಎಂಬ ಜ್ಞಾನವು) ಆಗುತ್ತದೆ[7]; ಅಹಂಕಾರದ ವಿಕಾರದಿಂದ 'ನನ್ನ' (ಎಂಬ ಜ್ಞಾನವಾಗುತ್ತದೆ)[8].

---

1. ಜ್ಞಾತೃವು ಅವಭಾಸಕ, ಅಹಂಕಾರವು ಅವಭಾಸ್ಯ ; ಇವುಗಳ ನಡುವೆ ಮತ್ತೊಂದು ಸಂಬಂಧವಿಲ್ಲ. ಅಹಂಕಾರವನ್ನು ಜ್ಞಾತೃವು ವಿಷಯಗಳಂತೆ ಪರಿಚ್ಛೇದ ಗೊಳಿಸುವದೂ ಇಲ್ಲ. 2. ಅಹಂಕಾರಾಧ್ಯಾಸವನ್ನು ಹೊಂದಿ.

3. ಅಹಂಪ್ರತ್ಯಯಕ್ಕೆ ಆಶ್ರಯನೂ ವಿಷಯನೂ ಆಗಿ.

4. ಅಹಂಕಾರದ ಸಂಬಂಧವಿಲ್ಲದೆ ತನಗೆ ಮತ್ತೊಂದರ ಉಪಕಾರವಾಗಲಿ ಅಪಕಾರವಾಗಲಿ ಅಗುವಂತಿರುವದಿಲ್ಲ.

5. ನಾನು ನನ್ನದು- ಎಂಬ ಸಂಬಂಧವನ್ನು ಎಂದರ್ಥ. ಕೂಟಸ್ಥಾತ್ಮನಿಗೆ ಅಂತಃಕರಣದಮೂಲಕ ಜ್ಞಾನಾದಿವೃತ್ತಿಗಳಿಂದ ಜ್ಞಾತೃತ್ವವೂ ಅಹಂವೃತ್ತಿಯಿಂದ ಭೋಕ್ತೃತ್ವವೂ ಆಗುತ್ತದೆ ಎಂದು ಅಭಿಪ್ರಾಯ.

6. ಅಹಂಕಾರೋಪಾಧಿಯುಕ್ತನಾದ ಆತ್ಮನಿಗೆ ಎಂದರ್ಥ. ಸಾಕ್ಷಿತ್ವ, ಜ್ಞಾತೃತ್ವ, ಅಹಂತ್ವ - ಇವೆಲ್ಲವೂ ಬೇರೆಬೇರೆಯ ಉಪಾಧಿಗಳಿಂದ ಆತ್ಮನಿಗೇ ಆಗುವವು.

7. ಘಟವಿಷಯವನ್ನು ಇದು ಎಂದು ಗೊತ್ತುಪಡಿಸುವದಕ್ಕೆ- ಇದು ನನಗೆ ತಿಳಿಯಿತು ಎಂಬ ಅರಿವಾಗುವದಕ್ಕೆ - ಅಹಂವೃತ್ತಿಯ ವ್ಯಾಪಾರವೂ ಬೇಕು. ಮುಂದೆ ಹೇಳುವ ಅಹಂಕಾರದ ಸಂಬಂಧಾಂತರವಿಲ್ಲವಾದ್ದರಿಂದ 'ಅಜ್ಞಾನದ ಉಪಾಧಿಯಿಂದ' ಎಂದಿದೆ.

8. ಉಪಕಾರಾಪಕಾರಗಳಿಂದಾಗುವ ಮಾರ್ಪಾಡನ್ನೇ ಇಲ್ಲಿ 'ವಿಕ್ರಿಯೆ' ಎಂದಿರುವದು.

(ಮೂಲ)

ಏಕಸ್ಯೈವ ಜ್ಞಾತುಃ ಅನ್ತರ್ಬಾಹ್ಯನಿಮಿತ್ತಭೇದಾತ್ ಅಭಿನ್ನೇಽಪಿ[1] ವಿಷಯೇ 'ಇದಮ್', 'ಮಮ' ಇತಿ ಜ್ಞಾನದ್ವೈರೂಪ್ಯಂ[2] ಜಾಯತ ಇತ್ಯುಕ್ತಮ್ । ಅತ್ರ ಉಪಕ್ರಿಯಮಾಣಾಪಕ್ರಿಯಮಾಣಸ್ಯೈವ ಜ್ಞಾತು ರ್ವಿಷಯೇ ಮಮಪ್ರತ್ಯಯೋ ಭವತಿ, ವಿಪರ್ಯಯೇ ಚೇದಂಪ್ರತ್ಯಯಃ ಇತಿ ಕಥಮವಗಮ್ಯತೇ ? ಅವಗಮ್ಯತಾಮ್ ಅನ್ವಯವ್ಯತಿರೇಕಾಭ್ಯಾಮ್ । ತತ್ಕಥಮ್ ಇತ್ಯಾಹ –

**ಅನುಪಕ್ರಿಯಮಾಣತ್ವಾನ್ನ ಜ್ಞಾತುಃ ಸ್ಯಾದಹಂ ಮಮ ।**
**ಘಟಾದಿವದಿದಂ ತು ಸ್ಯಾನ್ಮೋಹಮಾತ್ರವ್ಯಪಾಶ್ರಯಾತ್ ॥೬೧॥**

(ಅರ್ಥ)

(ಪ್ರಶ್ನೆ) :- ಒಬ್ಬನೇ ಜ್ಞಾತೃವಿಗೆ ಒಳಗಿನ ಮತ್ತು ಹೊರಗಿನ ನಿಮಿತ್ತಭೇದದಿಂದ[3] ಬೇರೆಯಲ್ಲದ (ಒಂದೇ) ವಿಷಯದಲ್ಲಿಯೇ 'ಇದು', 'ನನ್ನ' ಎಂಬ ಎರಡು ಬಗೆಯ ಜ್ಞಾನವುಂಟಾಗುತ್ತದೆ ಎಂದು ಹೇಳಿದ್ದಾಯಿತು. ಇಲ್ಲಿ ಉಪಕಾರ್ಯ, (ಅಥವಾ) ಅಪಕಾರ್ಯನಾದ ಜ್ಞಾತೃವಿಗೇ[4] ವಿಷಯದಲ್ಲಿ 'ನನ್ನದು' ಎಂಬ ಪ್ರತ್ಯಯವುಂಟಾಗುತ್ತದೆ[5], ಹಾಗಿಲ್ಲದಿದ್ದರೆ[6] ಇದು ಎಂಬ ಪ್ರತ್ಯಯ(ವಾಗುತ್ತದೆ) ಎಂದು ಹೇಗೆ ಗೊತ್ತಾಗುತ್ತದೆ ?

1. 'ವಿಭಿನ್ನೇಽಪಿ' ಎಂಬುದಕ್ಕಿಂತ ಈ ಪಾಠವೇ ಮೇಲು.

2. 'ಜ್ಞಾನಂ ದ್ವೈರೂಪ್ಯಂ' ಎಂಬ ಪಾಠಕ್ಕಿಂತ ಇದೇ ಮೇಲು.

3. ಅಜ್ಞಾನದಿಂದುಂಟಾಗಿರುವ ಅಂತಃಕರಣದ ಜ್ಞಾನವು ಒಳಗಿನ ನಿಮಿತ್ತವು. ಉಪಕಾರಾಪಕಾರಗಳಿಂದಾಗುವ ಅಹಂಕಾರದ ವಿಕಾರವು ಹೊರಗಿನ ನಿಮಿತ್ತವು.

4. ಅಹಂಕಂಚುಕನಾದ ಎಂದು ಹಿಂದಿನ ಸಂಬಂಧೋಕ್ತಿಯಲ್ಲಿ ಹೇಳಿದ ಜ್ಞಾತೃವಿಗೇ.

5. ಉಪಕಾರಕವಾದ ವಸ್ತುವಿನಲ್ಲಿ 'ನನಗೆ ಬೇಕಾದದ್ದು' ಎಂಬ ಜ್ಞಾನವೂ ಅಪಕಾರಕವಾದ ವಸ್ತುವಿನಲ್ಲಿ 'ನನಗೆ ಬೇಡವಾದದ್ದು' ಎಂಬ ಜ್ಞಾನವೂ ಆಗುತ್ತದೆ. ಇದನ್ನೇ ಮಮಜ್ಞಾನವೆಂದು ಇಲ್ಲಿ ಕರೆದಿರುವದು. ಒಟ್ಟು ಗ್ರಂಥದ ಸಂಬಂಧೋಕ್ತಿಯಲ್ಲಿ ''ರಾಗದ್ವೇಷಗಳು ಒಳ್ಳೆಯದು ಕೆಟ್ಟದ್ದು ಎಂಬ ಅಧ್ಯಾಸದ ನಿಮಿತ್ತ '' ಎಂದು ಹೇಳಿರುವದು ಇದನ್ನೇ.

6. ಜ್ಞಾತೃವಿಗೆ ಅಹಂಕಾರವಿಕಾರದಿಂದ ಉಪಕಾರ್ಯತ್ವಾಪಕಾರ್ಯತ್ವಗಳಿಲ್ಲದಿದ್ದರೆ.

(ಉತ್ತರ) :- ಅನ್ವಯವ್ಯತಿರೇಕಗಳಿಂದ ಗೊತ್ತುಮಾಡಿಕೊಳ್ಳಬಹುದು. ಅದು ಹೇಗೆ ?- ಎಂದರೆ ಹೇಳುತ್ತಾರೆ :

೬೧. (ಅಹಂಕಾರದಿಂದ) ಉಪಕಾರವನ್ನು ಹೊಂದುವದಿಲ್ಲವಾದ್ದರಿಂದ [1] ಅಹಂಕಾರವು ಜ್ಞಾತೃವಿಗೆ 'ನನ್ನದು' (ಎಂದು) ಆಗುವದಿಲ್ಲ.... ಆದರೆ ಗಡಿಗೆ ಮುಂತಾದವುಗಳಂತೆ 'ಇದು' (ಎಂದು) ಆಗುತ್ತದೆ [2] ; ಏಕೆಂದರೆ (ಜ್ಞಾತೃವು) ಅಜ್ಞಾನವನ್ನು ಮಾತ್ರ ಆಶ್ರಯಿಸಿಕೊಂಡಿರುತ್ತಾನೆ [3].

(ಮೂಲ)

**ಮೋಹತತ್ಕಾರ್ಯಾಶ್ರಯತ್ವಾತ್ ಜ್ಞಾತೃತ್ವವಿಕ್ರಿಯಯೋಃ ಪೂರ್ವತ್ರ ಇದಂಮಮಜ್ಞಾನಾನ್ವಯಃ ಪ್ರದರ್ಶಿತಃ । ಅಥಾಧುನಾ ತದ್ವ್ಯತಿರೇಕೇಣ ವ್ಯತಿರೇಕಪ್ರದರ್ಶನಾರ್ಥಮಾಹ–**

**ವಿಕ್ರಿಯಾಜ್ಞಾನಶೂನ್ಯತ್ವಾನ್ನೇದಂ ನ ಚ ಮಮಾತ್ಮನಃ ।**
**ಉತ್ಥಿತಸ್ಯ ಸತೋ ಜ್ಞಾನಂ ನಾಹಮಜ್ಞಾಸಿಷಂ ಯತಃ ॥೬೨॥**

(ಅರ್ಥ)

ಮೋಹ, ಅದರ ಕಾರ್ಯ- ಇವುಗಳನ್ನು ಆಶ್ರಯಿಸಿರುವದರಿಂದ [4] ಜ್ಞಾತೃತ್ವ, (ಅಹಂ) ವಿಕ್ರಿಯೆ- ಇವುಗಳಿಗೆ ಇದು, ನನ್ನದು- ಎಂಬ ಜ್ಞಾನಗಳ ಅನ್ವಯವನ್ನು ಹಿಂದೆ ತೋರಿಸಿಕೊಟ್ಟದ್ದಾಯಿತು [5]. ಈಗ

---

1. ಅಹಂಕಾರವನ್ನೂ ಹೊಂದುವದಿಲ್ಲವಾದ್ದರಿಂದ ಎಂದು ಸೇರಿಸಿಕೊಳ್ಳಬೇಕು.

2. ಅಹಂಕಾರವು 'ಇದು' ಎಂದು ಎದ್ದುಕಾಣುವ ಜ್ಞಾನಕ್ಕೆ ಗೋಚರವಾಗುವದಿಲ್ಲವಾದರೂ ಜ್ಞಾತೃವಿನ ಜ್ಞಾನಕ್ಕೆ ಅವಭಾಸ್ಯ (ಬೆಳಗಿ ತೋರತಕ್ಕದ್ದು) ಎಂಬ ಕಾರಣದಿಂದ 'ಇದು' ಎಂದಾಗುತ್ತದೆ ಎಂದಿದೆ. ಹಿಂದಿನ ಶ್ಲೋಕದ ಸಂಬಂಧೋಕ್ತಿಯನ್ನು ನೋಡಿ.

3. ಅಜ್ಞಾನದಿಂದಾಗಿರುವ ಜ್ಞಾತೃತ್ವರೂಪವನ್ನು ಮಾತ್ರ ಎಂದರ್ಥ ; ಅಹಂಕಾರದ ವಿಕ್ರಿಯೆಯನ್ನೂ ಆಶ್ರಯಿಸಿಕೊಂಡಿರುವದಿಲ್ಲವೆಂಬುದನ್ನು ''ಮಾತ್ರ'' ಎಂಬ ಶಬ್ದವು ಸೂಚಿಸುತ್ತದೆ.

4. ಅಜ್ಞಾನದಿಂದಾಗಿರುವ ಅಂತಃಕರಣ, ಅದರ ಕಾರ್ಯವಾಗಿರುವ ಅಹಂಕಾರ- ಇವುಗಳನ್ನಾಶ್ರಯಿಸಿರುವದರಿಂದ ಎಂದರ್ಥ.

5. ಬರಿಯ ಜ್ಞಾತೃತ್ವವಿದ್ದಲ್ಲಿ ಇದು ಎಂಬ ಜ್ಞಾನವೂ ಅಹಂಕಾರದ ಸುಖದುಃಖ ಭೋಕ್ತೃತ್ವರೂಪವಿಕ್ರಿಯೆಯಿದ್ದಲ್ಲಿ ನನ್ನದು ಎಂಬ ಜ್ಞಾನವೂ ಇರುತ್ತದೆ- ಎಂಬುದು ಅನ್ವಯ.

ಅವುಗಳಿಲ್ಲದಿದ್ದರೆ[1] (ಆ ಜ್ಞಾನಗಳೂ) ಇರುವದಿಲ್ಲವೆಂಬುದನ್ನು ತೋರಿಸುವದಕ್ಕಾಗಿ ಹೇಳುತ್ತಾರೆ :

೬೨. ವಿಕ್ರಿಯೆ, ಜ್ಞಾನ- ಇವುಗಳಿಲ್ಲದ್ದರಿಂದ[2] ಆತ್ಮನಿಗೆ 'ಇದು' (ಎಂಬ ಜ್ಞಾನವೂ) ಇರುವದಿಲ್ಲ, 'ನನ್ನದು' (ಎಂಬ ಜ್ಞಾನವೂ) ಇರುವದಿಲ್ಲ. ಏಕೆಂದರೆ ಎಚ್ಚತ್ತವನಾದ ಬಳಿಕ 'ನನಗೆ (ಏನೂ ) ತಿಳಿಯಲಿಲ್ಲ' ಎಂಬ ಜ್ಞಾನವಾಗುತ್ತದೆ[3].

## ಶ್ರುತ್ಯನುಗೃಹೀತವಾದ ಅನ್ವಯವ್ಯತಿರೇಕದ ಉಪಸಂಹಾರ

### (ಮೂಲ)

**ಆತ್ಮಾನಾತ್ಮವಿವೇಕಸ್ಯ ಇಯತ್ತಾಪ್ರದರ್ಶನಾರ್ಥಮಾಹ –**

---

1. ಜ್ಞಾತೃತ್ವವೂ ಅಹಂವಿಕ್ರಿಯೆಯೂ ಇಲ್ಲದಿದ್ದರೆ ಎಂದರ್ಥ. ಅಜ್ಞಾನ ವಿಕ್ರಿಯೆಗಳಿಲ್ಲದಿದ್ದರೆ ಎಂದರ್ಥವಲ್ಲ.

2. ಇಲ್ಲಿ ವಿಕ್ರಿಯೆ ಎಂದರೆ ಅಹಂಕಾರದ ಭೋಕ್ತೃತ್ವರೂಪವಿಕಾರ, ಜ್ಞಾನವೆಂದರೆ ಜ್ಞಾನಕ್ಕೆ ಆಶ್ರಯವಾಗಿರುವ ಜ್ಞಾತೃತ್ವ ; ಏಕೆಂದರೆ ಅವುಗಳ ವ್ಯತಿರೇಕವನ್ನೇ ಇಲ್ಲಿ ತೋರಿಸತಕ್ಕದ್ದಿದೆ.

3. ಇಲ್ಲಿ ಅಜ್ಞಾನದ ಅನ್ವಯವ್ಯತಿರೇಕವು ಪ್ರಕೃತವಲ್ಲ ; ಸುಷುಪ್ತಿಯಲ್ಲಿ ಅಜ್ಞಾನವಿದೆ ಎಂದೇ ಹಿಂದೆ ೩-೫೮ರಲ್ಲಿ ಹೇಳಿದೆ. ಎಚ್ಚತ್ತವನಿಗೆ ನನಗೆ ತನಿನಿದ್ರೆಯಲ್ಲಿ ಏನೂ ತಿಳಿಯಲಿಲ್ಲ ಎಂದೇ ಅರಿವಾಗುವದರಿಂದ ಅಲ್ಲಿ ಇದು ಎಂಬ ಜ್ಞಾನವಾಗಲಿ ನನ್ನದು ಎಂಬ ಜ್ಞಾನವಾಗಲಿ ಇಲ್ಲ ಎಂದರ್ಥ. ಜ್ಞಾತೃತ್ವಾಹಂತಾರಹಿತವಾದ ಆತ್ಮಸ್ವರೂಪವೇ ಇಲ್ಲ, ಸುಷುಪ್ತಿಯಲ್ಲಿ ಯಾವ ಜ್ಞಾನವೂ ಇಲ್ಲದ್ದರಿಂದ ಆತ್ಮನೂ ಇಲ್ಲ- ಎಂದು ಶಂಕಿಸುವದಕ್ಕಿಲ್ಲ ; ಏಕೆಂದರೆ ಜ್ಞಾತೃತ್ವಾಹಂತೆಗಳಿಲ್ಲದ ಸಾಕ್ಷಿಯು ಅಲ್ಲಿರುತ್ತಾನೆಂಬುದಕ್ಕೆ ಉಕ್ತಪರಾಮರ್ಶವು ಪ್ರಮಾಣವಾಗಿದೆ ಎಂದು ಅಭಿಪ್ರಾಯ. ಈ ವ್ಯಾಖ್ಯಾನವೇ ಸರಿ ಎಂಬುದಕ್ಕೆ ಬೃ.ವಾ. ೩-೪-೧೦೨, ೧೦೩, ೧೦೪ ಈ ಶ್ಲೋಕಗಳನ್ನು ನೋಡಿರಿ. ಅಜ್ಞಾನತತ್ಕಾರ್ಯಗಳಿಲ್ಲದಿದ್ದರೆ ಇದು, ನನ್ನದು ಎಂಬ ಜ್ಞಾನಗಳಿರುವದಿಲ್ಲ ಎಂದು ವ್ಯಾಖ್ಯಾನಕಾರರು ಬರೆದಿರುವದು ಆ ವಾರ್ತಿಕಗಳಿಗೂ ಪ್ರಕೃತಗ್ರಂಥಕ್ಕೂ ವಿರುದ್ಧವಾಗಿದೆ. ಸುಷುಪ್ತಿಯಲ್ಲಿ ಸಾಕ್ಷಿತ್ವವಿರುವದರಿಂದ ಅಜ್ಞಾನವೂ ಇದೆಯೆಂದೇ ಸಿದ್ಧವಾಗುತ್ತದೆ. ಸಾಕ್ಷಿತ್ವವೂ ಅಜ್ಞಾನಕಲ್ಪಿತವೆಂಬುದಕ್ಕೆ ೨-೫೮ರ ಸಂಬಂಧೋಕ್ತಿಯನ್ನು ನೋಡಿರಿ.

**ವಾಕ್ಯಪ್ರತ್ಯಕ್ಷಮಾನಾಭ್ಯಾಮಿಯಾನರ್ಥಃ ಪ್ರತೀಯತೇ ।**
**ಅನರ್ಥಕೃತ್ತಮೋಹಾನಿರ್ವಾಕ್ಯಾದೇವ ಸದಾತ್ಮನಃ ॥೬೩॥**

(ಅರ್ಥ)

ಆತ್ಮಾನಾತ್ಮಗಳ ವಿವೇಕಕ್ಕೆ ಅವಧಿಯನ್ನು ತಿಳಿಸುವದಕ್ಕಾಗಿ ಹೇಳುತ್ತಾರೆ :

೬೩. ವಾಕ್ಯಪ್ರತ್ಯಕ್ಷಮಾನಗಳಿಂದ[1] ಇಷ್ಟೇ ಅರ್ಥವು ತಿಳಿದು ಬರುತ್ತದೆ. ಅನರ್ಥವನ್ನುಂಟುಮಾಡುವ ಸದಾತ್ಮನ ತಮಸ್ಸಿನ ನಾಶವು[2] ವಾಕ್ಯದಿಂದಲೇ.

## ವಾಕ್ಯದಿಂದ ಅವಿದ್ಯೆಯ ನಿವೃತ್ತಿಗೆ ದಶಮವಾಕ್ಯದ ದೃಷ್ಟಾಂತ

(ಮೂಲ)

**ದ್ವಿತೀಯಾಧ್ಯಾಯಾದೌ ಶ್ರೋತೃಚತುಷ್ಟಯಮ್ ಉಪನ್ಯಸ್ತಮ್ । ತತ್ರ ಕೃತ್ಸ್ನಾನಾತ್ಮನಿವೃತ್ತೌ ಸತ್ಯಾಂ ಯಃ ಪ್ರತ್ಯಗಾತ್ಮನ್ಯವಾಕ್ಯಾರ್ಥತಾಂ ಪ್ರತಿಪದ್ಯತೇ ಸ ಕ್ಷಪಿತಾಶೇಷಾನ್ತರಾಯಹೇತುರಿತಿ ನ ತಂ ಪ್ರತಿವಕ್ತವ್ಯಂ ಕಿಂಚಿದವಶಿಷ್ಯತೇ । ಯೋಽಪಿ ವಾಕ್ಯಶ್ರವಣಮಾತ್ರಾದೇವ ಪ್ರತಿಪದ್ಯತೇ ತಸ್ಯಾಪಿ ಅತೀನ್ದ್ರಿಯಶಕ್ತಿಮತ್ತ್ವಾತ್ ನ ಕಿಂಚಿದಪ್ಯಪೇಕ್ಷಿತವ್ಯಮಸ್ತಿ । ಯಶ್ಚ ಶ್ರಾವಿತತತ್ತ್ವಮಸಿವಾಕ್ಯಃ ಸ್ವಯಮೇವ ಅನ್ವಯವ್ಯತಿರೇಕೌ ಕೃತ್ವಾ ತದವಸಾನ ಏವಾವಾಕ್ಯಾರ್ಥಂ[3] ಪ್ರತಿಪದ್ಯತೇ ಅಸಾವಪಿ ಯಥಾರ್ಥಂ**

---

1. 'ಯ ಏಷೋಽಕ್ಷಿಣಿ ಪುರುಷಃ' (ಛಾಂ. ೮-೭-೪), 'ಅಥ ಯೋ ವೇದೇದಂ ಜಿಘ್ರಾಣೀತಿ' (ಛಾಂ. ೮-೧೨-೪), 'ಯೋಽಯಂ ವಿಜ್ಞಾನಮಯಃ ಪ್ರಾಣೇಷು' (ಬೃ. ೪-೩-೭) ಮುಂತಾದ ಹಿಂದೆ ಉದಾಹರಿಸಿರುವ ಅನ್ವಯವ್ಯತಿರೇಕಶ್ರುತಿಗಳನ್ನು ಇಲ್ಲಿ ವಾಕ್ಯಗಳೆಂದಿದೆ ; ಅನ್ವಯವ್ಯತಿರೇಕಗಳಿಂದಾಗುವ ಆತ್ಮಾನಾತ್ಮವಿವೇಕರೂಪವಾದ ಅನುಭವವನ್ನು ಪ್ರತ್ಯಕ್ಷನೆಂದು ಕರೆದಿದೆ.

2. ಅದ್ವಿತೀಯಪ್ರತ್ಯಗಾತ್ಮವಿಷಯದ ಅಜ್ಞಾನದ ನಾಶವು.

3. 'ಏವ ವಾಕ್ಯಾರ್ಥಂ' ಎಂಬ ಪಾಠಕ್ಕಿಂತ ಇದು ಮೇಲು.

ಪ್ರತಿಪನ್ನಃ ಇತಿ ಪೂರ್ವವದೇವ ಉಪೇಕ್ಷಿತವ್ಯಃ । ಯಃ ಪುನರನ್ವಯವ್ಯತಿರೇಕೌ ಕಾರಯಿತ್ವಾಪಿ ಪುನಃಪುನರ್ವಾಕ್ಯಂ ಶ್ರಾವ್ಯತೇ ಯಥಾಭೂತಾರ್ಥಪ್ರತಿಪತ್ತಯೇ, ತಸ್ಯ ಕೃತಾನ್ವಯವ್ಯತಿರೇಕಸ್ಯ ಸತಃ ಕಥಂ ವಾಕ್ಯಂ ಶ್ರಾವ್ಯತ ಇತಿ । ಉಚ್ಯತೇ–

ನವಸಂಖ್ಯಾಹೃತಜ್ಞಾನೋ ದಶಮೋ ವಿಭ್ರಮಾದ್ ಯಥಾ ।
ನ ವೇತ್ತಿ ದಶಮೋಽಸ್ಮೀತಿ ವೀಕ್ಷಮಾಣೋಽಪಿ ತಾನ್ನವ ॥೬೪॥

(ಅರ್ಥ)

ಎರಡನೆಯ ಅಧ್ಯಾಯದ ಆದಿಯಲ್ಲಿ ನಾಲ್ಕುಬಗೆಯ ಶ್ರೋತೃಗಳನ್ನು ಹೇಳಿತ್ತು. ಅವರಲಿ ಎಲ್ಲಾ ಅನಾತ್ಮವೂ ತೊಲಗಲು [1] ಯಾವನು ಪ್ರತ್ಯಗಾತ್ಮನಲ್ಲಿ ಅವಾಕ್ಯಾರ್ಥತ್ವವನ್ನು ಅರಿತುಕೊಳ್ಳುವನೋ ಅವನು ಪ್ರತಿಬಂಧಕ ಹೇತುಗಳೆಲ್ಲವೂ ಕ್ಷಯವಾದವನಾದ್ದರಿಂದ ಅವನಿಗಾಗಿ ಹೇಳತಕ್ಕದ್ದು ಏನೂ ಉಳಿದಿರುವುದಿಲ್ಲ. ಯಾವನು ವಾಕ್ಯಶ್ರವಣಮಾತ್ರದಿಂದಲೇ ಅರಿತುಕೊಳ್ಳುವನೋ [2] ಅವನಿಗೂ ಅತೀಂದ್ರಿಯಶಕ್ತಿಯಿರುವದರಿಂದ ಇನ್ನೇನೂ ಬೇಕಾದದ್ದಿರುವದಿಲ್ಲ. ಮತ್ತು ಯಾವನು ತತ್ತ್ವಮಸ್ಯಾದಿವಾಕ್ಯಗಳನ್ನು ಶ್ರವಣ ಮಾಡಿಸಿದ ಮೇಲೆ ತಾನೇ ಅನ್ವಯವ್ಯತಿರೇಕಗಳನ್ನು ಮಾಡಿಕೊಂಡು ಅವುಗಳ ಕೊನೆಯಲ್ಲಿಯೇ ಅವಾಕ್ಯಾರ್ಥವನ್ನು ಅರಿತುಕೊಳ್ಳುವನೋ ಅವನಿಗೂ ಯಥಾರ್ಥವಾಗಿ ಅರಿವಾಗಿರುವದರಿಂದ ಹಿಂದಿನವರಂತೆಯೇ (ಅವನನ್ನು) ಉಪೇಕ್ಷೆಮಾಡತಕ್ಕದ್ದು. ಇನ್ನು ಯಾವನಿಗೆ ಅನ್ವಯವ್ಯತಿರೇಕಗಳನ್ನೂ ಮಾಡಿಸಿ ಇರುವ ವಸ್ತುವನ್ನು ತಿಳಿಯುವದಕ್ಕಾಗಿ ಮತ್ತೆಮತ್ತೆ ವಾಕ್ಯವನ್ನು ಶ್ರವಣಾಡಿಸಬೇಕಾಗಿದೆಯೋ [3] ಅನ್ವಯವ್ಯತಿರೇಕಗಳನ್ನು ಮಾಡಿಕೊಂಡಿರುವ ಅವನಿಗೆ ವಾಕ್ಯವನ್ನು ಶ್ರವಣಮಾಡಿಸುವದು ಹೇಗೆ [4] ? ಎಂದರೆ ಹೇಳುತ್ತಾರೆ :

1. ಅನಾತ್ಮವೆಲ್ಲವೂ ಮಿಥ್ಯೆಯೆಂದು ತೋರಿ.

2. ಇವನನ್ನೇ ಪಿಶಾಚಿಯ ದೃಷ್ಟಾಂತದಿಂದ ಹೇಳಿದ್ದು.

3. ಇವನೇ ವಾಕ್ಯಶ್ರವಣಕ್ಕೆ ಮುಖ್ಯಾಧಿಕಾರಿ. ಇಂಥವನಿಗಾಗಿಯೇ ಈ ಪ್ರಕರಣವನ್ನು ಬರೆದಿದೆ.

4. ಅವನಿಗೆ ವಾಕ್ಯದಿಂದಲೇ ಅಪರೋಕ್ಷಜ್ಞಾನವಾಗುವದು ಹೇಗೆ ?

೬೪. ಒಂಬತ್ತು ಸಂಖ್ಯೆಯ (ಹುಡುಗರ ಎಣಿಕೆಯಲ್ಲಿ) ಜ್ಞಾನವನ್ನು ಕಳೆದುಕೊಂಡು ಹತ್ತನೆಯವನು ಹೇಗೆ ಭ್ರಾಂತಿಯಿಂದ ಆ ಒಂಬತ್ತು (ಹುಡುಗರನ್ನು) ಕಾಣುತ್ತಿದ್ದರೂ ಹತ್ತನೆಯವನಾಗಿರುವೆನು ಎಂದು ಅರಿತು ಕೊಳ್ಳದೆ ಇರುವನೋ–

(ಮೂಲ)

ಅಥ ದೃಷ್ಟಾನ್ತಗತಮರ್ಥಂ ದಾರ್ಷ್ಟಾನ್ತಿಕಾರ್ಥೇ ಸಮರ್ಪಯಿಷ್ಯನ್ ಆಹ–

**ಅಪವಿದ್ಧದ್ವಯೋಽಪ್ಯೇವಂ ತತ್ತ್ವಮಸ್ಯಾದಿನಾ ವಿನಾ ।**
**ವೇತ್ತಿ ನೈಕಲಮಾತ್ಮಾನಂ ನಾನ್ವೇಷ್ಯಂ ಚಾತ್ರ ಕಾರಣಮ್ ॥೬೫॥**

(ಅರ್ಥ)

ಇನ್ನು (ಈ) ದೃಷ್ಟಾಂತದಲ್ಲಿರುವ ಅರ್ಥವನ್ನು ದಾರ್ಷ್ಟಾಂತಿಕವಾದ ಅರ್ಥಕ್ಕೆ ಹೊಂದಿಸುವದಕ್ಕಾಗಿ ಹೇಳುತ್ತಾರೆ :

೬೫. ಹೀಗೆಯೇ ದ್ವೈತವು ನಾಶವಾದವನು ಕೂಡ ತತ್ತ್ವಮಸಿಯೇ ಮುಂತಾದ (ವಾಕ್ಯ)ವಿಲ್ಲದೆ ಅದ್ವಿತೀಯಾತ್ಮನನ್ನು ಅರಿತುಕೊಳ್ಳದೆ ಇರುತ್ತಾನೆ. ಇದಕ್ಕೆ ಕಾರಣವನ್ನು ಹುಡುಕಬೇಕಾದದ್ದಿಲ್ಲ [1].

(ಮೂಲ)

'ನಾನ್ವೇಷ್ಯಂ ಚಾತ್ರ ಕಾರಣಮ್' ಇತ್ಯುಕ್ತಮ್ । ತತ್ಕಸ್ಮಾತ್ ಇತಿ ಚೋದಿತೇ ಪ್ರತ್ಯಾಹ । ಅನ್ವೇಷಣಾಸಹಿಷ್ಣುತ್ವಾತ್ । ತತ್ಕಥಮಿತ್ಯಾಹ–

**ಸೇಯಂ ಭ್ರಾನ್ತಿರ್ನಿರಾಲಮ್ಬಾ ಸರ್ವನ್ಯಾಯವಿರೋಧಿನೀ ।**
**ಸಹತೇ ನ ವಿಚಾರಂ ಸಾ ತಮೋ ಯದ್ವದ್ದಿವಾಕರಮ್ ॥೬೬॥**

(ಅರ್ಥ)

''ಇಲ್ಲಿ ಕಾರಣವನ್ನು ಹುಡುಕಬೇಕಾದದ್ದಿಲ್ಲ'' ಎಂದು ಹೇಳಿದ್ದಾಯಿತಷ್ಟೆ. ಅದೇಕೆ ? ಎಂದು ಆಕ್ಷೇಪಿಸಿದ್ದಕ್ಕೆ ಪರಿಹಾರವನ್ನು ಹೇಳುತ್ತಾರೆ : ಏಕೆಂದರೆ (ಅದು) ಅನ್ವೇಷಣೆಯನ್ನು ತಡೆದುಕೊಳ್ಳುವಂತಿಲ್ಲವಾದ್ದರಿಂದ ಅದು ಹೇಗೆ ? ಎಂದರೆ ಹೇಳುತ್ತಾರೆ :

1. ತಾನೇ ಇಲ್ಲದ ಅವಿದ್ಯೆಯು ನಿವರ್ತಕವಾಕ್ಯವನ್ನಪೇಕ್ಷಿಸುತ್ತದೆ ಎಂಬುದು ಹೇಗೆ ?- ಎಂಬ ಆಕ್ಷೇಪಕ್ಕೆ ಪರಿಹಾರವಿದು. ದೃಷ್ಟಾಂತದಲ್ಲಿ ಹತ್ತನೆಯವನು ನೀನೆಂಬ ವಾಕ್ಯೋಪದೇಶವು ಹೇಗೆ ಕಾರಣವಿಲ್ಲದೆ ಬೇಕಾಯಿತೋ ಹಾಗೆ ಎಂದರ್ಥ.

೬೬. ಆ ಈ ಭ್ರಾಂತಿಯು ನಿರ್ವಿಷಯವಾಗಿರುತ್ತದೆ. ಎಲ್ಲಾ ಯುಕ್ತಿಗೂ ವಿರುದ್ಧವಾಗಿರುತ್ತದೆ. ಇದು ಕತ್ತಲೆಯ ಸೂರ್ಯನನ್ನು (ಸಹಿಸಲಾರದೆ ಇರು)ವಂತೆ ವಿಚಾರವನ್ನು ತಡೆದುಕೊಳ್ಳಲಾರದೆ ಇರುತ್ತದೆ[1].

(ಮೂಲ)

ತಸ್ಯಾಃ ಖಲ್ವಸ್ಯಾ ಅವಿದ್ಯಾಯಾ ಭ್ರಾನ್ತೇಃ ಸಮ್ಯಗ್ಜ್ಞಾನೋತ್ಪತ್ತಿ ದ್ವಾರೇಣ ನಿವೃತ್ತಿಃ–

**ಬುಭುತ್ಸೋಚ್ಛೇದಿನೀ ಚಾಸ್ಯ ಸದಸೀತ್ಯಾದಿನಾ ದೃಢಮ್ ।**
**ಪ್ರತೀಚಿ ಪ್ರತಿಪತ್ತಿಃ ಸ್ಯಾನ್ನಾಸೌ ಮಾನಾನ್ತರಾದ್ ಭವೇತ್ ॥೬೭॥**

(ಅರ್ಥ)

ಆ ಈ ಅವಿದ್ಯೆಯೆಂಬ ಭ್ರಾಂತಿಗೆ ಸಮ್ಯಗ್ಜ್ಞಾನದಮೂಲಕ ನಿವೃತ್ತಿಯು :

೬೭. ಇವನ ಜಿಜ್ಞಾಸೆಯನ್ನು ನಾಶಗೊಳಿಸುವ[2] ಜ್ಞಾನವು ಸತ್ತೇ (ನೀನಾ)ಗಿರುವೆ ಎಂದು ಮುಂತಾದ (ವಾಕ್ಯ)ದಿಂದ ದೃಢವಾಗಿ ಪ್ರತ್ಯಗಾತ್ಮನಲ್ಲಿ ಉಂಟಾಗುತ್ತದೆ. ಇದು ಮತ್ತೊಂದು ಪ್ರಮಾಣದಿಂದ ಆಗಲಾರದು.

(ಮೂಲ)

ಕಥಂ ಪುನರ್ವಾಕ್ಯಂ ಪ್ರತಿಪಾದಯತ್ಯೇವೇತಿ ಚೇತ್ ದೃಷ್ಟಾನ್ತೋಕ್ತಿಃ –

**ಜಿಜ್ಞಾಸೋರ್ದಶಮಂ ಯದ್ವನ್ನವಾತಿಕ್ರಮ್ಯ ತಾಮ್ಯತಃ ।**
**ತ್ವಮೇವ ದಶಮೋಽಸೀತಿ ಕುರ್ಯಾದೇವಂ ಪ್ರಮಾಂ ವಚಃ ॥೬೮॥**

(ಅರ್ಥ)

ಇನ್ನು ವಾಕ್ಯವು (ತನ್ನ ಅರ್ಥವನ್ನು) ತಿಳಿಸಿಯೇತೀರುವದೆಂಬುದು ಹೇಗೆ[3] ?- ಎಂದರೆ (ಆದಕ್ಕೆ ಇದು) ದೃಷ್ಟಾಂತೋಕ್ತಿ :

---

1. ಇಲ್ಲದ ಅವಿದ್ಯೆಯು ತೋರುವದು ಹೇಗೆ ? ತಮಃಸ್ವಭಾವದ್ದಾಗಿದ್ದು ಪ್ರಕಾಶರೂಪನಾದ ಆತ್ಮನನ್ನು ಆಶ್ರಯವಿಷಯಗಳಾಗಿ ಅವಲಂಬಿಸುವದು ಹೇಗೆ ? ಅನಾತ್ಮಗಳನ್ನು ಹುಟ್ಟಿಸುವದು ಹೇಗೆ ? ನಿತ್ಯನಿವೃತ್ತವಾಗಿದ್ದರೂ ಅದರ ನಿವೃತ್ತಿ ಹೇಗೆ ?- ಮುಂತಾದ ವಿಚಾರದ ಹೊಡೆತವನ್ನು ತಡೆಯದೆ ಇರುವದು ಅದರ ಸ್ವಭಾವ ಎಂದು ಅಭಿಪ್ರಾಯ.

2. ಪೂರೈಸುವ.  3. ಅಬೋಧಕತ್ವವಿಲ್ಲವೆಂಬುದು ಹೇಗೆ ?

೬೮. ಹತ್ತನೆಯವನನ್ನು ಅರಿತುಕೊಳ್ಳಬೇಕೆನ್ನುತ್ತಿರುವವನಾಗಿ ಒಂಬತ್ತು ಜನರನ್ನು ಮೀರಿ ಸಂಕಟಪಡುತ್ತಿರುವವನಿಗೆ 'ನೀನೇ ಹತ್ತನೆಯವನಾಗಿರುವೆ' ಎಂಬ ವಾಕ್ಯವು ಹೇಗೆ ಪ್ರಮೆಯನ್ನುಂಟುಮಾಡುವದೋ ಹಾಗೆ (ಈ ವಾಕ್ಯವೂ ಮಾಡುತ್ತದೆ).

(ಮೂಲ)

ಸಾ ಚ ತತ್ತ್ವಮಸ್ಯಾದಿವಾಕ್ಯಶ್ರವಣಜಾ ಪ್ರಮಾ ಉತ್ಪನ್ನತ್ವಾದೇವ ನ ಚ 'ನೈವಮ್' ಇತಿ ಪ್ರತ್ಯಯಾನ್ತರಂ ಜಾಯತೇ । ತದೇತತ್ ದೃಷ್ಟಾನ್ತೇನ ಪ್ರತಿಪಾದಯತಿ–

**ದಶಮೋಽಸೀತಿ ವಾಕ್ಯೋತ್ಥಾ ನ ಧೀರಸ್ಯ ವಿಹನ್ಯತೇ ।**
**ಆದಿಮಧ್ಯಾವಸಾನೇಷು ನ ನವಸ್ವಸ್ಯ ಸಂಶಯಃ ॥೬೯॥**
**ಏವಂ ತತ್ತ್ವಮಸೀತ್ಯಸ್ಮಾದ್ದ್ವೈತನುತ್ ಪ್ರತ್ಯಗಾತ್ಮನಿ ।**
**ಸಮ್ಯಗ್ಜ್ಞಾತತ್ವಮರ್ಥಸ್ಯ ಜಾಯೇತೈವ ಪ್ರಮಾ ದೃಢಾ ॥೭೦॥**

(ಅರ್ಥ)

ಆ ತತ್ತ್ವಮಸ್ಯಾದಿವಾಕ್ಯದಿಂದುಂಟಾದ (ಜ್ಞಾನವು) ಉಂಟಾದದ್ದರಿಂದಲೇ ಪ್ರಮೆಯು. '(ಇದು) ಹೀಗಲ್ಲ' ಎಂಬ ಮತ್ತೊಂದು ಜ್ಞಾನವು ಉಂಟಾಗುವದಿಲ್ಲ[1]. ಆ ಇದನ್ನು ದೃಷ್ಟಾಂತದಿಂದ ತಿಳಿಸಿಕೊಡುತ್ತಾರೆ :

೬೯-೭೦. 'ಹತ್ತನೆಯವನಾಗಿದೀಯೆ' ಎಂಬ ವಾಕ್ಯದಿಂದುಂಟಾದ ಇವನ ಬುದ್ಧಿಯ ಮೊದಲು, ನಡುವೆ, ಕೊನೆಗಳಲ್ಲಿ ಬಾಧಿತವಾಗುವದಿಲ್ಲ[2]. ಒಂಬತ್ತು (ಜನ ಹುಡುಗರ ವಿಷಯದಲ್ಲಿ) ಸಂಶಯವೂ ಆಗುವದಿಲ್ಲ[3]. ಇದರಂತೆ ''ಅದೇ ನೀನಾಗಿರುವೆ'' ಎಂಬೀ (ವಾಕ್ಯ)ದಿಂದ ತ್ವಮರ್ಥವನ್ನು ಚೆನ್ನಾಗಿ ಅರಿತುಕೊಂಡಿರುವವನಿಗೆ[4] ಪ್ರತ್ಯಗಾತ್ಮನಲ್ಲಿ ದ್ವೈತವನ್ನು ಕಳೆಯುವ

1. ವಿಪರೀತಬೋಧಕತ್ವವೂ ಅಲ್ಲ.

2. ಮೊದಲೂ ಈಗಲೂ ಮುಂದೆಯೂ ನಾನು ಹತ್ತನೆಯವನೇ ಎಂದು ಅರಿವಾಗುತ್ತದೆ.

3. ಒಂಬತ್ತು ಜನ ಹುಡುಗರಲ್ಲಿ ಯಾರಾದರೊಬ್ಬನು ಹತ್ತನೆಯವನಾಗಿದ್ದಾನೊ ಹೇಗೆ ? ಎಂಬ ಸಂಶಯವಿಲ್ಲ.

4. ಅನ್ವಯವ್ಯತಿರೇಕದಿಂದ ತ್ವಂಪದಾರ್ಥವನ್ನು ಶೋಧನೆಮಾಡಿಕೊಂಡಿರುವವನಿಗೆ.

ಗಟ್ಟಿಯಾದ ಪ್ರಮೆಯು (ಅವಶ್ಯವಾಗಿ) ಉಂಟಾಗಿಯೇತೀರುತ್ತದೆ.

(ಮೂಲ)

ಪ್ರತ್ಯಗಾತ್ಮನಿ ಪ್ರಮಾ ಉಪಜಾಯತ ಇತ್ಯುಕ್ತಮ್ । ತತ್ರ ಚೋದ್ಯತೇ । ಕಿಂ ಯಥಾ ಘಟಾದಿಪ್ರಮೇಯವಿಷಯಾ ಪ್ರಮಾ ಕರ್ತ್ರಾದಿ ಕಾರಕಭೇದಾನಪಹ್ನವೇನ ಜಾಯತೇ ತಥೈವ, ಉತ ಅಶೇಷಕಾರಕ ಗ್ರಾಮೋಪಮರ್ದೇನ ಕರ್ತುಃ ಪ್ರತ್ಯಗಾತ್ಮನಿ ಇತಿ ? ಉಚ್ಯತೇ–

ಪ್ರತ್ಯಕ್ತಾಸ್ಯ ಸ್ವತೋರೂಪಂ ನಿಷ್ಕ್ರಿಯಾಕಾರಕಾಫಲಮ್ ।
ಅದ್ವಿತೀಯಂ ತದಿದ್ಧಾ ಧೀಃ ಪ್ರತ್ಯಗಾತ್ಮೇವ ಲಕ್ಷ್ಯತೇ ॥೭೧॥

(ಅರ್ಥ)

(ಪ್ರಶ್ನೆ) :- ಪ್ರತ್ಯಗಾತ್ಮನಲ್ಲಿ ಪ್ರಮೆಯುಂಟಾಗುತ್ತದೆ ಎಂದು ಹೇಳಿದೆ(ಯಷ್ಟೆ). ಅಲ್ಲಿ ಆಕ್ಷೇಪಿಸುತ್ತಾರೆ, (ಹೇಗೆಂದರೆ) : ಗಡಿಗೆಯೇ ಮುಂತಾದದ್ದರ ವಿಷಯದ ಪ್ರಮೆಯು ಹೇಗೆ ಕರ್ತ್ರಾದಿಕಾರಕಭೇದವನ್ನು ಅಲ್ಲಗಳೆಯದೆ ಉಂಟಾಗುತ್ತದೆಯೋ ಹಾಗೇ (ಉಂಟಾಗುತ್ತದೆಯೊ), ಅಥವಾ ಎಲ್ಲಾ ಕಾರಕಗ್ರಾಮವನ್ನೂ ನಾಶಗೊಳಿಸಿ ಕರ್ತೃವಿಗೆ ಪ್ರತ್ಯಗಾತ್ಮನಲ್ಲಿ (ಪ್ರಮೆ)ಯುಂಟಾಗುವದೊ ? [1]

೭೧. ಈ (ಆತ್ಮನಿಗೆ) ಕ್ರಿಯಾಕಾರಕಫಲಗಳಿಲ್ಲದ ಅದ್ವಿತೀಯವಾದ ಪ್ರತ್ಯಕ್ತ್ವವು ಸ್ವತಃ ಇರುವ ರೋಪವು ; ಅವನಿಂದ ದೀಪ್ತವಾಗಿರುವ [2] ಬುದ್ಧಿಯು ಪ್ರತ್ಯಗಾತ್ಮನಂತೆ ಕಾಣುತ್ತಿರುತ್ತದೆ [3].

---

1. ಕಾರಕಗಳೆಲ್ಲವೂ ಉಳಿದುಕೊಂಡಿದ್ದರೆ ಅದ್ವೈತಸಿದ್ಧಿಯಿಲ್ಲ, ಪ್ರಮಾಣ ಪ್ರಮೇಯಪ್ರಮಾತೃವಿಭಾಗವೂ ಹೋಗಿಬಿಟ್ಟರೆ ಪ್ರಮೆಯುಂಟಾಯಿತೆಂಬುದು ಹೇಗೆ ?- ಎಂದು ಆಕ್ಷೇಪಗರ್ಭಿತವಾದ ಪ್ರಶ್ನೆಯಿದು.

2. ಆತ್ಮನ ಚಿದಾಭಾಸಯುಕ್ತವಾಗಿರುವ ಎಂದರ್ಥ.

3. ಆದ್ದರಿಂದ ಅದಕ್ಕೆ ಮುಖ್ಯವಾದ ಪ್ರತ್ಯಗಾತ್ಮತ್ವವಿಲ್ಲ. ೩-೧೮, ೧೯ನ್ನು ನೋಡಿ. ಆದ್ದರಿಂದ ಆತ್ಮಜ್ಞಾನವಾದಾಗ ಪ್ರಮಾತ್ರಾದಿದ್ವೈತವಾಗಲಿ ಕ್ರಿಯಾಕಾರಕ ಫಲತ್ವವಾಗಲಿ ಅವಸ್ಥಾತ್ರಯವಿಭಾಗವಾಗಲಿ ಶಾಸ್ತ್ರಾಚಾರ್ಯಾದಿವಿಕಲ್ಪವಾಗಲಿ ಇರುವದಿಲ್ಲ ಎಂದು ಭಾವ. ಬೃ. ವಾ. ೧-೪-೧೪೯, ೧-೪-೨೯೮ ರಿಂದ ೩೦೧, ೨-೧-೨೬೪, ೧-೪-೬೦೪ - ಇವನ್ನು ನೋಡಿ.

(ಮೂಲ)

ಯಸ್ಮಾದೇವಮ್–

**ವಿಪಶ್ಚಿತೋಽಪ್ಯತಸ್ತಸ್ಯಾಮಾತ್ಮಭಾವಂ ವಿತನ್ವತೇ ।**
**ದವೀಯಸ್ಸ್ವಿಂದ್ರಿಯಾರ್ಥೇಷು ಕ್ಷೀಯತೇ ಹ್ಯುತ್ತರೋತ್ತರಮ್ ॥೭೨॥**

(ಅರ್ಥ)

ಹೀಗಿದೆಯಷ್ಟೆ :

೭೨. ಆದ್ದರಿಂದ ವಿವೇಕಿಗಳಾದವರುಕೂಡ ಅದರಲ್ಲಿ ಆತ್ಮಭಾವವನ್ನು ಮಾಡಿಕೊಂಡಿರುತ್ತಾರೆ[1]. ಇನ್ನೂ ದೂರವಾಗಿರುವ ಇಂದ್ರಿಯಾರ್ಥಗಳಲ್ಲಿ ಮುಂದೆಮುಂದೆ ಹೋಗುತ್ತಾ (ಆತ್ಮಭಾವವು) ಕಡಿಮೆಯಾಗುತ್ತಾ ಹೋಗುತ್ತದೆಯಲ್ಲವೆ ?[2]

## ವಾಕ್ಯದಲ್ಲಿ ಅವಿದ್ಯೋತ್ಥಕರ್ತೃತ್ವಾದಿಗಳನ್ನು ಅನುವಾದಮಾಡಿಕೊಂಡಿದೆ

(ಮೂಲ)

ಆಹ- ಯದಿ ವಾಕ್ಯಮೇವ ಯಥಾಭೂತಾರ್ಥಾವಬೋಧಕಮ್, ಅಥ ಕಸ್ಯ ಹೇತೋರವಿದ್ಯೋತ್ಥಾಪಿತಸ್ಯ ಕರ್ತೃತ್ವಾದೇರುಪದೇಶ ಇತಿ ? ಉಕ್ತೇ ಪ್ರತಿವಿಧೀಯತೇ –

---

1. ಆದ್ದರಿಂದಲೇ ಪ್ರಮಾತೃಪ್ರಮಾಣಪ್ರಮೇಯವಿಭಾಗವು ಸತ್ಯವೆಂದೇ ತೋರುತ್ತದೆ. 'ಇದಂ ತತ್ ಪಾಣ್ಡಿತ್ಯಂ ಯತ್ ಕ್ಷೇತ್ರೇ ಏವಾತ್ಮದರ್ಶನಮ್' (ಗೀ.ಭಾ. ೧೩-೨) ಗೀತಾಭಾಷ್ಯದ ಅಭಿಪ್ರಾಯವಿದು.

2. ಆತ್ಮಚೈತನ್ಯಾಭಾಸವು ಬುದ್ಧಿಮನಇನ್ದ್ರಿಯದೇಹಾದಿಗಳಲ್ಲಿಯೂ ಇದೆ ಎಂಬುದು ಸಮಾನವಾಗಿದೆಯಾದರೂ ವ್ಯವಧಾನತಾರತಮ್ಯದಿಂದ ಅವುಗಳಲ್ಲಿ ಆತ್ಮಬುದ್ಧಿಯು ಇಷ್ಟಿಷ್ಟು ಕಡಿಮೆಯಾಗುತ್ತಾ ಹೋಗುತ್ತದೆ ಎಂದರ್ಥ. ಇದರಿಂದ ಅಂತಃಕರಣದಲ್ಲಿಯೂ ಭ್ರಾಂತಿಯಿಂದ ಆತ್ಮಬುದ್ಧಿಯನ್ನು ಮಾಡಿಕೊಂಡಿರುವದರಿಂದಲೇ ಪ್ರಮಾತೃತ್ವವು ತೋರುತ್ತದೆ ಎಂದು ಊಹಿಸಬಹುದು ಎಂದು ಭಾವ.

**ಭ್ರಾನ್ತಿಸಿದ್ಧಮನೂದ್ಯಾರ್ಥಂ ತತ್ತತ್ತ್ವಂ ಭ್ರಾನ್ತಿಬಾಧಯಾ ।**
**ಅಯಂ ನೇತ್ಯುಪದಿಶ್ಯೇತ ಯಥೈವಂ ತತ್ತ್ವಮಿತ್ಯಪಿ ॥೭೩॥**

(ಅರ್ಥ)

(ಆಕ್ಷೇಪ) :- ವಾಕ್ಯವೇ ಪರಮಾರ್ಥವಾದ (ಆತ್ಮ)ವಸ್ತುವನ್ನು ತಿಳಿಸುತ್ತದೆ ಎಂದಾದರೆ[1], ಆಗ ಅವಿದ್ಯೆಯಿಂದ ಎದ್ದುಕೊಂಡಿರುವ ಕರ್ತೃತ್ವಾದಿಗಳನ್ನು ಉಪದೇಶಮಾಡಿರುವದು ಏಕೆ ?[2]

(ಪರಿಹಾರ) :- (ಹೀಗೆ) ಹೇಳಿದ್ದಕ್ಕೆ ಸಮಾಧಾನವನ್ನು ಹೇಳುತ್ತಾರೆ :

೭೩. ಭ್ರಾಂತಿಪ್ರಸಿದ್ಧಿಯಿಂದ (ತೋರುವ) ಅರ್ಥವನ್ನು ಅನುವಾದ ಮಾಡಿಕೊಂಡು ಭ್ರಾಂತಿಯನ್ನು ಬಾಧಿಸುವದರಿಂದ ಅದರ ತತ್ತ್ವವನ್ನು '(ಅದು) ಇದಲ್ಲ' ಎಂದು ಹೇಗೆ (ಲೋಕದಲ್ಲಿ) ಉಪದೇಶಮಾಡುತ್ತಾರೋ 'ಅದು ನೀನು' ಎಂಬ (ವಾಕ್ಯ)ವೂ ಹಾಗೆಯೇ[3].

(ಮೂಲ)

ಇಮಮರ್ಥಂ ದೃಷ್ಟಾನ್ತೇನ ಬುದ್ಧೌ ಆರೋಹಯತಿ –

**ಸ್ಥಾಣುಃ ಸ್ಥಾಣುರಿತೀವೋಕ್ತಿರ್ನ ನೃಬುದ್ಧಿಂ ನಿರಸ್ಯತಿ ।**
**ವ್ಯನುವಾದಾತ್ ತಥೈವೋಕ್ತಿರ್ಭ್ರಾನ್ತಿಂ ಪುಂಸೋ ನ ಬಾಧತೇ ॥೭೪॥**

(ಅರ್ಥ)

ಈ ಅರ್ಥವನ್ನು ದೃಷ್ಟಾಂತದಿಂದ ಬುದ್ಧಿಗೆ ಹತ್ತುವಂತೆ ಮಾಡುತ್ತಾರೆ :

೭೪. 'ಮೋಟುಮರವು ಮೋಟುಮರವೇ' ಎಂಬ ವಾಕ್ಯವು ಪುರುಷ (ನೆಂಬ) ಬುದ್ಧಿಯನ್ನು ಹೇಗೆ ತೊಲಗಿಸಲಾರದೋ ಹಾಗೆಯೇ (ಭ್ರಾಂತಿ ಸಿದ್ಧವಾದದ್ದರ) ಅನುವಾದವಿಲ್ಲದ್ದರಿಂದ (ಈ) ವಾಕ್ಯವು ಪುರುಷನ ಭ್ರಾಂತಿಯನ್ನು ಬಾಧಿಸಲಾರದು[4].

---

1. ಪ್ರತ್ಯಕ್ಷಾದಿಗಳು ಹೇಳುವ ಕರ್ತೃತ್ವಾದಿಗಳು ಭ್ರಾಂತಿಸಿದ್ಧವೇ ಎಂದಾದರೆ ಎಂದರ್ಥ.

2. ವಾಕ್ಯವು ಉಪದೇಶಮಾಡಿದ್ದೆಲ್ಲವೂ ಸತ್ಯವಾಗಿರಬೇಡವೆ ?

3. 'ನೀನು' ಎಂದು ಕರ್ತೃತ್ವಾದಿಗಳನ್ನು ಬಾಧಿಸುವದಕ್ಕಾಗಿ ಅನುವಾದಮಾಡಿಕೊಂಡಿದೆ.

4. ಆದ್ದರಿಂದ ಅವಿದ್ಯಾಸಿದ್ಧವಾದ ಕರ್ತೃತ್ವಾದಿಗಳನ್ನು ಅನುವಾದಮಾಡಿಕೊಂಡ ಮಾತ್ರದಿಂದ ಅವು ಸತ್ಯವಾಗಬೇಕಾದದ್ದೇನೂ ಇಲ್ಲ ; ಅವು ಭ್ರಾಂತಿಸಿದ್ಧವೇ ಎಂಬುದಕ್ಕೆ ಮೇಲೆ ಹೇಳಿದ ಯುಕ್ತಿಯಿದೆ - ಎಂದು ಭಾವ.

(ಮೂಲ)

ಯಸ್ಮಾತ್ ಶ್ರೋತೃಪ್ರಸಿದ್ಧಾನುವಾದ್ಯೇವ ತ್ವಮಿತಿಪದಮ್, ತಸ್ಮಾತ್ ಉದ್ದಿಶ್ಯಮಾನಸ್ಥತ್ವಾದ್ದುಃಖಿತ್ವಾದೇಃ ಅವಿವಕ್ಷಿತತ್ವಮೇವ । ವಿಧೀಯಮಾನತ್ವೇ ಹಿ ಸತಿ ವಿರೋಧಪ್ರಸಙ್ಗಃ, ನ ತು ವಿಧೀಯಮಾನಾನೂದ್ಯಮಾನಯೋಃ ಇತಿ । ಸ್ವಪ್ರಧಾನಯೋರ್ಹಿ ಪದಯೋರ್ವಿರೋಧಾಶಙ್ಕಾ, ಸಾಮಾನ್ಯಾಲಿಙ್ಗಿತತ್ವಾತ್ ತಯೋರ್ನ ವಿಪರ್ಯಯೇ –

ಅನಾಲಿಙ್ಗಿತಸಾಮಾನ್ಯೌ ನ ಜಿಹಾಸಿತವಾದಿನೌ ।
ವೃತ್ತಿಸ್ಥೌ ತತ್ತ್ವಮೌ ತಸ್ಮಾದನ್ಯೋನ್ಯಾಭಿಸಮೀಕ್ಷಣೌ ॥೭೫॥

(ಅರ್ಥ)

ತ್ವಂಪದವು ಶ್ರೋತೃವಿಗೆ ಪ್ರಸಿದ್ಧವಾಗಿರುವದನ್ನು ಅನುವಾದಮಾಡತಕ್ಕದ್ದೇ ಆಗಿರುವದಷ್ಟೆ [1]. ಆದ್ದರಿಂದ ಉದ್ದಿಶ್ಯಮಾನವಾಗಿರುವದರಲ್ಲಿರುವದರಿಂದ [2] ದುಃಖಿತ್ವವೇ ಮುಂತಾದದ್ದು ಅವಿವಕ್ಷಿತವೇ [3]. ಅದು ವಿಧೇಯವಾಗಿದ್ದರಲ್ಲವೆ, ವಿರೋಧವಾಗುವದೆಂಬ ಪ್ರಸಕ್ತಿ ? ವಿಧೀಯಮಾನವಾಗಿರುವದಕ್ಕೂ ಅನುವಾದಮಾಡತಕ್ಕದ್ದಾಗಿಯೂ ಇರುವ (ಎರಡಕ್ಕೆ ವಿರೋಧವೇನೂ) ಇಲ್ಲವಲ್ಲ ! [4] ಪದಗಳೆರಡೂ ಸ್ವಪ್ರಧಾನವಾಗಿದ್ದರೇ ವಿರೋಧವೆಂಬ ಆಶಂಕೆಯುಂಟಾಗುತ್ತದೆ ; ಏಕೆಂದರೆ ಅವು ಸಾಮಾನ್ಯಗಳಿಂದ ಆಲಿಂಗಿತವಾಗಿರುತ್ತವೆ [5]. ಹೀಗಿಲ್ಲದಿದ್ದರೆ (ವಿರೋಧದ ಆಶಂಕೆ)ಯಿರುವದಿಲ್ಲ [6].

---

1. ಸ್ಥಾಣುಪುರುಷದೃಷ್ಟಾಂತದಲ್ಲಿ ಪುರುಷಬುದ್ಧಿಯು ಅನುವಾದಮಾಡತಕ್ಕದ್ದೇ ಆಗಿರುವಂತೆ ತ್ವಮರ್ಥವೂ ಅನುವಾದಮಾಡತಕ್ಕದ್ದೇ ಆಗಿರುತ್ತದೆ.

2. ಯಾವದನ್ನು ಉದ್ದೇಶಿಸಿ ಹೇಳಿದಯೋ ಅದರಲ್ಲಿರುವ ಗುಣವೆಲ್ಲ ವಿವಕ್ಷಿತವಾಗಿರುವದಿಲ್ಲ. ೩-೨೫ನ್ನು ನೋಡಿ.

3. ದುಃಖಿತ್ವವನ್ನು ಹೇಳಬೇಕೆಂಬ ಅಭಿಪ್ರಾಯವಿಲ್ಲ.

4. ಆದ್ದರಿಂದ ತ್ವಮರ್ಥತದರ್ಥಗಳಿಗೆ ವಿಶೇಷ್ಯವಿಶೇಷಣಭಾವವು ವಿರುದ್ಧವಲ್ಲ.

5. ಕುದುರೆಯು ಕೋಣ -ಎಂದರೆ ಸ್ವಪ್ರಧಾನವಾಗಿರುವ ಪದಗಳಿಗೆ ಸಾಮಾನಾಧಿಕರಣ್ಯವಾಗುವದು. ಆಗ ವಾಚ್ಯಾರ್ಥಗಳಾದ ಕುದುರೆಕೋಣಗಳಿಗೆ ಪರಸ್ಪರ ತಾದಾತ್ಮ್ಯವು ವಿರುದ್ಧವಾಗುವದು.

6. ಸ್ವಪ್ರಧಾನಗಳಾದ ಪದಗಳು ವಾಚ್ಯವಾದ ಸಾಮಾನ್ಯಾರ್ಥವನ್ನು ಒಂದಿಷ್ಟೂ ಬಿಡದೆ ಹೇಳುತ್ತವೆ. ಆದರೆ ದೇವದತ್ತನು ಸಿಂಹವು ಎಂಬಲ್ಲಿ ಸಿಂಹವು ಸಾಮಾನ್ಯಾರ್ಥವನ್ನು ಬಿಟ್ಟು ಶೌರ್ಯಾದಿಗಳನ್ನು ಹೇಳುವದರಿಂದ ಸಾಮಾನಾಧಿಕರಣ್ಯವು ವಿರುದ್ಧವಲ್ಲ.

೭೫. ಸಾಮಾನ್ಯವನ್ನು ಆಲಿಂಗಿಸದೆ ಇರುವದರಿಂದ ಬಿಡಬೇಕಾದದ್ದನ್ನು[1] ಹೇಳದೆ ಇದ್ದು ತತ್ತ್ವಂಪದಗಳು ಆ (ಸಾಮಾನ್ಯವನ್ನು) ಬಿಟ್ಟೆದ್ದೇ ಒಂದಕ್ಕೊಂದರ ಆಕಾಂಕ್ಷೆ ಇರುವವಾಗಿವೆ.

(ಮೂಲ)

ಅಪಾಸ್ತಸಾಮಾನ್ಯಾರ್ಥತ್ವಾತ್ ಅನುವಾದಸ್ಥತ್ವಾತ್ ವಿಧೀಯಮಾನೇನ ಚ ಸಹ ವಿರೋಧಾತ್ ದುಃಖಿತ್ವಾದೇರಸ್ತು ಕಾಮಂ ಜಿಹಾಸಿತಾರ್ಥಯೋರಸಂಸರ್ಗಃ । ಯಥೋಪನ್ಯಸ್ತದೋಷವಿರಹಾತ್ ತತ್ತ್ವಮರ್ಥಯೋಃ ಸಂಸರ್ಗೋಽಸ್ತು ನೀಲೋತ್ಪಲವದಿತಿ ಚೇತ್, ನೈವಮುಪ್ಯುಪಪದ್ಯತೇ । ಯಸ್ಮಾತ್ –

ತದರ್ಥಯೋಸ್ತು ನಿಷ್ಠಾತ್ಮಾ ದ್ವಯಪಾರೋಕ್ಷ್ಯವರ್ಜಿತಃ ।
ನಾದ್ವಿತೀಯಂ ವಿನಾತ್ಮಾನಂ ನಾತ್ಮಾ ನಿತ್ಯದೃಶಾ ವಿನಾ ॥೭೬॥

(ಅರ್ಥ)

(ಪದಗಳು) ಸಾಮಾನ್ಯಾರ್ಥವನ್ನು ಬಿಟ್ಟಿರುವದರಿಂದಲೂ (ದುಃಖಿತ್ವಾದಿಗಳು ಅನುವಾದದಲ್ಲಿರುವದರಿಂದಲೂ ವಿಧೀಯಮಾನವಾದದ್ದಕ್ಕೆ ವಿರುದ್ಧವಾಗಿರುವದರಿಂದಲೂ ದುಃಖಿತ್ವಾದಿಗಳು ಬಿಡಬೇಕಾದವುಗಳಾದ್ದರಿಂದ (ಅವಕ್ಕೆ) ಸಂಸರ್ಗವಿಲ್ಲವೆಂದಾಗಲಿ. ಈ ಹೇಳಿದ (ಯಾವ) ದೋಷವೂ ಇರುವದಿಲ್ಲವಾಗಿ ತತ್ತ್ವಂಪದಾರ್ಥಗಳಿಗೆ[2] ನೀಲೋತ್ಪಲಗಳಂತೆ[3] ಸಂಸರ್ಗವಾಗಲಿ ಎಂದರೆ ಹೀಗೂ ಆಗುವದಿಲ್ಲ. ಏಕೆಂದರೆ

೭೬. ಅವುಗಳ ಅರ್ಥಗಳಿಗಾದರೂ ದ್ವೈತಪಾರೋಕ್ಷ್ಯಗಳಿಲ್ಲದ ಆತ್ಮನೇ ನಿಷ್ಠೆಯು[4]. ಆತ್ಮನಿಲ್ಲದೆ ಅದ್ವಿತೀಯವೆಂಬುದಿರುವದಿಲ್ಲ[5];

1. ದುಃಖಿತ್ವ, ಪಾರೋಕ್ಷ್ಯ - ಇವನ್ನು.

2. ತತ್ಪದಾರ್ಥವಾದ ಅದ್ವಿತೀಯಬ್ರಹ್ಮ, ತ್ವಂಪದಾರ್ಥವಾದ ಅಪರೋಕ್ಷಪ್ರತ್ಯಗಾತ್ಮ- ಇವೆರಡಕ್ಕೂ.

3. ನೈದಿಲೆ ಕರಿಯದು- ಎಂಬಲ್ಲಿ ನೈದಿಲೆ, ಕಪ್ಪು- ಎಂಬ ಎರಡರ್ಥಗಳೂ ಒಂದಕ್ಕೊಂದು ಸಂಬದ್ಧವಾಗಿರುವಂತೆ.

4. ತತ್ಪದದ ಅರ್ಥವೂ ಅದ್ವಿತೀಯಾಪರೋಕ್ಷಾತ್ಮನೇ, ತ್ವಂಪದದ ಅರ್ಥವೂ ಅದ್ವಿತೀಯಾಪರೋಕ್ಷಾತ್ಮನೇ ; ಇಲ್ಲಿ ಎರಡು ಅರ್ಥಗಳೇ ಇಲ್ಲ. ಒಂದೇ ಅರ್ಥವಿದೆ. ಸಂಸರ್ಗಕ್ಕೆ ಅವಕಾಶವೆಲ್ಲಿ ?

5. ಏಕೆಂದರೆ ಆತ್ಮನಲ್ಲದ ಅನಾತ್ಮವು ಸದ್ವಿತೀಯವಾಗಿಯೇ ಇರುತ್ತದೆ.

ಆತ್ಮನು ನಿತ್ಯದೃಷ್ಟಿಯುಳ್ಳ (ಅದ್ವಿತೀಯಬ್ರಹ್ಮ)ಕ್ಕಿಂತ ಬೇರೆಯಾಗಿರುವದಿಲ್ಲ[1].

(ಮೂಲ)

**ಅತ್ರಾಹ – ಕಿಮಿಹ ಜಿಹಾಸಿತಂ ಕಿಂ ವಾ ಉಪಾದಿತ್ಸಿತಮ್ ಇತಿ ? ಉಚ್ಯತೇ । ಪ್ರತ್ಯಗರ್ಥಾತ್ಮಾಭಿಧಾಯಿನಸ್ತ್ವಂಪದಾತ್ ಉಭಯಂ ಪ್ರತೀಯತೇ ಅಹಂ ದುಃಖೀ, ಪ್ರತ್ಯಗಾತ್ಮಾ ಚ । ತತ್ರ ಚ ಪ್ರತ್ಯಗಾತ್ಮನಃ 'ಅಹಂ ದುಃಖೀ'ತ್ಯನೇನ ಅಭಿಸಂಬನ್ಧಃ ಆತ್ಮಯಾಥಾತ್ಮ್ಯಾನವಬೋಧ ಹೇತುಕ ಏವ । ಅತಃ ಅಹಮರ್ಥಃ ಅನರ್ಥೋಪಸೃಷ್ಟತ್ವಾತ್, ಅಜ್ಞಾನೋತ್ಥತ್ವಾಚ್ಚ ಹೇಯಃ ಇತಿ ಪ್ರತ್ಯಕ್ಷತೋಽವಸೀಯತೇ । ತದರ್ಥೇ ಕಿಂ ಹೇಯಮ್, ಕಿಂ ವಾ ಉಪಾದೇಯಮ್ ಇತಿ ನಾವಧ್ರಿಯತೇ । ತತ ಇದಮಭಿಧೀಯತೇ–**

**ಪಾರೋಕ್ಷ್ಯಂ ಯತ್ ತದರ್ಥೇ ಸ್ಯಾತ್ ತದ್ಧೇಯಮಹಮರ್ಥವತ್ ।**
**ಪ್ರತೀಚೇವಾಹಮೋಽಭೇದಃ ಪಾರೋಕ್ಷ್ಯೇಣಾತ್ಮನೋಽಪಿ ಮೇ ॥**

(ಅರ್ಥ)

ಇಲ್ಲಿ (ಆಕ್ಷೇಪಕನು) ಕೇಳುತ್ತಾನೆ : ಇಲ್ಲಿ ಬಿಡತಕ್ಕದ್ದು ಯಾವದು, ತೆಗೆದುಕೊಳ್ಳತಕ್ಕದ್ದು ಯಾವದು ?

(ಪರಿಹಾರ) :- ಹೇಳುತ್ತೇವೆ. ಪ್ರತ್ಯಗಾತ್ಮನೆಂಬ ಅರ್ಥವನ್ನು ಹೇಳುವ ತ್ವಂಪದದಿಂದ ನಾನು ದುಃಖಿ, ಪ್ರತ್ಯಗಾತ್ಮ- ಎಂಬ ಎರಡೂ ತೋರುತ್ತದೆ. ಅವುಗಳಲ್ಲಿ ಪ್ರತ್ಯಗಾತ್ಮನಿಗೆ ''ನಾನು ದುಃಖಿ'' ಎಂಬಿದರೊಡನೆ ಸಂಬಂಧವು ಆತ್ಮತತ್ತ್ವವನ್ನು ತಿಳಿಯದ್ದರಿಂದಲೇ[2]. ಆದ್ದರಿಂದ ಅನರ್ಥದ ಸಂಬಂಧವುಳ್ಳವಾದ್ದರಿಂದಲೂ ಅಜ್ಞಾನದಿಂದ ಉಂಟಾದದ್ದಾದ್ದರಿಂದಲೂ ಅಹಮರ್ಥವು[3] ಬಿಡತಕ್ಕದ್ದು ಎಂದು ಪ್ರತ್ಯಕ್ಷದಿಂದಲೇ ನಿಶ್ಚಿತವಾಗುತ್ತದೆ.

---

1. ಏಕೆಂದರೆ ನಿತ್ಯದೃಷ್ಟಿಯುಳ್ಳವನಲ್ಲದಿದ್ದರೆ ದೃಷ್ಟಿ (ಚೈತನ್ಯ)ವಿಲ್ಲದ್ದು ಅನಾತ್ಮವೇ ಆಗಿಬಿಡುತ್ತದೆ. ಆದ್ದರಿಂದ ಆತ್ಮ, ಸದ್ಬ್ರಹ್ಮ - ಇವೆರಡೂ ಒಂದೇ ಪದಾರ್ಥವಾದ್ದರಿಂದ ಸಂಸರ್ಗದ ಶಂಕೆಗೆ ಅವಕಾಶವಿಲ್ಲ.

2. ನಾನು ದುಃಖಿ ಎಂಬುದನ್ನು ನೋಡುತ್ತಿರುವ ಸಾಕ್ಷಿಯೇ ನಿಜವಾದ ಪ್ರತ್ಯಗಾತ್ಮನೆಂಬುದು ತಿಳಿಯದ್ದರಿಂದ ನಾನು, ಬ್ರಹ್ಮ- ಇವು ಎರಡೆಂಬ ಭ್ರಾಂತಿಯಾಗಿದೆ.

3. ಅಹಂಕಾರವು, ನಾನು ದುಃಖಿ ಎಂಬುದು.

ತತ್ಪದಾರ್ಥದಲ್ಲಿ ಯಾವದು ಬಿಡತಕ್ಕದ್ದು ಅಥವಾ ಯಾವದು ತೆಗೆದುಕೊಳ್ಳದ್ದು ಎಂದು ಗೊತ್ತಾಗಿರುವದಿಲ್ಲ. ಆದ್ದರಿಂದ ಇದನ್ನು ಹೇಳುತ್ತಾರೆ :

೭೭. ತದರ್ಥದಲ್ಲಿ ಪರೋಕ್ಷತ್ವವೆಂಬುದಿದೆಯಲ್ಲ ಅದು, (ತ್ವಂ ಪದಾರ್ಥದಲ್ಲಿ) ನಾನು (ದುಃಖಿ ಎಂಬ) ಅರ್ಥದಂತೆಯೇ ಬಿಡತಕ್ಕದ್ದು. ಪ್ರತ್ಯಗಾತ್ಮನೊಡನೆ ನಾನು ಎಂಬುದಕ್ಕೆ ಹೇಗೆ ಅಭೇದವೋ ಆತ್ಮನಾಗಿಯೇ ಇದ್ದುಕೊಂಡಿರುವ ನನಗೆ ಪರೋಕ್ಷತ್ವದೊಡನೆಯೂ (ಹಾಗೆಯೇ)[1].

(ಮೂಲ)

ಕಥಂ ಪುನಸ್ತದರ್ಥೋಽದ್ವಿತೀಯಲಕ್ಷಣಃ ಪ್ರತ್ಯಗಾತ್ಮೋಪಾಶ್ರಯಂ ಸದ್ವಿತೀಯತ್ವಂ ದುಃಖಿತ್ವಂ[2] ನಿರನ್ವಯಮ್ ಅಪನುದತೀತಿ ? ಉಚ್ಯತೇ । ನ ಚೈತಯೋರ್ನಿವರ್ತಕನಿವರ್ತ್ಯಭಾವಂ ವಯಂ ಬ್ರೂಮಃ । ಕಥಂ ತರ್ಹಿ, ತ್ವಮರ್ಥೇ ಪ್ರತ್ಯಗಾತ್ಮನಿ ಪ್ರಾಕ್ ಅನವಬುದ್ಧಾ ಅದ್ವಿತೀಯತಾ । ಸಾ ಅನೇನ ಅವಬೋಧ್ಯತೇ । ಅತಃ ಅನವಬೋಧನಿರಾಸೇನ ತದುತ್ಥಸ್ಯ ಸದ್ವಿತೀಯತ್ವಸ್ಯ ತ್ವಮರ್ಥಸ್ಯ, ಪರೋಕ್ಷತ್ವಸ್ಯ ಚ ತದರ್ಥಸ್ಥಸ್ಯ ನಿರಸನಾತ್ ನ ವೈಯಧಿಕರಣ್ಯಾದಿಚೋದ್ಯಸ್ಯ ಅವಸರೋಽಸ್ತೀತಿ । ತದಿದಮಭಿಧೀಯತೇ ।

ತತ್ತ್ವಮರ್ಥೇನ ಸಂಪೃಕ್ತೋ ನಾನಾತ್ವಂ ವಿನಿವರ್ತಯೇತ್ ।
ನಾಪರಿತ್ಯಕ್ತಪಾರೋಕ್ಷ್ಯಂ ತ್ವಂ ತದರ್ಥಂ ಸಿಸೃಪ್ಸತಿ ॥೭೮॥

(ಅರ್ಥ)

(ಆಕ್ಷೇಪ) :- ತದರ್ಥವಾದ ಅದ್ವಿತೀಯತ್ವವು ಪ್ರತ್ಯಗಾತ್ಮನಲ್ಲಿರುವ ಸದ್ವಿತೀಯತ್ವವನ್ನೂ ದುಃಖಿತ್ವವನ್ನೂ[3] ಸ್ವಲ್ಪವೂ ಅಳಿಯದಂತೆ ನಾಶಗೊಳಿಸುತ್ತದೆಯೆಂಬುದು ಹೇಗೆ ?

---

1. ಪ್ರತ್ಯಗಾತ್ಮನಲ್ಲಿ ಅಹಂಕಾರವು ಇಲ್ಲವೇ ಇಲ್ಲ ; ಅಜ್ಞಾನದಿಂದ ಅವನಲ್ಲಿ ಅಧ್ಯಸ್ತವಾಗಿ ಪ್ರತ್ಯಗಾತ್ಮನೇ ಅಹಂಪ್ರತ್ಯಯಗಮ್ಯನೆಂಬ ಅಭಿಪ್ರಾಯವನ್ನುಂಟು ಮಾಡುತ್ತದೆ. ತತ್ಪದಾರ್ಥವಾದ ಸತ್ತು ನಮ್ಮ ಆತ್ಮನೇ ಆಗಿರುವದರಿಂದ ಅದು ಪರೋಕ್ಷವೆಂಬುದೂ ಹೀಗೆಯೇ ಅಜ್ಞಾನದಿಂದ ತೋರತಕ್ಕದ್ದು.

2. ಇಲ್ಲಿ ಒಂದು 'ಚ' ಇದ್ದರೆ ಚೆನ್ನಾಗಿರುವದು.

3. ಪ್ರತ್ಯಗಾತ್ಮನಲ್ಲಿ ಸದ್ವಿತೀಯತ್ವವೂ ದುಃಖಿತ್ವವೂ ಮೊದಲು ಇದ್ದುಕೊಂಡಿದ್ದು ತತ್ಪದಾರ್ಥದಲ್ಲಿರುವ ಅದ್ವಿತೀಯತ್ವದಿಂದ ತೊಲಗಿಸಲ್ಪಡುವದೆಂದು ಪೂರ್ವಪಕ್ಷಿಯ ತಪ್ಪುಕಲ್ಪನೆ.

(ಪರಿಹಾರ) :- (ಇದಕ್ಕೆ) ಹೇಳುತ್ತೇವೆ. ಇವೆರಡಕ್ಕೂ ನಿವರ್ತಕ ನಿವರ್ತ್ಯಭಾವವನ್ನೇನೂ ನಾವು ಹೇಳುತ್ತಿಲ್ಲ [1], ಮತ್ತೇನೆಂದರೆ ಪ್ರತ್ಯಗಾತ್ಮನಲ್ಲಿ ಮೊದಲು ತಿಳಿಯಬರದೆ ಇದ್ದ ಅದ್ವಿತೀಯತ್ವವಿದೆಯಲ್ಲ, ಅದನ್ನು ಈ (ತತ್ಪದಾರ್ಥದಲ್ಲಿರುವ ಅದ್ವಿತೀಯತ್ವವು) ತಿಳಿಸಿಕೊಡುತ್ತದೆ. [2] ಆದ್ದರಿಂದ ಅಜ್ಞಾನವನ್ನು ತೆಗೆದುಹಾಕುವದರಿಂದ ಅದರಿಂದುಂಟಾಗಿದ್ದ ತ್ವಮರ್ಥದಲ್ಲಿದ್ದ ಸದ್ವಿತೀಯತ್ವವನ್ನೂ, ತದರ್ಥದಲ್ಲಿರುವ ಪರೋಕ್ಷತ್ವವನ್ನೂ [3] ತೊಲಗಿಸುವದರಿಂದ ವೈಯಧಿಕರಣ್ಯವೇ ಮುಂತಾದ ಆಕ್ಷೇಪಕ್ಕೆ ಅವಕಾಶವಿರುವದಿಲ್ಲ [4] ಎನ್ನುತ್ತೇವೆ. ಆ ಇದನ್ನು (ಮುಂದಿನ ಶ್ಲೋಕದಲ್ಲಿ) ಹೇಳಿರುತ್ತದೆ :

---

1. ತತ್ಪದಾರ್ಥದಲ್ಲಿರುವ ಅದ್ವಿತೀಯತ್ವವು ನಿವರ್ತಕವು, ತ್ವಂಪದಾರ್ಥದಲ್ಲಿರುವ ಸದ್ವಿತೀಯತ್ವವು ನಿವರ್ತ್ಯವು ; ಅದು ಇದನ್ನು ಎಣ್ಣೆಯನ್ನು ಶೀಗೆಪುಡಿಯು ಹೋಗಲಾಡಿಸುವಂತೆ ಹೋಗಲಾಡಿಸುತ್ತದೆ - ಎಂದೇನೂ ನಮ್ಮ ಅಭಿಪ್ರಾಯವಿಲ್ಲ ಎಂದರ್ಥ.

2. ಅದು ಅದ್ವಿತೀಯವಾಗಿರುತ್ತದೆ ; ಆದ್ದರಿಂದ 'ಅದು ನೀನು' ಎಂಬ ಸಾಮಾನಾಧಿಕರಣ್ಯದಿಂದ ನೀನು ಅದ್ವಿತೀಯವು ಎಂದು ಹೇಳಿದಂತೆ ಆಗುತ್ತದೆ. ತ್ವಮರ್ಥವು ಮೊದಲೂ ಅದ್ವಿತೀಯವೇ ಆಗಿದ್ದದ್ದು ತಿಳಿಯದಿತ್ತು. ತತ್ಪದಾರ್ಥದ ಜೊತೆಯಲ್ಲಿರುವದರಿಂದ ಈಗ ಅದು ತಿಳಿಯಿತು.

3. ತದರ್ಥದಲ್ಲಿ ಹೀಗೆಯೇ ಅಜ್ಞಾನದಿಂದ ಪರೋಕ್ಷತ್ವವು ತೋರುತ್ತಿತ್ತು. ಅದನ್ನು ತ್ವಂಪದಾರ್ಥದ ಸಾಹಚರ್ಯವು ಹುಸಿಯೆಂದು ತಿಳಿಸಿತು.

4. ತತ್ಪದಾರ್ಥದ ಜ್ಞಾನವು ತ್ವಂಪದಾರ್ಥದಲ್ಲಿರುವ ದುಃಖಿತ್ವವನ್ನು ಕಳೆಯುವದು ಹೇಗೆ, ತ್ವಂಪದಾರ್ಥಜ್ಞಾನವು ತತ್ಪದಾರ್ಥದಲ್ಲಿರುವ ಪರೋಕ್ಷತ್ವವನ್ನು ಕಳೆಯುವುದು ಹೇಗೆ ? ಯಾವ ಪದಾರ್ಥದ ಜ್ಞಾನವಾಗುವದೋ ಅದರಲ್ಲಿರುವ ಅಜ್ಞಾನವನ್ನಲ್ಲವೆ, ಜ್ಞಾನವು ಕಳೆಯಬೇಕು ?- ಎಂಬುದು ವೈಯಧಿಕರಣ್ಯದ ಶಂಕೆ. ಎರಡು ಪದಗಳೂ ಸಮಾನಾಧಿಕರಣವಾಗಿರುವದರಿಂದ ಒಂದೇ ಪದಾರ್ಥವನ್ನು ಹೇಳುವವು. ನೀಲೋತ್ಪಲಶಬ್ದದಲಿ ನೀಲವೆಂಬ ವಿಶೇಷಣದಿಂದ ಉತ್ಪಲದಲ್ಲಿ ರಕ್ತತ್ವಾದಿಗಳೂ ಉತ್ಪಲಸಂಬಂಧದಿಂದ ನೀಲದಲ್ಲಿ ಅನುತ್ಪಲಾದಿಸಂಬಂಧವೂ ತೊಲಗುವಂತೆಯೇ ಇದು- ಎಂಬುದು ಸಮಾಧಾನ. ''ಮುಂತಾದ'' ಎಂಬುದರಿಂದ ಎರಡು ಪದಗಳೂ ಒಂದೇ ಅರ್ಥವನ್ನು ಹೇಳಿದರೆ ಅವು ಪರ್ಯಾಯಗಳಾಗುವದಿಲ್ಲವೇ, ಒಂದೇ ಪದಾರ್ಥವನ್ನು ಹೇಳಿದರೆ ವಾಕ್ಯವೇ ಆಗುವದಿಲ್ಲವಲ್ಲ !- ಎಂದು ಮುಂತಾದ ಆಕ್ಷೇಪಗಳನ್ನು ಗ್ರಹಿಸಬೇಕು.

೭೮. ತದರ್ಥವು ತ್ವಮರ್ಥದೊಡನೆ ಸಂಬದ್ಧವಾಗಿ ಭೇದವನ್ನು ತೊಲಗಿಸುವದು[1]. ತ್ವಮರ್ಥವು ಪರೋಕ್ಷತ್ವವನ್ನು ಬಿಡದಿರುವ ತದರ್ಥದ ಬಳಿಗೆ ಬರುವದೇ ಇಲ್ಲ[2].

(ಮೂಲ)

**ಕಸ್ಮಾತ್ ಪುನಃ ಕಾರಣಾತ್ ತದರ್ಥೋಽದ್ವಿತೀಯಲಕ್ಷಣಃ ತ್ವಮರ್ಥೇನ ಪ್ರತ್ಯಗಾತ್ಮನಾ ಅಪೃಥಗರ್ಥಃ ಸನ್[3] ಅವಿದ್ಯೋತ್ಥಂ ಸದ್ವಿತೀಯತ್ವಂ ನಿಹಂತೀತಿ ? ಉಚ್ಯತೇ । ವಿರೋಧಾತ್ । ತದುಚ್ಯತೇ–**

**ಸಂಸಾರಿತಾದ್ವಿತೀಯೇನ ಪಾರೋಕ್ಷ್ಯಂ ಚಾತ್ಮನಾ ಸಹ ।**
**ಪ್ರಾಸಙ್ಗಿಕಂ ವಿರುದ್ಧತ್ವಾತ್ ತತ್ತ್ವಮ್ಯಾಂ ಬಾಧನಂ ತಯೋಃ ॥೭೯॥**

(ಅರ್ಥ)

(ಆಕ್ಷೇಪ) :- ಹಾಗಾದರೆ ತದರ್ಥವಾದ ಅದ್ವಿತೀಯವೆಂಬುದು ತ್ವಮರ್ಥವಾದ ಪ್ರತ್ಯಗಾತ್ಮನಿಗಿಂತ ಬೇರೆಯಾದ ಅರ್ಥವಲ್ಲದಿದ್ದರೂ[4] ಅವಿದ್ಯೆಯಿಂದುಂಟಾಗಿದ್ದ ಸದ್ವಿತೀಯತ್ವವನ್ನು ನಾಶಗೊಳಿಸುತ್ತದೆ ಎಂಬುದಕ್ಕೆ ಕಾರಣವೇನು[5] ?

(ಪರಿಹಾರ) :- ಹೇಳುತ್ತೇವೆ. ಏಕೆಂದರೆ (ಅವೆರಡಕ್ಕೂ) ವಿರೋಧ ವಿರುವದರಿಂದ. ಆದ್ದರಿಂದ (ಶ್ಲೋಕದಲ್ಲಿ ಇದನ್ನು ) ಹೇಳುತ್ತಾರೆ :

---

1. ಭೇದವನ್ನು ತಿಳಿಸುವ ಅಜ್ಞಾನವನ್ನು ತೊಲಗಿಸುವದು.

2. ಪರೋಕ್ಷತ್ವವನ್ನು ತೋರುವ ಅಜ್ಞಾನವನ್ನು ಕಳೆದೇಬರುವದು. ನೀಲೋತ್ಪಲಶಬ್ದದಲ್ಲಿ ನೀಲವೆಂಬ ವಿಶೇಷಣದಿಂದ ಉತ್ಪಲದಲ್ಲಿ ರಕ್ತತ್ವಾದಿಗಳೂ ಉತ್ಪಲದ ಸಂಬಂಧದಿಂದ ನೀಲದಲ್ಲಿ ಅನುತ್ಪಲಾದಿಸಂಬಂಧವೂ ತೊಲಗುವಂತೆಯೇ ಇದು.

3. ''ಪೃಥಗರ್ಥಃ'' ಎಂಬ ಪಾಠವು ಪ್ರಕೃತಕ್ಕೆ ಹೊಂದುವದಿಲ್ಲ.

4. ತ್ವಮರ್ಥವಾದ ಪ್ರತ್ಯಗಾತ್ಮನನ್ನೇ ಹೇಳುವದಕ್ಕೆ ಬಂದಿದ್ದರೂ ಎಂದರ್ಥ.

5. ಅದು ಯಾವದನ್ನೂ ಅಲ್ಲಗಳೆಯುವದಕ್ಕೆ ಬಂದಿಲ್ಲವಲ್ಲ ! ತ್ವಂಪದಾರ್ಥವಾದ ಪ್ರತ್ಯಗಾತ್ಮನನ್ನೇ ಹೇಳುವದಕ್ಕಲ್ಲವೆ, ಅದು ಬಂದಿರುವದು ?- ಎಂದು ಭಾವ. ಹೀಗೆಯೇ ತ್ವಂಪದಾರ್ಥವು ಪಾರೋಕ್ಷ್ಯವನ್ನು ಅಲ್ಲಗಳೆಯುವದು ಹೇಗೆ ?- ಎಂದೂ ಆಕ್ಷೇಪವನ್ನು ಹಾಕಿಕೊಳ್ಳಬೇಕು.

೭೯. ಸಂಸಾರಿತ್ವವು (ಪ್ರಾಸಂಗಿಕವಾಗಿದ್ದು)[1] ಅದ್ವಿತೀಯನಿಗೂ, ಪಾರೋಕ್ಷ್ಯವು ಪ್ರಾಸಂಗಿಕವಾಗಿದ್ದು[2] ಆತ್ಮನಿಗೂ, ವಿರುದ್ಧವಾಗಿರುವದರಿಂದ[3] ಅವುಗಳೆರಡೂ ತತ್ತ್ವಮರ್ಥಗಳಿಂದ ಬಾಧಿತವಾಗುತ್ತವೆ[4].

(ಮೂಲ)

ತತ್ತ್ವಮರ್ಥಯೋಸ್ತು ಬಾಧಕತ್ವೇ ಅನ್ಯದಪಿ ಕಾರಣಮ್ ಉಚ್ಯತೇ–

**ಅಜ್ಞಾತಪುರುಷಾರ್ಥತ್ವಾಚ್ಛ್ರೌತತ್ವಾತ್ ತತ್ತ್ವಮರ್ಥಯೋಃ ।**
**ಸ್ವಮರ್ಥಮಪರಿತ್ಯಜ್ಯ ಬಾಧಕೌ ಸ್ತಾಂ ವಿರುದ್ಧಯೋಃ ॥೮೦॥**

(ಅರ್ಥ)

ಆದರೆ ತತ್ತ್ವಂ(ಪದಗಳ) ಅರ್ಥಗಳೇ ಬಾಧಕಗಳು ಎಂಬುದಕ್ಕೆ[5] ಮತ್ತೊಂದು ಕಾರಣವನ್ನು ಹೇಳುತ್ತಾರೆ :

೮೦. ತತ್ತ್ವಮರ್ಥಗಳು ಅಜ್ಞಾತವಾಗಿರುವ ಪುರುಷಾರ್ಥವಾಗಿರು

---

1. ತ್ವಂಪದಪ್ರಯೋಗದಿಂದ ವಾಚ್ಯಾರ್ಥವನ್ನು ತೆಗೆದುಕೊಂಡ ಭ್ರಾಂತಿಯಿಂದ ಪ್ರಸಕ್ತವಾಗಿದ್ದು ಎಂದರ್ಥ.

2. ತತ್ಪದಪ್ರಯೋಗದಿಂದ ಭ್ರಾಂತಿಯಿಂದ ಪ್ರಸಕ್ತವಾಗಿದ್ದು ಎಂದರ್ಥ.

3. ಸಂಸಾರಿತ್ವವು ಅದ್ವಿತೀಯವಾದ ಸದ್ಬ್ರಹ್ಮಕ್ಕೆ ವಿರುದ್ಧ, ಆತ್ಮನಿಗೆ ಪರೋಕ್ಷತ್ವವು ವಿರುದ್ಧ.

4. ವಿರುದ್ಧಾರ್ಥವನ್ನು ಹುಸಿಯೆಂದು ತೋರಿಸದೆ ತತ್ತ್ವಮರ್ಥಗಳು ಒಂದೇ ವಸ್ತುವನ್ನು ಹೇಳುವದಕ್ಕೆ ಆಗುವದೇ ಇಲ್ಲ. ಆದ್ದರಿಂದ ಅದ್ವಿತೀಯಾತ್ಮನನ್ನು ತಿಳಿಸುವದಕ್ಕೇ ಈ ಪ್ರಾಸಂಗಿಕವಾದ ಧರ್ಮಗಳನ್ನು ಕಳೆಯಬೇಕಾಗುವದು. ನಿಷೇಧವೇನೂ ಪದಗಳ ಅರ್ಥವಲ್ಲ, ತಮ್ಮತಮ್ಮ ಅರ್ಥವನ್ನು ತಿಳಿಸುವದರಲ್ಲಿ ವಿರುದ್ಧಾರ್ಥಗಳು ತಾವೇ ತೊಲಗುವವು ಎಂದಭಿಪ್ರಾಯ.

5. ತದರ್ಥವು ಸದ್ವಿತೀಯತ್ವದುಃಖಿತ್ವಕ್ಕೆ ಬಾಧಕ, ತ್ವಮರ್ಥವು ಪರೋಕ್ಷತ್ವಕ್ಕೆ ಬಾಧಕ- ಎಂದೇ ಏಕೆ ಒಪ್ಪಬೇಕು. ಸದ್ವಿತೀಯತ್ವಪರೋಕ್ಷತ್ವಗಳೇ ಬಾಧಕ, ತತ್ತ್ವಮರ್ಥಗಳಾದ ಅದ್ವಿತೀಯತ್ವಾಪರೋಕ್ಷತ್ವಗಳೇ ಬಾಧ್ಯ- ಎಂದೇಕೆ ಎಣಿಸಬಾರದು ?- ಎಂಬುದಕ್ಕೆ.

ವದರಿಂದಲೂ [1] ಶ್ರೌತವಾಗಿರುವದರಿಂದಲೂ [2] (ಅವು) ತಮ್ಮ ಅರ್ಥವನ್ನು ಬಿಡದೆ ವಿರುದ್ಧವಾದವುಗಳನ್ನೇ [3] ಬಾಧಿಸುವವಾಗಿರುತ್ತವೆ.

## ತತ್ತ್ವಮಸ್ಯಾದಿವಾಕ್ಯಗಳು ಪ್ರಸಂಖ್ಯಾನವನ್ನು ವಿಧಿಸುವದಿಲ್ಲ

(ಮೂಲ)

ಏವಂ ತಾವತ್ ಯಥೋಪಕ್ರಾನ್ತೇನ ಪ್ರಕ್ರಿಯಾವರ್ತ್ಮನಾ ನ ಪ್ರತ್ಯಕ್ಷಾದಿಪ್ರಮಾಣಾನ್ತರೈರ್ವಿರೋಧಗನ್ಧೋಽಪಿ ಸಂಭಾವ್ಯತೇ । ಯದಾ ಪುನಃ ಸರ್ವಪ್ರಕಾರೇಣಾಪಿ ಯತಮಾನಾ ನೈವೇಮಂ ವಾಕ್ಯಾರ್ಥಂ ಸಂಭಾವಯಾಮಃ ಪ್ರತ್ಯಕ್ಷಾದಿಪ್ರಮಾಣಾನ್ತರವಿರೋಧತ ಏವ, ತಸ್ಮಿನ್ನಪಿ ಪಕ್ಷೇ ಉಚ್ಯತೇ–

ಪ್ರತ್ಯಕ್ಷಾದಿವಿರುದ್ಧಂ ಚೇದ್ವಾಕ್ಯಮರ್ಥಂ ವದೇತ್ ಕ್ವಚಿತ್ ।
ಸ್ಯಾತ್ತು ತದ್ದೃಷ್ಟವಿಧ್ಯರ್ಥಂ ಯೋಷಾಗ್ನಿವದಸಂಶಯಮ್ ॥೮೧॥

(ಅರ್ಥ)

ಹೀಗೆ (ನಾವು) ಪ್ರಾರಂಭಿಸಿರುವ ಪ್ರಕ್ರಿಯೆಯ ಮಾರ್ಗದಿಂದ (ನಡೆದರೆ) ಪ್ರತ್ಯಕ್ಷವೇ ಮುಂತಾದ ಪ್ರಾಮಾಣಾಂತರಗಳಿಗೆ (ಯಾವ) ವಿರೋಧದ ವಾಸನೆಯೂ ಆಗುವಂತಿರುವದಿಲ್ಲ [4]. ಆದರೆ ಯಾವಾಗ ಎಲ್ಲಾ ಬಗೆಯಿಂದಲೂ ಪ್ರಯತ್ನಿಸಿದರೂ ಈ ವಾಕ್ಯಾರ್ಥವು ಸಂಭವಿಸುವದೇ ಇಲ್ಲ ,

---

1. ಮೊದಲು ತಿಳಿಯದೆ ಇದ್ದದ್ದನ್ನು ಶಾಸ್ತ್ರವು ಹೇಳಬೇಕು, ಇಲ್ಲದಿದ್ದರೆ ಅದು ಅನುವಾದವಾಗಿ ಅಪ್ರಮಾಣವಾಗುವದು. ಪುರುಷಾರ್ಥವನ್ನೇ ಹೇಳಬೇಕು ; ಇಲ್ಲದಿದ್ದರೆ ಅಧಿಕಾರಗಳೇ ಇಲ್ಲದ್ದರಿಂದ ಶಾಸ್ತ್ರಾರಂಭಕ್ಕೆ ಕಾರಣವಿಲ್ಲದೆ ಹೋಗುವದು.

2. ಉಪಕ್ರಮೋಪಸಂಹಾರಾದಿತಾತ್ಪರ್ಯಲಿಂಗಗಳಿಂದ ಅದ್ವಿತೀಯಪ್ರತ್ಯಗಾತ್ಮನಲ್ಲಿಯೇ ಶ್ರುತಿಗೆ ತಾತ್ಪರ್ಯವೆಂದು ತಿಳಿದುಬರುವದರಿಂದಲೂ ಎಂದರ್ಥ.

3. ಸದ್ವಿತೀಯತ್ವಪರೋಕ್ಷತ್ವಗಳನ್ನೇ.

4. ಏಕೆಂದರೆ ವಿರುದ್ಧವಾಗಿ ತೋರುವ ಅರ್ಥಗಳೂ ಅನುವಾದಕ್ಕಾಗಿ ಮಾತ್ರ ಬಂದಿರುತ್ತವೆ, ಶ್ರುತಿಗೆ ಅವುಗಳಲ್ಲಿ ತಾತ್ಪರ್ಯವಿಲ್ಲ .

ಏಕೆಂದರೆ ಪ್ರತ್ಯಕ್ಷಾದಿಪ್ರಮಾಣಾಂತರಗಳಿಗೆ (ಇದು) ವಿರುದ್ಧವೆಂಬುದೇ (ಕಾರಣವು ಎಂದು ತೋರುತ್ತದೆಯೋ) ಆ ಪಕ್ಷದಲ್ಲಿಯೂ ಹೇಳುತ್ತೇವೆ :

೮೧. ಎಲ್ಲಿಯಾದರೂ ವಾಕ್ಯವು ಪ್ರತ್ಯಕ್ಷಾದಿವಿರುದ್ಧವಾದ ಅರ್ಥವನ್ನೇ ಹೇಳುವದಾದರೆ ಅದು 'ಸ್ತ್ರೀಯೇ ಅಗ್ನಿಯು' ಎಂಬ (ವಾಕ್ಯದಂತೆ) ದೃಷ್ಟಿ ವಿಧಾನಕ್ಕಾಗಿಯೇ ಎಂದು ನಿಸ್ಸಂಶಯವಾಗಿ ಆಗುವದು[1].

(ಮೂಲ)

ಯದಾ ತು ತತ್ತ್ವಮಸ್ಯಾದಿವಾಕ್ಯಂ ಸರ್ವಪ್ರಕಾರೇಣಾಪಿ ವಿಚಾರ್ಯಮಾಣಂ ನ ಕ್ರಿಯಾಂ ಕಟಾಕ್ಷೇಣಾಪಿ ವೀಕ್ಷತೇ ತದಾ ಪ್ರಸಂಖ್ಯಾನಾದಿ ವ್ಯಾಪಾರೋ ದುಃಸಂಭಾವ್ಯ ಇತಿ । ತದುಚ್ಯತೇ –

ವಸ್ತ್ವೇಕನಿಷ್ಠಂ ವಾಕ್ಯಂ ಚೇನ್ನ ತಸ್ಯ ಸ್ಯಾತ್ ಕ್ರಿಯಾರ್ಥತಾ ।
ವಸ್ತುನೋ ಹ್ಯೇಕರೂಪತ್ವಾದ್ವಿಕಲ್ಪಸ್ಯಾಪ್ಯಸಂಭವಃ ॥೮೨॥

(ಅರ್ಥ)

ಆದರೆ ಯಾವಾಗ ತತ್ತ್ವಮಸ್ಯಾದಿವಾಕ್ಯವು ಯಾವ ಪ್ರಕಾರದಿಂದ ವಿಚಾರಮಾಡಿದರೂ ಕ್ರಿಯೆಯನ್ನು ತುದಿಗಣ್ಣಿನಿಂದಲೂ ನೋಡುವದಿಲ್ಲವೋ ಆಗ ಪ್ರಸಂಖ್ಯಾನವೇ ಮುಂತಾದ ವ್ಯಾಪಾರವು ಹೇಗೂ ಸಂಭವಿಸಲಾರದು[2]. ಅದನ್ನು (ಈಗ) ಹೇಳುತ್ತಾರೆ :

೮೨. ವಾಕ್ಯವು ವಸ್ತುವಿನಲ್ಲಿಯೇ ತಾತ್ಪರ್ಯವುಳ್ಳದ್ದಾಗಿದ್ದರೆ, ಅದು ಕ್ರಿಯಾರ್ಥವಾಗಿರಲಾರದು[3]. ವಸ್ತುವು ಒಂದೇ ರೂಪವುಳ್ಳದ್ದೇ

1. ಛಾಂದೋಗ್ಯದಲ್ಲಿ (ಛಾಂ. ೫-೮-೧) ಪಂಚಾಗ್ನಿವಿದ್ಯೆಯಲ್ಲಿ ಬಂದಿರುವ ವಾಕ್ಯವಿದು. ಸ್ತ್ರೀಯು ಅಗ್ನಿ ಎಂಬುದು ಪ್ರತ್ಯಕ್ಷವಿರುದ್ಧವೇ ಆಗಿರುವದರಿಂದ ಸ್ತ್ರೀಯಲ್ಲಿ ಅಗ್ನಿದೃಷ್ಟಿಯನ್ನು ಮಾಡಬೇಕು ಎಂಬುದೇ ವಾಕ್ಯಕ್ಕೆ ತಾತ್ಪರ್ಯವು. ಕೆಲವು ಕಡೆಗಳಲ್ಲಿ ಹೀಗೆ ಪ್ರತ್ಯಕ್ಷವಿರುದ್ಧವಾದದ್ದು ಅರ್ಥವಾದವೂ ಆಗಬಹುದು.

2. ಕ್ರಿಯಾಪರವಲ್ಲದ ವಸ್ತುವಾಕ್ಯದಲ್ಲಿ ಪ್ರಸಂಖ್ಯಾನವಿಧಿಯನ್ನು ಕಾಣವದು ಆಗಲಾರದು.

3. ಪ್ರಸಂಖ್ಯಾನವಾದಿಗಳು ವಾಕ್ಯಕ್ಕೆ ಐಕಾತ್ಮ್ಯವನ್ನು ತಿಳಿಸುವದು, ಪ್ರಸಂಖ್ಯಾನವನ್ನು ವಿಧಿಸುವದು- ಎಂಬ ಎರಡು ಕಾರ್ಯವನ್ನೂ ಕಲ್ಪಿಸುವದು ಸರಿಯಲ್ಲ.

ಆಗಿರುವದರಿಂದ (ಅದರಲ್ಲಿ) ವಿಕಲ್ಪವೂ ಆಗುವಂತಿಲ್ಲ [1].

(ಮೂಲ)

**ಭಿನ್ನವಿಷಯತ್ವಾಚ್ಚ ನ ಪ್ರಮಾಣಾನ್ತರವಿರೋಧಃ । ಕಥಮ್ ? ಉಚ್ಯತೇ–**

**ಅಪೂರ್ವಾಧಿಗಮಂ ಕುರ್ವತ್ ಪ್ರಮಾಣಂ ಸ್ಯಾನ್ನ ಚೇನ್ನ ತತ್ ।**
**ನ ವಿರೋಧಸ್ತತೋ ಯುಕ್ತೋ ವಿಭಿನ್ನಾರ್ಥಾವಬೋಧಿನೋಃ॥೮೩॥**

(ಅರ್ಥ)

ಬೇರೆಬೇರೆಯ ವಿಷಯಗಳಿರುವದರಿಂದ [2] ಮತ್ತೊಂದು ಪ್ರಮಾಣಕ್ಕೆ ವಿರೋಧವೇ ಇಲ್ಲ. ಹೇಗೆ ? ಎಂದರೆ ಹೇಳುತ್ತಾರೆ :

೮೩. ಅಪೂರ್ವವಾದ (ವಿಷಯದ) ಜ್ಞಾನವನ್ನುಂಟುಮಾಡುವದು ಪ್ರಮಾಣವಾಗುವದು. ಹಾಗಿಲ್ಲದಿದ್ದರೆ ಅದು (ಪ್ರಮಾಣ)ವಲ್ಲ [3]. ಆದ್ದರಿಂದ ಬೇರೆಬೇರೆಯ ಅರ್ಥಗಳನ್ನು ತಿಳಿಸುವ (ಈ ಎರಡು ಪ್ರಮಾಣ)ಗಳಿಗೆ ವಿರೋಧವೆಂಬುದು ಯುಕ್ತವಲ್ಲ [4].

(ಮೂಲ)

**ಯ ಏವಮಪಿ ಭಿನ್ನವಿಷಯಾಣಾಂ ವಿರೋಧಂ ವಕ್ತಿ, ಸೋಽತ್ರಾಪಿ ವಿರೋಧಂ ಬ್ರೂಯಾತ್ –**

---

1. ಕ್ರಿಯೆಯಾದರೆ ಹೀಗೂ ಆಗಬಹುದು, ಹಾಗೂ ಆಗಬಹುದು- ಎಂದು ಅದರಲ್ಲಿ ವಿಕಲ್ಪವಾಗಬಹುದು. ಆದರೆ ವಸ್ತುವು ಒಂದೇ ರೂಪವಾಗಿರುವದರಿಂದ ಹೀಗೂ ಇರಬಹುದು, ಹಾಗೂ ಇರಬಹುದು ಎಂಬ ವಿಕಲ್ಪವು ಅದರಲ್ಲಿರಲಾರದು. ಆದ್ದರಿಂದ ಆತ್ಮವಸ್ತು ನಿತ್ಯಸಿದ್ಧವಾದರೆ ಪ್ರಸಂಖ್ಯಾನಸಾಧ್ಯವಾಗಲಾರದು, ಪ್ರಸಂಖ್ಯಾನಸಾಧ್ಯವಾದರೆ ನಿತ್ಯಸಿದ್ಧವಾಗಲಾರದು.

2. ಒಂದೊಂದು ಪ್ರಮಾಣಕ್ಕೂ ಬೇರೆಬೇರೆಯ ವಿಷಯವಿರುವದರಿಂದ.

3. ಮತ್ತೊಂದು ಪ್ರಮಾಣವು ತಿಳಿಸಿದ್ದನ್ನೇ ತಿಳಿಸಿದರೆ ಅನುವಾದವಾಗುವದು, ಪ್ರಮಾಣವಾಗಲಾರದು.

4. ಪ್ರತ್ಯಕ್ಷವು ಹೊರಗಿನ ವಸ್ತುವನ್ನು ತಿಳಿಸುವದು, ಶಬ್ದವು ಒಳಗಿನ ಪ್ರತ್ಯಗಾತ್ಮನನ್ನು ತಿಳಿಸುವದು. ಎರಡಕ್ಕೂ ವಿರೋಧವೆಲ್ಲಿ ?- ಎಂದು ಅಭಿಪ್ರಾಯ.

**ನಾಯಂ ಶಬ್ದಃ ಕುತೋ ಯಸ್ಮಾದ್ರೂಪಂ ಪಶ್ಯಾಮಿ ಚಕ್ಷುಷಾ ।**
**ಇತಿ ಯದ್ವತ್ ತಥೈವಾಯಂ ವಿರೋಧೋಽಕ್ಷಜವಾಕ್ಯಯೋಃ ॥೮೪॥**

(ಅರ್ಥ)

ಹೀಗಿದ್ದರೆ ಯಾವನು ಬೇರೆಬೇರೆಯ ವಿಷಯಗಳ (ಪ್ರಮಾಣ) ಗಳಿಗೆ ವಿರೋಧವನ್ನು ಹೇಳುತ್ತಾನೋ ಅವನು ಈ (ಮುಂದೆ ಹೇಳುವ ವಿಷಯ)ದಲ್ಲಿಯೂ ವಿರೋಧವನ್ನು ಹೇಳಬಹುದು :

೮೪. ಇದು ಶಬ್ದವಲ್ಲ. ಏಕೆ ? ಎಂದರೆ ಕಣ್ಣಿನಿಂದ ರೂಪವನ್ನು ನೋಡುತ್ತಲಿದೇನೆ- ಎಂಬುದು ಹೇಗೋ ಈ ಪ್ರತ್ಯಕ್ಷವಾಕ್ಯ(ಜ್ಞಾನ)ಗಳಿಗೆ ಇರುವ ವಿರೋಧವೂ ಹಾಗೆಯೇ [1].

(ಮೂಲ)

**ಪ್ರಮಾಣಾನಾಂ ಸತಾಂ ನ ವಿರೋಧಃ । ಶ್ರೋತ್ರಾದೀನಾಮಿವ ಭಿನ್ನವಿಷಯತ್ವಾತ್ । ಯಯೋಶ್ಚ ಅಭಿನ್ನವಿಷಯತ್ವಮ್, ತಯೋಃ ಆಖುನಕುಲಯೋರಿವ ಪ್ರತಿನಿಯತ ಏವ ಬಾಧ್ಯಬಾಧಕಭಾವಃ ಸ್ಯಾತ್ । ಅತಸ್ತದುಚ್ಯತೇ–**

**ಪ್ರತ್ಯಕ್ಷಂ ಚೇನ್ನ ಶಾಬ್ದಂ ಸ್ಯಾಚ್ಛಾಬ್ದಂ ಚೇದಕ್ಷಜಂ ಕಥಮ್ ।**
**ಪ್ರತ್ಯಕ್ಷಾಭಾಸಃ ಪ್ರತ್ಯಕ್ಷೇ ಹ್ಯಾಗಮಾಭಾಸ ಆಗಮೇ ॥೮೫॥**

(ಅರ್ಥ)

ಪ್ರಮಾಣವಾಗಿರುವವುಗಳಿಗೆ (ಒಂದಕ್ಕೊಂದಕ್ಕೆ) ವಿರೋಧವಿರುವದಿಲ್ಲ ; ಏಕೆಂದರೆ ಶ್ರೋತ್ರಾದಿಗಳಂತೆ (ಅವಕ್ಕೆ) ವಿಷಯಗಳು ಬೇರೆಬೇರೆಯಾಗಿರುತ್ತವೆ. ಆದರೆ ಯಾವ (ಎರಡಕ್ಕೆ) ಬೇರೆಬೇರೆಯಲ್ಲದ (ಒಂದೇ) ವಿಷಯವಿರುತ್ತದೆಯೋ ಆ (ಎರಡಕ್ಕೆ) ಇಲಿಮುಂಗುಸಿಗಳಂತೆ (ಒಂದಕ್ಕೊಂದಕ್ಕೆ) ಬಾಧ್ಯಬಾಧಕಭಾವವು ಗೊತ್ತಾಗಿಯೇ ಇರುವದು [2]. ಆದ್ದರಿಂದ ಅದನ್ನು (ಈಗ) ಹೇಳುತ್ತಾರೆ :

---

1. ಸುಳ್ಳೇ, ವಿರೋಧವೇ ಇಲ್ಲ.

2. ಅವುಗಳಲ್ಲಿ ಒಂದು ಪ್ರಮಾಣವು, ಬಾಧಕವು ; ಇನ್ನೊಂದು ಪ್ರಮಾಣಾಭಾಸವಾದ್ದರಿಂದ ಬಾಧ್ಯವು.

೮೫. ಪ್ರತ್ಯಕ್ಷವಾದರೆ ಅದು ಶಬ್ದ(ಜ್ಞಾನ)ವಾಗಲಾರದು,[1] ಶಬ್ದಜನ್ಯವಾದರೆ ಇಂದ್ರಿಯಜನ್ಯವೆಂಬುದು ಹೇಗೆ ?[2] ಪ್ರತ್ಯಕ್ಷ(ವಿಷಯ)ದಲ್ಲಿ ಆಗಮದ ಆಭಾಸವೂ, ಆಗಮದ (ವಿಷಯದಲ್ಲಿ) ಪ್ರತ್ಯಕ್ಷದ ಆಭಾಸವೂ (ಆಗಿರುವದು)[3].

(ಮೂಲ)

ನ ಚ ಪ್ರತಿಜ್ಞಾಹೇತುದೃಷ್ಟಾನ್ತನ್ಯಾಯ ಇಹ ಸಂಭವತಿ । ಶಬ್ದಾದೀನಾಂ ಪ್ರತ್ಯೇಕಂ ಪ್ರಮಾಣತ್ವಾತ್ । ಅತ ಆಹ–

ಸ್ವಮಹಿಮ್ನಾ ಪ್ರಮಾಣಾನಿ ಕುರ್ವನ್ತ್ಯರ್ಥಾವಬೋಧನಮ್ ।
ಇತರೇತರಸಾಚಿವ್ಯೇ ಪ್ರಾಮಾಣ್ಯಂ ನೇಷ್ಯತೇ ಸ್ವತಃ ॥೮೬॥

(ಅರ್ಥ)

ಇಲ್ಲಿ ಪ್ರತಿಜ್ಞಾಹೇತುದೃಷ್ಟಾಂತಗಳ ನ್ಯಾಯವೂ ಸಂಭವಿಸುವದಿಲ್ಲ[4]. ಏಕೆಂದರೆ ಶಬ್ದಾದಿಗಳಲ್ಲಿ ಪ್ರತಿಯೊಂದೂ ಪ್ರಮಾಣವೇ ಆಗಿರುತ್ತದೆ[5]. ಆದ್ದರಿಂದ ಹೇಳುತ್ತಾರೆ :

---

1. ಇಂದ್ರಿಯಕ್ಕೆ ವಿಷಯವಾದರೆ ಶಬ್ದಕ್ಕೆ ವಿಷಯವಲ್ಲವಾದ್ದರಿಂದ ಅದರಲ್ಲಾಗುವದು ಶಬ್ದಪ್ರಮಾಣವಲ್ಲ.    2. ಪ್ರತ್ಯಕ್ಷವು ಪ್ರಮಾಣವೆಂಬುದು ಹೇಗೆ ?

3. ಕೃಷ್ಣಲಾನ್ ಶ್ರಪಯೇತ್ (ಲೋಹದ ಬೀಜಗಳನ್ನು ಬೇಯಿಸಬೇಕು) ಎಂಬ ವಿಧಿಯು ಪ್ರತ್ಯಕ್ಷವಿರುದ್ಧವಾದ್ದರಿಂದ ಆಗಮಾಭಾಸವು. ಲೋಹವನ್ನು ಬೇಯಿಸಿದಂತೆ ಮಾಡಬೇಕು- ಎಂದು ಅದಕ್ಕೆ ಅರ್ಥವನ್ನು ಮಾಡಬೇಕು. 'ತತ್ತ್ವಮಸಿ' ಎಂಬುದು ಆಗಮದ ವಿಷಯವು ; ಅದಕ್ಕೆ ವಿರುದ್ಧವಾಗಿರುವ ನಾನು ದುಃಖಿ ಎಂಬ ಪ್ರತ್ಯಕ್ಷವು ಪ್ರತ್ಯಕ್ಷಾಭಾಸವು. ಹೀಗೂ ನಿಜವಾದ ಪ್ರಮಾಣಗಳಿಗೆ ವಿರೋಧವಿಲ್ಲ ಎಂದು ಭಾವ. ವಿರೋಧ ವುಂಟಾಗುವದರಿಂದ ಪ್ರಸಂಖ್ಯಾನವು ಸಿದ್ಧವಾಗುವದೆಂದು ಪೂರ್ವಪಕ್ಷಿ ಅನ್ನುತ್ತಿದಾನೆ.

4. ಇಲ್ಲಿ ಬೆಂಕಿಯಿದೆ ಎಂಬುದು ಪ್ರತಿಜ್ಞೆ ; ಹೊಗೆಯಿರುವದರಿಂದ ಎಂಬುದು ಹೇತು ; ಅಡಿಗೆಯ ಮನೆಯಂತೆ ಎಂಬುದು ದೃಷ್ಟಾಂತ- ಇವು ಮೂರೂ ಸೇರಿದ ಮೇಲೆಯೇ ಪರ್ವತದಲ್ಲಿ ಬೆಂಕಿಯಿದೆ ಎಂಬ ಅನುಮಿತಿಯುಂಟಾಗುತ್ತದೆ. ಇದರಂತೆ ಶಬ್ದ, ಪ್ರತ್ಯಕ್ಷಾದಿಗಳು- ಎಲ್ಲವೂ ಸೇರಿಯೇ ಆತ್ಮಸ್ವರೂಪಕ್ಕೆ ಪ್ರಮಾಣವಾಗಬಹುದಲ್ಲ ! - ಎಂಬ ಶಂಕೆಗೆ ಇದು ಸಮಾಧಾನ.

5. ದೃಷ್ಟಾಂತದಲ್ಲಿ ಒಂದೊಂದೂ ಪ್ರಮಾಣವಲ್ಲ. ಪ್ರಕೃತದಲ್ಲಿ ಶಬ್ದವೂ ಪ್ರತ್ಯಕ್ಷಾದಿಗಳೂ ಬೇರೆಬೇರೆಯಾಗಿ ಪ್ರಮಾಣ. ಆದ್ದರಿಂದ ಅವಕ್ಕೆ ಪರಸ್ಪರಾಪೇಕ್ಷೆಯಿಲ್ಲ.

೮೬. ತಮ್ಮ ಪ್ರಭಾವದಿಂದಲೇ ಪ್ರಮಾಣಗಳು ವಿಷಯದ ಜ್ಞಾನವನ್ನು ಉಂಟುಮಾಡುತ್ತವೆ[1]. ಏಕೆಂದರೆ ಒಂದಕ್ಕೊಂದರ ಸಹಾಯವಾದರೆ ಸ್ವತಃಪ್ರಾಮಾಣ್ಯವೇ ಒಪ್ಪಿತವಲ್ಲ[2].

(ಮೂಲ)

ನ ಚ ಸುಖದುಃಖಾದಿಸಂಬನ್ಧೋಽವಗತ್ಯಾತ್ಮನಃ ಪ್ರತ್ಯಕ್ಷಾದಿಪ್ರಮಾಣೈರ್ಗೃಹ್ಯತೇ । ಯೇನ ವಿರೋಧಃ ಪ್ರತ್ಯಕ್ಷಾದಿಪ್ರಮಾಣೈರುದ್ಘಾಟ್ಯತೇ । ಕಥಮ್ ? ಶೃಣು –

**ದುಃಖಿತಾವಗತೇಶ್ಚೇತ್[3] ಸ್ಯಾನ್ನ ಪ್ರಮೀಯೇತ ಸಾತ್ಮವತ್ ।**
**ಕರ್ಮಣ್ಯೇವ ಪ್ರಮಾ ನ್ಯಾಯ್ಯಾ ನ ತು ಕರ್ತರ್ಯಪಿ ಕ್ವಚಿತ್ ॥೮೭॥**

(ಅರ್ಥ)

ಚೈತನ್ಯರೂಪನಾಗಿರುವ[4] (ಆತ್ಮನಿಗೆ) ಸುಖದುಃಖಾದಿಗಳ ಸಂಬಂಧ ವಿರುವದು ಪ್ರತ್ಯಕ್ಷಾದಿಗಳಿಂದ ತಿಳಿದುಬರುತ್ತಲೂ ಇಲ್ಲ[5]. ಹಾಗಿದ್ದರೆ ಪ್ರತ್ಯಕ್ಷಾದಿಗಳಿಗೆ ವಿರೋಧ(ವೆಂಬ ಆಕ್ಷೇಪವನ್ನು) ತೆಗೆಯಬಹುದಾಗಿತ್ತು. ಹೇಗೆ ? ಎಂದರೆ ಕೇಳು :

೮೭. ದುಃಖಿತ್ವವು ಚೈತನ್ಯ(ದ ಧರ್ಮ)ವಾಗಿದ್ದರೆ ಅದು ಆತ್ಮನಂತೆ ಜ್ಞಾನಕ್ಕೆ ವಿಷಯವಾಗಬಾರದಾಗಿತ್ತು[6]. (ಏಕೆಂದರೆ) ಕರ್ಮದಲ್ಲಿಯೇ

1. ಮತ್ತೊಂದರ ಸಹಾಯವೇನೂ ಬೇಕಿಲ್ಲ- ಎಂದರ್ಥ. ಜ್ಞಾನವು ಗುಣವಿದ್ದರೆ ಪ್ರಮಾಣವಾಗುತ್ತದೆ, ದೋಷವಿದ್ದರೆ ಅಪ್ರಮಾಣ - ಎಂಬ ತಾರ್ಕಿಕರ ಮತವನ್ನು ಮೀಮಾಂಸಕರಾಗಲಿ ವೇದಾಂತಿಗಳಾಗಲಿ ಒಪ್ಪುವದಿಲ್ಲ.

2. ಪ್ರಮಾಣದ ಸ್ವತಃಪ್ರಾಮಾಣ್ಯವೇ ಹೋಗಿಬಿಡುತ್ತದೆ.

3. 'ಅವಗತಿಶ್ಚೇತ್' ಎಂಬ ಅಚ್ಚಿನ ಪಾಠವನ್ನು ಹೀಗೆಂದು ತಿದ್ದಿಕೊಂಡಿದೆ.

4. ಇದು ಸಾಭಿಪ್ರಾಯವಿಶೇಷಣವು ; ಅಭಿಪ್ರಾಯವನ್ನು ಶ್ಲೋಕದಲ್ಲಿ ವಿವರಿಸಿದೆ.

5. ದುಃಖಿತ್ವಾದಿಗಳು ಆತ್ಮಧರ್ಮವೆಂಬುದು ಪ್ರತ್ಯಕ್ಷಾದಿಗಳಿಂದ ತಿಳಿಯ ಬರುವದೆಂದು ಇಟ್ಟುಕೊಂಡು ಅದು ಶಾಸ್ತ್ರದಿಂದ ಬಾಧಿತವಾಗುತ್ತದೆ ಎಂದು ಹೇಳಿತ್ತು. ಆದರೆ ದುಃಖಿತ್ವವು ಆತ್ಮಧರ್ಮವೆಂಬುದು ಯಾವ ಪ್ರಮಾಣದಿಂದಲೂ ತಿಳಿಯಬರುತ್ತಿಲ್ಲ.

6. ಆತ್ಮನು ಯಾವ ಪ್ರಮಾಣಕ್ಕೂ ವಿಷಯನಲ್ಲ ; ದುಃಖಿತ್ವವು ಅವನ ಧರ್ಮವಾದರೆ ಧರ್ಮಿಯಾದ ಆತ್ಮನಂತೆ ತಾನೂ ಪ್ರಮಾಣಕ್ಕೆ ವಿಷಯವಾಗಬಾರದಿತ್ತು. ಆದರೆ ವಿಷಯವಾಗುತ್ತಿದೆ ; ಆದ್ದರಿಂದ ಅನಾತ್ಮಧರ್ಮವೇ.

ಪ್ರಮೆಯಾಗುವದು ಯುಕ್ತವೇ ಹೊರತು ಕರ್ತೃವಿನಲ್ಲಿಯೂ (ಆಗುವದು) ಎಂದಿಗೂ (ಸರಿಯಲ್ಲ)[1].

(ಮೂಲ)

ಅಭ್ಯುಪಗಮೇऽಪಿ ಚ ಪ್ರಸಂಖ್ಯಾನಶತೇನಾಪಿ ನೈವ ತ್ವಂ ಸಂಭಾವಿತದೋಷಾನ್ಮುಚ್ಯಸೇ । ಅತ ಆಹ–

**ಪ್ರಮಾಣಬದ್ಧಮೂಲತ್ವಾದ್ದುಃಖಿತ್ವಂ ಕೇನ ವಾರ್ಯತೇ ।**
**ಅಗ್ನ್ಯೌಷ್ಣ್ಯವನ್ನಿವೃತ್ತಿಶ್ಚೇನ್ನೈರಾತ್ಮ್ಯಂ ಹ್ಯೇತಿ ಸೌಗತಮ್ ॥೮೮॥**

(ಅರ್ಥ)

ಒಪ್ಪಿದರೂ[2] ನೂರು ಪ್ರಸಂಖ್ಯಾನಗಳಿಂದಲೂ ಸಂಭಾವಿತವಾಗಿರುವ (ಈ) ದೋಷದಿಂದ ನಿನಗೆ ಬಿಡುಗಡೆಯಾಗುವಂತಿಲ್ಲ[3]. ಆದ್ದರಿಂದ ಹೇಳುತ್ತಾರೆ :

೮೮. ದುಃಖಿತ್ವವು ಬೆಂಕಿಯ ಬಿಸಿಯಂತೆ ಪ್ರಮಾಣದಿಂದ ಬೇರು ಬಿಟ್ಟುಕೊಂಡಿರುವದರಿಂದ[4] (ಅದಕ್ಕೆ) ಏತರಿಂದ ನಿವಾರಣೆಯಾದೀತು ?[5] (ಅದಕ್ಕೂ) ನಿವೃತ್ತಿಯಾಗುವದಾದರೆ ಬೌದ್ಧರ ನೈರಾತ್ಮ್ಯ(ವಾದವೇ) ಬರುತ್ತದೆ[6].

---

1. ಲೋಕದಲ್ಲಿ ಪ್ರಮಾತೃವಿನ ವಿಷಯದಲ್ಲಲ್ಲ ಜ್ಞಾನವಾಗುವದು, ಪ್ರಮೇಯದ ವಿಷಯದಲ್ಲಿ. ಹೀಗಿರುವಲ್ಲಿ ನಿತ್ಯಚೈತನ್ಯಸ್ವರೂಪನಾದ ಆತ್ಮನು ವಿಷಯನೆಂತಲೂ ದುಃಖಿತ್ವವು ಅವನ ಧರ್ಮವೆಂದು ಪ್ರತ್ಯಕ್ಷಾದಿಗಳಿಂದ ತಿಳಿಯಬರುತ್ತಿದೆಯೆಂತಲೂ ಹೇಳುವದು ಹಾಸ್ಯಾಸ್ಪದವಾದ ಮಾತು. 2. ಪ್ರತ್ಯಕ್ಷವಿರೋಧವನ್ನು ಒಪ್ಪಿದರೂ.

3. ದೋಷದ ಸಂಭಾವನೆಯಿರುವಲ್ಲಿ ಪ್ರಸಂಖ್ಯಾನವನ್ನು ಮಾಡುವುದಕ್ಕೆ ಯಾರೂ ಮುಂದೆ ಬರಲಾರರು ಎಂದು ಭಾವ.

4. ನಿಶ್ಚಿತವಾಗಿ ಗೊತ್ತಾಗಿಬಿಟ್ಟಿರುವದರಿಂದ.

5. ಬೆಂಕಿಯ ಬಿಸಿಯಂತೆ ಸ್ವಭಾವವಾಗಿರುವ ಧರ್ಮವು ತೊಲಗಲಾರದು. ಸಂ. ವಾ. ೫೫.

6. ಸ್ವಭಾವವೂ ನಾಶವಾಗುವದಾದರೆ ಶೂನ್ಯವಾದವೇ ಪ್ರಾಪ್ತವಾಗುತ್ತದೆ. ಸಂ.ವಾ. ೫೬.

(ಮೂಲ)

ಅಥ ಮತಮ್ –

**ನಿರಾಕುರ್ಯಾತ್ ಪ್ರಸಂಖ್ಯಾನಂ ದುಃಖಿತ್ವಂ ಚೇತ್ ಸ್ವನುಷ್ಠಿತಮ್।**
**ಪ್ರತ್ಯಕ್ಷಾದಿವಿರುದ್ಧತ್ವಾತ್ ಕಥಮುತ್ಪಾದಯೇತ್ ಪ್ರಮಾಮ್ ॥೮೯॥**

(ಅರ್ಥ)

ಇನ್ನು (ನಿನ್ನ) ಮತವು (ಹೀಗಿದ್ದರೆ) :

೮೯. ಪ್ರಸಂಖ್ಯಾನವನ್ನು ಚೆನ್ನಾಗಿ ಸಾಧನೆಮಾಡಿದರೆ (ಅದು) ದುಃಖಿತ್ವವನ್ನು ತೊಲಗಿಸೀತು ಎನ್ನುವದಾದರೆ[1] (ಅದು) ಪ್ರತ್ಯಕ್ಷಾದಿಗಳಿಗೆ ವಿರುದ್ಧವಾಗಿರುವದರಿಂದ ಹೇಗೆತಾನೆ ಪ್ರಮೆಯನ್ನುಂಟುಮಾಡೀತು ?[2]

(ಮೂಲ)

ನನು ಪ್ರಸಂಖ್ಯಾನಂ ನಾಮ ತತ್ತ್ವಮಸ್ಯಾದಿಶಬ್ದಾರ್ಥಾನ್ವಯವ್ಯತಿರೇಕಯುಕ್ತಿವಿಷಯಬುದ್ಧ್ಯಾಮ್ರೇಡನಮ್ ಅಭಿಧೀಯತೇ । ತಚ್ಚ ಅನುಷ್ಠೀಯಮಾನಂ ಪ್ರಮಿತಿವರ್ಧನಯಾ ಪರಿಪೂರ್ಣಾಂ ಪ್ರಮಿತಿಂ ಜನಯತಿ ನ ಪುನರೈಕಾಗ್ರ್ಯವರ್ಧನಯಾ[3] । ಯಥಾ ಅಶೇಷಾಶುಚಿನೀಡೇ ಸ್ತ್ರೀಕುಣಪೇ 'ಕಾಮಿನೀ' ಇತಿ ನಿರ್ವಸ್ತುಕಃ ಪುರುಷಾಯಾಸಮಾತ್ರಜನಿತಃ ಪ್ರತ್ಯಯ ಇತಿ । ತನ್ನ । ಯತಃ –

**ಅಭ್ಯಾಸೋಪಚಯಾದ್ ಬುದ್ಧೇರ್ಯತ್ಸ್ಯಾದೈಕಾಗ್ರ್ಯಮೇವ ತತ್ ।**
**ನ ಹಿ ಪ್ರಮಾಣಾನ್ಯಭ್ಯಾಸಾತ್ ಕುರ್ವನ್ತ್ಯರ್ಥಾವಬೋಧನಮ್ ॥**
**ಅಭ್ಯಾಸೋಪಚಿತಾ ಕೃತ್ಸ್ನಂ ಭಾವನಾ ಚೇನ್ನಿವರ್ತಯೇತ್ ।**
**ನೈಕಾನ್ತಿಕೀ ನಿವೃತ್ತಿಃ ಸ್ಯಾದ್ಭಾವನಾಜಂ ಹಿ ತತ್ಫಲಮ್ ॥೯೦॥**

1. ಪ್ರತ್ಯಕ್ಷಸಿದ್ಧವಾದರೂ ಅದನ್ನು ತೊಲಗಿಸುವದೆಂದರೆ.

2. ಪ್ರಸಂಖ್ಯಾನದಿಂದ ಅನುಭವವಾಗಬಹುದು ; ಆದರೆ ಅದು ಪ್ರಮೆ, ಯಥಾರ್ಥಜ್ಞಾನ, ಎನ್ನುವದಕ್ಕೆ ಆಧಾರವಿಲ್ಲ. ಪ್ರತ್ಯಕ್ಷವಿರುದ್ಧವಾಗಿರುವದರಿಂದ ಅಪ್ರಮೆಯೆಂದು ತಿಳಿಯುವದೇ ಯುಕ್ತವಾಗುವದು. ಹೇಗೆ ಶಾಸ್ತ್ರೀಯಜ್ಞಾನದಲ್ಲಿ ಪ್ರತ್ಯಕ್ಷವಿರೋಧದಿಂದ ಪ್ರಮಾತ್ವಕ್ಕೆ ಅಡ್ಡಿಯೆನ್ನುತ್ತೀರೋ ಹಾಗೆಯೇ ಪ್ರಸಂಖ್ಯಾನದಿಂದುಂಟಾದ ಅನುಭವದ ಪ್ರಮಾತ್ವಕ್ಕೂ ಅಡ್ಡಿಯಿರುತ್ತದೆ ಎಂದು ಭಾವ.

3. ಇಲ್ಲಿರುವ ಇತಿಯನ್ನು ಬೇಕಿಲ್ಲವೆಂದು ಬಿಟ್ಟುಬಿಟ್ಟಿದ್ದೇವೆ.

(ಅರ್ಥ)

(ಪ್ರಸಂಖ್ಯಾನವಾದಿ) :- ಪ್ರಸಂಖ್ಯಾನವೆಂಬುದು ತತ್ತ್ವಮಸ್ಯಾದಿ ಶಬ್ದಾರ್ಥ(ಜ್ಞಾನ)ದ ಮತ್ತು ಅನ್ವಯವ್ಯತಿರೇಕಯುಕ್ತಿಯ ವಿಷಯದ ಬುದ್ಧಿಯನ್ನು ಅಭ್ಯಾಸಮಾಡುವದಕ್ಕೆ ಹೆಸರು[1]. ಅದನ್ನು ಅನುಷ್ಠಾನ ಮಾಡಿದರೆ ಪ್ರಮಿತಿಯನ್ನು ಬೆಳೆಯಿಸಿ ಪರಿಪೂರ್ಣವಾದ ಪ್ರಮಿತಿಯನ್ನುಂಟು ಮಾಡುತ್ತದೆಯೇ[2] ಹೊರತು- ಹೇಗೆ ಎಲ್ಲಾ ಅಶುಚಿಗೂ ಗೂಡಾಗಿರುವ ಹೆಂಗಸಿನ ಹೆಣದಲ್ಲಿ ಪುರುಷನ ಪ್ರಯತ್ನಮಾತ್ರದಿಂದ[3] ಉಂಟಾಗಿರುವ ಯಾವ ವಸ್ತುವೂ ಇಲ್ಲದೆ ಕಾಮಿನಿ(ಇವಳು) ಎಂಬ ಪ್ರತ್ಯಯದಂತೆ[4] - ಏಕಾಗ್ರತೆಯನ್ನು ಬೆಳೆಯಿಸಿ[5] (ಜ್ಞಾನವನ್ನುಂಟು)ಮಾಡುವದಿಲ್ಲವಲ್ಲ !

(ಸಿದ್ಧಾಂತಿ) :- ಇದು ಸರಿಯಲ್ಲ. ಏಕೆಂದರೆ :

೯೦-೯೧. ಅಭ್ಯಾಸದ ಹೆಚ್ಚಿಗೆಯಿಂದ ಬುದ್ಧಿಗೆ ಯಾವದು ಆಗುವದೋ ಅದು ಐಕಾಗ್ರ್ಯವೇ (ಹೊರತು ಪ್ರಮೆಯಲ್ಲ)[6]. ಏಕೆಂದರೆ

---

1. ಶಾಸ್ತ್ರಜ್ಞಾನವನ್ನೂ ಯುಕ್ತಿಯನ್ನೂ ಅಭ್ಯಾಸಮಾಡುತ್ತಿದ್ದರೆ ಆ ಅಭ್ಯಾಸದ ಬಲದಿಂದ ತತ್ತ್ವಜ್ಞಾನವಾಗುತ್ತದೆ ಎಂಬುದು ಪ್ರಸಂಖ್ಯಾನವಾದಿಯ ಮತವು. ಸೂ.ಭಾ. ೪-೧-೨, ಉ. ಸಾ. ೧೮ - ಇವುಗಳಲ್ಲಿ ಈ ಮತವನ್ನು ಅನುವಾದಮಾಡಿಕೊಂಡು ಖಂಡಿಸಿದೆ. ಸಂ. ವಾ. ದಲ್ಲಿಯೂ ಖಂಡಿಸಿದೆ.

2. ಒಂದೊಂದು ಸಲಕ್ಕೂ ನಿಜವಾದ ಜ್ಞಾನವೇ ಆಗುತ್ತದೆಯಾದ್ದರಿಂದ ಆ ಜ್ಞಾನವೂ ಬೆಳೆಯುತ್ತಾ ಹೋಗಿ ಕೊನೆಗೆ ಸಾಕ್ಷಾತ್ಕಾರರೂಪವಾದ ಪೂರ್ಣಾನುಭವವುಂಟಾಗುತ್ತದೆ.

3. ಬರಿಯ ಭಾವನೆಯಿಂದ.

4. ಬರಿಯ ಹೆಣವನ್ನೇ ಕಾಮಿನಿಯಿವಳು ಎನ್ನುವದು ನಿರ್ವಸ್ತುಕವಾದ ವಿಕಲ್ಪ ಮಾತ್ರ.

5. ಭಾವನೆಯಿಂದ ಸಾಕ್ಷಾತ್ಕಾರವನ್ನುಂಟುಮಾಡಿ ಎಂದರ್ಥ. ಮತ್ತೆಮತ್ತೆ ತತ್ತ್ವವನ್ನು ನೋಡುವದರಿಂದ ಅದರ ಪೂರ್ಣವಾದ ಜ್ಞಾನವಾಗುವದೆಂದು ಭಾವ. ಆಚಾರ್ಯರು ಹೇಳುವ ನಿದಿಧ್ಯಾಸನಕ್ಕೂ ಇದಕ್ಕೂ ಇರುವ ಹೆಚ್ಚು ಕಡಿಮೆಯನ್ನು ಪೀಠಿಕೆಯಲ್ಲಿ ಕಾಣಬಹುದು.

6. ಭಾವನೆಯ ಬೆಳವಣಿಗೆಯಿಂದಲೇ ಐಕಾಗ್ರ್ಯವೂ ತೋರಿಕೆಯ ಸಾಕ್ಷಾತ್ಕಾರವೂ ಆಗುವದು.

ಪ್ರಮಾಣಗಳು ಅಭ್ಯಾಸದಿಂದ ಅರ್ಥದ ಅರಿವನ್ನುಂಟುಮಾಡುತ್ತಿರುವದಿಲ್ಲ[1]. ಅಭ್ಯಾಸದಿಂದ ಬೆಳೆದುಕೊಂಡಿರುವ ಭಾವನೆಯು ದುಃಖವೆಲ್ಲವನ್ನೂ ತೊಲಗಿಸುವದಾದರೆ (ಆ) ನಿವೃತ್ತಿಯು ಗೊತ್ತಾಗಿ ಆಗಲಾರದು[2] ; ಏಕೆಂದರೆ ಅದು ಭಾವನೆಯಿಂದಾದ ಫಲವು[3].

(ಮೂಲ)

**ಅಪಿ ಚಾಹ –**

**ದುಃಖ್ಯಸ್ಮೀತ್ಯಪಿ ಚೇದ್ಧ್ವಸ್ತಾ ಕಲ್ಪಕೋಟ್ಯುಪಬೃಂಹಿತಾ ।**
**ಸ್ವಲ್ಪೀಯೋऽಭ್ಯಾಸಜಾ ಸ್ಥಾಸ್ನ್ವೀ ಭಾವನೇತ್ಯತ್ರಕಾ ಪ್ರಮಾ ॥೯೨॥**

(ಅರ್ಥ)

ಇನ್ನೂ ಒಂದು (ವಿಷಯ)ವನ್ನು ಹೇಳುತ್ತಾರೆ :

೯೨. ಕಲ್ಪಕೋಟಿಗಳಿಂದ ಬೆಳೆದುಕೊಂಡು ಬಂದಿದ್ದ ದುಃಖಿಯಾಗಿದ್ದೇನೆ ಎಂಬ (ಭಾವನೆಯು)[4] ನಾಶವಾದರೆ ಬಹು ಸ್ವಲ್ಪವಾದ ಅಭ್ಯಾಸದಿಂದಾದ (ಪ್ರಸಂಖ್ಯಾನ)ಭಾವನೆಯು ನಿಲ್ಲುವದೆಂಬುದಕ್ಕೆ ಪ್ರಮಾಣವೇನು[5] ?

---

1. ಪ್ರತ್ಯಕ್ಷಾದಿಪ್ರಮಾಣಗಳು ಒಂದು ಸಲ ಪ್ರವೃತ್ತವಾದದ್ದರಿಂದಲೇ ವಸ್ತುವನ್ನು ತಿಳಿಸುವವೇ ಹೊರತು ಅಭ್ಯಾಸದಿಂದ ತಿಳಿಸುವದಿಲ್ಲ. ಆದ್ದರಿಂದ ಅಭ್ಯಾಸದಿಂದ ತಿಳಿಸುವದು ಪ್ರಮಾಣವೆನಿಸಲಾರದು.

2. ಮತ್ತೊಮ್ಮೆ ಬಾರದಂತೆ ನಿವೃತ್ತಿಯಾಗಲಾರದು.

3. ಭಾವನೆಯಿಂದಾದದ್ದು ಭಾವನೆಯ ಬಲವನ್ನು ಅನುಸರಿಸಿರುತ್ತದೆ, ವಸ್ತುಸ್ಥಿತಿಯನ್ನಲ್ಲ.

4. ದುಃಖಿತ್ವಭಾವನೆಯು ಜೀವನನ್ನು ಎಷ್ಟೋ ಜನ್ಮಗಳಿಂದ ಹಿಂಬಾಲಿಸಿರುತ್ತದೆ.

5. ಪ್ರಸಂಖ್ಯಾನವು ಭಾವನೆಯಾದ್ದರಿಂದ ಅದರ ಫಲವು ನಾಶವಾಗಬೇಕು ; ಏಕೆಂದರೆ ಅದು ಹಿಂದಿನ ಭಾವನೆಯಂತೆಯೇ ತಾನೂ ಒಂದು ಭಾವನೆಯಾಗಿದೆ - ಎಂಬುದಿಷ್ಟೇ ಅಲ್ಲ. ಅದು ಇನ್ನೂ ಬೇಗ ನಾಶವಾಗಬೇಕು, ಏಕೆಂದರೆ ಅದು ಬಹಳ ಸ್ವಲ್ಪಕಾಲಮಾಡಿದ ಭಾವನೆಯ ಅಭ್ಯಾಸದ ಫಲವಾಗಿರುತ್ತದೆ.

(ಮೂಲ)

**ನನು ಶಾಸ್ತ್ರಾತ್ ಸ್ಥಾಸ್ನುತ್ವಂ ಭವಿಷ್ಯತಿ । ನೈವಮ್ । ಯಥಾವಸ್ಥಿತವಸ್ತುಯಾಥಾತ್ಮ್ಯಾವಬೋಧಮಾತ್ರಕಾರಿತ್ವಾತ್ ಶಾಸ್ತ್ರಸ್ಯ । ನ ಹಿ ಪದಾರ್ಥಶಕ್ತ್ಯಾಧಾನಕೃತ್ ಶಾಸ್ತ್ರಮ್ । ಪ್ರಸಿದ್ಧಂ ಚ ಲೋಕೇ –**

**ಭಾವನಾಜಂ ಫಲಂ ಯತ್ ಸ್ಯಾದ್ಯಚ್ಚ ಸ್ಯಾತ್ ಕರ್ಮಣಃ ಫಲಮ್ ।**
**ನ ತತ್ಸ್ಥಾಸ್ನ್ವಿತಿ ಮನ್ತವ್ಯಂ ದ್ರವಿಡೇಷ್ವಿವ ಸಙ್ಗತಮ್ ॥೯೩॥**

(ಅರ್ಥ)

(ಪ್ರಸಂಖ್ಯಾನವಾದಿ) :- ಶಾಸ್ತ್ರದಿಂದ (ಪ್ರಸಂಖ್ಯಾನ) ಫಲವು ಸ್ಥಿರವಾಗಬಹುದಲ್ಲ [1] !

(ಸಿದ್ಧಾಂತಿ) :- ಹಾಗಲ್ಲ. ಸಿದ್ಧವಸ್ತುವಿನ ನಿಜವಾದ ಜ್ಞಾನವೊಂದನ್ನೇ ಶಾಸ್ತ್ರವು ಉಂಟುಮಾಡುತ್ತದೆ. ಶಾಸ್ತ್ರವು ಪದಾರ್ಥಗಳಿಗೆ ಶಕ್ತಿಯನ್ನು (ಹೊಸದಾಗಿ) ಉಂಟುಮಾಡುವದಿಲ್ಲವಷ್ಟೆ[2]. ಲೋಕದಲ್ಲಿ (ಇದು) ಪ್ರಸಿದ್ಧವೂ ಆಗಿರುತ್ತದೆ [3] :

೯೩. ಯಾವದು ಭಾವನೆಯಿಂದುಂಟಾಗಿರುವ ಫಲವಾಗಿರುವದೋ, ಮತ್ತು ಯಾವದು ಕರ್ಮದ ಫಲವಾಗಿರುವದೋ ಅದನ್ನು ಸ್ಥಿರವೆಂದೆಣಿಸಬಾರದು. ದ್ರವಿಡರ ಸ್ನೇಹದಂತೆಯೇ (ಅದು) [4].

---

1. 'ಮತ್ತೆ ಸಂಸಾರಕ್ಕೆ ಮರಳುವದಿಲ್ಲ' (ಛಾಂ. ೮-೧೫-೧) ಎಂಬ ಶಾಸ್ತ್ರವು ಭಾವನಾಫಲಕ್ಕೂ ನಿತ್ಯತ್ವವನ್ನು ಹೇಳುತ್ತದೆ ಎಂದು ಭಾವ.

2. ಶಾಸ್ತ್ರವು ಇರುವದನ್ನು ತಿಳಿಸುತ್ತದೆ, ಇಲ್ಲದ್ದನ್ನುಂಟುಮಾಡುವದಿಲ್ಲ. 'ಕರ್ಮದಿಂದ ಅಕೃತವಾದ ಮೋಕ್ಷವಾಗುವದಿಲ್ಲ' (ಮುಂ. ೧-೨-೧೨) ಎಂಬ ಯುಕ್ತಿಬಲದಿಂದ ಕೂಡಿದ ಶ್ರುತಿಗೆ ವಿರುದ್ಧವಾಗಿರುವದರಿಂದ ಅನಾವೃತ್ತಿಶ್ರುತಿಯು ಭಾವನಾಜನ್ಯವಾದದ್ದು ನಿತ್ಯವೆಂದು ತಿಳಿಸಲಾರದು. ಬ್ರಹ್ಮಲೋಕಕ್ಕೆ ಹೋದವರಿಗೆ ಬ್ರಹ್ಮಜ್ಞಾನದ ಮೂಲಕವಾಗಿ ಅನಾವೃತ್ತಿಯಾಗುವದೆಂದೋ ಅಥವಾ ಈ ಕಲ್ಪದಲ್ಲಿ ಅನಾವೃತ್ತಿಯೆಂದೋ ಅದಕ್ಕೆ ಕಲ್ಪಿಸಲೂಬಹುದಾಗಿದೆ.

3. ದೃಷ್ಟವಿರುದ್ಧವಾದ್ದರಿಂದಲೂ ಶಾಸ್ತ್ರಪ್ರಮಾಣ್ಯದಿಂದ ಭಾವನಾಫಲಕ್ಕೆ ನಿತ್ಯತ್ವವನ್ನು ಕಲ್ಪಿಸುವದಕ್ಕಾಗುವದಿಲ್ಲ ಎಂದರ್ಥ.

4. ಸುರೇಶ್ವರಾಚಾರ್ಯರ ಕಾಲಕ್ಕೆ ಉತ್ತರದೇಶದಲ್ಲಿ ದ್ರವಿಡರ ವಿಷಯದಲ್ಲಿ ಈ ಕೆಟ್ಟ ಅಭಿಪ್ರಾಯವಿತ್ತೆಂದು ತೋರುತ್ತದೆ.

(ಮೂಲ)

ಯದ್ಯಪಿ ಪ್ರತ್ಯಕ್ಷಾದಿಪ್ರಮಾಣೋಪಾತ್ತಮ್ ಆತ್ಮನೋ ದುಃಖಿತ್ವಮ್ । ತಥಾಪಿ ತತ್ತ್ವಮಸ್ಯಾದಿವಾಕ್ಯೋತ್ಥಪ್ರತ್ಯಯ ಏವ ಬಲೀಯಾನ್ ಇತಿ ನಿಶ್ಚಯಃ । ಅವ್ಯಭಿಚಾರಿಪ್ರಾಮಾಣ್ಯವಾಕ್ಯೋಪಾತ್ತತ್ವಾತ್, ಪ್ರಮೇಯಸ್ಯ ಚ ಸ್ವತ ಏವ ನಿರ್ದುಃಖಿತ್ವಸಿದ್ಧೇಃ । ಪ್ರತ್ಯಕ್ಷಾದೇಸ್ತು ವ್ಯಭಿಚಾರಿತ್ವಾತ್ [1], ಸಂಭಾವನಾಯಾಶ್ಚ ಪುರುಷಪರಿಕಲ್ಪನಾಮಾತ್ರಾವಷ್ಟಮ್ಭಾಚ್ಚೇತಿ –

**ನಿರ್ದುಃಖಿತ್ವಂ ಸ್ವತಃಸಿದ್ಧಂ ಪ್ರತ್ಯಕ್ಷಾದೇಶ್ಚ ದುಃಖಿತಾ ।**
**ಕೋ ಹ್ಯಾತ್ಮಾನಮನಾದೃತ್ಯ ವಿಶ್ವಸೇದ್ ಬಾಹ್ಯಮಾನತಃ ॥೯೪॥**

(ಅರ್ಥ)

ಪ್ರತ್ಯಕ್ಷಾದಿಪ್ರಮಾಣಗಳಿಂದ ಆತ್ಮನು ದುಃಖಿಯೆಂಬುದು (ಸಿದ್ಧವಾಗಿದೆ ಎಂದೇ ಒಪ್ಪೋಣ) [2] ; ಆದರೂ ತತ್ತ್ವಮಸಿ ಮುಂತಾದ ವಾಕ್ಯಗಳಿಂದ ಉಂಟಾದ ಪ್ರತ್ಯಯವೇ (ಅದಕ್ಕಿಂತ) ಪ್ರಬಲವೆಂದೇ ನಿಶ್ಚಯ (ಮಾಡಬೇಕು). ಏಕೆಂದರೆ, ಪ್ರಾಮಾಣ್ಯವು ವ್ಯಭಿಚರಿತವಾಗದ ವಾಕ್ಯದಿಂದ (ಆ ಜ್ಞಾನವು) ಉಂಟಾಗಿರುತ್ತದೆ [3], ಪ್ರಮೇಯ(ವಾದ ಆತ್ಮನು) ದುಃಖಿಯಲ್ಲವೆಂಬುದು ತಾನೇ ಸಿದ್ಧವಾಗಿರುತ್ತದೆ [4]. ಪ್ರತ್ಯಕ್ಷಾದಿಗಳಾದರೋ

---

1. 'ಸವ್ಯಭಿಚಾರಿತ್ವಾತ್' ಎಂಬ ಪಾಠವು ಸರಿಯಲ್ಲ. 'ವ್ಯಭಿಚಾರಿತ್ವಾತ್' ಅಥವಾ 'ಸವ್ಯಭಿಚಾರತ್ವಾತ್' ಎಂದೇ ಇರಬೇಕು.

2. ಪ್ರತ್ಯಕ್ಷವಿರುದ್ಧವಾದರೆ ಶಾಸ್ತ್ರಕ್ಕೆ ದೃಷ್ಟಿವಿಧಾನಪರತ್ವವನ್ನು ಕಲ್ಪಿಸಬೇಕೆಂದೂ (೩-೮೧), ಪ್ರತ್ಯಕ್ಷವಿರುದ್ಧವಾದರೆ ಪ್ರಸಂಖ್ಯಾನಜನ್ಯಾನುಭವವೂ ಪ್ರಮೆಯಾಗದೆ ಹೋಗುವದೆಂದೂ (೩-೮೮) ಹಿಂದೆ ಹೇಳಿತ್ತು. ಈಗ ಪ್ರತ್ಯಕ್ಷಕ್ಕೆ ವಿರುದ್ಧವಾದರೂ ಶಾಸ್ತ್ರವೇ ಪ್ರಬಲವೆಂದು ಹೇಳಿದೆ.

3. ಅಪೌರುಷೇಯವಾದ್ದರಿಂದ ವೇದವಾಕ್ಯದಲ್ಲಿ ದೋಷಭಾವನೆಯಿಲ್ಲದ್ದರಿಂದಲೂ ಅಪ್ರಾಮಾಣ್ಯಕಾರಣವಾದ ಅಬೋಧಕತ್ವಾದಿಗಳೂ ಇಲ್ಲದ್ದರಿಂದಲೂ ವಾಕ್ಯಜನ್ಯಜ್ಞಾನವೇ ಪ್ರಬಲ ಎಂದು ಅಭಿಪ್ರಾಯ. ಶಾ. ಭಾ. ಜೈ. ಸೂ. ೧-೧-೨ನ್ನು ನೋಡಿ.

4. ಏಕೆಂದರೆ ಹಿಂದೆಯೇ (೨-೭೬) ಹೇಳಿರುವಂತೆ ಸಾಕ್ಷಿಯಾದ ಆತ್ಮನಿಗೆ ದುಃಖಿತ್ವವಿರಲಾರದು. ಪ್ರತ್ಯಗ್ದೃಷ್ಟಿಯಿಂದ ನಿರ್ದುಃಖಿತ್ವವು ತಾನೇ ಸಿದ್ಧವಾಗಿದೆ.

ವ್ಯಭಿಚಾರವುಳ್ಳವುಗಳಾಗಿವೆ[1], ಮತ್ತು ಸಂಭಾವನೆಯು ಪುರುಷಕಲ್ಪನೆಯನ್ನು ಮಾತ್ರವೇ ಆಶ್ರಯಿಸಿಕೊಂಡಿರುತ್ತದೆ[2].

೯೪. ನಿರ್ದುಃಖಿತ್ವವು ಸ್ವತಃಸಿದ್ಧವಾಗಿದೆ, ಪ್ರತ್ಯಕ್ಷಾದಿ(ಪ್ರಮಾಣ)ದಿಂದ ದುಃಖಿತ್ವವು (ಸಿದ್ಧವಾಗುತ್ತದೆ). ತನ್ನನ್ನು ಅನಾದರಣಮಾಡಿ ಯಾವನು ತಾನೆ ಹೊರಗಿನ ಪ್ರಮಾಣದಲ್ಲಿ ವಿಶ್ವಾಸವಿಟ್ಟಾನು[3] ?

(ಮೂಲ)

ಸಂಬನ್ಧಾರ್ಥ ಏವ –

**ಅಪಿ ಪ್ರತ್ಯಕ್ಷಬಾಧೇನ ಪ್ರವೃತ್ತಿಃ ಪ್ರತ್ಯಗಾತ್ಮನಿ ।**
**ಪರಾಞ್ಚಿ ಖಾನೀತ್ಯೇತಸ್ಮಾದ್ವಚಸೋ ಗಮ್ಯತೇ ಶ್ರುತೇಃ ॥೯೫॥**

(ಅರ್ಥ)

ಸಂಬಂಧದ ಅರ್ಥದಲ್ಲಿಯೇ[4] (ಹೇಳುತ್ತಾರೆ) :

---

1. ಕಪ್ಪೆಯಚಿಪ್ಪು ಬೆಳ್ಳಿಯಂತೆ ಕಾಣುತ್ತದೆ ; ಆದ್ದರಿಂದ ಪ್ರತ್ಯಕ್ಷವು ವ್ಯಭಿಚಾರಿ, ಪ್ರಾಮಾಣ್ಯದಲ್ಲಿ ಮಾರ್ಪಡತಕ್ಕದ್ದು . ಪ್ರತ್ಯಕ್ಷಮೂಲವಾದ್ದರಿಂದ ಮಿಕ್ಕ ಪ್ರಮಾಣಗಳೂ ವ್ಯಭಿಚಾರಿಗಳು. 'ತತ್ರ ನಿಮಿತ್ತಪರೀಷ್ಟಿಃ' (ಜೈ. ೧-೧-೨) ಎಂಬ ಸೂತ್ರದ ವೃತ್ತಿಕಾರವ್ಯಾಖ್ಯಾನವನ್ನು ನೋಡಿ.

2. ವಾಕ್ಯವೂ ವ್ಯಭಿಚರಿತವಾಗಬಹುದು, ಏಕೆಂದರೆ ಲೋಕದಲ್ಲಿ ಹಾಗೆ ಕಂಡಿದೆ - ಎಂಬುದು ಸಂಭಾವನಾಮಾತ್ರವಾಗಿದೆ. ಲೌಕಿಕವಾಕ್ಯವು ವ್ಯಭಿಚರಿತವಾದರೆ ವೈದಿಕವಾಕ್ಯವೂ ವ್ಯಭಿಚರಿತವಾಗಬೇಕೆಂಬುದೇನೂ ಇಲ್ಲ . ಪೌರುಷೇಯ ವಾಕ್ಯಕ್ಕೆ ವ್ಯಭಿಚರಿತಪ್ರಾಮಾಣ್ಯವು ಕಂಡಿದ್ದರೂ ಅಪೌರುಷೇಯವಾಕ್ಯಕ್ಕೆ ಅದನ್ನು ಕಲ್ಪಿಸಲು ಕಾರಣವಿಲ್ಲ- ಎಂದು ಅಭಿಪ್ರಾಯ.

3. ಪ್ರಮಾಣಗಳೂ ಆತ್ಮನಿಗೆ ಹೊರಚ್ಚೇ ಆಗಿದೆ. ಅವೂ ಆತ್ಮಾನುಭವದಿಂದಲೇ ಸಿದ್ಧಿಯಾಗಬೇಕು. ಹೀಗಿರುವಲ್ಲಿ ಆತ್ಮಾನುಭವದಿಂದ ಕಾಣುತ್ತಿರುವ ನಿರ್ದುಃಖಿತ್ವವನ್ನು ಒತ್ತರಿಸಿ ಪ್ರಮಾಣದಿಂದ ಸಿದ್ಧವಾಗುವ ದುಃಖಿತ್ವವನ್ನು ಸ್ವೀಕರಿಸುವದಕ್ಕೆ ಕಾರಣವಿಲ್ಲ .

4. ಹಿಂದಿನ ಶ್ಲೋಕದಲ್ಲಿ ಸಂಬಂಧೋಕ್ತಿಯಲ್ಲಿ ವಾಕ್ಯದಿಂದಾಗುವ ಜ್ಞಾನವೇ ಪ್ರತ್ಯಕ್ಷಾದಿಜನ್ಯಜ್ಞಾನಕ್ಕಿಂತ ಪ್ರಬಲ ಎಂದು ಹೇಳಿತ್ತಷ್ಟೆ . ಆ ವಿಷಯದಲ್ಲಿಯೇ ಪ್ರಮಾಣವನ್ನು ಹೇಳುತ್ತಾರೆ ಎಂದರ್ಥ.

೯೫. ಪ್ರತ್ಯಕ್ಷವನ್ನೂ ಬಾಧಿಸಿ ಶ್ರುತಿಯು ಪ್ರತ್ಯಗಾತ್ಮನಲ್ಲಿ ಪ್ರವರ್ತಿಸುವದೆಂಬುದು ''ಪರಾಞ್ಚಿ ಖಾನಿ'' (ಕ. ೨-೧-೧ ಸ್ವಯಂಭುವು ಇಂದ್ರಿಯಗಳನ್ನು ಹೊರಗಡೆಗೆ ಕೊರೆದಿರುತ್ತಾನೆ. ಆದ್ದರಿಂದ ಹೊರಕ್ಕೆ ನೋಡುತ್ತಾರೇ ಹೊರತು ತಮ್ಮ ಒಳಗಡೆಗೆ ನೋಡುವದಿಲ್ಲ. ಯಾವನೋ ಒಬ್ಬ ಧೀರನು ಕಣ್ಣನ್ನು ಹಿಂತಿರುಗಿಸಿಕೊಂಡು, ಅಮೃತತತ್ವವನ್ನು ಬಯಸಿ, ಪ್ರತ್ಯಗಾತ್ಮನನ್ನು ನೋಡುತ್ತಾನೆ) ಎಂಬೀ ವಚನದಿಂದ ತಿಳಿಯಬರುತ್ತದೆ[1].

(ಮೂಲ)

ಅಭ್ಯುಪಗಮ್ಯೈವಮುಚ್ಯತೇ । ನ ತು ಪ್ರಮಾಣಂ ಸತ್ ಪ್ರಮಾಣಾನ್ತರೇಣ ವಿರುಧ್ಯತ ಇತಿ ಅಸಕೃತ್ ಅವೋಚಾಮ । ಯತ್ರಾಪಿ ವಾಕ್ಯಪ್ರತ್ಯಕ್ಷಯೋರ್ವಿರೋಧಶಙ್ಕಾ ತತ್ರಾಪಿ ಪುರುಷಮೋಹವಶಾದೇವ ಸಾ ಜಾಯತೇ ನ ತು ಪರಮಾರ್ಥತಃ ಇತಿ । ಅತ ಆಹ –

**ಪ್ರಮಾಂ ಚೇಜ್ಜನಯೇದ್ವಾಕ್ಯಂ ಪ್ರತ್ಯಕ್ಷಾದಿವಿರೋಧಿನೀಮ್ ।**
**ಗೌಣೀಂ ಪ್ರತ್ಯಕ್ಷತಾಂ ಬ್ರೂಯಾನ್ಮುಖ್ಯಾರ್ಥಾಸಂಭವಾದ್ ಬುಧಃ॥**

(ಅರ್ಥ)

ಒಪ್ಪಿಕೊಂಡು ಹೀಗೆ ಹೇಳಿರುತ್ತೇವೆ[2]. ಆದರೆ ಪ್ರಮಾಣವಾಗಿದ್ದುಕೊಂಡಿರುವದು ಮತ್ತೊಂದು ಪ್ರಮಾಣಕ್ಕೆ ವಿರುದ್ಧವಾಗಿರುವದಿಲ್ಲ- ಎಂದು ಹಲವು ಸಾರಿ ಹೇಳಿರುತ್ತೇವೆ[3]. (ಇನ್ನು) ಎಲ್ಲಿ ವಾಕ್ಯಪ್ರತ್ಯಕ್ಷಗಳಿಗೆ ವಿರೋಧವಾಗಿರುವಂತೆ ಆಶಂಕೆಯುಂಟಾಗುವದೋ ಅಲ್ಲಿಯೂ ಪುರುಷಭ್ರಾಂತಿಯಿಂದಲೇ ಆ (ಆಶಂಕೆ)ಯುಂಟಾಗುತ್ತದೆಯೇ ಹೊರತು ನಿಜವಾಗಿ (ವಿರೋಧ)ವಿರುವದಿಲ್ಲ. ಆದ್ದರಿಂದ ಹೇಳುತ್ತಾರೆ -

---

1. ಚಕ್ಷುರಾದೀಂದ್ರಿಯಗಳನ್ನು ಹಿಂತಿರುಗಿಸಿಕೊಂಡು ಆತ್ಮನನ್ನು ನೋಡಬೇಕು- ಎಂದು ಸ್ಪಷ್ಟವಾಗಿ ಇಲ್ಲಿ ಹೇಳಿದೆ. ಆದ್ದರಿಂದ ಪ್ರತ್ಯಕ್ಷಾದಿಗಳಿಗೆ ಇಲ್ಲಿ ದೌರ್ಬಲ್ಯವೇ.

2. ವಾಕ್ಯಪ್ರತ್ಯಕ್ಷಗಳಿಗೆ ವಿರೋಧವನ್ನು ಒಪ್ಪಿಕೊಂಡು ಶಾಸ್ತ್ರವಾಕ್ಯವೇ ಪ್ರಬಲವೆಂದೆವು.

3. ಇದೇ ಸಿದ್ಧಾಂತವು. ಪ್ರಮಾಣಾಭಾಸವು ಬಾಧಿತವಾಗಬಹುದು ; ಪ್ರಮಾಣವು ಬಾಧಿತವಾಗುವದಿಲ್ಲ.

೯೬. ಪ್ರತ್ಯಕ್ಷವೇ ಮುಂತಾಗಿರುವ (ಪ್ರಮಾಣಗಳಿಗೆ) ವಿರುದ್ಧವಾದ (ಅರ್ಥದಲ್ಲಿ) ಪ್ರಮೆಯನ್ನು ವಾಕ್ಯವು ಉಂಟುಮಾಡಿದರೆ (ಅಲ್ಲಿ) ವಿವೇಕಿಯಾದವನು ಪ್ರತ್ಯಕ್ಷವನ್ನು ಗೌಣವೆಂದು ಹೇಳಬೇಕು ; ಏಕೆಂದರೆ ಮುಖ್ಯಾರ್ಥವು ಸಂಭವಿಸುವದಿಲ್ಲ .

(ಮೂಲ)

ತಸ್ಯಾರ್ಥಸ್ಯ ಸುಖಪ್ರತಿಪತ್ತ್ಯರ್ಥಮ್ ಉದಾಹರಣಮ್ –

**ಅಗ್ನಿಃ ಸಮ್ಯಗಧೀತೇಽಸೌ ಜಹಾಸೋಚ್ಚೈಶ್ಚ ಮಞ್ಚಕಃ ।**
**ಯಥಾ ತದ್ವದಹಂವೃತ್ತ್ಯಾ ಲಕ್ಷ್ಯತೇಽನರ್ಹಯಾಪಿ ಸಃ ॥೯೭॥**

(ಅರ್ಥ)

ಈ ಅರ್ಥವು ಸುಲಭವಾಗಿ ತಿಳಿಯುವದಕ್ಕಾಗಿ[1] ಉದಾಹರಣೆ(ಯನ್ನು ಕೊಡುತ್ತಾರೆ) :

೯೭. 'ಈ ಅಗ್ನಿಯು ಚೆನ್ನಾಗಿ ಅಧ್ಯಯನಮಾಡುತ್ತಾನೆ', 'ಮಂಚಿಕೆಯು ಗಟ್ಟಿಯಾಗಿ ನಕ್ಕಿತು'[2] - ಎಂಬುದು ಹೇಗೋ ಅದರಂತೆ ಅರ್ಹವಲ್ಲದ ಅಹಂವೃತ್ತಿಯಿಂದಲೂ ಆ (ಆತ್ಮನು) ಲಕ್ಷಿತನಾಗಿರುತ್ತಾನೆ[3].

(ಮೂಲ)

**ಕಸ್ಮಾತ್ ಪುನಃ ಕಾರಣಾತ್ ಸಾಕ್ಷಾದೇವಾತ್ಮಾ ನಾಭಿಧೀಯತೇ ? ಕಿಮನಯಾ ಕಲ್ಪನಯಾ ಇತಿ ? ತತ್ರಾಹ –**

---

1. ಗೌಣವಾದ ಅರ್ಥವನ್ನು ತೆಗೆದುಕೊಳ್ಳಬೇಕಾದದು ಎಲ್ಲಿ ಎಂಬುದು ತಿಳಿಯುವದಕ್ಕಾಗಿ.

2. ಅಗ್ನಿ ಎಂಬ ಶಬ್ದವು ಅಧ್ಯಯನವನ್ನು ಮಾಡುವ ಹುಡುಗನನ್ನು ವಾಚ್ಯವೃತ್ತಿಯಿಂದ ಹೇಳಲಾರದು ; ಆದ್ದರಿಂದ ಗೌಣವೃತ್ತಿಯಿಂದ ತೇಜಸ್ವಿಯಾದ ಹುಡುಗನನ್ನು ಹೇಳುತ್ತದೆ. ಹೀಗೆಯೇ ಮಂಚಿಕೆಯು ನಗುವವನನ್ನು ಮುಖ್ಯ ವೃತ್ತಿಯಿಂದ ಹೇಳಲಾರದು ; ಆದ್ದರಿಂದ ಗೌಣವೃತ್ತಿಯಿಂದ ಮಂಚಿಕೆಯಲ್ಲಿ ಕುಳಿತಿರುವವನನ್ನು ಹೇಳುತ್ತದೆ.

3. ಅಹಂ (ನಾನು) ಎಂಬುದು ಆತ್ಮನ ವಾಚಕವಾಗಲಾರದು ; ಲಕ್ಷಣೆಯಿಂದ ಪ್ರತ್ಯಗಾತ್ಮನನ್ನು ಹೇಳುತ್ತದೆ.

**ತ್ವಮಿತ್ಯೇತದ್ವಿಹಾಯಾನ್ಯನ್ನ ವರ್ತ್ಮಾತ್ಮಾವಬೋಧನೇ ।**
**ಸಮಸ್ತೀಹ ತ್ವಮರ್ಥೋಽಪಿ ಗುಣಲೇಶೇನ ವರ್ತತೇ ॥೯೮॥**

(ಅರ್ಥ)

(ಆಕ್ಷೇಪ) :- ಆತ್ಮನನ್ನು ನೇರಾಗಿಯೇ (ಅಹಂಶಬ್ದವು) ಹೇಳುವದಿಲ್ಲವೆಂಬುದಕ್ಕೆ ಕಾರಣವೇನು ? ಈ (ಲಕ್ಷಣಾ)ಕಲ್ಪನೆಯಿಂದ (ಆಗಬೇಕಾದದ್ದು ) ಏನು [1] ?

(ಪರಿಹಾರ) :- ಇದಕ್ಕೆ ಹೇಳುತ್ತಾರೆ :

೯೮. 'ನೀನು' ಎಂಬಿದನ್ನು ಬಿಟ್ಟರೆ [2] ಆತ್ಮನನ್ನು ತಿಳಿಸುವದಕ್ಕೆ ಬೇರೆ ದಾರಿಯು ಸಂಭವಿಸುವದೇ ಇಲ್ಲ . ತ್ವಮರ್ಥವು ಕೂಡ ಗುಣಲೇಶದಿಂದ [3] (ಆತ್ಮನಲ್ಲಿ ) ವೃತ್ತಿಯುಳ್ಳದ್ದಾಗಿದೆ.

(ಮೂಲ)

ಕಸ್ಮಾತ್ ಪುನರ್ಹೇತೋರ್ಹ್ಯಹಮಿತ್ಯೇತದಪಿ ಗುಣಲೇಶೇನ ವರ್ತತೇ, ನ ಪುನಃ ಸಾಕ್ಷಾದೇವೇತಿ ? ವಿಧೂತಸರ್ವಕಲ್ಪನಾಕಾರಣಸ್ವಾಭಾವ್ಯಾದಾತ್ಮನಃ । **ಅತ ಆಹ –**

**ವ್ಯೋಮ್ನಿ ಧೂಮತುಷಾರಾಭ್ರಮಲಿನಾನೀವ ದುರ್ಧಿಯಃ ।**
**ಕಲ್ಪಯೇಯುಸ್ತಥಾ ಮೂಢಾಃ ಸಂಸಾರಂ ಪ್ರತ್ಯಗಾತ್ಮನಿ ॥೯೯॥**

(ಅರ್ಥ)

(ಪ್ರಶ್ನೆ ) :- 'ನಾನು' ಎಂಬಿದೂ ಗುಣಲೇಶದಿಂದಲೇ ವೃತ್ತಿಯುಳ್ಳದ್ದಾಗಿದೆ ಎಂಬುದಕ್ಕೆ ಹೇತುವೇನು ? ನೇರಾಗಿಯೇ (ವೃತ್ತಿ ) ಏಕಿಲ್ಲ ?

---

1. ಅಹಂಕಾರವು ಆತ್ಮನಿಗೆ ಸಂಬಂಧಪಟ್ಟೇ ಇಲ್ಲ ಎಂಬುದನ್ನು ಪ್ರಮಾಣಾಂತರಾವಿರೋಧವನ್ನು ತೋರಿಸುವದಕ್ಕಾಗಿ ಮತ್ತೆ ಇಲ್ಲಿ ಮುಂದಿನ ಗ್ರಂಥದಲ್ಲಿ ಸ್ಪಷ್ಟಪಡಿಸಿದೆ. ಅದಕ್ಕಾಗಿ ಈ ಆಕ್ಷೇಪಪರಿಹಾರಗಳು ಪ್ರಾರಂಭವಾಗಿವೆ.

2. ನೀನು ಎಂಬ ಅಹಂವಿಶಿಷ್ಟಾತ್ಮವಾಚಕವನ್ನು ಬಿಟ್ಟರೆ ಎಂದರ್ಥ. ಅಹಂ ವೃತ್ತಿಯೇ ವಿವಕ್ಷಿತ.

3. ಪ್ರತ್ಯಕ್ತ್ವಾದಿಗುಣಸಾಮಾನ್ಯದಿಂದ. ಇದು ಮುಂದೆ ಸ್ಪಷ್ಟವಾಗುವದು.

(ಉತ್ತರ) :- ಏಕೆಂದರೆ ಆತ್ಮನು ಯಾವ ಕಲ್ಪನೆಯ ಕಾರಣವೂ ಇಲ್ಲದ ಸ್ವಭಾವದವನಾಗಿರುತ್ತಾನೆ[1]. ಆದ್ದರಿಂದ (ಇದನ್ನು) ಹೇಳುತ್ತಾರೆ :

೯೯. ಆಕಾಶದಲ್ಲಿ ಹೊಗೆ, ಮಂಜು, ಮೋಡ, ಕಲ್ಮಷ ಇವುಗಳನ್ನು ಹೇಗೆ ಅವಿವೇಕಿಗಳು (ಕಲ್ಪಿಸುವರೋ) ಹಾಗೆ ಮೂಢರು ಪ್ರತ್ಯಗಾತ್ಮನಲ್ಲಿ ಸಂಸಾರವನ್ನು ಕಲ್ಪಿಸುವರು.

(ಮೂಲ)

ನನು ಸರ್ವಕಲ್ಪನಾನಾಮಪಿ ಆತ್ಮನಿ ಅತ್ಯನ್ತಾಸಂಭವೇ ಸಮಾನೇ ಅಹಂವೃತ್ತೌ ಕಃ ಪಕ್ಷಪಾತೇ ಹೇತುಃ, ಯೇನ ವೃತ್ತ್ಯನ್ತರಾಣಿ ವಿಧೂಯ ಅಹಂವೃತ್ತ್ಯೈವ ಆತ್ಮಾ ಉಪಲಕ್ಷ್ಯತ ಇತಿ ? ಉಚ್ಯತೇ–

ಚಿನ್ನಿಭೇಯಮಹಂವೃತ್ತಿಃ ಪ್ರತೀಚೀವಾತ್ಮನೋಽನ್ಯತಃ ।
ಪೂರ್ವೋಕ್ತೇಭ್ಯಶ್ಚ ಹೇತುಭ್ಯಸ್ತಸ್ಮಾದಾತ್ಮಾಽನಯೋಚ್ಯತೇ ॥೧೦೦॥
ವೃತ್ತಿಭಿರ್ಯುಷ್ಮದರ್ಥಾಭಿರ್ಲಕ್ಷ್ಯತೇ ಚೇದ್ದೃಶಿಃ ಪರಃ ।
ಅನಾತ್ಮತ್ವಂ ಭವೇತ್ತಸ್ಯ ವಿತಥಂ ಚ ವಚಃ ಶ್ರುತೇಃ ॥೧೦೧॥

(ಅರ್ಥ)

(ಆಕ್ಷೇಪ) :- ಎಲ್ಲಾ ಕಲ್ಪನೆಗಳೂ ಆತ್ಮನಲ್ಲಿ ಅತ್ಯಂತವಾಗಿ ಅಸಂಭಾವಿತವಾಗಿರುವವೆಂಬುದು ಸಮಾನವಾಗಿರುವಲ್ಲಿ ಅಹಂವೃತ್ತಿಯಲ್ಲಿಯೇ ಪಕ್ಷಪಾತವಿರುವದಕ್ಕೆ ಹೇತುವೇನು ? ಮಿಕ್ಕ ವೃತ್ತಿಗಳನ್ನು ಬಿಟ್ಟು ಅಹಂವೃತ್ತಿಯಿಂದಲೇ ಆತ್ಮನನ್ನು ಲಕ್ಷಿಸಿರುವದಕ್ಕೆ (ಕಾರಣವೇನು) ?

(ಪರಿಹಾರ) :- ಹೇಳುತ್ತೇವೆ :

೧೦೦-೧೦೧. ಈ ಅಹಂವೃತ್ತಿಯು ಚಿದಾಭಾಸವಾಗಿರುವದರಿಂದಲೂ[2] ಹಿಂದೆ ಹೇಳಿರುವ ಹೇತುಗಳಿಂದಲೂ[3] ತನಗಿಂತ ಬೇರೆಯಾಗಿರುವ

1. ಅಭಿಧೇಯತ್ವಕ್ಕೆ ಕಾರಣವಾದ ಜಾತ್ಯಾದಿಶಬ್ದಪ್ರವೃತ್ತಿನಿಮಿತ್ತಗಳು ಯಾವವೂ ಆತ್ಮನಲ್ಲಿಲ್ಲ.

2. ಆತ್ಮಚೈತನ್ಯದ ಆಭಾಸವು ಅಹಂಕಾರದಲ್ಲಿ ಸ್ಫುಟವಾಗಿ ತೋರುತ್ತದೆ.

3. ೨-೫೪, ೫೫, ೫೬. ಈ ಶ್ಲೋಕಗಳನ್ನು ನೋಡಿ.

(ಅನಾತ್ಮಕ್ಕಿಂತ) ಪ್ರತ್ಯಗ್ರೂಪವಾಗಿರುವಂತೆ (ಕಾಣುತ್ತದೆ). ಆದ್ದರಿಂದ ಆತ್ಮನನ್ನು ಈ (ವೃತ್ತಿಯಿಂದ) ಹೇಳಿರುತ್ತದೆ[1]. ಯುಷ್ಮದರ್ಥಗಳಾದ ವೃತ್ತಿಗಳಿಂದ[2] ಪರಮಾತ್ಮನಾದ ದೃಗಾತ್ಮನನ್ನು[3] ಲಕ್ಷಿಸಿದ್ದರೆ ಅವನಿಗೆ ಅನಾತ್ಮತ್ವವುಂಟಾಗುತ್ತಿತ್ತು . ಶ್ರುತಿವಾಕ್ಯವು ಸುಳ್ಳು ಆಗುತ್ತಿತ್ತು[4].

(ಮೂಲ)

ಯಥೋಕ್ತೇನ –

**ಅನೇನ ಗುಣಲೇಶೇನ ಹ್ಯತ್ಯಹಂಕರ್ತೃಕರ್ಮಯಾ ।**
**ಲಕ್ಷ್ಯತೇಽಸಾವಹಂವೃತ್ತ್ಯಾ ನಾಞ್ಜಸಾತ್ರಾಭಿಧೀಯತೇ ॥೧೦೨॥**

(ಅರ್ಥ)

ಮೇಲೆ ಹೇಳಿದ :

೧೦೨. ಈ ಗುಣಲೇಶದಿಂದ[5] ಅಹಂಕರ್ತೃಕರ್ಮಗಳನ್ನು ಮೀರಿರುವ[6] ಅಹಂವೃತ್ತಿಯಿಂದ ಈ (ಪ್ರತ್ಯಗಾತ್ಮನು) ಲಕ್ಷಿತನಾಗಿರುತ್ತಾನೆ ;

---

1. ಈ ವೃತ್ತಿಯನ್ನು ಅದಕ್ಕೆ ಲಕ್ಷಣವಾಗಿ ಮಾಡಿಕೊಂಡು ಅಹಂವಾಚಕಶಬ್ದವನ್ನು ಉಪಯೋಗಿಸಿದೆ. 2. ಬಾಹ್ಯವಸ್ತುಗಳನ್ನು ತಿಳಿಸುವ ವೃತ್ತಿಗಳಿಂದ.

3. ಎಲ್ಲವನ್ನೂ ಬೆಳಗುವ ಚೈತನ್ಯವನ್ನು .

4. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ'- ಎಂಬುದು ಯಥಾರ್ಥವಾಗುವದಕ್ಕೂ 'ಘಟಃ ಪರಮಾತ್ಮಾ', 'ಪಟಃ ಪರಮಾತ್ಮಾ' ಎಂದಿದ್ದರೆ ಅಯಥಾರ್ಥವಾಗುವದಕ್ಕೂ ಇದು ಕಾರಣ. ''ಸರ್ವಂ ಖಲ್ವಿದಂ ಬ್ರಹ್ಮ'' (ಛಾಂ. ೩-೧೪-೧) ''ಆದಿತ್ಯೋ ಬ್ರಹ್ಮೇತ್ಯಾದೇಶಃ'' (ಛಾಂ. ೩-೧೯-೧) ''ಆಕಾಶೋ ಬ್ರಹ್ಮ'' (ಛಾಂ. ೩-೧೪-೧) ಮುಂತಾದವುಗಳು ಉಪಸನಾವಾಕ್ಯಗಳಾದ್ದರಿಂದಲೂ ''ಆತ್ಮೈವೇದಂ ಸರ್ವಮ್'' (ಛಾಂ. ೭-೨೫-೨) ಮುಂತಾದ ವಾಕ್ಯಗಳಲ್ಲಿ ಸರ್ವಶಬ್ದಗ್ರಹಣವಿರುವದರಿಂದಲೂ ಈ ಶಂಕೆಯುಂಟಾಗುವದಿಲ್ಲ . ಅಹಂವೃತ್ತಿಯು ಅನಾತ್ಮವಾಗಿದ್ದರೂ ಪ್ರತ್ಯಕ್ತ್ವಸಾಮಾನ್ಯದಿಂದ ಆತ್ಮನಿಗೆ ಲಕ್ಷಣವಾಗಿರುವದರಿಂದ ದೋಷವಿಲ್ಲ - ಎಂದು ಭಾವ.

5. ಪ್ರತ್ಯಕ್ತ್ವರೂಪವಾದ ಗುಣಸಾಮ್ಯದಿಂದ ಎಂದರ್ಥ.

6. ಅಹಂಪ್ರತ್ಯಯಾಶ್ರಯತ್ವವೆಂಬ ಕರ್ತೃತ್ವ, ಅಹಂಪ್ರತ್ಯಯಗಮ್ಯತ್ವವೆಂಬ ಕರ್ಮತ್ವ- ಇವುಗಳನ್ನುಳಿದಿರುವ, ವಾಚ್ಯಾರ್ಥದಲ್ಲಿ ಅಡಕವಾಗಿರುವ ಇವುಗಳನ್ನು ಹೇಳದ ಎಂದರ್ಥ.

ಆದರೆ ಮುಖ್ಯವೃತ್ತಿಯಿಂದ ಇಲ್ಲಿ [1] ಅಭಿಹಿತನಾಗಿಲ್ಲ.

(ಮೂಲ)

**ನಾಙ್ಜಸಾತ್ರಾಭಿಧೀಯತ ಇತಿ ಕೋ ಹೇತುರಿತಿ ಚೇತ್ –**

**ಷಷ್ಠೀಗುಣಕ್ರಿಯಾಜಾತಿರೂಢಯಃ ಶಬ್ದಹೇತವಃ ।**
**ನಾತ್ಮನ್ಯನ್ಯತಮೋಽಮೀಷಾಂ ತೇನಾತ್ಮಾ ನಾಭಿಧೀಯತೇ ॥೧೦೩॥**

(ಅರ್ಥ)

'ಇಲ್ಲಿ ಮುಖ್ಯವೃತ್ತಿಯಿಂದ ಅಭಿಹಿತನಾಗಿಲ್ಲ' ಎಂಬುದಕ್ಕೆ ಹೇತುವೇನು ? ಎಂದರೆ :

೧೦೩. ಸಂಬಂಧ, ಗುಣ, ಕ್ರಿಯೆ, ಜಾತಿ, ರೂಢಿ- ಇವುಗಳೇ ಶಬ್ದ (ಪ್ರವೃತ್ತಿ )ನಿಮಿತ್ತಗಳು [2] ಆತ್ಮನಲ್ಲಿ ಇವುಗಳಲ್ಲೊಂದೂ ಇರುವದಿಲ್ಲ. ಆದ್ದರಿಂದ ಆತ್ಮನು (ಮುಖ್ಯವೃತ್ತಿಯಿಂದ ಇಲ್ಲಿ ) ಅಭಿಹಿತನಾಗಿಲ್ಲ.

## ಶಬ್ದದಿಂದ ಆತ್ಮನ ಸಮ್ಯಗ್ಜ್ಞಾನವುಂಟಾಗುವ ಬಗೆ

(ಮೂಲ)

**ಯದಿ ಶಬ್ದೋಽಭಿಧಾನಾಭಿಧೇಯತ್ವಸಂಬನ್ಧಾಙ್ಗೀಕಾರೇಣ ನಾತ್ಮನಿ ವರ್ತತೇ, ಕಥಂ ಶಬ್ದಾತ್ 'ಅಹಂ ಬ್ರಹ್ಮಾಸ್ಮಿ' ಇತಿ ಸಮ್ಯಗ್ಬೋಧೋತ್ಪತ್ತಿಃ ? ಉಚ್ಯತೇ–**

---

1. ಈ ವಾಕ್ಯದಲ್ಲಿ ; 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' - ಎಂಬ ವಾಕ್ಯದಲ್ಲಿ ಅಹಂವೃತ್ತಿಯನ್ನು ಹೇಳುವ ಪದದಿಂದಲೇ ಆತ್ಮನನ್ನು ಹೇಳಿಲ್ಲ.

2. ಧನವಂತನು ಎಂಬಲ್ಲಿ ಧನಸಂಬಂಧವು ನಿಮಿತ್ತವು ; ಆತ್ಮನಿಗೆ ಯಾವದರ ಸಂಬಂಧವೂ ಇಲ್ಲ. ಕನ್ನೈದಿಲೆ ಎಂಬಲ್ಲಿ ಕರಿದು ಎಂಬ ಗುಣವು 'ಕರಿ' ಎಂಬ ಶಬ್ದಕ್ಕೆ ಪ್ರವೃತ್ತಿನಿಮಿತ್ತ ; ಆತ್ಮನಲ್ಲಿ ಯಾವ ಗುಣವೂ ಇಲ್ಲ. ಅಡಿಗೆಯವನು ಎಂಬಲ್ಲಿ ಅಡಿಗೆಯೆಂಬ ಕ್ರಿಯೆಯು ನಿಮಿತ್ತವು ; ಆತ್ಮನಲ್ಲಿ ಯಾವ ಕ್ರಿಯೆಯೂ ಇಲ್ಲ. ಗೋವು ಎಂಬಲ್ಲಿ ಗೋತ್ವವು ನಿಮಿತ್ತವು ; ಆತ್ಮನಲ್ಲಿ ಆತ್ಮತ್ವವೆಂಬ ಜಾತಿಯೂ ಇಲ್ಲ. ನೀರು, ಆಕಾಶ-ಮುಂತಾದವುಗಳಲ್ಲಿ ರೂಢಿಯೇ ಶಬ್ದಪ್ರವೃತ್ತಿ ನಿಮಿತ್ತವು ; ಆತ್ಮನಲ್ಲಿ ಯಾವ ರೂಢಿಯೂ ಇಲ್ಲ.

**ಅಸತ್ಯೇ ವರ್ತ್ಮನಿ ಸ್ಥಿತ್ವಾ ನಿರುಪಾಯಮುಪೇಯತೇ ।**
**ಆತ್ಮತತ್ವಕಾರಣಾದ್ವಿದ್ಮೋ ಗುಣವೃತ್ತ್ಯಾ ವಿಬೋಧಿತಾಃ ॥೧೦೪॥**

(ಅರ್ಥ)

(ಆಕ್ಷೇಪ) :- ಶಬ್ದವು ಅಭಿಧಾನಾಭಿಧೇಯತ್ವವೆಂಬ ಸಂಬಂಧವನ್ನು ಸ್ವೀಕರಿಸಿ ಆತ್ಮನಲ್ಲಿ ವೃತ್ತಿಯುಳ್ಳದ್ದಾಗಿರದಿದ್ದರೆ ಶಬ್ದದಿಂದ 'ನಾನು ಬ್ರಹ್ಮವಾಗಿರುವೆನು' ಎಂಬ ಸಮ್ಯಗ್ಜ್ಞಾನವಾಗುವದು ಹೇಗೆ[1] ?

(ಇದಕ್ಕೆ) ಹೇಳುತ್ತೇವೆ :

೧೦೪. ಅಸತ್ಯವಾದ ಮಾರ್ಗದಲ್ಲಿದ್ದುಕೊಂಡು[2] ಯಾವ ಉಪಾಯವೂ ಇಲ್ಲದ[3] (ಆತ್ಮತತ್ತ್ವವನ್ನು) ಪಡೆಯಲಾಗುತ್ತದೆ. ಗುಣವೃತ್ತಿಯಿಂದ ಜ್ಞಾನವನ್ನು ಮಾಡಿಕೊಂಡು[4] ಆತ್ಮನೆಂಬ ಕಾರಣದಿಂದ ತಿಳಿದುಕೊಳ್ಳುತ್ತೇವೆ[5].

(ಮೂಲ)

**ಕಥಂ ಪುನರಭಿಧಾನಮ್ ಅಭಿಧೇಯೇನ ಅನಭಿಸಂಬದ್ಧಂ ಸತ್ ಅನಭಿಧೇಯೇಽರ್ಥೇ ಪ್ರಮಾಂ ಜನಯತೀತಿ ? ಶೃಣು, ಯಥಾ ಅನಭಿಸಂಬದ್ಧಮಪಿ ಅನಭಿಧೇಯೇಽರ್ಥೇ ಅವಿದ್ಯಾನಿರಾಕರಣಮುಖೇನ**

1. ಈ ವಾಕ್ಯದಲ್ಲಿರುವ ಯಾವ ಪದವೂ ಆತ್ಮನನ್ನು ಹೇಳುವಂತಿಲ್ಲವಲ್ಲ ! ಪ್ರತಿಯೊಂದು ಪದವೂ ಆತ್ಮನಲ್ಲಿ ಕಲ್ಪಿತವಾದದ್ದನ್ನೇ ಹೇಳುತ್ತದೆಯಲ್ಲ ! ಅಸತ್ಯವಾದ ಪದವು ಸತ್ಯವಾದ ಆತ್ಮವಸ್ತುವನ್ನು ತಿಳಿಸುವದು ಹೇಗೆ ? - ಎಂದು ಆಕ್ಷೇಪ.

2. ಅಸತ್ಯವಾದ ಅಹಂವೃತ್ತಿಯನ್ನು ಅವಲಂಬಿಸಿಕೊಂಡು.

3. ಆತ್ಮನು ಅದ್ವಿತೀಯನು, ಅಸಂಗನು ; ಅವನನ್ನು ಸಾಧಿಸುವ ಯಾವದೊಂದು ಉಪಾಯವೂ ನಿಜವಾಗಿ ಇಲ್ಲ.

4. ಆದರೂ ಪ್ರತ್ಯಕ್ತ್ವಾದಿಗುಣಸಾಮ್ಯವನ್ನು ತಿಳಿಸುವ ಅಹಂಶಬ್ದದಿಂದ ಲಕ್ಷಣೆಯಿಂದ ತಿಳಿದುಕೊಂಡು.

5. ಆತ್ಮನು ನಿತ್ಯಸಿದ್ಧನೇ ಆಗಿರುತ್ತಾನೆ ; ಅವನನ್ನು ಹೊಸದಾಗಿ ತಿಳಿಯಬೇಕಾದದ್ದೇ ಇಲ್ಲ. ಅವನು ನಮ್ಮ ಆತ್ಮನೇ ಆದ್ದರಿಂದ ಅವ್ಯವಹಿತನಾಗಿರುತ್ತಾನೆ. ಆದ್ದರಿಂದ ಲಕ್ಷಣಾವೃತ್ತಿಯ ನೆಪದಿಂದಲೇ ಅವನನ್ನು ತಿಳಿಯಬಹುದು.

ಬೋಧಯತಿ ಇತ್ಯಾಹ –

ಶಯಾನಾಃ ಪ್ರಾಯಶೋ ಲೋಕೇ ಬೋಧ್ಯಮಾನಾಃ ಸ್ವನಾಮಭಿಃ ।
ಸಹಸೈವ ಪ್ರಬುಧ್ಯನ್ತೇ ಯದ್ವೈವಂ ಪ್ರತ್ಯಗಾತ್ಮನಿ ॥೧೦೫॥

ನ ಹಿ ನಾಮ್ನಾಸ್ತಿ ಸಂಬನ್ಧೋ ವ್ಯುತ್ಥಿತಸ್ಯ ಶರೀರತಃ ।
ತಥಾಪಿ ಬುಧ್ಯತೇ ತೇನ ಯದ್ವೈವಂ ತತ್ತ್ವಮಿತ್ಯತಃ ॥೧೦೬॥

(ಅರ್ಥ)

(ಆಕ್ಷೇಪ) :- ಅಭಿಧಾನವು (ತನ್ನ) ಅಭಿಧೇಯಕ್ಕೆ ಸಂಬಂಧಪಡದೆಯೇ[1] ಅಭಿಧೇಯವಲ್ಲದ ಅರ್ಥದಲ್ಲಿ ಪ್ರಮೆಯನ್ನು ಉಂಟುಮಾಡುವದು ಹೇಗೆ[2] ?

(ಪರಿಹಾರ) :- (ಶಬ್ದವು) ಸಂಬದ್ಧವಾಗದೆ ಇದ್ದರೂ ಅಭಿಧೇಯವಲ್ಲದ ಅರ್ಥದಲ್ಲಿ ಅವಿದ್ಯೆಯನ್ನು ನಿರಾಕರಣಮಾಡುವ ಮೂಲಕ[3] ತಿಳಿವಳಿಕೆಯನ್ನು ಮಾಡುವದು ಹೇಗೆಂಬುದನ್ನು ಕೇಳು :

೧೦೫-೧೦೬. ಹೇಗೆ ಲೋಕದಲ್ಲಿ ನಿದ್ರಿಸುತ್ತಿರುವವರು ತಮ್ಮ ಹೆಸರುಗಳಿಂದ (ಮತ್ತೊಬ್ಬರು) ಎಚ್ಚರಗೊಳಿಸಿದಾಗ ಬಲುಮಟ್ಟಿಗೆ ತಟ್ಟನೆ ಎಚ್ಚರುವರೋ ಹಾಗೆಯೇ ಪ್ರತ್ಯಗಾತ್ಮನ ವಿಷಯದಲ್ಲಿಯೂ ತಿಳಿಯ

---

1. ಅಭಿಧಾನಾಭಿಧೇಯಸಂಬಂಧಗ್ರಹಣವಿಲ್ಲದೆಯೇ ಎಂದರ್ಥ.

2. ಶಬ್ದವು ಲಕ್ಷಣಾವೃತ್ತಿಯಿಂದಲಾದರೂ ನನ್ನನ್ನು ತಿಳಿಸುತ್ತದೆ ಎಂಬ ಅರಿವು ಆತ್ಮನಿಗಿಲ್ಲವಲ್ಲ ! ಆತ್ಮನನ್ನು ಯಾವ ಮಾತೂ ಯಾವ ರೀತಿಯಿಂದಲೂ ಮುಟ್ಟುವ ಸಂಭವವೇ ಇಲ್ಲವಲ್ಲ !- ಎಂದು ಆಕ್ಷೇಪ. ಇಲ್ಲಿ ಅಭಿಧಾನಾಭಿದೇಯಸಂಬಂಧದಲ್ಲಿ ತಾತ್ಪರ್ಯವಿಲ್ಲ ; ಶಬ್ದವು ಆತ್ಮನನ್ನು ಸೋಂಕದೆಯೇ ನಾನು ಬ್ರಹ್ಮವು ಎಂಬ ಅರಿವನ್ನುಂಟುಮಾಡುವದು ಹೇಗೆ ?- ಎಂಬುದೇ ಆಕ್ಷೇಪದ ಸಾರ.

3. ಅವಿದ್ಯೆಯನ್ನು ತೊಲಗಿಸುವದೇ ಆತ್ಮನನ್ನು ತಿಳಿಸುವದೆಂದು ಹಿಂದೆ (೨-೧೦೫) ಹೇಳಿಯೇ ಇತ್ತು ; ಶಬ್ದಕ್ಕೆ ಸಂಬಂಧವಿಲ್ಲದಿದ್ದರೂ ಅವಿದ್ಯಾನಿರಾಕರಣ ಶಕ್ತಿಯಿದೆ ಎಂಬುದನ್ನು ತಿಳಿಸುವದಕ್ಕೆ ಈಗ ಮತ್ತೆ ಹೇಳಿದೆ.

ಬೇಕು[1]. ಶರೀರವನ್ನು ಬಿಟ್ಟಿದ್ದಿರುವವನಿಗೆ[2] ಹೆಸರಿನ ಸಂಬಂಧವಿರುವದಿಲ್ಲ ವಷ್ಟೆ ; ಆದರೂ ಎಚ್ಚರುತ್ತಾನೆ. (ಇದು) ಹೇಗೋ, ತತ್ತ್ವಮ್ (ಅದು ನೀನು) ಎಂಬೀ (ವಾಕ್ಯ)ದಿಂದಲೂ ಹಾಗೆಯೇ (ತಿಳಿದುಕೊಳ್ಳುತ್ತಾನೆ)[3].

(ಮೂಲ)

**ಯಥಾ ಚ –**

**ಬೋಧಾಬೋಧೌ ನಭೋಽಸ್ಪೃಷ್ಟ್ವಾ ಕೃಷ್ಣಧೀನೀಡಗೌ ಯಥಾ ।**
**ಬಾಧ್ಯೇತರಾತ್ಮಕೌ ಸ್ಯಾತಾಂ ತಥೇಹಾತ್ಮನಿ ಗಮ್ಯತಾಮ್ ॥೧೦೭॥**

(ಅರ್ಥ)

ಮತ್ತು ಹೇಗೆ :

೧೦೭. ಕಪ್ಪೆಂಬ ಬುದ್ಧಿಯ ವಿಷಯದ ಜ್ಞಾನಾಜ್ಞಾನಗಳು ಆಕಾಶ ವನ್ನು ಮುಟ್ಟದೆ[4] ಬಾಧ್ಯಬಾಧಕಗಳಾಗಿರುವವೋ[5] ಹಾಗೆಯೇ ಇಲ್ಲಿಯೂ ಆತ್ಮನ ವಿಷಯದಲ್ಲಿ ತಿಳಿಯಬೇಕು[6].

(ಮೂಲ)

**'ಅಸತ್ಯೇ ವರ್ತ್ಮನಿ ಸ್ಥಿತ್ವಾ' (೩-೧೦೪) ಇತ್ಯುಪಶ್ರುತ್ಯ ಅತಿವಿಸ್ಮಿತೋ ಮಹತಾ ಸಂಭ್ರಮೇಣ ಕಶ್ಚಿಚ್ಚೋದಯತಿ –**

---

1. ಜೀವನು ಅನಾದ್ಯಜ್ಞಾನನಿದ್ರೆಯಲ್ಲಿ ಮುಳುಗಿರುತ್ತಾನೆ ; ಅವನನ್ನು ತತ್ತ್ವಮಸಿ ವಾಕ್ಯದಿಂದ ಎಚ್ಚರಿಸಲು ನಾನು ಬ್ರಹ್ಮವೆಂಬ ತಿಳಿವಳಿಕೆಯನ್ನು ಹೊಂದುತ್ತಾನೆ.

2. ಶರೀರಾಭಿಮಾನವಿಲ್ಲದವನಿಗೆ.

3. ವಾಕ್ಯದಿಂದಾಗುವ ತಿಳಿವು ನೇರಾಗಿ ಆತ್ಮನಲ್ಲಿ ಉಂಟಾಗಬೇಕಾದದ್ದಿಲ್ಲ.

4. ಆಕಾಶವು ಕಪ್ಪೆಂಬ ತಿಳಿವಳಿಕೆಯಿಂದಾಗಲಿ, ಅದಕ್ಕೆ ಯಾವ ಬಣ್ಣವೂ ಇಲ್ಲವೆಂಬ ಸರಿಯಾದ ತಿಳಿವಳಿಕೆಯಿಂದಾಗಲಿ, ಆಕಾಶದಲ್ಲಿ ಯಾವ ವಿಶೇಷವೂ ಆಗಿರುವದಿಲ್ಲ.

5. ಆಕಾಶವು ಕಪ್ಪು ಎಂಬುದು ಬಾಧ್ಯ, ಆಕಾಶಕ್ಕೆ ಬಣ್ಣವಿಲ್ಲ ಎಂಬುದು ಬಾಧಕ. ಬಾಧ್ಯಜ್ಞಾನದಿಂದಾಗಲಿ ಬಾಧಕಜ್ಞಾನದಿಂದಾಗಲಿ ಆಕಾಶದಲ್ಲಿ ವಿಶೇಷ ವಿರುವದಿಲ್ಲ.

6. ವಾಕ್ಯದಿಂದ ಜ್ಞಾನವಾಗುವ ಮುಂಚೆ, ಅಥವಾ ಜ್ಞಾನವಾದಮೇಲೆ ಆತ್ಮನಲ್ಲಿ ಯಾವ ಹೆಚ್ಚುಕಡಿಮೆಯೂ ಆಗುವದಿಲ್ಲ. ಸೂ. ಭಾ. ೧-೪-೬ರಲ್ಲಿ ಕೊಟ್ಟಿರುವ ರಜ್ಜುಸರ್ಪದೃಷ್ಟಾಂತವಿವರಣೆಯನ್ನು ನೋಡಿ.

**ನಾಸನ್ನುಪಾಯೋ ಲೋಕೇಽಸ್ತಿ ಪರಮಾರ್ಥವಿನಿಶ್ಚಯೇ ।**
**ನಾಸಲ್ಲಿಙ್ಗಾದ್ಧಿ ಬಾಷ್ಪಾದೇಃ ಕಶ್ಚಿದಗ್ನಿಂ ಪ್ರಪದ್ಯತೇ ॥೧೦೮॥**
**ಇತ್ಯೇವಂ ಚೋದಯೇದ್ಯೋಽಪಿ ಜೋಷಯೇತ್ತಂ ಘಟಾದಿನಾ ।**
**ಸದಸದ್ಭ್ಯಾಂ ವಿಭಕ್ತೋಽಸೌ ಪರ್ಯಾಯಶ್ಚ ನ ಚಾನಯೋಃ ॥**

(ಅರ್ಥ)

'ಅಸತ್ಯವಾದ ಮಾರ್ಗದಲ್ಲಿದ್ದುಕೊಂಡು' (೩-೧೦೪) ಎಂದದ್ದನ್ನು ಕೇಳಿ ಅತಿವಿಸ್ಮಿತನಾಗಿ ಹೆಚ್ಚಿನ ಸಂಭ್ರಮದಿಂದ ಒಬ್ಬನು (ಹೀಗೆಂದು) ಆಕ್ಷೇಪಿಸುತ್ತಾನೆ :

೧೦೮-೧೦೯. ಪರಮಾರ್ಥವಾದದ್ದನ್ನು ನಿಶ್ಚಯಿಸುವದಕ್ಕೆ ಅಸತ್ಯವಾದ ಉಪಾಯವು ಲೋಕದಲ್ಲಿರುವದೇ ಇಲ್ಲ [1]. ಅಸತ್ತಾದ ಲಿಂಗವಾಗಿರುವ ಆವಿಯೇ ಮುಂತಾದದ್ದರಿಂದ ಯಾರೂ ಬೆಂಕಿಯನ್ನು ನಿಶ್ಚಯಿಸುವದಿಲ್ಲ [2]. ಹೀಗೆಂದು ಯಾವನು ಆಕ್ಷೇಪಿಸುವನೋ ಅವನಿಗೆ ಘಟಾದಿ(ದೃಷ್ಟಾಂತವನ್ನು) ಜೋಡಿಸಬೇಕು. ಅದು ಸದಸತ್ತುಗಳಿಗಿಂತ ಬೇರೆಯಾಗಿರುತ್ತದೆ. ಅವೆರಡಕ್ಕೂ ಪರ್ಯಾಯವೂ ಇರುವದಿಲ್ಲ [3].

---

1. 'ಹಾವು ಹಗ್ಗಕ್ಕೆ ಲಕ್ಷಣವಾಗಿರುವಂತೆ' (೩-೨೭) ಎಂದು ಹಿಂದೆ ಒಂದು ಬಗೆಯಿಂದ ಇದಕ್ಕೆ ಉತ್ತರವನ್ನು ಹೇಳಿದೆ. ಪ್ರಕಾರಾಂತರದಿಂದ ಈಗ ಸಮಾಧಾನ ಹೇಳುವದಕ್ಕೆ ಆಕ್ಷೇಪಿಸಿದೆ.

2. ಆವಿಯು ಹೊಗೆಯಂತೆ ತೋರಿದ್ದರಿಂದ ಅದನ್ನು ಭ್ರಾಂತಿಯಿಂದ ಹೊಗೆಯೆಂದು ತಿಳಿದವನು ಬೆಂಕಿಯನ್ನು ಅನುಮಾನಿಸಿದರೆ ಸರಿಯಾಗಲಾರದು.

3. ಘಟಾದಿಗಳು ಆತ್ಮನಂತೆ ಸತ್ಯವಲ್ಲ, ಮೊಲದ ಕೊಂಬಿನಂತೆ ಅಸತ್ಯವೂ ಅಲ್ಲ ; ಮೊದಲು ಸತ್ತು ಆಮೇಲೆ ಅಸತ್ತು ಎನ್ನುವದಕ್ಕೆ ಬರುವದಿಲ್ಲ. ಆದರೂ ಗಡಿಗೆಯೂ ಆವಿಯೂ ಬೆಂಕಿಯ ಅನುಮಿತಿಗೆ ಉಪಾಯವಲ್ಲ, ಹೊಗೆಯು ಉಪಾಯವಾಗಿದೆ. ಆದ್ದರಿಂದ ಸತ್ತಾದರೇ ಉಪಾಯವು ಎಂದಾಗಲಿ ಅಸತ್ತಾದರೆ ಉಪಾಯವಲ್ಲವೆಂದಾಗಲಿ ಹೇಳುವಹಾಗಿಲ್ಲ. ಆದ್ದರಿಂದ ಉಪೇಯಪ್ರಾಪ್ತಿಗೆ ಹೇತುವಾಗಿದ್ದರೆ ಉಪಾಯವು ಸತ್ಯವೆಂದೇ ಎಣಿಸಬೇಕು ; ಇಲ್ಲಿ ಅರ್ಥಕ್ರಿಯಾಕಾರಿತ್ವರೂಪವಾದ ಸತ್ಯತ್ವವನ್ನು ಒಪ್ಪಬೇಕೇ ಹೊರತು ಸ್ವರೂಪದಿಂದ ಬೇರ್ಪಡದಿರುವದು ಸತ್ಯವೆಂಬ ಲಕ್ಷಣವು ಪ್ರಕೃತಕ್ಕೆ ಉಪಯುಕ್ತವಲ್ಲ ಎಂದು ಭಾವ.

(ಮೂಲ)

ಏವಂ ಕುಚೋದ್ಯಮ್ ಉನ್ಮೂಲ್ಯ ಅಥೇದಾನೀಂ ಪ್ರಕೃತಮ್ ಅಭಿಧೀಯತೇ । ಪ್ರಕೃತಂ ಚ ಅನಭಿಧೇಯೇ ಕಥಮಭಿಧಾಶ್ರುತಿಃ ಅವಿದ್ಯಾಧ್ವಂಸಿ ಆತ್ಮನಿ ಜ್ಞಾನಂ ಜನಯತೀತಿ । ತತ್ರೈವ ಕಾರಣಾನ್ತರಮುಚ್ಯತೇ –

**ಅತಿದುಃಸ್ಥೋಽಪ್ರಬೋಧೋಽತ್ರ ಹ್ಯಾತ್ಮೈವಾಸ್ಯ ಪ್ರಬುದ್ಧತಾ ।**
**ನಿಮಿತ್ತಮಾತ್ರಾದ್ ವ್ಯೇತ್ಯೇಷ[1] ನಾಸಾಗ್ರೇ ಬದರಂ ಯಥಾ ॥೧೧೦॥**

(ಅರ್ಥ)

ಹೀಗೆ ಕುಚೋದ್ಯವನ್ನು ಬೇರುಸಹಿತ ಕಿತ್ತುಹಾಕಿ[2] ಪ್ರಕೃತವಾದದ್ದನ್ನೇ ಹೇಳುತ್ತಾರೆ. ಅಭಿಧಾಶ್ರುತಿಯು ಅಭಿಧೇಯನಲ್ಲದ ಆತ್ಮನಲ್ಲಿ ಅವಿದ್ಯಾನಾಶಕವಾದ ಜ್ಞಾನವನ್ನು ಹೇಗೆ ಉಂಟುಮಾಡುತ್ತದೆ ? - ಎಂಬುದೇ ಪ್ರಕೃತ. ಆ (ವಿಷಯಕ್ಕೇ) ಮತ್ತೊಂದು ಕಾರಣವನ್ನು ಹೇಳುತ್ತಾರೆ[3] :

೧೧೦. ಈ (ಆತ್ಮನಲ್ಲಿ) ಅಜ್ಞಾನವು ಬಹಳ ಕಷ್ಟದಿಂದ ಇದ್ದುಕೊಂಡಿರುತ್ತದೆ[4] ; ಈ (ಆತ್ಮನಿಗೆ) ಜ್ಞಾತತ್ತ್ವವೆಂಬುದು ಸ್ವರೂಪವೇ

---

1. ''ಏಷಾ'' ಎಂಬುದಕ್ಕೆ ಅವಿದ್ಯಾ ಎಂಬ ವಿಶೇಷ್ಯವನ್ನು ಅಧ್ಯಾಹಾರಮಾಡಿಕೊಳ್ಳಬೇಕಾಗುವದು. ಈಗ ನಾವು ಕಲ್ಪಿಸಿರುವ ಪಾಠಕ್ಕೆ ''ಅಪ್ರಬೋಧಃ'' ಎಂಬುದನ್ನೇ ಪರಾಮರ್ಶಮಾಡಿಕೊಂಡರೆ ಸಾಕಾಗುತ್ತದೆ.

2. ಅಸತ್ತಾಗಿರುವ ವಾಕ್ಯವು ಸತ್ತಾಗಿರುವ ಆತ್ಮನನ್ನು ತಿಳಿಸುವ ಸಾಧನವಾಗುವದು ಹೇಗೆ ?- ಎಂಬುದು ಕುಚೋದ್ಯ , ಅದರಲ್ಲಿ ಹುರುಳಿಲ್ಲ .

3. ೩-೪೭ರ ಸಂಬಂಧೋಕ್ತಿಯಲ್ಲಿ ಎಬ್ಬಿಸಿದ್ದ ಆಕ್ಷೇಪಕ್ಕೆ ೧೦೬, ೧೦೭ - ಈ ಶ್ಲೋಕಗಳಲ್ಲಿ ಶಬ್ದಶಕ್ತಿಯು ಹೀಗೂ ಇದೆ, ಜ್ಞಾನಾಜ್ಞಾನಗಳು ಆತ್ಮನಲ್ಲಿ ವಿಶೇಷವನ್ನೇನೂ ಮಾಡುವದಿಲ್ಲ - ಎಂಬ ಸಮಾಧಾನವನ್ನು ಹೇಳಿತ್ತು. ಈಗ ಅವಿದ್ಯೆಯ ಸ್ವಭಾವವನ್ನು ಪರ್ಯಾಲೋಚನೆಮಾಡಿದರೂ ಇದು ಯುಕ್ತವೆಂದು ಹೇಳುತ್ತಾರೆ.

4. ಏಕೆಂದರೆ ಅವಿಚಾರದ ದಶೆಯಲ್ಲಿ ಮಾತ್ರ ಇದು ತೋರುತ್ತದೆ.

(ಆಗಿದೆ)[1]. ಈ (ಅಜ್ಞಾನವು) ನೆಪಮಾತ್ರದಿಂದ[2] ಮೂಗಿನ ತುದಿಯಲ್ಲಿರುವ ಯಗಚೀಕಾಯಿಯಂತೆ ತೊಲಗಿಬಿಡುತ್ತದೆ.

(ಮೂಲ)

ಅನುದಿತಾನಸ್ತಮಿತಕೂಟಸ್ಥಬೋಧಮಾತ್ರಸ್ವಾಭಾವ್ಯಾತ್ ಆತ್ಮನೋ ದುಃಸಂಭಾವ್ಯೋಽವಿದ್ಯಾಸದ್ಭಾವಃ ಇತಿ ಚೇತ್ । ನ । ಅವಿದ್ಯಾಪ್ರಸಿದ್ಧ್ಯೈವ ತತ್ಸದ್ಭಾವಸಿದ್ಧೇರುಲೂಕನಿಶಾವತ್ ಇತಿ । ಅತ ಇದಮುಚ್ಯತೇ –

**ಅಹೋ ಧಾರ್ಷ್ಟ್ಯಮವಿದ್ಯಾಯಾ ನ ಕಶ್ಚಿದತಿವರ್ತತೇ ।**
**ಪ್ರಮಾಣಂ ವಸ್ತ್ವನಾದೃತ್ಯ ಪರಮಾತ್ಮೇವ ತಿಷ್ಠತಿ ॥೧೧೧॥**

(ಅರ್ಥ)

(ಆಕ್ಷೇಪ) :- ಹುಟ್ಟುಹೊಂದುಗಳಿಲ್ಲದ ಕೂಟಸ್ಥಜ್ಞಾನಸ್ವರೂಪವೊಂದೇ ಸ್ವಭಾವವಾಗಿರುವದರಿಂದ ಆತ್ಮನಿಗೆ ಅವಿದ್ಯೆಯಿದೆ ಎಂದು ಸಂಭಾವಿಸುವದಕ್ಕೆ ಆಗುವಂತಿಲ್ಲವಲ್ಲ[3] !

(ಪರಿಹಾರ) :- ಹಾಗಲ್ಲ. ಏಕೆಂದರೆ ಗೂಬೆಗಳ ರಾತ್ರೆಯಂತೆ ಅವಿದ್ಯಾಪ್ರಸಿದ್ಧಿಯಿಂದಲೇ ಅದು ಇದೆ ಎಂಬುದು ಸಿದ್ಧವಾಗುತ್ತದೆ.[4] ಆದ್ದರಿಂದ (ಹೀಗೆಂದು) ಹೇಳುತ್ತಾರೆ :

---

1. ಏಕೆಂದರೆ ಆತ್ಮನು ನಿತ್ಯಜ್ಞಾನಸ್ವರೂಪನಾಗಿರುವದರಿಂದ ಅವನಲ್ಲಿ ಅನಾತ್ಮಗಳಾದ ಘಟಾದಿಗಳಂತೆ ಹೊಸದಾಗಿ ಜ್ಞಾತತ್ವವುಂಟಾಗಬೇಕಾದದ್ದಿಲ್ಲ.

2. ವಾಕ್ಯೋಪದೇಶಮಾತ್ರದಿಂದ ; ಅದನ್ನು ಕಳೆಯುವದಕ್ಕೆ ಮತ್ತೆ ಯಾವ ಕಾರಣವೂ ಬೇಡ.

3. ಆತ್ಮನ ಜ್ಞಾನಕ್ಕೆ ಹುಟ್ಟುಹೊಂದುಗಳಿದ್ದರೆ ಹುಟ್ಟುವದಕ್ಕೆ ಮುಂಚೆಯೂ ನಾಶವಾದ ಬಳಿಕವೂ ಅವಿದ್ಯೆಯಿರುವದಕ್ಕೆ ಅವಕಾಶವಿರುತ್ತಿತ್ತು- ಎಂದು ಭಾವ.

4. ಗೂಬೆಗಳಿಗೆ ಸೂರ್ಯನ ಪ್ರಕಾಶವು ಹೆಚ್ಚಾಗಿರುವ ನಡುಹಗಲಿನಲ್ಲಿಯೂ ರಾತ್ರಿಯೇ ಆಗಿರುತ್ತದೆ ; ಏಕೆಂದರೆ ಅವಕ್ಕೆ ಆಗ ಕಣ್ಣು ಕಾಣಿಸುವದಿಲ್ಲ. ಅದರಂತೆ ಅಜ್ಞರಿಗೆ ಆತ್ಮನ ನಿತ್ಯಚೈತನ್ಯವು ತಿಳಿಯಬರುವದೇ ಇಲ್ಲ ಎಂದರ್ಥ. ಅಂತಃಕರಣದ ಉಪಾಧಿಯಿಂದಾಗಿರುವ ಜ್ಞಾತೃತ್ವದ ದೃಷ್ಟಿಯಿಂದ ಆತ್ಮನಲ್ಲಿ ಅವಿದ್ಯೆಯಿದೆ. ಈ ದೃಷ್ಟಿಯಿಂದಲೇ ಸುಷುಪ್ತಿಯಲ್ಲಿ ಕೂಡ ಅವಿದ್ಯೆಯಿದೆ ಎಂದು ೩-೫೮ರ ಸಂಬನ್ಧೋಕ್ತಿಯಲ್ಲಿ ಹೇಳಿದ್ದು. ಪರಮಾರ್ಥ ದೃಷ್ಟಿಯಿಂದ ಅದು ಇಲ್ಲವೇ ಇಲ್ಲ. ಸಂ. ವಾ. ೧೭೫-೧೭೬ - ಇವನ್ನು ನೋಡಿ.

೧೧೧. ಆಹಾ ! ಅವಿದ್ಯೆಯ ದಿಟ್ಟತನವನ್ನು ಯಾರೂ ಮೀರಲಾರರು. (ಏಕೆಂದರೆ ಅದು) ಪ್ರಮಾಣವಾದ ವಸ್ತುವನ್ನು ಅನಾದರಣೆ ಮಾಡಿ ಪರಮಾತ್ಮನಂತೆಯೇ ಇದ್ದುಕೊಂಡಿರುತ್ತದೆ[1].

## ಅವಿದ್ಯೆಯು ಶಾಸ್ತ್ರಪ್ರಮಾಣವೊಂದರಿಂದಲೇ ತೊಲಗುತ್ತದೆ

(ಮೂಲ)

ಯಸ್ಮಾದವಿದ್ಯಾಪ್ರಸಿದ್ಧ್ಯೈವ ಅವಿದ್ಯಾಸದ್ಭಾವಸಿದ್ಧಿಃ ಅತಃ ಆತ್ಮವಸ್ತುವೃತ್ತಾನುರೋಧೇನ ನ ಕಥಂಚನಾಪಿ ತತ್ಸಂಭಾವನಾಪ್ಯಸ್ತಿ । ಅತ[2] ಆಹ –

**ಜ್ಞಾನಂ ಯಸ್ಯ ನಿಜಂ ರೂಪಂ ಕ್ರಿಯಾಕಾರಕವರ್ಜಿತಮ್ ।**
**ಸಂಭಾವನಾಪ್ಯವಿದ್ಯಾಯಾಸ್ತತ್ರ ಸ್ಯಾತ್ ಕೇನ ಹೇತುನಾ ॥೧೧೨॥**

(ಅರ್ಥ)

(ಹೀಗೆ) ಅವಿದ್ಯಾಪ್ರಸಿದ್ಧಿಯಿಂದಲೇ ಅವಿದ್ಯೆಯಿದೆ ಎಂದು ಸಿದ್ಧವಾಗುತ್ತದೆಯಷ್ಟೆ ; ಆದ್ದರಿಂದ ಆತ್ಮವಸ್ತುಸ್ವರೂಪವನ್ನು ಅನುಸರಿಸಿ ನೋಡಿದರೇ ಹೇಗೂ ಅದರ ಸಂಭಾವನೆಯು ಕೂಡ ಇರುವದೇ ಇಲ್ಲ. ಆದ್ದರಿಂದ ಹೀಗೆನ್ನುತ್ತಾರೆ :

೧೧೨. ಯಾವನಿಗೆ ಕ್ರಿಯಾಕಾರಕರಹಿತವಾದ ಜ್ಞಾನವು ತನ್ನ ಸ್ವರೂಪವೇ ಆಗಿರುತ್ತದೆಯೋ[3] ಅವನಲ್ಲಿ ಅವಿದ್ಯೆ (ಯಿರಬಹುದೆಂಬ) ಸಂಭಾವನೆ ಕೂಡ ಯಾವ ಹೇತುವಿನಿಂದ ಆದೀತು ?

---

1. ಪ್ರಮಾಣವಸ್ತುವನ್ನು - ಎಂದರೆ ಪ್ರಮಾತೃಪ್ರಮಾಣಪ್ರಮೇಯಗಳನ್ನೂ ಪ್ರಮಾಭಾಸವನ್ನೂ ಯಾವಾಗಲೂ ಬೆಳಗುತ್ತಿರುವ ನಿತ್ಯಸಿದ್ಧಾನುಭವರೂಪವಾದ ಆತ್ಮವಸ್ತುವನ್ನು - ಇಲ್ಲದಂತೆ ಮಾಡಿ ತಾನು ಪರಮಾತ್ಮನಂತೆ, ಯಾವಾಗಲೂ ಇರುವ ಪರಮಾರ್ಥವಸ್ತುವೆಂಬಂತೆ ತೋರಿಸಿಕೊಳ್ಳುತ್ತದೆ.

2. 'ಯತಃ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

3. ಪ್ರಮಾತೃಜ್ಞಾನವು ಕ್ರಿಯಾಕಾರಕಾಪೇಕ್ಷೆಯುಳ್ಳದ್ದು ; ಆಗಾಗ್ಗೆ ಉಂಟಾಗಬೇಕಾದದ್ದು. ಆದರೆ ಆತ್ಮನಿಗೆ ಸಾಮಗ್ರಿಯಿಂದ ಹುಟ್ಟಬೇಕಾದ ಜ್ಞಾನವಿಲ್ಲ, ಅವನ ಸ್ವರೂಪವೇ ಜ್ಞಾನವಾಗಿದೆ.

(ಮೂಲ)

**ಸೋಽಯಮೇವಮನುದಿತಾನಸ್ತಮಿತಾವಗತಿಮಾತ್ರಶರೀರ ಆತ್ಮಾಪಿ ಸನ್ ಅವಿಚಾರಿತಪ್ರಸಿದ್ಧಾವಿದ್ಯಾಮಾತ್ರವ್ಯವಹಿತ ಏವ ಅತಥೇವ ಈಕ್ಷ್ಯತೇ ಯತೋಽತಃ –**

**ಅನುಮಾನಾದಯಂ ಭಾವಾದ್ವ್ಯಾವೃತ್ತೋಽಭಾವಮಾಶ್ರಿತಃ ।**
**ತತೋಽಪ್ಯಸ್ಯ ನಿವೃತ್ತಿಃ ಸ್ಯಾದ್ ವಾಕ್ಯಾದೇವ ಬುಭುತ್ಸತಃ ॥೧೧೩॥**

(ಅರ್ಥ)

ಆ ಇವನು ಹುಟ್ಟುಹೊಂದುಗಳಿಲ್ಲದ ಅವಗತಿಮಾತ್ರ ಶರೀರನಾಗಿರುವ[1] ಆತ್ಮನಾಗಿರುವನಾದರೂ ವಿಚಾರಮಾಡದೆ ಇರುವ ದೆಶೆಯಲ್ಲಿ ಪ್ರಸಿದ್ಧವಾಗಿರುವ ಅವಿದ್ಯೆಯೆಂಬ ಒಂದೇ ವ್ಯವಧಾನವುಳ್ಳವನಾಗಿ[2] ಹಾಗಿಲ್ಲದ (ಸ್ವರೂಪ)ದವನಂತೆ ಕಾಣಿಸುತ್ತಿರುವನಷ್ಟೆ[3], ಆದ್ದರಿಂದ :

೧೧೩. ಅನುಮಾನದಿಂದ ಇವನು ಭಾವದಿಂದ ಬೇರ್ಪಟ್ಟವನಾಗಿ ಅಭಾವವನ್ನು ಆಶ್ರಯಿಸಿರುತ್ತಾನೆ[4]. ಈ ಜಿಜ್ಞಾಸುವಿಗೆ ಆ (ಅಭಾವ)ದಿಂದಲೂ ಬೇರ್ಪಡುವದು ವಾಕ್ಯದಿಂದಲೇ ಆದೀತು.

(ಮೂಲ)

**ಭಾವವದಭಾವಾದಪಿ ನಿವೃತ್ತಿರನುಮಾನಾದೇವ ಕಿಮಿತಿ ನ ಭವತಿ ಇತಿ ಚೇತ್ । ಶೃಣು –**

**ನ ವ್ಯಾವೃತ್ತಿರ್ಯಥಾ ಭಾವಾದ್ ಭಾವೇನೈವಾವಿಶೇಷತಃ ।**
**ಅಭಾವಾದಪ್ಯಭಾವತ್ವಾದ್ವ್ಯಾವೃತ್ತಿರ್ನ ತಥೇಷ್ಯತೇ ॥೧೧೪॥**

(ಅರ್ಥ)

(ಪ್ರಶ್ನೆ ) :- ಭಾವದಿಂದ (ನಿವೃತ್ತಿಯು) ಆಗುವಂತೆ ಅಭಾವದಿಂದಲೂ ಅನುಮಾನದಿಂದಲೇ ಏತಕ್ಕೆ ಆಗುವದಿಲ್ಲ ? - ಎಂದರೆ ಕೇಳು :

---

1. ಚಿನ್ಮಾತ್ರಸ್ವರೂಪನಾಗಿರುವ.

2. ಅವಿದ್ಯೆಯು ಅವಿಚಾರದಿಂದ ಪ್ರಸಿದ್ಧವಾಗಿದೆ ; ನಿಜವಾಗಿರುವದಿಲ್ಲ. ಆ ಅವಿದ್ಯೆಯೊಂದೇ ಆತ್ಮನಿಗೆ ಮರೆ, ಮತ್ತೆ ಯಾವ ಮರೆಯೂ ಇಲ್ಲ.

3. ಚಿನ್ಮಾತ್ರಸ್ವರೂಪನಲ್ಲವೆಂಬಂತೆ ಕಾಣಿಸುತ್ತಾನೆ.

4. ಅನ್ವಯವ್ಯತಿರೇಕರೂಪವಾದ ಅನುಮಾನದಿಂದ ನಾನು ದೇಹಾದಿಗಳಲ್ಲವೆಂದು ತಿಳಿದುಕೊಂಡಿರುತ್ತಾನೆ ; ಇದೇ ಅಭಾವದ ಆಶ್ರಯವು.

೧೧೪. ಭಾವದಿಂದಲೇ (ಭಾವತ್ವವೆಂಬುದು) ಸಮಾನವಾಗಿರುವದರಿಂದ ಹೇಗೆ ಭಾವತ್ವದ ನಿವೃತ್ತಿಯಾಗಲಾರದೋ[1] ಹಾಗೆಯೇ ಅಭಾವದಿಂದಲೂ ಅಭಾವತ್ವದ ನಿವೃತ್ತಿಯು ಆಗಲಾರದು[2].

(ಮೂಲ)

ಯತೋ ನಾನುಮಾನೇನ ವ್ಯಾವಿದ್ಧಾಶೇಷಕ್ರಿಯಾಕಾರಕಫಲಾತ್ಮನಿ ಸ್ವಾರಾಜ್ಯೇ ಅಭಿಷೇಕ್ತುಂ ಶಕ್ಯತೇ, ತಸ್ಮಾತ್ –

**ಅವಿದ್ಯಾನಿದ್ರಯಾ ಸೋಽಯಂ ಪ್ರಸುಪ್ತೋ ದುರ್ವಿವೇಕಯಾ ।**
**ಭಾವಾಭಾವವ್ಯುದಾಸಿನ್ಯಾ ಶ್ರುತ್ಯೈವ ಪ್ರತಿಬೋಧ್ಯತೇ ॥೧೧೫॥**

(ಅರ್ಥ)

ಅನುಮಾನದಿಂದ ಕ್ರಿಯಾಕಾರಕಫಲಗಳು (ಯಾವವೂ) ಇಲ್ಲದ ಸ್ವರೂಪದ ಸ್ವಾರಾಜ್ಯದಲ್ಲಿ ಅಭಿಷೇಕಮಾಡಿಸುವದಕ್ಕೆ ಆಗುವದಿಲ್ಲವಷ್ಟೆ, ಆದ್ದರಿಂದ :

೧೧೫. ವಿವೇಚಿಸಿ ಅರಿಯುವದಕ್ಕೆ ಕಷ್ಟವಾಗಿರುವ ಅವಿದ್ಯಾನಿದ್ರೆಯಿಂದ ಗಾಢನಿದ್ರೆಯನ್ನು ಅನುಭವಿಸುತ್ತಿರುವ ಆ ಇವನನ್ನು ಭಾವಾಭಾವಗಳೆರಡನ್ನೂ ತಿರಸ್ಕರಿಸುವ ಶ್ರುತಿಯೇ ಎಚ್ಚರಗೊಳಿಸುತ್ತದೆ[3].

(ಮೂಲ)

ಅತ್ರಾಹ – ಅನುದಿತಾನಸ್ತಮಿತಜ್ಞಾನಾತ್ಮಮಾತ್ರಸ್ವರೂಪತ್ವಾತ್ ದುಃಸಂಭಾವ್ಯಾ ಅವಿದ್ಯೇತಿ । ನೈತದೇವಮ್ । ಕುತಃ ? ಯತ ಆಹ –

---

1. ನಾನು ಇಂಥವನು ಎಂಬ ಒಂದು ಜ್ಞಾನದಿಂದ ದೇಹಾದಿಸ್ವರೂಪನು ನಾನು ಎಂಬ ಭಾವರೂಪಭ್ರಾಂತಿಯು ಹೇಗೆ ಹೋಗಲಾರದೋ ಎಂದರ್ಥ.

2. ನಾನು ಇಂಥವನಲ್ಲ ಎಂಬ ಸ್ವರೂಪದ ಜ್ಞಾನದಿಂದ, ಇವುಗಳ ಅಭಾವಕ್ಕಿಂತ ವ್ಯತಿರಿಕ್ತನು ನಾನು ಎಂಬ ಜ್ಞಾನದಿಂದ, ದೇಹಾದಿರೂಪನು ನಾನಲ್ಲ ಎಂಬ ಭ್ರಾಂತಿಯು ಹೋಗಲಾರದು ; ಏಕೆಂದರೆ ಎರಡೂ ಅಭಾವರೂಪಜ್ಞಾನವೇ ಆಗಿರುತ್ತವೆ. ಭಾವಾಭಾವವಿಲಕ್ಷಣವಾದ ಪ್ರತ್ಯಗದ್ವಯಾತ್ಮಜ್ಞಾನದಿಂದಲೇ ಅದು ಹೋಗಬೇಕಾಗಿರುತ್ತದೆ.

3. ಹಿಂದೆ (೩-೬)ರಲ್ಲಿ ಇದನ್ನು ಹೇಳಿಯೇ ಇತ್ತು ; ವಾಕ್ಯವ್ಯಾಖ್ಯಾನವನ್ನು ಉಪಸಂಹಾರಮಾಡುವದಕ್ಕಾಗಿ ಮತ್ತೆ ಹೇಳಿರುತ್ತದೆ.

**ಕುತೋಽವಿದ್ಯೇತಿ ಚೋದ್ಯಂ ಸ್ಯಾನ್ನೈವ ಪ್ರಾಗ್ಘೇತ್ವಸಂಭವಾತ್ ।**
**ಕಾಲತ್ರಯಾಪರಿಚ್ಛಿತ್ತೇರ್ನ ಚೋರ್ಧ್ವಂ ಚೋದ್ಯಸಂಭವಃ ॥೧೧೬॥**

(ಅರ್ಥ)

ಇಲ್ಲಿ (ಆಕ್ಷೇಪಕನು) ಹೇಳುತ್ತಾನೇನೆಂದರೆ, ಹುಟ್ಟುಹೊಂದುಗಳಿಲ್ಲದ ವಿಜ್ಞಾನಾತ್ಮವೆಂಬುದೊಂದೇ ಸ್ವರೂಪವಾಗಿರುವದರಿಂದ (ಆತ್ಮನಿಗೆ) ಅವಿದ್ಯೆಯಿದೆ ಎಂದು ಸಂಭಾವಿಸುವದು ಕಷ್ಟವಲ್ಲವೆ[1] ?

(ಪರಿಹಾರ) :- ಇದು ಹಾಗಲ್ಲ. ಏಕೆ ? ಎಂದರೆ ಇದಕ್ಕೆ ಹೇಳುತ್ತಾರೆ :

೧೧೬. 'ಅವಿದ್ಯೆಯು ಏತರಿಂದ ?' ಎಂಬ ಆಕ್ಷೇಪವು ಮೊದಲು ಉಂಟಾಗಲಾರದು ; ಏಕೆಂದರೆ (ಆಗ) ಹೇತುವು ಸಂಭವಿಸುವದಿಲ್ಲ[2]. ಮೂರು ಕಾಲದಲ್ಲಿಯೂ ಕಾಣುವದಿಲ್ಲವಾದ್ದರಿಂದ ಆಮೇಲೂ ಆಕ್ಷೇಪವು ಸಂಭವಿಸುವದಿಲ್ಲ[3].

## ಅವಿದ್ಯಾನಾಶಕ್ಕೆ ಪ್ರಸಂಖ್ಯಾನಾದಿಗಳು ಬೇಕಿಲ್ಲ

(ಮೂಲ)

**ಯಸ್ಮಾತ್ ತತ್ತ್ವಮಸ್ಯಾದಿವಾಕ್ಯಮೇವ ಆತ್ಮನೋಽಶೇಷಾಮ್ ಅವಿದ್ಯಾಂ ನಿರನ್ವಯಮ್ ಅಪನುದತಿ, ತಸ್ಮಾತ್ –**

**ಅದ್ಧಾತಮಮನಾದೃತ್ಯ ಪ್ರಮಾಣಂ ಸದಸೀತಿ ಯೇ ।**
**ಬುಭುತ್ಸನ್ತೇಽನ್ಯತಃ ಕುರ್ಯುಸ್ತೇಽಕ್ಷ್ಣೋಪಿ ರಸವೇದನಮ್ ॥೧೧೭॥**

---

1. ಈ ಆಕ್ಷೇಪಕ್ಕೂ ಹಿಂದೆ ೩-೧೧೧ರಲ್ಲಿ ಪರಿಹಾರವನ್ನು ಹೇಳಿಯೇ ಇತ್ತು. ಈಗ ಆಕ್ಷೇಪವೇ ಏಳುವಂತಿಲ್ಲವೆಂಬ ಪರಿಹಾರವನ್ನು ಹೇಳಿದೆ.

2. ಆಗ ಚೈತನ್ಯಸ್ವರೂಪನು ನಾನೆಂಬ ತಿಳುವಳಿಕೆಯೇ ಇರುವದಿಲ್ಲ ; ಅಜ್ಞನಿಗೆ ಅವಿದ್ಯೆಯನ್ನು ಕುರಿತು ವಿಚಾರಮಾಡುವ ಯೋಗ್ಯತೆಯಿರುವದಿಲ್ಲ. ಸಂ. ವಾ. ೧೭೯.

3. ಅಜ್ಞಾನವು ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರುವದಿಲ್ಲ - ಎಂಬುದೇ ಜ್ಞಾನ. ಸಂ.ವಾ. ೧೮೩.

(ಅರ್ಥ)

ಹೀಗೆ ತತ್ತ್ವಮಸ್ಯಾದಿವಾಕ್ಯವೇ ಆತ್ಮನ ಅವಿದ್ಯೆಯೆಲ್ಲವನ್ನೂ ಸ್ವಲ್ಪವೂ ಉಳಿಯದಂತೆ ಹೋಗಲಾಡಿಸುವದಷ್ಟೆ, ಆದ್ದರಿಂದ :

೧೧೭. ಸತ್ತೇ ನೀನಾಗಿರುವೆ ಎಂಬ ಸ್ಪಷ್ಟತಮವಾದ ಪ್ರಮಾಣ ವನ್ನು ಅನಾದರಮಾಡಿ ಯಾರು ಮತ್ತೊಂದರಿಂದ[1] ತಿಳಿದುಕೊಳ್ಳುವದ ಕ್ಕಿಚ್ಛಿಸುವರೋ ಅವರು ಚಕ್ಷುರಿಂದ್ರಿಯದಿಂದಲೂ ಸವಿಯ ಅನುಭವವನ್ನು ಮಾಡಿಕೊಂಡಾರು.

(ಮೂಲ)

ಏವಮಪ್ರತಿಹತಮ್ ಅಹಂ ಬ್ರಹ್ಮೇತಿ ಪ್ರಮಾಂ ತತ್ತ್ವಮಸ್ಯಾದಿ ವಾಕ್ಯಂ ಕುರ್ವದಪಿ ನ ಪ್ರತಿಪಾದಯತೀತಿ ಚೇದಭಿಮತಮ್, ನ ಕುತಶ್ಚ ನಾಪಿ ಪ್ರತಿಪತ್ತಿಃ ಸ್ಯಾತ್ । ಅತ ಆಹ –

**ಇದಂ ಚೇದನೃತಂ ಬ್ರೂಯಾತ್ ಸತ್ಯಾಮವಗತಾವಪಿ ।**
**ನ ಚಾನ್ಯತ್ರಾಪಿ ವಿಶ್ವಾಸೋ ಹ್ಯವಗತ್ಯವಿಶೇಷತಃ ॥೧೧೮॥**

(ಅರ್ಥ)

ಹೀಗೆ ಯಾವ ಅಡ್ಡಿಯೂ ಇಲ್ಲದೆ 'ನಾನು ಬ್ರಹ್ಮವೇ' ಎಂಬ ಪ್ರಮೆಯನ್ನು ಮಾಡುತ್ತಿದ್ದರೂ ತತ್ತ್ವಮಸ್ಯಾದಿವಾಕ್ಯವು (ತತ್ತ್ವವನ್ನು) ತಿಳಿಸುವದಿಲ್ಲ ಎಂದು (ಪೂರ್ವಪಕ್ಷಿಯ)ಮತವಾದರೆ, ಮತ್ತೆ ಏತರಿಂದಲೂ[2] ಅನುಭವವು ಉಂಟಾಗಲೇ ಆರದು. ಆದ್ದರಿಂದ ಹೇಳುತ್ತಾರೆ :

೧೧೮. ಅರಿವು ಉಂಟಾದರೂ ಇದು ಸುಳ್ಳನ್ನೇ ಹೇಳುತ್ತದೆ ಎನ್ನುವದಾದರೆ, ಮತ್ತೊಂದರಲ್ಲಿಯೂ ವಿಶ್ವಾಸವುಂಟಾಗಲಾರದು ; ಏಕೆಂದರೆ ಅದೂ ಅರಿವೇ ಆಗಿರುತ್ತದೆ.[3]

---

1. ಪ್ರಸಂಖ್ಯಾನವೇ ಮುಂತಾದದ್ದರಿಂದ ; ಅವು ಜ್ಞಾನಕ್ಕೆ ಸಾಧನವಲ್ಲವೆಂಬುದನ್ನು ಮುಂದಿರುವ ಚಕ್ಷುರಿಂದ್ರಿಯದೃಷ್ಟಾಂತವು ತಿಳಿಸುತ್ತದೆ.

2. ಪ್ರಸಂಖ್ಯಾನಾದಿಗಳಿಂದಲೂ.

3. ಒಂದು ಅರಿವಿನಿಂದ ಅನುಭವವಾಗದಿದ್ದರೆ ಮತ್ತೊಂದು ಅರಿವಿನಿಂದ ಆಗುತ್ತದೆ ಎಂಬ ವಿಶ್ವಾಸವಾಗಲಾರದು ; ಏಕೆಂದರೆ ಅದೂ ಅರಿವೇ.

(ಮೂಲ)

ನ ಚ ಉಪಾದಿತ್ಸಿತಾತ್ ವಾಕ್ಯಾರ್ಥಾತ್ ವಾಕ್ಯಾರ್ಥಾನ್ತರಂ ಕಲ್ಪಯಿತುಂ ಯುಕ್ತಮ್ । ಯಸ್ಮಾತ್ –

**ನ ಚೇದನುಭವೋಽತಃ ಸ್ಯಾತ್ ಪದಾರ್ಥಾವಗತಾವಪಿ ।**
**ಕಲ್ಪ್ಯಂ ವಿಧ್ಯನ್ತರಂ ತತ್ರ ನ ಹ್ಯನ್ಯೋಽರ್ಥೋಽವಗಮ್ಯತೇ॥೧೧೯॥**

(ಅರ್ಥ)

ವಿವಕ್ಷಿತವಾಗಿರುವ ವಾಕ್ಯಾರ್ಥಕ್ಕಿಂತ [1] ಮತ್ತೊಂದು ವಾಕ್ಯಾರ್ಥ [2]ವನ್ನು ಕಲ್ಪಿಸುವದು ಸರಿಯಲ್ಲ . ಏಕೆಂದರೆ :

೧೧೯. ಪದಾರ್ಥಗಳ ಜ್ಞಾನವಾದರೂ ಈ (ವಾಕ್ಯ)ದಿಂದ ಅನುಭವವುಂಟಾಗದೆ ಇದ್ದರೆ ಮತ್ತೊಂದು ವಿಧಿಯನ್ನು ಕಲ್ಪಿಸಬೇಕು. (ಈ ವಾಕ್ಯಕ್ಕೆ) ಇನ್ನೊಂದು ಅರ್ಥವು (ಇದೆಯೆಂದು) ತಿಳಿದುಬರುವದೇ ಇಲ್ಲ [3].

(ಮೂಲ)

ನ ಚ ಯಥಾಭಿಮತೋಽರ್ಥೋ ಯಥೋಕ್ತೇನ ನ್ಯಾಯೇನ ನಾವಸೀಯತೇ । ಕೋಽಸೌ ನ್ಯಾಯ ಇತಿ ? ಆಹ –

**ನಾಮಾದಿಭ್ಯೋ ನಿರಾಕೃತ್ಯ ತ್ವಮರ್ಥಂ ನಿಷ್ಪರಿಗ್ರಹಃ ।**
**ನಿಃಸ್ಪೃಹೋ ಯುಷ್ಮದರ್ಥೇಭ್ಯಃ ಶಮಾದಿವಿಧಿಚೋದಿತಃ ॥೧೨೦॥**

**ಭಙ್ಕ್ತ್ವಾ ಚಾನ್ನಮಯಾದೀಂಸ್ತಾನ್ ಪಞ್ಚಾನಾತ್ಮತಯಾರ್ಗಲಾನ್।**
**ಅಹಂ ಬ್ರಹ್ಮೇತಿ ವಾಕ್ಯಾರ್ಥಂ ವೇತ್ತಿ ಚೇನ್ನಾರ್ಥ ಈಹಯಾ ॥೧೨೧॥**

---

1. ತಾತ್ಪರ್ಯದಿಂದ ಗೊತ್ತಾಗುವ ವಾಕ್ಯಾರ್ಥಕ್ಕಿಂತ.

2. ಪ್ರಸಂಖ್ಯಾನವಿಧಿಯೇ ಮುಂತಾದದ್ದನ್ನು .

3. ಈ ವಾಕ್ಯದಲ್ಲಿ ಯಾವ ವಿಷಯದಲ್ಲಿಯೂ ತಾತ್ಪರ್ಯವುಂಟಾಗದೆ ಇದ್ದರೆ ಇದು (೩-೮೧ರಲ್ಲಿ ) ಹಿಂದೆ ಹೇಳಿರುವಂತೆ ದೃಷ್ಟಿವಿಧಾನಾರ್ಥವೆಂದೋ ಪ್ರಸಂಖ್ಯಾನವೇ ಮುಂತಾದ ಮತ್ತೊಂದು ವಿಧಿಗೆ ಶೇಷವೆಂದೋ ಕಲ್ಪಿಸಬೇಕಾಗುವದು. ಆದರೆ ಐಕಾತ್ಮ್ಯವೇ ಇಲ್ಲಿ ವಿವಕ್ಷಿತವೆಂದು ಸ್ಪಷ್ಟವಾಗಿ ತಿಳಿಯಬರುತ್ತಿದೆ.

(ಅರ್ಥ)

(ನನಗೆ) ಇಷ್ಟವಾಗಿರುವ (ಈ) ಅರ್ಥವು[1] (ನಾವು) ಹೇಳಿರುವ ನ್ಯಾಯದಿಂದ[2] ನಿಶ್ಚಯವಾಗುವದಿಲ್ಲವೆಂಬುದೂ ಇಲ್ಲ. ಆ ನ್ಯಾಯವು ಯಾವದು ? ಎಂದರೆ ಹೇಳುತ್ತಾರೆ :

೧೨೦-೧೨೧. ಶಮಾದಿವಿಧಿಯಿಂದ ಚೋದಿತನಾಗಿ[3] (ಯಾವ) ಪರಿಗ್ರಹವೂ ಇಲ್ಲದೆ[4] ನಾಮವೇ ಮುಂತಾದವುಗಳಿಂದ ತ್ವಮರ್ಥವನ್ನು ಬಿಡಿಸಿಕೊಂಡು[5] ಯುಷ್ಮದರ್ಥಗಳಲ್ಲಿ (ಯಾವ) ಆಶೆಯೂ ಇಲ್ಲದವನಾಗಿ[6] ಅನ್ನಮಯವೇ ಮುಂತಾದ ಆ ಐದು ಅಗುಳಿಗಳನ್ನು[7] ಅನಾತ್ಮವೆಂದು ಮುರಿದುಹಾಕಿ[8] ನಾನೇ ಬ್ರಹ್ಮವು ಎಂಬ ವಾಕ್ಯಾರ್ಥವನ್ನು ಅರಿತುಕೊಳ್ಳುವನಾದರೆ[9] (ಪ್ರಸಂಖ್ಯಾನಾದಿ) ವ್ಯಾಪಾರದಿಂದಾಗಬೇಕಾದ ಪ್ರಯೋಜನವೇನೂ ಇಲ್ಲ[10].

---

1. ಆತ್ಮೈಕತ್ವವು. 2. ಅನ್ವಯವ್ಯತಿರೇಕದ್ವಯದಿಂದ.

3. ''ಶಾನ್ತೋ ದಾನ್ತ ಉಪರತಸ್ತಿತಿಕ್ಷುಃ'' (ಬೃ. ೪-೪-೨೩) ಎಂಬ ವಿಧಿಯಂತೆ ನಡೆದುಕೊಳ್ಳುವವನಾಗಿ ಎಂದರ್ಥ. ಹಿಂದೆ ೩-೪, ೫ ಈ ಶ್ಲೋಕಗಳ ಸಂಬಂಧೋಕ್ತಿಯಲ್ಲಿ ಈ ವಿಧಿಯ ವಿಷಯಕ್ಕೆ ತಿಳಿಸಿರುವದನ್ನು ನೋಡಿರಿ.

4. ತನ್ನದೆಂಬುದು ಯಾವದೂ ಇಲ್ಲದೆ, ಕರ್ಮಗಳೆಲ್ಲವನ್ನೂ ಅವುಗಳಿಗೆ ಸಾಧನವಾಗಿರುವ ಯಜ್ಞೋಪವೀತ, ನಿವೀತ, ಪ್ರಾಚೀನಾವೀತಗಳೆಂಬುದನ್ನೂ ಬಿಟ್ಟವನಾಗಿ ಎಂದರ್ಥ.

5. ಭೂಮವಿದ್ಯೆಯಲ್ಲಿ ತಿಳಿಸಿರುವ ನಾಮಾದಿಯಾಗಿ ಪ್ರಾಣನವರೆಗಿನವೆಲ್ಲವೂ ಅನಾತ್ಮವೇ ; ಅವುಗಳು ಯಾವವೂ ತ್ವಂಪದದ ಅರ್ಥವಲ್ಲವೆಂದು ನಿಶ್ಚಯಿಸಿಕೊಂಡು ಎಂದರ್ಥ. ಈ ವಿಷಯದಲ್ಲಿ ೨-೫೭ನ್ನೂ ಅದರ ಟಿಪ್ಪಣಿಯನ್ನೂ ನೋಡಿ.

6. ಈ ಲೋಕದ ಮತ್ತು ಪರಲೋಕದ ಭೋಗಗಳ ಆಸೆಯೆಲ್ಲವನ್ನೂ ತೊರೆದು ಎಂದರ್ಥ. ಈ ಎರಡು ಶ್ಲೋಕಗಳಲ್ಲಿ ಸಾಧನಚತುಷ್ಟಯವನ್ನು ಸೂಚಿಸುತ್ತದೆ ಎಂಬುದನ್ನು ಲಕ್ಷಿಸಬೇಕು. 7. ಪ್ರತಿಬಂಧಕಗಳನ್ನು.

8. ತಿರಸ್ಕರಿಸಿ ಎಂದರ್ಥ. ತೈತ್ತಿರೀಯದಲ್ಲಿ ''ಅನ್ಯೋಽನ್ತರ ಆತ್ಮಾ ಪ್ರಾಣಮಯಃ'' ಎಂದು ಮುಂತಾಗಿರುವದು ಅನ್ನಮಯಾದಿಗಳು ಅನಾತ್ಮವೆಂದು ತಿಳಿಸುವದಕ್ಕೇ ಎಂದು ಭಾವ.

9. ಯಾವನೋ ಒಬ್ಬ ಪುರುಷಧೌರೇಯನಿಗೆ ಮಾತ್ರ ಈ ಜ್ಞಾನವು ಲಭಿಸುವದು ಎಂದು ತಿಳಿಸುವದಕ್ಕಾಗಿ ''ಅರಿತುಕೊಳ್ಳುವನಾದರೆ'' (ವೇತ್ತಿ ಚೇತ್) ಎಂಬ ಮಾತನ್ನು ಉಪಯೋಗಿಸಿದೆ.

10. ಆಮೇಲೆ ಪ್ರಸಂಖ್ಯಾನದಿಂದ ಪಡೆದುಕೊಳ್ಳಬೇಕಾದ ಅನುಭವವು ಯಾವದೂ ಉಳಿಯವದಿಲ್ಲ.

(ಮೂಲ)

ನ ಚೇದೇವಮುಪಗಮ್ಯತೇ ವಾಕ್ಯಸ್ಯ ಪ್ರಮಾಣಸ್ಯ ಸತೋಽಪ್ರಮಾಣ್ಯಂ ಪ್ರಾಪ್ನೋತಿ । ತದಾಹ–

**ಯದರ್ಥಂ ಚ ಪ್ರವೃತ್ತಂ ಯದ್ ವಾಕ್ಯಂ ತತ್ರ ನ ಚೇಚ್ಛ್ರುತಮ್ ।**
**ಪ್ರಮಾಮುತ್ಪಾದಯೇತ್ ತಸ್ಯ ಪ್ರಾಮಾಣ್ಯಂ ಕೇನ ಹೇತುನಾ ॥೧೨೨॥**

(ಅರ್ಥ)

ಹೀಗೆಂದು ಒಪ್ಪದೆ ಇದ್ದರೆ ಪ್ರಮಾಣವಾಗಿದ್ದುಕೊಂಡಿರುವ ವಾಕ್ಯಕ್ಕೆ ಅಪ್ರಾಮಾಣ್ಯವು ಬಂದೊದಗುತ್ತದೆ. ಎಂದರೆ ಅದಕ್ಕೆ ಹೇಳುತ್ತಾರೆ :

೧೨೨. ಯಾವ ವಾಕ್ಯವು ಏತಕ್ಕೋಸ್ಕರ ಪ್ರವೃತ್ತವಾಗಿರುತ್ತದೆಯೋ ಅದರ ವಿಷಯದಲ್ಲಿ ಶ್ರುತವಾಗಿದ್ದರೂ ಪ್ರಮೆಯನ್ನುಂಟುಮಾಡದಿದ್ದರೆ ಅದರ ಪ್ರಾಮಾಣ್ಯವು ಯಾವ ಹೇತುವಿನಿಂದ (ಬರುತ್ತದೆ)[1] ?

(ಮೂಲ)

ಅಥ ಮನ್ಯಸೇ–

**ಜಾನೀಯಾಚ್ಚೇತ್ ಪ್ರಸಂಖ್ಯಾನಾಚ್ಛಬ್ದಃ ಸತ್ಯವಚಾಃ ಕಥಮ್ ।**
**ಪಾರೋಕ್ಷ್ಯಂ ಶಬ್ದೋ ನಃ ಪ್ರಾಹ ಪ್ರಸಂಖ್ಯಾನಾತ್ತ್ವಸಂಶಯಮ್ ॥**

(ಅರ್ಥ)

ಇನ್ನು (ಹೀಗೆಂದು) ಅಭಿಪ್ರಾಯಪಡುವೆಯಾದರೆ :

೧೨೩. ಪ್ರಸಂಖ್ಯಾನದಿಂದ ಅರಿತುಕೊಳ್ಳುವನೆಂದಾದರೆ, ಶಬ್ದವು ಸತ್ಯವನ್ನು ಹೇಳುವದೆಂದು ಹೇಗೆ ಆದೀತು[2] ? ಶಬ್ದವು ಪಾರೋಕ್ಷ್ಯವನ್ನು

1. ವಾಕ್ಯವು ತನ್ನ ವಿಷಯವನ್ನು ಬೋಧಿಸುವದರಿಂದಲ್ಲವೆ, ಅದಕ್ಕೆ ಪ್ರಾಮಾಣ್ಯ ? ಇಲ್ಲಿ ಏಕಾತ್ಮತ್ವವನ್ನು ತಿಳಿಸಿದರೆ ಅಲ್ಲವೆ, ಅದು ಪ್ರಮಾಣವಾಗುವದು ?

2. 'ಶಬ್ದಯುಕ್ತ ್ಯಭ್ಯಾಸದಿಂದ ಅರಿತುಕೊಳ್ಳುವನೆಂಬುದೇ ನಿಜವಾದರೆ ಎಂಬುದು ಸಂಬಂಧೋಕ್ತಿಯ ವಿವರಣೆ. ಆಗ 'ತತ್ತ್ವಮಸಿ' ಎಂಬ ಶಬ್ದವು ಹೇಗೆ ಸತ್ಯವನ್ನು ಹೇಳುವದೆಂದಾದೀತು ?- ಎಂಬುದು ಪರಿಹಾರ. ಪ್ರಸಂಖ್ಯಾನದಿಂದ ಅದಾಗುವೆ, ಎಂದಲ್ಲವೆ ಹೇಳಬೇಕು ?- ಅದೇ ನೀನಾಗಿದ್ದೀಯೆ ಎಂದು ಹೇಳಿದರೆ ಸತ್ಯವಾದೀತೆ ?- ಎಂಬುದು ಸಿದ್ಧಾಂತಿಯ ವಾಕ್ಯ.

ನಮಗೆ ತಿಳಿಸಿಕೊಡುತ್ತದೆ, ಆದರೆ (ಆ ಶಬ್ದವೇ) ಪ್ರಸಂಖ್ಯಾನದಿಂದ ಅಸಂಶಯವಾಗಿ (ತಿಳಿಸಿಕೊಡುತ್ತದೆ).[1]

(ಮೂಲ)

ನ ಚ ಯುಕ್ತಿಶಬ್ದಾವೃತ್ತಿಲಕ್ಷಣಾತ್ ಪ್ರಸಂಖ್ಯಾನಾತ್ ಯಥಾವತ್ ಪ್ರತಿಪತ್ತಿರ್ಭವಿಷ್ಯತೀತಿ ಸಂಭಾವಯಾಮಃ । ಯಸ್ಮಾತ್ –

**ಯುಕ್ತಿಶಬ್ದೌ ಪುರಾಪ್ಯಸ್ಯ ನ ಚೇದಕುರುತಾಂ ಪ್ರಮಾಮ್ ।**
**ಸಾಕ್ಷಾದಾವರ್ತನಾತ್ ತಾಭ್ಯಾಂ ಕಿಮಪೂರ್ವಂ ಫಲಿಷ್ಯತಿ ॥೧೨೪॥**

(ಅರ್ಥ)

ಯುಕ್ತಿಶಬ್ದಗಳ ಆವೃತ್ತಿರೂಪವಾದ ಪ್ರಸಂಖ್ಯಾನದಿಂದ ವಸ್ತು ವಿದ್ದಂತೆ (ಅದರ) ತಿಳಿವಳಿಕೆಯಾಗುವದೆಂದು ನಮಗೆ ಸಂಭಾವಿತವಾಗಿ ಕಾಣುವದೂ ಇಲ್ಲ.[2] ಏಕೆಂದರೆ :

೧೨೪. ಯುಕ್ತಿಶಬ್ದಗಳು ಪೂರ್ವದಲ್ಲಿಯೂ ಸಾಕ್ಷಾತ್ಪ್ರಮೆಯನ್ನುಂಟುಮಾಡದೆ ಇದ್ದರೆ ಅವುಗಳನ್ನು ಆವೃತ್ತಿಮಾಡಿದ್ದರಿಂದ ಯಾವ ಅಪೂರ್ವ(ವಿಶೇಷವು) ಫಲಿಸೀತು[3] ?

---

1. ಪ್ರಸಂಖ್ಯಾನವಾದಿಯ ಮತವನ್ನು ಉತ್ತರಾರ್ಧದಲ್ಲಿ ಹೇಳಿದೆಯೆಂದೂ ಇದಕ್ಕೆ ಉತ್ತರವನ್ನು ಮುಂದಿನ ಶ್ಲೋಕದಲ್ಲಿ ಹೇಳಿದೆಯೆಂದೂ ಕಲ್ಪಿಸಬೇಕು. ಇಲ್ಲಿ ನಾವು ಕೊಟ್ಟಿರುವದು ವ್ಯಾಖ್ಯಾನಾನುಸಾರವಾದ ಅರ್ಥ. ''ಪಾರೋಕ್ಷ್ಯವನ್ನು ಶಬ್ದವು ನಮಗೆ ತಿಳಿಸುತ್ತದೆ, ಅದೇ ಪ್ರಸಂಖ್ಯಾನದ್ವಾರದಿಂದ ಅಸಂಶಯವಾಗಿ ತಿಳಿಸಿಕೊಡುತ್ತದೆ ; ಆದ್ದರಿಂದ (ಜಿಜ್ಞಾಸುವು) ಪ್ರಸಂಖ್ಯಾನದಿಂದ ತತ್ತ್ವವನ್ನು ಅರಿತುಕೊಳ್ಳುತ್ತಾನೆ'' ಎಂದರೆ, ಶಬ್ದವು ಸತ್ಯವನ್ನು ಹೇಳಿದಂತೆ ಹೇಗೆ ಆದೀತು ?- ಎಂದು ಅನ್ವಯಿಸಿದರೆ ಶ್ಲೋಕಾರ್ಥವು ಇಲ್ಲಿಗೇ ಪೂರ್ಣವಾಗುತ್ತದೆ.

2. ಪ್ರಸಂಖ್ಯಾನದಿಂದ ತತ್ತ್ವಜ್ಞಾನವುಂಟಾಗುವದಾದರೆ ಶಾಸ್ತ್ರಕ್ಕೆ ಪ್ರಾಮಾಣ್ಯವಿಲ್ಲವಾಗುತ್ತದೆ ಎಂದೆವು ; ಆದರೆ ನಿಜವಾಗಿ ಹಾಗಾಗುವಂತೆಯೇ ಇಲ್ಲ.

3. ಅನುಮಾನದಿಂದ ಪರೋಕ್ಷಜ್ಞಾನವಾದದ್ದು ಅದರ ಆವೃತ್ತಿಯಿಂದ ಅಪರೋಕ್ಷವಾಗುವದು ಎಲ್ಲಿಯೂ ಕಂಡಿಲ್ಲ ; ಶಬ್ದದಿಂದ ಅಪರೋಕ್ಷಜ್ಞಾನವಾಗದಿದ್ದರೆ ಅದರ ಅಭ್ಯಾಸದಿಂದಲೂ ಆಗಲಾರದು ಎಂದರ್ಥ. ಪ್ರಮಾಣವಾದ ಶಬ್ದವನ್ನು ಕೈಬಿಟ್ಟು ಅಪ್ರಮಾಣವಾದ ಪ್ರಸಂಖ್ಯಾನವನ್ನು ಹಿಡಿಯುವ ದೋಷವೊಂದೇ ನಿಮ್ಮ ವಾದಕ್ಕೆ ಫಲವು- ಎಂದು ಭಾವ. ಬೃ. ೪-೪-೮೨೦ನ್ನು ನೋಡಿ.

(ಮೂಲ)

ಅಥೈವಮಪಿ ಪ್ರಸಂಖ್ಯಾನಮನ್ತರೇಣ ಪ್ರಾಣಾನ್ ಧಾರಯಿತುಂ ನ ಶಕ್ನೋಷೀತಿ ಚೇತ್ (?)[1] ಶ್ರವಣಾದಾವೇವ ಸಂಪಾದಯಿಷ್ಯಾಮಃ । ಕಥಮ್ ?

**ಪ್ರಸಂಖ್ಯಾನೇ ಶ್ರುತಾವಸ್ಯ ನ್ಯಾಯೋಽಸ್ತ್ವಾಮ್ರೇಡನಾತ್ಮಕಃ ।**
**ಈಷಚ್ಛ್ರುತಂ ಸಾಮಿಶ್ರುತಂ ಸಮ್ಯಕ್ಶ್ರುತ್ವಾವಗಚ್ಛತಿ ॥೧೨೫॥**

(ಅರ್ಥ)

ಇನ್ನು ಹೀಗೂ[2] ಪ್ರಸಂಖ್ಯಾನವಿಲ್ಲದೆ ಪ್ರಾಣವನ್ನು ಧರಿಸಿರಲಾರೆಯಾದರೆ[3] ಶ್ರವಣಾದಿಗಳಲ್ಲಿಯೇ[4] (ಅದನ್ನು) ಏರ್ಪಡಿಸಿಕೊಡುವೆವು. ಹೇಗೆಂದರೆ :

೧೨೫. ಪ್ರಸಂಖ್ಯಾನದಲ್ಲಿ ಆವೃತ್ತಿರೂಪವಾದ ನ್ಯಾಯವಿದೆಯಲ್ಲ, (ಅದು) ಈ (ಆತ್ಮನ) ಶ್ರವಣದಲ್ಲಿಯೇ[5] ಆಗಲಿ. (ಹೇಗೆಂದರೆ) ಸ್ವಲ್ಪ ಶ್ರವಣಮಾಡಿದ್ದನ್ನು ಅರ್ಧವಾಗಿ ಶ್ರವಣಮಾಡಿ ಚೆನ್ನಾಗಿ ಶ್ರವಣಮಾಡಿ ಅರಿತುಕೊಳ್ಳುತ್ತಾನೆ[6].

---

1. ಇಲ್ಲಿ 'ಶಕ್ನೋಷಿ' ಎಂದಿಷ್ಟೇ ಸಾಕು, 'ಇತಿ ಚೇತ್' ಬೇಕಿಲ್ಲ ; ಇದರ ಸ್ಥಾನದಲ್ಲಿ 'ತತ್' ಎಂದಿದ್ದರೆ ಸುಲಭವಾಗಿ ಅನ್ವಯವಾಗುತ್ತದೆ. 'ನ ಶಕ್ನೋಷಿ' ಎಂಬುದಕ್ಕೆ ಬದಲು 'ನ ಶಕ್ನೋಮಿ' ಎಂದು ಒಂದು ಪಾಠವುಂಟು ; ಆಗಲೂ 'ಅಥ' ಹೆಚ್ಚಾಗುವದು.

2. ಪ್ರಸಂಖ್ಯಾನವು ನಿಷ್ಫಲವೆಂದು ತೋರಿಸಿದಮೇಲೂ.

3. ಅದು ಅವಶ್ಯವಾಗಿ ಬೇಕು ; ಇಲ್ಲದಿದ್ದರೆ 'ಆವೃತ್ತಿರಸಕೃದುಪದೇಶಾತ್' (ಸೂ. ೪-೧-೧) ಎಂಬ ಸೂತ್ರವು ವ್ಯರ್ಥವಾಗುತ್ತದೆ - ಎನ್ನುವುದಾದರೆ ಎಂದರ್ಥ.

4. ಶ್ರವಣಮನನಗಳಲ್ಲಿಯೇ ಎಂದರ್ಥ. ವಾರ್ತಿಕಪ್ರಸ್ಥಾನದಲ್ಲಿ ನಿದಿಧ್ಯಾಸನವೆಂದರೆ ತನಗೇ ಆಗುವ ವಾಕ್ಯಾರ್ಥಜ್ಞಾನವು. ಬೃ. ೨-೪-೧೭ ನೋಡಿ. ನಿದಿಧ್ಯಾಸನ ವಿಷಯಕ್ಕೆ ಭಾಷ್ಯವಾರ್ತಿಕಪ್ರಸ್ಥಾನಗಳ ತಾರತಮ್ಯವನ್ನು ಪೀಠಿಕೆಯಲ್ಲಿ ವಿವರಿಸಿದೆ.

5. ಶ್ರವಣಮನನಗಳಲ್ಲಿ ಎಂದರ್ಥ.

6. ಶ್ರವಣಮನನಗಳು ದರ್ಶನದಲ್ಲಿ ಕೊನೆಗಾಣಬೇಕಾಗಿರುವದರಿಂದ ದರ್ಶನವುಂಟಾಗುವವರಿಗೂ ಅವುಗಳನ್ನು ಮಾಡಬೇಕು ಎಂದರ್ಥ. ಸೂ.ಭಾ. ೪-೧-೧ನ್ನು ನೋಡಿ.

(ಮೂಲ)

ನನು ಪ್ರಸಂಖ್ಯಾನವಿಧಿಮಭ್ಯುಪಗಚ್ಛತಃ ಪಾರಮಹಂಸೀ ಚರ್ಯಾ ಬೌದ್ಧಾದಿಚರ್ಯಾವತ್ ಅಶಾಸ್ತ್ರಪೂರ್ವಿಕಾ ಪ್ರಾಪ್ನೋತಿ । ತತಶ್ಚ ಆರೂಢ ಪತಿತತ್ವಂ ನ ಸ್ಯಾತ್, ಅಶೇಷಕರ್ಮಣಾಂ ಚ ನಿವೃತ್ತಿರ್ನ ಪ್ರಾಪ್ನೋತೀತಿ । ಉಚ್ಯತೇ–

**ತ್ವಮರ್ಥಸ್ಯಾವಬೋಧಾಯ ವಿಧಿರಪ್ಯಾಶ್ರಿತೋ ಯತಃ ।**
**ತಮನ್ತರೇಣ ಯೇ ದೋಷಾಸ್ತೇಽಪಿ ನಾಯಾನ್ತ್ಯಹೇತವಃ ॥೧೨೬॥**

(ಅರ್ಥ)

(ಆಕ್ಷೇಪ) :- ಪ್ರಸಂಖ್ಯಾನವಿಧಿಯನ್ನು ಒಪ್ಪದವನಿಗೆ ಪರಮಹಂಸಾಶ್ರಮದ ಆಚಾರವು ಬೌದ್ಧಾದಿಗಳ ಆಚಾರದಂತೆ ಶಾಸ್ತ್ರಪೂರ್ವಕವಲ್ಲದೆ ಹೋಗುವದು. ಇದರಿಂದ ಅರೂಢಪತಿತತ್ವವು ಇಲ್ಲದೆ ಹೋಗುವದಲ್ಲ [1]! ಸರ್ವಕರ್ಮಸಂನ್ಯಾಸವೂ ಪ್ರಾಪ್ತವಾಗುವದಿಲ್ಲವಲ್ಲ [2]!

(ಪರಿಹಾರ) :- (ಇದಕ್ಕೆ) ಹೇಳುತ್ತೇವೆ :

೧೨೬. ತ್ವಮರ್ಥವನ್ನು ಅರಿಯುವದಕ್ಕೆ ವಿಧಿಯನ್ನೂ ಆಶ್ರಯಿಸಿರುವೆವಾದ್ದರಿಂದ ಅದಿಲ್ಲದಿದ್ದರೆ (ಬರುವ) ದೋಷಗಳಿವೆಯಲ್ಲ, ಅವೂ ಹೇತುವಿಲ್ಲದ್ದರಿಂದ ಬರುವದಿಲ್ಲ.

---

1. ಪ್ರಸಂಖ್ಯಾನಕ್ಕಾಗಿ ಸಂನ್ಯಾಸವನ್ನು ವಿಧಿಸಿದೆ ಎಂದು ಒಪ್ಪಿದರೆ ಆ ಆಶ್ರಯವೂ ಸಿದ್ಧಿಸುತ್ತದೆ ; ಅದನ್ನು ನಡುವೆ ಬಿಟ್ಟರೆ ಅರೂಢಪತಿತ್ವವೂ ಬರುತ್ತದೆ ಎಂದರ್ಥ.

2. ಇದನ್ನು ಹಿಂದೆ ೩-೪, ೫ - ಇವುಗಳ ಸಂಬಂಧೋಕ್ತಿಯಲ್ಲಿಯೇ ಹೇಳಿತ್ತು ; ಪ್ರಸಂಖ್ಯಾನಖಂಡನದ ಉಪಸಂಹಾರಕ್ಕಾಗಿ ಮತ್ತೆ ಇಲ್ಲಿ ಹೇಳಿದೆ. ಉ. ಸಾ. ೧೮-೨೧೦ನ್ನು ನೋಡಿರಿ.

# ನಾಲ್ಕನೆಯ ಅಧ್ಯಾಯ

## ಅಧ್ಯಾಯದ ಸಂಬಂಧ

(ಮೂಲ)

**ಪೂರ್ವಾಧ್ಯಾಯೇಷು ಯದ್ವಸ್ತು ವಿಸ್ತರೇಣೋದಿತಂ ಸ್ಫುಟಮ್ ।**
**ಸಂಕ್ಷೇಪತೋಽಧುನಾ ವಕ್ಷ್ಯೇ ತದೇವ ಸುಖವಿತ್ತಯೇ ॥೧॥**
**ಸಂಕ್ಷೇಪವಿಸ್ತರಾಭ್ಯಾಂ ಹಿ ಮನ್ದೋತ್ತಮಧಿಯಾಂ ನೃಣಾಮ್ ।**
**ವಸ್ತೂಚ್ಯಮಾನಮೇತ್ಯನ್ತಃಕರಣಂ ತೇನ ಭಣ್ಯತೇ ॥೨॥**

(ಅರ್ಥ)

೧-೨. ಹಿಂದಿನ ಅಧ್ಯಾಯಗಳಲ್ಲಿ ಯಾವ ವಿಷಯವನ್ನು ವಿಸ್ತಾರವಾಗಿ ಸ್ಫುಟವಾಗಿ ಹೇಳಲಾಗಿರುವದೋ ಅದನ್ನೇ ಸುಲಭವಾಗಿ ತಿಳಿಯುವದಕ್ಕೋಸ್ಕರ ಈಗ ಸಂಕ್ಷೇಪವಾಗಿ ಹೇಳುವೆನು. ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ಹೇಳಿದ ವಸ್ತುವು ಅಲ್ಪಬುದ್ಧಿಯವರಿಗೂ ಉತ್ತಮಬುದ್ಧಿಯವರಿಗೂ ಮನಸ್ಸಿಗೆ ಬರುತ್ತದೆ.[1] ಆದ್ದರಿಂದ (ಹೀಗೆ ಸಂಕ್ಷೇಪವಾಗಿ ಹೇಳಲಾಗುತ್ತದೆ).

## ಹಿಂದಿನ ಗ್ರಂಥಾರ್ಥದ ಸಂಕ್ಷೇಪ

(ಮೂಲ)

**ಆತ್ಮಾನಾತ್ಮಾ ಚ ಲೋಕೇಽಸ್ಮಿನ್ ಪ್ರತ್ಯಕ್ಷಾದಿಪ್ರಮಾಣತಃ ।**
**ಸಿದ್ಧಸ್ತಯೋರನಾತ್ಮಾ ತು ಸರ್ವತ್ರೈವಾತ್ಮಪೂರ್ವಕಃ ॥೩॥**

---

1. ವಿಸ್ತಾರವಾಗಿ ಅಲ್ಲಲ್ಲಿ ಹೇಳಿರುವದನ್ನು ಅಲ್ಪಬುದ್ಧಿಗಳಾದವರು ತಿಳಿದುಕೊಳ್ಳಲಾರರು ; ಆದ್ದರಿಂದ ಅವರಿಗೆ ಅದನ್ನೇ ಒಂದು ಕಡೆಯಲ್ಲಿ ಸಂಗ್ರಹವಾಗಿ ಹೇಳುವದು ಅವಶ್ಯ ಎಂದು ಅಭಿಪ್ರಾಯ. ಹಿಂದಿನ ಅಧ್ಯಾಯಗಳಲ್ಲಿ ಮುಖ್ಯವಾಗಿ ಆತ್ಮಾಜ್ಞಾನವನ್ನು ವೇದಾಂತವಾಕ್ಯದಿಂದ ತೊಲಗಿಸಿಕೊಂಡರೆ ಅಷ್ಟರಿಂದಲೇ ಸರ್ವಾನರ್ಥಪರಿಹಾರವೂ ಸಕಲಪುರುಷಾರ್ಥಪ್ರಾಪ್ತಿಯೂ ಆಗುತ್ತದೆ ಎಂದು ಹೇಳಿದೆ. ಅದನ್ನೇ ಇಲ್ಲಿ ಸಂಗ್ರಹವಾಗಿ ಹೇಳಿ ಸಾಂಪ್ರದಾಯಿಕಗುರುಗಳ ವಚನಪ್ರಮಾಣವನ್ನು ಉದಾಹರಿಸಿ ಉಪಸಂಹಾರಮಾಡಲಾಗುವದು.

**ಅನಾತ್ಮತ್ವಂ ಸ್ವತಃಸಿದ್ಧಂ ದೇಹಾದ್ಭಿನ್ನಸ್ಯ ವಸ್ತುನಃ ।**
**ಜ್ಞಾತುರಪ್ಯಾತ್ಮತಾ ತದ್ವನ್ಮಧ್ಯೇ ಸಂಶಯದರ್ಶನಮ್ ॥೪॥**

(ಅರ್ಥ)

೩-೪. ಆತ್ಮನೂ ಅನಾತ್ಮವೂ ಈ ಲೋಕದಲ್ಲಿ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾಗಿದೆ.[1] ಅವೆರಡರಲ್ಲಿ ಅನಾತ್ಮವಾದರೋ ಎಲ್ಲಾ ಕಡೆಯಲ್ಲಿಯೂ ಆತ್ಮಪೂರ್ವಕವಾಗಿರುತ್ತದೇ[2]. ದೇಹಕ್ಕಿಂತ ಬೇರೆಯಾಗಿರುವ (ಹೊರಗಿನ) ವಸ್ತುವಿಗೆ ಅನಾತ್ಮತ್ವವು ತಾನೇ ಸಿದ್ಧವಾಗಿರುತ್ತದೆ[3]. ಹೀಗೆಯೇ ಜ್ಞಾತೃವಿಗೂ[4] ಆತ್ಮತ್ವವು (ತಾನೇ ಸಿದ್ಧವಾಗಿರುತ್ತದೆ). ನಡುವೆ (ಇರುವ ದೇಹಾದಿಗಳಲ್ಲಿ ) ಸಂಶಯವು ಕಾಣಬರುತ್ತದೆ.[5]

(ಮೂಲ)

**ಅಸಾಧಾರಣಾಂಸ್ತಯೋರ್ಧರ್ಮಾನ್ ಜ್ಞಾತ್ವಾ ಧೂಮಾಗ್ನಿವದ್ ಬುಧಃ ।**
**ಅನಾತ್ಮನೋऽಥ ಬುದ್ಧ್ಯಸ್ತಾನ್ ಜಾನೀಯಾದನುಮಾನತಃ ॥೫॥**

**ಇದಮಿತ್ಯೇವ ಬಾಹ್ಯೇऽರ್ಥೇ ಹ್ಯಹಮಿತ್ಯೇವ ಬೋದ್ಧರಿ ।**
**ದ್ವಯಂ ದೃಷ್ಟಂ ಯತೋ ದೇಹೇ ತೇನಾಯಂ ಮುಹ್ಯತೇ ಜನಃ ॥೬॥**

---

1. ಪ್ರತ್ಯಕ್ಷದಿಂದ ಹೊರಗಿನ ಅನಾತ್ಮವಸ್ತುಗಳೂ ಅನುಮಾನದಿಂದ ಇಂದ್ರಿಯಾದಿಗಳೂ ಶಾಸ್ತ್ರದಿಂದ ಆತ್ಮನೂ ಸಿದ್ಧವಾಗಿರುತ್ತವೆ.

2. ಆತ್ಮನಿಲ್ಲದೆ ಅನಾತ್ಮವಿರುವದಿಲ್ಲ. ದೇಹಾದಿಗಳಿಗೆ ಅಹಂಕಾರ, ಅಹಂಕಾರಕ್ಕೆ ಜ್ಞಾತೃ- ಹೀಗೆ ದೃಶ್ಯವು ದ್ರಷ್ಟೃಪೂರ್ವಕವಾಗಿರುತ್ತದೆ. ೩-೫೬.

3. ಮಕ್ಕಳು ಮುಂತಾದವರಲ್ಲಿ ತಾನೆಂಬ ಅಧ್ಯಾಸವನ್ನು ಅತಿಸ್ಥೂಲ ಬುದ್ಧಿಗಳಾದವರು ಮಾಡುವರು, ಅದನ್ನು ಇಲ್ಲಿ ಕೈಬಿಟ್ಟಿದೆ.

4. ಸ್ವತಃಸಿದ್ಧನಾದ ಆತ್ಮನಿಗೂ.

5. ಏಕೆಂದರೆ ಅವುಗಳನ್ನು ನಾನೆಂದೂ ನನ್ನದೆಂದೂ ವ್ಯವಹರಿಸುತ್ತಾರೆ ; 'ನಾನು ನಡೆಯುತ್ತೇನೆ, ನನ್ನ ದೇಹವು ಬಡಕಲಾಗಿದೆ' ಹೀಗೆ ಎರಡು ಬಗೆಯ ಪ್ರತ್ಯಯಗಳೂ ದೇಹದಿಂದ ಹಿಡಿದು ಬುದ್ಧಿಯವರೆಗಿನ ಪದಾರ್ಥಗಳಲ್ಲಿ ಆಗುತ್ತಿರುತ್ತದೆ.

(ಅರ್ಥ)

೫-೬. ವಿವೇಕಿಯಾದವನು ಅವೆರಡರ ಅಸಾಧಾರಣಧರ್ಮಗಳನ್ನು[1] ಅರಿತುಕೊಂಡು ಹೊಗೆಯಿಂದ ಬೆಂಕಿಯನ್ನು (ತಿಳಿದುಕೊಳ್ಳು)ವಂತೆ ಆಮೇಲೆ ಬುದ್ಧ್ಯಂತವಾಗಿರುವವು ಅನಾತ್ಮಗಳೆಂದು ಅನುಮಾನದಿಂದ ಅರಿತುಕೊಳ್ಳಬೇಕು[2]. ಹೊರಗಿನ ಅರ್ಥದಲ್ಲಿ 'ಇದು' ಎಂದೇ (ಅರಿವು) ಕಂಡುಬರುತ್ತದೆ ; ಜ್ಞಾತೃವಿನಲ್ಲಿ 'ನಾನು' ಎಂದೇ ಕಂಡುಬರುತ್ತದೆ. (ಆದರೆ) ದೇಹದಲ್ಲಿ[3] (ಈ) ಎರಡೂ ಕಾಣುತ್ತಿರುವದರಿಂದ ಈ ಜನವು ಮರುಳಾಗುತ್ತಿರುವದು[4].

(ಮೂಲ)

ಕೇನ ಪುನರ್ನ್ಯಾಯೇನ ಆತ್ಮಾನಾತ್ಮನೋರಶ್ವಮಹಿಷಯೋರಿವ ವಿಭಾಗಃ ಕ್ರಿಯತ ಇತಿ ? ಉಚ್ಯತೇ–

**ನ್ಯಾಯಃ ಪುರೋದಿತೋಽಸ್ಮಾಭಿರಾತ್ಮಾನಾತ್ಮವಿಭಾಗಕೃತ್ ।**
**ತೇನೇದಮರ್ಥಮುತ್ಸಾರ್ಯ ಹ್ಯಹಮಿತ್ಯತ್ರ ಯೋ ಭವೇತ್ ॥೭॥**

**ವಿದ್ಯಾತ್ ತತ್ತ್ವಮಸೀತ್ಯಸ್ಮಾದ್ ಭಾವಾಭಾವದೃಶಂ ಸದಾ ।**
**ಅನನ್ತರಮಬಾಹ್ಯಾರ್ಥಂ ಪ್ರತ್ಯಕ್ಷಂ ಮುನಿರಞ್ಜಸಾ ॥೮॥**

---

1. ಸ್ಥೂಲತ್ವ, ದೃಶ್ಯತ್ವ, ಅಚೇತನತ್ವ, ಆಗಮಾಪಾಯಿತ್ವ, ವ್ಯಭಿಚರತ್ಸ್ವರೂಪತ್ವ ಪರಿಚ್ಛಿನ್ನತ್ವ - ಮುಂತಾದವು ಅನಾತ್ಮಧರ್ಮಗಳು : ಸೂಕ್ಷ್ಮತ್ವ, ದೃಗ್ರೂಪತ್ವ, ಚೇತನತ್ವ, ಕೂಟಸ್ಥನಿತ್ಯತ್ವ, ಅವ್ಯಭಿಚರಿತಸ್ವರೂಪತ್ವ ಅಪರಿಚ್ಛಿನ್ನತ್ವ - ಮುಂತಾದವು ಆತ್ಮನ ಧರ್ಮಗಳು.

2. ಹೊಗೆಯಿರುವದರಿಂದ ಬೆಂಕಿಯಿರಬೇಕು- ಎಂದು ನಿಶ್ಚಯಿಸುವಂತೆ ಈ ಅನಾತ್ಮಧರ್ಮಗಳಿರುವದರಿಂದ ಇವು ಅನಾತ್ಮ ಎಂದು ನಿಶ್ಚಯಿಸಬೇಕು. ಅನಾತ್ಮವು ಆತ್ಮಪೂರ್ವಕವಾಗಿರುವದರಿಂದ ಇವನ್ನು ನೋಡುವವನೇ ಆತ್ಮನು ಎಂದು ನಿಶ್ಚಯಿಸಬೇಕು.

3. ನಾಲ್ಕನೆಯ ಶ್ಲೋಕದಲ್ಲಿ ಹೇಳಿರುವ ದೇಹದಿಂದ ಹಿಡಿದು ಬುದ್ಧಿಯವರೆಗಿನ ಅರ್ಥಗಳಲ್ಲಿ ಎಂದರ್ಥ.

4. ಅವುಗಳು ಅನಾತ್ಮವೆಂದು ಕೆಲವರು ಆತ್ಮನೆಂದು ಕೆಲವರು- ಹೀಗೆ ಸಂಶಯಗ್ರಸ್ತರಾಗಿರುವರು ಎಂದರ್ಥ.

(ಅರ್ಥ)

(ಪ್ರಶ್ನೆ) :- ಹಾಗಾದರೆ ಯಾವ ನ್ಯಾಯದಿಂದ ಆತ್ಮಾನಾತ್ಮರುಗಳನ್ನು ಕುದುರೆಕೋಣಗಳಂತೆ ವಿಂಗಡಮಾಡಿಕೊಳ್ಳಬಹುದು ?

(ಉತ್ತರ) :- ಹೇಳುತ್ತೇವೆ :

೭-೮. ಆತ್ಮಾನಾತ್ಮಗಳನ್ನು ವಿಂಗಡಿಸಿಕೊಡುವ ನ್ಯಾಯವನ್ನು ನಾವು ಹಿಂದೆಯೇ[1] ಹೇಳಿರುತ್ತೇವೆ. ಆ (ನ್ಯಾಯ)ದಿಂದ 'ನಾನು' ಎಂಬಲ್ಲಿ ಇದು ಎಂಬರ್ಥವನ್ನು ತೆಗೆದುಹಾಕಿ ಯಾವನು ಯಾವಾಗಲೂ ಭಾವಾಭಾವ ಗಳನ್ನು[2] ಯಾವಾಗಲೂ ನೋಡುತ್ತಿರುವನೋ[3] ಒಳಗಿಲ್ಲದೆ ಹೊರಗಿಲ್ಲದೆ ಪ್ರತ್ಯಗ್ರೂಪನಾಗಿರುವನೋ ಅವನನ್ನು ಮುನಿಯಾದವನು 'ತತ್ತ್ವಮಸಿ' ಎಂಬೀ (ವಾಕ್ಯ)ದಿಂದ ಸರಿಯಾಗಿ ಅರಿತುಕೊಳ್ಳಬೇಕು.[4]

(ಮೂಲ)

**ಉಚ್ಯತಾಂ ತರ್ಹಿ ಕಯಾ ತು ಪರಿಪಾಟ್ಯಾ ವಾಕ್ಯಾರ್ಥಂ ವೇತ್ತೀತಿ । ಉಚ್ಯತೇ । ಅನ್ವಯವ್ಯತಿರೇಕಾಭ್ಯಾಮ್–**

**ತ್ಯಕ್ತಕೃತ್ಸ್ನೇದಮರ್ಥತ್ವಾತ್ ತ್ಯಕ್ತೋಽಹಮಿತಿ ಮನ್ಯತೇ ।**
**ನಾವಗಚ್ಛಾಮ್ಯಹಂ ಯಸ್ಮಾನ್ನಿಜಾತ್ಮಾನಮನಾತ್ಮನಃ ॥೯॥**

(ಅರ್ಥ)

(ಪ್ರಶ್ನೆ) :- ಹಾಗಾದರೆ ಯಾವ ಕ್ರಮದಿಂದ ವಾಕ್ಯಾರ್ಥವನ್ನು ಅರಿತುಕೊಳ್ಳುತ್ತಾನೆಂಬುದನ್ನು ಹೇಳಿರಿ.

---

1. ಎರಡನೆಯ ಅಧ್ಯಾಯದಲ್ಲಿ ವಿಸ್ತಾರವಾಗಿಯೂ ಮೂರನೆಯ ಅಧ್ಯಾಯದಲ್ಲಿ ಸಂಕ್ಷೇಪವಾಗಿಯೂ ಹೇಳಿರುವ ದ್ರಷ್ಟ್ರನ್ವಯದೃಶ್ಯವ್ಯತಿರೇಕ, ಸಾಕ್ಷ್ಯನ್ವಯ ಸಾಕ್ಷ್ಯವ್ಯತಿರೇಕ - ಎಂಬ ಅನ್ವಯವ್ಯತಿರೇಕನ್ಯಾಯವೇ ಇದು.

2. ನಾನು ಮನುಷ್ಯನು, ನಾನು ಕುರುಡನು- ಮುಂತಾದ ಭಾವರೂಪವನ್ನೂ ನಾನು ದೇಹಾದಿಗಳಲ್ಲ ಎಂಬ ಅಭಾವರೂಪವನ್ನೂ ಎಂದರ್ಥ.

3. ಕೂಟಸ್ಥಚೈತನ್ಯದಿಂದಲೇ ಬೆಳಗುತ್ತಿರುವ ಎಂದರ್ಥ.

4. ಇದಕ್ಕೆ ಅನ್ವಯವ್ಯತಿರೇಕವೂ ಸಾಲದು ; ಪ್ರಸಂಖ್ಯಾನಾದಿಗಳ ಬಯಕೆಯೂ ಇಲ್ಲ. ವಾಕ್ಯವೇ ಬೇಕು- ಎಂದರ್ಥ.

(ಉತ್ತರ) :- ಹೇಳುತ್ತೇವೆ. ಅನ್ವಯವ್ಯತಿರೇಕಗಳಿಂದ[1] :

೯. ಎಲ್ಲಾ ಇದಮರ್ಥವನ್ನೂ ಬಿಟ್ಟದ್ದರಿಂದ[2] ಅನಾತ್ಮನಿಂದ (ವಿಂಗಡವಾಗಿ) ನನ್ನ ಆತ್ಮನನ್ನು ಅರಿತುಕೊಳ್ಳಲಿಲ್ಲವಾಗಿ ನಾನೇ ತ್ಯಕ್ತನಾದೆನು ಎಂದು ತಿಳಿದುಕೊಳ್ಳುತ್ತಾನೆ[3].

(ಮೂಲ)

ಅಥ ಶರೀರಾದಿಬುದ್ಧಿಪರ್ಯನ್ತಃ ಸ ಸರ್ವೋಽನಾತ್ಮೈವ ಇತಿ ಪ್ರಮಾಣಾದ್ವಿನಿಶ್ಚಿತ್ಯ ಕಿಮಿತಿ ಬುಭುತ್ಸಾತೋ ನೋಪರಮತೇ ಶೃಣು–

**ಅನುಚ್ಛಿನ್ನಬುಭುತ್ಸಶ್ಚ ಪ್ರತ್ಯಗ್ಧೀತೋರನಾತ್ಮನಃ ।**
**ಡೋಲಾಯಮಾನಚಿತ್ತೋಽಯಂ ಮುಹ್ಯತೇ ಭೌತವನ್ನರಃ ॥೧೦॥**

(ಅರ್ಥ)

(ಪ್ರಶ್ನೆ) :- ಇನ್ನು ಶರೀರಾದಿಯಾಗಿ ಬುದ್ಧಿಯವರೆಗಿನ ಆ ಎಲ್ಲವೂ ಅನಾತ್ಮವೇ ಎಂದು ಪ್ರಮಾಣದಿಂದ ನಿಶ್ಚಯಿಸಿದಮೇಲೆ ಜಿಜ್ಞಾಸೆಯನ್ನೇಕೆ ಬಿಟ್ಟುಬಿಡುವದಿಲ್ಲ !

(ಉತ್ತರ) :- ಕೇಳು :

೧೦. ಅನಾತ್ಮದಿಂದ (ಬೇರ್ಪಡಿಸಿಕೊಂಡು) ಪ್ರತ್ಯಗಾತ್ಮನ(ನ್ನು ಅರಿಯಬೇಕಾಗಿರುವ) ಕಾರಣದಿಂದ ಜಿಜ್ಞಾಸೆಯು ಮುಗಿಯದೆ (ಅತ್ತಿತ್ತ ) ಹೊಯ್ದಾಡುತ್ತಿರುವ ಚಿತ್ತವುಳ್ಳವನಾಗಿ[4] ಭೂತವು ಹಿಡಿದವನಂತೆ ಮಂಕನಾಗಿರುತ್ತಾನೆ[5].

---

1. 'ಎಲ್ಲಾ ಇದಮರ್ಥವನ್ನು ಬಿಟ್ಟದ್ದರಿಂದ' ಎಂಬುದಕ್ಕೆ ಇದನ್ನು ಸಂಬಂಧಿಸಿಕೊಳ್ಳಬೇಕು.

2. ಅನಾತ್ಮವನ್ನೆಲ್ಲ ಬಿಟ್ಟದ್ದರಿಂದ ಎಂದರ್ಥ.

3. ನಾನು ಎಂಬ ಪದಾರ್ಥವು ಯಾವದೂ ಕಾಣಿಸುವದಿಲ್ಲವಾದ್ದರಿಂದ ಆತ್ಮನೇ ಇಲ್ಲ ಎಂದುಕೊಳ್ಳುತ್ತಾನೆ.

4. ನಾನು ಯಾರು ಎಂದು ಆಲೋಚನಪರನಾಗಿ.

5. ಏನೂ ತೋಚದೆ ಸುಮ್ಮನೂ ಇರಲಾರದೆ ಇರುತ್ತಾನೆ. ಆದ್ದರಿಂದ ಅವನ ಅಜ್ಞಾನವನ್ನು ತೊಲಗಿಸುವದಕ್ಕೆ ವೇದಾಂತವಾಕ್ಯವು ಬೇಕು.

(ಮೂಲ)

ಅವಿಲುಪ್ತವಿಜ್ಞಾನಾತ್ಮನಃ ಆತ್ಮತ್ವಾದೇವ ನಿತ್ಯಸಾಂನಿಧ್ಯಾತ್ ಬುಭುತ್ಸುಃ ಕಿಮಿತಿ ನ ಪ್ರತಿಪದ್ಯತೇ ಇತಿ ? ಶೃಣು । ಯಸ್ಮಾತ್ –

**ಯೈರದ್ರಾಕ್ಷೀತ್ ಪುರಾತ್ಮಾನಂ ಯಮನಾತ್ಮೇತಿ ವೀಕ್ಷತೇ ।**
**ದೃಷ್ಟೇರ್ದ್ರಷ್ಟಾರಮಾತ್ಮಾನಂ ತೈಃ ಪ್ರಸಿದ್ಧೈಃ ಪ್ರಮಿತ್ಸತಿ ॥೧೧॥**

(ಅರ್ಥ)

(ಪ್ರಶ್ನೆ) :- ನಾಶವಾಗದ ಅರಿವಿನ ಸ್ವರೂಪವುಳ್ಳವನು ಆತ್ಮನೇ ಆಗಿರುವದರಿಂದ ನಿತ್ಯವೂ ಹತ್ತಿರವೇ ಇರುವದರಿಂದ ಜಿಜ್ಞಾಸುವು ಏತಕ್ಕೆ ಅರಿಯುವದಿಲ್ಲ ?

(ಉತ್ತರ) :- ಎಂದರೆ ಕೇಳು, ಏಕೆಂದರೆ :

೧೧. ಯಾವದನ್ನು[1] (ಈಗ)[2] ಅನಾತ್ಮವೆಂದು ಕಂಡುಕೊಂಡಿರುತ್ತಾನೋ, (ಆ) ಆತ್ಮನನ್ನು ಯಾವ (ಪ್ರಮಾಣ)ಗಳಿಂದ ಹಿಂದೆ ನೋಡುತ್ತಿದ್ದನೋ ಆ ಪ್ರಸಿದ್ಧವಾದ (ಪ್ರಮಾಣಗಳಿಂದಲೇ) ದೃಷ್ಟಿಗೂ ದ್ರಷ್ಟೃವಾಗಿರುವ[3] ಆತ್ಮನನ್ನು ಅರಿತುಕೊಳ್ಳಲೆಳಸುತ್ತಾನೆ[4].

(ಮೂಲ)

ಕಸ್ಮಾತ್ ಪುನರ್ಹೇತೋಃ ಪರಾಚೀನಾಭಿಃ ಶಬ್ದಾದ್ಯವಲೇಹಿನೀಭಿರ್ಬುದ್ಧಿಭಿಃ ಆತ್ಮಾನಮನಾತ್ಮವತ್ ನ ವೀಕ್ಷತ ಇತಿ ? ಉಚ್ಯತೇ –

**ಚಕ್ಷುರ್ನ ವೀಕ್ಷತೇ ಶಬ್ದಮತದಾತ್ಮತ್ವಕಾರಣಾತ್ ।**
**ಯಥೈವಂ ಭೌತಿಕೀ ದೃಷ್ಟಿರ್ನಾತ್ಮಾನಂ ಪರಿಪಶ್ಯತಿ ॥೧೨॥**

---

1. ದೇಹಾದಿಯಾಗಿ ಬುದ್ಧಿಯವರೆಗಿನದನ್ನು .

2. ಅನ್ವಯವ್ಯತಿರೇಕಗಳನ್ನು ಮಾಡಿಕೊಂಡಬಳಿಕ.

3. ಹಿಂದೆ ದೇಹಾದಿಗಳನ್ನು ಆತ್ಮನೆಂದು ಕಾಣುತ್ತಿದ್ದದ್ದು ಪ್ರತ್ಯಕ್ಷಾದಿಗಳಿಂದ ; ಆದರೆ ಆ ಲೌಕಿಕದೃಷ್ಟಿಗೂ ಆತ್ಮನು ದ್ರಷ್ಟೃವಾಗಿರುತ್ತಾನೆ.

4. ಹಳೆಯ ಅಭ್ಯಾಸದಿಂದ ಪ್ರತ್ಯಕ್ಷಾದಿಪ್ರಮಾಣಗಳಿಂದಲೇ ಆತ್ಮನನ್ನು ಅರಿತುಕೊಳ್ಳಬೇಕೆಂದು ಪ್ರಯತ್ನಿಸುತ್ತಾನೆ ; ಆದರೆ ಅದು ಸಾಗುವ ಪ್ರಯತ್ನವಲ್ಲ .

(ಅರ್ಥ)

(ಪ್ರಶ್ನೆ) :- ಶಬ್ದವೇ ಮುಂತಾದವುಗಳನ್ನು ಗೋಚರೀಕರಿಸುವ ಹೊರಮುಖದ ಬುದ್ಧಿಗಳಿಂದ ಅನಾತ್ಮವನ್ನು (ಕಂಡುಕೊಳ್ಳುವಂತೆ) ಆತ್ಮನನ್ನು ಏತಕ್ಕೆ ಕಂಡುಕೊಳ್ಳಲಾರನು ?

(ಉತ್ತರ) :- ಹೇಳುತ್ತೇವೆ :

೧೨. ಚಕ್ಷುರೇಂದ್ರಿಯವು ಶಬ್ದವನ್ನು ಕಾಣುವದಿಲ್ಲ ; ಏಕೆಂದರೆ ಅದಕ್ಕೆ ಅದು ಆತ್ಮವಲ್ಲ [1]. ಇದು ಹೇಗೋ ಹಾಗೆ ಭೌತಿಕದೃಷ್ಟಿಯು ಆತ್ಮನನ್ನು ಕಾಣಲಾರದು [2].

(ಮೂಲ)

ಪ್ರತ್ಯಕ್ಷಾದಿಪ್ರಮಾಣಸ್ವಾಭಾವ್ಯಾನುರೋಧೇನ ತಾವತ್ ತದದರ್ಶನ ಕಾರಣಮ್ ಉಕ್ತಮ್ । ಅಥ ಪ್ರಮೇಯಸ್ವಾಭಾವ್ಯಾನುರೋಧೇನ ಪ್ರತಿಷೇಧ ಉಚ್ಯತೇ–

**ಧೀವಿಕ್ರಿಯಾಸಹಸ್ರಾಣಾಂ ಹಾನೋಪಾದಾನಧರ್ಮಿಣಾಮ್ ।**
**ಸದಾ ಸಾಕ್ಷಿಣಮಾತ್ಮಾನಂ ಪ್ರತ್ಯಕ್ತ್ವಾನ್ನಾಹಮೀಕ್ಷತೇ ॥೧೩॥**

(ಅರ್ಥ)

ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳ ಸ್ವಭಾವವನ್ನು ಅನುಸರಿಸಿ (ನೋಡಿ) ಮೊದಲನೆಯದಾಗಿ ಆ (ಆತ್ಮನನ್ನು ಅವು) ಕಾಣದೆ ಇರುವದಕ್ಕೆ ಕಾರಣವನ್ನು ಹೇಳಿದ್ದಾಯಿತು. ಇನ್ನು ಪ್ರಮೇಯ(ನಾದ ಆತ್ಮನ) [3] ಸ್ವಭಾವವನ್ನನುಸರಿಸಿ (ನೋಡಿದರೂ) ಆಗುವದಿಲ್ಲವೆಂದು ಹೇಳಲಾಗುತ್ತದೆ :

1. ಚಕ್ಷುರಿಂದ್ರಿಯವು ಶಬ್ದದಿಂದಾಗಿರುವದಿಲ್ಲ ; ಅದು ರೂಪಾತ್ಮಕವಾಗಿರುವದರಿಂದ ರೂಪವನ್ನು ಮಾತ್ರ ಕಾಣಬಲ್ಲದು.

2. ಭೌತಿಕದೃಷ್ಟಿಯು ಭೂತಗಳಿಂದಾದದ್ದು ; ಆದ್ದರಿಂದ ಅವನ್ನು ಮಾತ್ರ ಅರಿಯಬಲ್ಲದು.

3. ಆತ್ಮನು ನಿಜವಾಗಿ ಪ್ರಮೇಯನಲ್ಲ ; ಪ್ರತ್ಯಕ್ಷಾದಿಗಳಿಂದ ನೋಡಬೇಕೆಂದು ಬಯಸುವ ಆತ್ಮನ ಸ್ವಭಾವವನ್ನು ನೋಡಿದರೂ ಅವುಗಳಿಂದ ಅವನನ್ನು ನೋಡುವದಾಗುವದಿಲ್ಲವೆಂಬುದನ್ನು ಈಗ ಹೇಳುತ್ತಾರೆ ಎಂದೇ ಅರ್ಥ.

೧೩. ಹಾನೋಪಾದಾನಧರ್ಮವುಳ್ಳ ಸಾವಿರಾರು ಬುದ್ಧಿ ವಿಕ್ರಿಯೆಗಳನ್ನು ಯಾವಾಗಲೂ (ನೋಡುತ್ತಿರುವ) ಸಾಕ್ಷಿಯಾದ ಆತ್ಮನು ಪ್ರತ್ಯಗ್ರೂಪನಾಗಿರುವದರಿಂದ ಅಹಂಕಾರವು[1] (ಅವನನ್ನು) ನೋಡಲಾರದು[2].

(ಮೂಲ)

ಕ್ವ ಪುನರಿಯಂ ವಿವೇಕಬುದ್ಧಿಃ ? ಕಿಮ್ ಆತ್ಮನಿ, ಉತಾನಾತ್ಮನೀತಿ ? ಕಿಂ ಚಾತಃ ? ಯದ್ಯಾತ್ಮನಿ ಕೂಟಸ್ಥತ್ವವ್ಯಾಘಾತಃ । ಅನಾತ್ಮದರ್ಶಿತ್ವಾತ್ । ಅಥ ಅನಾತ್ಮನಿ । ತಸ್ಯಾಪ್ಯಚೈತನ್ಯಾತ್ ನ ವಿವೇಕಸಂಬನ್ಧಃ ಇತಿ । ಉಚ್ಯತೇ । ''ದಾಹ್ಯದಾಹಕತೈಕತ್ರ'' (೩-೫೯) ಇತ್ಯುಕ್ತಪರಿಹಾರಾತ್ –

ಬುದ್ಧಾವೇವ ವಿವೇಕೋಽಯಂ ಯದನಾತ್ಮತಯಾ ಭಿದಾ ।
ಬುದ್ಧಿಮೇವೋಪಮೃದ್ನಾತಿ ಕದಲೀಂ ತತ್ಫಲಂ ಯಥಾ ॥೧೪॥

(ಅರ್ಥ)

(ಆಕ್ಷೇಪ) :- ಈ ವಿವೇಕಬುದ್ಧಿಯು ಏತರಲ್ಲಿ ಆಗುವದು ? ಆತ್ಮನಲ್ಲಿಯೊ, ಅನಾತ್ಮನಲ್ಲಿಯೊ ?

(ಪ್ರಶ್ನೆ) :- ಈ (ವಿಚಾರ)ದಿಂದೇನು (ಫಲ) ?

(ಆಕ್ಷೇಪ) :- ಆತ್ಮನಲ್ಲಿ ಎಂದರೆ (ಅವನು) ಕೂಟಸ್ಥನೆಂಬುದು ಹೋಗಿಬಿಡುತ್ತದೆ. ಏಕೆಂದರೆ (ಆತ್ಮನು) ಅನಾತ್ಮವನ್ನು ಕಾಣುತ್ತಿದಾನೆಂದಾಗುವದು[3]. ಹಾಗಿಲ್ಲದೆ ಅನಾತ್ಮದಲ್ಲಿಯೇ (ವಿವೇಕ), ಎಂದರೆ ಅದೂ ಅಚೇತನವಾಗಿರುವದರಿಂದ ವಿವೇಕದ ಸಂಬಂಧವಾಗುವಂತ್ತಿಲ್ಲವಲ್ಲ !

(ಪರಿಹಾರ) :- ಹೇಳುತ್ತೇವೆ. ದಾಹ್ಯದಾಹಕತೈಕತ್ರ (ಒಂದೇ ಕಡೆಯಲ್ಲಿ ದಾಹ್ಯತ್ವವೂ ದಾಹಕತ್ವವೂ.... ೩-೫೯) ಎಂಬ (ಶ್ಲೋಕದಲ್ಲಿ ಇದಕ್ಕೆ) ಪರಿಹಾರವನ್ನು ಹೇಳಿರುವದರಿಂದ[4]:

1. ಅಂತಃಕರಣವು ಎಂದರ್ಥ.

2. ಏಕೆಂದರೆ ಅದು ಸಾಕ್ಷ್ಯವಾಗಿದೆ ; ಆದ್ದರಿಂದಲೇ ಯಾವ ಲೌಕಿಕ ಪ್ರಮಾಣಕ್ಕೂ ಆತ್ಮನು ವಿಷಯನಲ್ಲ.

3. ಆಗ ಆತ್ಮನ ಅದ್ವಿತೀಯತ್ವಕ್ಕೆ ಹಾನಿಯಾಗುವದು.

4. 'ದ್ರಾಹ್ಯದ್ರಾಹಕತೈಕತ್ರ' ಎಂಬಲ್ಲಿ ಬೆಂಕಿಕಟ್ಟಿಗೆಗಳಂತೆ ಸುಡುವದೂ ಸುಡಲ್ಪಡುವದೂ ಒಂದೇ ಕಡೆಯಲ್ಲಿರುವಂತೆ - ಅಹಂಕಾರವೂ ಜ್ಞಾತೃವೂ ಒಂದೇ ಅಂತಕರಣದಲ್ಲಿ ಇರಬಹುದೆಂದು ಹೇಳಿರುವದರಿಂದ.

೧೪. ಯಾವದರಿಂದ ಅನಾತ್ಮವೆಂಬ ವಿವೇಕವಾಗುವದೋ (ಆ) ಈ ವಿವೇಕವು ಬುದ್ಧಿಯಲ್ಲಿಯೇ (ಆಗುತ್ತದೆ)[1]. (ಇದು) ಬಾಳೆಯ ಗಿಡವನ್ನು ಅದರ ಹಣ್ಣು (ನಾಶಗೊಳಿಸುವಂತೆ) ಬುದ್ಧಿಯನ್ನೇ ನಾಶಗೊಳಿಸಿಬಿಡುತ್ತದೆ[2].

(ಮೂಲ)

**ಸೋಽಯಮತತ್ತ್ವೇ ತತ್ತ್ವದೃಕ್–**

**ಅನುಮಾನಪ್ರದೀಪೇನ ಹಿತ್ವಾ ಸರ್ವಾನನಾತ್ಮನಃ ।**
**ಸಂಸಾರ್ಯೈಕಾವಲಂಬಿನ್ಯಾ ತದಭಾವಂ ಧಿಯೇಪ್ಸತಿ ॥೧೫॥**

(ಅರ್ಥ)

ಅತತ್ತ್ವವನ್ನೇ ತತ್ತ್ವವೆಂದು ತಿಳಿಯುವ ಆ ಈತನು :

೧೫. ಅನುಮಾನವೆಂಬ ದೀಪದಿಂದ ಅನಾತ್ಮಗಳೆಲ್ಲವನ್ನೂ ಬಿಟ್ಟು ಸಂಸಾರವೆಂಬುದೇ ವಿಷಯವುಳ್ಳ (ಆ) ಬುದ್ಧಿಯಿಂದ ಅದರ ಅಭಾವವನ್ನು ಪಡೆಯುವದಕ್ಕೆ ಇಚ್ಛಿಸುತ್ತಾನೆ[3].

---

1. ಹಾಗಾದರೆ ಅಚೇತನವಾದ ಬುದ್ಧಿಗೇ ಜ್ಞಾತೃತ್ವವೆಂಬ ದೋಷವು ಬರುವದೆಂದು ಶಂಕಿಸಬಾರದು. ಏಕೆಂದರೆ ವೃತ್ತಿಯುಮಾತ್ರ 'ಬುದ್ಧಿಗೆ ಸೇರಿದ್ದು ; ಆ ವೃತ್ತಿಯಲ್ಲಿ ಪ್ರತಿಫಲಿತವಾಗಿರುವ ಅರಿವು ಆತ್ಮನಿಗೇ ಸೇರಿದ್ದಾಗಿದೆ. ಉ. ಸಾ. ೧೬-೬೯.

2. ಬುದ್ಧಿಯಲ್ಲಿ ಇದೆಲ್ಲವೂ ಅನಾತ್ಮವು ; ಇದನ್ನು ನೋಡುವವನೇ ಆತ್ಮನು - ಎಂಬ ವಿವೇಕರೂಪವಾದ ಪ್ರತ್ಯಯವು ಹುಟ್ಟುತ್ತಲೂ ಬುದ್ಧಿಯೂ ಅನಾತ್ಮವೇ ಎಂಬ ಅರಿವು ಹೊಳೆಯುತ್ತದೆ. ಬಾಳೆಯ ಗೊನೆಯು ಹುಟ್ಟುತ್ತಲೂ ಬಾಳೆಗಿಡವು ನಾಶವಾಗುವಂತೆ ವಿವೇಕವು ಹುಟ್ಟುತ್ತಲೂ ಬುದ್ಧಿಯೂ ಅಸತ್ಯವಾದ ಅನಾತ್ಮವಾಗಿ ಬಿಡುತ್ತದೆ - ಎಂದರ್ಥ.

3. ದ್ವೈತವನ್ನಾಶ್ರಯಿಸಿರುವ ಬುದ್ಧಿಯಿಂದ ದ್ವೈತಾಭಾವವನ್ನು ಅರಿಯಲು ಯತ್ನಿಸುತ್ತಾನೆ. ಭಾವದಿಂದ ಅಭಾವವನ್ನು ಯಾವ ಅನುಮಾನದಿಂದ ಪಡೆದನೋ ಆ ಅಭಾವದಿಂದ ಬಿಡುಗಡೆಯನ್ನು ಅನುಮಾನದಿಂದಲೇ ಪಡೆಯಲಿಚ್ಛಿಸುತ್ತಾನೆ. ಆದರೆ ಅದು ವಾಕ್ಯವಿಲ್ಲದೆ ಸಿಕ್ಕಲಾರದು.

(ಮೂಲ)

**ಯೋಽಯಮನ್ವಯವ್ಯತಿರೇಕಜೋ ವಿವೇಕಃ ಆತ್ಮಾನಾತ್ಮವಿಭಾಗ ಲಕ್ಷಣಃ ಅನಾತ್ಮಸ್ಥಃ ಸ್ಥಾಣೌ ಸಂಶಯಾವಬೋಧವತ್ ಪ್ರತಿಪತ್ತವ್ಯಃ ಅಯಥಾವಸ್ತುಸ್ವಾಭಾವ್ಯಾತ್ ಮೃಗತೃಷ್ಣಿಕೋದಕಪ್ರಬೋಧವತ್ ಇತಿ । ಅತ ಆಹ –**

**ಸಂಸಾರಬೀಜಸಂಸ್ಥೋಽಯಂ ತದ್ಧಿಯಾ ಮುಕ್ತಿಮಿಚ್ಛತಿ ।**
**ಶಶೋ ನಿಮೀಲನೇನೇವ ಮೃತ್ಯುಂ ಪರಿಜಿಹೀರ್ಷತಿ ॥೧೬॥**

(ಅರ್ಥ)

ಅನಾತ್ಮದಲ್ಲಿಯೇ ನಿಂತಿರುವ [1] ಈ ಅನ್ವಯವ್ಯತಿರೇಕದಿಂದಾಗುವ ಆತ್ಮಾನಾತ್ಮವಿಭಾಗರೂಪವಾದ ವಿವೇಕವಿದೆಯಲ್ಲ, (ಇದು) ಮೋಟುಮರದಲ್ಲಾಗುವ ಸಂಶಯದಂತೆಯೂ [2] ವಸ್ತುವಿರುವ ಸ್ಥಿತಿಗೆ ವಿಪರೀತವಾದ ಸ್ವಭಾವದ್ದಾದ್ದರಿಂದ [3] ಬಿಸಿಲುಕುದುರೆಯ ನೀರಿನ ಅರಿವಿನಂತೆಯೂ (ಇರುತ್ತದೆ) ಎಂದು ತಿಳಿಯಬೇಕು. [4] ಆದ್ದರಿಂದ (ಹೀಗೆಂದು) ಹೇಳುತ್ತಾರೆ :

೧೬. ಸಂಸಾರಬೀಜದಲ್ಲಿದ್ದುಕೊಂಡಿರುವ [5] ಈತನು ಆ (ಸಂಸಾರ) ಬುದ್ಧಿಯಿಂದಲೇ ಮುಕ್ತಿಯನ್ನು (ಪಡೆಯಲು) ಇಚ್ಛಿಸುತ್ತಾನೆ. ಮೊಲವು

---

1. ಅನಾತ್ಮಧರ್ಮವಾದ.

2. ಇದು ಮೋಟುಮರವೊ ಮನುಷ್ಯನೊ- ಎಂಬ ಸಂಶಯದಂತೆ ಅನಿಶ್ಚಿತ ರೂಪವಾಗಿರುವದರಿಂದ ಆತ್ಮಾನಾತ್ಮ - ಎರಡನ್ನೂ ಕಾಣುವದರಿಂದ ಇದನ್ನು ಸಂಶಯಕ್ಕೆ ಹೋಲಿಸಿದೆ.

3. ಇರುವ ಒಬ್ಬ ಆತ್ಮನನ್ನೇ ಆತ್ಮಾನಾತ್ಮರೂಪವಾಗಿ ಕಾಣುವದರಿಂದ ಇದನ್ನು ವಿಪರೀತಜ್ಞಾನಕ್ಕೆ ಹೋಲಿಸಿದೆ.

4. ಅಜ್ಞಾನದಿಂದಾದ ಸಂಶಯವಿಪರೀತಜ್ಞಾನಗಳಂತೆ ಎಂದು ತಿಳಿಯಬೇಕು ; ಇದ್ದದ್ದನ್ನು ಇದ್ದಂತೆ ತಿಳಿಸುವ ಜ್ಞಾನವಿದಲ್ಲ.

5. ಅಜ್ಞಾನದಲ್ಲಿಯೇ ಆತ್ಮಾನಾತ್ಮ ವಿಭಾಗವೂ ತಿಳಿಯಬರುವದು.

ಕಣ್ಣುಮುಚ್ಚಿಕೊಂಡು (ಸಾವನ್ನು ತಪ್ಪಿಸಿಕೊಳ್ಳುವದಕ್ಕೆ ಯತ್ನಿಸುವಂತೆ) ಮೃತ್ಯುವನ್ನು ಪರಿಹರಿಸಿಕೊಳ್ಳುವದಕ್ಕೆ ಬಯಸುತ್ತಾನೆ[1].

(ಮೂಲ)

ಅಸ್ಯಾರ್ಥಸ್ಯ ದ್ರಢಿಮ್ನೇ ಶ್ರುತ್ಯುದಾಹರಣಮ್ –

**ಇಮಮರ್ಥಂ ಪುರಸ್ಕೃತ್ಯ ಶ್ರುತ್ಯಾ ಸಮ್ಯಗುದಾಹೃತಮ್ ।**
**ಯಚ್ಚಕ್ಷುಷೇತಿ ವಿಸ್ರಬ್ಧಂ ನ ದೃಷ್ಟೇರಿತಿ ಚ ಸ್ಫುಟಮ್ ॥೧೭॥**

(ಅರ್ಥ)

ಈ ಅರ್ಥವು ಗಟ್ಟಿಯಾಗುವದಕ್ಕಾಗಿ ಶ್ರುತಿಯನ್ನು ಉದಾಹರಿಸುತ್ತಾರೆ :

೧೭. ಈ ಅರ್ಥವನ್ನು ಮುಂದಿಟ್ಟುಕೊಂಡು[2] ಶ್ರುತಿಯು ''ಯಾವದನ್ನು ಚಕ್ಷುಸ್ಸಿನಿಂದ ಕಾಣಲಾರನೋ'' (ಕೇ. ೧-೭) ಎಂದೂ ''ದೃಷ್ಟಿಯ ದ್ರಷ್ಟೃವನ್ನು ನೋಡಲಾರೆ '' (ಬೃ. ೩-೪-೨) ಎಂದೂ ವಿಶ್ವಾಸಪೂರ್ವಕವಾಗಿ ಸ್ಫುಟವಾಗಿ[3] ಹೇಳಿರುತ್ತದೆ.

(ಮೂಲ)

**ಬುದ್ಧ್ಯಂತಮಪವಿದ್ಧ್ಯೈವಂ ಕೋ ನ್ವಹಂ ಸ್ಯಾಮಿತೀಕ್ಷಿತುಃ ।**
**ಶ್ರುತಿಸ್ತತ್ತ್ವಮಸೀತ್ಯಾಹ ಸರ್ವಮಾನಾತಿಗಾಮಿನೀ ॥೧೮॥**

(ಅರ್ಥ)

೧೮. ಹೀಗೆ (ದೇಹದಿಂದ) ಬುದ್ಧಿಯವರೆಗಿನದೆಲ್ಲವನ್ನೂ ಆಚೆಗೆ ತಳ್ಳಿಹಾಕಿ[4] ''ನಾನು ಯಾರೊ !'' ಎಂದು ಯೋಚಿಸುತ್ತಿರುವ (ಶ್ರೋತೃವಿಗೆ)

---

1. ಸಂಸಾರಮೃತ್ಯುವನ್ನು ತೊಲಗಿಸಲು ಇಚ್ಛಿಸುತ್ತಾನೆ ; ದ್ವೈತವನ್ನು ಕಾಣುವವನು ಮೃತ್ಯುವಿನ ಮೇಲೆ ಮೃತ್ಯುವನ್ನು ಹೊಂದುತ್ತಾನೆ ಎಂಬ ಶ್ರುತಿಯ ಸೂಚನೆ ಇಲ್ಲಿದೆ.

2. ಆತ್ಮನು ಯಾವ ಹೊರಗಿನ ಪ್ರಮಾಣಕ್ಕೂ ವಿಷಯನಲ್ಲವೆಂಬುದನ್ನಿಟ್ಟುಕೊಂಡು.

3. ತನ್ನ ಮಾತು ಅಪ್ರಮಾಣವಾದೀತೆಂಬ ಶಂಕೆಯಿಲ್ಲದೆ ಲೌಕಿಕದೃಷ್ಟಿಯೂ ಆತ್ಮಚೈತನ್ಯದ ಬಲದಿಂದಲೇ ಸಿದ್ಧವಾಗಬೇಕಾಗಿರುವದರಿಂದ ಲೌಕಿಕದೃಷ್ಟಿಗೆ ಅದು ಗೋಚರವಾಗುವ ಸಂಭವವೇ ಇಲ್ಲವೆಂಬ ನಿಶ್ಚಯದಿಂದ - ಎಂದರ್ಥ.

4. ಅನಾತ್ಮವೆಂದು ನಿಶ್ಚಯಿಸಿ ತಿರಸ್ಕರಿಸಿ.

ಸರ್ವಪ್ರಮಾಣಗಳನ್ನೂ ಮೀರಿಹೋಗಬಲ್ಲ [1] ಶ್ರುತಿಯು 'ಅದೇ ನೀನಾಗಿರುವೆ' ಎಂದು ಹೇಳುತ್ತದೆ [2].

## ಆಚಾರ್ಯವಚನಸಂಮತಿ

(ಮೂಲ)

ಏವಂ ಸಂಕ್ಷೇಪತಃ ಪೂರ್ವಾಧ್ಯಾಯತ್ರಯಸ್ಯಾರ್ಥ ಉಕ್ತಃ । ಸೋಽಯಂ ನ್ಯಾಯೋಽಪಿ ವೇದಾನ್ತಾರ್ಥಃ ಶಾಸ್ತ್ರಾಚಾರ್ಯಪ್ರಸಾದಲಭ್ಯೋಽಪ್ಯನಪೇಕ್ಷಿತಶಾಸ್ತ್ರಾಚಾರ್ಯಪ್ರಸಾದಃ ಅನನ್ಯಾಪೇಕ್ಷಸಿದ್ಧಸ್ವಭಾವತ್ವಾತ್, ಕೈಶ್ಚಿತ್ ಶ್ರದ್ಧಧಾನೈರ್ನ ಪ್ರತೀಯತೇ । ತೇಷಾಂ ಸಂಗ್ರಹಾರ್ಥಮ್ ಅಭಿಮತ ಪ್ರಾಮಾಣ್ಯೋದಾಹರಣಮ್ –

ಭಗವತ್ಪೂಜ್ಯಪಾದೈಶ್ಚಾಪ್ಯ [3]ದಾಹಾರ್ಯೇವಮೇವ ತು ।
ಸುವಿಸ್ಪಷ್ಟೋಽಸ್ಮದುಕ್ತೋಽರ್ಥಃ ಸರ್ವಭೂತಹಿತೈಷಿಭಿಃ ॥೧೯॥

(ಅರ್ಥ)

ಹೀಗೆ ಹಿಂದಿನ ಮೂರು ಅಧ್ಯಾಯಗಳ ಅರ್ಥವನ್ನು [4] ಹೇಳಿದ್ದಾಯಿತು. ಆ ಈ ವೇದಾಂತಾರ್ಥವು ಯುಕ್ತಿಯುಕ್ತವಾಗಿದ್ದರೂ [5] ಶಾಸ್ತ್ರ, ಆಚಾರ್ಯ-

---

1. ಸಕಲಪ್ರಮೇಯವಿಲಕ್ಷಣನೂ ಅವಿಷಯನೂ ಆಗಿರುವ ಅದ್ವಿತೀಯಪ್ರತ್ಯಗಾತ್ಮನವರೆಗೂ ಹೋಗುವ ಸ್ವಭಾವವುಳ್ಳದ್ದಾದ್ದರಿಂದ ಮಿಕ್ಕ ಎಲ್ಲಾ ಪ್ರಮಾಣಗಳನ್ನೂ ಮೀರಿಹೋಗಬಲ್ಲದ್ದೆಂದು ಹೇಳಿದೆ.

2. ಭಾವಾಭಾವವಿಲಕ್ಷಣರೂಪವಾದ ಆತ್ಮನ ವಿಶೇಷರೂಪವನ್ನೂ ತಿಳಿಸುತ್ತದೆ.

3. ಈ ಪಾಠದಲ್ಲಿ ವಿಸಂಧಿದೋಷವಿಲ್ಲ.

4. ಜ್ಞಾನಕರ್ಮಸಮುಚ್ಚಯಖಂಡನ, ಆತ್ಮನು ಅಹಂಪ್ರತ್ಯಯವಿಷಯನೆಂಬ ವಾದದ ಖಂಡನ, ಪ್ರಸಂಖ್ಯಾನಖಂಡನ – ಮುಂತಾದವುಗಳನ್ನು ಇಲ್ಲಿ ಸಂಗ್ರಹಿಸಿಲ್ಲವಾದರೂ ಅವು ಅಧ್ಯಾಯತ್ರಯದ ಮುಖ್ಯತಾತ್ಪರ್ಯಕ್ಕೆ ಸೇರಿದವಲ್ಲ; ತತ್ತ್ವಮಸ್ಯಾದಿ ವಾಕ್ಯದಿಂದಲೇ ಸರ್ವಾನರ್ಥಹೇತುವಾಗಿರುವ ಅಜ್ಞಾನದ ನಿವೃತ್ತಿ ಎಂಬುದೊಂದೇ ಪ್ರಕರಣದ ಮುಖ್ಯಾರ್ಥ. ಅದನ್ನು ಇಲ್ಲಿ ಹೇಳಿದೆ.

5. ಯುಕ್ತಿಯುಕ್ತವಾದರೂ ಶ್ರದ್ಧಾಯುಕ್ತರಾದ ಮಂದಪ್ರಜ್ಞರು ಅದರಲ್ಲಿ ವಿಶ್ವಾಸವಿಡುವದಿಲ್ಲ; ಏಕೆಂದರೆ ಇದು ನಮ್ಮ ಸಂಪ್ರದಾಯಕ್ಕೆ ಹೊರಚ್ಚಾಗಿರುವದು - ಎಂದು ಅವರು ಭಾವಿಸುತ್ತಾರೆ.

ಇವರ ಪ್ರಸಾದದಿಂದಲೇ ದೊರಕತಕ್ಕದ್ದಾದರೂ [1] ಮತ್ತೊಂದನ್ನು ಅಪೇಕ್ಷಿಸಿ ಸಿದ್ಧವಾಗತಕ್ಕ ಸ್ವಭಾವವಲ್ಲವಾದ್ದರಿಂದ [2] ಶಾಸ್ತ್ರಾಚಾರ್ಯ ಪ್ರಸಾದವನ್ನು ಬಯಸತಕ್ಕದ್ದಲ್ಲ [3]. (ಹೀಗಿದ್ದರೂ) ಶ್ರದ್ಧೆಯುಳ್ಳ ಕೆಲವರು (ಇದರಲ್ಲಿ ) ವಿಶ್ವಾಸವನ್ನು ಮಾಡುವದಿಲ್ಲ [4]. ಅವರನ್ನು ಸಂಗ್ರಹಿಸುವದಕ್ಕಾಗಿ [5] ಅಭಿಮತಪ್ರಾಮಾಣ್ಯವನ್ನು ಉದಾಹರಿಸುತ್ತಾರೆ :

೧೯. ಸರ್ವಭೂತಗಳಿಗೂ ಹಿತವನ್ನು ಕೋರುವ ಭಗವತ್ಪೂಜ್ಯಪಾದರೂ ನಾವು ಹೇಳಿದ ಅತ್ಯಂತಸ್ಪಷ್ಟವಾದ (ಈ) ಅರ್ಥವನ್ನು ಹೀಗೆಯೇ ಉದಾಹರಿಸಿರುತ್ತಾರೆ.

(ಮೂಲ)

ಕಿಂ ಪರಮಾತ್ಮನ ಉಪದೇಶಃ, ಉತ ಅಪರಮಾತ್ಮನಃ ಇತಿ ? ಕಿಂ ಚಾತಃ ? ಯದಿ ಪರಮಾತ್ಮನಃ ತಸ್ಯೋಪದೇಶಮನ್ತರೇಣೈವ ಮುಕ್ತತ್ವಾತ್ ನಿರರ್ಥಕಃ ಉಪದೇಶಃ । ಅಥ ಅಪರಮಾತ್ಮನಃ ತಸ್ಯಾಪಿ ಸ್ವತ ಏವ ಸಂಸಾರಸ್ವಭಾವತ್ವಾತ್ ನಿಷ್ಫಲ ಉಪದೇಶಃ । ಏವಮ್ ಉಭಯತ್ರಾಪಿ ದೋಷವತ್ತ್ವಾತ್ । ಅತ ಆಹ –

**ಅವಿವಿಚ್ಯೋಭಯಂ ವಕ್ತಿ ಶ್ರುತಿಶ್ಚೇತ್ ಸ್ಯಾದ್ಗ್ರಹಸ್ತಥಾ ।**
**ಇತಿ ಪಕ್ಷಮುಪಾದಾಯ ಪೂರ್ವಪಕ್ಷಂ ನಿಶಾತ್ಯ ಚ ॥೨೦॥**

---

1. ಆಚಾರ್ಯನಿಂದ ಬಂದ ವಿದ್ಯೆಯೇ ಸಾಧುತಮವಾದದ್ದು. ಛಾಂ. ೪-೯-೩, ಉತ್ತಮವಾದ ಆಚಾರ್ಯನಿರುವ ಪುರುಷನೇ ಅರಿತುಕೊಳ್ಳುವನು. ಛಾಂ. ೬-೧೪-೨ ; ಸಾಮಾನ್ಯ ಮನುಷ್ಯರು ಹೇಳಿಕೊಟ್ಟರೆ ಸರಿಯಾಗಿ ತಿಳಿಯದು. ಕ. ೧-೨-೮ ; ಔಪನಿಷದ ಪುರುಷನನ್ನು ಕೇಳುತ್ತೇನೆ ; ಬೃ. ೩-೯-೨೬ - ಈ ಶ್ರುತಿಗಳ ಅಭಿಪ್ರಾಯವಿದು.

2. ಸ್ವತಃಸಿದ್ಧವಾಗಿರುವದರಿಂದ ; ೧-೪ನ್ನು ನೋಡಿ.

3. ಶಾಸ್ತ್ರಾಚಾರ್ಯರು ಇದನ್ನು ಹೊಸದಾಗಿ ಉಂಟುಮಾಡಿಕೊಡತಕ್ಕದ್ದಲ್ಲ.

4. ನಾವು ಸಂಪ್ರದಾಯಸ್ಥರಾದ ಗುರುಗಳಿಂದಲೇ ಈ ವಿದ್ಯೆಯನ್ನು ಅರಿತುಕೊಂಡಿರುತ್ತೇವಾದರೂ ಪ್ರಸಂಖ್ಯಾನವಾದಿಗಳ ಮತವೇ ಮುಂತಾದ ಪ್ರಸ್ಥಾನಗಳಿಂದ ಬುದ್ಧಿಯು ವಿಚಲಿತವಾಗಿರುವದರಿಂದ 'ಬರಿಯ ವಾಕ್ಯದಿಂದ ಜ್ಞಾನವಾದೀತೆ ?' ಎಂದು ನಮ್ಮ ಪ್ರಕರಣದಲ್ಲಿ ಅವಿಶ್ವಾಸವನ್ನು ಮಾಡುವರು- ಎಂದರ್ಥ.

5. ಅವರನ್ನು ಈ ಸರಿಯಾದ ಹಾದಿಗೆ ಕರೆತರುವದಕ್ಕಾಗಿ ಎಂದರ್ಥ.

(ಅರ್ಥ)

(ಆಕ್ಷೇಪ) :- ಪರಮಾತ್ಮನಿಗೆ ಉಪದೇಶವೊ, ಅಥವಾ ಪರಮಾತ್ಮನಲ್ಲದವನಿಗೊ ?

(ಪ್ರಶ್ನೆ ) :- ಈ (ವಿಚಾರ)ದಿಂದೇನು (ಫಲ) ?

(ಆಕ್ಷೇಪ) :- ಪರಮಾತ್ಮನಿಗೆಂದರೆ ಅವನು ಉಪೇದಶವಿಲ್ಲದೆಯೇ ಮುಕ್ತನಾಗಿರುವದರಿಂದ (ಅವನಿಗೆ) ಉಪದೇಶವು ವ್ಯರ್ಥವು. ಇನ್ನು ಪರಮಾತ್ಮನಲ್ಲದವನಿಗೆ ಎಂದರೆ ಅವನು ತಾನೇ ಸಂಸಾರಸ್ವಭಾವದವನಾಗಿರುವದರಿಂದ ಉಪದೇಶವು ನಿಷ್ಫಲವು[1]. ಹೀಗೆ ಎರಡು ಪಕ್ಷದಲ್ಲೂ ದೋಷವಿದೆಯಾದ್ದರಿಂದ (ಸಂಶಯವೂ).

(ಪರಿಹಾರ) :- ಇದಕ್ಕೆ ಹೇಳುತ್ತಾರೆ[2] :

೨೦. ''ಎರಡನ್ನೂ ವಿವೇಕಮಾಡಿಕೊಳ್ಳದೆ ಶ್ರುತಿಯು ಹೇಳುತ್ತದೆ ಎಂದರೆ (ವಾಕ್ಯೋಪದೇಶ) ಗ್ರಹಣವು ಆಗಬಹುದು''[3] ಎಂಬೀ ಪಕ್ಷವನ್ನು ಸ್ವೀಕರಿಸಿ ಪೂರ್ವಪಕ್ಷವನ್ನು ಕೊಚ್ಚಿಹಾಕಿ[4] (ಹೀಗೆಯೇ ಹೇಳಿರುತ್ತಾರೆ).

---

1. ಉಪ. ೧೮-೭೪, ೭೫ ಈ ಶ್ಲೋಕಗಳಲ್ಲಿ ಈ ಆಕ್ಷೇಪವನ್ನು ತೆಗೆದಿದೆ.

2. ಸಿದ್ಧಾಂತಿಯ ಉತ್ತರವನ್ನು ಭಗವತ್ಪಾದಾಚಾರ್ಯರು ಹೀಗೆಂದು ಹೇಳಿದಾರೆ ಎಂದರ್ಥ.

3. ಪರಮಾತ್ಮ, ಅಪರಮಾತ್ಮ- ಎಂಬಿದನ್ನು ವಿಂಗಡಿಸಿಕೊಳ್ಳದೆ ವಿವೇಕವಿಲ್ಲದವನಿಗೇ ಈ ವಾಕ್ಯವನ್ನುಪದೇಶಮಾಡಿದೆ ಎಂದರ್ಥ.

4. ಇಲ್ಲಿ ಹೇಳಿರುವ ಪೂರ್ವಪಕ್ಷವು ಯಾವದು ?- ಎಂಬುದನ್ನು ತಿಳಿದುಕೊಳ್ಳುವದಕ್ಕೆ ಮೂಲಗ್ರಂಥದ ಸಂದರ್ಭವನ್ನು ತಿಳಿದುಕೊಳ್ಳಬೇಕು. ಪ್ರತ್ಯಯಗಳು ಗ್ರಾಹಕಾಭಾಸವಾಗಿರುತ್ತವೆ ಎಂದು ಉಪ.ಸಾ.ಪ. ೧೮-೬೯ರಲ್ಲಿ ಹೇಳಿದಮೇಲೆ ಪೂರ್ವಪಕ್ಷಿಯು ಪ್ರತ್ಯಯಗಳಲ್ಲಿ ಅನ್ವಯಿಯಾಗಿರುವ ಅಹಂಕಾರವೇ ಗ್ರಾಹಕನೆಂದಾಗಲಿ ಎಂದದ್ದಕ್ಕೆ ಅದೂ ಅಚೇತನವೇ (ಉಪ.ಸಾ.ಪ. ೧೮-೭೨) ಎಂದು ದೋಷವನ್ನು ಹೇಳಿ ಈ ಪಕ್ಷದಲ್ಲಿ ವಾಕ್ಯಶ್ರೋತೃವೇ ಸಿದ್ಧನಾಗಿರುವದಿಲ್ಲ ಎಂಬ ಈ ಆಕ್ಷೇಪವನ್ನು ಎತ್ತಿದಾರೆ. ಆದ್ದರಿಂದ ಆಭಾಸವನ್ನೊಪ್ಪದವನೇ ಇಲ್ಲಿ ಪೂರ್ವಪಕ್ಷಿ. ಆದ್ದರಿಂದಲೇ ಮುಂದೆಯೂ ಅಹಂಕಾರ ವಿವೇಕವುಳ್ಳವನಿಗೆ ಉಪದೇಶವಾದರೆ ದೋಷವು ಬರುತ್ತದೆ ಎಂದು (ಉಪ.ಸಾ.ಪ. ೧೮-೭೬ರಲ್ಲಿ) ಹೇಳಿದೆ. ಆದ್ದರಿಂದ ಕೇವಲ ಪರಮಾತ್ಮನಿಗೆ ಅಥವಾ ಕೇವಲ ಅಪರಮಾತ್ಮನಿಗೆ ಉಪದೇಶ- ಎಂಬೀ ಪಕ್ಷಗಳೇ ಪೂರ್ವಪಕ್ಷ ಎಂಬ ವ್ಯಾಖ್ಯಾನವು ಸರಿಯಲ್ಲ.

(ಮೂಲ)

**ತಚ್ಚೇದಮವಿವೇಕಾತ್ ಸ್ವತೋ ವಿವಿಕ್ತಾತ್ಮನೇ ತತ್ತ್ವಮಸೀತ್ಯುಪದಿಷ್ಟಮ್ –**

**ಯುಷ್ಮದಸ್ಮದ್ವಿಭಾಗಜ್ಞೇ ಸ್ಯಾದರ್ಥವದಿದಂ ವಚಃ ।**
**ಯತೋಽನಭಿಜ್ಞೇ ವಾಕ್ಯಂ ಸ್ಯಾದ್ಬಧಿರೇಷ್ವಿವ ಗಾಯನಮ್ ॥೨೧॥**

(ಅರ್ಥ)

ಆ ಈ 'ತತ್ತ್ವಮಸಿ' ಎಂಬ ವಾಕ್ಯವು ಇದಮವಿವೇಕವುಳ್ಳ ಆತ್ಮನಿಂದ[1] ಆತ್ಮನನ್ನು ವಿಂಗಡಿಸಿಕೊಂಡಿರುವವನಿಗೆ[2] ಉಪದಿಷ್ಟವಾಗಿರುತ್ತದೆ :

೨೧. ''ಯುಷ್ಮದಂಶ, ಅಸ್ಮದಂಶ- ಇವೆರಡರ ವಿಂಗಡವನ್ನರಿತವನಲ್ಲಿ ಈ ವಚನವು ಅರ್ಥವತ್ತಾಗುವದು.''[3] (ಉಪ. ೧೮-೮೭) ಏಕೆಂದರೆ (ಇದನ್ನು ) ಅರಿಯದವನಲ್ಲಿ ವಾಕ್ಯವು ಕಿವುಡರಲ್ಲಿ (ಹಾಡಿದ) ಗಾನದಂತಾಗುವದು[4].

(ಮೂಲ)

**ತಸ್ಯ ಚ ಯುಷ್ಮದಸ್ಮದ್ವಿಭಾಗವಿಜ್ಞಾನಸ್ಯ ಕಾ ಯುಕ್ತಿರುಪಾಯಭಾವಂ ಪ್ರತಿಪದ್ಯತೇ ? ಶೃಣು –**

---

1. 'ಅಹಂ' (ನಾನು) ಎಂಬುದು ಇದಮವಿವೇಕವುಳ್ಳ, ಅನಾತ್ಮದೊಡನೆ ಬೆರಕೆಯಾಗಿರುವ ಆತ್ಮನು ; ಅಹಂಕಾರದಲ್ಲಿ ಚಿದಾಭಾಸವಿರುವದರಿಂದ ಅದೂ ಆತ್ಮನಂತೆ ಕಾಣುತ್ತಿರುತ್ತದೆ.

2. ಸಾಕ್ಷ್ಯನ್ವಯ ಸಾಕ್ಷ್ಯವ್ಯತಿರೇಕಗಳಿಂದ ಆತ್ಮನನ್ನು ವಿಂಗಡಿಸಿ ಅರಿತುಕೊಂಡಿರುವ ಅಧಿಕಾರಿಗೆ ಎಂದರ್ಥ.

3. ಉಪ. ಸಾ. ೧೮-೮೮ರಲ್ಲಿ 'ನಾನು' ಎಂಬುದು ಅಸ್ಮದರ್ಥಕ್ಕೆ ಮಾತ್ರವೂ ಇದು, ನನ್ನದು - ಎಂಬುದು ಯುಷ್ಮದರ್ಥಕ್ಕೆ ಮಾತ್ರವೂ 'ನಾನು ಇಂಥವನಾಗಿದೇನೆ' ಎಂಬುದು ಎರಡಕ್ಕೂ ಅನ್ವಯಿಸುತ್ತದೆ ಎಂದಿದೆ. ಇದನ್ನು ೪-೬ರಲ್ಲಿ ಈ ಪ್ರಕರಣದಲ್ಲಿ ಹೇಳಿದೆ. ನಾನು ಎಂಬುದರಲ್ಲಿರುವ ಈ ಎರಡಂಶವನ್ನು ವಿಂಗಡಿಸಿಕೊಂಡವನೇ ವಾಕ್ಯಾರ್ಥಜ್ಞಾನಕ್ಕೆ ಅಧಿಕಾರಿ ಎಂದು ಉಪ. ಸಾ.ಯ ಈ ಶ್ಲೋಕದಲ್ಲಿ ಹೇಳಿರುವಂತೆ ಪ್ರಕರಣದ ೨-೧, ೨-೧೮, ೩-೭ – ಮುಂತಾದ ಕಡೆಯಲ್ಲಿಯೂ ಹೇಳಿದೆ.

4. ಗಾನವು ಕಿವುಡರಲ್ಲಿ ವ್ಯರ್ಥ, ಆತ್ಮಾನಾತ್ಮವಿವೇಕವಿಲ್ಲದಿರುವವರಲ್ಲಿ ವಾಕ್ಯವು ವ್ಯರ್ಥ.

**ಅನ್ವಯವ್ಯತಿರೇಕೌ ಹಿ ಪದಾರ್ಥಸ್ಯ ಪದಸ್ಯ ಚ ।**
**ಸ್ಯಾದೇತದಹಮಿತ್ಯತ್ರ ಯುಕ್ತಿರೇವಾವಧಾರಣೇ ॥೨೨॥**

(ಅರ್ಥ)

(ಪ್ರಶ್ನೆ) :- ಆ (ಶ್ರೋತೃವಿಗೆ) ಯುಷ್ಮದರ್ಥ, ಅಸ್ಮದರ್ಥ - ಇವುಗಳ ವಿಂಗಡದ ಜ್ಞಾನಕ್ಕೆ ಯಾವ ಯುಕ್ತಿಯು ಉಪಾಯತ್ವವನ್ನು ಹೊಂದುತ್ತದೆ ?

(ಉತ್ತರ) :- ಕೇಳು :

೨೨. 'ಪದಾರ್ಥದ ಮತ್ತು ಪದದ ಅನ್ವಯವ್ಯತಿರೇಕಗಳೂ 'ಇದು ನಾನು' ಎಂಬಲ್ಲಿ (ತತ್ತ್ವಮರ್ಥಗಳ) ನಿರ್ಧಾರಣೆಗೆ ಯುಕ್ತಿಯೇ ಆಗಿರುವವು[1]'.

(ಮೂಲ)

**ಕಥಂ ತೌ ಯುಕ್ತಿಃ । ಇತ್ಯತ್ರಾಹ –**

**ನಾದ್ರಾಕ್ಷಮಹಮಿತ್ಯಸ್ಮಿನ್ ಸುಷುಪ್ತೇಽನ್ಯನ್ಮನಾಗಪಿ ।**
**ನ ವಾರಯತಿ ದೃಷ್ಟಿಂ ಸ್ವಾಂ ಪ್ರತ್ಯಯಂ ತು ನಿಷೇಧತಿ ॥೨೩॥**

(ಅರ್ಥ)

ಅವು ಯುಕ್ತಿ ಎಂಬುದು ಹೇಗೆ ? ಎಂದರೆ ಅದಕ್ಕೆ ಹೇಳುತ್ತಾರೆ :

---

1. ಉಪ. ಸಾ. ೧೮-೯೩. ನಾನು ಮನುಷ್ಯನು, ನಾನು ಕುರುಡನು, ನಾನು ಇಚ್ಛಿಸುತ್ತೇನೆ- ಮುಂತಾದವುಗಳಲ್ಲಿ ನಾನು ಎಂಬುದರ ಅನ್ವಯವಿದೆ, ದೇಹಾದಿಗಳ ವ್ಯತಿರೇಕವಿದೆ ; ಆದ್ದರಿಂದ ಅಹಂಪದವಾಚ್ಯವಾದದ್ದು ದೇಹಾದಿಗಳಲ್ಲವೆಂದಾಗುತ್ತದೆ. ಮುಂದಿನ ಶ್ಲೋಕದಲ್ಲಿ ಹೇಳಿರುವಂತೆ ನಿದ್ರೆಯಲ್ಲಿ 'ಏನೂ ಅರಿಯಲಿಲ್ಲ' ಎಂಬಲ್ಲಿ ಅಹಂಜ್ಞಾತೃತ್ವಗಳಿಲ್ಲದಿದ್ದರೂ ಅವುಗಳ ಸಾಕ್ಷಿಯನ್ನೇ ನಾನೆಂದು ಕರೆದಿದೆ ಎಂದು ನಿರ್ಣಯವಾಗುತ್ತದೆ. ಹೀಗೆಯೇ ತತ್ಪದಪದಾರ್ಥಗಳ ಅನ್ವಯವ್ಯತಿರೇಕಗಳನ್ನು ಅರಿಯಬೇಕು. ಇದನ್ನು ಈ ಪ್ರಕರಣದ ಎರಡು ಮೂರನೆಯ ಅಧ್ಯಾಯಗಳಲ್ಲಿ ವಿವರಿಸಿದೆ. 'ಯುಕ್ತಿಯೇ' ಎಂದರೆ ಅವಾಕ್ಯಾರ್ಥವನ್ನು ತಿಳಿಸಲಾರವು ಎಂದರ್ಥ.

೨೩. ''ತನಿನಿದ್ರೆಯಲ್ಲಿ ಮತ್ತೊಂದನ್ನು ಒಂದಿಷ್ಟೂ ನಾನು ಕಾಣಲಿಲ್ಲ ಎಂಬಲ್ಲಿ ತನ್ನ ದೃಷ್ಟಿಯನ್ನು ಇಲ್ಲವೆನ್ನುವದಿಲ್ಲ ; ಪ್ರತ್ಯಯವನ್ನು ಮಾತ್ರ ಅಲ್ಲಗಳೆಯುತ್ತದೆ''[1].

(ಮೂಲ)

**ಏವಂ ವಿಜ್ಞಾತವಾಚ್ಯಾರ್ಥೇ ಶ್ರುತಿಲೋಕಪ್ರಸಿದ್ಧಿತಃ ।**
**ಶ್ರುತಿಸ್ತತ್ತ್ವಮಸೀತ್ಯಾಹ ಶ್ರೋತುರ್ಮೋಹಾಪನುತ್ತಯೇ ॥೨೪॥**

(ಅರ್ಥ)

೨೪. ''ಹೀಗೆ ಶ್ರುತಿಲೋಕಪ್ರಸಿದ್ಧಿಗಳಿಂದ ವಾಚ್ಯಾರ್ಥವನ್ನು ತಿಳಿದು ಕೊಂಡಮೇಲೆ ಶ್ರೋತೃವಿನ ಮೋಹವನ್ನು ಕಳೆಯುವದಕ್ಕಾಗಿ ಶ್ರುತಿಯು 'ಅದು ನೀನಾಗಿರುವೆ' ಎನ್ನುತ್ತದೆ''[3].

(ಮೂಲ)

**ತತ್ರ ತ್ವಮಿತಿ ಪದಂ ಯತ್ರ ಲಕ್ಷಣಯಾ ವರ್ತತೇ ಸೋಽರ್ಥ ಉಚ್ಯತೇ–**

---

1. ಉಪ. ಸಾ. ೧೮-೯೪. ಈ ಅನ್ವಯವ್ಯತಿರೇಕದಿಂದ ಅವಿಲುಪ್ತ ದೃಷ್ಟಿಯಾದ ಆತ್ಮನನ್ನು ಅನ್ವಯದಿಂದಲೂ ಲೌಕಿಕಲುಪ್ತದೃಷ್ಟಿಯನ್ನು ವ್ಯತಿರೇಕದಿಂದಲೂ ನಿಶ್ಚಯಿಸಬಹುದು.

2. ಬಿಡಬೇಕಾದ ತತ್ತ್ವಂಪದವಾಚ್ಯಾರ್ಥವನ್ನು ತಿಳಿದುಕೊಂಡಕೂಡಲೆ ಎಂದರ್ಥ. ಅನ್ವಯವ್ಯತಿರೇಕಗಳಿಂದ ತತ್ತ್ವಂಪದಗಳ ಅರ್ಥವನ್ನು ತಿಳಿದುಕೊಂಡ ಮೇಲೆ ಎಂಬುದು ಭಾವ. ಲೋಕಪ್ರಸಿದ್ಧಿಯಿಂದ ಎಂದರೆ ಹಿಂದಿನ ಶ್ಲೋಕದಲ್ಲಿ ಹೇಳಿರುವ ಸುಷುಪ್ತದ ಪರಾಮರ್ಶದಿಂದ ; ಶ್ರುತಿಪ್ರಸಿದ್ಧಿ ಎಂದರೆ ಇಲ್ಲಿ ''ಈ ಪುರುಷನು ಸ್ವಯಂಜ್ಯೋತಿಯು'' (ಬೃ. ೪-೩-೯, ೧೪), ''ದ್ರಷ್ಟೃವಿನ ದೃಷ್ಟಿಗೆ ವಿಪರಿ ಲೋಪವಿಲ್ಲ'' (ಬೃ. ೪-೩-೧೩) ಮುಂತಾದದ್ದು - ಇವುಗಳಿಂದ ತ್ವಂಪದಾರ್ಥವನ್ನು ತಿಳಿದುಕೊಂಡರೆ ಎಂದರ್ಥ. ''ವಿಜ್ಞಾತವಾಕ್ಯಾರ್ಥೇ'' ಎಂಬ ಪಾಠವು ಸರಿಯಲ್ಲ ; ಏಕೆಂದರೆ ಶ್ರುತಿಲೋಕಪ್ರಸಿದ್ಧಿಯಿಂದ ವಾಕ್ಯಾರ್ಥವನ್ನು ತಿಳಿದುಕೊಳ್ಳುತ್ತಾನೆಂದರೆ ಹೊಂದುವದಿಲ್ಲ. ಉಪ. ೧೮-೯೬ನ್ನು ನೋಡಿ.

3. ಅದಕ್ಕೆ ವಾಕ್ಯವೇ ಬೇಕು, ಅನ್ವಯವ್ಯತಿರೇಕವು ಸಾಲದು.

ಅಹಂಶಬ್ದಸ್ಯ ಯಾ ನಿಷ್ಠಾ ಜ್ಯೋತಿಷಿ ಪ್ರತ್ಯಗಾತ್ಮನಿ ।
ಸೈವೋಕ್ತಾ ಸದಸೀತ್ಯೇವಂ ಫಲಂ ತತ್ರ ವಿಮುಕ್ತತಾ ॥೨೫॥

(ಅರ್ಥ)

ಈ (ವಾಕ್ಯ)ದಲ್ಲಿ 'ನೀನು' ಎಂಬ ಪದವು ಲಕ್ಷಣೆಯಿಂದ ಯಾವದರಲ್ಲಿ ವೃತ್ತಿಯುಳ್ಳದ್ದಾಗಿರುವದೋ ಆ ಅರ್ಥವನ್ನು ಹೇಳುತ್ತಾರೆ :

೨೫. 'ನಾನು' ಎಂಬ ಶಬ್ದದ ನಿಷ್ಠೆಯು ಪ್ರತ್ಯಗಾತ್ಮಜ್ಯೋತಿಯಲ್ಲಿ ಆಗುವದಷ್ಟೆ, ಅದನ್ನೇ ಸತ್ತಾಗಿರುವೆ ಎಂದು ಹೇಳಿದೆ. ಅಲ್ಲಿ ವಿಮುಕ್ತತ್ವವೇ ಫಲವು [1].

(ಮೂಲ)

ಅನ್ಯಚ್ಚಾನ್ವಯವ್ಯತಿರೇಕೋದಾಹರಣಮ್ [2] –

ಛಿತ್ತ್ವಾ ತ್ಯಕ್ತೇನ ಹಸ್ತೇನ ಸ್ವಯಂ ನಾತ್ಮಾ ವಿಶೇಷ್ಯತೇ ।
ತಥಾ ಶಿಷ್ಟೇನ ಸರ್ವೇಣ ಯೇನ ಯೇನ ವಿಶೇಷ್ಯತೇ ॥೨೬॥

ವಿಶೇಷಣಮಿದಂ ಸರ್ವಂ ಸಾಧ್ವಲಂಕರಣಂ ಯಥಾ ।
ಅವಿದ್ಯಾಧ್ಯಾಸತಃ ಸರ್ವಂ [3] ಜ್ಞಾತ ಆತ್ಮನ್ಯಸದ್ಭವೇತ್ ॥೨೭॥

ತಸ್ಮಾತ್ ತ್ಯಕ್ತೇನ ಹಸ್ತೇನ ತುಲ್ಯಂ ಸರ್ವಂ ವಿಶೇಷಣಮ್ ।
ಅನಾತ್ಮತ್ವೇನ ತಸ್ಮಾಜ್ಜ್ಞೋ ಮುಕ್ತಃ ಸರ್ವವಿಶೇಷಣೈಃ ॥೨೮॥

ಜ್ಞಾತೈವಾತ್ಮಾ ಸದಾ ಗ್ರಾಹ್ಯೋ ಜ್ಞೇಯಮುತ್ಸೃಜ್ಯ ಕೇವಲಃ ।
ಅಹಮಿತ್ಯಪಿ ಯದ್ಗ್ರಾಹ್ಯಂ ವ್ಯಪೇತಾಙ್ಗಸಮಂ ಹಿ ತತ್ ॥೨೯॥

---

1. ಉಪ. ಸಾ. ೧೮-೯೮. ತ್ವಂಪದದ ಈ ಲಕ್ಷ್ಯಾರ್ಥವನ್ನು ಅರಿಯದ್ದರಿಂದಲೇ ವಾಕ್ಯಾರ್ಥಜ್ಞಾನವಾಗುವದಿಲ್ಲ ಎಂದು ಭಾವ.

2. 'ತಥಾ' ಎಂಬುದು ಹೆಚ್ಚೆಂದುಬಿಟ್ಟಿದೆ. ಈ ಶ್ಲೋಕಗಳು ವಿಶೇಷಾಪೋಹ ಪ್ರಕರಣದಲ್ಲಿವೆ. (ಉಪ. ೧-೪) ಅಲ್ಲಿ ೨ನೆಯ ಶ್ಲೋಕವು ಇಲ್ಲಿ ಮೂರನೆಯದಾಗಿದೆ. ಅರ್ಥಕ್ಕೇನೋ ಈ ಅನುಕ್ರಮವೇ ಹೆಚ್ಚು ಹೊಂದುತ್ತದೆ.

3. ''ಆವಿದ್ಯಾಧ್ಯಸ್ತಮತಃ ಸರ್ವಮ್'' ಎಂಬ ಪಾಠವನ್ನು ಉಪ. ಸಾ. ಪಾಠಕ್ಕನುಗುಣವಾಗಿ ತಿದ್ದಿಕೊಂಡಿದೆ.

(ಅರ್ಥ)

ಅನ್ವಯವ್ಯತಿರೇಕಕ್ಕೆ ಮತ್ತೊಂದು ಉದಾಹರಣೆ :

೨೬-೨೯. 'ಕತ್ತರಿಸ (ಒಗೆದು)ಬಿಟ್ಟ ಕೈಗೆ ಆತ್ಮನಾದ ತಾನೇ ವಿಶೇಷ್ಯನಾಗಿರುವದಿಲ್ಲ. ಇದರಂತೆ ಉಳಿದ ಯಾವಯಾವದರಿಂದ ವಿಶಿಷ್ಟನಾಗಿ (ಕಾಣುವನೋ) ಅದೊಂದಕ್ಕೂ (ವಿಶೇಷ್ಯನಲ್ಲ). ಈ ವಿಶೇಷಣವೆಲ್ಲವೂ ಸಾಧ್ವಲಂಕರಣದಂತೆ[1] ; ಅವಿದ್ಯೆಯ ಅಧ್ಯಾಸದಿಂದ ಎಲ್ಲವೂ (ವಿಶೇಷಣವು), ಆತ್ಮನನ್ನು ಅರಿತುಕೊಂಡರೆ ಅಸತ್ತಾಗುವದು. ಆದ್ದರಿಂದ ವಿಶೇಷಣವೆಲ್ಲವೂ ಅನಾತ್ಮವಾಗಿರುವದರಿಂದ (ಕತ್ತರಿಸಿ)ಬಿಟ್ಟ ಕೈಗೆ ಸಮಾನವಾಗಿರುವದು ; ಆದ್ದರಿಂದ ಆತ್ಮನು ಯಾವ ವಿಶೇಷಣಗಳೂ ಇಲ್ಲದವನು. ಜ್ಞೇಯವನ್ನು ಬಿಟ್ಟು ಬರಿಯ ಜ್ಞಾತೃವನ್ನೇ ಆತ್ಮನೆಂದು ಯಾವಾಗಲೂ ಅರಿತುಕೊಳ್ಳಬೇಕು. ನಾನು ಎಂಬ ಜ್ಞೇಯವಿದೆಯಲ್ಲ ಅದೂ ತೆಗೆದುಹಾಕಿದ ಅವಯವಕ್ಕೆ ಸಮಾನವಾಗಿರುತ್ತದೆಯಷ್ಟೆ[2].

(ಮೂಲ)

**ದೃಶ್ಯತ್ವಾದಹಮಿತ್ಯೇಷ ನಾತ್ಮಧರ್ಮೋ ಘಟಾದಿವತ್ ।**
**ತಥಾನ್ಯೇ ಪ್ರತ್ಯಯಾ ಜ್ಞೇಯಾ ದೋಷಾಶ್ಚಾತ್ಮಾಮಲೋ ಹ್ಯತಃ ॥೩೦॥**

(ಅರ್ಥ)

೩೦. 'ನಾನು ಎಂಬುದು ಘಟಾದಿಗಳಂತೆ ದೃಶ್ಯವಾಗಿರುವದರಿಂದ ಆತ್ಮನ ಧರ್ಮವಲ್ಲ. ಇದರಂತೆ ಮಿಕ್ಕ ಪ್ರತ್ಯಯಗಳನ್ನೂ ದೋಷಗಳನ್ನೂ ತಿಳಿಯಬೇಕು. ಆದ್ದರಿಂದ ಆತ್ಮನು ನಿರ್ಮಲನಾಗಿರುತ್ತಾನೆ'[3].

---

1. ಇಂದ್ರವಿರೋಚನರು ಮಾಡಿಕೊಂಡ ಅಲಂಕಾರದಂತೆ (ಛಾಂ. ೮-೮-೨, ೮-೯-೧ ಇವನ್ನೂ ಭಾಷ್ಯವನ್ನೂ ನೋಡಿ). ಅಲಂಕಾರದಂತೆ ಶರೀರವೂ ಛಾಯಾ ಕಾರವಾಗಿರುವದರಿಂದ ದೃಶ್ಯವೇ, ಅನಾತ್ಮವೇ ಎಂದರ್ಥ.

2. ಯಾವದು ಜ್ಞೇಯವೋ ಅದು ಆತ್ಮನಿಗೆ ಕತ್ತರಿಸಿ ಬಿಸುಟ ಕೈಯಂತೆ ಹೊರಚ್ಚಾಗುವದರಿಂದ ಅನಾತ್ಮವೇ.

3. ಉಪ. ೧೫-೧೬ನೆಯ ಶ್ಲೋಕವಿದು. ಮಿಕ್ಕ ಪ್ರತ್ಯಯಗಳು ಎಂದರೆ ಮಮತ್ವ, ಯತ್ನ, ಇಚ್ಛೆ - ಮುಂತಾದವು. ಯಾವದು ದೃಶ್ಯವೋ ಅದು ಅನಾತ್ಮ ಎಂಬ ನ್ಯಾಯವು ಎಲ್ಲಕ್ಕೂ ಸಮಾನ.

(ಮೂಲ)

ಸರ್ವನ್ಯಾಯೋಪಸಂಗ್ರಹಃ –

**ನಿತ್ಯಮುಕ್ತ ತ್ವ ವಿಜ್ಞಾನಂ ವಾಕ್ಯಾದ್ಭವತಿ ನಾನ್ಯತಃ ।**
**ವಾಕ್ಯಾರ್ಥಸ್ಯಾಪಿ ವಿಜ್ಞಾನಂ ಪದಾರ್ಥಸ್ಮೃತಿಪೂರ್ವಕಮ್ ॥೩೧॥**

**ಅನ್ವಯವ್ಯತಿರೇಕಾಭ್ಯಾಂ ಪದಾರ್ಥಃ ಸ್ಮರ್ಯತೇ ಧ್ರುವಮ್ ।**
**ಏವಂ ನಿರ್ದುಃಖಮಾತ್ಮಾನಮಕ್ರಿಯಂ ಪ್ರತಿಪದ್ಯತೇ ॥೩೨॥**

**ಸದೇವೇತ್ಯಾದಿವಾಕ್ಯೇಭ್ಯಃ ಪ್ರಮಾ ಸ್ಫುಟತರಾ ಭವೇತ್ ।**
**ದಶಮಸ್ತ್ವಮಸೀತ್ಯಸ್ಮಾದ್ಯಥೈವಂ ಪ್ರತ್ಯಗಾತ್ಮನಿ ॥೩೩॥**

(ಅರ್ಥ)

ಎಲ್ಲಾ ನ್ಯಾಯಗಳನ್ನೂ (ಇಲ್ಲಿ) ಕೂಡಿಸಿಟ್ಟಿದೆ [1] :

೩೧-೩೩. '(ನಾನು) ನಿತ್ಯಮುಕ್ತನೆಂಬ ಅರಿವು ವಾಕ್ಯದಿಂದಲೇ ಆಗುವದೇ ಹೊರತು ಮತ್ತೊಂದರಿಂದ [2] (ಆಗುವ)ಹಾಗಿಲ್ಲ. ವಾಕ್ಯಾರ್ಥದ ಅರಿವು ಕೂಡ ಪದಾರ್ಥಗಳ ಸ್ಮೃತಿಯು ಮೊದಲಾದರೇ (ಆಗುತ್ತದೆ). ಅನ್ವಯವ್ಯತಿರೇಕಗಳಿಂದ ಪದಾರ್ಥವು ಅವಶ್ಯವಾಗಿ ನೆನಪಿಗೆ ಬರುತ್ತದೆ. ಈ ರೀತಿಯಲ್ಲಿ ತಾನು ನಿರ್ದುಃಖನೆಂದೂ ಕ್ರಿಯಾರಹಿತನೆಂದೂ ಅರಿತುಕೊಳ್ಳುತ್ತಾನೆ [3]. 'ಸತ್ತೆ (ನೀನು)' (ಛಾಂ. ೬-೮-೭) [4] ಮುಂತಾದ

---

1. ಇದಿಷ್ಟೇ ಈ ಪ್ರಕರಣದಲ್ಲಿ ವಿವರಿಸಿರುವ ವಿಷಯವು. ಈ ಶ್ಲೋಕಗಳು ಉಪ. ಸಾ. ೧೮-೧೮೨ರಿಂದ ೧೮೪ರ ವರೆಗಿನವು.

2. ಪ್ರಸಂಖ್ಯಾನಾದಿಗಳಿಂದ.

3. ಆಮೇಲೆ ಈ ಯಥಾರ್ಥಜ್ಞಾನವು ಬಾಧಿತವಾಗದು.

3. ಛಾಂದೋಗ್ಯದ ೬-೮-೧ರಲ್ಲಿ 'ಸದೇವ ಸೋಮ್ಯೇದಮಗ್ರ ಆಸೀತ್' ಎಂದಿದೆ. ಆ ವಾಕ್ಯವೇ ಇದು ಎಂದು ಭಾವಿಸಿದರೆ ಸತ್ತೇ (ಮೊದಲಿತ್ತು) ಎಂದು ಮುಂತಾಗಿರುವ ವಾಕ್ಯಗಳಿಂದ- ಎಂದು ಕನ್ನಡಿಸಬೇಕಾಗುವದು. ದಶಮವಾಕ್ಯಕ್ಕೆ ತತ್ತ್ವಮಸಿ ವಾಕ್ಯವೇ ಬೇಕಾದ್ದರಿಂದ ಸತ್ತೇ ನೀನಾಗಿರುವೆ ಎಂದು ಅರ್ಥಮಾಡಿಕೊಳ್ಳುವದು ಹೆಚ್ಚು ಹೊಂದುತ್ತದೆ. ಮೊದಲನೆಯ ವ್ಯಾಖ್ಯಾನದಲ್ಲಿ ''ಮುಂತಾದ'' ಎಂಬ ಮಾತಿನಿಂದ ಅದು ದೊರೆಯಬೇಕು.

ವಾಕ್ಯಗಳಿಂದ, ಹತ್ತನೆಯವನು ನೀನಾಗಿರುವೆ ಎಂಬೀ (ವಾಕ್ಯ)ದಿಂದ ಹೇಗೋ ಹಾಗೆ, ಪ್ರತ್ಯಗಾತ್ಮನಲ್ಲಿ ಸ್ಫುಟತರವಾದ ಪ್ರಮೆಯುಂಟಾಗುವದು.'

(ಮೂಲ)

ವೀಕ್ಷಾಪನ್ನಸ್ಯೋದಾಹರಣಮ್ –

**ನವಬುದ್ಧ್ಯಪಹಾರಾದ್ಧಿ ಸ್ವಾತ್ಮಾನಂ ದಶಪೂರಣಮ್ ।**
**ಅಪಶ್ಯನ್ ಜ್ಞಾತುಮೇವೇಚ್ಛೇತ್ ಸ್ವಮಾತ್ಮಾನಂ ಜನಸ್ತಥಾ ॥೩೪॥**
**ಅವಿದ್ಯಾಬದ್ಧಚಕ್ಷುಷ್ಟ್ವಾತ್ ಕಾಮಾಪಹೃತಧೀಃ ಸದಾ ।**
**ವಿವಿಕ್ತಂ ದೃಶಿಮಾತ್ಮಾನಂ ನೇಕ್ಷತೇ ದಶಮಂ ಯಥಾ ॥೩೫॥**

(ಅರ್ಥ)

ಆಲೋಚನಾಪರನಾಗಿರುವವನಿಗೆ [1] (ಇದು) ಉದಾಹರಣೆ :

೩೪-೩೫. ಒಂಬತ್ತು (ಜನರ) ಬುದ್ಧಿಯಿಂದ ಅಪಹೃತವಾಗಿರುವದರಿಂದ [2] ಹತ್ತನೆಯವನಾದ ತನ್ನನ್ನು ಕಾಣದೆ ತನ್ನನ್ನು ಕಾಣಬೇಕೆಂದೇ ಮನುಷ್ಯನು ಬಯಸುತ್ತಾನೆ [3]. ಹಾಗೆಯೇ ಅವಿದ್ಯೆಯು ಕಣ್ಣಿಗೆ ಬಿಗಿದಿರುವದರಿಂದ ಕಾಮದಿಂದ ಬುದ್ಧಿಯು ಅಪಹೃತವಾಗಿ [4] ಯಾವಾಗಲೂ ವಿವಿಕ್ತನಾಗಿಯೇ ಇರುವ ದೃಕ್ಸ್ವರೂಪನಾದ ಆತ್ಮನನ್ನು ಹತ್ತನೆಯವನನ್ನು (ಕಾಣದಿರು)ವಂತೆ ಕಾಣದೆ ಇರುತ್ತಾನೆ [5].

---

1. ಅನ್ವಯವ್ಯತಿರೇಕಗಳಿಂದ ಆತ್ಮನನ್ನು ಬೇರ್ಪಡಿಸಿಕೊಂಡಮೇಲೂ ನಾನು ಯಾರೆಂಬ ಆಲೋಚನೆಯುಳ್ಳವನಿಗೆ ಎಂದರ್ಥ.

2. ಅವರನ್ನು ಎಣಿಸುವದರಿಂದ ತನ್ನಕಡೆಗೆ ಬುದ್ಧಿಯು ತಿರುಗದೆ ಇದ್ದದ್ದರಿಂದ.

3. ನಿತ್ಯಸಿದ್ಧನಾಗಿದ್ದರೂ ಆತ್ಮನನ್ನು ಅರಿಯಬೇಕೆಂಬ ಇಚ್ಛೆ ಹೇಗೆ ಉಂಟಾಗುತ್ತದೆ ?- ಎಂಬ ಆಕ್ಷೇಪಕ್ಕೆ ಸಮಾಧಾನವಿದು.

4. ಅವಿದ್ಯೆಯು ಜ್ಞಾನದೃಷ್ಟಿಗೆ ಪ್ರತಿಬಂಧಕವಾಗಿರುವದರಿಂದ ಹೊರಗೆ ಕಾಮಗಳಿರುವಂತೆ ಕಂಡು ಅವುಗಳ ಬುದ್ಧಿಯಿಂದ ಇವನ ಆತ್ಮಬುದ್ಧಿಯು ಅಪಹೃತವಾಗಿರುತ್ತದೆ ; ಕಾಮದಿಂದಲೇ ಇವನು ಪ್ರತ್ಯಗಾತ್ಮನನ್ನು ಕಾಣದೆ ಇರುತ್ತಾನೆ.

5. ಆತ್ಮನೇನೋ ದಶಮನಂತೆ ಆಗಲೂ ಅನಾತ್ಮವೆಲ್ಲಕ್ಕಿಂತ ವಿಲಕ್ಷಣನಾಗಿ ಬೇರೆಯಾಗಿ ಇದ್ದೇ ಇರುತ್ತಾನೆ ಎಂದರ್ಥ.

(ಮೂಲ)

ಸೋಽಯಮೇವಮ್ ಅವಿದ್ಯಾಪಟಲಾವಗುಣ್ಠಿತದೃಷ್ಟಿಃ ಸನ್ ಕಥ ಮುತ್ಥಾಪ್ಯತ ಇತ್ಯಾಹ–

ಯಥಾ ಸ್ವಾಪನಿಮಿತ್ತೇನ ಸ್ವಪ್ನದೃಕ್ತ್ರಿಬೋಧಿತಃ ।
ಕರಣಂ ಕರ್ಮ ಕರ್ತಾರಂ ಸ್ವಾಪ್ನಂ ನೈವೇಕ್ಷತೇ ಸ್ವತಃ ॥೩೬॥
ಅನಾತ್ಮಜ್ಞಸ್ತಥೈವಾಯಂ ಸಮ್ಯಕ್ ಶ್ರುತ್ಯಾವಬೋಧಿತಃ ।
ಗುರುಂ ಶಾಸ್ತ್ರಂ ತಥಾ ಮೂಢಂ ಸ್ವಾತ್ಮನೋಽನ್ಯಂ ನ ಪಶ್ಯತಿ ॥೩೭॥

(ಅರ್ಥ)

ಆ ಇವನಿಗೆ ಹೀಗೆ ಅವಿದ್ಯೆಯೆಂಬ ಕಣ್ಣುಪರೆಯು ದೃಷ್ಟಿಗೆ ಮರೆಯಾಗಿ ರುವವದಷ್ಟೆ, (ಇವನು ಅವಿದ್ಯಾನಿದ್ರೆಯಿಂದ) ಎಚ್ಚರುವದು[1] ಹೇಗೆ ? – ಎಂದರೆ ಹೇಳುತ್ತಾರೆ :

೩೬-೩೭. ಹೇಗೆ ಸ್ವಪ್ನದಲ್ಲಿರುವ ನಿಮಿತ್ತದಿಂದ[2] ಸ್ವಪ್ನದರ್ಶಿಯು ಎಚ್ಚತ್ತರೆ ಸ್ವಪ್ನದ ಕರಣ, ಕರ್ಮ, ಕರ್ತೃ- ಇವನ್ನು ತನಗಿಂತ (ಬೇರೆಯಾಗಿ) ಕಾಣುವದೇ ಇಲ್ಲವೋ[3] ಆತ್ಮನನ್ನರಿಯದಿರುವ ಇವನೂ ಶ್ರುತಿಯಿಂದ ಸರಿಯಾಗಿ ಬೋಧೆಯನ್ನು ಪಡೆದವನಾದ ಬಳಿಕ ಗುರುವನ್ನೂ ಶಾಸ್ತ್ರವನ್ನೂ ಮೂಢನಾದ (ಶಿಷ್ಯನನ್ನೂ) ತನ್ನ ಆತ್ಮನಿಗಿಂತ ಬೇರೆಯಾಗಿ ಕಾಣುವದೇ ಇಲ್ಲ[4].

---

1. ಸಮ್ಯಗ್ಜ್ಞಾನವುಂಟಾದಾಗ ಅನಾತ್ಮವು ಬೇರೆಯಿರುವದೆ ?- ಎಂಬ ಪ್ರಶ್ನೆಗೆ ಅನಾತ್ಮವು ಹುಸಿತೋರಿಕೆ ಎಂದು ತಿಳಿಸುವದಕ್ಕಾಗಿ ಈ ಶಬ್ದವನ್ನುಪಯೋಗಿಸಿದೆ.

2. ಬೃ. ೪-೩-೨೦ರಲ್ಲಿ ಹೇಳಿರುವ ಕಳ್ಳರು, ಆನೆಗಳು- ಮುಂತಾದ ನಿಮಿತ್ತದಿಂದ.

3. ನಾನೊಬ್ಬನೇ ಇದ್ದೆನು, ನನಗಿಂತ ಬೇರೆಯಾಗಿ ಈ ನಿಮಿತ್ತಗಳಿದ್ದಂತೆಯೂ ಅವುಗಳಿಂದ ನನಗೆ ಅಂಜಿಕೆಯಾದಂತೆಯೂ ಭ್ರಾಂತಿಯಾಯಿತು ಎಂದು ಹೇಗೆ ನಿಶ್ಚಯವಾಗುವದೋ ಎಂದರ್ಥ.

4. ಶ್ರುತಿ ಅಥವಾ ಶಾಸ್ತ್ರ, ಗುರು, ಶಿಷ್ಯ- ಎಂಬ ಭೇದವು ಅಜ್ಞಾನಸ್ವಪ್ನದಲ್ಲಿ ಕಾಣತಕ್ಕದ್ದು ; ಅದು ಜ್ಞಾನವಾದ ಮೇಲೆ ಆತ್ಮನೇ ಆಗಿರುತ್ತದೆ. ಮಾಂ.ಕಾ.ಭಾ. ೧-೧೮, ಬೃ.ಭಾ. ೨-೧-೧ 'ತಸ್ಯೋಪನಿಷತ್' ಎಂಬ ವಿಚಾರದ ಭಾಷ್ಯವನ್ನು ನೋಡಿರಿ. ಸ್ವಪ್ನದೃಷ್ಟಾಂತಕ್ಕೆ ಬೃ. ವಾ. ೧-೨-೧೩೩ ನೋಡಿ.

(ಮೂಲ)

ಸ ಕಿಂ ಸಕಲಸಂಸಾರಪ್ರವಿವಿಕ್ತಮಾತ್ಮಾನಂ ವಾಕ್ಯಾತ್ ಪ್ರಪದ್ಯತ ಉತ ನೇತಿ ?[1] ಅತ್ರ ಬ್ರೂಮಃ । ಕೂಟಸ್ಥಾವಗತಿಶೇಷಮಾತ್ರತ್ವಂ[2] ಪ್ರತಿಪತ್ತೇಃ । ಅತ ಆಹ –

**ದಣ್ಡಾವಸಾನನಿಷ್ಠಃ ಸ್ಯಾದ್ದಣ್ಡಸರ್ಪೋ ಯಥಾ ತಥಾ ।**
**ನಿತ್ಯಾವಗತಿನಿಷ್ಠಂ ಸ್ಯಾದ್ ವಾಕ್ಯಾಜ್ಜಗದಸಂಶಯಮ್ ॥೩೮॥**

(ಅರ್ಥ)

(ಪ್ರಶ್ನೆ) :- ಅವನೇನು ಸಕಲಸಂಸಾರಕ್ಕಿಂತಲೂ ಬೇರೆಯಾಗಿರುವ ಆತ್ಮನನ್ನು ವಾಕ್ಯದಿಂದ ತಿಳಿದುಕೊಳ್ಳುತ್ತಾನೊ, ಅಥವಾ ಇಲ್ಲವೊ ?[3]

(ಉತ್ತರ) :- ಇದಕ್ಕೆ ಹೇಳುತ್ತೇವೆ. ಜ್ಞಾನವೆಂಬುದು ಕೂಟಸ್ಥವಾದ ಅವಗತಿಯ ರೂಪದಲ್ಲಿ ಉಳಿಯುವದು ಮಾತ್ರವಾಗಿದೆ[4]. ಆದ್ದರಿಂದ (ಹೀಗೆಂದು ಶ್ಲೋಕವು) ಹೇಳುತ್ತದೆ :

೩೮. ಕೋಲಿನ(ಲ್ಲಿ ಕಲ್ಪಿತವಾದ) ಹಾವು ಹೇಗೆ ಕೋಲಿನಲ್ಲಿ ಕಡೆಗೆ ಕೊನೆಗಾಣುವದಾಗುವದೋ ಹಾಗೆ ವಾಕ್ಯದಿಂದ ಜಗತ್ತು ನಿಸ್ಸಂಶಯವಾಗಿ ನಿತ್ಯಾವಗತಿಯಲ್ಲಿ ಕೊನೆಗಾಣುವದು[5].

---

1. ಇಲ್ಲಿ ಒಂದು ಇತಿ ಹೆಚ್ಚೆಂದು ಬಿಟ್ಟಿದೆ.

2. 'ಶೇಷಮಾತ್ರತ್ವಾತ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

3. ಅರಿತರೆ ಸಂಸಾರವೂ ಇರುತ್ತದೆಯಾದ್ದರಿಂದ ಅದ್ವೈತಹಾನಿ ; ಅರಿತುಕೊಳ್ಳುವದಿಲ್ಲವೆಂದರೆ ಶ್ರುತಿಪ್ರಾಮಾಣ್ಯಹಾನಿ ಎಂಬ ಭಾವ.

4. ಗುರ್ವಾದಿವಿಕಲ್ಪವು ಮಾತ್ರವಲ್ಲ, ಎಲ್ಲಾ ಪ್ರಪಂಚವೂ ಜ್ಞಾನದಶೆಯಲ್ಲಿ ಆತ್ಮನೇ ಆಗಿರುತ್ತದೆ ಎಂಬುದನ್ನು ತಿಳಿಸುವದಕ್ಕೆ ಈ ಶ್ಲೋಕವು ಬಂದಿದೆ ಎಂದು ಭಾವ. ಜಗತ್ತಿನ ವಿಷಯದಲ್ಲಾದ ವಾಕ್ಯಜ್ಞಾನವೂ ಚಿನ್ಮಾತ್ರವಾದ ಆತ್ಮಸ್ವರೂಪವೂ ಬೇರೆಯಾಗಿರುವದಿಲ್ಲ. 'ಜಗತ್ತು ಆತ್ಮನೇ' ಎಂದೇ ಜ್ಞಾನವಾಗುವದು ಎಂದು ಭಾವ.

5. ಜಗತ್ತೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿರುವದರಿಂದ ಜ್ಞಾನದಿಂದ ಆತ್ಮಮಾತ್ರವಾಗುವದು ಎಂದರ್ಥ. ಮಾಂ. ಕಾ. ಭಾ. ೧-೧೭ ನೋಡಿ.

(ಮೂಲ)

**ಕುತ ಏತತ್ ? ಯಸ್ಮಾತ್ –**

**ಪಶ್ಯನ್ನಿತಿ ಯದಾಹೋಚ್ಚೈಃ ಪ್ರತ್ಯಕ್ತ್ವಮಜಮದ್ವಯಮ್[1] ।**
**ಅಪೂರ್ವಾನಪರಾನನ್ತಂ ತ್ವಮಾ ತದುಪಲಕ್ಷ್ಯತೇ ॥೩೯॥**

(ಅರ್ಥ)

(ಪ್ರಶ್ನೆ) :- ಇದು ಏಕೆ[2] ? ಏಕೆಂದರೆ :

೩೯. ''ಪಶ್ಯನ್'' ('ನೋಡುತ್ತಿರುವನಾಗಿಯೇ' ಅಲ್ಲಿ ನೋಡುವದಿಲ್ಲ ; ದ್ರಷ್ಟೃವಿನ ದೃಷ್ಟಿಗೆ ವಿಪರೀಲೋಪವಿಲ್ಲ , ಏಕೆಂದರೆ ಅವಿನಾಶಿಯಾಗಿರುತ್ತದೆ. ಆದರೆ ಅಲ್ಲಿ ಅವನಿಗಿಂತ ಬೇರೆಯಾದದ್ದು ವಿಂಗಡವಾಗಿ ಇರುವದಿಲ್ಲ ; ಹಾಗಿದ್ದರಲ್ಲವೆ, ಅದನ್ನು ಕಂಡಾನು ? (ಬೃ. ೪-೩-೨೩) ಎಂದು ಪ್ರತ್ಯಕ್ಸ್ವಭಾವವುಳ್ಳ[3] ಅಜವೂ[4] ಅದ್ವಯವೂ[5] ಅಪೂರ್ವವೂ[6] ಅನಪರವೂ[7] ಅನಂತರವೂ[8] ಆದ ಯಾವ ತತ್ತ್ವವನ್ನು ಶ್ರುತಿಯು) ಗಟ್ಟಿಯಾಗಿ (ಕೂಗಿ) ಹೇಳುತ್ತದೆಯೋ ಅದೇ ತ್ವಂಪದದಿಂದ ಉಪಲಕ್ಷಿತವಾಗಿರುತ್ತದೆ[9].

(ಮೂಲ)

**ತತ್ತ್ವಮಸ್ಯಾದಿವಾಕ್ಯೋತ್ಥವಿಜ್ಞಾನೇನೈವ ಬಾಧ್ಯತೇ । ಯಸ್ಮಾತ್ –**

**ಅಸ್ಮಾದ್ಯದಪರಂ ರೂಪಂ ನಾಸ್ತೀತ್ಯೇವ ನಿರೂಪ್ಯತೇ ।**
**ಅನ್ಯಥಾಗ್ರಹಣಾಭಾವಾದ್ ಬೀಜಂ ತತ್ ಸ್ವಪ್ನಬೋಧಯೋಃ ॥**

---

1. 'ಅವ್ಯಯಮ್' ಎಂಬುದಕ್ಕಿಂತ ಈ ಪಾಠವು ಮೇಲು.
2. ಜಗತ್ತೆಲ್ಲವೂ ವಾಕ್ಯಜ್ಞಾನದಿಂದ ನಿತ್ಯಾವಗತಿಮಾತ್ರವಾಗಿ ಉಳಿದುಕೊಳ್ಳುವದು ಎಂಬುದಕ್ಕೆ ಕಾರಣವೇನು ?
3. ಸರ್ವಾಂತರವಾದ.
4. ಯಾವ ವಿಕಾರವೂ ಇಲ್ಲದ್ದು ಎಂದರ್ಥ. ಜನ್ಮವಿದ್ದರೆ ಮಿಕ್ಕ ವಿಕಾರಗಳು.
5. ತನಗಿಂತ ವಿಂಗಡವಾದ ದ್ವೈತವಿಲ್ಲದ.
6. ಕಾರಣವಿಲ್ಲದ.
7. ಕಾರ್ಯವಿಲ್ಲದ.
8. ದೇಶಕಾಲಾದಿಪರಿಚ್ಛೇದವಿಲ್ಲದ.
9. ಅದೇ ತತ್ತ್ವಮಸಿವಾಕ್ಯದಲ್ಲಿ ತ್ವಂಪದಕ್ಕೆ ಲಕ್ಷ್ಯಾರ್ಥ. ಆದ್ದರಿಂದ ವಾಕ್ಯದಿಂದ ಇಂಥ ಅದ್ವಿತೀಯಾಸಂಸಾರಿಯಾದ ತತ್ತ್ವವೇ ಅಪರೋಕ್ಷವಾಗಿ ತಿಳಿಯಬರುವದರಿಂದ ಈ ಜ್ಞಾನವಾದ ಮೇಲೆ ಮತ್ತೆ ಯಾವ ಜಗತ್ತೂ ಬೇರೆಯಾಗಿ ಉಳಿದುಕೊಳ್ಳುವದಕ್ಕೆ ಅವಕಾಶವಿರುವದಿಲ್ಲ. ಆದ್ದರಿಂದ ಅದು ಅವಗತಿಮಾತ್ರನಿಷ್ಠವಾಗಿರುತ್ತದೆ ಎಂದು ಹೇಳಿದ್ದು ಸರಿ ಎಂದು ಅಭಿಪ್ರಾಯ.

(ಅರ್ಥ)

ತತ್ತ್ವಮಸ್ಯಾದಿವಾಕ್ಯಗಳಿಂದುಂಟಾದ ವಿಜ್ಞಾನದಿಂದಲೇ (ಜಗತ್ತು) ಬಾಧಿತವಾಗುತ್ತದೆ[1]. ಏಕೆಂದರೆ :

೪೦. ಅನ್ಯಥಾಗ್ರಹಣವಿಲ್ಲದ್ದರಿಂದ ಇದಕ್ಕಿಂತ ಬೇರೆಯಾದ ರೂಪವು ಇಲ್ಲವೆಂದಿಷ್ಟೇ (ಆ ಶ್ರುತಿಯಿಂದ) ಗೊತ್ತಾಗುತ್ತದೆ[2]. ಅದು ಸ್ವಪ್ನಜಾಗ್ರತ್ತುಗಳಿಗೆ ಬೀಜವಾಗಿರುತ್ತದೆ[3].

(ಮೂಲ)

ಅಸ್ಯಾರ್ಥಸ್ಯ ದ್ರಢಿಮ್ನ ಉದಾಹರಣಮ್ –

ಕಾರ್ಯಕಾರಣಬದ್ಧೌ ತಾವಿಷ್ಯೇತೇ ವಿಶ್ವತೈಜಸೌ ।
ಪ್ರಾಜ್ಞಃ ಕಾರಣಬದ್ಧಸ್ತು ದ್ವೌ ತೌ ತುರ್ಯೇ ನ ಸಿಧ್ಯತಃ ॥೪೧॥

ಅನ್ಯಥಾಗೃಹ್ಣತಃ ಸ್ವಪ್ನೋ ನಿದ್ರಾ ತತ್ತ್ವಮಜಾನತಃ ।
ವಿಪರ್ಯಾಸೇ ತಯೋಃ ಕ್ಷೀಣೇ ತುರೀಯಂ ಪದಮಶ್ನುತೇ ॥೪೨॥

(ಅರ್ಥ)

ಈ ಅರ್ಥವು ಗಟ್ಟಿಯಾಗಲೆಂದು (ಈ) ಉದಾಹರಣೆಯ(ನ್ನು ಕೊಟ್ಟಿದೆ) :

೪೧-೪೨. 'ಆ ವಿಶ್ವತೈಜಸರಿಬ್ಬರೂ ಕಾರ್ಯಕಾರಣಗಳಿಂದ ಬದ್ಧರೆಂದು ಒಪ್ಪಿರುತ್ತೇವೆ. ಆದರೆ ಪ್ರಾಜ್ಞನು ಕಾರಣಬದ್ಧನು. ತುರ್ಯನಲ್ಲಿ

1. ಬರಿಯ ಸುಷುಪ್ತಿ ಶ್ರುತಿಜ್ಞಾನದಿಂದ ತೊಲಗುವದಿಲ್ಲ.

2. 'ಅಲ್ಲಿ ಎರಡನೆಯದಿರುವದಿಲ್ಲ' ಎಂಬ ಶ್ರುತಿಯಿಂದ ಆತ್ಮನಿಗೆ ಸಪ್ರಪಂಚತ್ವವು ಸುಷುಪ್ತಿಯಲ್ಲಿರುವದಿಲ್ಲ ಎಂದಿಷ್ಟೇ ತಿಳಿದುಬರುತ್ತದೆ.

3. ಆ ಶ್ರುತಿಯು ಸ್ವಪ್ನದಲ್ಲಿಯೂ ಎಚ್ಚರದಲ್ಲಿಯೂ ಸಪ್ರಪಂಚರೂಪವು ಇಲ್ಲವೆಂದೇನೂ ಹೇಳುವದಿಲ್ಲ. ಸುಷುಪ್ತಿಯಲ್ಲಿ ಜಗತ್ತಿನ ಜ್ಞಾನವಿಲ್ಲವಷ್ಟೇ ಹೊರತು ಜಗತ್ತಿಲ್ಲವೆಂಬ ನಿಶ್ಚಯವಿರುವದಿಲ್ಲ; ಆ ಅಜ್ಞಾನವೇ ಅನ್ಯಥಾಗ್ರಹಣಕ್ಕೆ ಕಾರಣ.

ಅವೆರಡೂ ಇಲ್ಲ.[1] ಬೇರೆಯಾಗಿ ಗ್ರಹಿಸುವವನಿಗೆ ಸ್ವಪ್ನವು, ತತ್ತ್ವವನ್ನು ಅರಿಯದವನಿಗೆ ನಿದ್ರೆಯು ; ಆ ಎರಡರ ವಿಪರ್ಯಾಸವು[2] ಕ್ಷಯವಾದರೆ ತುರೀಯಸ್ಥಾನವನ್ನು ಹೊಂದುತ್ತಾನೆ[3].

(ಮೂಲ)

ತಥಾ ಭಗವತ್ಪಾದೀಯಮ್ ಉದಾಹರಣಮ್ –

**ಸುಷುಪ್ತಾಖ್ಯಂ ತಮೋಽಜ್ಞಾನಂ ಬೀಜಂ ಸ್ವಪ್ನಪ್ರಬೋಧಯೋಃ ।**
**ಆತ್ಮಬೋಧಪ್ರದಗ್ಧಂ ಸ್ಯಾದ್ ಬೀಜಂ ದಗ್ಧಂ ಯಥಾಭವಮ್॥೪೩॥**

(ಅರ್ಥ)

ಇದರಂತೆ (ಇದಕ್ಕೆ) ಭಗವತ್ಪಾದರ (ವಚನದ) ಉದಾಹರಣೆ :

೪೩. ''ಸುಷುಪ್ತವೆಂಬ ತಮಸ್ಸು, ಅಜ್ಞಾನವು, ಸ್ವಪ್ನಜಾಗರಿತಗಳಿಗೆ ಬೀಜವು ; (ಅದು) ಆತ್ಮಜ್ಞಾನದಿಂದ ಸುಟ್ಟುಹೋದರೆ ಸುಟ್ಟ ಬೀಜವು ಹೇಗೆ (ಮತ್ತೆ ) ಹುಟ್ಟಿಲ್ಲದ್ದಾಗುವದೋ ಹಾಗೆ ಆಗುವದು[4].''

---

1. ಅಗ್ರಹಣಾನ್ಯಥಾಗ್ರಹಣಗಳೆರಡೂ ಸ್ವಪ್ನಜಾಗರಿತಗಳಲ್ಲಿ ಆತ್ಮನಲ್ಲಿರುತ್ತವೆ ; ಅಗ್ರಹಣವೊಂದೇ ಸುಷುಪ್ತಾತ್ಮನಲ್ಲಿರುತ್ತದೆ. ನಿಜವಾದ ಆತ್ಮನಲ್ಲಿ ಅಗ್ರಹಣವಾಗಲಿ ಅನ್ಯಥಾಗ್ರಹಣವಾಗಲಿ ಇರುವದೇ ಇಲ್ಲ. ಮಾಂ. ಕಾ. ಭಾ. ೧-೧೧ನ್ನು ನೋಡಿ.

2. ಮಾಂ. ಕಾ. ಭಾ. ೧-೧೫ನ್ನು ನೋಡಿ. ಇಲ್ಲಿ ಅಗ್ರಹಣ, ಅನ್ಯಥಾಗ್ರಹಣಗಳು ವಿಪರ್ಯಾಸವೆಂದದ್ದರಿಂದ ಪರಮಾರ್ಥವಲ್ಲವೆಂದಂತೆ ಆಯಿತು. ಅಗ್ರಹಣವೆಂಬ ನಿದ್ರೆಯು ಮೂರವಸ್ಥೆಗೂ ಸಮಾನವು ; ಅನ್ಯಥಾಗ್ರಹಣವೆಂಬ ಸ್ವಪ್ನವು ಸ್ವಪ್ನಜಾಗರಿತಗಳಲ್ಲಿ ಮಾತ್ರ ಕಾಣುತ್ತದೆ.

3. ಪರಮಾರ್ಥತತ್ತ್ವವಾದ ಆತ್ಮನನ್ನು ಕಂಡುಕೊಂಡರೆ ಅಗ್ರಹಣವೂ ಅನ್ಯಥಾಗ್ರಹಣವೂ ಇಲ್ಲವೆಂಬುದು ನಿಶ್ಚಯವಾಗುತ್ತದೆ ಎಂದರ್ಥ. ವಾಕ್ಯಾರ್ಥಜ್ಞಾನದಿಂದ ಅಜ್ಞಾನವು ತೊಲಗುವದೆಂಬ ಪ್ರಕರಣಾರ್ಥಕ್ಕೆ ಇದು ಸಮ್ಮತಿಯು.

4. ಈ ಶ್ಲೋಕವು ಉಪ. ಸಾ. ೧೭-೨೬. ಇದರ ಹಿಂದಿನ ಶ್ಲೋಕದಲ್ಲಿ ಜಾಗರಿತವು ದೃಷ್ಟವು, ಸ್ವಪ್ನವು ಸ್ಮೃತವು, ಸುಷುಪ್ತವೆಂದರೆ ಅವೆರಡೂ ಇಲ್ಲದ್ದು ಎಂದಿದೆ. ಈ ಸುಷುಪ್ತವೇ ಜಾಗ್ರತ್ಸ್ವಪ್ನಗಳಿಗೆ ಬೀಜವು ; ಆತ್ಮಜ್ಞಾನದಿಂದ ಇದು ನಾಶವಾಗುವದೆಂದು ಹೇಳಿದ್ದು ಪ್ರಕರಣಾರ್ಥಕ್ಕೆ ಹೊಂದಿಕೆಯಾಗಿದೆ.

(ಮೂಲ)

**ಏವಂ ಗೌಡೈರ್ದ್ರಾವಿಡೈರ್ನಃ ಪೂಜ್ಯೈರರ್ಥಃ ಪ್ರಭಾಷಿತಃ ।**
**ಅಜ್ಞಾನಮಾತ್ರೋಪಾಧಿಃ ಸನ್ನಹಮಾದಿದೃಗೀಶ್ವರಃ ॥೪೪॥**

(ಅರ್ಥ)

೪೪. ಹೀಗೆ ನಮಗೆ ಪೂಜ್ಯರಾಗಿರುವ ಗೌಡರೂ ದ್ರಾವಿಡರೂ [1] ಅಜ್ಞಾನಮಾತ್ರ(ರೂಪವಾಗಿರುವ) ಉಪಾಧಿಯಿಂದ ಈಶ್ವರನು ಅಹಂಕಾರವೇ ಮುಂತಾದವನ್ನು ನೋಡುತ್ತಿದ್ದಾನೆ- ಎಂಬೀ ಅರ್ಥವನ್ನು ಹೇಳಿರುತ್ತಾರೆ [2].

## ಅಜ್ಞಾನವು ಅನಾತ್ಮಧರ್ಮವೇ

(ಮೂಲ)

ತತ್ರ ಅನ್ಯಥಾಗ್ರಹಣವತ್ ಅನ್ಯಥಾಗ್ರಹಣಬೀಜಮ್ ಅಗ್ರಹಣಮ್ [3] ಅನಾತ್ಮಧರ್ಮ ಏವೇತ್ಯಾಹ–

**ಇದಂ ಜ್ಞಾನಮಹಂ ಜ್ಞಾತಾ ಜ್ಞೇಯಮೇತದಿತಿ ತ್ರಯಮ್ ।**
**ಯೋಽವಿಕಾರೋ ವಿಜಾನಾತಿ ಪರಾಗೇವಾಸ್ಯ ತತ್ತಮಃ ॥೪೫॥**

(ಅರ್ಥ)

ಇಲ್ಲಿ ಅನ್ಯಥಾಗ್ರಹಣದಂತೆ ಅನ್ಯಥಾಗ್ರಹಣಕ್ಕೆ ಬೀಜವಾಗಿರುವ ಅಗ್ರಹಣವೂ ಅನಾತ್ಮದ ಧರ್ಮವೇ [4] ಎಂದು ಹೇಳುತ್ತಾರೆ :

---

1. ಆಚಾರ್ಯರು ಕೇರಳಪ್ರಾಂತದವರಾದರೂ ದಕ್ಷಿಣದೇಶದಲ್ಲಿ, ಎಂದರೆ ವಿಂಧ್ಯಕ್ಕೆ ದಕ್ಷಿಣದಲ್ಲಿ, ಪಂಚದ್ರಾವಿಡರಿರುವದರಿಂದ ಅವರನ್ನೂ ದ್ರಾವಿಡರೆಂದು ಕರೆದಿದೆ - ಎಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಗೌಡರೂ ದ್ರಾವಿಡರೂ- ಎಂಬ ಮಾತಿನಲ್ಲಿ ಇಡಿಯ ಭರತಖಂಡದಲ್ಲಿರುವ ಅಭಿಯುಕ್ತ ವೇದಾಂತಿಗಳು ನಮ್ಮ ಮತವನ್ನು ಒಪ್ಪಿರುತ್ತಾರೆ ಎಂಬ ಧ್ವನಿಯಿದೆ.

2. ಸಾಕ್ಷಿಗೆ ಪ್ರಮಾತ್ರಾದಿಗಳು ಕಾಣುವದಕ್ಕೆ ಅಜ್ಞಾನವೊಂದೇ ಕಾರಣ ; ಸಾಕ್ಷಿತ್ವದಲ್ಲಿ ಕಲ್ಪಿತವಾಗಿರುವ ಅಜ್ಞಾನವು ಹೋದರೆ ಬ್ರಹ್ಮಕ್ಕೂ ಆತ್ಮನಿಗೂ ಯಾವ ಭೇದವೂ ಇರುವದಿಲ್ಲ ಎಂದು ಹೇಳಿರುತ್ತಾರೆ ಎಂದರ್ಥ.

3. 'ಅಗ್ರಹಣಮಪಿ' ಎಂದಿದ್ದರೆ ಅಭಿಪ್ರಾಯವು ಸ್ಫುಟವಾಗಿರುವದು.

4. ಅಂತಃಕರಣಧರ್ಮವೇ.

೪೫. ಇದು ಜ್ಞಾನವು, ನಾನು ಜ್ಞಾತೃ, ಇದು ಜ್ಞೇಯವು- ಎಂಬ ಮೂರನ್ನೂ ಯಾವನು ವಿಕಾರರಹಿತವಾಗಿ ಅರಿಯುತ್ತಿರುವನೋ[1] ಅವನಿಗೆ ಆ ತಮಸ್ಸು ಹೊರಚ್ಚಾಗಿಯೇ ಇರುವದು[2].

(ಮೂಲ)

ಯತ ಏತದೇವಮ್, ಅತಸ್ತಸ್ಯೈವ ಬೀಜಾತ್ಮನಸ್ತಮಸಃ ಚಿತ್ತ ಧರ್ಮವಿಶಿಷ್ಟಸ್ಯ ಸ್ವಕಾರ್ಯದ್ವಿತೀಯಾಭಿಸಂಬನ್ಧಃ, ನ ತು ಅವಿಕಾರಿಣ ಆತ್ಮನ ಇತ್ಯಾಹ ದೃಷ್ಟಾನ್ತೇನ –

**ರೂಪಪ್ರಕಾಶಯೋರ್ಯದ್ವತ್ ಸಂಗತಿರ್ವಿಕ್ರಿಯಾವತಃ ।**
**ಸುಖದುಃಖಾದಿಸಂಬನ್ಧಶ್ಚಿತ್ತಸ್ಯೈವಂ ವಿಕಾರಿಣಃ ೪೬॥**

(ಅರ್ಥ)

ಇದು ಹೀಗಿರುವದಷ್ಟೆ[3]. ಆದ್ದರಿಂದ ಅದೇ ಬೀಜರೂಪವಾದ (ಅಜ್ಞಾನಕ್ಕೆ) ಚಿತ್ತಧರ್ಮವಿಶಿಷ್ಟವಾಗಿರುವಾಗ[4] ತನ್ನ ಕಾರ್ಯವಾಗಿರುವ ದ್ವಿತೀಯ(ವಸ್ತುವಿನ) ಸಂಬಂಧವೇ ಹೊರತು ವಿಕಾರರಹಿತನಾದ ಆತ್ಮನಿಗಲ್ಲ ಎಂದು ದೃಷ್ಟಾಂತಪೂರ್ವಕವಾಗಿ ಹೇಳುತ್ತಾರೆ :

---

1. ಕೂಟಸ್ಥ ಚೈತನ್ಯದಿಂದ ಬೆಳಗುತ್ತಿರುವನೋ.

2. ಏಕೆಂದರೆ ಎಲ್ಲವೂ ಅವನಿಗೆ ಸಾಕ್ಷ್ಯವಾಗಿರುತ್ತದೆ. ಅಜ್ಞಾನವು ಪರಮೇಶ್ವರನ ಶಕ್ತಿಯಲ್ಲವೆ ? ಅದು ಜ್ಞಾನದಿಂದ ನಿವೃತ್ತಿಯಾಗುವದು ಹೇಗೆ ?- ಎಂಬ ಶಂಕೆಗೆ ಉತ್ತರವಾಗಿ ವ್ಯಾಖ್ಯಾನಕಾರರು ಈ ಶ್ಲೋಕವನ್ನು ತಂದಿರುವದು ಸರಿಯಲ್ಲ. ಪೀಠಿಕೆಯನ್ನು ನೋಡಿ.

3. ಅಗ್ರಹಣಾನ್ಯಥಾಗ್ರಹಣಗಳು ಅನಾತ್ಮಧರ್ಮವಾಗಿದ್ದು ಆತ್ಮನು ಅವಿಕಾರಿಯಾದ್ದರಿಂದಲೇ.

4. ಚಿತ್ತರೂಪದಿಂದೊಡಗೂಡಿರುವ ಅಜ್ಞಾನಕ್ಕೆ ಎಂದರ್ಥ ; ಅಥವಾ ಚಿತ್ತದ ಧರ್ಮವಾದ ವಿಕಾರದಿಂದೊಡಗೂಡಿರುವ ಅಜ್ಞಾನಕ್ಕೇ ಎಂದರ್ಥ. ಅಜ್ಞಾನವು ಪರಿಣಾಮಿಯಾದ ಚಿತ್ತರೂಪವನ್ನು ಧರಿಸಿದಾಗ ಅದಕ್ಕೆ ದ್ವೈತಸಂಸಾರಧರ್ಮವು ತೋರುವದು.

೪೬. ರೂಪ, ಪ್ರಕಾಶ-ಇವುಗಳ (ಹೊಸ) ಸಂಬಂಧವು ವಿಕಾರವುಳ್ಳ (ವಸ್ತು)ವಿಗೇ ಹೇಗೆ (ಆಗುವದೋ)[1], ಹಾಗೆಯೇ ಸುಖದುಃಖಾದಿಗಳ ಸಂಬಂಧವೂ ವಿಕಾರಿಯಾದ ಚಿತ್ತಕ್ಕೇ[2].

(ಮೂಲ)

ತದೇತದನ್ವಯವ್ಯತಿರೇಕಾಭ್ಯಾಂ ದರ್ಶಯಿಷ್ಯನ್ ಆಹ–

ಸಂಪ್ರಸಾದೇಽವಿಕಾರಿತ್ವಾದಸ್ತಂ ಯಾತೇ ವಿಕಾರಿಣಿ ।
ಪಶ್ಯತೋ ನಾತ್ಮನಃ ಕಿಂಚಿದ್ದ್ವಿತೀಯಂ ಸ್ಪೃಶತೇಽ[3]ಣ್ವಪಿ ॥೪೭॥

(ಅರ್ಥ)

ಆ ಇದನ್ನು ಅನ್ವಯವ್ಯತಿರೇಕಗಳಿಂದ ತೋರಿಸುವದಕ್ಕಾಗಿ ಹೇಳುತ್ತಾರೆ :

೪೭. ಸುಷುಪ್ತಿಯಲ್ಲಿ ವಿಕಾರಿಯಾದ (ಚಿತ್ತವು) ಅಸ್ತವಾಗಲು ಆತ್ಮನು ಅವಿಕಾರಿಯಾಗಿರುವದರಿಂದ ನೋಡುತ್ತಿದ್ದರೂ[4] (ಅವನನ್ನು) ಒಂದಿಷ್ಟೂ ದ್ವಿತೀಯ(ವಸ್ತು) ಮುಟ್ಟುವದಿಲ್ಲ[5].

## ಆತ್ಮನು ನಿತ್ಯಶುದ್ಧಬುದ್ಧಮುಕ್ತ ಸ್ವರೂಪನು

(ಮೂಲ)

ಸೋಽಯಂ ಕೂಟಸ್ಥಜ್ಞಾನಮೂರ್ತಿರಾತ್ಮಾ –

ಯಥಾ ಪ್ರಾಜ್ಞೇ ತಥೈವಾಯಂ ಸ್ವಪ್ನಜಾಗರಿತಾನ್ತಯೋಃ ।
ಪಶ್ಯನ್ನಪ್ಯವಿಕಾರಿತ್ವಾದ್ದ್ವಿತೀಯಂ ನೈವ ಪಶ್ಯತಿ ॥೪೮॥

---

1. ಈ ದೃಷ್ಟಾಂತದ ಅಭಿಪ್ರಾಯವು ಸ್ಪಷ್ಟವಾಗಿರುವದಿಲ್ಲ. ರೂಪಪ್ರಕಾಶಗಳ ಸಂಬಂಧವು ವಿಕಾರವುಳ್ಳ ನೇತ್ರೇಂದ್ರಿಯಕ್ಕೇ ಆಗುವಂತೆ ಎಂದಿರಬಹುದು.

2. ವಿಕಾರವುಳ್ಳ ಚಿತ್ತಕ್ಕೆ ಸುಖದುಃಖವುಂಟಾಗಬಹುದು ; ಆತ್ಮನು ಇದ್ದಂತೆ ಇದ್ದು ಚಿತ್ತಕ್ಕೂ ಸುಖದುಃಖಗಳಿಗೂ ಸಾಕ್ಷಿಯಾಗಿಯೇ ಇರುತ್ತಾನಾಗಿ ಅವನಿಗೆ ಸುಖದುಃಖಗಳಿಲ್ಲ.

3. ಇದು ''ಸ್ಪೃಶತಿ'' ಎಂದಿರಬೇಕು.

4. ಚೈತನ್ಯರೂಪದಿಂದ ಯಾವದನ್ನಾದರೂ ಬೆಳಗಬಲ್ಲವನಾಗಿದ್ದರೂ.

5. ದ್ವಿತೀಯವಸ್ತುವಿಲ್ಲದ್ದರಿಂದ ದ್ವೈತಸಂಬಂಧವೇ ಅವನಿಗಿರುವದಿಲ್ಲ. ಬೃ. ೪-೨೩ರಲ್ಲಿ ಹೇಳಿದ ಶ್ರುತಿಯ ಸೂಚನೆ.

(ಅರ್ಥ)

ಆ ಈ ಕೂಟಸ್ಥಚೈತನ್ಯಸ್ವರೂಪನಾದ ಆತ್ಮನು :

೪೮. ಹೇಗೆ ಪ್ರಾಜ್ಞನ (ಅವಸ್ಥೆ)ಯಲ್ಲಿ ದ್ವಿತೀಯವಸ್ತುವನ್ನು ಕಾಣುವದಿಲ್ಲವೋ ಹಾಗೆಯೇ ಸ್ವಪ್ನಜಾಗರಿತಸ್ಥಾನಗಳಲ್ಲಿಯೂ ದ್ವಿತೀಯ ವಸ್ತುವನ್ನು ನೋಡುತ್ತಿದ್ದರೂ ನೋಡದೆ ಇರುತ್ತಾನೆ[1].

## ಜ್ಞಾನದ ಫಲ

(ಮೂಲ)

**ಏವಂ ಜ್ಞಾನವತೋ ನಾಸ್ತಿ ಮಮಾಹಂಮತಿಸಂಶ್ರಯಃ ।**
**ಭಾಸ್ವತ್ಪ್ರದೀಪಹಸ್ತಸ್ಯ ಹ್ಯನ್ಧಕಾರ ಇವಾಗ್ರತಃ ॥೪೯॥**

(ಅರ್ಥ)

೪೯. ಬೆಳಗುತ್ತಿರುವ ದೊಡ್ಡ ದೀಪವನ್ನು ಕೈಯಲ್ಲಿಟ್ಟುಕೊಂಡಿರುವಾತನಿಗೆ ಮುಂದೆ ಹೇಗೆ ಕತ್ತಲೆಯಿರುವದಿಲ್ಲವೋ ಹಾಗೆ, ಹೀಗೆಂದು ತಿಳಿದುಕೊಂಡಿರುವವನಿಗೆ ನಾನು ನನ್ನದು- ಎಂಬ ಬುದ್ಧಿಯ ಆಶ್ರಯವಿಲ್ಲ.

(ಮೂಲ)

ತತ್ರ ದೃಷ್ಟಾನ್ತಃ–

**ಆ ಪ್ರಬೋಧಾದ್ಯಥಾಸಿದ್ಧಿರ್ದ್ವೈತಾದನ್ಯಸ್ಯ ವಸ್ತುನಃ ।**
**ಬೋಧಾದೇವಮಸಿದ್ಧತ್ವಂ ಬುದ್ಧ್ಯಾದೇಃ ಪ್ರತ್ಯಗಾತ್ಮನಃ ॥೫೦॥**

(ಅರ್ಥ)

ಇದಕ್ಕೆ ದೃಷ್ಟಾಂತ(ವಿದು) :

೫೦. ಜ್ಞಾನವಾಗುವವರೆಗೂ ಹೇಗೆ ದ್ವೈತಕ್ಕಿಂತ ಬೇರೆಯಾದ ವಸ್ತುವಿನ ಸಿದ್ಧಿಯಿಲ್ಲವೋ, ಹಾಗೆಯೇ ಜ್ಞಾನವಾದ(ಮೇಲೆ) ಪ್ರತ್ಯಗಾತ್ಮನಿಗಿಂತ (ಬೇರೆಯಾದ) ಬುದ್ಧಿಯೇ ಮುಂತಾದದ್ದರ ಸಿದ್ಧಿಯಿಲ್ಲ[2].

---

1. ಚಿತ್ತೋಪಾಧಿಯಿಂದ ಕೂಡಿ ನೋಡುತ್ತಿದ್ದರೂ ಪರಮಾರ್ಥವಾಗಿ ನೋಡುವದಿಲ್ಲ. ಆತ್ಮಸ್ವರೂಪದೃಷ್ಟಿಯಿಂದ ಯಾವಾಗಲೂ ದ್ವೈತಸಂಬಂಧವು ಇಲ್ಲವೇ ಇಲ್ಲ. ದ್ವೈತವನ್ನು ನೋಡುವದು, ನೋಡದಿರುವದು- ಇವುಗಳಿಂದಲೇ ಅವಸ್ಥೆಗಳ ಭೇದವಾಗಿರುವದರಿಂದ ಪರಮಾರ್ಥದೃಷ್ಟಿಯಲ್ಲಿ ಆತ್ಮನಿಗೆ ಅವಸ್ಥಾತ್ರಯವೇ ಇಲ್ಲ ಎಂದಂತೆ ಆಯಿತು.

2. ಬೃ.ವಾ. ೧-೪-೩೧೨, ೩೧೩ನ್ನು ನೋಡಿ ; ಗೀ. ೨-೬೯ರ ಅಭಿಪ್ರಾಯ.

## ಜ್ಞಾನಿಯ ಅನುಭವ

(ಮೂಲ)

ಸ ಏಷ ವಿದ್ವಾನ್ ಹಾನೋಪಾದಾನಶೂನ್ಯಮ್ ಆತ್ಮಾನಮ್ ಆತ್ಮನಿ ಪಶ್ಯನ್ –

ಸರ್ವಮೇವಾನುಜಾನಾತಿ ಸರ್ವಮೇವ ನಿಷೇಧತಿ ।
ಭೇದಾತ್ಮಲಾಭೋಽನುಜ್ಞಾ ಸ್ಯಾನ್ನಿಷೇಧೋಽತತ್ಸ್ವಭಾವತಃ ॥೫೧॥

(ಅರ್ಥ)

ಆ ಈ ಜ್ಞಾನಿಯು ಹಾನೋಪಾದಾನರಹಿತನಾದ ಆತ್ಮನನ್ನು ತನ್ನಲ್ಲಿ ಕಂಡುಕೊಂಡವನಾಗಿ :

೫೧. ಎಲ್ಲವನ್ನೂ ಒಪ್ಪುತ್ತಾನೆ, ಎಲ್ಲವನ್ನೂ ಅಲ್ಲಗಳೆಯುತ್ತಾನೆ. ಭೇದವಿರುವದು [1] ಒಪ್ಪಿಗೆ ; ಅದರ ಸ್ವಭಾವವಿಲ್ಲದವನಾಗಿರುವದು [2] ನಿಷೇಧ.

## ಪ್ರಕರಣಾರ್ಥದ ಉಪಸಂಹಾರ

(ಮೂಲ)

ಸರ್ವಸ್ಯೋಕ್ತತ್ವಾತ್ ಉಪಸಂಹಾರಃ –

ಪರಮಾರ್ಥಾತ್ಮನಿಷ್ಠಂ ಯತ್ ಸರ್ವವೇದಾನ್ತನಿಶ್ಚಿತಮ್ ।
ತಮೋಽಪನುದ್ಧಿಯಾಂ ಜ್ಞಾನಂ ತದೇತತ್ ಕಥಿತಂ ಮಯಾ ॥೫೨॥

(ಅರ್ಥ)

ಎಲ್ಲವನ್ನೂ [3] ಹೇಳಿದ್ದಾಯಿತಾದ್ದರಿಂದ (ಪ್ರಕರಣವನ್ನು ) ಉಪಸಂಹಾರ ಮಾಡಿರುತ್ತಾರೆ :

೫೨. ಎಲ್ಲಾ ಉಪನಿಷತ್ತುಗಳಲ್ಲಿಯೂ ನಿಶ್ಚಿತವಾಗಿರುವ [4], ಬುದ್ಧಿಗಳ ಅಜ್ಞಾನವನ್ನು ಕಳೆಯುವ [5], ಪರಮಾರ್ಥವಾಗಿರುವ ಆತ್ಮನಲ್ಲಿಯೇ

1. ವ್ಯವಹಾರದೃಷ್ಟಿಯಿಂದ ದ್ವೈತವನ್ನು ಕಾಣುವದು.

2. ಪರಮಾರ್ಥವಾಗಿ ಅದ್ವಿತೀಯನಾಗಿರುವದು.

3. ಅನರ್ಥ, ಅನರ್ಥಹೇತು, ಪುರುಷಾರ್ಥ, ಪುರುಷಾರ್ಥಹೇತು- ಇಷ್ಟನ್ನೂ ಎಂದರ್ಥ. ೧-೭ರ ಸಂಬಂಧೋಕ್ತಿಯನ್ನು ನೋಡಿ.

4. ಉಪನಿಷತ್ತುಗಳಲ್ಲಿ ಹೇಳಿರುವ ಜ್ಞಾನವೇ ಇದು.

5. ಬಗೆಬಗೆಯ ವಿಧಿಗಳನ್ನು ಕಲ್ಪಿಸುವ ವಾದಿಗಳ ಬುದ್ಧಿಗಳನ್ನೂ ತಪ್ಪೆಂದು ತೋರಿಸುವದರಿಂದ 'ಬುದ್ಧಿಗಳ' ಎಂದು ಬಹುವಚನವನ್ನುಪಯೋಗಿಸಿದೆ.

ನೆಲೆನಿಲ್ಲುವ[1] ಆ ಈ ಜ್ಞಾನವನ್ನು ನಾನು ಹೇಳಿರುತ್ತೇನೆ.

(ಮೂಲ)

ಏತಾವದಿಹೋಕ್ತಮ್ –

**ನೇಹಾತ್ಮವಿನ್ಮದನ್ಯೋಽಸ್ತಿ ನ ಮತ್ತೋಽಜ್ಞೋಽಸ್ತಿ ಕಶ್ಚನ ।**
**ಇತ್ಯಜಾನನ್ ವಿಜಾನಾತಿ ಯಃ ಸ ಬ್ರಹ್ಮವಿದುತ್ತಮಃ ॥೫೩॥**

(ಅರ್ಥ)

ಇಲ್ಲಿ ಇಷ್ಟನ್ನು ಹೇಳಿದ್ದಾಗಿದೆ :

೫೩. ನನಗಿಂತ ಬೇರೆಯಾಗಿರುವ ಆತ್ಮಜ್ಞಾನಿಯು ಇಲ್ಲಿರುವದಿಲ್ಲ ; ನನಗಿಂತ ಬೇರೆಯಾಗಿ ಅಜ್ಞನೂ ಇರುವದಿಲ್ಲ[2]. ಹೀಗೆಂದು ಯಾವನು ಅರಿಯದೆ ಅರಿಯುವನೋ[3] ಅವನೇ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನು[4].

## ಜ್ಞಾನಿಯ ವ್ಯವಹಾರ

(ಮೂಲ)

ಏವಮಾತ್ಮಾನಂ ಜ್ಞಾತ್ವಾ ಕಿಂ ಪ್ರವರ್ತಿತವ್ಯಮ್, ಉತ ನಿವರ್ತಿತವ್ಯಮ್, ಆಹೋಸ್ವಿತ್ ಮುಕ್ತ ಪ್ರಗ್ರಹತಾ ಇತಿ ? ಉಚ್ಯತೇ –

**ಜ್ಞೇಯಾಭಿನ್ನಮಿದಂ ಯಸ್ಮಾಜ್ಜ್ಞೇಯವಸ್ತ್ವನುಸಾರ್ಯತಃ ।**
**ನ ಪ್ರವೃತ್ತಿಂ ನಿವೃತ್ತಿಂ ವಾ ಕಟಾಕ್ಷೇಣಾಪಿ ವೀಕ್ಷತೇ ॥೫೪॥**

---

1. ಪ್ರಸಂಖ್ಯಾನಾದಿಗಳನ್ನು ಬಯಸದೆ ಪ್ರತ್ಯಗಾತ್ಮರೂಪನಾದ ಪರಮಾರ್ಥಾತ್ಮನನ್ನೇ ತಿಳಿಸುವ. ೧-೪ನ್ನು ನೋಡಿ.

2. ಜ್ಞಾನಿತ್ವಾಜ್ಞಾನಿತ್ವಗಳು ಕೂಡ ನನ್ನ ಆತ್ಮವಾಗಿರುವ ಬ್ರಹ್ಮದಲ್ಲಿಯೇ ಕಲ್ಪಿತವಾದದ್ದು. ಮಾಂ. ಕಾ. ಭಾ. ೨-೩೨ನ್ನು ನೋಡಿ.

3. ಅರಿಯುವದೆಂದರೆ ವೃತ್ತಿಜ್ಞಾನದಿಂದಲ್ಲ, ಸ್ವಯಂಪ್ರಕಾಶವಾದ ಅದ್ವಿತೀಯ ಚೈತನ್ಯರೂಪವಾದ ಆತ್ಮತತ್ತ್ವದಲ್ಲಿ ನೆಲೆನಿಂತಿರುವದು.

4. 'ನಾನು ಬ್ರಹ್ಮವನ್ನು ಅರಿತಿದ್ದೇನೆ' ಎನ್ನುವವನೂ ಅಜ್ಞನೇ, ಏಕೆಂದರೆ ಅವನ ಜ್ಞಾನವು ದ್ವೈತಭೂಮಿಕೆಯಲ್ಲಿರುತ್ತದೆ.

(ಅರ್ಥ)

(ಪ್ರಶ್ನೆ) :- ಹೀಗೆಂದು ಆತ್ಮನನ್ನು ಅರಿತುಕೊಂಡು ಪ್ರವೃತ್ತಿ (ಧರ್ಮ)ದಲ್ಲಿರಬೇಕೊ, ನಿವೃತ್ತಿಧರ್ಮದಲ್ಲಿರಬೇಕೊ, ಅಥವಾ ಕಣ್ಣಿಯನ್ನು ಕಳಚಿ (ಪಶುವಿನಂತೆ ಯಥೇಷ್ಟಾಚಾರ)ದಲ್ಲಿರುವದೊ ?

(ಉತ್ತರ) :- ಹೇಳುತ್ತೇವೆ.

೫೪. ಈ (ಜ್ಞಾನವು) ಜ್ಞೇಯಾಭಿನ್ನವಾಗಿರುವದಷ್ಟೆ , ಆದರಿಂದ ಜ್ಞೇಯವಸ್ತುವನ್ನೇ ಅನುಸರಿಸುವದು[1] ; ಪ್ರವೃತ್ತಿಯಾನ್ನಾಗಲಿ ನಿವೃತ್ತಿಯನ್ನಾಗಲಿ ಕಡೆಗಣ್ಣಿಂದಲೂ ನೋಡುವದಿಲ್ಲ[2].

(ಮೂಲ)

ಕುತ ಏತಜ್ಜ್ಞೇಯಾಭಿನ್ನಮಿತಿ ? ಯತಃ –

**ಪ್ರಾಗಾತ್ಮಬೋಧಾತ್ ಬೋಧೋಽಯಂ ಬಾಹ್ಯವಸ್ತೂಪಸರ್ಜನಃ ।**
**ಪ್ರಧ್ವಸ್ತಾಖಿಲಸಂಸಾರ ಆತ್ಮೈಕಾಲಮ್ಬನಶ್ರುತೇಃ ॥೫೫॥**

(ಅರ್ಥ)

(ಪ್ರಶ್ನೆ) :- ಇದು ಜ್ಞೇಯಾಭಿನ್ನವೆಂಬುದೇಕೆ ?

(ಉತ್ತರ) :- ಏತಕ್ಕೆಂದರೆ :

೫೫. ಆತ್ಮಜ್ಞಾನವಾಗುವದಕ್ಕಿಂತ ಮುಂಚೆ ಈ ಜ್ಞಾನವು ಹೊರಗಿನ ವಸ್ತುವಿಗೆ ಅಧೀನವಾಗಿರುತ್ತದೆ[3]. ಸರ್ವಸಂಸಾರವನ್ನೂ ನಾಶಮಾಡಿದ ಬಳಿಕ ಆತ್ಮನೊಬ್ಬನನ್ನೇ ಆಶ್ರಯಿಸಿರುತ್ತದೆ[4]. ಏಕೆಂದರೆ (ಹಾಗೆಂದು) ಶ್ರುತಿ(ಯಿದೆ)[5].

---

1. ಮಾಂ. ಕಾ. ೩-೩೩, ೪-೧ – ಇವುಗಳ ಭಾಷ್ಯವನ್ನು ನೋಡಿ.
2. ಗೀ. ಭಾ. ೧೮-೬೬ರಲ್ಲಿ ಹೇಳಿರುವ ಸರ್ವಧರ್ಮಪರಿತ್ಯಾಗವೇ ಇದು.
3. ದ್ವೈತವನ್ನೇ ಕಾಣುತ್ತಿರುತ್ತದೆ, ಬಾಹ್ಯವಸ್ತುಗಳ ಆಕಾರವನ್ನೇ ಪಡೆದಿರುತ್ತದೆ.
4. ಆತ್ಮನೇ ಆಗಿಬಿಡುತ್ತದೆ ; ಇದೇ ಅಮನಸ್ತೆಯು. ಮಾಂ. ಕಾ. ೩-೩೨.
5. ಬೃ. ೪-೫-೧೫ ''ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್....'' ಎಂಬ ಶ್ರುತಿಯ ಸೂಚನೆ.

(ಮೂಲ)

ಏವಮವಗತಪರಮಾರ್ಥತತ್ತ್ವಸ್ಯ ನ ಶೇಷಶೇಷಿಭಾವಃ, ತತ್ಕಾರಣಸ್ಯ ಉತ್ಸಾರಿತತ್ವಾತ್ ಇತ್ಯಾಹ –

ವಾಸ್ತವೇನೈವ ವೃತ್ತೇನ ನಿರುಣದ್ಧಿ ಯತೋ ಭವಮ್ ।
ನಿವೃತ್ತಿಮಪಿ ಮೃದ್ನಾತಿ ಸಮ್ಯಗ್ಬೋಧಃ ಪ್ರವೃತ್ತಿವತ್ ॥೫೬॥

(ಅರ್ಥ)

ಹೀಗೆ ಪರಮಾರ್ಥತತ್ತ್ವವನ್ನು ಅರಿತುಕೊಂಡಿರುವಾತನಿಗೆ ಶೇಷಶೇಷಿಭಾವವಿರುವದಿಲ್ಲ [1]. ಏಕೆಂದರೆ ಅದರ ಕಾರಣವು ತೊಲಗಿರುತ್ತದೆ [2] ಎಂದು ಹೇಳುತ್ತಾರೆ :

೫೬. ವಸ್ತುಸ್ವಭಾವ(ಕ್ಕನುಗುಣವಾಗಿ)ಯೇ ಸಂಸಾರವನ್ನು ನಾಶಗೊಳಿಸುವದರಿಂದ [3] ಸಮ್ಯಗ್ಜ್ಞಾನವು ಪ್ರವೃತ್ತಿಯಂತೆ ನಿವೃತ್ತಿಯನ್ನೂ ನಾಶಗೊಳಿಸುತ್ತದೆ [4].

(ಮೂಲ)

ಸಕೃದಾತ್ಮಪ್ರಸೂತ್ಯೈವ ನಿರುಣದ್ಧ್ಯಖಿಲಂ ಭವಮ್ ।
ಧ್ವಾನ್ತಮಾತ್ರನಿರಾಸೇನ ನ ತತೋಽನ್ಯಾನ್ಯಥಾಮತಿಃ ॥೫೭॥
ದೇಶಕಾಲಾದ್ಯಸಂಬನ್ಧಾದ್ದೇಶಾದೇರ್ಮೋಹಕಾರ್ಯತಃ ।
ನಾನುತ್ಪನ್ನಮದಗ್ಧಂ ವಾ ಜ್ಞಾನಮಜ್ಞಾನಮಸ್ತ್ಯತಃ ॥೫೮॥
ಸಮ್ಯಗ್ಜ್ಞಾನಶಿಖಿಪ್ಲುಷ್ಟಮೋಹತತ್ಕಾರ್ಯರೂಪಿಣಃ ।
ಸಕೃನ್ನಿವೃತ್ತೇರ್ಬಾಧ್ಯಸ್ಯ ಕಿಂ ಕಾರ್ಯಮವಶಿಷ್ಯತೇ ॥೫೯॥

---

1. ಕರ್ತೃವಾದವನೇ ಕರ್ಮಕ್ಕೆ ಶೇಷನಾಗಿರುತ್ತಾನೆ ; ಅವನಿಗೆ ಪ್ರವೃತ್ತಿ ನಿವೃತ್ತಿಗಳಲ್ಲಿ ಯಾವದಕ್ಕೆ ಅಧಿಕಾರವೆಂಬ ವಿಚಾರವು ಹುಟ್ಟಬಹುದು. ಆದರೆ ಜ್ಞಾನಿಯು ಅಕರ್ತೃ.

2. ಜ್ಞಾನವುಂಟಾದಮೇಲೆ ಅಜ್ಞಾನವಿರುವದಿಲ್ಲ ; ಅಜ್ಞಾನದ ಕಾರ್ಯವಾದ ಕರ್ಮ, ಕರ್ಮಕ್ಕೆ ಶೇಷಿತ್ವ, ಕರ್ತೃವಿಗೆ ಶೇಷತ್ವ- ಇವು ಆಗ ಹೇಗೆ ಇದ್ದಾವು ?

3. ಜ್ಞಾನವು ಕಾರಕವಾಗಿ ಕೊಡಲಿಯು ಮರವನ್ನು ಕಡಿಯುವಂತೆ ಸಂಸಾರವನ್ನು ನಾಶಗೊಳಿಸುವದಿಲ್ಲ ; ಸಂಸಾರವು ಇಲ್ಲದ್ದು ಎಂದು ವಸ್ತುಸ್ವಭಾವವನ್ನು ತಿಳಿಸುವದರಿಂದಲೇ ಅದನ್ನು ನಾಶಗೊಳಿಸುತ್ತದೆ. 4. ಕರ್ಮಮಾತ್ರವೇ ಅಸತ್ತಾಗಿ ಬಿಟ್ಟಿರುವದರಿಂದ ಆಗ ಪ್ರವೃತ್ತಿಯೂ ಇಲ್ಲ, ನಿವೃತ್ತಿಯೂ ಇಲ್ಲ - ಎಂದರ್ಥ.

(ಅರ್ಥ)

೫೭-೫೯. ಒಂದು ಸಲಕ್ಕೇ ತಾನು ಹುಟ್ಟಿದಮಾತ್ರದಿಂದ ಬರಿಯ ಅಜ್ಞಾನವನ್ನು ನಾಶಮಾಡುವದರಿಂದಲೇ ಎಲ್ಲಾ ಸಂಸಾರವನ್ನೂ ನಾಶ ಮಾಡಿಬಿಡುತ್ತದೆ[1], ಆ (ಅಜ್ಞಾನಕ್ಕಿಂತ) ಅನ್ಯಥಾಜ್ಞಾನವು ಬೇರೆಯಲ್ಲ[2]. ದೇಶಕಾಲಾದಿಗಳ ಸಂಬಂಧವಿಲ್ಲದ್ದರಿಂದಲೂ[3] ದೇಶಾದಿಗಳು ಮೋಹದ ಕಾರ್ಯವಾಗಿರುವದರಿಂದಲೂ ಆ ಬಳಿಕ ಹುಟ್ಟದೆ ಇರುವ ಜ್ಞಾನವಿಲ್ಲ, ಸುಡದೆ ಇರುವ ಅಜ್ಞಾನ(ವಿಲ್ಲ)[4]. ಸಮ್ಯಗ್ಜ್ಞಾನವೆಂಬ ಬೆಂಕಿಯಿಂದ ಅಜ್ಞಾನವೂ ಅದರ ಕಾರ್ಯವೂ ಸುಟ್ಟುಹೋದ ಸ್ವರೂಪವುಳ್ಳಾತನಿಗೆ ಬಾಧ್ಯವಾದದ್ದೆಲ್ಲವೂ ಒಮ್ಮೆಗೇ ನಿವೃತ್ತವಾಗಿರುವದರಿಂದ ಇನ್ನು ಮಾಡ ತಕ್ಕದ್ದು ಏನು ಉಳಿದಿರುತ್ತದೆ[5] ?

---

1. ಜ್ಞಾನವು ಹುಟ್ಟಿದಮೇಲೂ ಮಾಡತಕ್ಕದ್ದಿದೆ ಎಂಬ ಪ್ರಸಂಖ್ಯಾನಾದಿ ವಾದಗಳಲ್ಲಿ ಜ್ಞಾನಿಯು ಯಾವ ಕರ್ಮಕ್ಕೆ ಅಧಿಕಾರಿ ಎಂಬ ಪ್ರಶ್ನೆ ಹುಟ್ಟಬಹುದು. ವಾಕ್ಯಜ್ಞಾನವು ಹುಟ್ಟಿದಮಾತ್ರದಿಂದ ಸಮಸ್ತಸಂಸಾರದುಃಖವನ್ನೂ ನಾಶಮಾಡಿಬಿಡುತ್ತದೆ ಎಂಬ ನಮ್ಮ ಮತದಲ್ಲಿ ಅದಕ್ಕೆ ಅವಕಾಶವಿಲ್ಲವೆಂದು ಭಾವ.

2. ಅಜ್ಞಾನವು ಹೋದಮೇಲೂ ಅನ್ಯಥಾಜ್ಞಾನವಿರಬಹುದು ಎಂಬ ಶಂಕೆಗೆ ಪರಿಹಾರವಿದು. ಬೃ. ವಾ. ೧-೪-೪೩೭, ೪೩೮.

3. ಈಗ ಇಲ್ಲಿರುವ ವಸ್ತುವಿನ ಜ್ಞಾನವು ಇನ್ನು ಮೇಲೆ ಇನ್ನೊಂದು ಕಾಲದಲ್ಲಿರುವ ವಸ್ತುವಿನ ಅಜ್ಞಾನವನ್ನು ಕಳೆಯಲಾರದು ; ಆದರಂತೆ ಈಗ ಹುಟ್ಟಿದ ಜ್ಞಾನವು ಇನ್ನೊಂದು ಕಾಲದಲ್ಲಿ ಹುಟ್ಟುವ ವಸ್ತುವಿನ ವಿಷಯದ ಅಜ್ಞಾನವನ್ನು ನಾಶಮಾಡಲಾರದು ; ಆದರೆ ಆತ್ಮನು ದೇಶಕಾಲಾದಿಗಳಿಗೆ ಸಂಬದ್ಧನಲ್ಲ, ಆತ್ಮಜ್ಞಾನವು ಆತ್ಮನಿಗಿಂತ ಭಿನ್ನವಲ್ಲ. ಆದ್ದರಿಂದ ಅದರಿಂದ ಒಮ್ಮೆಗೇ ಎಲ್ಲಾ ಅಜ್ಞಾನವೂ ನಾಶವಾಗಬಹುದು.

4. ದೇಶಾದಿಗಳಲ್ಲಿ ಈ ಅಜ್ಞಾನವಿರುವದಿಲ್ಲ, ಅಜ್ಞಾನದಿಂದ ದೇಶಾದಿಗಳು ತೋರುತ್ತಿರುತ್ತವೆ ; ಅಜ್ಞಾನವು ನಾಶವಾದರೆ ದೇಶಕಾಲಗಳೇ ಇರುವದಿಲ್ಲ. ಇನ್ನು ಮತ್ತೊಂದು ದೇಶಕಾಲದ ಅಜ್ಞಾನವೆಂಬ ಮಾತಿಗೆ ಅರ್ಥವೇನು ? ಜ್ಞಾನವುಂಟಾದಾಗ ಹುಟ್ಟದೆ ಇರುವ ಜ್ಞಾನವಿಲ್ಲ, ಹೋಗದೆ ಇರುವ ಅಜ್ಞಾನವಿಲ್ಲವೆಂದೇ ಉಂಟಾಗುತ್ತದೆ.

5. ಜ್ಞಾನವುಂಟಾದಮೇಲೂ ಅಜ್ಞಾನಲೇಶವಿರುತ್ತದೆ ಎಂಬವರ ವಾದವು ಈ ವಾಕ್ಯಕ್ಕೆ ವಿರುದ್ಧವೆಂಬುದು ಸ್ಪಷ್ಟ. ಜ್ಞಾನವಾದಬಳಿಕವೂ ಮಿಥ್ಯಾಸಂಸ್ಕಾರವಿರುತ್ತದೆ, ಅದನ್ನು ಕಳೆಯುವದಕ್ಕೆ ಅಭ್ಯಾಸವು ಬೇಕು ಎಂಬ ಬ್ರಹ್ಮಸಿದ್ಧಿಕಾರರ ಮತವೂ ಇದರಿಂದಲೇ ತಿರಸ್ಕೃತವಾಗಿದೆ. ಬ್ರ. ಸಿ. ಪು. ೩೫.

(ಮೂಲ)

ವಾಸ್ತವೇನೈವ ವೃತ್ತೇನ ಅವಿದ್ಯಾಯಾಃ ಪ್ರಧ್ವಸ್ತತ್ವಾತ್ ನ ಕಿಂಚಿದವಶಿಷ್ಯತ ಇತ್ಯುಕ್ತಃ ಪರಿಹಾರಃ । ಅಥಾಪರಃ ಸಾಂಪ್ರದಾಯಿಕಃ –

**ನಿವೃತ್ತಸರ್ಪಃ ಸರ್ಪೋತ್ಥಂ ಯಥಾ ಕಮ್ಪಂ ನ ಮುಞ್ಚತಿ ।**
**ವಿಧ್ವಸ್ತಾಖಿಲಮೋಹೋಽಪಿ ಮೋಹಕಾರ್ಯಂ ತಥಾತ್ಮವಿತ್ ॥೬೦॥**

(ಅರ್ಥ)

ವಸ್ತುವೃತ್ತದಿಂದಲೇ[1] ಅವಿದ್ಯೆಯು ನಾಶವಾಗಿರುವದರಿಂದ (ಮತ್ತೆ) ಯಾವ (ಕರ್ತವ್ಯವೂ) ಉಳಿದಿರುವದಿಲ್ಲ ಎಂದು ಪರಿಹಾರವನ್ನು ಹೇಳಿದ್ದಾಯಿತು. ಇನ್ನು ಮತ್ತೊಂದು ಸಾಂಪ್ರದಾಯಿಕ (ಪರಿಹಾರವನ್ನು ಹೇಳಲಾಗುವದು)[2] :

೬೦. (ಜ್ಞಾನದಿಂದ) ಹಾವನ್ನು ತೊಲಗಿಸಿಕೊಂಡವನು ಹೇಗೆ ಹಾವಿನಿಂದುಂಟಾದ ನಡುಕವನ್ನು ಬಿಡದಿರುವನೋ ಅದರಂತೆ ಸಂಪೂರ್ಣವಾಗಿ ಮೋಹವನ್ನು ನಾಶಗೊಳಿಸಿಕೊಂಡರೂ ಮೋಹದ ಕಾರ್ಯವನ್ನು ಆತ್ಮಜ್ಞಾನಿಯು ಬಿಡುವದಿಲ್ಲ[3].

(ಮೂಲ)

ಯತಃ ಪ್ರವೃತ್ತಿಬೀಜಮ್ ಉಚ್ಛಿನ್ನಮ್ ತಸ್ಮಾತ್ –

**ತರೋರುತ್ಖಾತಮೂಲಸ್ಯ ಶೋಷೇಣೈವ ಯಥಾ ಕ್ಷಯಃ ।**
**ತಥಾ ಬುದ್ಧಾತ್ಮತತ್ತ್ವಸ್ಯ ನಿವೃತ್ತ್ಯೈವ ತನುಕ್ಷಯಃ ॥೬೧॥**

---

1. ಆತ್ಮವಸ್ತುವಿನ ಸ್ವಭಾವದಿಂದಲೇ ಅವಿದ್ಯೆಯು ಅದರಲ್ಲಿಲ್ಲವೆಂಬುದನ್ನು ತಿಳಿಸುವದರಿಂದ ಜ್ಞಾನವು ಅವಿದ್ಯೆಯನ್ನು ನಾಶಮಾಡುತ್ತದೆ.

2. ವ್ಯವಹಾರದೃಷ್ಟಿಯಿಂದ ಈ ಪರಿಹಾರವನ್ನು ಹೇಳಿದೆ ; ಆದ್ದರಿಂದ ಪೂರ್ವಾಪರವಿರೋಧವಿಲ್ಲ. ಹಿಂದೆ ಹೇಳಿದ್ದು ಸದ್ಯೋಮುಕ್ತಿಪಕ್ಷವನ್ನು ಒಪ್ಪಿ, ಈಗ ಜೀವನ್ಮುಕ್ತಿ ಪಕ್ಷದಲ್ಲಿ - ಎಂದು ವ್ಯಾಖ್ಯಾನಕಾರರು ಹೇಳಿರುವದು ವಾರ್ತಿಕ ಪ್ರಸ್ಥಾನಕ್ಕೆ ಒಪ್ಪಿಲ್ಲ. ಬೃ.ವಾ. ೪-೨-೧೦೨, ೧೦೩ನ್ನು ನೋಡಿ.

3. ಬೃ. ಸಿ. ಯಲ್ಲಿ ಹೇಳಿರುವದಕ್ಕೂ ಇದಕ್ಕೂ ಹೆಚ್ಚುಕಡಿಮೆಯಿದೆ ; ಅಲ್ಲಿ ತತ್ತ್ವಜ್ಞಾನವಾದಮೇಲೂ ಭಯವಿರುತ್ತದೆ ಎಂದಿದೆ ; ಇಲ್ಲಿ ಬಾಧಿತಾನುವೃತ್ತಿಯಿಂದ ನಡುಕ ಉಳಿದಿರುತ್ತದೆ ಎಂದಿದೆ. ಸೂ.ಭಾ. ೪-೧-೧೫ನ್ನು ನೋಡಿರಿ.

(ಅರ್ಥ)

ಪ್ರವೃತ್ತಿ ಬೀಜವು ನಾಶವಾಗಿರುವದಷ್ಟೆ [1] ? ಆದ್ದರಿಂದ :

೬೧. ಬೇರುಕಿತ್ತುಹಾಕಿದ ಮರವು ಹೇಗೆ ಒಣಗುವದರಿಂದಲೇ ಸವೆಯುತ್ತಿರುವದೋ ಹಾಗೆ ಆತ್ಮತತ್ತ್ವವನ್ನು ತಿಳಿದುಕೊಂಡವನಿಗೆ ನಿವೃತ್ತಿಯಿಂದಲೇ ಶರೀರವು ಸವೆಯುತ್ತಿರುವದು [2].

## ಜ್ಞಾನಿಗೆ ಯಥೇಷ್ಟಾಚರಣವಿರಲಾರದು

(ಮೂಲ)

ಅಥ ಅಲೇಪಕಪಕ್ಷನಿರಾಸಾರ್ಥಮ್ ಆಹ –

**ಬುದ್ಧಾದ್ವೈತಸತತ್ತ್ವಸ್ಯ ಯಥೇಷ್ಟಾಚರಣಂ ಯದಿ ।**
**ಶುನಾಂ ತತ್ತ್ವದೃಶಾಂ ಚೈವ ಕೋ ಭೇದೋಽಶುಚಿಭಕ್ಷಣೇ ॥೬೨॥**

(ಅರ್ಥ)

ಇನ್ನು ಅಲೇಪಕಪಕ್ಷವನ್ನು [3] ತಿರಸ್ಕರಿಸುವದಕ್ಕಾಗಿ ಹೇಳುತ್ತಾರೆ :

೬೨. ಅದ್ವೈತತತ್ತ್ವವನ್ನು ಅರಿತುಕೊಂಡವನಿಗೆ ಯತೇಚ್ಛಾವೃತ್ತಿಯಿರುವದೆಂದರೆ, ನಾಯಿಗಳಿಗೂ ತತ್ತ್ವಜ್ಞಾನಿಗಳಿಗೂ ಅಶುಚಿ(ಪದಾರ್ಥ)ವನ್ನು ತಿನ್ನುವಲ್ಲಿ ಯಾವ ಹೆಚ್ಚುಕಡಿಮೆಯಿದೆ [4] ?

(ಮೂಲ)

ಕಸ್ಮಾನ್ನ ಭವತಿ ? ಯಸ್ಮಾತ್ –

---

1. ಕಾಮವು ಅಜ್ಞಾನನಾಶದಿಂದ ನಷ್ಟವಾಗಿರುತ್ತದೆ.

2. ಪ್ರಾರಬ್ಧಭೋಗವನ್ನು ಮಾಡುವ ಜ್ಞಾನಿಯು ನಿವೃತ್ತಿಧರ್ಮದಲ್ಲಿಯೇ ಕಾಲವನ್ನು ಕಳೆಯುತ್ತಾನೆ ಎಂದರ್ಥ.

3. ವಿಧಿನಿಷೇಧಗಳನ್ನು ಮೀರಿ ನಡೆದರೂ ಯಾವ ಕೆಟ್ಟ ಫಲವೂ ಜ್ಞಾನಿಗೆ ಅಂಟುವದಿಲ್ಲ ಎಂಬ ಪಕ್ಷವನ್ನು .

4. ಮನುಷ್ಯತ್ವವನ್ನು ಮೀರುವದಕ್ಕಾಗಿ ಧರ್ಮವನ್ನು ಮಾಡುವವನು ಹೇಗೆ ನಾಯಿಯಂತೆ ಅಶುಚಿಭಕ್ಷ್ಯವನ್ನು ಮಾಡಲಾರನೋ ಹಾಗೆ ಧರ್ಮವನ್ನು ಮೀರಿ ಜ್ಞಾನಿಯಾದವನು ಸ್ವೇಚ್ಛಾಚಾರವನ್ನು ಕೈಗೊಳ್ಳಲಾರನು ಎಂದರ್ಥ.

**ಅಧರ್ಮಾಜ್ಜಾಯತೇಽಜ್ಞಾನಂ ಯಥೇಷ್ಟಾಚರಣಂ ತತಃ ।**
**ಧರ್ಮಕಾರ್ಯೇ ಕಥಂ ತತ್ಸ್ಯಾದ್ಯತ್ರ ಧರ್ಮೋಽಪಿ ನೇಷ್ಯತೇ ॥೬೩॥**
**ಪ್ರತ್ಯಾಚಕ್ಷಾಣ ಆಹಾತೋ ಯಥೇಷ್ಟಾಚರಣಂ ಹರಿಃ ।**
**ಯಸ್ಯ ಸರ್ವೇ ಸಮಾರಮ್ಭಾಃ ಪ್ರಕಾಶಂ ಚೇತಿ ಸರ್ವದೃಕ್ ॥೬೪॥**

(ಅರ್ಥ)

ಏತಕ್ಕೆ ಆಗುವದಿಲ್ಲ ? ಏಕೆಂದರೆ :

೬೩-೬೪. ಅಧರ್ಮದಿಂದ ಅಜ್ಞಾನವೂ ಅದರಿಂದ ಸ್ವೇಚ್ಛಾಚಾರವೂ ಆಗುವವು. ಧರ್ಮಕಾರ್ಯವಾದ ಜ್ಞಾನ (ವಿರುವಲ್ಲಿ) ಅದು ಹೇಗಿದ್ದೀತು ? ಅಲ್ಲಿ ಧರ್ಮವೂ ಇರುವದೆನ್ನುವಂತಿಲ್ಲವಲ್ಲ [1] ! ಆದ್ದರಿಂದಲೇ ಯಥೇಷ್ಟಾಚಾರವನ್ನು ನಿಷೇಧಿಸುವದಕ್ಕಾಗಿ ಸರ್ವಜ್ಞನಾದ ಶ್ರೀಹರಿಯು "ಯಾವನಿಗೆ ಎಲ್ಲಾ ಕರ್ಮಗಳೂ, (ಕಾಮಸಂಕಲ್ಪವರ್ಜಿತವಾಗಿರುವವೋ ಅವನೇ ಜ್ಞಾನಾಗ್ನಿಯಿಂದ ಕರ್ಮವನ್ನು ಸುಟ್ಟವನು. ಗೀ. ೪-೧೯)" [2] ; (ಗುಣಾತೀತನು) ಪ್ರಕಾಶವನ್ನೂ (ಪ್ರವೃತ್ತಿಯನ್ನೂ ಮೋಹವನ್ನೂ ದ್ವೇಷಿಸುವದಿಲ್ಲ, ಬಯಸುವದೂ ಇಲ್ಲ. ಗೀ. ೧೪-೨೨) [3] ಎಂದು ಹೇಳಿರುತ್ತಾನೆ.

(ಮೂಲ)

**ತಿಷ್ಠತು ತಾವತ್ ಸರ್ವಪ್ರವೃತ್ತಿಬೀಜಘಸ್ಮರಂ ಜ್ಞಾನಮ್, ಮುಮುಕ್ಷುತ್ವಾವಸ್ಥಾಯಾಮಪಿ ನ ಸಂಭವತಿ ಯಥೇಷ್ಟಾಚರಣಮ್ ತದಾಹ –**

1. ಧರ್ಮದಿಂದ ಸುಖವೂ ಜ್ಞಾನವೂ ಆಗುವದು ; ಜ್ಞಾನವಾದಬಳಿಕ ಧರ್ಮ, ಅಧರ್ಮ- ಎರಡನ್ನೂ ಮೀರಿದ ಆತ್ಮನಲ್ಲಿ ನಿಷ್ಠನಾಗಿರುತ್ತಾನೆ. ಧರ್ಮವಿರುವಾಗಲೇ ಇಲ್ಲದ ಸ್ವೇಚ್ಛಾಚಾರವು ಜ್ಞಾನಿಗೆ ಬರಲಾರದು- ಎಂದು ಹಿಂದಿನ ಶ್ಲೋಕದ ಅಭಿಪ್ರಾಯವನ್ನೇ ಸಹೇತುಕವಾಗಿ ವಿವರಿಸಿದೆ.

2. ಜ್ಞಾನಿಯ ಕರ್ಮದಲ್ಲಿ ಕಾಮಸಂಕಲ್ಪಗಳಿರುವದಿಲ್ಲವಾದ್ದರಿಂದ ಅವನಿಗೆ ಯಥೇಷ್ಟಾಚರಣವಿಲ್ಲವೆಂದಾಯಿತು.

3. ಪ್ರಕಾಶಾದಿಗಳನ್ನು ಜ್ಞಾನಿಯು ಬಯಸುವದಿಲ್ಲ ಎಂದದ್ದರಿಂದ ಅವನಿಗೆ ಯಾವದರಲ್ಲಿಯೂ ಬೇಕೆಂಬ ಪ್ರವೃತ್ತಿಯಾಗುವದಿಲ್ಲವಾದ್ದರಿಂದ ಅವನಿಗೆ ಯಥೇಷ್ಟಾಚರಣವಿಲ್ಲವೆಂದಾಯಿತು.

**ಯೋ ಹಿ ಯತ್ರ [1] ವಿರಕ್ತಃ ಸ್ಯಾನ್ನಾಸೌ ತಸ್ಮೈ ಪ್ರವರ್ತತೇ ।**
**ಲೋಕತ್ರಯವಿರಕ್ತತ್ವಾನ್ಮುಮುಕ್ಷುಃ ಕಿಮಿತೀಹತೇ ॥೬೫॥**

(ಅರ್ಥ)

ಎಲ್ಲಾ (ಬಗೆಯ) ಪ್ರವೃತ್ತಿಯ ಬೀಜವನ್ನೂ ನುಂಗಿಹಾಕುವ ಜ್ಞಾನವಂತಿರಲಿ, ಮುಮುಕ್ಷುವಿನ ಅವಸ್ಥೆಯಲ್ಲಿಯೂ ಯಥೇಷ್ಟಾಚರಣವು ಆಗುವಂತಿಲ್ಲ. ಅದನ್ನು ಹೇಳುತ್ತಾರೆ :

೬೫. ಯಾವನು ಯಾವದರಲ್ಲಿ ವಿರಕ್ತನಾಗಿರುವನೋ ಅವನು ಅದಕ್ಕಾಗಿ ಪ್ರವರ್ತಿಸುವದಿಲ್ಲ. ಮುಮುಕ್ಷುವಾದವನು ಲೋಕತ್ರಯದಲ್ಲಿಯೂ ವಿರಕ್ತನಾಗಿರುವದರಿಂದ ಏತಕ್ಕೆ (ಅದಕ್ಕಾಗಿ) ಪ್ರಯತ್ನಿಸುವನು ?

(ಮೂಲ)

**ತತ್ರ ದೃಷ್ಟಾನ್ತಃ–**
**ಕ್ಷುಧಯಾ ಪೀಡ್ಯಮಾನೋಽಪಿ ನ ವಿಷಂ ಹ್ಯತ್ತುಮಿಚ್ಛತಿ ।**
**ಮಿಷ್ಟಾನ್ನಧ್ವಸ್ತತೃಡ್ ಜಾನನ್ನಾಮೂಢಸ್ತಜ್ಜಿಘತ್ಸತಿ ॥೬೬॥**

(ಅರ್ಥ)

ಇದಕ್ಕೆ (ಇದು) ದೃಷ್ಟಾಂತವು :

೬೬. ಹಸಿವಿನಿಂದ ಸಂಕಟಪಡುತ್ತಿರುವವನೂ ವಿಷವನ್ನು ತಿನ್ನುವದಕ್ಕೆ ಇಚ್ಛಿಸುವದಿಲ್ಲ. ಮಿಷ್ಟಾನ್ನವನ್ನುಂಡು ಹಸಿವನ್ನು ಕಳೆದುಕೊಂಡವನು (ಅದು ವಿಷವೆಂಬುದನ್ನು) ತಿಳಿದ ವಿವೇಕಿಯಾದವನು ಅದನ್ನು (ಎಂದಿಗೂ) ತಿನ್ನಲೆಳಸುವದಿಲ್ಲ [2].

---

1. ಈ ಶ್ಲೋಕವೂ ಮುಂದಿನ ಶ್ಲೋಕವೂ ಉಪದೇಶಸಾಹಸ್ರಿ (೧೮-೨೧೯, ೨೨೦)ಯಲ್ಲಿರುತ್ತವೆ. ಅಲ್ಲಿ 'ಯಸ್ಮಾದ್ವಿರಕ್ತಃ' 'ಲೋಕತ್ರಯಾದ್ವಿರಕ್ತತ್ವಾತ್' ಎಂಬ ಪಾಠಾಂತರಗಳಿವೆ. 'ಬೋಧನಿಧಿ' ವ್ಯಾಖ್ಯಾನದಲ್ಲಿ ಆ ಶ್ಲೋಕಗಳನ್ನು ಹಿಡಿದಿಲ್ಲವಾದ್ದರಿಂದಲೂ ಇಲ್ಲಿ ನೈಷ್ಕರ್ಮ್ಯಸಿದ್ಧಿಕಾರರೂ ಭಗವತ್ಪಾದರ ವಚನವೆಂದು ಕಂಠೋಕ್ತವಾಗಿ ಹೇಳಿಲ್ಲವಾದ್ದರಿಂದಲೂ ಇವು ಈ ಗ್ರಂಥಕ್ಕೇ ಸೇರಿದವು ಎಂದು ಎಣಿಸುವದು ಯುಕ್ತವಾಗಿ ಕಾಣುತ್ತದೆ.

2. ಮುಮುಕ್ಷುವಾದವನು ಹಸಿವುಳ್ಳವನಂತೆ ; ಅವನುಕೂಡ ವಿಷಯಭೋಗಗಳು ಕ್ಷಯವಾಗತಕ್ಕವು- ಎಂದು ತಿಳಿದಿರುವದರಿಂದ ಅವುಗಳಿಗಾಗಿ ಪ್ರಯತ್ನಿಸುವದಿಲ್ಲ. ಇನ್ನು ಮಿಷ್ಟಾನ್ನವನ್ನು ತಿಂದು ತೃಪ್ತನಾದವನಂತೆ ಇರುವ ಜ್ಞಾನಿಯು ಅವುಗಳಲ್ಲಿ ಹೇಗೆ ಆಸೆಪಟ್ಟು ಹಾತುವರಿದಾನು ?

(ಮೂಲ)

ಯತೋಽವಗತಪರಮಾರ್ಥತತ್ತ್ವಸ್ಯ ಯಥೇಷ್ಟಾಚರಣಂ ನ ಮನಾಗಪಿ ಘಟತೇ, ಮುಮುಕ್ಷುತ್ವೇಽಪಿ ಚ, ತಸ್ಮಾತ್–

**ರಾಗೋ ಲಿಙ್ಗಮಬೋಧಸ್ಯ ಚಿತ್ತವ್ಯಾಯಾಮಭೂಮಿಷು ।**
**ಕುತಃ ಶಾದ್ವಲತಾ ತಸ್ಯ ಯಸ್ಯಾಗ್ನಿಃ ಕೋಟರೇ ತರೋಃ ॥೬೭॥**

(ಅರ್ಥ)

ಹೀಗೆ ಪರಮಾರ್ಥತತ್ತ್ವವನ್ನು ತಿಳಿದುಕೊಂಡಿರುವಾತನಿಗೆ ಯತೇಷ್ಟಾಚರಣವು ಸ್ವಲ್ಪವೂ ಸಂಭವಿಸುವದಿಲ್ಲ, ಮುಮುಕ್ಷುವಾಗಿದ್ದರೂ (ಅವನಿಗೂ) ಸಂಭವಿಸುವದಿಲ್ಲವಷ್ಟೆ , ಆದ್ದರಿಂದ :

೬೭. ಚಿತ್ತದ ವ್ಯಾಪಾರಕ್ಕೆ ಗೋಚರವಾಗಿರುವ (ಶಬ್ದಾದಿಗಳಲ್ಲಿರುವ) ರಾಗವು ಅಜ್ಞಾನದ ಗುರುತು. ಯಾವ ಮರದ ಪೊಟರೆಯಲ್ಲಿ ಬೆಂಕಿಯಿರುವದೋ ಅದು ಚಿಗುರುವದೆಂದರೇನು [1] ?

## ಈ ಜ್ಞಾನಕ್ಕೆ ಅಧಿಕಾರಿ

(ಮೂಲ)

ಸಕಲಪುರುಷಾರ್ಥಸಮಾಪ್ತಿಕಾರಿಣೋಽಸ್ಯಾತ್ಮಾವಬೋಧಸ್ಯ ಕುತಃ ಪ್ರಸೂತಿರಿತಿ ? ಉಚ್ಯತೇ–

**ಅಮಾನಿತ್ವಾದಿನಿಷ್ಠೋ ಯೋ ಯಶ್ಚಾದ್ವೇಷ್ಟೃತ್ವಾದಿಸಾಧನಃ ।**
**ಜ್ಞಾನಮುತ್ಪದ್ಯತೇ ತಸ್ಯ ನ ಬಹಿರ್ಮುಖಚೇತಸಃ ॥೬೮॥**

---

1. ಜ್ಞಾನವೆಂಬ ಬೆಂಕಿಯಿರುವದರಿಂದ ಪ್ರವೃತ್ತಿಯೆಂಬ ಚಿಗುರು ಕಾಣಿಸಿಕೊಳ್ಳಲಾರದು ಎಂದಭಿಪ್ರಾಯ.

(ಅರ್ಥ)

(ಪ್ರಶ್ನೆ) :- ಎಲ್ಲಾ ಪುರುಷಾರ್ಥದ ಪ್ರಾಪ್ತಿಯನ್ನೂ ಮಾಡಿಕೊಡುವ[1] ಈ ಆತ್ಮಜ್ಞಾನವು ಏತರಿಂದ ಉಂಟಾಗುವದು[2] ?

(ಉತ್ತರ) :- ಹೇಳುತ್ತೇವೆ :

೬೮. ಅಮಾನಿತ್ವವೇ ಮುಂತಾದವುಗಳಲ್ಲಿ ತಾತ್ಪರ್ಯವುಳ್ಳವನು ಯಾರೋ, ಮತ್ತು ಅದ್ವೇಷ್ಟೃತ್ವಾದಿಸಾಧನವುಳ್ಳವನು ಯಾರೋ, ಅವನಿಗೇ ಜ್ಞಾನವುಂಟಾಗುತ್ತದೆಯೇ ಹೊರತು ಹೊರಮುಖವಾಗಿರುವ ಚಿತ್ತವುಳ್ಳವನಿಗೆ[3] ಆಗದು.

(ಮೂಲ)

ಉತ್ಪನ್ನೇ ಆತ್ಮವಿಜ್ಞಾನೇ ಕಿಮ್ ಅವಿದ್ಯಾಕಾರ್ಯತ್ವಾತ್ ಪ್ರವೃತ್ತಿವತ್ ನಿವೃತ್ತ್ಯಾತ್ಮಕಾಮಾನಿತ್ವಾದಯೋ ನಿವರ್ತನ್ತ ಉತ ನೇತಿ ? ನೇತಿ ಬ್ರೂಮಃ । ಕಿಂ ಕಾರಣಮ್ ? ನಿವೃತ್ತಿಶಾಸ್ತ್ರಾವಿರುದ್ಧಸ್ವಾಭಾವ್ಯಾದಾತ್ಮನಃ । ನ ತು ನಿಯೋಗವಶಾತ್ । ಕಥಂ ತರ್ಹಿ ? ಶೃಣು –

**ಉತ್ಪನ್ನಾತ್ಮಪ್ರಬೋಧಸ್ಯ ತ್ವದ್ವೇಷ್ಟೃತ್ವಾದಯೋ ಗುಣಾಃ ।**
**ಅಯತ್ನತೋ ಭವನ್ತ್ಯಸ್ಯ ನ ತು ಸಾಧನರೂಪಿಣಃ ॥೬೯॥**

(ಅರ್ಥ)

(ಪ್ರಶ್ನೆ) :- ಆತ್ಮಜ್ಞಾನವು ಉಂಟಾದ ಬಳಿಕ ಪ್ರವೃತ್ತಿಯಂತೆ ನಿವೃತ್ತಿರೂಪವಾದ ಅಮಾನಿತ್ವಾದಿಗಳೂ ಅವಿದ್ಯಾಕಾರ್ಯವಾಗಿರುವದರಿಂದ

---

1. ಅನರ್ಥನಿವೃತ್ತಿ , ಇಷ್ಟಾರ್ಥಪ್ರಾಪ್ತಿ - ಎಂಬಿವೇ ಎಲ್ಲಾ ಪುರುಷಾರ್ಥವು. ಪ್ರಕರಣದ ಸಂಬಂಧೋಕ್ತಿಯಲ್ಲಿ ನೋಡಿ.

2. ಅನ್ವಯವ್ಯತಿರೇಕಾದಿಗಳಿಂದ ಜ್ಞಾನವುಂಟಾಗುವದಕ್ಕೆ ಮತ್ತೇನಾದರೂ ಸಾಧನಗಳು ಬೇಕೆ ?- ಎಂದು ಪ್ರಶ್ನೆ .

3. ವಿಷಯಗಳ ಕಡೆಗೆ ಹರಿಯುವ ಚಿತ್ತದವನಿಗೆ ಎಂದರ್ಥ. ಅಮಾನಿತ್ವಾದಿಗಳನ್ನು ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿಯೂ ಅದ್ವೇಷ್ಟೃತ್ವಾದಿಗಳನ್ನು ಹನ್ನೆರಡನೆಯ ಅಧ್ಯಾಯದಲ್ಲಿಯೂ ಹೇಳಿದೆ.

ತೊಲಗುತ್ತವೆಯೋ ಅಥವಾ ಇಲ್ಲವೊ [1] ?

(ಉತ್ತರ) :- ಇಲ್ಲ, ಎನ್ನುತ್ತೇವೆ. ಯಾವ ಕಾರಣದಿಂದ ?- ಎಂದರೆ ಆತ್ಮನು ನಿವೃತ್ತಿಶಾಸ್ತ್ರಕ್ಕೆ ವಿರುದ್ಧವಾದ ಸ್ವಭಾವದವನಲ್ಲವಾದ್ದರಿಂದ. ಆದರೆ ನಿಯೋಗಕ್ಕಧೀನವಾಗಿಯಲ್ಲ [2]. ಮತ್ತೆ ಹೇಗೆ ಎಂದರೆ (ಹೇಳುತ್ತೇವೆ), ಕೇಳು :

೬೯. ಆತ್ಮಜ್ಞಾನವು ಹುಟ್ಟಿದವನಿಗಾದರೆ ಅದ್ವೇಷ್ಟೃತ್ವಾದಿಗುಣಗಳು (ಯಾವ) ಯತ್ನವೂ ಇಲ್ಲದೆಯೇ ಇದ್ದುಕೊಂಡಿರುತ್ತವೆ ; ಆದರೆ ಸಾಧನ ರೂಪದಿಂದ ಇರುವದಿಲ್ಲ [3].

(ಮೂಲ)

ಯತ ಏತದೇವಮ್, ಅತಃ –

**ಇಮಂ ಗ್ರನ್ಥಮುಪಾದಿತ್ಸುರಮಾನಿತ್ವಾದಿಸಾಧನಃ ।**
**ಯತ್ನತಃ ಸ್ಯಾನ್ನ ದುರ್ವೃತ್ತಃ ಪ್ರತ್ಯಗ್ಧರ್ಮಾನುಗೋ ಹ್ಯಯಮ್॥೭೦॥**

(ಅರ್ಥ)

ಇದು ಹೀಗಿರುವದಷ್ಟೆ, ಆದ್ದರಿಂದ :

೭೦. ಈ ಗ್ರಂಥವನ್ನು ಸ್ವೀಕರಿಸಬೇಕೆನ್ನುವವನು ಪ್ರಯತ್ನಪೂರ್ವಕವಾಗಿ ಅಮಾನಿತ್ವವೇ ಮುಂತಾದ ಸಾಧನಗಳುಳ್ಳವನಾಗಿರಬೇಕೇ ಹೊರತು ಕೆಟ್ಟ

---

1. ಅವಿದ್ಯೆಯು ಜ್ಞಾನದಿಂದ ಸಂಪೂರ್ಣವಾಗಿ ಹೋಗಿಯೇಬಿಡುತ್ತದೆಯಾದ್ದರಿಂದ ಜ್ಞಾನಿಯ ದೃಷ್ಟಿಯಲ್ಲಿ ನಿವೃತ್ತಿಧರ್ಮಗಳೂ ಇಲ್ಲವೆಂದು ೫೪, ೫೬ನೆಯ ಶ್ಲೋಕಗಳಗಲ್ಲಿ ಹೇಳಿಯೇ ಇದೆ. ಈಗ ವ್ಯವಹಾರದೃಷ್ಟಿಯಿಂದಲೇ ಈ ಪ್ರಶ್ನೋತ್ತರಗಳು ಬಂದಿವೆ ಎಂದು ತಿಳಿಯಬೇಕು.

2. ಶಾಸ್ತ್ರದಲ್ಲಿ ವಿಧಿಸಿದೆ ಎಂಬ ಕಾರಣದಿಂದಲ್ಲ.

3. ಜ್ಞಾನಿಗೆ ಇವು ಲಕ್ಷಣವಾಗಿರುತ್ತವೆ, ಮುಮುಕ್ಷುವಿಗೆ ಸಾಧನವಾಗಿರುತ್ತವೆ.

ನಡತೆಯವನಾಗಿರಬಾರದು[1] ; ಏಕೆಂದರೆ ಇದು ಪ್ರತ್ಯಗಾತ್ಮಸ್ವಭಾವವನ್ನು ಅನುಸರಿಸತಕ್ಕದ್ದು [2].

(ಮೂಲ)

ನ ದಾತವ್ಯಶ್ಚಾಯಂ ಗ್ರನ್ಥಃ–

ನಾವಿರಕ್ತಾಯ ಸಂಸಾರಾನ್ನಾನಿರಸ್ತೈಷಣಾಯ ಚ ।
ನ ಚಾಯಮವತೇ ದೇಯಂ ವೇದಾನ್ತಾರ್ಥಪ್ರವೇಶನಮ್ ॥೭೧॥
ಜ್ಞಾತ್ವಾ ಯಥೋದಿತಂ ಸಮ್ಯಗ್ ಜ್ಞಾತವ್ಯಂ ನಾವಶಿಷ್ಯತೇ ।
ನ ಚಾನಿರಸ್ತಕರ್ಮೇದಂ ಜಾನೀಯಾದಞ್ಜಸಾ ತತಃ ॥೭೨॥
ನಿರಸ್ತಸರ್ವಕರ್ಮಾಣಃ ಪ್ರತ್ಯಕ್ಪ್ರವಣಬುದ್ಧಯಃ ।
ನಿಷ್ಕಾಮಾ ಯತಯಃ ಶಾನ್ತಾ ಜಾನನ್ತೀದಂ ಯಥೋದಿತಮ್ ॥೭೩॥

(ಅರ್ಥ)

ಈ ಗ್ರಂಥವನ್ನು (ಇಂಥವರಿಗೆ) ಕೊಡತಕ್ಕದ್ದೂ ಅಲ್ಲ ;

೭೧-೭೩. ಸಂಸಾರದಲ್ಲಿ ವಿರಕ್ತನಾಗದವನಿಗೂ ಏಷಣೆಯನ್ನು[3] ಬಿಡದೆ ಇರುವವನಿಗೂ, ಯಮವಿಲ್ಲದವನಿಗೂ[4] ವೇದಾಂತಾರ್ಥದಲ್ಲಿ ಪ್ರವೇಶವನ್ನು ಕೊಡಬಾರದು. ಈ ಹೇಳಿದ (ಅರ್ಥ)ವನ್ನು ಚೆನ್ನಾಗಿ ಅರಿತುಕೊಂಡರೆ (ಮತ್ತೆ ) ಅರಿತುಕೊಳ್ಳಬೇಕಾದದ್ದು ಉಳಿದಿರುವದಿಲ್ಲ.[5]

---

1. ಕ. ೧-೨-೨೪ರಲ್ಲಿ ಹೇಳಿರುವದರ ಸೂಚನೆಯಿದು.

2. ಗ್ರಂಥದಲ್ಲಿರುವ ಜ್ಞಾನವು ಪ್ರತ್ಯಗಾತ್ಮನ ಸ್ವಭಾವಕ್ಕನುಗುಣವಾಗಿರುತ್ತದೆ ಯಾದ್ದರಿಂದ ಆ ಜ್ಞಾನವು ಬೇಕಾದವನೂ ಅದಕ್ಕನುಗುಣವಾದ ನಿವೃತ್ತಿಧರ್ಮವನ್ನು ಅನುಸರಿಸಬೇಕು.

3. ಪುತ್ರೈಷಣೆ ; ವಿತ್ತೈಷಣೆ ; ಲೋಕೈಷಣೆ - ಎಂಬ ಬಯಕೆಗಳನ್ನು .

4. ಅಹಿಂಸಾದಿಸಾಧನಗಳನ್ನು ಅಳವಡಿಸಿಕೊಳ್ಳದವನಿಗೂ ಎಂದರ್ಥ. ಯೋ. ಸೂ. ೨-೩೦ರಲ್ಲಿ ಹೇಳಿರುವ ಸಾಧನಗಳಿವು. ಮನಃಪ್ರಧಾನವಾಗಿರುವ ಸಾಧನ ಗಳೆಲ್ಲವನ್ನೂ ಈ ಯಮವೆಂಬ ಶಬ್ದದ ಅರ್ಥವೆಂದು ಭಾವಿಸಬಹುದು.

5. ಏಕೆಂದರೆ ಆತ್ಮನ ಅಜ್ಞಾನದಿಂದಲೇ ಮಿಕ್ಕದ್ದೆಲ್ಲವೂ ತೋರುತ್ತಿರುತ್ತದೆ.

ಆದ್ದರಿಂದ (ಎಲ್ಲಾ) ಕರ್ಮವನ್ನೂ ತ್ಯಾಗಮಾಡದವನು[1] ಇದನ್ನು ಚೆನ್ನಾಗಿ ತಿಳಿದುಕೊಳ್ಳಲೂ ಆರನು, ಸರ್ವಕರ್ಮಗಳನ್ನು ಸಂನ್ಯಾಸಮಾಡಿ ಪ್ರತ್ಯಗಾತ್ಮನ ಕಡೆಗೇ ತಿರುಗಿರುವ ಬುದ್ಧಿಯುಳ್ಳ ನಿಷ್ಕಾಮರಾದ ಶಾಂತರಾದ ಯತಿಗಳು ಈ ಹೇಳಿದರ್ಥಗಳನ್ನು ಅರಿತುಕೊಳ್ಳುವರು.[2]

## ಉಪಸಂಹಾರ

(ಮೂಲ)

**ಶ್ರೀಮಚ್ಛಙ್ಕರಪಾದಪದ್ಮಯುಗಲಂ ಸಂಸೇವ್ಯ ಲಬ್ಧೋಚ್ಚಿವಾನ್**
**ಜ್ಞಾನಂ ಪಾರಮಹಂಸ್ಯಮೇತದಮಲಂ ಸ್ವಾನ್ತಾನ್ಧಕಾರಾಪನುತ್ ।**
**ಮಾಭೂದತ್ರ ವಿರೋಧಿನೀ ಮತಿರತಃ ಸದ್ಭಿಃ ಪರೀಕ್ಷ್ಯಂ ಬುಧೈಃ**
**ಸರ್ವತ್ರೈವ ವಿಶುದ್ಧಯೇ ಮತಮಿದಂ ಸನ್ತಃ ಪರಂ ಕಾರಣಮ್ ॥೭೪॥**

(ಅರ್ಥ)

ಶ್ರೀಮಚ್ಛಂಕರಾಚಾರ್ಯರವರ ಪಾದಕಮಲಯುಗ್ಮವನ್ನು ಸಂಸೇವನೆ ಮಾಡಿ ಈ ಪರಮಹಂಸರಿಗೆ ತಕ್ಕ, ನಿರ್ಮಲವಾದ, ಹೃದಯದ ಅಜ್ಞಾನವನ್ನು ನಾಶಗೊಳಿಸುವ, ಜ್ಞಾನವನ್ನು ಪಡೆದುಕೊಂಡು ಹೇಳಿರುತ್ತೇನೆ. ಇದರಲ್ಲಿ ವಿರುದ್ಧಮತಿಯಾಗದೆ ಇರಲಿ, ಸತ್ಪುರುಷರಾದ ವಿದ್ವಾಂಸರು (ಇದನ್ನು) ಪರೀಕ್ಷಿಸಬೇಕು. ಏಕೆಂದರೆ ಎಲ್ಲಾ (ಗ್ರಂಥಗಳ) ವಿಷಯದಲ್ಲಿಯೂ ವಿಶುದ್ಧಿಗೆ ಸತ್ಪುರುಷರೇ ಹೆಚ್ಚಿನ ಪ್ರಮಾಣರೆಂಬುದು (ಸರ್ವ) ಸಂಮತವಾಗಿರುತ್ತದೆ.

(ಮೂಲ)

**ಸುಭಾಷಿತಂ ಚಾರ್ವಪಿ ನಾಮಹಾತ್ಮನಾಂ**
**ದಿವಾಕರೋ ನಕ್ತದೃಶಾಮಿವಾಮಲಃ ।**
**ಪ್ರಭಾತಿ ಭಾತ್ಯೇವ ವಿಶುದ್ಧಚೇತಸಾಂ**
**ನಿಧಿರ್ಯಥಾಪಾಸ್ತತೃಷಾಂ ಮಹಾಧನಃ ॥೭೫॥**

---

1. ಬೃ. ೩-೫-೧ರ ಸೂಚನೆ.

2. ಸರ್ವಕರ್ಮಸಂನ್ಯಾಸವನ್ನು ಮಾಡಿ ಅಮಾನಿತ್ವಾದಿಸಾಧನಗಳನ್ನೂ ಶಮಾದಿಗಳನ್ನೂ ಕೂಡಿ ಶ್ರವಣಮಾಡಿದವರಿಗೆ ಶಾಸ್ತ್ರಾರ್ಥವು ಸುಲಭವಾಗಿ ತಿಳಿಯುವದು ; ಅವರೇ ಶಾಸ್ತ್ರಕ್ಕೆ ವಿಶೇಷಾಧಿಕಾರಿಗಳು.

(ಅರ್ಥ)

೭೫. ಮನೋಹರವಾಗಿರುವ ಸುಭಾಷಿತವು ಕೂಡ ಮಹಾತ್ಮರಲ್ಲದವರಿಗೆ ನಿರ್ಮಲನಾದ ಸೂರ್ಯನು ಗೂಬೆಗಳಿಗೆ ಹೇಗೋ ಹಾಗೆ, ಹೊಳೆಯದೆ ಇರುತ್ತದೆ. (ಆದರೆ) ವಿಶುದ್ಧಚಿತ್ತರಾದವರಿಗೆ - ಆಶೆಯನ್ನು ತೊರೆದವರಿಗೆ ಮಹಾಧನದ ನಿಧಿಯಂತೆ[1] - ಹೊಳೆಯುತ್ತಲೇ ಇರುವದು.

(ಮೂಲ)

ವಿಷ್ಣೋಃ ಪಾದಾನುಗಾಂ ಯಾಂ ನಿಖಿಲಭವನುದಂ ಶಂಕರೋಽವಾಪ ಯೋಗಾತ್
ಸರ್ವಜ್ಞಂ ಬ್ರಹ್ಮಸಂಸ್ಥಂ ಮುನಿಗಣಸಹಿತಂ ಸಮ್ಯಗಭ್ಯರ್ಚ್ಯ ಭಕ್ತ್ಯಾ ।
ವಿದ್ಯಾಂ ಗಙ್ಗಾಮಿವಾಹಂ ಪ್ರವರಗುಣನಿಧೇಃ ಪ್ರಾಪ್ಯ ವೇದಾನ್ತದೀಪ್ತಾಂ
ಕಾರುಣ್ಯಾತ್ತಾಮವೋಚಂ ಜನಿಮೃತಿನಿವಹಧ್ವಸ್ತಯೇ ದುಃಖಿತೇಭ್ಯಃ ॥೭೬॥

(ಅರ್ಥ)

೭೬. ವಿಷ್ಣುವಿನ ಪಾದವನ್ನು ಅನುಸರಿಸಿರುವ[2], ಎಲ್ಲಾ ಸಂಸಾರವನ್ನೂ ಕಳೆಯುವ[3], ಯಾವ (ವಿದ್ಯೆಯನ್ನು) ಶಂಕರನು (ಗಂಗೆಯನ್ನು ಪಡೆದಂತೆ) ಯೋಗದಿಂದ ಪಡೆದುಕೊಂಡನೋ[4], ಸರ್ವಜ್ಞನೂ ಬ್ರಹ್ಮನಿಷ್ಠನೂ ಮುನಿಗಣದಿಂದೊಡಗೂಡಿದವನೂ ಆದ (ಆತನನ್ನು) ಭಕ್ತಿಯಿಂದ ಚೆನ್ನಾಗಿ ಅಭ್ಯರ್ಚನೆಮಾಡಿ ಶ್ರೇಷ್ಠನಾದ ಗುಣಗಳ ನಿಧಿಯಾದ (ಆತನಿಂದ ಆ ವೇದಾಂತಪ್ರಕಾಶಿತವಾದ ವಿದ್ಯೆಯನ್ನು ಗಂಗೆಯಂತೆ ನಾನು ಪಡೆದುಕೊಂಡು[5] ದುಃಖಿತರಾದವರಿಗೆ ಜನನಮರಣಸಮೂಹದ ಧ್ವಂಸವಾಗುವದಕ್ಕೋಸ್ಕರ ಕರುಣೆಯಿಂದ ಹೇಳಿರುತ್ತೇನೆ.

---

1. ಯೋ. ಸೂ. ೨-೩೭ರ ಸೂಚನೆ.

2. ಗಂಗೆಯು ವಿಷ್ಣುವಿನ ಪಾದದಿಂದ ಹುಟ್ಟಿದೆ. ವಿದ್ಯೆಯು ವಿಷ್ಣುವಿನ ಪರಮ ಪದವನ್ನು ಅನುಸರಿಸುತ್ತದೆ.

3. ಗಂಗೆಯು ಪಾಪವನ್ನು ಕಳೆಯುವ ಮೂಲಕ, ವಿದ್ಯೆಯು ನೇರಾಗಿ, ಸಂಸಾರವನ್ನು ಕಳೆಯುತ್ತದೆ.

4. ಶಿವನು ಗಂಗೆಯನ್ನೂ ಶಂಕರಾಭಗವತ್ಪಾದರು ವಿದ್ಯೆಯನ್ನೂ ಯೋಗದಿಂದ ಪಡೆದುಕೊಂಡರು.

5. ಭಗೀರಥನಂತೆ ಶಂಕರನಿಂದ ನಾನು ಪಡೆದುಕೊಂಡೆನು.

## ಗುರುನಮಸ್ಕಾರ

(ಮೂಲ)

**ವೇದಾನ್ತೋದರವರ್ತಿಭಾಸ್ವದಮಲಂ ಧ್ವಾನ್ತಚ್ಛಿದಸ್ಮದ್ಧಿಯೋ**
**ದಿವ್ಯಂ ಜ್ಞಾನಮತೀನ್ದ್ರಿಯೇಽಪಿ ವಿಷಯೇ ವ್ಯಾಹನ್ಯತೇ ನ ಕ್ವಚಿತ್ ।**
**ಯೋ ನೋ ನ್ಯಾಯಶಲಾಕಯೈವ ನಿಖಿಲಂ ಸಂಸಾರಬೀಜಂ ತಮಃ**
**ಪ್ರೋತ್ಸಾರ್ಯಾವಿರಕಾರ್ಷೀದ್ಗುರುಗುರುಃ ಪೂಜ್ಯಾಯ ತಸ್ಮೈ ನಮಃ ॥**

(ಅರ್ಥ)

೭೭. ವೇದಾಂತದ ಹೊಟ್ಟೆಯೊಳಗಿದ್ದು ಹೊಳೆಯುತ್ತಿರುವ ನಿರ್ಮಲವಾದ, ನನ್ನ ಅಂತಃಕರಣದ ತಮಸ್ಸನ್ನು ಕಳೆಯುವ, ಅತೀಂದ್ರಿಯವಿಷಯದಲ್ಲಿಯೂ ಸ್ವಲ್ಪವೂ ತಡೆಯಿಲ್ಲದ ದಿವ್ಯಜ್ಞಾನವನ್ನು, ಯಾವಾತನು ನ್ಯಾಯಶಲಾಕೆಯಿಂದಲೇ ಸಂಸಾರಬೀಜವಾದ ತಮಸ್ಸೆಲ್ಲವನ್ನೂ ಹೋಗಲಾಡಿಸಿ, ಹೊರಪಡಿಸಿದನೋ ಆ ಗುರುಗಳ ಗುರುವಾದ ಪೂಜ್ಯನಿಗೆ ನಮಸ್ಕಾರ !

## ಸಂಬನ್ಧೋಕ್ತಿಯ ಉಪಸಂಹಾರ

(ಮೂಲ)

**ಸಂಬನ್ಧೋಕ್ತಿರಿಯಂ ಸಾಧ್ವೀ ಪ್ರತಿಶ್ಲೋಕಮುದಾಹೃತಾ ।**
**ನೈಷ್ಕರ್ಮ್ಯಸಿದ್ಧೇರ್ಜ್ಞಾತ್ವೇಮಾಂ ವ್ಯಾಖ್ಯಾತಾಸೌ ಭವೇದ್ಧ್ರುವಮ್ ॥**

(ಅರ್ಥ)

೭೮. ಪ್ರತಿಶ್ಲೋಕಕ್ಕೂ ಹೇಳಿರುವ ಈ ಉತ್ತಮವಾದ ಸಂಬನ್ಧೋಕ್ತಿಯಿದೆಯಲ್ಲ, ಇದನ್ನು ಅರಿತುಕೊಂಡವನು ನೈಷ್ಕರ್ಮ್ಯಸಿದ್ಧಿಗೆ ನಿಶ್ಚಯವಾಗಿ ವ್ಯಾಖ್ಯಾತೃವಾಗುವನು.

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಚ್ಛಙ್ಕರ
ಭಗವತ್ಪಾದಶಿಷ್ಯ ಶ್ರೀ ಸುರೇಶ್ವರಾಚಾರ್ಯವಿರಚಿತಾಯಾಂ
ನೈಷ್ಕರ್ಮ್ಯಸಿದ್ಧೌ ಸಸಂಬನ್ಧೋಕ್ತೌ
ಚತುರ್ಥೋಽಧ್ಯಾಯಃ

# ಶ್ಲೋಕಗಳ ವರ್ಣಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಈ ಗ್ರಂಥದ ಅಧ್ಯಾಯ ಮತ್ತು ಶ್ಲೋಕಗಳನ್ನು ಸೂಚಿಸುವವು. ಒಂದು ಪ್ರತೀಕದ ಮುಂದೆ ಕಂಸದಲ್ಲಿ (ವಾ) ಎಂದಿದ್ದರೆ ಆ ಶ್ಲೋಕವು ಬೃಹದಾರಣ್ಯಕವಾರ್ತಿಕದಲ್ಲಿದೆ ಎಂದರ್ಥ. (ಉ) ಎಂದರೆ ಉಪದೇಶಸಾಹಸ್ರಿ, (ಗೌ) ಎಂದರೆ ಗೌಡಪಾದರವರ ಮಾಂಡೂಕ್ಯಕಾರಿಕೆ.


| | |
|---|---|
| ಅಕುರ್ವತಃ ಕ್ರಿಯಾ ಕಾಮ್ಯಾಃ | ೧-೧೦ |
| ಅಗ್ನಿಃ ಸಮ್ಯಗಧಿತೇಽಸೌ | ೩-೯೭ |
| ಅಜ್ಞಾತ ಏವ ಸರ್ವೋಽರ್ಥಃ | ೩-೭ |
| ಅಜ್ಞಾತಪುರುಷಾರ್ಥತ್ವಾತ್ | ೩-೮೦ |
| ಅಜ್ಞಾನಮನಿರಾಕುರ್ವತ್ (ವಾ) | ೧-೬೫ |
| ಅಜ್ಞಾನಹಾನಮಾತ್ರತ್ವಾತ್ | ೧-೨೪ |
| ಅತಃ ಸರ್ವಾಶ್ರಮಾಣಾಂ ತು | ೧-೯೯ |
| ಅತಃ ಸರ್ವಾಶ್ರಮಾಣಾಂ ಹಿ | ೧-೨೧ |
| ಅತಿದುಃಸ್ಥೋಽಪ್ರಬೋಧೋ | ೩-೧೧೦ |
| ಅತೀತಾನಾಗತೇಹತ್ಯಾನ್ | ೨-೭೦ |
| ಅತ್ರಾಭಿದಧ್ಮಹೇ ದೋಷಾನ್ | ೧-೨೩ |
| ಅಥಾಧ್ಯಾತ್ಮಂ ಪುನರ್ಯಾಯಾತ್ | ೧-೭೬ |
| ಅದ್ಧಾತಮಮನಾದೃತ್ಯ | ೩-೧೧೭ |
| ಅಧರ್ಮಾಜ್ಜಾಯತೇಽಜ್ಞಾನಂ | ೪-೬೩ |
| ಅಧಿಚೋದನಂಯ ಆಮ್ನಾಯಃ | ೧-೯೧ |
| ಅನಾತ್ಮಜ್ಞಸ್ತಥೈವಾಯಂ | ೪-೩೭ |
| ಅನಾತ್ಮತ್ವಂ ಸ್ವತಃಸಿದ್ಧಂ | ೪-೪ |
| ಅನಾದೃತ್ಯ ಶ್ರುತಿಂ ಮೋಹಾತ್ | ೩-೩೪ |
| ಅನಾಲಿಙ್ಗಿತಸಾಮಾನ್ಯೌ | ೩-೭೫ |
| ಅನುಚ್ಛಿನ್ನಬುಭುತ್ಸಶ್ಚ | ೪-೧೦ |
| ಅನುತ್ಸಾರಿತನಾನಾತ್ವಂ | ೧-೬೮ |
| ಅನುಪಕ್ರಿಯಮಾಣತ್ವಾತ್ | ೩-೬೧ |
| ಅನುಮಾನಪ್ರದೀಪೇನ | ೪-೧೫ |
| ಅನುಮಾನಾದಯಂಭಾವಾತ್ | ೩-೧೧೩ |
| ಅನೇನ ಗುಣಲೇಶೇನ | ೩-೧೦೨ |
| ಅನ್ತರೇಣ ವಿಧಿಂ ಮೋಹಾತ್ | ೩-೧೬ |
| ಅನ್ಯಥಾಗೃಹ್ಣತಃ ಸ್ವಪ್ನೋ (ಗೌ) | ೪-೪೨ |
| ಅನ್ಯಸ್ಯಾನ್ಯಾತ್ಮತಾಪ್ರಾಪ್ತೌ | ೧-೭೧ |
| ಅನ್ವಯವ್ಯತಿರೇಕಾಭ್ಯಾಂ | ೨-೯ |
| ಅನ್ವಯವ್ಯತಿರೇಕಾಭ್ಯಾಂ | ೩-೨೩ |
| ಅನ್ವಯವ್ಯತಿರೇಕಾಭ್ಯಾಂ (ಉ) | ೪-೩೨ |
| ಅನ್ವಯವ್ಯತಿರೇಕೌ ಹಿ (ಉ) | ೪-೨೨ |
| ಅಪವಿದ್ಧದ್ವಯೋಽಪ್ಯೇವಂ | ೩-೬೫ |
| ಅಪಶ್ಯನ್ ಪಶ್ಯತೀಂ ಬುದ್ಧಿಮ್ | ೨-೭೧ |
| ಅಪಹಾರೋಯಥಾ ಭಾನೋಃ | ೨-೪೯ |
| ಅಪಿ ಪ್ರತ್ಯಕ್ಷಬಾಧೇನ | ೩-೯೫ |
| ಅಪೂರ್ವಾಧಿಗಮಂ ಕುರ್ವತ್ | ೩-೮೩ |
| ಅಪ್ರಮೋತ್ಥಂ ಪ್ರಮೋತ್ಥೇನ | ೨-೧೦೪ |
| ಅಭೂತಾಭಿನಿವೇಶೇನ | ೨-೫೧ |
| ಅಭ್ಯಾಸೋಪಚಯಾದ್‌ಬುದ್ಧೇಃ | ೩-೯೦ |
| ಅಭ್ಯಾಸೋಪಚಿತಾ ಕೃತ್ಸ್ನಂ | ೩-೯೧ |
| ಅಭ್ರಯಾನಂ ಯಥಾ (ವಾ) | ೨-೧೦೧ |
| ಅಮಾನಿತ್ವಾದಿನಿಷ್ಠೋ ಯಃ | ೪-೬೮ |
| ಅಮುಹ್ಯಮಾನೋಮುಹ್ಯನ್ತೀಂ | ೨-೭೩ |
| ಅಯಥಾವಸ್ತ್ವವಿದ್ಯಾ ಸ್ಯಾತ್ | ೧-೫೬ |
| ಅಲಬ್ಧಾತಿಶಯಂ ಯಸ್ಮಾತ್ | ೧-೨ |
| ಅವಗತ್ಯಾತ್ಮನೋ ಯಸ್ಮಾತ್ | ೨-೯೫ |
| ಅವಸ್ಥಾದೇಶಕಾಲಾದಿ- | ೨-೮೯ |

# ಶ್ಲೋಕಗಳ ವರ್ಣಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಈ ಗ್ರಂಥದ ಅಧ್ಯಾಯ ಮತ್ತು ಶ್ಲೋಕಗಳನ್ನು ಸೂಚಿಸುವವು. ಒಂದು ಪ್ರತೀಕದ ಮುಂದೆ ಕಂಸದಲ್ಲಿ (ವಾ) ಎಂದಿದ್ದರೆ ಆ ಶ್ಲೋಕವು ಬೃಹದಾರಣ್ಯಕವಾರ್ತಿಕದಲ್ಲಿದೆ ಎಂದರ್ಥ. (ಉ) ಎಂದರೆ ಉಪದೇಶಸಾಹಸ್ರಿ, (ಗೌ) ಎಂದರೆ ಗೌಡಪಾದರವರ ಮಾಂಡೂಕ್ಯಕಾರಿಕೆ.


| | |
|---|---|
| ಅಕುರ್ವತಃ ಕ್ರಿಯಾ ಕಾಮ್ಯಾಃ | ೧-೧೦ |
| ಅಗ್ನಿಃ ಸಮ್ಯಗಧಿತೇಽಸೌ | ೩-೯೭ |
| ಅಜ್ಞಾತ ಏವ ಸರ್ವೋಽರ್ಥಃ | ೩-೭ |
| ಅಜ್ಞಾತಪುರುಷಾರ್ಥತ್ವಾತ್ | ೩-೮೦ |
| ಅಜ್ಞಾನಮನಿರಾಕುರ್ವತ್ (ವಾ) | ೧-೬೫ |
| ಅಜ್ಞಾನಹಾನಮಾತ್ರತ್ವಾತ್ | ೧-೨೪ |
| ಅತಃ ಸರ್ವಾಶ್ರಮಾಣಾಂ ತು | ೧-೯೯ |
| ಅತಃ ಸರ್ವಾಶ್ರಮಾಣಾಂ ಹಿ | ೧-೨೧ |
| ಅತಿದುಃಸ್ಥೋಽಪ್ರಬೋಧೋ | ೩-೧೧೦ |
| ಅತೀತಾನಾಗತೇಹತ್ಯಾನ್ | ೨-೭೦ |
| ಅತ್ರಾಭಿದಧ್ಮಹೇ ದೋಷಾನ್ | ೧-೨೩ |
| ಅಥಾಧ್ಯಾತ್ಮಂ ಪುನರ್ಯಾಯಾತ್ | ೧-೭೬ |
| ಅದ್ಧಾತಮಮನಾದೃತ್ಯ | ೩-೧೧೭ |
| ಅಧರ್ಮಾಜ್ಜಾಯತೇಽಜ್ಞಾನಂ | ೪-೬೩ |
| ಅಧಿಚೋದನಮ್ಯಾಮ್ನಾಯಃ | ೧-೯೧ |
| ಅನಾತ್ಮಜ್ಞಸ್ತಥೈವಾಯಂ | ೪-೩೭ |
| ಅನಾತ್ಮತ್ವಂ ಸ್ವತಃಸಿದ್ಧಂ | ೪-೪ |
| ಅನಾದೃತ್ಯ ಶ್ರುತಿಂ ಮೋಹಾತ್ | ೩-೩೪ |
| ಅನಾಲಿಙ್ಗಿತಸಾಮಾನ್ಯೌ | ೩-೭೫ |
| ಅನುಚ್ಛಿನ್ನಬುಭುತ್ಸಶ್ಚ | ೪-೧೦ |
| ಅನುತ್ಸಾರಿತನಾನಾತ್ವಂ | ೧-೬೮ |
| ಅನುಪಕ್ರಿಯಮಾಣತ್ವಾತ್ | ೩-೬೧ |
| ಅನುಮಾನಪ್ರದೀಪೇನ | ೪-೧೫ |
| ಅನುಮಾನಾದಯಂಭಾವಾತ್ | ೩-೧೧೩ |
| ಅನೇನ ಗುಣಲೇಶೇನ | ೩-೧೦೨ |
| ಅನ್ತರೇಣ ವಿಧಿಂ ಮೋಹಾತ್ | ೩-೧೬ |
| ಅನ್ಯಥಾಗೃಹ್ಣತಃ ಸ್ವಪ್ನೋ (ಗೌ) | ೪-೪೨ |
| ಅನ್ಯಸ್ಯಾನ್ಯಾತ್ಮತಾಪ್ರಾಪ್ತೌ | ೧-೭೧ |
| ಅನ್ವಯವ್ಯತಿರೇಕಾಭ್ಯಾಂ | ೨-೯ |
| ಅನ್ವಯವ್ಯತಿರೇಕಾಭ್ಯಾಂ | ೩-೨೩ |
| ಅನ್ವಯವ್ಯತಿರೇಕಾಭ್ಯಾಂ (ಉ) | ೪-೩೨ |
| ಅನ್ವಯವ್ಯತಿರೇಕೌ ಹಿ (ಉ) | ೪-೨೨ |
| ಅಪವಿದ್ಧದ್ವಯೋಽಪ್ಯೇವಂ | ೩-೬೫ |
| ಅಪಶ್ಯನ್ ಪಶ್ಯತೀಂ ಬುದ್ಧಿಮ್ | ೨-೭೧ |
| ಅಪಹಾರೋಯಥಾ ಭಾನೋಃ | ೨-೪೯ |
| ಅಪಿ ಪ್ರತ್ಯಕ್ಷಬಾಧೇನ | ೩-೯೫ |
| ಅಪೂರ್ವಾಧಿಗಮಂ ಕುರ್ವತ್ | ೩-೮೩ |
| ಅಪ್ರಮೋತ್ಥಂ ಪ್ರಮೋತ್ಥೇನ | ೨-೧೦೪ |
| ಅಭೂತಾಭಿನಿವೇಶೇನ | ೨-೫೧ |
| ಅಭ್ಯಾಸೋಪಚಯಾದ್ಬುದ್ಧೇಃ | ೩-೯೦ |
| ಅಭ್ಯಾಸೋಪಚಿತಾ ಕೃತ್ಸ್ನಂ | ೩-೯೧ |
| ಅಭ್ರಯಾನಂ ಯಥಾ (ವಾ) | ೨-೧೧೧ |
| ಅಮಾನಿತ್ವಾದಿನಿಷ್ಠೋ ಯಃ | ೪-೬೮ |
| ಅಮುಹ್ಯಮಾನೋಮುಹ್ಯನ್ತೀಂ | ೨-೭೩ |
| ಅಯಥಾವಸ್ತ್ವವಿದ್ಯಾ ಸ್ಯಾತ್ | ೧-೫೬ |
| ಅಲಬ್ಧಾತಿಶಯಂ ಯಸ್ಮಾತ್ | ೧-೨ |
| ಅವಗತ್ಯಾತ್ಮನೋ ಯಸ್ಮಾತ್ | ೨-೯೫ |
| ಅವಸ್ಥಾದೇಶಕಾಲಾದಿ- | ೨-೮೯ |

| | |
|---|---|
| ಅವಿಕ್ರಿಯಸ್ಯ ಭೋಕ್ತೃತ್ವಂ | ೨-೬೩ |
| ಅವಿದ್ಯಾನಾಶಮಾತ್ರಂ ತು | ೨-೧೧೫ |
| ಅವಿದ್ಯಾನಿದ್ರಯಾ ಸೋಽಯಂ | ೩-೧೧೫ |
| ಅವಿದ್ಯಾಬದ್ಧಚಕ್ಷು (ಉ) | ೪-೩೫ |
| ಅವಿವಿಚ್ಯೋಭಯಂ ವಕ್ತಿ (ಉ) | ೪-೨೦ |
| ಅಸತ್ಯೇ ವರ್ತ್ಮನಿ ಸ್ಥಿತ್ವಾ | ೩-೧೦೪ |
| ಅಸಾಧಾರಣಾಂಸ್ತಯೋ | ೪-೫ |
| ಅಹಂವೃತ್ತ್ಯೈವ ತದ್ಬ್ರಹ್ಮ | ೩-೪೩ |
| ಅಹಂಶಬ್ದಸ್ಯ ಯಾ ನಿಷ್ಠಾ (ಉ) | ೪-೨೫ |
| ಅಹಂ ದುಃಖೀ ಸುಖೀ ಚೇತಿ | ೩-೪೬ |
| ಅಹಂ ಧರ್ಮಸ್ತ್ವಭಿನ್ನಶ್ಚೇತ್ | ೨-೨೮ |
| ಅಹಮಃ ಪ್ರತ್ಯಗಾತ್ಮಾರ್ಥಃ | ೩-೪೦ |
| ಅಹಂ ಮಮತ್ವಯತ್ನೇಚ್ಛಾಃ | ೨-೨೨ |
| ಅಹಂಮಿಥ್ಯಾಭಿಶಾಪೇನ | ೨-೧೧೬ |
| ಅಹೋಧಾರ್ಷ್ಟ್ಯಮವಿದ್ಯಾಯಾಃ | ೩-೧೧೧ |
| ಆಗಮಾಪಾಯಿನಿಷ್ಠತ್ವಾತ್ | ೨-೩೫ |
| ಆಗಮಾಪಾಯಹೇತುಭ್ಯಾಂ | ೩-೨೨ |
| ಆತ್ಮನಶ್ಚೇದಹಂ ಧರ್ಮಃ | ೨-೩೨ |
| ಆತ್ಮನಶ್ಚೇನ್ನಿವಾರ್ಯನ್ತೇ | ೨-೧೧೪ |
| ಆತ್ಮನಾ ಚಾವಿನಾಭಾವಂ | ೨-೫೬ |
| ಆತ್ಮನ್ಯೈವೇತ್ಯುಪಶ್ರುತ್ಯ | ೩-೪೨ |
| ಆತ್ಮಾನಾತ್ಮಾ ಚ ಲೋಕೇಽಸ್ಮಿನ್ | ೪-೩ |
| ಆಪ್ರಬೋಧಾದ್ಯಥಾಸಿದ್ಧಿಃ | ೪-೫೦ |
| ಆಮ್ನಾಯಸ್ಯ ಕ್ರಿಯಾರ್ಥತ್ವಾತ್ | ೧-೧೭ |
| ಆಮ್ರಾದೇಃ ಪರಿಣಾಮಿತ್ವಾತ್ | ೨-೩೪ |
| ಆರುರುಕ್ಷೋರ್ಮುನೇ- | ೧-೫೧ |
| ಆರ್ತಮನ್ಯದ್ದೃಶೇಃ | ೨-೪೨ |
| ಇತಿ ಹೃಷ್ಟಧಿಯಾಂ ವಾಚಃ | ೧-೨೨ |
| ಇತ್ಯೇವಂ ಚೋದಯೇದ್ | ೩-೧೦೯ |
| ಇತ್ಯೋಮಿತ್ಯವಬುದ್ಧಾತ್ಮಾ | ೨-೧೧೯ |
| ಇದಂ ಚೇದನೃತಂ | ೩-೧೧೮ |
| ಇದಂ ಜ್ಞಾನಮಹಂ ಜ್ಞಾತಾ | ೪-೪೫ |
| ಇದಂಜ್ಞಾನಂ ಭವೇಜ್ಜ್ಞಾತುಃ | ೩-೬೦ |
| ಇದಮಿತ್ಯೇವ ಬಾಹ್ಯೇಽರ್ಥೇ | ೪-೬ |
| ಇಮಂ ಗ್ರನ್ಥಮುಪಾದಿತ್ಸುಃ | ೪-೭೦ |
| ಇಮಂ ಪ್ರಾಶ್ನಿಕಮುದ್ದಿಶ್ಯ | ೨-೫೯ |
| ಇಮಮರ್ಥಂ ಪುರಸ್ಕೃತ್ಯ | ೪-೧೭ |
| ಉತ್ಪತ್ತಿಸ್ಥಿತಿನಾಶೇಷು | ೨-೧೧೧ |
| ಉತ್ಪತ್ತಿಸ್ಥಿತಿಭಙ್ಗೇಷು | ೨-೭೯ |
| ಉತ್ಪನ್ನಾತ್ಮಪ್ರಬೋಧಸ್ಯ | ೪-೬೯ |
| ಉತ್ಪಾದ್ಯಮಾಪ್ಯಂ (ವಾ) | ೧-೫೩ |
| ಉದ್ದಿಶ್ಯಮಾನಂ ವಾಕ್ಯಸ್ಥಂ | ೩-೨೫ |
| ಊರ್ಧ್ವಂ ಗಚ್ಛತಿ ಧೂಮೇ ಖಂ | ೨-೬೨ |
| ಋತೇ ಜ್ಞಾನಂ ನ ಸನ್ತ್ಯರ್ಥಾಃ | ೨-೯೭ |
| ಏಕೇನ ವಾ ಭವೇನ್ಮುಕ್ತಿಃ | ೧-೨೫ |
| ಏವಂ ವಿಜ್ಞಾತವಾಕ್ಯಾರ್ಥೇ (ಉ) | ೪-೨೪ |
| ಏವಂ ಗೌಡೈರ್ದ್ರಾವಿಡೈರ್ನಃ | ೪-೪೪ |
| ಏವಂ ಚಙ್ಕ್ರಮ್ಯಮಾಣೋ | ೧-೪೨ |
| ಏವಂ ಜ್ಞಾನವತೋ ನಾಸ್ತಿ | ೪-೪೯ |
| ಏವಂ ತತ್ತ್ವಮಸೀತ್ಯಸ್ಮಾತ್ | ೩-೭೦ |
| ಏವಮೇತದ್ಧಿರುಗ್ಜ್ಞೇಯಂ | ೨-೪೪ |
| ಏಷ ಆತ್ಮಾ ಸ್ವಯಂಜ್ಯೋತಿಃ (ವಾ) | ೩-೪೧ |
| ಏಷ ಸರ್ವಧಿಯಾಂ ನೃತ್ತಂ | ೨-೫೮ |
| ಐಕಾತ್ಮ್ಯಪ್ರತಿಪತ್ತಿರ್ಯಾ | ೧-೭ |
| ಕರ್ಮಣೋಽಙ್ಗಾಙ್ಗಿಭಾವೇನ | ೧-೨೦ |
| ಕರ್ಮಪ್ರಕರಣಾಕಾಙ್ಕ್ಷಿ (ವಾ) | ೧-೬೩ |
| ಕರ್ಮಾಜ್ಞಾನಸಮುತ್ಥತ್ವಾತ್ | ೧-೩೫ |
| ಕಲ್ಪಿತಾನಾಮವಸ್ತುತ್ವಾತ್ | ೨-೫೦ |
| ಕಾಮ್ಯಕರ್ಮಫಲಂ ತಸ್ಮಾತ್ | ೧-೧೧ |
| ಕಾರ್ಯಕಾರಣಬದ್ಧೌ ತೌ (ಗೌ) | ೪-೪೧ |
| ಕುತೋಽವಿದ್ಯೇತಿ ಚೋದ್ಯಂ | ೩-೧೧೬ |
| ಕುರ್ವನ್ನೇವೇಹ ಕರ್ಮಾಣಿ | ೧-೧೮ |

ಕೂಟಸ್ಥಬೋಧತೋಽದ್ವೈತಂ ೩-೧೫
ಕೂಟಸ್ಥಬೋಧಪ್ರತ್ಯಕ್ತ್ವಂ ೩-೧೧
ಕೃತ್ಸ್ನಾನಾತ್ಮನಿವೃತ್ತೌ ಚ ೨-೨
ಕ್ಷಯೋ ನಿತ್ಯೇನ ತೇಷಾಂ ಚೇತ್ ೧-೮೨
ಕ್ಷುಧಯಾ ಪೀಡ್ಯಮಾನೋ (ಉ) ೪-೬೬
ಖಾನಿಲಾಗ್ನ್ಯಬ್ಧರಿತ್ರ್ಯನ್ತಂ ೧-೧
ಗುರೂಕ್ತೋ ವೇದರಾದ್ಧಾನ್ತಃ ೧-೫
ಗೃಹೀತಾಹಂಪದಾರ್ಥಶ್ಚೇತ್ ೩-೪೪
ಗ್ರಾಹಕಗ್ರಹಣಗ್ರಾಹ್ಯ- ೨-೧೦೮
ಘಟಬುದ್ಧೇರ್ಘಟಾಚ್ಚಾರ್ಥಾತ್ ೨-೧೦೦
ಘಟಾದಯೋ ಯಥಾ ಲಿಙ್ಗಂ ೩-೫೬
ಘಟಾದಿವಚ್ಚ ದೃಶ್ಯತ್ವಾತ್ ೨-೧೯
ಚಕ್ಷುರ್ನ ವೀಕ್ಷತೇ ಶಬ್ದಮ್ ೪-೧೨
ಚಣ್ಡಾಲಬುದ್ಧೇರ್ಯದ್ದ್ರಷ್ಟೃ ೨-೮೮
ಚತುರ್ಭಿರುಹ್ಯತೇ ಯತ್ತತ್ ೨-೨೦
ಚಿನ್ನಿಭೇಯಮಹಂವೃತ್ತಿಃ ೩-೧೦೦
ಛಿತ್ತ್ವಾ ತ್ಯಕ್ತೇನ ಹಸ್ತೇನ (ಉ) ೪-೨೯
ಜಾನೀಯಾಚ್ಚೇತ್ ೩-೧೨೩
ಜಿಘ್ರಾಣೇಮಮಹಂ ಗನ್ಧಂ (ವಾ) ೩-೩೯
ಜಿಜ್ಞಾಸೋರ್ದಶಮಂ ಯದ್ವತ್ ೩-೬೮
ಜ್ಞಾತ್ವೈವಾತ್ಮಾ ಸದಾ (ಉ) ೪-೨೯
ಜ್ಞಾತ್ವಾ ಯಥೋದಿತಂ ೪-೭೨
ಜ್ಞಾನಂ ಯಸ್ಯ ನಿಜಂ ರೂಪಂ ೩-೧೧೨
ಜ್ಞಾನಾತ್ ಫಲೇ ಹ್ಯವಾಪ್ತೇ ೧-೯೦
ಜ್ಞೇಯಾಭಿನ್ನಮಿದಂ ಯಸ್ಮಾತ್ ೪-೫೪
ತತ್ ತ್ವಮರ್ಥೇನ ಸಂಪೃಕ್ತೌ ೩-೭೮
ತತ್ತ್ವಮಸ್ಯಾದಿವಾಕ್ಯಾನಾಂ ೧-೯೮
ತತ್ಪದಂ ಪ್ರಕೃತಾರ್ಥಂ ಸ್ಯಾತ್ ೩-೨
ತಥಾಪದಪದಾರ್ಥೌ ಚ ೨-೮
ತದರ್ಥಯೋಸ್ತು ನಿಷ್ಠಾತ್ಮಾ ೩-೭೬
ತದಿತ್ಯೇತತ್ ಪದಂ ಲೋಕೇ ೩-೨೩
ತದೇತದದ್ವಯಂ ಬ್ರಹ್ಮ ೨-೯೩
ತದೋವಿಶೇಷಣಾರ್ಥತ್ವಂ ೩-೨೬
ತದ್ವತ್ ಸೂಕ್ಷ್ಮೇ ತಥಾ ಸ್ಥೂಲೇ ೨-೧೭
ತಮೋಽಙ್ಗತ್ವಂ ಯಥಾ ಭಾನೋಃ ೧-೭೯
ತಮೋಽಭಿಭೂತಚಿತ್ತೋ ಹಿ ೨-೩೧
ತರೋರುತ್ಖಾತಮೂಲಸ್ಯ ೪-೬೧
ತಸ್ಮಾತ್ತ್ಯಕ್ತೇನ ಹಸ್ತೇನ (ಉ) ೪-೨೮
ತಸ್ಮಾದ್ದುಃಖೋದಧೇರ್ಹೇತೋಃ ೧-೩೭
ತಸ್ಮಾನ್ಮುಮುಕ್ಷುಭಿಃ ಕಾರ್ಯಂ ೧-೫೦
ತಸ್ಮೈವಂ ದುಃಖತಪ್ತಸ್ಯ ೧-೪೫
ತೃಷ್ಣಾನಿಷ್ಠೀವನೈರ್ನಾತ್ಮಾ ೩-೪೮
ತ್ಯಕ್ತಕೃತ್ಸ್ನೇದಮರ್ಥತ್ವಾತ್ ೪-೯
ತ್ವಮರ್ಥಸ್ಯಾವಬೋಧಾಯ ೩-೧೨೬
ತ್ವಮಿತ್ಯಪಿ ಪದಂ ತದ್ವತ್ ೩-೨೪
ತ್ವಮಿತ್ಯೇತದ್ವಿಹಾಯಾನ್ಯತ್ ೩-೯೮
ದಗ್ಧಾಖಿಲಾಧಿಕಾರಶ್ಚೇತ್ ೧-೪೦
ದಗ್ಧೃತ್ವಂ ಚ ಯಥಾ ವಹ್ನೇಃ ೨-೧೦೨
ದಣ್ಡಾವಸಾನನಿಷ್ಠಃ ಸ್ಯಾತ್ ೪-೩೮
ದಶಮೋಽಸ್ಮೀತಿ ವಾಕ್ಯೋತ್ಥಾ ೩-೬೯
ದಾಹ್ಯದಾಹಕತೈಕತ್ರ ೩-೫೯
ದಿದೃಕ್ಷಿತಪರಿಚ್ಛಿನ್ನ ೩-೪೯
ದುಃಖರಾಶೇರ್ವಿಚಿತ್ರಸ್ಯ ೨-೧೦೩
ದುಃಖಿತಾವಗತೇಶ್ಚೇತ್ ಸ್ಯಾತ್ ೩-೮೭
ದುಃಖೀ ಯದಿ (ವಾ) ೨-೭೬
ದುಃಖ್ಯಸ್ಮೀತ್ಯಪಿ (ವಾ) ೩-೯೨
ದುರಿತಕ್ಷಪಣಾರ್ಥತ್ವಾತ್ ೧-೨೬
ದೃಗೇಕಾ ಸರ್ವಭೂತೇಷು ೨-೪೭
ದೃಶ್ಯತ್ವಾದಹಮಿತ್ಯೇಷ (ಉ) ೪-೩೦
ದೃಶ್ಯತ್ವಾದ್ಘಟವದ್ದೇಹೋ ೩-೫೪
ದೃಶ್ಯಾಃ ಶಬ್ದಾದಯಃ ಕ್ಲಿಪ್ತಾಃ ೨-೪೬
ದೃಶ್ಯಾನುರಕ್ತಂ ತದ್ದ್ರಷ್ಟೃ ೨-೫೩

| | |
|---|---|
| ದೃಷ್ಟೇರ್ದ್ರಷ್ಟಾರಮಾತ್ಮಾನಂ | ೨-೯೨ |
| ದೇಶಕಾಲಾದ್ಯಸಂಬನ್ಧಾತ್ (ವಾ) | ೪-೫೮ |
| ದೇಹಾದಿವ್ಯವಧಾನತ್ವಾತ್ | ೩-೨೯ |
| ದ್ರಷ್ಟಾಪಿ ಯದಿ ದೃಶ್ಯಾಯಾಃ | ೨-೪೦ |
| ದ್ರಷ್ಟೃತ್ವಂ ದೃಶ್ಯತಾ ಚೈವ | ೨-೩೯ |
| ದ್ರಷ್ಟೃತ್ವೇನೋಪಯುಕ್ತತ್ವಾತ್ | ೨-೨೭ |
| ದ್ವಿಷನ್ತೀಮದ್ವಿಷನ್ನಾತ್ಮಾ | ೨-೭೨ |
| ಧರ್ಮಧರ್ಮಿತ್ವಭೇದೋಽಸ್ಯಾಃ | ೩-೧೩ |
| ಧರ್ಮಿಣಶ್ಚಾವಿರುದ್ಧತ್ವಾತ್ | ೨-೩೮ |
| ಧಾವೇದಿತಿ ನ ದಾನಾರ್ಥೇ | ೧-೯೭ |
| ಧೀವನ್ನಾಪೇಕ್ಷತೇ ಸಿದ್ಧಂ | ೨-೧೧೦ |
| ಧೀವಿಕ್ರಿಯಾ ಸಹಸ್ರಾಣಾಂ | ೪-೧೩ |
| ನ ಕಸ್ಯಾಂ ಚಿದವಸ್ಥಾಯಾಂ | ೩-೧೪ |
| ನ ಕೃತ್ಸ್ನಕಾಮ್ಯಸಂತ್ಯಾಗೋ | ೧-೮೧ |
| ನ ಖ್ಯಾತಿಲಾಭಪೂಜಾರ್ಥಂ | ೧-೬ |
| ನ ಚಾಧ್ಯಾತ್ಮಾಭಿಮಾನೋಽಪಿ | ೧-೭೫ |
| ನ ಚಾಮುಮುಕ್ಷೋರಸ್ತೀಹ | ೨-೭ |
| ನ ಚೇದನುಭವೋಽತಃ ಸ್ಯಾತ್ | ೩-೧೧೯ |
| ನ ತಾವದ್ಯೋಗ ಏವಾಸ್ತಿ | ೧-೯೫ |
| ನ ಪರೀಪ್ಸಾಂ ಜಿಹಾಸಾಂ (ವಾ) | ೧-೩೦ |
| ನ ಪೃಥಙ್ಜ್ಞಾತ್ಮನಾ ಸಿದ್ಧಿಃ | ೨-೪೫ |
| ನ ಪ್ರಕಾಶಕ್ರಿಯಾ ಕಾಚಿತ್ (ವಾ) | ೨-೬೭ |
| ನರಕಾದ್ಭೀರ್ಯಥಾಸ್ಯಾಭೂತ್ | ೧-೪೬ |
| ನರಾಭಿಮಾನಿನಂ ತಸ್ಮಾತ್ | ೧-೯೬ |
| ನರ್ತೇಸ್ಯಾದ್ವಿಕ್ರಿಯಾಂ | ೨-೭೭ |
| ನವಬುದ್ಧ್ಯಪಹಾರಾದ್ಧಿ (ಉ) | ೪-೩೪ |
| ನವಸಂಖ್ಯಾಹೃತಜ್ಞಾನೋ | ೩-೬೪ |
| ನ ವಿದನ್ತ್ಯಾತ್ಮನಃ ಸತ್ತಾಂ | ೨-೧೦೬ |
| ನ ವ್ಯಾವೃತ್ತಿರ್ಯಥಾ | ೩-೧೧೪ |
| ನ ಸ್ವಯಂ ಸ್ವಸ್ಯ ನಾನಾತ್ವಂ | ೨-೧೧೨ |
| ನ ಹಾನಂ ಹಾನಮಾತ್ರೇಣ | ೩-೨೧ |
| ನ ಹಿ ನಾಮ್ನಾಸ್ತಿ ಸಂಬನ್ಧೋ | ೩-೧೦೬ |
| ನಾಜ್ಞಾಸಿಷಮಿತಿ ಪ್ರಾಹ | ೨-೫೪ |
| ನಾತ್ಮನಾ ನ ತದಂಶೇನ | ೨-೨೬ |
| ನಾದ್ರಾಕ್ಷಮಹಮಿತ್ಯಸ್ಮಿನ್ (ಉ) | ೪-೨೩ |
| ನಾಮಾದಿಭ್ಯಃ ಪರೋ ಭೂಮಾ | ೨-೫೭ |
| ನಾಮಾದಿಭ್ಯೋನಿರಾಕೃತ್ಯ | ೩-೧೨೦ |
| ನಾಯಂ ಶಬ್ದಃ | ೩-೮೪ |
| ನಾಲುಪ್ತದೃಷ್ಟೇರ್ದೃಶ್ಯತ್ವಂ | ೨-೪೧ |
| ನಾವಿರಕ್ತಸ್ಯ ಸಂಸಾರಾತ್ | ೨-೬ |
| ನಾವಿರಕ್ತಾಯ ಸಂಸಾರಾತ್ | ೪-೭೧ |
| ನಾಸನ್ನು ಪಾಯೋ | ೩-೧೦೮ |
| ನಾಹಂಗ್ರಾಹ್ಯೇ ನ ತದ್ಧೀನೇ | ೨-೫ |
| ನಾಹಂ ನ ಚ ಮಮಾತ್ಮತ್ವಾತ್ | ೨-೧೧೭ |
| ನಿತ್ಯಮುಕ್ತತ್ವವಿಜ್ಞಾನಂ (ಉ) | ೪-೩೧ |
| ನಿತ್ಯಾನುಷ್ಠಾನತಶ್ಚೈನಂ | ೧-೧೩ |
| ನಿತ್ಯಾಂ ಸಂವಿದಮಾಶ್ರಿತ್ಯ | ೨-೧೧೫ |
| ನಿತ್ಯಾವಗತಿರೂಪತ್ವಾತ್ | ೨-೧೧೩ |
| ನಿತ್ಯಾವಗತಿರೂಪತ್ವಾತ್ | ೩-೪೭ |
| ನಿಯಮಃ ಪರಿಸಂಖ್ಯಾ ವಾ | ೧-೮೮ |
| ನಿರಪೇಕ್ಷಶ್ಚ ಸಾಪೇಕ್ಷಾಂ | ೨-೭೫ |
| ನಿರಸ್ತಸರ್ವಕರ್ಮಾಣಃ | ೪-೭೩ |
| ನಿರಾಕುರ್ಯಾತ್ | ೩-೮೯ |
| ನಿರ್ದುಃಖಿತ್ವಂ ತ್ವಮರ್ಥಸ್ಯ | ೩-೧೦ |
| ನಿರ್ದುಃಖಿತ್ವಂ ಸ್ವತಃಸಿದ್ಧಂ | ೩-೯೪ |
| ನಿವೃತ್ತ ಸರ್ಪಃ ಸರ್ಪೋತ್ಥಂ | ೪-೬೦ |
| ನಿವೃತ್ತಾಯಾಮಹಂಬುದ್ಧೌ | ೨-೩೦ |
| ನಿಷಿದ್ಧಕಾಮ್ಯಯೋಸ್ತ್ಯಾಗಃ | ೧-೨೮ |
| ನೇಹಾತ್ಮವಿನ್ಮದನ್ಯೋಽಸ್ತಿ | ೪-೫೩ |
| ನೋಷ್ಣಿಮಾನಂ ದಹತ್ಯಗ್ನಿಃ | ೨-೨೩ |
| ನ್ಯಾಯಃ ಪುರೋದಿತೋಽಸ್ಮಾಭಿಃ | ೪-೭ |
| ನ್ಯಾಯಸಿದ್ಧಮತೋ ವಕ್ತಿ | ೩-೫೦ |

| | |
|---|---|
| ಪದಾನ್ಯುದ್ಧೃತ್ಯವಾಕ್ಯೇಭ್ಯೋ | ೩-೩೧ |
| ಪರಮಾತ್ಮಾನುಕೂಲೇನ | ೧-೭೨ |
| ಪರಮಾರ್ಥಾತ್ಮನಿಷ್ಠಂ ಯತ್ | ೪-೫೨ |
| ಪರಾಞ್ಚ್ಯೇವ ತು ಸರ್ವಾಣಿ(ವಾ) | ೩-೪೫ |
| ಪರಿಣಾಮಿಧಿಯಾಂ ವೃತ್ತಂ | ೨-೮೨ |
| ಪರಿಹೃತಾವಾಪ್ತಯೋ | ೧-೩೪ |
| ಪರೀಕ್ಷ್ಯ ಲೋಕಾನ್ | ೧-೮೭ |
| ಪಶ್ಯನ್ತಿ ಯದಾಹೋಚ್ಚೈಃ | ೪-೩೯ |
| ಪಾಪಾಪನುತ್ತಯೇ ವಾಕ್ಯಾತ್ | ೧-೮೩ |
| ಪಾಪ್ಮನಾಂ ಪಾಪ್ಮಭಿರ್ನಾಸ್ತಿ | ೧-೮೪ |
| ಪಾರಂಪರ್ಯೇಣ ಕರ್ಮೈವಂ | ೧-೫೨ |
| ಪಾರೋಕ್ಷ್ಯಂ ಯತ್ ತದರ್ಥೇ | ೩-೭೭ |
| ಪೂರ್ವಾಧ್ಯಾಯೇಷು ಯದ್ವಸ್ತು | ೪-೧ |
| ಪ್ರತ್ಯಕ್ತ್ವಾಸ್ಯ ಸ್ವತೋ ರೂಪಂ | ೩-೭೧ |
| ಪ್ರತ್ಯಕ್ತ್ವಾದತಿಸೂಕ್ಷ್ಮತ್ವಾತ್ | ೨-೫೫ |
| ಪ್ರತ್ಯಕ್ಪ್ರವಣತಾಂ ಬುದ್ಧೇಃ | ೧-೪೯ |
| ಪ್ರತ್ಯಕ್ಷಂ ಚೇನ್ನ ಶಾಬ್ದಂ ಸ್ಯಾತ್ | ೩-೮೫ |
| ಪ್ರತ್ಯಕ್ಷಸ್ಯ ಪರಾಕ್ತ್ವಾನ್ನ | ೩-೫೧ |
| ಪ್ರತ್ಯಕ್ಷಾದಿವಿರುದ್ಧಂ ಚೇತ್ | ೩-೮೧ |
| ಪ್ರತ್ಯಗುದ್ಭೂತಪಿತ್ತಸ್ಯ | ೩-೩೦ |
| ಪ್ರತ್ಯರ್ಥಂ ತು ವಿಭಿದ್ಯನ್ತೇ | ೨-೮೬ |
| ಪ್ರತ್ಯಾಚಕ್ಷಾಣ ಆಹಾತೋ | ೪-೬೪ |
| ಪ್ರಮಾಣತನ್ನಿಭೇಷ್ವಸ್ಯಾ | ೨-೭೮ |
| ಪ್ರಮಾಣಬದ್ಧಮೂಲತ್ವಾತ್ | ೩-೮೮ |
| ಪ್ರಮಾಣಮನ್ತರೇಣೈಷಾಂ | ೨-೯೯ |
| ಪ್ರಮಾಣವ್ಯವಹಾರೋಽಯಂ | ೩-೫೨ |
| ಪ್ರಮಾಣೈಶ್ಚಾವಗಮ್ಯತ್ವಾತ್ | ೨-೩೭ |
| ಪ್ರಮಾಂ ಚೇಜ್ಜನಯೇದ್ | ೩-೯೬ |
| ಪ್ರಮಿತ್ಸಾಯಾಂ ಯ ಆಭಾತಿ | ೩-೮ |
| ಪ್ರಸಂಖ್ಯಾನೇ ಶ್ರುತಾವಸ್ಯ | ೩-೧೨೫ |
| ಪ್ರಾಗನಾತ್ಮೈವ ಜಗ್ದಂ ಸತ್ | ೨-೧೨ |
| ಪ್ರಾಗಸದ್ಭಾತಿ ಪಶ್ಚಾತ್ ಸತ್ | ೩-೫೫ |
| ಪ್ರಾಗಾತ್ಮಬೋಧಾತ್ | ೪-೫೭ |
| ಪ್ರಾಪ್ತವ್ಯಪರಿಹಾರ್ಯೇಷು | ೧-೩೩ |
| ಪ್ರಾಮಾಣ್ಯಾಯ ನ ಬಾಹುಲ್ಯಂ | ೧-೮೬ |
| ಬಲವದ್ಧಿ ಪ್ರಮಾಣೋತ್ಥಂ | ೧-೩೬ |
| ಬಾಧಿತತ್ವಾದವಿದ್ಯಾಯಾಃ | ೧-೩೮ |
| ಬಾಧ್ಯಬಾಧಕಭಾವಾಚ್ಚ | ೧-೫೫ |
| ಬಾಹ್ಯ ಆಕಾರವಾನ್ ಗ್ರಾಹ್ಯಃ | ೨-೧೦೭ |
| ಬಾಹ್ಯಾಂ ವೃತ್ತಿಮನುತ್ಪಾದ್ಯ | ೩-೫೮ |
| ಬುದ್ಧಾದ್ವೈತಸತತ್ತ್ವಸ್ಯ | ೪-೬೨ |
| ಬುದ್ಧಾವೇವವಿವೇಕೋಽಯಂ | ೪-೧೪ |
| ಬುದ್ಧಿಜನ್ಮನಿ ಪುಂಸಶ್ಚ | ೨-೬೧ |
| ಬುದ್ಧೇರನಾತ್ಮಧರ್ಮತ್ವಂ | ೨-೯೬ |
| ಬುದ್ಧೇರ್ಯತ್ಪ್ರತ್ಯಗಾತ್ಮತ್ವಂ | ೩-೧೮ |
| ಬುದ್ಧ್ಯನ್ತಮಪವಿಧ್ಯೈವಂ | ೪-೧೮ |
| ಬುದ್ಧ್ಯಾದೀನಾಮನಾತ್ಮತ್ವಂ | ೩-೩೩ |
| ಬುಭುತ್ಸೋಚ್ಛೇದಿನೀ (ವಾ) | ೩-೬೭ |
| ಬುಸವ್ರೀಹಿಪಲಾಲಾಂಶೈಃ | ೨-೧೫ |
| ಬೃಹಸ್ಪತಿಸವೇ ಯದ್ವತ್ | ೧-೫೭ |
| ಬೋದ್ಧೃತಾ ಕರ್ತೃತಾ ಬುದ್ಧೇಃ | ೩-೧೨ |
| ಬೋದ್ಧೃತ್ವಂ ತದ್ವದೇವಾಸ್ಯಾಃ | ೩-೧೯ |
| ಬೋಧಾತ್ ಪ್ರಾಗಪಿ ದುಃಖಿತ್ವಂ | ೨-೯೦ |
| ಬೋಧಾಬೋಧೌ ನಭೋ | ೩-೧೦೭ |
| ಬೋಧೇಽಪ್ಯನುಭವೋ ಯಸ್ಯ | ೩-೩೮ |
| ಬ್ರಹ್ಮಾತ್ಮಾ ವಾ ಭವೇತ್ತಸ್ಯ | ೧-೬೯ |
| ಬ್ರಾಹ್ಮಣ್ಯಾದ್ಯಾತ್ಮಕೇ ದೇಹೇ | ೧-೩೯ |
| ಭಗವತ್ಪೂಜ್ಯಪಾದೈಶ್ಚ | ೪-೧೯ |
| ಭಜ್ಯಾಕ್ಷ್ವಾನ್ನಮಯಾದೀಂಸ್ತ್ರೀ | ೩-೧೨೧ |
| ಭಯಾನ್ಮೋಹಾವನದ್ಧಾತ್ಮಾ | ೧-೩೨ |
| ಭಾವನಾಜಂ ಫಲಂ (ವಾ) | ೩-೯೩ |
| ಭಿನ್ನಾಭಿನ್ನಂ ವಿಶೇಷೈಶ್ಚೇತ್ | ೧-೭೮ |

| | |
|---|---|
| ಭೇದಸಂವಿದಿದಂಜ್ಞಾನಮ್ | ೩-೬ |
| ಭ್ರಾನ್ತಿಪ್ರಸಿದ್ಧ್ಯನೂದ್ಯಾರ್ಥಂ | ೩-೭೩ |
| ಮನ್ಯಸೇ ತಾವದಸ್ಮೀತಿ | ೨-೧೩ |
| ಮಹಾಭೂತಾನ್ಯಹಂಕಾರಃ | ೨-೪೩ |
| ಮಾನಾನ್ತರಾನವಷ್ಟಬ್ಧಂ | ೩-೩೫ |
| ಮಿತ್ರೋದಾಸೀನಶತ್ರುತ್ವಂ | ೨-೪೮ |
| ಮುಕ್ತೇಃ ಕ್ರಿಯಾಭಿಃ ಸಿದ್ಧತ್ವಾತ್ | ೧-೯ |
| ಮುಕ್ತೇಃ ಕ್ರಿಯಾಭಿಃ | ೧-೮೦ |
| ಮೃತ್ಸ್ನೇಭಕೇ ಯಥೇಭತ್ವಂ | ೧-೫೯ |
| ಮೋಹಾಪಿಧಾನಭಙ್ಗಾಯ | ೧-೭೦ |
| ಯತ್ಕರ್ಮಕೋ ಹಿ ಯೋ | ೨-೨೪ |
| ಯತ್ನತೋ ವೀಕ್ಷಮಾಣೋಽಪಿ | ೧-೧೫ |
| ಯತ್ರ ತ್ವಸ್ಯೇತಿ ಸಾಟೋಪಂ | ೨-೧೧೮ |
| ಯತ್ರ ಯೋ ದೃಶ್ಯತೇ ದ್ರಷ್ಟ್ರಾ | ೨-೨೫ |
| ಯತ್ರ ಸ್ಯಾತ್ ಸಂಶಯೋ | ೩-೩೭ |
| ಯತ್ಸಿದ್ಧಾವಿದಮಃ ಸಿದ್ಧಿಃ | ೧-೪ |
| ಯಥಾ ಜಾತ್ಯಮಣೇಃ ಶುಭ್ರಾ | ೨-೬೪ |
| ಯಥಾಪ್ರಾಜ್ಞೋ ತಥೈವಾಯಂ | ೪-೪೮ |
| ಯಥಾ ವಿಶುದ್ಧ ಆಕಾಶೇ | ೨-೬೮ |
| ಯಥಾ ಸ್ವಾಪನಿಮಿತ್ತೇನ | ೪-೩೬ |
| ಯದರ್ಥಂ ಚ ಪ್ರವೃತ್ತಂ ಯತ್ | ೩-೧೨೨ |
| ಯದವಸ್ಥಾ ವ್ಯನಕ್ತೀತಿ | ೨-೬೫ |
| ಯದಾ ನಾ ತತ್ತ್ವಮಸ್ಯಾದೇಃ | ೩-೧ |
| ಯದಾ ಸರ್ವೇ ಪ್ರಮುಚ್ಯನ್ತೇ | ೧-೪೪ |
| ಯದ್ಧಿಯಸ್ಯಾನು (ವಾ) | ೧-೬೨ |
| ಯದ್ಯದ್ವಿಶೇಷಣಂ ದೃಷ್ಟಂ | ೨-೯೪ |
| ಯದ್ಯಾತ್ಮಧರ್ಮೋಽಹಂಕಾರೋ | ೨-೩೩ |
| ಯಾವದ್ಯಾವನ್ನಿರಸ್ಯಾಯಂ | ೩-೨೮ |
| ಯಾವತ್ಯಶ್ಚೇಹ ವಿದ್ಯನ್ತೇ | ೧-೧೪ |
| ಯುಕ್ತಿ ಶಬ್ದೌ ಪುರಾಪ್ಯಸ್ಯ | ೩-೧೨೪ |
| ಯುಷ್ಮದರ್ಥೇ ಪರಿತ್ಯಕ್ತೇ | ೩-೫ |
| ಯುಷ್ಮದಸ್ಮದ್ವಿಭಾಗಜ್ಞೇ (ಉ) | ೪-೨೦ |
| ಯೇನೈವಾಸ್ಯಾ ಭವೇದ್ಯೋಗೌ | ೨-೮೦ |
| ಯೈರದ್ರಾಕ್ಷೀತ್ ಪುರಾತ್ಮಾನಂ | ೪-೧೦ |
| ಯೋಽಯಂ ಸ್ಥಾಣುಃ | ೨-೨೯ |
| ಯೋ ಹಿ ಯತ್ರ ವಿರಕ್ತಃ (ಉ) | ೪-೬೫ |
| ರಾಗೋ ಲಿಙ್ಗಮಬೋಧಸ್ಯ | ೪-೬೭ |
| ರಿಪೌ ಬನ್ಧೌ ಸ್ವದೇಹೇ ಚ | ೨-೧೮ |
| ರೂಪಪ್ರಕಾಶಯೋರ್ಯದ್ವತ್ | ೪-೪೬ |
| ಲಕ್ಷಣಂ ಸರ್ಪವದ್ರಜ್ಜ್ವಾಂ | ೩-೨೭ |
| ಲಿಙ್ಗಮಸ್ತಿತ್ವನಿಷ್ಠತ್ವಾತ್ | ೩-೫೭ |
| ಲಿಪ್ಸತೇಽಜ್ಞಾನತೋಽಲಬ್ಧಂ | ೧-೩೧ |
| ವರ್ಚಸ್ಕಂ ತ್ವನ್ನಕಾರ್ಯತ್ವಾತ್ | ೨-೧೧ |
| ವರ್ಚಸ್ಕೇ ಸಂಪರಿತ್ಯಕ್ತೇ | ೨-೧೬ |
| ವರ್ತಮಾನಮಿದಂ ಯಾಭ್ಯಾಂ | ೧-೧೨ |
| ವರ್ಷಾತಪಾಭ್ಯಾಂ ಕಿಂ ವ್ಯೋಮ್ನ | ೨-೬೦ |
| ವಸ್ತ್ವೇಕನಿಷ್ಠಂ ವಾಕ್ಯಂ ಚೇತ್ | ೩-೮೨ |
| ವಾಕ್ಯಪ್ರತ್ಯಕ್ಷಮಾನಾಭ್ಯಾಂ | ೩-೬೩ |
| ವಾಕ್ಯಶ್ರವಣಮಾತ್ರಾಚ್ಚ | ೨-೩ |
| ವಾಕ್ಯೈಕಗಮ್ಯಂ ಯದ್ವಸ್ತು | ೧-೮೯ |
| ವಾಸ್ತವೇನೈವ ವೃತ್ತೇನ | ೪-೫೬ |
| ವಿಕ್ರಿಯಾಜ್ಞಾನಶೂನ್ಯತ್ವಾತ್ | ೩-೬೨ |
| ವಿದೇಹೋ ವೀತಸಂದೇಹೋ | ೧-೫೮ |
| ವಿದ್ಯಾತ್ತತ್ತ್ವಮಸೀತ್ಯಸ್ಮಾತ್ | ೪-೮ |
| ವಿನಾಜ್ಞಾನಪ್ರಹಾಣೇನ | ೨-೧೦ |
| ವಿಪಶ್ಚಿತೋಽಪ್ಯತಸ್ತಸ್ಯಾಮ್ | ೩-೭೨ |
| ವಿರಹಯ್ಯ ಕ್ರಿಯಾಂ ನೈವ | ೧-೧೯ |
| ವಿಶೇಷಂ ಕಂಚಿದಾಶ್ರಿತ್ಯ | ೩-೧೬ |
| ವಿಶೇಷಣಮಿದಂ ಸರ್ವಂ (ಉ) | ೪-೨೭ |
| ವಿಷ್ಣೋಃ ಪಾದಾನುಗಾಂ ಯಾಂ | ೪-೭೬ |
| ವೃತ್ತಿಭಿರ್ಯುಷ್ಮದರ್ಥಾಭಿಃ | ೩-೧೦೧ |
| ವೇದಾನ್ತೋದರವರ್ತಿ | ೪-೭೭ |

| | |
|---|---|
| ವೇದಾನ್ತೋದರ ಸಂಗೂಢಂ | ೧-೩ |
| ವೇದಾವಸಾನವಾಕ್ಯೋತ್ಥಂ | ೧-೮ |
| ವ್ಯವಧೀಯನ್ತ ಏವಾಮೀ | ೨-೯೮ |
| ವ್ಯತ್ಥಿತಾಶೇಷಕಾಮೇಭ್ಯೋ | ೧-೪೮ |
| ವ್ಯೋಮ್ನಿ ಧೂಮತುಷಾರಾಭ್ರ | ೩-೯೯ |
| ಶಬ್ದಾದ್ಯಾಕಾರನಿರ್ಭಾಸಾಃ | ೨-೯೧ |
| ಶಮಾದಿಸಾಧನಃ ಪಶ್ಯೇತ್ | ೩-೪ |
| ಶಯಾನಾಃ ಪ್ರಾಯಶೋ | ೩-೧೧೫ |
| ಶಿರ ಆಕ್ರಮ್ಯ ಪಾದೇನ | ೨-೧೪ |
| ಶುಧ್ಯಮಾನಂ ತು ತಚ್ಚಿತ್ತಮ್ | ೧-೪೭ |
| ಶುಭೈಃ ಪ್ರಾಪ್ನೋತಿ ದೇವತ್ವಂ | ೧-೪೧ |
| ಶ್ರಾವಿತೋ ವೇತ್ತಿ ವಾಕ್ಯಾರ್ಥಂ | ೨-೧ |
| ಶ್ರೀಮಚ್ಛಙ್ಕರಪಾದಪದ್ಮ | ೪-೭೪ |
| ಶ್ರುತಯಃ ಸ್ಮೃತಿಭಿಃ ಸಾಕಂ | ೧-೮೫ |
| ಶ್ರುತಿಶ್ಚೇಮಂ ಜಗಾದಾರ್ಥಂ | ೧-೪೩ |
| ಷಟ್ಸುಭಾವವಿಕಾರೇಷು | ೨-೮೫ |
| ಷಷ್ಠೀ ಗುಣಕ್ರಿಯಾಜಾತಿ- | ೩-೧೧೩ |
| ಸಂಸಾರಬೀಜಸಂಸ್ಥೋಽಯಂ | ೪-೧೬ |
| ಸಂಸಾರಿತಾದ್ವಿತೀಯೇನ | ೩-೭೯ |
| ಸಕೃತ್ಪ್ರವೃತ್ತ್ಯಾ ಮೃದ್ನಾತಿ (ವಾ) | ೧-೬೭ |
| ಸಕೃದಾತ್ಮಪ್ರಸೂತ್ಯೈವ (ವಾ) | ೪-೫೭ |
| ಸಙ್ಕ್ಷೇಪವಿಸ್ತರಾಭ್ಯಾಂ ಹಿ | ೪-೨ |
| ಸದಾವಿಲುಪ್ತಸಾಕ್ಷಿತ್ವಂ | ೨-೩೬ |
| ಸದೇವೇತ್ಯಾದಿವಾಕ್ಯೇಭ್ಯಃ (ಉ) | ೪-೩೩ |
| ಸಂನಿಪತ್ಯ ನ ಚ ಜ್ಞಾನಂ (ವಾ) | ೧-೫೪ |
| ಸಮಸ್ತವ್ಯಸ್ತಭೂತಸ್ಯ (ವಾ) | ೧-೭೩ |
| ಸಂಪ್ರಸಾದೇಽವಿಕಾರಿತ್ವಾತ್ | ೪-೪೭ |
| ಸಂಬನ್ಧೋಕ್ತಿರಿಯಂ ಸಾಧ್ವೀ | ೪-೭೮ |
| ಸಮ್ಯಕ್ಸಂಶಯಮಿಥ್ಯಾತ್ವೈಃ | ೩-೨೧ |
| ಸಮ್ಯಗ್ಜ್ಞಾನಶಿಖಿಪ್ಲುಷ್ಟ (ವಾ) | ೪-೫೯ |
| ಸರ್ವಜಾತ್ಯಾದಿಮತ್ತ್ವೇಽಸ್ಯ | ೧-೭೪ |
| ಸರ್ವಧೀವ್ಯಞ್ಜಕಸ್ತದ್ವತ್ | ೨-೬೬ |
| ಸರ್ವಪ್ರಮಾಣಾಸಂಭಾವ್ಯೋ | ೧-೯೩ |
| ಸರ್ವಮೇವಾನುಜಾನಾತಿ | ೪-೫೧ |
| ಸರ್ವಸಂಶಯಹೇತೌ ಹಿ | ೩-೩೬ |
| ಸರ್ವಾಕಾರಾಂ ನಿರಾಕಾರಃ | ೨-೭೪ |
| ಸರ್ವೋಽಯಂ ಮಹಿಮಾ | ೨-೪ |
| ಸಾಧ್ಯಸಾಧನಭಾವೋಽಯಂ | ೧-೨೭ |
| ಸಾಮಾನಾಧಿಕರಣ್ಯಂ ಚ (ವಾ) | ೩-೩ |
| ಸಾಮಾನಾಧಿಕರಣ್ಯಾದೇಃ (ವಾ) | ೩-೯ |
| ಸಾಮಾನ್ಯಂ ಹಿ ಪದಂ ಬ್ರೂತೇ | ೩-೩೨ |
| ಸಾಮಾನ್ಯಾಚ್ಚ ವಿಶೇಷಾಚ್ಚ | ೩-೧೭ |
| ಸಾಮಾನ್ಯೇತರರೂಪಾಭ್ಯಾಮ್ | ೧-೭೭ |
| ಸಾವಶೇಷಪರಿಚ್ಛೇದಿ- | ೨-೮೭ |
| ಸುಖದುಃಖಾದಿಭಿರ್ಯೋಗಃ | ೧-೯೪ |
| ಸುಖದುಃಖಾದಿಸಂಬದ್ಧಾಂ (ವಾ) | ೨-೮೧ |
| ಸುಭಾಷಿತಂ ಚಾರ್ವಪಿ | ೪-೭೫ |
| ಸುಭ್ರೂಃ ಸುನಾಸಾ ಸುಮುಖೀ | ೨-೫೨ |
| ಸುಷುಪ್ತಾಖ್ಯಂ ತಮೋಽಜ್ಞಾನಂ | ೪-೪೩ |
| ಸೇಯಂ ಭ್ರಾನ್ತಿರ್ನಿರಾಲಮ್ಬಾ | ೩-೬೬ |
| ಸ್ಥಾಣುಃ ಸ್ಥಾಣುರಿತೀವೋಕ್ತಿಃ | ೩-೭೪ |
| ಸ್ಥಾಣುಂ ಚೋರಧಿಯಾ (ವಾ) | ೧-೬೧ |
| ಸ್ಥಾಣೋಃ ಸತತ್ತ್ವ (ವಾ) | ೧-೬೧ |
| ಸ್ಥೂಲಂ ಯುಕ್ತ್ಯಾನಿರಸ್ಯೈವಂ | ೨-೨೧ |
| ಸ್ಮೃತಿಸ್ವಪ್ನಪ್ರಬೋಧೇಷು | ೨-೮೩ |
| ಸ್ವಮನೋರಥಸಂಕ್ಲಿಪ್ತಂ | ೧-೧೧೧ |
| ಸ್ವಮಹಿಮ್ನಾ ಪ್ರಮಾಣಾನಿ | ೩-೮೬ |
| ಸ್ವರೂಪಲಾಭಮಾತ್ರೇಣ (ವಾ) | ೧-೬೪ |
| ಸ್ವರ್ಗಂ ಯಿಯಾಸುಃ- | ೧-೯೨ |
| ಸ್ವಸಾಧನಂ ಸ್ವಯಂ ನಷ್ಟೋ | ೨-೧೦೯ |
| ಹಿತಂ ಸಂಪ್ರೇತ್ಸತಾಂ | ೧-೨೯ |
| ಹೇತುಸ್ವರೂಪಕಾರ್ಯಾಣಿ (ವಾ) | ೧-೬೬ |

# ಪ್ರಮಾಣವಚನಗಳ ಗ್ರಂಥಾನುಕ್ರಮ

ಇಲ್ಲಿ ಕಂಸದಲ್ಲಿ ಕೊಟ್ಟಿರುವ ಸಂಖ್ಯೆಗಳು ಆಯಾ ಗ್ರಂಥದ ಅಧ್ಯಾಯಾದಿಗಳನ್ನು ಸೂಚಿಸುವವು : ಮುಂದೆ ಹಾಗೆಯೇ ಹಾಕಿರುವ ಸಂಖ್ಯೆಗಳು ಈ ಪುಸ್ತಕದ ಪುಟಗಳನ್ನು ಸೂಚಿಸುವವು. ಪ್ರಕರಣದಲ್ಲಿ ಅನೇಕಾವೃತ್ತಿಯಾಗಿ ಉಪಯೋಗಿಸಿರುವ ವಚನಗಳಿಗೆ ಒಂದೊಂದೇ ಪುಟವನ್ನು ಕೊಟ್ಟಿದೆ. ಉಪದೇಶಸಾಹಸ್ರಿಗೆ ಜಯಚಾಮರಾಜೇಂದ್ರಗ್ರಂಥರತ್ನಮಾಲೆಯ ಪುಸ್ತಕದಂತೆ ಶ್ಲೋಕಸಂಖ್ಯೆಗಳನ್ನು ಕೊಟ್ಟಿದೆ.


| | | ಪುಟ |
|---|---|---|
| **ಈಶಾವಾಸ್ಯೋಪನಿಷತ್ತು :-** | | |
| ಕುರ್ವನ್ನೇವೇಹ ಕರ್ಮಾಣಿ... | (೨) | 15 |
| **ಉಪದೇಶಸಾಹಸ್ರೀ :-** | | |
| ಅನ್ವಯವ್ಯತಿರೇಕಾಭ್ಯಾಂ | (೧೮-೧೮೩) | 296 |
| ಅನ್ವಯವ್ಯತಿರೇಕೌ ಹಿ | (೧೮-೯೩) | 292 |
| ಅವಿದ್ಯಾಬದ್ಧ ಚಕ್ಷುಸ್ತ್ವಾತ್ | (೧೮-೧೬೮) | 297 |
| ಅವಿವಿಚ್ಯೋಭಯಂ ವಕ್ತಿ | (೧೮-೭೫೧) | 289 |
| ಅಹಂಶಬ್ದಸ್ಯ ಯಾ ನಿಷ್ಠಾ | (೧೮-೯೮) | 294 |
| (ಉ. ಸಾಯಲ್ಲಿ 'ಅಹಂ ಶಬ್ದಸ್ಯ ನಿಷ್ಠಾ ಯಾ' ಎಂದಿದೆ). | | |
| ಏವಂ ವಿಜ್ಞಾತವಾಚ್ಯಾರ್ಥೇ | (೧೮-೯೬) | 293 |
| ಕ್ಷುಧಯಾ ಪೀಡ್ಯಮಾನೋಽಪಿ | (೧೮-೨೨೦) | 315 |
| ಛಿತ್ವಾತ್ಯಕ್ತೇನ ಹಸ್ತೇನ | (೬-೧) | 294 |
| ಜ್ಞಾತ್ವೈವಾತ್ಮ ಸದಾ ಗ್ರಾಹ್ಯೋ | (೬-೪) | 294 |
| ತಸ್ಮಾತ್ತ್ಯಕ್ತೇನ ಹಸ್ತೇನ | (೬-೨) | 294 |
| ದೃಶ್ಯತ್ವಾದಹಮಿತ್ಯೇಷೋ | (೧೫-೧೬) | 295 |
| ನವಬುದ್ಧ್ಯಪಹಾರಾದ್ಧಿ | (೧೮-೧೬೭) | 297 |
| ನಾದ್ರಾಕ್ಷಮಹಮಿತ್ಯಸ್ಮಿನ್ | (೧೮-೯೪) | 292 |
| ನಿತ್ಯಮುಕ್ತತ್ವವಿಜ್ಞಾನಂ | (೧೮-೧೮೨) | 296 |
| ಯುಷ್ಮದಸ್ಮದ್ವಿಭಾಗಜ್ಞೇ | (೧೮-೮೭) | 291 |
| ಯೋ ಹಿ ಯತ್ರ ವಿರಕ್ತಃ ಸ್ಯಾತ್ | (೧೮-೨೧೯) | 315 |

| | | |
|---|---|---|
| ಸದೇವೇತ್ಯಾದಿವಾಕ್ಯೇಭ್ಯಃ | (೧೮-೧೮೪) | 296 |
| ಸುಷುಪ್ತಾಖ್ಯಂ ತಮೋಽಜ್ಞಾನಮ್ | (೧೭-೨೬) | 302 |
| **ಕಠೋಪನಿಷತ್ತು :-** | | |
| ನ ಜಾಯತೇ | (೧-೨-೧೮) | 157 |
| ಪರಾಞ್ಚಿ ಖಾನಿ | (೨-೧-೧) | 253 |
| ಯದಾ ಸರ್ವೇ ಪ್ರಮುಚ್ಯನ್ತೇ | (೨-೩-೧೪) | 38 |
| ಯಮೇವೈಷ ವೃಣುತೇ | (೧-೨-೨೩) | 214 |
| ವಿಮುಕ್ತಶ್ಚ ವಿಮುಚ್ಯತೇ | (೨-೨-೧) | 44 |
| **ಕೇನೋಪನಿಷತ್ತು :-** | | |
| ಯಚ್ಚಕ್ಷುಷಾ | (೧-೬) | 287 |
| **ಛಾಂದೋಗ್ಯೋಪನಿಷತ್ತು :-** | | |
| ಅಥ ಯೋ ವೇದೇದಂ ಜಿಘ್ರಾಣೀತಿ | (೮-೧೨-೪) | 199 |
| ಇಯಮೇವರ್ಗಗ್ನಿಃ ಸಾಮ | (೧-೬-೧) | 163 |
| ಕುತಸ್ತು ಖಲು ಸೋಮ್ಯೈವಂ ಸ್ಯಾದಿತಿ.... ಕಥಮಸತಃ ಸಜ್ಜಾಯೇತ | (೬-೨-೨) | 174 |
| ತತ್ತ್ವಮಸಿ | (೬-೮-೭...) | 199 |
| ತತ್ಸತ್ಯಂ ಸ ಆತ್ಮಾ ತತ್ತ್ವಮಸಿ | (೬-೮-೭...) | 199 |
| ಯ ಏಷೋಽಕ್ಷಿಣಿ ಪುರುಷೋ ದೃಶ್ಯತೇ | (೮-೭-೪) | 199 |
| ಸೋಽಹಂ ಭಗವೋ ಮನ್ತ್ರವಿದೇವಾಸ್ಮಿನಾತ್ಮವಿತ್ | (೭-೧-೩) | 164 |
| **ಗೌಡಪಾದಾಕಾರಿಕಾ :-** | | |
| ಅನ್ಯಥಾ ಗೃಹ್ಣತಃ ಸ್ವಪ್ನಃ | (೧-೧೫) | 301 |
| ಕಾರ್ಯಕಾರಣಬದ್ಧೌ ತಾ | (೧-೧೧) | 301 |
| **ಜೈಮಿನೀಯಸೂತ್ರಗಳು :-** | | |
| ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮ್... | (೧-೨-೧) | 15 |
| **ನ್ಯಾಯವಾರ್ತಿಕ :-** | | |
| ವರ್ಷಾತಪಾಭ್ಯಾಂ ಕಿಂ ವ್ಯೋಮ್ನಃ ? | (೩-೧-೫) | 125 |
| (ವಾರ್ತಿಕದಲ್ಲಿ ಈ ಶ್ಲೋಕವನ್ನು ಬೌದ್ಧರ ಕಾರಿಕೆಯೆಂದು ಉದಾಹರಿಸಿದೆ) | | |
| **ಬೃಹದಾರಣ್ಯಕೋಪನಿಷತ್ತು :-** | | |
| ಅಪೂರ್ವಮ್... | (೨-೫-೧೯) | 204 |
| ಅಸ್ಥೂಲಮ್... | (೩-೮-೮) | 157 |

| | | |
|---|---|---|
| ಅಹಂ ಬ್ರಹ್ಮಾಸ್ಮಿ... | (೧-೪-೧೦) | 103 |
| ಆತ್ಮನ್ಯೇವಾಹಂ | (೪-೩-೬) | 201 |
| ಆತ್ಮಾವಾ ಅರೇ ದೃಷ್ಟವ್ಯಃ | (೨-೪-೫, ೪-೫-೬) | 73 |
| ಆತ್ಮೇತ್ಯೇವಮುಪಾಸೀತ | (೧-೪-೭) | 73 |
| ಆರ್ತಮ್ | (೩-೭-೨೩) | 111 |
| ಇತಿ ನು | (೪-೪-೬) | 38 |
| ದೇವೋ ಭೂತ್ವಾ ದೇವಾನಪ್ಯೇತಿ | (೪-೧-೨...) | 54 |
| ನ ದೃಷ್ಟೇರ್ದ್ರಷ್ಟಾರಮ್ | (೩-೪-೨...) | 208 |
| ನ ಹಿ ದ್ರಷ್ಟುಃ | (೪-೩-೨೩) | 106 |
| ನೇತಿ ನೇತಿ | (೨-೩-೬, ೩-೯-೨೬, ೪-೨-೪, ೪-೫-೧೫) | 111 |
| ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ | (೪-೪-೬) | 44 |
| ಯತ್ರ ತ್ವಸ್ಯ | (೪-೫-೧೫) | 161 |
| ಯದಾ ಸರ್ವೇ ಪ್ರಮುಚ್ಯನ್ತೇ | (೪-೪-೭) | 38 |
| ಯೋಽಯಮ್... | (೪-೩-೭) | 199 |
| ವಿಜ್ಞಾಯ ಪ್ರಜ್ಞಾಂ ಕುರ್ವೀತ | (೪-೪-೨೧) | 55 |
| ಶಾನ್ತೋ ದಾನ್ತಃ | (೪-೪-೨೩) | 121 |


ಬ್ರಹ್ಮಸೂತ್ರ :-


| | | |
|---|---|---|
| ಅಥಾತೋ ಬ್ರಹ್ಮಜಿಜ್ಞಾಸಾ | (೧-೧-೧) | 76 |
| ಜನ್ಮಾದ್ಯಸ್ಯ ಯತಃ | (೧-೧-೨) | 76 |


ಭಗವದ್ಗೀತಾ :-


| | | |
|---|---|---|
| ಅದ್ವೇಷ್ಟೃತ್ವಾದೀನಿ | (೧೨-೧೩ ರಿಂದ ೧೯) | 316 |
| ಅಮಾನಿತ್ವಾದೀನಿ | (೧೩-೭ ರಿಂದ ೧೧) | 316 |
| ಆರುರುಕ್ಷೋರ್ಮುನೇರ್ಯೋಗಂ... | (೬-೩) | 43 |
| ಪ್ರಕಾಶಂ ಚ | (೧೪-೨೨) | 314 |
| ಮಹಾಭೂತಾನ್ಯಹಂಕಾರಃ | (೧೩-೫) | 111 |
| ಯಸ್ಯ ಸರ್ವೇ ಸಮಾರಂಭಾಃ | (೪-೧೯) | 314 |


ಮಹಾಭಾರತೇ ಮೋಕ್ಷಧರ್ಮ :-


| | | |
|---|---|---|
| ಕಾಮಬನ್ಧನಮೇವೇದಮ್ | | 38 |


ಮುಂಡಕೋಪನಿಷತ್ತು :-


| | | |
|---|---|---|
| ಪರೀಕ್ಷ್ಯ ಲೋಕಾನ್ | (೧-೨-೧೨) | 72 |

# ವಿಷಯಗಳ ಅಕ್ಷರಾನುಕ್ರಮಣಿಕೆ

ಸೂಚನೆ :- ಈ ಅನುಕ್ರಮಣಿಕೆಯಲ್ಲಿ ಒಂದು ಮಾತಿನ ಮುಂದೆ ಇನ್ನು ಬೇರೆ ಶಬ್ದಗಳಿದ್ದರೆ ಅವುಗಳೆಲ್ಲ ಒಂದೇ ಅರ್ಥದ ಪರ್ಯಾಯ ಶಬ್ದಗಳೆಂದು ಸಂಕೇತ. ಒಂದು ಶಬ್ದವು ಹೆಚ್ಚಿನ ಕಪ್ಪಕ್ಷರದಲ್ಲಿ ಅಚ್ಚಾಗಿದ್ದರೆ ಆ ಶಬ್ದದ ವಿವರವನ್ನು ನೋಡಬೇಕೆಂದು ಅಭಿಪ್ರಾಯ. ಇದರಲ್ಲಿರುವ ಸಂಖ್ಯೆಗಳು ಈ ಪ್ರಕರಣದ ಅಧ್ಯಾಯಶ್ಲೋಕಗಳನ್ನು ತಿಳಿಸುವವು ; ಒಂದೇ ಅಧ್ಯಾಯದಲ್ಲಿರುವ ಶ್ಲೋಕಗಳನ್ನು ಅಲ್ಪವಿರಾಮದಿಂದ ತೋರಿಸಿದೆ ; ಅಧ್ಯಾಯದ ಸಂಖ್ಯೆಯ ಮುಂದೆ ಅಡ್ಡಗೀಟಿರುತ್ತದೆ. ಆಯಾ ಶ್ಲೋಕದ ಸಂಬಂಧೋಕ್ತಿಯಲ್ಲಿರುವ ಶಬ್ದವನ್ನೂ ಶ್ಲೋಕಸಂಖ್ಯೆಯಿಂದಲೇ ತಿಳಿಸಿದೆ.

## ಅ

**ಅಕರ್ತ್ರಾತ್ಮಬೋಧ** – ಆತ್ಮನು ಕರ್ತೃತ್ವಸ್ವಭಾವದವನಲ್ಲವೆಂಬ ಜ್ಞಾನ ; ಇದನ್ನು ಮೀಮಾಂಸಕರು ಒಪ್ಪಿಲ್ಲವಾಗಿ ಅವರ ಮತದಲ್ಲಿ ಅದರಿಂದ ಕರ್ಮವು ಹೋಗುವದೆಂಬುದು ಆಗುವಂತಿಲ್ಲ. ೧-೮೧.

**ಅಕಾರಕ (ಬ್ರಹ್ಮ)** – ಕರ್ತೃ, ಕರ್ಮ, ಮುಂತಾದ ಕಾರಕಗಳ ವಿಂಗಡವಿಲ್ಲದ ಬ್ರಹ್ಮರೂಪವಾದ ಆತ್ಮ. ಈ ಆತ್ಮಸ್ವರೂಪವನ್ನರಿತುಕೊಂಡವನಿಗೆ ವಿಧಿಚೋದ್ಯತ್ವವಿಲ್ಲ; ಅವಗತಿರೂಪನಾಗಿಯೇ ಇರುವದರಿಂದ ಆತ್ಮನಲ್ಲಿ ಕಾರಣಾದಿಗಳಿಲ್ಲ ೧-೫೭, ೨-೫೭, ೧೧೩.

**ಅಕ್ರಮದೃಕ್** – ಆತ್ಮನು ವಿಷಯಗಳನ್ನು ಒಂದೊಂದಾಗಿ ಅರಿಯುವ ಬುದ್ಧಿ ವೃತ್ತಿಗಳನ್ನೆಲ್ಲ ವ್ಯಾಪಿಸಿಕೊಂಡಿರುವಂತಿರುತ್ತಾನೆ. ಅವುಗಳನ್ನು ಒಂದೊಂದಾಗಿ ಅರಿಯುವದಿಲ್ಲ, ಯಾವ ಕ್ರಮವೂ ಇಲ್ಲದೆ ಒಟ್ಟಿಗೆ ಅರಿಯುತ್ತಾನೆ. ೨-೬೯, ೮೨.

**ಅಕ್ಷಜಮ್** – ಇಂದ್ರಿಯಗಳಿಂದಾಗವ ಜ್ಞಾನ, ಇದಕ್ಕೂ ವಾಕ್ಯಜ್ಞಾನಕ್ಕೂ ವಿರೋಧವಿಲ್ಲ. ೩-೮೪.

**ಅಗ್ರಹಣಮ್** – ಅರಿಯದೆ ಇರುವ ಅವಿದ್ಯೆ ; ಅನ್ಯಥಾಗ್ರಹಣದಂತೆ ಇದೂ ಅಂತಃಕರಣದ ಧರ್ಮವೇ, ಆತ್ಮನ ಧರ್ಮವಲ್ಲ, ೪-೪೫ ; ಅನ್ಯಥಾಗ್ರಹಣಕ್ಕೆ ಇದು ಬೀಜ, ೧-೪೦.

**ಅಙ್ಗಮ್ –** ಗುಣ. ಒಂದಕ್ಕೆ ಉಪಕಾರವಾಗಿರುವ ಸಾಧನ. ಕರ್ಮ ಪ್ರಕರಣದಲ್ಲಿರುವ ಜ್ಞಾನವು ಅದಕ್ಕೆ ಅಂಗ ; ಅವಿದ್ಯೆಯನ್ನು ಕಳೆಯುವ ಆತ್ಮಜ್ಞಾನವು ಕರ್ಮಕ್ಕೆ ಅಂಗವೂ ಅಲ್ಲ ಪ್ರಧಾನವೂ ಅಲ್ಲ . ೧-೬೩, ೬೪, ೭೯.

**ಅಙ್ಗಾಙ್ಗಿಭಾವಃ –** ಜ್ಞಾನವು ಕರ್ಮಕ್ಕೆ ಅಂಗ, ಅಥವಾ ಜ್ಞಾನಕ್ಕೆ ಕರ್ಮವು ಅಂಗ - ಹೀಗಿರುವದು ಜ್ಞಾನಕರ್ಮಗಳ ಅಂಗಾಂಗಿಭಾವ. ಮೀಮಾಂಸಕರು ಈ ಅಂಗಾಂಗಿಭಾವವನ್ನು ಒಪ್ಪಿರುತ್ತಾರೆ. ಅವರು ಹೇಳುವ ಆತ್ಮಜ್ಞಾನವು ಕರ್ತೃರೂಪನಾದ ಆತ್ಮನ ಜ್ಞಾನ ಅಥವಾ ಉಪಾಸನೆ. ಆದರೆ ತತ್ತ್ವಮಸ್ಯಾದಿ ವಾಕ್ಯಗಳಿಂದುಂಟಾಗುವ ಆತ್ಮಜ್ಞಾನವು ಕರ್ಮಕ್ಕೆ ಬಾಧಕವಾಗಿರುವದರಿಂದ ಈ ಅಂಗಾಂಗಿಭಾವವು ಆ ಜ್ಞಾನಕ್ಕೂ ಕರ್ಮಕ್ಕೂ ಇರಲಾರದು ಎಂಬುದು ವೇದಾಂತಿಗಳ ಮತ. ೧-೨೦, ೬೧, ೬೫, ೭೯.

**ಅಚೋದ್ಯಸ್ವಭಾವ್ಯಮ್ –** ವಿಧಿಗೆ ಕಟ್ಟು ಬೀಳುವ ಸ್ವಭಾವವಿಲ್ಲದವನಾಗಿರುವಿಕೆ. ಬ್ರಹ್ಮಾತ್ಮನು ಅಕಾರಕವಾಗಿರುವದರಿಂದ ಅವನು ಅಚೋದ್ಯನು, ೧-೫೭.

**ಅಜ್ಞಾತಜ್ಞಾಪನಮ್ –** ವಿಷಯಗಳನ್ನು ಪ್ರಮಾಣಗಳಿಂದ ಅರಿತುಕೊಳ್ಳಬೇಕಾಗಿರುತ್ತದೆ ; ನಾವು ಅವನ್ನು ಮೊದಲು ಅರಿಯದೆ ಇದ್ದು ಪ್ರಮಾಣಗಳಿಂದ ಅರಿತುಕೊಳ್ಳುವೆವು. ಆದರೆ ಆತ್ಮನು ಅವಗತಿಸ್ವರೂಪನೇ ಆದ್ದರಿಂದ ಅವನನ್ನು ಹೊಸದಾಗಿ ಪ್ರಮಾಣವು ತಿಳಿಸಿಕೊಡಬೇಕಾದದ್ದಿಲ್ಲ. ಆತ್ಮನ ಅವಿದ್ಯೆಯನ್ನು ಕಳೆಯುವದೊಂದೇ ಪ್ರಮಾಣದ ಫಲವು, ೧-೧೦೫.

**ಅಜ್ಞಾನಮ್ –** ಅಜ್ಞಾನವೆಂದರೆ ಆತ್ಮನನ್ನು ಅರಿಯದೆ ಇರುವದು. ೩-೧,೮. ಅಜ್ಞಾನ, ಅಗ್ರಹಣ, ಅನವಗಮ, ಅನವಬೋಧ, ಅಪ್ರತಿಪತ್ತಿ , ಅಪ್ರಬೋಧ, ಅವಿದ್ಯೆ , ತಮಸ್ಸು , ಧ್ವಾಂತ, ಭ್ರಾಂತಿ, ಮೋಹ- ಇವೆಲ್ಲ ಪರ್ಯಾಯಶಬ್ದಗಳು. ವಾರ್ತಿಕಪ್ರಸ್ಥಾನದಲ್ಲಿ ಈ ಶಬ್ದಗಳಿಗೆಲ್ಲ ಜ್ಞಾನಾಭಾವವೆಂದೇ ಅರ್ಥ. ಈ ಶಬ್ದಗಳಿಗೆ ಪೀಠಿಕೆಯನ್ನು ನೋಡಿ. ಅಜ್ಞಾನಕ್ಕೆ ಆತ್ಮನೇ ಆಶ್ರಯ, ಆತ್ಮನೇ ವಿಷಯ, ೩-೧ ; ಆತ್ಮನು ಸುಖಸ್ವರೂಪನಾಗಿದ್ದರೂ ಅವನನ್ನು ಮುಚ್ಚಿಹಾಕಿ ೧-೧, ೭೦ ; ಮಿಥ್ಯಾದ್ವೈತವನ್ನು ತೋರಿಸುವದರ ಮೂಲಕ ಇದು ಅನರ್ಥಕ್ಕೆ ಕಾರಣವಾಗಿರುವದು (ಅವ) ; ಅಜ್ಞಾನವು ಹೋದರೆ ಸಕಲಪುರುಷಾರ್ಥಪ್ರಾಪ್ತಿ (ಅವ) ; ಅಜ್ಞಾನದ ನಾಶವೇ ಮುಕ್ತಿ ೧-೨೪ ; ಕರ್ಮವು ಅಜ್ಞಾನದಿಂದುಂಟಾಗುತ್ತದೆಯಾದ್ದರಿಂದ ಅದನ್ನು ಕಳೆಯಲಾರದು, ಜ್ಞಾನವೇ ಕಳೆಯುತ್ತದೆ, ೧-೩೫, ೩೭, ೪೦ ; ಅಜ್ಞಾನವು ಸುಷುಪ್ತಿಯಲ್ಲಿಯೂ ಇರುತ್ತದೆ, ೩-೫೮ ; ಅಜ್ಞಾನವನ್ನು ಕಳೆಯುವದಕ್ಕೆ ಜ್ಞಾನವು ನಿರಪೇಕ್ಷಸಾಧನ ೧-೫೪ ;

ಹುಟ್ಟಿದಮಾತ್ರದಿಂದ ಅಜ್ಞಾನವನ್ನು ಕಳೆಯದೆ ಇರುವದು ಜ್ಞಾನವೇ ಅಲ್ಲ, ೧-೬೫, ೬೭.

**ಅಜ್ಞಾನವಿಜೃಂಭಿತ**– ಅಜ್ಞಾನದಿಂದ ಉಂಟಾಗಿರುವ (ಅಹಂಕಾರ) ೨-೪೬. ಅಜ್ಞಾನವಿಜೃಂಭಿತ, ಅಜ್ಞಾನೋತ್ಥ, ಅಜ್ಞಾನೋಪಾದಾನ- ಇವೆಲ್ಲವೂ ಪರ್ಯಾಯಗಳು. ಬುದ್ಧ್ಯಾದಿಗಳ ಕರ್ತೃತ್ವವು ಅಜ್ಞಾನೋತ್ಥವು, ೨-೫೮ ; ಬುದ್ಧಿಯು **ಅಜ್ಞಾನೋಪಾದಾನಕವು** (೩-೧೫) ಎಂದರೆ ಅಜ್ಞಾನದಿಂದ ತೋರುತ್ತದೆ ಎಂದೇ ಅರ್ಥ. ಇಲ್ಲಿ ಉಪಾದಾನವೆಂದರೆ ಕಾರಣವೆಂದಿಷ್ಟೇ ಅರ್ಥ ; ಮಣ್ಣು ಮಡಕೆಗೆ ಉಪಾದಾನಕಾರಣವಾಗಿರುವಂತೆ ಎಂದೇನೂ ಅರ್ಥವಲ್ಲ.

**ಅಜ್ಞೋಽಸ್ಮಿ** – ಅಜ್ಞನಾಗಿದೇನೆ, ಎಂದರೆ ಆತ್ಮಸ್ವರೂಪವನ್ನು ಅರಿಯೆನು ಎಂಬ ಅನುಭವವಿರುವದರಿಂದ ಅಜ್ಞಾನವು ಆತ್ಮನಿಗೇ ಆತ್ಮನ ವಿಷಯದಲ್ಲಿಯೇ ಎಂದು ಹೇಳಬೇಕಾಗುತ್ತದೆ. ತನಗೆ ತನ್ನ ವಿಷಯದಲ್ಲಿಯೇ ಅಜ್ಞಾನವು ಹೇಗೆ ? ಎಂದು ಆಕ್ಷೇಪಿಸುವದಕ್ಕಿಲ್ಲ ; ಇಲ್ಲಿ ಈ ಆಶ್ರಯವಿಷಯವಿಭಾಗವೂ ಅಜ್ಞಾನನಿಮಿತ್ತವಾಗಿಯೇ ಆಗಿರುತ್ತದೆ. ನಿಜವಾಗಿ ಆತ್ಮನಿಗೆ ಅಜ್ಞಾನವಿಲ್ಲವೇ ಇಲ್ಲ, ೩-೧.

**ಅತೀನ್ದ್ರಿಯವಿಷಯ** – ಇಂದ್ರಿಯಗಳನ್ನು ಮೀರಿದ ವಸ್ತುವನ್ನು ತಿಳಿಸುವ (ವಾಕ್ಯ). ತತ್ತ್ವಮಸಿ ಮುಂತಾದ ವಾಕ್ಯವು ಅಭಿಧಾಶ್ರುತಿಯಾದರೂ ಅತೀಂದ್ರಿಯವಾಗಿರುವ ಆತ್ಮನನ್ನು ತಿಳಿಸಿಕೊಡುವದರಿಂದ ಪ್ರಮಾಣ, ೩-೪೯.

**ಅತ್ಯನ್ತೋಚ್ಛಿತ್ತಿಃ** – ತೀರ ನಾಶವಾಗುವದು. ಆತ್ಮನ ಅಜ್ಞಾನವು ಮತ್ತೆ ತಲೆದೋರದಂತೆ ತೀರ ನಾಶವಾದರೆ ಎಲ್ಲಾ ಪುರುಷಾರ್ಥವೂ ನೆರವೇರಿದಂತೆ.

**ಅದ್ವಯ, ಅದ್ವಿತೀಯ**– ತನಗೆರಡನೆಯದಿಲ್ಲದ (ಬ್ರಹ್ಮ, ಆತ್ಮ), ಅದ್ವಯ-ಬ್ರಹ್ಮದಲ್ಲಿ ವಿವಿಧಕಲ್ಪನೆ, ೨-೯೩, ಆತ್ಮನು ಅದ್ವಿತೀಯನು, ಮತ್ತೊಬ್ಬ ಆತ್ಮನಿಲ್ಲ-ಎಂಬುದು ಆತ್ಮನಾದ್ದರಿಂದಲೇ ಸಿದ್ಧವಾಗುತ್ತದೆ ; ಏಕೆಂದರೆ ಆತ್ಮನಿಗೆರಡನೆಯದಿದ್ದರೆ ಅನಾತ್ಮವೇ ಆಗುವದೇ ಹೊರತು, ಆತ್ಮನಾಗಲಾರದು. ಅದ್ವಿತೀಯತ್ವವೆಂಬುದು ತತ್ತ್ವಮಸಿವಾಕ್ಯದಲ್ಲಿ ತತ್ಪದಕ್ಕೆ ವಿವಕ್ಷಿತವಾದ ಅರ್ಥವು ; ಅದು ಆತ್ಮನನ್ನು ಬಿಟ್ಟರೆ ಇರಲೇ ಆರದು, ೩-೭೬, ೭೮.

**ಅದ್ವೇಷ್ಟೃತ್ವಾದಿಸಾಧನಾನಿ**– ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಿರುವ ಸಾಧನಗಳು. ಇವುಗಳಿರುವವನೇ ಈ ಗ್ರಂಥಕ್ಕೆ ಅಧಿಕಾರಿ, ೪-೬೮ ; ಇವು

ಜ್ಞಾನೀಗೆ ಸ್ವಭಾವವಾಗಿಯೇ ಇರುತ್ತವೆ ; ಅವನು ಇವನ್ನು ಸಾಧನವೆಂದೇನೂ ಭಾವಿಸುವದಿಲ್ಲ , ೪-೬೯.

**ಅದ್ಧಾತಮ** – ಸ್ಪಷ್ಟತಮವಾದ. ಆತ್ಮವಿಷಯವಾದ ಅವಿದ್ಯೆಯನ್ನು ಕಳೆಯುವುದಕ್ಕೆ ತತ್ತ್ವಮಸಿ ಮುಂತಾದ ವಾಕ್ಯವೇ ನಿಶ್ಚಿತವಾದ ಪ್ರಮಾಣವು, ೩-೧೧೭.

**ಅಧ್ಯಾರೋಪಃ** – ಮೇಲೆ ಹಾಕುವದು, ಕಲ್ಪಿಸುವದು. ಆತ್ಮನಲ್ಲಿ ಆಜ್ಞರು ಬುದ್ಧ್ಯಾದಿಗಳನ್ನು ಕಲ್ಪಿಸುತ್ತಾರೆ, ೧-೬೦.

**ಅಧ್ಯಾಸಃ** – (೧) ಕಲ್ಪಿಸುವದು, ಅಧ್ಯಾರೋಪ. ಆತ್ಮನಲ್ಲಿ ಅಹಂಕಾರ ಮಮಕಾರಗಳಿಲ್ಲವೇ ಇಲ್ಲ. ಸೂರ್ಯನಲ್ಲಿ ಕತ್ತಲೆಯನ್ನು ಅಧ್ಯಾಸಮಾಡಿ ಅಲ್ಲಗಳೆಯುವಂತೆ, ಆತ್ಮನಲ್ಲಿ ಇವುಗಳ ಅಧ್ಯಾಸವನ್ನು ಮಾಡಿ ಅಲ್ಲಗಳೆಯುತ್ತಾರೆ. ೨-೧೧೭ ; ದ್ವೈತವಸ್ತುವಿನಲ್ಲಿ ಒಳ್ಳೆಯದು ಕೆಟ್ಟದ್ದು ಎಂದು ಅಧ್ಯಾಸಮಾಡುವದು ರಾಗದ್ವೇಷಗಳಿಂದ (ಅವ). ಆತ್ಮನಲ್ಲಿ ದೇಹಾದಿಗಳನ್ನು ಮೂಢರು ಅಧ್ಯಾಸಮಾಡುವರು, ೧-೫೯ ; ಅಂತಃಕರಣದ ಧರ್ಮಗಳಾದ ಸುಖಿತ್ವಾದಿಗಳನ್ನು ಆತ್ಮನಲ್ಲಿಯೂ ಆತ್ಮನ ಚೈತನ್ಯವನ್ನು ಅಹಂಕಾರದಲ್ಲಿಯೂ ಅಧ್ಯಾಸಮಾಡುವದೂ ಅಜ್ಞಾನದಿಂದಲೇ ೨-೧೦೧, ೧೦೨. ಇತರೇತರಾಧ್ಯಾಸಶಬ್ದವನ್ನು ನೋಡಿ. (೨) ಅಧ್ಯಾಸಮಾಡಿಕೊಂಡಿರುವ ಪದಾರ್ಥಕ್ಕೂ ಅಧ್ಯಾಸವೆಂದೇ ಹೆಸರು. ಸಂಸಾರವು ಆತ್ಮನಲ್ಲಿ ಅಧ್ಯಾಸವೇ, ೨-೧೧೬.

**ಅನನ್ವಯಃ** – ಅನ್ವಯವಿಲ್ಲದಿರುವದು, ವ್ಯತಿರೇಕ, ೨-೩೨.

**ಅನಭಿಧೇಯ** – ಆತ್ಮನಲ್ಲಿ ಷಷ್ಠೀಗುಣಾದಿಗಳು ಇಲ್ಲವಾದ್ದರಿಂದ ಅವನು ಅನಭಿದೇಯ, ಯಾವ ಹೆಸರಿನಿಂದಲೂ ಪಡೆಯುವದಕ್ಕೆ ತಕ್ಕವನಲ್ಲ ೩-೧೦೩. ಅನಭಿಧೇಯನಾದ ಆತ್ಮನ ವಿಷಯಕ್ಕೆ ಶಬ್ದವು ಅವಿದ್ಯಾನಿರಾಕರಣ ಮೂಲಕವಾಗಿ ಪ್ರಮೆಯನ್ನುಂಟುಮಾಡುತ್ತದೆ. ೩-೧೦೫, ೧೦೬.

**ಅನರ್ಥಃ** – ಸಂಸಾರವು. ಅಜ್ಞಾನದಿಂದಲೇ ಅನರ್ಥ (ಅವ). ಮಿಥ್ಯಾಜ್ಞಾನದಿಂದಲೇ ಅನರ್ಥವೆಂಬ ಸಾಂಖ್ಯರ ಮತ ಸರಿಯಲ್ಲ , ೩-೬.

**ಅನವಗಮಃ** – ಅಜ್ಞಾನ. ಬುದ್ಧ್ಯಾದಿಗಳು ಅನವಗಮಸ್ವರೂಪವೇ ; ಏಕೆಂದರೆ ಅವಕ್ಕೆ ಮೋಹವೇ ಉಪಾದಾನ, ೨-೯೯.

**ಅನವಬೋಧಃ** – ಅಜ್ಞಾನ. ಅನವಬೋಧವೇ ಅನರ್ಥಕ್ಕೆ ಕಾರಣ, (ಅವ) ; ಅನವಬೋಧವೇ ಕರ್ಮಪ್ರವೃತ್ತಿಗೆ ಹೇತು, ೧-೩೦ ; ಅಪುರುಷತಂತ್ರಜ್ಞಾನವೇ ಇದನ್ನು ನಾಶಗೊಳಿಸುವದು, ೧-೮೮ ; ಆತ್ಮಚೈತನ್ಯದಲ್ಲಿ ಪ್ರತಿಬಿಂಬಿತವಾಗಿರುವ ಅನವಬೋಧವನ್ನಾಶ್ರಯಿಸಿಯೇ ಸಂಸಾರವು ತೋರುತ್ತದೆ ; ಸಂಸಾರಕ್ಕೆ ಅದೇ ಉಪಾದಾನವು ೨-೯೭, ೯೮ ; ಅನವಬೋಧವು ಅನಾತ್ಮಸ್ವಭಾವದ್ದಾಗಿರುತ್ತದೆ, ೩-೨೯ ; ಪ್ರಮಾತ್ರಾದಿಗಳಿಗೆ ಅನವಬೋಧವೇ ಉಪಾದಾನ, ೨-೧೦೫ ; ಜ್ಞಾನವಾದ ಮೇಲೂ ಅನವಬೋಧದಿಂದ ಆದ ರಾಗದ್ವೇಷಾದಿಗಳು ತೋರುತ್ತವೆ ಎಂಬುದು ಸರಿಯಲ್ಲ. ೧-೩೮.

**ಅನಧಿಗತವಸ್ತು ಪರಿಚ್ಛೇದಃ, ಅನಧಿಗತಾಧಿಗಮಃ** – ತಿಳಿಯದೆ ಇರುವ ವಸ್ತುವನ್ನು ತಿಳಿಸಿಕೊಡುವದು (ಪ್ರಮಾಣ), ೧-೯೧ ; ಆತ್ಮನು ಅವಗತಿರೂಪನಾಗಿಯೇ ಇರುವದರಿಂದ ಅವನು ಅನಧಿಗತನಾಗಿದ್ದು ಶಾಸ್ತ್ರವು ಹೊಸದಾಗಿ ತಿಳಿಸಿಕೊಡುವದಿಲ್ಲ, ೨-೧೦೫.

**ಅನಾಗಮಾಪಾಯಿ** – ಆಗಮಾಪಾಯಿಯಲ್ಲದ ಸುಖವು ಆತ್ಮಸ್ವರೂಪವೇ, (ಅವ).

**ಅನಾಗಮಿಕ** – ಆಗಮ(ವೇದ)ಕ್ಕೆ ಸಂಬಂಧಪಡದ ಪ್ರತ್ಯಕ್ಷಾದಿಗಳು (ಅವ).

**ಅನಾತ್ಮಕ** – ತಿರುಳಿಲ್ಲದ ದ್ವೈತ, ೨-೪೪.

**ಅನಾತ್ಮಾ** – ಆತ್ಮನಲ್ಲದ್ದು, ಬುದ್ಧ್ಯಾದಿದೇಹಾಂತಗಳು, ೨-೧೫, ೧೯ ; ಆನಾತ್ಮವು ಅಜ್ಞಾನಕ್ಕೆ ಆಶ್ರಯವೂ ಅಲ್ಲ, ವಿಷಯವೂ ಅಲ್ಲ, ಏಕೆಂದರೆ ಅದು ಆಜ್ಞಾನದಿಂದ ಉಂಟಾಗಿರುತ್ತದೆ ೩-೧ ; ಅಜ್ಞಾನಸಿದ್ಧವಾದ್ದರಿಂದಲೇ ಅನಾತ್ಮವು ಇಂದ್ರಜಾಲದಂತೆ ಹುಸಿ, ೩-೧೧೨ ; ಆತ್ಮನನ್ನಾಶ್ರಯಿಸಿಯೇ ಸಿದ್ಧವಾಗಿರುತ್ತದೆ, ೨-೧೧೨, ೧೧೫ ; **ಆಗಮಾಪಾಯಿ**, ೩-೨೨ ; ಶರೀರಾದಿಗಳು ಅನಾತ್ಮವೆಂಬುದನ್ನು ಅರಿತುಕೊಳ್ಳುವ ಬಗೆ, ೨-೨೧, ೨೨, ೨೩, ೩-೫೬ ; ಬುದ್ಧ್ಯಾದಿಗಳು ಅನಾತ್ಮವೆಂದು ಅರಿತುಕೊಳ್ಳುವ ವಿವೇಕವು ಬುದ್ಧಿಯಲ್ಲಿಯೇ, ೪-೧೪ ; ಅವು ಆತ್ಮನಲ್ಲವೆಂದು ತಿಳಿದರೂ ಕಳವಳವು ತಪ್ಪುವದಿಲ್ಲ. ೪-೯, ೧೦.

**ಅನಾದಿ** – ಆದಿಯಿಲ್ಲದ್ದು. ಸಂಸಾರವು ಅನಾದಿಯಾಗಿರುವದರಿಂದ ಹಿಂದೆ ಸೂಚಿತವಾಗಿರುವ ಕರ್ಮಗಳು ಇಷ್ಟೆಂಬುದನ್ನು ಗೊತ್ತುಪಡಿಸುವದು ಆಗುವದಿಲ್ಲ. ೧-೮೧.

**ಅನಾರಬ್ಧಫಲ** – ಫಲವನ್ನು ಕೊಡದೆ ಇರುವ ಕರ್ಮ. ಅನಾರಬ್ಧಫಲವುಳ್ಳ ಅಶುಭಕರ್ಮಗಳನ್ನು ಮಾತ್ರ ಪ್ರಾಯಶ್ಚಿತ್ತದಿಂದ ಮುಗಿಸಬಹುದು, ೧-೮೧.

**ಅನುದಿತಾನಸ್ತಮಿತ** – ಹುಟ್ಟುಹೊಂದುಗಳಿಲ್ಲದ ಆತ್ಮನ ಜ್ಞಾನವು ಅವನ ಸ್ವರೂಪವೇ, ೨-೯೭, ೩-೫೭, ೧೧೧, ೧೧೬.

**ಅನುಭವಃ** – ಅವಿದ್ಯೆಯು ಆತ್ಮಾನುಭವದಿಂದ ಸಿದ್ಧವಾಗಿರುತ್ತದೆ, ೧-೭ ; ಆತ್ಮನು ಅನುಭವಮಾತ್ರಸ್ವರೂಪನಾಗಿರುತ್ತಾನಾದ್ದರಿಂದಲೂ ತಾರ್ಕಿಕರೆಲ್ಲರೂ ಅನುಭವವನ್ನೇ ಆಶ್ರಯಿಸಬೇಕಾಗಿರುವದರಿಂದಲೂ ಆತ್ಮಸ್ವರೂಪವನ್ನು ಹೇಳುವ ವೇದಾಂತವು ಸರ್ವಸಂಮತವಾದದ್ದು, ೨-೫೯ ; ಆತ್ಮನು ಅನುಭವಸ್ವರೂಪನಾಗಿದ್ದರೂ ಭೋಕ್ತೃತ್ವವು ಅಧ್ಯಾಸದಿಂದ, ೨-೬೬ ; ವಾಕ್ಯದಿಂದ ಅನುಭವವಾಗದೆ ಇದ್ದರೆ ಅದಕ್ಕೆ ಅರ್ಥವಾಗಿ ವಿಧಿಯನ್ನು ಕಲ್ಪಿಸಬಹುದಾಗಿತ್ತು, ಆದರೆ ಹಾಗಿಲ್ಲ, ೩-೧೧೯ ; ಬುದ್ಧ್ಯಾದಿಗಳು ಅನುಭವವೆಂಬ ಫಲವುಂಟಾದಮೇಲೆ ಸಿದ್ಧವಾಗತಕ್ಕವು, ಆತ್ಮನಿಗೆ ಹೀಗಿಲ್ಲ ; ಏಕೆಂದರೆ ಅವನು ಚೈತನ್ಯರೂಪನಾಗಿರುವದರಿಂದ ಅವನ ವಿಷಯದಲ್ಲಿ ಅವಿದ್ಯಾನಾಶವೇ ಫಲವು, ೨-೯೯, ೧೦೫.

**ಅನುಮಾನಮ್, ಅನುಮಿತಿಃ** – ಆತ್ಮನನ್ನು ಅರಿಯುವದಕ್ಕೆ ಬೇಕಾದ ಅನ್ವಯವ್ಯತಿರೇಕನ್ಯಾಯವೆಂಬ ಯುಕ್ತಿ. ಅನುಮಾನದಿಂದ ಶರೀರಾದಿಗಳೇ ನಾನೆಂಬ ಬುದ್ಧಿಯು ಹೋಗಿ ಅವು ನಾನಲ್ಲವೆಂಬ ಅಭಾವಬುದ್ಧಿಯುಂಟಾಗುತ್ತದೆ. ಈ ಅಭಾವದಿಂದ ನಿವೃತ್ತಿಯು ಅನುಮಾನದಿಂದಾಗಲಾರದು, ಅದಕ್ಕೆ ವಾಕ್ಯವೇ ಬೇಕು, ೩-೧೧೩, ೧೧೪, ೧೧೫ ; ಅನುಮಾನವು ಪ್ರತ್ಯಕ್ಷವನ್ನವಲಂಬಿಸಿರುತ್ತದೆ ; ಆದರೆ ಪ್ರತ್ಯಕ್ಷಕ್ಕೆ ಪ್ರತ್ಯಗಾತ್ಮನನ್ನು ಅರಿಯುವ ಶಕ್ತಿಯಿಲ್ಲದ್ದರಿಂದ ಅನುಮಾನಕ್ಕೂ ಆ ಶಕ್ತಿಯಿಲ್ಲ, ೨-೨೫, ೩-೫೧.

**ಅನೈಕಾನ್ತಃ** – ನಿಯಮವಿಲ್ಲದ್ದು. 'ನಾನು ಬ್ರಹ್ಮವು' ಎಂಬ ಸಾಮಾನಾಧಿಕರಣ್ಯ ವಾಕ್ಯಪ್ರಮಾಣದಿಂದ ಬ್ರಹ್ಮಕ್ಕೆ ಅಹಂಕಾರವು ಧರ್ಮವೆನ್ನುವದು ಅನೈಕಾಂತವು, ಏಕೆಂದರೆ 'ನಾನು ಬೆಳ್ಳಗಿರುವವನು' ಎಂಬ ಸಾಮಾನಾಧಿಕರಣ್ಯವ್ಯಪದೇಶವಿದ್ದರೂ ಬಿಳುಪು ಆತ್ಮನ ಧರ್ಮವಲ್ಲವೆಂಬುದು ಸರ್ವಸಂಮತ, ೧-೨೮ ; ವಾಕ್ಯಶ್ರವಣವಿಲ್ಲದೆ ಜ್ಞಾನವಾಗುವದಿಲ್ಲ ಎಂಬುದು ಅನೈಕಾಂತಿಕವಲ್ಲ, ೨-೪.

**ಅನ್ತಃಕರಣಮ್** – ಅವಿದ್ಯೆಯಿಂದ ಉಂಟಾದ ಮನಸ್ಸು, ಬುದ್ಧಿ, ಅಹಂಕಾರ-ಮುಂತಾದ ರೂಪಗಳಿಂದ ತೋರಿಕೊಳ್ಳುವ ಶರೀರದೊಳಗಿನ ಕರಣ. ಇದರಿಂದ ಆತ್ಮನಿಗೆ

ಜ್ಞಾತೃತ್ವವೂ ಅಹಂತ್ವವೂ ಉಂಟಾಗುತ್ತವೆ, ೩-೬೦ ; ಅಂತಃಕರಣವು ಅಜ್ಞಾನಕ್ಕೆ ವ್ಯಂಜಕವು, ೩-೫೮.

**ಅನ್ತರ್ಬಾಹ್ಯನಿಮಿತ್ತಭೇದಃ**– ಅಜ್ಞಾನವೆಂಬುದು ಅಂತಃಕರಣದ ಜ್ಞಾತೃತ್ವಕ್ಕೆ ಒಳಗಿನ ನಿಮಿತ್ತವು, ವಿಷಯಗಳ ಉಪಕಾರಿತ್ವ, ಅಪಕಾರಿತ್ವವೆಂಬುದು ಅಹಂಕಾರದ ವಿಕಾರವಾದ ಮಮತ್ವಕ್ಕೆ ಹೊರಗಿನ ನಿಮಿತ್ತವು, ೩-೬೧.

**ಅನ್ಯಥಾಗ್ರಹಣಮ್** – ಅಗ್ರಹಣವೇ ಇದಕ್ಕೆ ಬೀಜ, ೪-೪೦, ೪-೪೩ ; ಅಗ್ರಹಣ, ಅನ್ಯಥಾಗ್ರಹಣ- ಈ ಎರಡೂ ಅನಾತ್ಮಧರ್ಮ, ೪-೪೫.

**ಅನ್ವಯವ್ಯತಿರೇಕೌ** – ಅದಿದ್ದರೆ ಅದಿರುವದೆಂಬುದು ಅನ್ವಯವು, ಅದಿದ್ದರೂ ಅದಿರುವದಿಲ್ಲವೆಂಬುದು ವ್ಯತಿರೇಕವು. ಹೀಗೆ ಅನ್ವಯ, ಅನನ್ವಯ ಅಥವಾ ವ್ಯತಿರೇಕ-ಇವುಗಳಿಂದ ಅನಾತ್ಮವನ್ನು ಗೊತ್ತುಪಡಿಸಬೇಕು. ತತ್ತ್ವಮಸ್ಯಾದಿವಾಕ್ಯದಲ್ಲಿರುವ ಪದಗಳಿಗೆ ಈ ಅನ್ವಯವ್ಯತಿರೇಕಗಳಿಂದ ಪದಾರ್ಥಜ್ಞಾನವನ್ನು ಮಾಡಿಕೊಳ್ಳಬೇಕು, ೨-೮, ೯ ; ಬೋದ್ಧೃತ್ವವೇ ಮುಂತಾದ ಉಪಾಧಿಗಳಿಂದೊಡಗೂಡಿದ ಆತ್ಮವನ್ನಿಟ್ಟುಕೊಂಡು ಅಹಂಕಾರಾದಿಗಳು ಅನಾತ್ಮವೆಂದು ತಿಳಿದುಕೊಳ್ಳಬೇಕು ; ಸಾಕ್ಷಿತ್ವವನ್ನಾಶ್ರಯಿಸಿಕೊಂಡು ಕರ್ತೃತ್ವಾದಿಪರಿಣಾಮಗಳು ಆತ್ಮನಿಗಿಲ್ಲವೆಂದು ತಿಳಿಯಬೇಕು, ೨-೫೮. ಹೀಗೆ ಅನ್ವಯವ್ಯತಿರೇಕಗಳಿಂದಲೇ ಗೃಹೀತೃಗ್ರಹಣಗ್ರಾಹ್ಯ. ಗೃಹೀತಿಗಳೆಂಬ ಸಂಸಾರವು ಅನಾತ್ಮವೆಂಬುದು ತಿಳಿಯಬರುತ್ತದೆ, ೨-೯೭, ೩-೫೪.

**ಅನ್ವೇಷಣಾಸಹ** – ವಿಚಾರವನ್ನು ಸಹಿಸದಿರುವ ಅವಿದ್ಯೆ. ಅವಿದ್ಯೆಯು ಅವಿಚಾರಸಿದ್ಧವಾಗಿರುವದರಿಂದ ಅದು ಆತ್ಮನಲ್ಲಿ ಹೇಗೆ ಬಂತೆಂದು ಹುಡುಕುವದಕ್ಕಾಗುವದಿಲ್ಲ ; ಏಕೆಂದರೆ ಅದರ ಸ್ವಭಾವವು ವಿಚಾರಕ್ಕೆ ನಿಲ್ಲುವದಲ್ಲ, ೩-೬೬.

**ಅಪರತನ್ತ್ರ**– ಪರಾಧೀನವಲ್ಲದ, ಸ್ವತಂತ್ರವಾದ ಸುಖ. ಇದು ಆತ್ಮನ ಸ್ವರೂಪವೇ ಆಗಿರುತ್ತದೆ. ಅದಕ್ಕೆ ಅನವಬೋಧವೇ ಮುಸುಕು. (ಅವ).

**ಅಪರಿಣಾಮೀ**– ಅಂತಃಕರಣದಂತೆ ಪರಿಣಾಮಿಯಲ್ಲದ ಆತ್ಮ, ೨-೯೧.

**ಅಪವಿದ್ಧದ್ವಯಃ**– ದ್ವೈತವನ್ನು ಕಳೆದುಕೊಂಡವನು. ದಶಮನು ಯಾವಾಗಲೂ ಹತ್ತನೆಯವನಾಗಿದ್ದರೂ ತನ್ನನ್ನು ತಾನು ಅರಿಯದಿರುವಂತೆ ಯಾವಾಗಲೂ

ಅದ್ವೈತನಾಗಿದ್ದರೂ ವಾಕ್ಯೋಪದೇಶವಿಲ್ಲದವನು ಹಾಗೆಂದು ಅರಿತುಕೊಳ್ಳದೆ ಇರುತ್ತಾನೆ, ೩-೬೫.

**ಅಪಹಾರಃ** – ತೆಗೆದುಹಾಕುವದು. ಸೂರ್ಯನು ಪಾತ್ರೆಗಳ ನೀರಿನಲ್ಲಿ ಪ್ರತಿಬಿಂಬಿಸಿ ತೋರಿದರೂ ಪಾತ್ರೆಗಳೇನೂ ಸೂರ್ಯನ ಸ್ವರೂಪವನ್ನು ಅಪಹರಿಸಿರುವದಿಲ್ಲ ; ಇದರಂತೆ ಬುದ್ಧಿಗಳಲ್ಲಿ ಚಿದಾಭಾಸವು ತೋರುತ್ತಿದ್ದರೂ ಆತ್ಮನ ಸ್ವರೂಪವನ್ನೇನೂ ಅವು ಅಪಹರಿಸಿರುವದಿಲ್ಲ. ಆತ್ಮನು ನಿಜವಾಗಿ ಅನೇಕನಾಗಿರುವದಿಲ್ಲ, ೨-೪೯.

**ಅಪೂರ್ವವಿಧಿಃ** – ಇದುವರೆಗೆ ಪ್ರಾಪ್ತವಾಗದೆ ಇರುವದನ್ನು ಮಾಡಬೇಕೆಂದು ಹೇಳುವ ವಿಧಿ. 'ಆತ್ಮೇತ್ಯೇವೋಪಾಸೀತ' (ಆತ್ಮನೆಂದೇ ಉಪಾಸನೆ ಮಾಡಬೇಕು.), 'ಆತ್ಮಾವಾ ಅರೇ ದ್ರಷ್ಟವ್ಯಃ' (ಎಲೆ, ಆತ್ಮನನ್ನೇ ದರ್ಶನಮಾಡಿಕೊಳ್ಳಬೇಕು), ಎಂಬಿವು ಅಪೂರ್ವವಿಧಿಯಲ್ಲ, ಏಕೆಂದರೆ ಆತ್ಮಜ್ಞಾನವು ಪುರುಷತಂತ್ರವಲ್ಲವಾದ್ದರಿಂದ ವಿಧಿಯೇ ಅಲ್ಲ. ಒಂದು ವೇಳೆ ಇದು ವಿಧಿಯೆಂದರೂ ಅಪೂರ್ವವಿಧಿಯಲ್ಲ, ಏಕೆಂದರೆ ಆತ್ಮಜ್ಞಾನವನ್ನು ಹೊಸದಾಗಿ ಮಾಡಿಸಬೇಕಾದದ್ದಿಲ್ಲ, ೧-೮೮.

**ಅಪ್ರತಿಪತ್ತಿಃ** – ತಿಳಿಯದೆ ಇರುವದು. ಅಜ್ಞಾನ. ಐಕಾತ್ಮ್ಯವನ್ನು ತಿಳಿಯದೆ ಇರುವದೇ ಅವಿದ್ಯೆ, ೧-೭.

**ಅಪ್ರಬೋಧಃ** – ಅರಿಯದೆ ಇರುವದು. ಅಜ್ಞಾನವು ಅವಿಚಾರದಶೆಯಲ್ಲಿ ಇದೆಯೆಂದು ತೋರುವದರಿಂದ ಆತ್ಮನಲ್ಲಿ ಭದ್ರವಾಗಿರುವದಿಲ್ಲ, ಆತ್ಮನ ಸ್ವರೂಪವೇ ನಿತ್ಯಪ್ರಬುದ್ಧನಾಗಿರುವದು. ಆತ್ಮನನ್ನು ಹೊಸದಾಗಿ ಅರಿಯಬೇಕಾದದ್ದೇನೂ ಇಲ್ಲ, ೩-೧೧೦.

**ಅಪ್ರಮೇಯ** – ಪ್ರಮಾಣಕ್ಕೆ ವಿಷಯನಲ್ಲದೆ ಇರುವ ಆತ್ಮನು ಪ್ರಮೇಯ ನಲ್ಲವಾದ್ದರಿಂದ ಅವನನ್ನು ಪ್ರಮಾಣದಿಂದ ಅರಿಯಬೇಕಾದದಿಲ್ಲ, ೧-೮೯ ; ಪ್ರಮಾಣ ಪ್ರಮೇಯವ್ಯವಹಾರವೂ ಆತ್ಮನ ಅನವಬೋಧವನ್ನಾಶ್ರಯಿಸಿ ಉಂಟಾಗುವದರಿಂದ ಆತ್ಮನು ಅಪ್ರಮೇಯನು, ೨-೯೮ ; ಆತ್ಮನು ಅಪ್ರಮೇಯನಾಗಿರುವದರಿಂದ ಪ್ರತ್ಯಕ್ಷಾದಿಗಳಿಗೆ ವಿಷಯನಲ್ಲ, ೩-೪೮.

**ಅಪ್ರಮೋತ್ಥಮ್** – ತಪ್ಪುತಿಳಿವಳಿಕೆ. ತತ್ತ್ವದರ್ಶನದಿಂದ ಅಜ್ಞಾನವು ಹೋಗುತ್ತದೆ ಎಂಬುದು ಸಾಮಾನ್ಯನಿಯಮ ; ಆದ್ದರಿಂದ ಆತ್ಮನ ವಿಷಯಕವಾದ ಅಜ್ಞಾನವೂ ಆತ್ಮತತ್ತ್ವಜ್ಞಾನದಿಂದ ಅವಶ್ಯವಾಗಿ ಹೋಗಿಬಿಡುತ್ತದೆ, ೩-೧೦೪.

**ಅಪ್ರಾಮಾಣ್ಯಕಾರಣಮ್** – ಅನುಕ್ತ (ಹೇಳದೆ ಇರುವದು), ದುರುಕ್ತ (ತಪ್ಪಾಗಿ ಹೇಳುವದು) ಇವು ವಾಕ್ಯವು ಪ್ರಮಾಣವಲ್ಲವೆಂಬುದಕ್ಕೆ ಕಾರಣ, ೧-೫.

**ಅಭಿಧಾನಾಭಿಧೇಯಸಂಬನ್ಧಃ** – ವಾಚಕ, ವಾಚ್ಯ - ಎಂಬ ಶಬ್ದಾರ್ಥಗಳ ಸಂಬಂಧ. ಆತ್ಮನನ್ನು ಶಬ್ದವು ಈ ಸಂಬಂಧದಿಂದ ಹೇಳುವದಿಲ್ಲ ; ಏಕೆಂದರೆ ಆತ್ಮನಲ್ಲಿ ಶಬ್ದಹೇತುಗಳಿಲ್ಲ, ೩-೧೦೩, ೧೦೪ ; ಅಭಿಧಾನರು ಅಭಿಧೇಯಕ್ಕೆ ಸಂಬಂಧಪಡದೆಯೂ ಯಥಾರ್ಥಜ್ಞಾನವನ್ನುಂಟುಮಾಡಬಹುದು, ೩-೧೦೫, ೧೦೬.

**ಅಭಿಧಾಶ್ರುತಿಃ** – ವಸ್ತುವನ್ನು ಹೇಳುವ ಶಬ್ದ. ಅಭಿಧಾಶ್ರುತಿಯು ಸಾಮಾನ್ಯವಾಗಿ ಲೋಕದಲ್ಲಿ ಪ್ರಮಾಣಾಂತರವನ್ನು ಬಯಸಿಯೇ ವಸ್ತುವನ್ನು ತಿಳಿಸುತ್ತದೆಯಾದರೂ ಸುಪ್ತಪುರುಷಪ್ರಬೋಧಕವಾಕ್ಯದಂತೆ ನೇರಾಗಿಯೂ ತಿಳಿಸಬಹುದು, ೩-೪೭.

**ಅಭೂತಪ್ರಾದುರ್ಭಾವಃ** – ಇಲ್ಲದೆ ಇದ್ದದ್ದು ಹುಟ್ಟುವದು, ಸಾಧ್ಯವಾದದ್ದು. ಇಲ್ಲದ್ದನ್ನುಂಟುಮಾಡುವ ಫಲವುಳ್ಳ 'ಯಜೇತ' ಮುಂತಾದ ಕ್ರಿಯಾಪದಗಳಿದ್ದರೇ ವಾಕ್ಯದ ಪದಗಳು ಅನ್ವಯವಾಗುವವೆಂಬ ನಿಯಮವಿಲ್ಲ, ಅಸಿ, ಅಸ್ಮಿ- ಮುಂತಾದ ಕ್ರಿಯಾಪದಗಳಿದ್ದರೂ ಸಾಕು, ೧-೯೭.

**ಅಭೂತಾಭಿನಿವೇಶಃ** – ಇಲ್ಲದ್ದರಲಿ ಇದೆಯೆಂಬ ಅಭಿಮಾನ. ದ್ವಿತೀಯ ವಸ್ತುವೇ ಇಲ್ಲದಿದ್ದರೂ ಆತ್ಮಜ್ಞಾನವಿಲ್ಲದವನು ಅಭೂತಾಭಿನಿವೇಶದಿಂದ ತನ್ನನ್ನು ತಾನೇ ವಂಚಿಸಿಕೊಳ್ಳುತ್ತಾನೆ, ೨-೫೧.

**ಅಮಾನಿತ್ವಾದೀನಿ** – ಗೀತೆಯ ಹದಿಮೂರನೆಯ ಅಧ್ಯಾಯದಲ್ಲಿ ಹೇಳಿರುವ ಅಮಾನಿತ್ವ, ಅಂದಭಿತ್ವ - ಮುಂತಾದ ಜ್ಞಾನಸಾಧನಗಳು. ಅಮಾನಿತ್ವಾದಿ ನಿಷ್ಠನೇ ಜ್ಞಾನಕ್ಕೆ ಅಧಿಕಾರಿ, ಆದ್ದರಿಂದ ಈ ಗ್ರಂಥವನ್ನು ಅಭ್ಯಾಸಮಾಡುವವನು ಈ ಸಾಧನಗಳನ್ನು ಅವಲಂಬಿಸಬೇಕು. ೪-೬೮, ೭೦.

**ಅಲೇಪಕಪಕ್ಷಃ** – ನಿಷಿದ್ಧಕರ್ಮವನ್ನು ಮಾಡಿದರೂ ಜ್ಞಾನಿಗೆ ಅದರ ಫಲವು ಅಂಟುವದಿಲ್ಲವೆಂಬುದರ ಪಕ್ಷ, ಇದರ ತಿರಸ್ಕಾರ, ೪-೬೨ ರಿಂದ ೬೭.

**ಅಲೌಕಿಕ** – ಲೋಕಸಿದ್ಧವಲ್ಲದ, ಶಾಸ್ತ್ರವು ಅಲೌಕಿಕಪ್ರಮಾಣ, ೧-೨೯ ; ವೇದಶಬ್ದಗಳೂ ಲೋಕಶಬ್ದಗಳೇ ಆಗಿರುತ್ತವೆ, ಲೋಕದಲ್ಲಿರುವ ಶಬ್ದಗಳ ಅರ್ಥವಲ್ಲದೆ ವೈದಿಕಶಬ್ದಗಳಿಗೆ ಬೇರೆಯ ಅರ್ಥವಿದೆಯೆಂದರೆ ಅಲೌಕಿಕವಾಗಿ ಅಪ್ರಾಮಾಣ್ಯವು ಬರುವದು, ೩-೭೮.

**ಅವಗತಿಃ** – (೧) ಜ್ಞಾನಸ್ವರೂಪ. ಒಂದೊಂದು ವಿಷಯಕ್ಕೆ ಒಂದೊಂದು ಬೇರೆಬೇರೆ ಬುದ್ಧಿಯಿರುವಂತೆ, ಅವಗತಿಯು ಬೇರೆಬೇರೆಯಿರುವದಿಲ್ಲ; ಏಕೆಂದರೆ ಎಲ್ಲಾ ಬುದ್ಧಿಗಳಲ್ಲಿಯೂ, ಚಿತ್ತಿನ ಆಭಾಸವೇ ಇರುತ್ತದೆ, ೨-೮೬ ; ಅಹಂಕಾರವೇ ಮುಂತಾದ ದ್ವೈತವು ಅವಗತ್ಯಾತ್ಮನಿಂದ ಬಂದುಹೋಗುತ್ತಿರುತ್ತದೆ, ೨-೯೫ ; ಆತ್ಮನು ಅವಗತಿ ರೂಪದಿಂದಲೇ ಇರುವದರಿಂದ ಅವನನ್ನು ಪ್ರಮಾಣವು ಹೊಸದಾಗಿ ತಿಳಿಸಿತೋರಿಸಬೇಕಾದದ್ದಿಲ್ಲ, ೨-೧೦೫ ; ದ್ವೈತವು ತನ್ನ ರೂಪದಿಂದಾಗಲಿ ಅವಗತಿರೂಪದಿಂದಾಗಲಿ ಸಿದ್ಧವಾಗಿಲ್ಲವಾದ್ದರಿಂದ ಅದ್ವೈತವೇ ಸಿದ್ಧವಾಗುತ್ತದೆ, ೨-೧೧೨, ೧೧೩ ; ಆತ್ಮನು ಅವಗತಿರೂಪನಾಗಿರುವದರಿಂದ ಅವನ ವಿಷಯದಲ್ಲಿ ಸಂಶಯವಿಲ್ಲ, ೩-೩೭ ; ಆತ್ಮನು ನಿತ್ಯಾವಗತಿರೂಪನಾಗಿರುವದರಿಂದ ಪ್ರತ್ಯಕ್ಷಾದಿವಿಷಯವಲ್ಲ, ೩-೪೮ ; ಅವಗತಿರೂಪನಾದ ಆತ್ಮನಿಗೆ ದುಃಖವಿದ್ದರೆ ಅದು ವಿಷಯವಾಗಬೇಕು, ೩-೮೭ ; ಬುದ್ಧಿವೃತ್ತಿಗಳು ಭಿನ್ನವಾದರೂ ಅವಗತಿ ಭಿನ್ನವಾಗಿರುವದಿಲ್ಲ, ೨-೮೬, ೮೮, ೮೯ (೨) ಪ್ರಮಾಣಫಲವಾದ ಪ್ರಮಿತಿ. ಅವಗತ್ಯಂತವಾದ ಪ್ರತ್ಯಯವು ಯಾವನಿಂದ ಬೆಳಗುವದೋ ಅವನೇ ನನ್ನ ಆತ್ಮನು ಎಂಬುದೇ ವಾಕ್ಯಜನ್ಯಜ್ಞಾನವು, ೩-೪೬ ; ವಾಕ್ಯದಿಂದ ಅವಗತಿಯುಂಟಾದರೂ ಅದು ಅನೃತವೆನ್ನುವದಾದರೆ ಪ್ರಸಂಖ್ಯಾನದಿಂದಾದ ಅವಗತಿಯೂ ಅನೃತವೆಂದೇ ಒಪ್ಪಬೇಕಾಗುವದು, ೩-೧೧೮.

**ಅವಬೋಧಃ** – ತಿಳಿವಳಿಕೆ. ಪ್ರಮಾಣಗಳು ತಾವೇ ಅರ್ಥವನ್ನು ತಿಳಿಸುತ್ತವೆ, ೩-೮೬ ; ತ್ವಮರ್ಥದ ತಿಳಿವಳಿಕೆಗಾಗಿ ಅನ್ವಯವ್ಯತಿರೇಕವಿಧಿಯುಂಟೆಂಬುದು ಸಿದ್ಧಾಂತ ೩-೪, ೫, ೧೨೬.

**ಅವಭಾಸ್ಯಾವಭಾಸಕಸಂಬನ್ಧಃ** – ಜ್ಞಾತೃವಿಗೂ ಅಹಂಕಾರಕ್ಕೂ ಇರುವ ಸಂಬಂಧ, ೩-೬೦.

**ಅವಸ್ತು** – ನಿಜವಾದ ವಸ್ತುವಲ್ಲದ್ದು. ಕಲ್ಪಿತವಾದವುಗಳು ಅವಸ್ತುವಾಗಿರುವದರಿಂದ ಅವು ಒಂದಕ್ಕೊಂದು ವಿರುದ್ಧವಾದರೂ ಒಂದೇ ವಸ್ತುವಿನಲ್ಲಿ ಕಾಣಬಹುದು, ೨-೫೦ ; ಅಜ್ಞಾನವು ಜ್ಞಾನಾಭಾವವಾದ್ದರಿಂದ ಅವಸ್ತುವಾಗಿದೆಯಾಗಿ ಸಂಸಾರಕಾರಣವಾಗಲಾರದೆಂಬುದು ಸರಿಯಲ್ಲ, ಏಕೆಂದರೆ ಅಜ್ಞಾತವಾದ ಸತ್ತೇ ಜಗತ್ಕಾರಣವಾಗಿರುತ್ತದೆ, ೩-೭.

**ಅವಿಕಾರೀ** – ವಿಕಾರವನ್ನು ಹೊಂದದ, ಕೂಟಸ್ಥನಾದ ಆತ್ಮ, ೨-೫೩ ; ಸಾಮಾನ್ಯವಿಶೇಷಗಳಿಲ್ಲದ ಆತ್ಮ, ೩-೧೭.

**ಅವಿಚಾರಿತಸಿದ್ಧ** – ವಿಚಾರಮಾಡದೆ ಇರುವಾಗ ಮಾತ್ರ ಸಿದ್ಧವಾಗುವ ದ್ವೈತ, (ಅವ) ; ಅನವಬೋಧವು ಅವಿಚಾರಿತಸಿದ್ಧ, ೨-೯೭.

**ಅವಿದ್ಯಾ** – ಆತ್ಮಾನುಭವದಿಂದ ಸಿದ್ಧವಾಗಿರುವ ಐಕಾತ್ಮ್ಯದ ಅಪ್ರತಿಪತ್ತಿಯೇ **ಅವಿದ್ಯೆ** ; ಅದೇ ಸಂಸಾರಬೀಜವು. ಅದರ ನಾಶವೇ **ಮುಕ್ತಿ**, ೧-೭ ; ಆತ್ಮಜ್ಞಾನವು ಹುಟ್ಟುವದಕ್ಕೆ ಮಾತ್ರ ಶಾಸ್ತ್ರಾದಿಗಳನ್ನು ಬಯಸುತ್ತದೆಯಾದರೂ ಅವಿದ್ಯಾನಿವೃತ್ತಿಗೆ ಮತ್ತೇನನ್ನೂ ಸಹಾಯಕವಾಗಿ ಬಯಸುವದಿಲ್ಲ, ೧-೩೬ ; ಅವಿದ್ಯೆಯು ವಿದ್ಯೆಯನ್ನು ಬಾಧಿಸಲಾರದು, ೧-೩೮ ; ಅವಿದ್ಯೆಯ ಅನ್ವಯವಿದ್ದರೆ ಸಂಸಾರದ ಅನ್ವಯವಿರುವದು, ೧-೩೯, ೪೧, ೪೨ ; ಕರ್ಮವು ಪರಂಪರೆಯಿಂದ **ಅವಿದ್ಯಾನಿವೃತ್ತಿಗೆ** ಕಾರಣ, ೧-೫೨ ; ಅವಿದ್ಯೆ, ವಿದ್ಯೆ - ಇವೆರಡಕ್ಕೂ ವಿರೋಧ, ೧-೫೬ ; ಜ್ಞಾನವು ಹುಟ್ಟಿದ ಮಾತ್ರದಿಂದ ಅವಿದ್ಯೆಯನ್ನು ಕಳೆಯುವದು, ೧-೬೩, ೪-೫೭ ; ಅವಿದ್ಯೆಯಿಂದಲೇ ದೇಹವು ಆತ್ಮನೆಂದಾಗುತ್ತದೆ, ೨-೧೨ ; ಆತ್ಮನು ಭೇದರಹಿತನು, ಅನಾತ್ಮವು ಭೇದವುಳ್ಳದ್ದು ಎಂಬೀ ವಿಭಾಗವೂ ಅವಿದ್ಯೆಯ ಕಾರ್ಯವು, ೩-೬ ; ಆತ್ಮನು **ಕೂಟಸ್ಥ ಬೋಧರೂಪನಾಗಿದ್ದರೂ** ಅವಿದ್ಯೆಯು ಅವನಲ್ಲಿ ಅವಿದ್ಯಾಪ್ರಸಿದ್ಧಿಯಿಂದಲೇ ಇರುತ್ತದೆ, **ಅವಿಚಾರಿತಸಿದ್ಧವಾಗಿರುತ್ತದೆ**, ೩-೧೧೧ ; ಆತ್ಮನಲ್ಲಿ ಅವಿದ್ಯೆಯ ಸಂಭಾವನೆಯೂ ಇಲ್ಲವಾದರೂ ಅವಿದ್ಯಾನಿದ್ರೆಯಿಂದ ಮಲಗಿರುವವನಿಗೆ ವಾಕ್ಯಜ್ಞಾನವಿಲ್ಲದೆ ಅದು ತೊಲಗದು ; ಅವಿದ್ಯೆಯು ಆತ್ಮನಲ್ಲಿ ಹೇಗೆ ಬಂತು ಎಂಬ ಪ್ರಶ್ನೆಯು ಅಜ್ಞನಿಗಾಗಲಿ ಜ್ಞಾನಿಗಾಗಲಿ ಉಂಟಾಗುವ ಹಾಗೇ ಇಲ್ಲ, ೩-೧೧೨, ೧೧೫, ೧೧೬.

**ಅವಿದ್ಯಾಕೃತ** – ಅವಿದ್ಯೆಯಿಂದಾಗಿರುವ, ಅಜ್ಞಾನದಿಂದ ತೋರುವ. ಬುದ್ಧ್ಯಾದಿದೇಹಾಂತವು ಆತ್ಮನೆಂಬುದು **ಅವಿದ್ಯಾಕೃತ**, ೩-೨೯. ಅವಿದ್ಯಾಕಲ್ಪಿತ (ಸಾಕ್ಷಿತ್ವ) ೨-೫೮, ಅವಿದ್ಯೋತ್ಥ (ಅಂತಃಕರಣ) ೩-೬೦, (ಸದ್ವಿತೀಯತ್ವ) ೩-೭೯, ಅವಿದ್ಯೋತ್ಥಾಪಿತ (ಕರ್ತೃವಾದಿ) ೩-೭೩, ಅವಿದ್ಯೋತ್ಸಂಗವರ್ತಿ (ಆತ್ಮಾನಾತ್ಮವಿಭಾಗ) ೨-೧೦೩, ಆವಿದ್ಯೋಪಾದಾನ (ಆತ್ಮಾಜ್ಞಾನ) ೧-೩೬, ಅವಿದ್ಯೋಪಾಶ್ರಯ (ಇತರೇತರಾಧ್ಯಾಸ) ೨-೧೪೯ - ಇವುಗಳೆಲ್ಲವೂ ಪರ್ಯಾಯಗಳು.

**ಅವಿದ್ಯಾಕಾಮಕರ್ಮಾಣಿ** – ಅಜ್ಞಾನ, ಅದರಿಂದಾಗುವ ಕಾಮ, ಅದರಿಂದಾಗುವ ಕರ್ಮ. ಇವೇ ಸಂಸಾರಕ್ಕೆ ಕಾರಣ, ೧-೪೨.

**ಅವಿದ್ಯಾಕಾರ್ಯ** – ಅವಿದ್ಯಾಕೃತವಾದ (ಪ್ರವೃತ್ತಿನಿವೃತ್ತಿಗಳು), ೪-೬೯.

**ಅವಿದ್ಯಾಗ್ರನ್ಥಿಃ** – ಗಂಟುಹಾಕಿಕೊಂಡಿರುವ ಅವಿದ್ಯೆ. ಇದನ್ನು ಸದ್ಗುರುವೇ ನಶಮಾಡಬಲ್ಲನು, ೧-೨.

**ಅವಿದ್ಯಾನಿವೃತ್ತಿಃ, ಅವಿದ್ಯೋಚ್ಛೇದಃ** – ವಿದ್ಯೆಯಿಂದಾಗುವ ಅವಿದ್ಯೆಯ ನಾಶ, ೧-೩೬, ವಾಕ್ಯಾರ್ಥಜ್ಞಾನದಿಂದಲೇ ಅವಿದ್ಯೋಚ್ಛೇದಕವಾಗುತ್ತದೆ, ೧-೫೨.

**ಅಲುಪ್ತಸಾಕ್ಷೀ, ಅಲುಪ್ತೈಕದರ್ಶನಃ, ಅಲುಪ್ತದೃಷ್ಟಿಃ** – ಎಂದಿಗೂ ನಾಶವಾಗದ ಚೈತನ್ಯರೂಪವಾದ ದೃಷ್ಟಿಯುಳ್ಳ ಆತ್ಮನು ಸ್ವತಃಸಿದ್ಧನಾದ್ದರಿಂದ ಇಲ್ಲವೆನ್ನುವದಕ್ಕಾಗುವದಿಲ್ಲ, ೨-೩೬ ; ಈ ಆತ್ಮನು ದೃಶ್ಯನಾಗಲಾರನು, ೨-೪೧ ; ಇವನು ವಿಕಾರವಿಲ್ಲದೆ ಬುದ್ಧಿಪ್ರವೃತ್ತಿಗಳನ್ನೆಲ್ಲ ನೋಡುತ್ತಿರುತ್ತಾನೆ, ೨-೫೮.

**ಅವ್ಯಭಿಚಾರಿಪ್ರಾಮಾಣ್ಯಮ್** – ಪ್ರಾಮಾಣ್ಯವು ಎಂದಿಗೂ ತಪ್ಪದ ತತ್ತ್ವಮಸ್ಯಾದಿವಾಕ್ಯ. ಇದು ಪ್ರತ್ಯಕ್ಷಾದಿಗಳಿಗಿಂತಲೂ ಪ್ರಬಲ, ೩-೯೪.

**ಅವ್ಯಭಿಚಾರಿ** – ತನ್ನ ಸ್ವರೂಪವನ್ನು ಮಾರ್ಪಡಿಸದ ಆತ್ಮವಸ್ತು, ೨-೭೮.

**ಅಶೇಷಪುರುಷಾರ್ಥಃ** – ಸ್ವಲ್ಪವೂ ಉಳಿಯದ ಪರಮಪುರುಷಾರ್ಥ, ಮೋಕ್ಷ. ಅಜ್ಞಾನವು ಹೋದರೆ ಅನರ್ಥನಿವೃತ್ತಿಯೂ ಅರ್ಥಪ್ರಾಪ್ತಿಯೂ ಪೂರ್ಣವಾಗಿ ಪುರುಷಾರ್ಥವೆಲ್ಲ ದೊರೆಯುವದು. (ಅವ).

**ಅಶೇಷವೇದಾನ್ತಸಾರಸಂಗ್ರಹಪ್ರಕರಣಮ್** – ಉಪನಿಷತ್ತುಗಳಲ್ಲೆಲ್ಲ ಸಾರವಾಗಿರುವ ಆತ್ಮಜ್ಞಾನವನ್ನು ಸಂಗ್ರಹಿಸಿರುವ ಈ ಪ್ರಕರಣ. (ಅವ).

**ಅಸತ್** – (೧) ಅಭಾವರೂಪ, ಶೂನ್ಯರೂಪ. ಆತ್ಮನಿಗೆ ಜ್ಞಾನವುಂಟಾದಾಗ ವಿಕೃತಿಯಾದರೆ ಅನಿತ್ಯನು, ಆಗದಿದ್ದರೆ ಆಕಾಶದಂತೆ ಅಸದ್ರೂಪನಾಗಿರುವನೆಂಬ ಆಕ್ಷೇಪವು ಸರಿಯಲ್ಲ, ಏಕೆಂದರೆ ಭ್ರಾಂತಿಯಿಂದ ಭೋಕ್ತೃತ್ವವಾಗಬಹುದು, ೨-೬೦, ೬೩ ; (೨) ಮಿಥ್ಯಾಜ್ಞಾನವಾದಾಗ ತನ್ನ ದುಃಖವೇ ಅಸತ್ತಾಗಿರುತ್ತದೆ ; ಮತ್ತೊಬ್ಬರ ದುಃಖವು ಹೇಗೆ ಬಂದೀತು ? ೨-೯೦.

**ಅಸಲ್ಲಿಙ್ಗಮ್** – ನೀರಿನ ಆವಿಯೇ ಮುಂತಾದ ಹುಸಿ ಲಿಂಗದಿಂದ ಬೆಂಕಿಯನ್ನು ಅನುಮಾನಮಾಡಲಾಗುವದಿಲ್ಲವಾದ್ದರಿಂದ ಅಸತ್ಯದಿಂದ ಸತ್ಯವನ್ನು ತಿಳಿಯಲಾಗುವದಿಲ್ಲವೆಂಬ ಆಕ್ಷೇಪವು ಸರಿಯಲ್ಲ ; ಉಪಾಯವಾಗಿರುವದು ಸದಸತ್ತುಗಳಿಂದ ಬೇರೆಯೇ, ೩-೧೦೮, ೧೦೯.

**ಅಸ್ಯಸ್ಮೀತ್ಯಾದಿಕ್ರಿಯಾ** – ಕ್ರಿಯಾಪದವಿಲ್ಲದೆ ಪದಗಳು ಸೇರಿ ವಾಕ್ಯವಾಗುವದಿಲ್ಲವೆಂದರೂ ಕರ್ತವ್ಯವನ್ನು ಬೋಧಿಸುವ ವಿಧಿರೂಪದ ಕ್ರಿಯೆಯೇನೂ ಬೇಕಿಲ್ಲ ; ಅಸಿ, ಅಸ್ಮಿ - ಮುಂತಾದ ಕ್ರಿಯಾಪದವೇ ಸಾಕು, ೧-೯೭.

**ಅಸಂಸರ್ಗಃ** – ಪದಾರ್ಥಗಳು ಒಂದಕ್ಕೊಂದು ಕೂಡಿಕೊಳ್ಳದೆ ಇರುವದು. ತತ್ತ್ವಮಸ್ಯಾದಿವಾಕ್ಯಗಳಲ್ಲಿ ಅವಿವಕ್ಷಿತವಾದ ದುಃಖಿತ್ವಾದಿಗಳಿಗೆ ಸಂಸರ್ಗವಿಲ್ಲ ; ಆತ್ಮತ್ವ, ಅದ್ವಿತೀಯತ್ವ- ಇವುಗಳು ಅಭಿನ್ನವಾಗಿರುವದರಿಂದ ಇವುಗಳಿಗೂ ಸಂಸರ್ಗವಿಲ್ಲ, ೩-೭೬.

**ಅಹಮ್** – (೧) ಆತ್ಮನು ಅಹಂಪ್ರತ್ಯಯಗಮ್ಯನಾದ ಆತ್ಮ. ಜೈಮಿನಿಯ ಮತದಲ್ಲಿ ಆತ್ಮನು ಅಹಂಪ್ರತ್ಯಯಗಮ್ಯನಾದರೂ ಮೋಹಾದಿಗಳಿಲ್ಲದವನಾದ್ದರಿಂದಲೂ ಅನಾತ್ಮಸಂಬಂಧವಿಲ್ಲದವನಾದ್ದರಿಂದಲೂ ಸುಖದುಃಖಗಳ ಸಂಬಂಧವಿಲ್ಲದವನಾದ್ದರಿಂದಲೂ ಕರ್ಮದಲ್ಲಿ ಅವನಿಗೆ ಪ್ರವೃತ್ತಿಯಾಗಲಾರದು, ೧-೯೨ ರಿಂದ ೯೫.

(೨) ಅಹಂಕಾರವು ದೃಶ್ಯವಾಗಿರುವದರಿಂದಲೂ ಕರ್ಮಕರ್ತೃಭಾವವು ವಿರುದ್ಧವಾಗಿರುವದರಿಂದಲೂ ತಾನೇ ತನ್ನ ಗುಣವನ್ನು ನೋಡಲಾರನಾದ್ದರಿಂದಲೂ ಅಹಂಕಾರವು ಆತ್ಮನ ಗುಣವಲ್ಲ, ೨-೨೨ ರಿಂದ ೨೬ ; ಅಹಂ ಬ್ರಹ್ಮ ಎಂಬ ವಾಕ್ಯದಿಂದ ಅಹಂಕಾರವು ಆತ್ಮನ ಧರ್ಮವೆಂದಾಗುವದಿಲ್ಲ, ಅದು ಭ್ರಾಂತಿಯೆಂದಾಗುತ್ತದೆ, ೨-೨೮, ೨೯ ; ಅಹಂಪದವು ಆತ್ಮನಲ್ಲಿ ಲಕ್ಷಣೆಯಿಂದಲೂ ವರ್ತಿಸುತ್ತದೆ, ೨-೫೪, ೫೬, ೩-೧೦೨ ; ಅಹಂಕಾರಾದಿದ್ವೈತವು ತಾನೂ ಸಿದ್ಧವಲ್ಲ, ಆತ್ಮರೂಪದಿಂದಲೂ ಸಿದ್ಧವಲ್ಲ. ಅದು ಆತ್ಮನಲ್ಲಿ ಕಲ್ಪಿತ, ೨-೪೫ ; ಅಹಂಕಾರವು ದ್ರಷ್ಟೃದೃಶ್ಯರೂಪದಿಂದಿರುವದರಿಂದ ಆತ್ಮನೆಂಬ ಭ್ರಾಂತಿ, ೨-೪೬, ೫೩ ; ಅಹಂಕಾರದಿಂದಲೇ ಆತ್ಮನು ಅನೇಕನೆಂಬ ಭ್ರಾಂತಿ, ೨-೪೭ ; ಅಹಂಕಾರವು ನಾಶವಾದರೆ ಆತ್ಮನು ಅದ್ವಿತೀಯನು, ೨-೫೩ ; ಅಹಂಕಾರವು ಆತ್ಮನಿಗಿಂತ ಬೇರೆಯಲ್ಲ, ೨-೯೫ ; ಅಹಂಬುದ್ಧಿ, ಅಹಂಬುದ್ಧಿಗಮ್ಯ- ಇವೆರಡಕ್ಕಿಂತಲೂ ಆತ್ಮನು ಭಿನ್ನನು, ೨-೧೦೦ ; ಅಹಂತಜ್ಜ್ಞಾತೃಗಳಿಗೆ ಅವಭಾಸ್ಯಾವಭಾಸಕಭಾವಸಂಬಂಧ, ೩-೫೯.

**ಅಹಂಮಮತ್ವಯತ್ನೇಚ್ಛಾಃ** – ಅಹಂಕಾರಾದಿಗಳು ಅನಾತ್ಮ. ಏಕೆಂದರೆ ಅವು ವಿಷಯವಾಗಿವೆ, ಆಗಮಾಪಾಯಿಗಳಾಗಿವೆ, ೨-೨೨, ಅಹಂಕಾರವೇ ದ್ವೈತಕ್ಕೆಲ್ಲ ಮೂಲವಾದ್ದರಿಂದ ಅದು ಹೋದರೆ ಮಮತ್ವಾದಿಗಳೂ ತೊಲಗುವವು ೨-೩೦ ; ಅಹಂಕಾರವು ಮುಕ್ತಿಸುಷುಪ್ತಿಗಳಲಿಲ್ಲವಾದ್ದರಿಂದ ಆತ್ಮನ ಧರ್ಮವಲ್ಲ, ೨-೩೨ ;

ಶ್ರುತಿವಾಕ್ಯದಿಂದ ಅಹಂಕಾರಮಮಕಾರಗಳು ಆತ್ಮನಲ್ಲಿಲ್ಲವೇ ಇಲ್ಲವೆಂಬುದು ಗೊತ್ತಾಗುತ್ತದೆ, ೨-೧೧೭.

**ಅಹಂವ್ಯಾಜಃ** – ಅಹಂಕಾರದ ನೆಪ. ಈ ಮೂಲಕವಾಗಿ ಆತ್ಮನನ್ನೇ ಅಹಂ ಬ್ರಹ್ಮಾಸ್ಮಿ ಎಂಬ ವಾಕ್ಯದಲ್ಲಿ ತಿಳಿಸಿದೆ, ೩-೪೧, ೪೩ ; ಆದ್ದರಿಂದ ಸ್ವರೂಪಲಯದಿಂದ ಆತ್ಮನನ್ನು ತಿಳಿಸುವದಕ್ಕೆ ಅಹಂಕಾರವು ಉಪಾಯವಾಗಿದೆ, ೩-೪೩.

## ಆ

**ಆಗಮಃ** – **ಶಾಸ್ತ್ರ**. ವೇದಾಂತ ಎಂಬ ಆಗಮವಾಕ್ಯದಿಂದಲೇ ಸಮ್ಯಗ್ಜ್ಞಾನ ವಾಗುತ್ತದೆ, (ಅವ) ; ಆಗಮಜ್ಞಾನವು ಒಂದೇ ವ್ಯಾಪಾರದಿಂದ ಅಜ್ಞಾನವನ್ನು ಕಳೆದುಬಿಡುತ್ತದೆ, ಅಜ್ಞಾನನಾಶಕ್ಕೆ ಆ ಜ್ಞಾನದ ಅಭ್ಯಾಸವೇನೂ ಬೇಕಿಲ್ಲ, ೧-೬೭ ; ಅಹಂಕಾರಾದಿದ್ವೈತವು ಆತ್ಮನಲ್ಲಿಲ್ಲವೆಂಬುದಕ್ಕೆ ಆಗಮ, ೨-೪೨ ; ಪ್ರತ್ಯಕ್ಷಕ್ಕೆ ವಿರುದ್ಧವಾಗಿರುವದು ಆಗಮಾಭಾಸ ಮಾತ್ರ, ಆಗಮವು ಅದರಲ್ಲಿ ಪ್ರಮಾಣವಲ್ಲ ೩-೪೫.

**ಆಗಮಿಕ** – ಶಾಸ್ತ್ರದಿಂದಾದ ಸಮ್ಯಗ್ಜ್ಞಾನವು ಕರ್ಮಪ್ರವೃತ್ತಿನಿಮಿತ್ತವಲ್ಲ, ೧-೨೯.

**ಆಗಮಾಪಾಯಿ** – ಬಂದುಹೋಗುತ್ತಿರುವ. ಅಹಂಕಾರವು ಆತ್ಮನ ಧರ್ಮವೆಂದೇ ಆದರೆ ಆಗಮಾಪಾಯಿಯಾಗಿರುವದರಿಂದ ಆತ್ಮನಿಗೆ ವಿಕಾರವಾಗುವದು, ಅವನು ಅನಿತ್ಯನೆಂದಾಗುವದು, ೨-೨೫ ; ಅಹಂಕಾರಾದಿಯು ಆಗಮಾಪಾಯಿಯಾಗಿರುವದರಿಂದ ಹುಸಿ, ೨-೯೫ ; ಆಗಮಾಪಾಯಿಯಿಂದ ಅನಾತ್ಮವನ್ನು ಕಂಡುಹಿಡಿಯುವ ರೀತಿ, ೩-೫೬ ; ಆಗಮಾಪಾಯವೆಂಬ ಅನ್ವಯವ್ಯತಿರೇಕಹೇತುಗಳಿಂದ ಅನಾತ್ಮಗಳನ್ನು ತೆಗೆದುಹಾಕಿ ವಾಕ್ಯವು ಅಜ್ಞಾನವನ್ನು ಕಳೆಯುತ್ತದೆ, ೩-೨೨ ; ದ್ರಷ್ಟೃದೃಶ್ಯವಿಭಾಗ, ಆಗಮಾಪಾಯಿಸಾಕ್ಷಿವಿಭಾಗ- ಎಂದು ಅನ್ವಯವ್ಯತಿರೇಕವು ಎರಡು ಬಗೆ, ೩-೫೩ ; ಅವಸ್ಥಾತ್ರಯವು ಆಗಮಾಪಾಯಿಯಾಗಿರುವದರಿಂದ ಅದಕ್ಕೆ ಸಾಕ್ಷಿಯಾಗಿರುವವನೇ ಆತ್ಮನೆಂದು ಅನುಮಾನದಿಂದ ನಿಶ್ಚಯಿಸುವದು ಸಾಕ್ಷಾಜ್ಜ್ಞಾನವಲ್ಲ, ೩-೫೭.

**ಆಗೋಪಾಲಾವಿಪಾಲಪಣ್ಡಿತಮ್** – ದನಕಾಯುವ ಕುರಿಕಾಯುವ ಅಜ್ಞರಿಂದ ಹಿಡಿದು ಪಂಡಿತರವರೆಗೂ. ಅಜ್ಞಾನವು ಪ್ರಮಾಣಜ್ಞಾನದಿಂದ ಹೋಗುತ್ತದೆ ಎಂಬುದು

ಎಲ್ಲರಿಗೂ ತಿಳಿದದ್ದು, ೨-೧೦೪ ; ಸುಷುಪ್ತಿಯಲ್ಲಿ ನಿರ್ವಿಕಲ್ಪಕವಾದ ಆತ್ಮವಸ್ತುವಿನ ಅರಿವು ಎಲ್ಲರಿಗೂ ಇದೆ ಎಂಬುದು ಸರಿಯಲ್ಲ, ಅಲ್ಲಿ ಅಜ್ಞಾನವಿದೆ, ೩-೫೮.

**ಆತ್ಮಪ್ರಜ್ಞಾನಮಾತ್ರಶರೀರಪ್ರತಿಬಿಂಬಿತ, ಆತ್ಮಚೈತನ್ಯಪ್ರತಿಬಿಂಬಿತ** – ಆತ್ಮನ ಚಿನ್ಮಾತ್ರಸ್ವರೂಪದಲ್ಲಿ ಹುಸಿಯಾಗಿ ತೋರುವ ಅಜ್ಞಾನ, ೨-೯೭, ೧-೧೨.

**ಆತ್ಮವಸ್ತು** – ಆತ್ಮವಸ್ತುವಿನ ಸ್ವಭಾವವನ್ನು ಅನುಸರಿಸಿ ನೋಡಿದರೆ ಅವಿದ್ಯೆಯ ಸಂಭಾವನೆಯುಕೂಡ ಆತ್ಮನಲ್ಲಿಲ್ಲ, ೩-೧೧೨ ; ಆತ್ಮವಸ್ತುವಿನ ಸ್ವರೂಪವನ್ನು ಮಾತ್ರ ಆಶ್ರಯಿಸಿಕೊಂಡು ಆತ್ಮಜ್ಞಾನವು ಅವಿದ್ಯೆಯನ್ನು ಕಳೆಯುತ್ತದೆ, ೧-೩೬ ; ಆತ್ಮವಸ್ತು ಸಾಕ್ಷಾತ್ಕರಣಕ್ಕಾಗಿ ಮಾಡುವ ಅನ್ವಯವ್ಯತಿರೇಕವು ವಿಧಿಪ್ರಾಪ್ತ, ೨-೪.

**ಆತ್ಮವಿಜ್ಞಾನಮ್, ಆತ್ಮಜ್ಞಾನಮ್** – ಆತ್ಮನನ್ನು ಅರಿಯುವದು. ಅರಿವು ಎಂಬ ಅರ್ಥದ 'ಅವಬೋಧ' 'ಪ್ರತಿಪತ್ತಿ' ಮುಂತಾದ ಶಬ್ದಗಳನ್ನೆಲ್ಲ ಆತ್ಮಶಬ್ದಕ್ಕೆ ಸೇರಿಸಿಕೊಂಡು ಇದಕ್ಕೆ ಪರ್ಯಾಯವಾಗಿ ಪ್ರಯೋಗಿಸುವರು. ಅಮಾನಿತ್ವಾದಿಗಳಿಂದ ಜ್ಞಾನ ಉಂಟಾಗುತ್ತದೆ, ೪-೬೮ ; ಆತ್ಮಜ್ಞಾನವುಂಟಾದಮೇಲೆ ಅಮಾನಿತ್ವಾದಿಗಳು ಅಯತ್ನವಾಗಿಯೇ ಜ್ಞಾನಿಯಲ್ಲಿರುವವು, ೪-೬೯.

**ಆತ್ಮಾ** – ನಮ್ಮೆಲ್ಲರ ಸ್ವರೂಪವಾಗಿರುವ ತತ್ತ್ವ. ಅಜ್ಞಾನದಿಂದ ಆತ್ಮನಿಗೆ ದುಃಖವುಂಟಾಗಿದೆ, ಸ್ವರೂಪಸುಖವು ಮರೆಯಾಗಿದೆ, (ಅವ) ; ಅವಿದ್ಯೆಯು ಆತ್ಮಾನುಭವದಿಂದ ತಿಳಿಯಬರುತ್ತದೆ, ೧-೭ ; ವೇದಾಂತವಾಕ್ಯಜನ್ಯವಾದ ಆತ್ಮಜ್ಞಾನದಿಂದ ಅಜ್ಞಾನವು ಹೋಗುತ್ತದೆ, ೧-೮ ; ನಾನಾರಸಬ್ರಹ್ಮವು ಸಾಧಕನ ಆತ್ಮವಾದರೂ ಅನಾತ್ಮವಾದರೂ ಜ್ಞಾನಕರ್ಮಸಮುಚ್ಚಯವು ಬೇಕಾಗಿರುವದಿಲ್ಲ, ೧-೬೯ ; ಆತ್ಮನಿಗೆ ಅಹಂಕಾರವು ಧರ್ಮವಾದರೆ ಅದನ್ನು ಅರಿಯುವದಕ್ಕೆ ಆಗುತ್ತಿರಲಿಲ್ಲ, ೨-೨೩ ; ಆತ್ಮನು ಅಹಂಪ್ರತ್ಯಯಗ್ರಾಹ್ಯನಲ್ಲ, ೨-೨೪ ರಿಂದ ೪೩ ; ದ್ವೈತವು ಆತ್ಮನಿಗಿಂತ ಬೇರೆಯಾಗಿಯಾಗಲಿ ಅಥವಾ ತಾನೇ ಆಗಲಿ ಸಿದ್ಧವಾಗುವದಿಲ್ಲವಾಗಿ ಅದು ಕಲ್ಪಿತವೇ, ೨-೪೫ ; ಅಹಂಕಾರದಿಂದಲೇ ಆತ್ಮನಲ್ಲಿ ಅನೇಕತ್ವಭ್ರಾಂತಿಯಾಗಿದೆ, ೨-೪೭ ; ಆತ್ಮನು ಅನುಭವರೂಪನಾಗಿದ್ದರೂ ಅಹಂಕಾರಸಂಬಂಧದಿಂದ ಅವನಲ್ಲಿ ಭೋಕ್ತೃತ್ವವಾಗಬಹುದು, ೨-೬೦, ೬೩ ; ಆತ್ಮನಲ್ಲಿ ಜಗತ್ತು ಹುಸಿಯಾಗಿ ತೋರಿ ಅಡಗುತ್ತದೆ, ೨-೬೮ ; ಆತ್ಮನು ಕೂಟಸ್ಥನಾದ್ದರಿಂದ ದುಃಖಿಯಲ್ಲ, ೨-೭೧ ರಿಂದ ೭೭ ; ಆತ್ಮನಲ್ಲಿ ಯಾವ ವಿಶೇಷಣಕ್ಕೂ ಅನ್ವಯವಿಲ್ಲವಾದ್ದರಿಂದ ಅವನು ನಿರ್ವಿಶೇಷಣನು, ೨-೯೪ ; ಆತ್ಮನು ತನಗೆ ತಾನು ಏತರಿಂದಲೂ ಮರೆಯಾಗಿಲ್ಲ, ೨-೯೮ ;

ಅವಿದ್ಯಾಮಾತ್ರದಿಂದ ವ್ಯವಹಿತನಾಗಿರುತ್ತಾನೆ, ೩-೧೧೩ ; ಆತ್ಮನಿಗೆ ಅಂತಃಕರಣದಂತೆ ಮತ್ತೊಂದರಿಂದ ಸಿದ್ಧಿಯ ಅಪೇಕ್ಷೆಯಿರುವದಿಲ್ಲ, ೨-೧೧೦ ; ಆತ್ಮನೇ ಅಜ್ಞಾನದೃಷ್ಟಿಯಿಂದ ಅಜ್ಞಾನಕ್ಕೆ ಆಶ್ರಯ, ವಿಷಯ, ೩-೧ ; ನಾನು ಈ ಗಂಧವನ್ನು ಮೂಸುತ್ತೇನೆ ಎಂದು ಗ್ರಹೀತ್ರಾದಿಗಳನ್ನು ಯಾವನು ಅರಿಯುತ್ತಾನೋ ಅವನೇ ಆತ್ಮನೆಂದು ಶ್ರುತಿ, ೩-೩೯ ; ನಾನು ಸುಖಿ, ದುಃಖಿ ಎಂದು ಮುಂತಾಗಿರುವ ಅನಿತ್ಯವಾದ ಪ್ರತ್ಯಯವನ್ನು ಅವಗತಿ ಪರ್ಯಂತವಾಗಿ ಅರಿಯುವವನೇ ಆತ್ಮನು ಎಂಬುದೇ ವಾಕ್ಯಜ್ಞಾನವು, ೩-೪೬ ; ಅನಾತ್ಮವು ಆತ್ಮಪೂರ್ವಕವಾಗಿರುತ್ತದೆ, ೪-೩ ; ಬುದ್ಧ್ಯಾದಿದೇಹಗಳಲ್ಲಿ ಆತ್ಮನೊ ಅನಾತ್ಮವೊ ಎಂಬ ಸಂಶಯವಿರುತ್ತದೆ. ಆದ್ದರಿಂದ ಅಸಾಧಾರಣಧರ್ಮಗಳಿಂದ ಅವು ಅನಾತ್ಮವೆಂದು ಅರಿತುಕೊಳ್ಳಬೇಕು, ೪-೪, ೫.

**ಆತ್ಮವಿಶುದ್ಧಿ – ಚಿತ್ತಶುದ್ಧಿ** . ಇದಕ್ಕೆ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡಬೇಕು, ೧-೫೦.

**ಆತ್ಮಾತ್ಮೀಯ –** ತಾನು ತನ್ನದು ಎಂಬ ಸಂಬಂಧ. ಇದು ಹೊರಗಿನ ವಿಷಯವು ಬೇಕಾದದ್ದು ಬೇಡ- ಎಂಬ ಕಾರಣದಿಂದ ಅಹಂಕಾರದಲ್ಲಿ ಆಗುವ ವಿಕಾರದಿಂದ ಈ ಜ್ಞಾನವಾಗುತ್ತದೆ, ೨-೬೦.

**ಆತ್ಮಾನಾತ್ಮಾನೌ –** ಆತ್ಮ , ಅನಾತ್ಮ -ಇವು. ಪ್ರತ್ಯಕ್ಷಾದಿಪ್ರಮಾಣಗಳಿಂದ ಸಿದ್ಧ, ೪-೩ ; ಆತ್ಮನು ಸ್ವತಃಸಿದ್ಧ ; ವಾಕ್ಯೈಕಗಮ್ಯನಲ್ಲ, ೧-೮೯, ಇವೆರಡರ ಅಸಾಧಾರಣಧರ್ಮಗಳನ್ನು ತಿಳಿದುಕೊಂಡು ವಿಂಗಡಿಸಿಕೊಳ್ಳಬೇಕು, ೪-೫ ; ಇವೆರಡಕ್ಕೂ ಹಗ್ಗಹಾವುಗಳಂತೆ ಒಂದರಲ್ಲೊಂದರ ಅಧ್ಯಾಸವಾಗುತ್ತದೆ, ೨-೧೦೧, ೧೦೨ ; ಆತ್ಮಾನಾತ್ಮವಿವೇಕವು ಅಹಂಕಾರಾದಿಗಳಿಗಿಂತ ಆತ್ಮನು ಬೇರೆ ಎಂದಿಷ್ಟೇ ತಿಳಿಸುತ್ತದೆ, ೨-೬೩ ; ಆತ್ಮಾನಾತ್ಮವಿಭಾಗವೂ ಅವಿದ್ಯೆಯಿಂದಲೇ, ೨-೧೦೩, ೩-೬ ; ಆತ್ಮಾನಾತ್ಮ ವಿಭಾಗಜ್ಞಾನವನ್ನು ಅದ್ವಿತೀಯಜ್ಞಾತೃಜ್ಞಾನದಿಂದ ವಾಕ್ಯವು ಕಳೆಯುತ್ತದೆ, ೩-೬.

**ಆತ್ಮೈಕತ್ವಮ್ –** ಆತ್ಮನು ಒಬ್ಬನೇ ಆಗಿರುವನೆಂಬುದು, ಐಕಾತ್ಮ್ಯ. ಆತ್ಮೈಕತ್ವವನ್ನು ಅರಿತುಕೊಂಡವನಿಗೆ ತನ್ನ ದೇಹದಲ್ಲಿರುವ ದುಃಖವೂ ಸುಳ್ಳಾಗುವದು ; ಮತ್ತೊಬ್ಬರ ದುಃಖವು ತನಗಾಗುವ ಸಂಭವವೇ ಇಲ್ಲ, ೨-೯೦.

**ಆಬ್ರಹ್ಮಸ್ತಂಬಪರ್ಯನ್ತ –** ಬ್ರಹ್ಮನಿಂದ ಹಿಡಿದು ಮರದವರೆಗಿನ, ಅಥವಾ ಹುಲ್ಲುಕಡ್ಡಿಯವರೆಗಿನ, ಈ ಎಲ್ಲಾ ಪ್ರಾಣಿಗಳಿಗೂ ದುಃಖನಿವೃತ್ತಿಯಲ್ಲಿಯೂ ಸುಖಪ್ರಾಪ್ತಿಯಲ್ಲಿಯೂ ಸ್ವಭಾವದಿಂದಲೇ ಪ್ರವೃತ್ತಿಯಿದೆ, (ಅವ) ; ಈ ಎಲ್ಲಾ

ಪ್ರಾಣಿಗಳಲ್ಲಿಯೂ ಗ್ರಹೀತ್ರಾದಿರೂಪವಾದ ಸಂಸಾರವಿದೆ, ೨-೯೭ ; ಈ ಎಲ್ಲಾ ಪ್ರಾಣಿಗಳಲ್ಲಿಯೂ ಇರುವ ಪ್ರಮಾಣಪ್ರಮೇಯಾದಿವ್ಯವಹಾರವು ಮಿಥ್ಯಾಧ್ಯಾಸವೇ, ೩-೧.

**ಆಭಾಸಃ** – ಹಾಗೆ ತೋರುವದು, ನಿಜವಾಗಿಲ್ಲದಿರುವದು. ಆತ್ಮನು ಅಹಂಪ್ರತ್ಯಗ್ರಾಹ್ಯನೆಂಬ ಪ್ರತ್ಯಕ್ಷವು ಆಭಾಸ, ೨-೨೬ ; ಪ್ರತ್ಯಕ್ಷ, ಆಗಮ- ಇವುಗಳೆರಡೂ ಒಂದೇ ವಿಷಯದಲ್ಲಿದ್ದರೆ ಎರಡರಲಿ ಒಂದು ಆಭಾಸವು, ೩-೮೫ ; ಆತ್ಮನಲ್ಲಿ ತೋರುವ ಕ್ರಿಯಾಕಾರಕಫಲರೂಪವಾದ ಸಂಸಾರವು ಆಭಾಸವು, ೨-೫೧.

**ಆಮ್ನಾಯಃ**– ವೇದ. ವೇದವು ಕ್ರಿಯಾರ್ಥವಾದ್ದರಿಂದ ಕ್ರಿಯೆಯನ್ನು ಹೇಳಿದ್ದು ವ್ಯರ್ಥ ಎಂಬ ಜೈಮಿನಿಯ ಅಭಿಪ್ರಾಯ, ೧-೧೭ ; ಈ ಅಭಿಪ್ರಾಯವು ಕರ್ಮಕಾಂಡಕ್ಕೆ ಮಾತ್ರ ಸೇರಿದ್ದು, ಎಲ್ಲಾ ವೇದಕ್ಕೂ ಅನ್ವಯಿಸುವದಲ್ಲ, ೧-೯೧.

**ಆರಬ್ಧಫಲ** – ಫಲವನ್ನು ಕೊಟ್ಟಾಗಿರುವ ಕರ್ಮ. ಆರಬ್ಧಕರ್ಮಕ್ಕೆ ಭೋಗದಿಂದಲೇ ಕ್ಷಯ, ೧-೧೨ ; ಇದು ಮೀಮಾಂಸಕರಂತೆ ವೇದಾಂತಿಗಳಿಗೂ ಒಪ್ಪು, ಆರಬ್ಧಫಲವುಳ್ಳ ಕರ್ಮಗಳು ಆಗಿಬಿಟ್ಟಿರುವದರಿಂದ ಅವನ್ನು ತ್ಯಾಗಮಾಡುವದು ಆಗಲಾರದು, ೧-೮೧.

**ಆರೂಢಪತಿತಃ** – ತತ್ತ್ವಮಸ್ಯಾದಿವಾಕ್ಯಗಳಲ್ಲಿ ತ್ವಂಪದಾರ್ಥವಿವೇಕಕ್ಕಾಗಿ ಅನ್ವಯವ್ಯತಿರೇಕವನ್ನು ಮಾಡಿಕೊಂಡು ಆತ್ಮದರ್ಶನವನ್ನು ಮಾಡಿಕೊಳ್ಳುವದು ವಿಧಿ ಪರಿಪ್ರಾಪಿತವಾದ್ದರಿಂದ ಅದನ್ನು ನಡುವೆ ಮಾಡಿಬಿಟ್ಟವನು ಆರೂಢಪತಿತನಾಗುವನು, ೩-೬ ; ಆದ್ದರಿಂದ ಪ್ರಸಂಖ್ಯಾನವಿಧಿಯಿಲ್ಲದಿದ್ದರೆ ಆರೂಢಪತಿತನಾಗದೆ ಹೋಗಬೇಕಾಗುವದೆಂಬ ವಾದವು ಸರಿಯಲ್ಲ, ೩-೧೨೬.

## ಇ–ಐ

**ಇತರೇತರಾಧ್ಯಾಸರೂಪಃ, ಇತರೇತರಾಧ್ಯಾಸಃ** – ಆತ್ಮ, ಅನಾತ್ಮ - ಇವೆರಡನ್ನೂ ಒಂದನ್ನೊಂದರಲ್ಲಿ ಅಧ್ಯಾಸಮಾಡಿಕೊಂಡಿರುವದು ಅವಿದ್ಯೆಯಿಂದಲೇ, ೨-೧೦೦, ೧೦೧.

**ಇತರೇತರಸ್ವಭಾವಾಪೇಕ್ಷಸಿದ್ಧ** – ದ್ವೈತವು ಒಂದನ್ನಾಶ್ರಯಿಸಿ ಒಂದು ಸಿದ್ಧ, ೨-೧೦೨.

**ಇದಂಜ್ಞಾನಮ್** – ಇದು ಎಂಬ ವಿಷಯಜ್ಞಾನವು ಭೇದಜ್ಞಾನವು, ೩-೬ ; ಇದಂಜ್ಞಾನವು ಜ್ಞಾತೃವಿಗೆ ಆಗುತ್ತದೆಯಾದ್ದರಿಂದ ಸುಷುಪ್ತಿಯಲ್ಲಿರುವದಿಲ್ಲ, ೩-೫೯, ೬೨ ; ಜ್ಞಾತೃವಿಗೆ ಉಪಕಾರಾದಿಗಳನ್ನು ಮಾಡುವದಿಲ್ಲವಾದ್ದರಿಂದ ಅಹಂಕಾರವು 'ಇದು' ಎಂದು ಮಾತ್ರವೇ ತಿಳಿಯಬರುತ್ತದೆ, ನನ್ನದು ಎಂದು ತಿಳಿಯಬರುವದಿಲ್ಲ, ೩-೬೧.

**ಇದಮರ್ಥಃ** – ವಿಷಯವಾದ ಅನಾತ್ಮ. ಇದನ್ನು ಅನ್ವಯವ್ಯತಿರೇಕದಿಂದ ಬಿಟ್ಟರೆ ನನ್ನನ್ನೇ ಬಿಟ್ಟಂತೆ ಎಂದು ಅಜ್ಞನು ತಿಳಿಯುತ್ತಾನೆ, ೪-೯.

**ಈಶ್ವರಾರ್ಪಿತಕರ್ಮಾಣಿ** – ಈಶ್ವರನಿಗೆ ಅರ್ಪಣೆಮಾಡಿದ ಕರ್ಮಗಳಿಂದ ಚಿತ್ತಶುದ್ಧಿ, ೧-೪೭.

**ಉಪಾಸನಾ** – ವಾಕ್ಯಜ್ಞಾನವನ್ನು ಭಾವನೆಮಾಡುವದು. ದೀರ್ಘಕಾಲಮಾಡಿದ ಉಪಾಸನೆಯಿಂದ ಅಜ್ಞಾನವು ಸಂಪೂರ್ಣವಾಗಿ ಹೋಗುವದೆಂಬವರ ಪಕ್ಷ, ಮತ್ತು ಅದರ ಖಂಡನೆ, ೧-೬೭.

**ಉಲೂಕನಿಶಾ** – ಗೂಬೆಗಳು ರಾತ್ರೆಯೆಂದು ಕಾಣುವ ನಡುಹಗಲು. ಇದರಂತೆ ಅವಿದ್ಯಾಪ್ರಸಿದ್ಧಿಯಿಂದಲೇ ಆತ್ಮನಲ್ಲಿ ಅವಿದ್ಯೆಯಿರುತ್ತದೆ, ೩-೧೧೧.

**ಏಕಕಾಲಾನವಸ್ಥಿತಿಃ** – ಕರ್ಮಜ್ಞಾನಗಳಿಗೆ ಸಾಧ್ಯಸಾಧನಭಾವವಿರುವದರಿಂದ ಒಂದೇ ಕಾಲದಲ್ಲಿರುವಹಾಗಿಲ್ಲ, ೧-೫೪ ; ಹೀಗೆಯೇ ಅವು ಒಬ್ಬನಲ್ಲಿಯೇ ಇರುವದೂ ಇಲ್ಲ, ೧-೫೫.

**ಏಕಲಃ, ಏಕಾಕೀ** – ಅದ್ವಿತೀಯನಾದ ಆತ್ಮ, ೨-೧೧೮, ೩-೬೫.

**ಏಕಾಗ್ರಮನಾಃ** – ಅನ್ವಯವ್ಯತಿರೇಕಗಳಿಂದ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ಮನಸ್ಸಿನ ಏಕಾಗ್ರತೆಯುಳ್ಳವನು, ೩-೪.

**ಏಧಿ** – ಆಗು. ತತ್ತ್ವಮಸಿ ಮುಂತಾದ ವಾಕ್ಯಗಳಲ್ಲಿರುವ ಇದ್ದೀಯೆ ಮುಂತಾದ ಕ್ರಿಯಾಪದಗಳಿಗೆ 'ಆಗು' ಎಂಬ ವಿಧ್ಯರ್ಥವನ್ನು ಕಲ್ಪಿಸಬಾರದು, ೧-೯೭.

**ಐಕಾಗ್ರ್ಯಮ್** – ಭಾವನೆ. ಅಭ್ಯಾಸದಿಂದ ಬೆಳೆಯುವದು ಪ್ರಮಿತಿಯಲ್ಲ, ಐಕಾಗ್ರ್ಯವೇ, ೩-೯೦.

**ಐಕಾತ್ಮ್ಯಮ್** – ಆತ್ಮನು ಒಬ್ಬನೇ ಆಗಿರುವನೆಂಬುದು. ಐಕಾತ್ಮ್ಯವನ್ನು ಅರಿಯದಿರುವದೇ ಅವಿದ್ಯೆ, ೧-೭ ; ಐಕಾತ್ಮ್ಯವು ಅನುಭವಮಾತ್ರರೂಪವಾಗಿರುವ

ದರಿಂದ ಅದಕ್ಕೆ ಪ್ರಮಾಣವು ಬೇಕಿಲ್ಲ, ೧-೮೯ ; ಐಕಾತ್ಮ್ಯವಾಕ್ಯಗಳೂ ವಿಧಿವಾಕ್ಯಗಳಂತೆಯೇ ಪ್ರಮಾಣ, ೧-೯೧ ; ಐಕಾತ್ಮ್ಯಪಕ್ಷದಂತೆ ಕರ್ಮವಾದಿಗಳ ಪಕ್ಷದಲ್ಲಿಯೂ ಅದೃಷ್ಟಾರ್ಥವಾದ, ಸ್ವರ್ಗಾದಿಫಲವುಳ್ಳ, ಕರ್ಮಗಳಲ್ಲಿ ಅಜ್ಞನಿಗೇ ಅಧಿಕಾರ, ೧-೯೨ ರಿಂದ ೯೬ ; ಐಕಾತ್ಮ್ಯಜ್ಞಾನಿಗೆ ಕೋಪಾದಿಗಳಿಲ್ಲ, ೨-೧೮ ; ಸಾಂಖ್ಯಪ್ರಕ್ರಿಯೆಯಿಂದಲೂ ನಿರ್ವಿಕಾರವಾದ ಐಕಾತ್ಮ್ಯವು ಸಿದ್ಧವಾಗುತ್ತದೆ, ೨-೮೫.

**ಕ**

**ಕರ್ತ್ರಾದಿ** – ಪ್ರತ್ಯಗಾತ್ಮ ವಿಷಯದಲ್ಲಿರುವ ಪ್ರಮೆಯು ಕರ್ತೃವೇ ಮುಂತಾದ ಕಾರಕಭೇದವನ್ನು ಅಲ್ಲಗಳೆದೇ ಹುಟ್ಟುತ್ತದೆ, ೩-೭೧ ; ಕನಸಿನಿಂದ ಎಚ್ಚತ್ತವನು ಸ್ವಪ್ನದ ಕರ್ತೃಕರ್ಮಕರಣಗಳನ್ನು ಕಾಣದಿರುವಂತೆ ಶ್ರುತಿಯ ಜ್ಞಾನವನ್ನು ಪಡೆದವನು ಗುರುಶಾಸ್ತ್ರಾದಿಗಳನ್ನು ಕಾಣುವದೇ ಇಲ್ಲ, ೩-೩೬, ೩೭.

**ಕರ್ಮ, ಕ್ರಿಯಾ** – ಅಜ್ಞಾನದಿಂದಾಗುವ ಕರ್ಮವು ಅಜ್ಞಾನವನ್ನು ಕಳೆಯಲಾರದು, ಏಕೆಂದರೆ ಅವೆರಡಕ್ಕೂ ವಿರೋಧವಿಲ್ಲ, ೧-೮, ೩೫, ೩೭ ; ಕರ್ಮವಾದಿಗಳ ಪೂರ್ವಪಕ್ಷ, ೧-೯ ರಿಂದ ೨೧ ರವರೆಗೆ ; ಪರಿಹೃತವಾಗಿರುವದರ ಪರಿಹಾರವೂ ಪ್ರಾಪ್ತವಾಗಿರುವದರ ಪ್ರಾಪ್ತಿಯೂ ಕರ್ಮದಿಂದ ಆಗಲಾರದು, ಏಕೆಂದರೆ ಅಜ್ಞಾನವೇ ಅದಕ್ಕೆ ಅಡ್ಡಿಯಾಗಿರುತ್ತದೆ, ೧-೩೪ ; ಕರ್ಮಕ್ಕೆ ಉತ್ಪಾದ್ಯ, ಆಪ್ಯ, ಸಂಸ್ಕಾರ್ಯ, ವಿಕಾರ್ಯ- ಈ ನಾಲ್ಕೇ ಕರ್ಮದ ಕಾರ್ಯವಾಗಿದೆಯಾದ್ದರಿಂದ ಅದು ಅಕಾರ್ಯವಾದ ಮುಕ್ತಿಗೆ ಕಾರಣವಲ್ಲ, ೧-೨೪, ೫೩ ; ಕರ್ತೃತ್ವಾದ್ಯಧಿಕಾರಕಾರಣಗಳು ತನಗಿರುವವೆಂಬ ಅಭಿಮಾನವಿರುವ ಅಜ್ಞನೇ ಕರ್ಮವನ್ನು ಮಾಡಿ ಅದರ ಫಲವನ್ನು ಪಡೆಯುತ್ತಾನೆ, ೧-೪೧, ೯೬ ; ಕರ್ಮಜ್ಞಾನಗಳಿಗೆ ಸಾಧ್ಯಸಾಧನಭಾವವಿರುವದರಿಂದಲೂ ವಿರೋಧವಿರುವದರಿಂದಲೂ ಸಮುಚ್ಚಯವಾಗಲಾರದು, ೧-೫೪ ರಿಂದ ೬೭ ; ನಾನಾರಸಬ್ರಹ್ಮವಾದದಲ್ಲಿಯೂ ಇವಕ್ಕೆ ಸಮುಚ್ಚಯವಿಲ್ಲ, ೧-೬೮ ರಿಂದ ೭೮ ; ಕರ್ಮದಲ್ಲಿ ಪ್ರವೃತ್ತಿಯು ಭ್ರಾಂತಿಯಿಂದಲೇ, ೧-೨೯ ; ಅವಿದ್ಯಾಕಾಮಕರ್ಮಗಳಿಂದ ಸಂಸಾರ, ೧-೪೨ ; ಕರ್ಮವು ಜ್ಞಾನಕ್ಕೆ ಪರಂಪರೆಯಿಂದ ಉಪಕಾರಕ, ೧-೪೭ ರಿಂದ ೫೨.

**ಕರ್ಮಕರ್ತೃಭಾವಃ** – ಒಬ್ಬನೇ ಆತ್ಮನು ಅಹಂಪ್ರತ್ಯಯಕ್ಕೆ ಕರ್ತೃವೂ ಕರ್ಮವೂ ಆಗಿರುವನೆಂಬ ಮೀಮಾಂಸಕರ ಪಕ್ಷವು ಸರಿಯಲ್ಲ, ೧-೨೪ ರಿಂದ ೨೭.

ಕಲ್ಪನಾ – ಅಧ್ಯಾಸ. ಕಲ್ಪನೆಯಿಂದಲೇ ಸ್ತ್ರೀದೇಹವನ್ನು ಮೋಹಿಸುತ್ತಾರೆ, ೨-೫೨ ; ಅಹಂಕಾರಾದಿದ್ವೈತವು ಆತ್ಮನಲ್ಲಿ ಕಲ್ಪಿತ, ೨-೪೫ ; ವಿರುದ್ಧಧರ್ಮಗಳೂ ಆತ್ಮನಲ್ಲಿ ಕಲ್ಪಿತವಾಗಿರಬಹುದು, ೨-೫೦.

ಕಾಮಃ – ಕಾಮದಿಂದಲೇ ಸಂಸಾರ, ೧-೪೨ ರಿಂದ ೪೪ ; ಕರ್ಮದಿಂದ ಚಿತ್ತಶುದ್ಧಿಯಾಗಿ ಕಾಮಗಳನ್ನೆಲ್ಲ ಬಿಟ್ಟಾಗ ಪ್ರತ್ಯಗಾತ್ಮನಕಡೆಗೆ ಮನಸ್ಸು ತಿರುಗುತ್ತದೆ, ೧-೪೮.

ಕಾಮ್ಯಕರ್ಮಾಣಿ – ಕಾಮ್ಯನಿಷಿದ್ಧಕರ್ಮಗಳನ್ನು ಬಿಟ್ಟು ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡಿದಮಾತ್ರದಿಂದ ಮುಕ್ತಿಯಾಗುವದೆಂಬ ಪಕ್ಷವು ಸರಿಯಲ್ಲ. ಕಾಮ್ಯಾದಿಕರ್ಮಗಳಿಗೆ ಬೇರೆಬೇರೆಯ ಫಲವಿದೆ, ಮುಕ್ತಿಯು ಅದಕ್ಕೆ ಫಲವಲ್ಲ, ೧-೨೬, ೨೭ ; ಹಿಂದಿನ ಜನ್ಮದ ಕಾಮ್ಯನಿಷಿದ್ಧಕರ್ಮಗಳೂ ನಿತ್ಯಕರ್ಮದಿಂದ ಅಳಿಯಲಾರವು, ೧-೮೨, ೮೩, ೮೪ ; ಕಾಮ್ಯನಿಷಿದ್ಧಕರ್ಮಗಳನ್ನು ನಾನು ಮಾಡುವದೇ ಇಲ್ಲವೆಂದು ಯಾರಿಂದಲೂ ಪ್ರತಿಜ್ಞೆಮಾಡುವದಾಗಲಾರದು, ೧-೮೧.

ಕಾರಕಮ್ – ಕರ್ತ್ರಾದಿಗಳ ಸ್ವರೂಪ. ಅವಿದ್ಯೆಯಿಂದುಂಟಾಗಿರುವದರಿಂದ ಕಾರಕಗಳನ್ನೆಲ್ಲ ಜ್ಞಾನವು ಹುಟ್ಟಿದಮಾತ್ರದಿಂದ ನಾಶಮಾಡುತ್ತದೆ, ೧-೩೬ ; ಕ್ರಿಯೆಯು ಕಾರಕಗಳ ಸಹಾಯವಿಲ್ಲದೆ ಫಲವನ್ನು ಕೊಡುವದಕ್ಕೆ ತಾನು ಉಳಿದುಕೊಂಡಿರಲಾರದು, ೧-೩೬.

ಕಾರ್ಯಕರಣಸಂಘಾತ – ಶರೀರೇಂದ್ರಿಯಗಳ ಗುಂಪು. ಇದಕ್ಕಿಂತ ವ್ಯತಿರೇಕವಾಗಿ ಆತ್ಮನು ಇದಾನೆಂದು ತಿಳಿದವನಿಗೂ ತಿಳಿದುಕೊಳ್ಳದವನಿಗೂ ವ್ಯವಹಾರದಲ್ಲಿ ತಾರತಮ್ಯವಿದೆ, ೨-೨೦.

ಕಾರ್ಯಕಾರಣಭಾವಃ – ಕಾರ್ಯಕಾರಣರೂಪವಾದ ದ್ವೈತವಿಲ್ಲದ ಆತ್ಮನನ್ನು ವೇದಾಂತವಾಕ್ಯವು ಸಾಕ್ಷಾತ್ತಾಗಿ ತಿಳಿಸಿಕೊಡುತ್ತದೆ, ೩-೪೭ ; ಕಾರ್ಯಕಾರಣಗಳ ಆಗಮಾಪಾಯಗಳಿಗೆ ಆತ್ಮನು ಸಾಕ್ಷಿ ಎಂದು ತಿಳಿಯುವದರಿಂದ ಸಾಕ್ಷ್ಯನ್ವಯ ಸಾಕ್ಷ್ಯವ್ಯತಿರೇಕದ ಮೂಲಕ ಆತ್ಮರೂಪವು ತಿಳಿಯುತ್ತದೆ, ೩-೫೫.

ಕಾಲತ್ರಯಾಪರಿಚ್ಛಿತ್ತಿಃ – ಅವಿದ್ಯೆಗೆ ಮೂರು ಕಾಲಪರಿಚ್ಛೇದವೂ ಇಲ್ಲ. ಜ್ಞಾನದೃಷ್ಟಿಯಿಂದ ನೋಡಿದಾಗ ಅದು ಮೂರು ಕಾಲದಲ್ಲಿಯೂ ಇಲ್ಲ, ೨-೫೩, ೩-೧೧೭.

**ಕಾಲಾನ್ತರಫಲದಾಯಿ** – ಕರ್ಮವು ಕಾಲಾಂತರದಲ್ಲಿ ಫಲವನ್ನು ಕೊಡತಕ್ಕದ್ದಾದ್ದರಿಂದ ಅದಕ್ಕೆ ವಿಧಿಯು ಅವಶ್ಯ, ಜ್ಞಾನಕ್ಕೆ ಬೇಕಿಲ್ಲ, ೧-೯೦.

**ಕೂಟಸ್ಥ** – ಅವಿಕಾರಿಯಾದ ಆತ್ಮ. ಅಂತಃಕರಣವು ಪರಿಣಾಮಿಯಾಗಿರುವಂತೆ ಆತ್ಮನು ಪರಿಣಾಮಿಯಲ್ಲ ; ಅವನು ಇದ್ದಂತೆ ಇರುವ ಕೂಟಸ್ಥನು, ೨-೬೯, ೭೪, ೭೭, ೮೩, ೮೬, ೩-೧ ; ಇವನಿಗೆ ಕಲ್ಪಿತವಾದ ಪರಿಣಾಮವನ್ನು ಒಪ್ಪಿದರೂ ಬಾಧಕವಿಲ್ಲ, ೨-೮೫ ; ಸಾಮಾನ್ಯ ವಿಶೇಷಗಳನ್ನು ಬಿಟ್ಟು ಇದ್ದಂತೆ ಇರುವದೇ ಕೂಟಸ್ಥತ್ವವು, ೩-೧೭ ; ಕೂಟಸ್ಥನಾದ ಆತ್ಮನಿಗೂ ಪರಿಣಾಮಿಯಾದ ಅಂತಃಕರಣಕ್ಕೂ ಆತ್ಮಾನವಬೋಧವೇ ಸಂಬಂಧ, ೩-೨೦ ; ಕೂಟಸ್ಥಾತ್ಮನಲ್ಲಿ ಹಾನೋಪಾದಾನಗಳಿಲ್ಲ, ೩-೨೧ ಆತ್ಮನಿಗೆ ಕೂಟಸ್ಥಬೋಧವು ಸ್ವಾಭಾವಿಕವಾದದ್ದು, ಔಪಾಧಿಕವಲ್ಲ, ೩-೧, ೧೫, ೬೦, ೧೧೧ ; ಕೂಟಸ್ಥಬೋಧವಿಲ್ಲದೆ ಅಂತಃಕರಣಕ್ಕೆ ತೋರುವದು ಮರೆಯಾಗುವದು ಮುಂತಾದವು ಸಿದ್ಧಿಯಾಗವು, ೨-೮೨ ; ಆತ್ಮಜ್ಞಾನವಾದಾಗ ಕೂಟಸ್ಥನಾದ ಅವಗತಿಮಾತ್ರವೇ ಉಳಿದುಕೊಳ್ಳುವದು, ೪-೩೮ ; ಕೂಟಸ್ಥಜ್ಞಾನರೂಪನಾದ ಆತ್ಮನು ಅವಸ್ಥಾತ್ರಯದಲ್ಲಿಯೂ ಅದ್ವಿತೀಯನೇ ಆಗಿರುತ್ತಾನೆ, ೪-೪೮.

**ಕೇವಲಜ್ಞಾನಮ್** – ಆತ್ಮವಿಷಯವಾದ ಜ್ಞಾನವೊಂದೇ ಸಂಸಾರಾನರ್ಥದ ನಿವೃತ್ತಿ, ೧-೨೯.

**ಕೇವಲಾತ್ಮಾ** – ಉಪಾಧಿಯಿಲ್ಲದ ಬರಿಯ ಆತ್ಮ. ಕೇವಲಾತ್ಮನಲ್ಲಿ ಅನ್ವಯವ್ಯತಿರೇಕಗಳಿಲ್ಲವಾದ್ದರಿಂದ ಬುದ್ಧಿಕರ್ತೃತ್ವ, ಸಾಕ್ಷಿತ್ವ- ಎಂಬ ಉಪಾಧಿಗಳನ್ನು ಇಟ್ಟುಕೊಂಡೇ ಅನ್ವಯವ್ಯತಿರೇಕಗಳನ್ನು ಹೇಳಲಾಗುತ್ತದೆ, ೨-೫೮.

**ಕೈವಲ್ಯಮ್** – ಅದ್ವಿತೀಯಾತ್ಮನಾಗಿರುವಿಕೆ, ಮೋಕ್ಷ. ಅಹಂಕಾರಾದಿಗಳನ್ನು ಅಲ್ಲಗಳೆಯುವ ನೇತಿ ಎಂಬ ಶ್ರುತಿಯಿಂದ ಜ್ಞಾನವಾಗಿ ಕೈವಲ್ಯವಾಗುವದು, ೨-೧೧೬ ; ಅಹಂ ಬ್ರಹ್ಮ ಎಂಬ ವಾಕ್ಯಜ್ಞಾನವನ್ನು ಅಭ್ಯಾಸಮಾಡಿದ ಬಳಿಕ ಅವಾಕ್ಯಾರ್ಥರೂಪದ ಜ್ಞಾನವುಂಟಾದರೆ ಕೈವಲ್ಯವೆಂಬವರ ಪೂರ್ವಪಕ್ಷ, ೩-೯ ; ಸುಷುಪ್ತಿಮಾತ್ರದಿಂದ ಕೈವಲ್ಯವಿಲ್ಲ, ಏಕೆಂದರೆ ಮತ್ತೆ ಎಚ್ಚರದಲ್ಲಿ ಸಂಸಾರಕ್ಕೆ ಬರುತ್ತಾರೆ, ಆದ್ದರಿಂದ ಅಲ್ಲಿ ಅಜ್ಞಾನವಿದೆಯೆನ್ನಬೇಕು, ೩-೫೮.

**ಕ್ರಿಯಾಕಾರಕಫಲಾನಿ, ಕಾರಕಕ್ರಿಯಾಫಲಾನಿ** – ಅಜ್ಞಾನವು ಕ್ರಿಯಾಕಾರಕರೂಪವಾಗಿರುವದರಿಂದ ಅದನ್ನು ಜ್ಞಾನವು ಒಂದೇ ಸಲಕ್ಕೆ ನಾಶಮಾಡಿಬಿಡುತ್ತದೆ, ೧-೬೭ ; ಕ್ರಿಯಾಕಾರಕಫಲರೂಪವಾದ ತೋರಿಕೆಯು ಆತ್ಮನನ್ನು ಸ್ವಲ್ಪವೂ

ಸೋಂಕುವದಿಲ್ಲ, ೨-೫೧, ೧೦೮, ೧೧೬ ; ಕ್ರಿಯಾಕಾರಕರಹಿತನಾಗಿರುವ, ನಾಮಾದಿಗಳಿಗಿಂತ ಆಚೆಯಿರುವ ಆತ್ಮನೇ ನಿಜವಾದ ಆತ್ಮನು, ೨-೫೭, ೩-೧೦೨ ; ಅನುಮಾನದಿಂದ ಕ್ರಿಯಾಕಾರಕಫಲರಹಿತವಾದ ಆತ್ಮತತ್ವವು ಸಿಕ್ಕಲಾರದು, ೩-೧೧೫.

ಕ್ರಿಯಾಪದಮ್ – ವಾಕ್ಯಕ್ಕೆ ಕ್ರಿಯಾಪದವು ಬೇಕು, ಆದರೆ ವಿಧಿಯನ್ನು ಹೇಳುವ ಕ್ರಿಯಾಪದವೇ ಬೇಕೆಂಬುದಿಲ್ಲ ; ಅಸಿ, ಅಸ್ಮಿ – ಮುಂತಾದವುಗಳಿದ್ದರೂ ಸಾಕು, ೧-೯೭.

ಕ್ಷಣಪ್ರಧ್ವಂಸಿ, ಕ್ಷಣಭಙ್ಗ, ಕ್ಷಣಭಙ್ಗುರಮ್ – ಕ್ಷಣದಲ್ಲಿ ನಾಶವಾಗುವ, ಕ್ಷಣಕ್ಷಣಕ್ಕೂ ಪರಿಣಾಮವಾಗುವ ಬುದ್ಧಿ, ೨-೬೯, ೭೪, ೮೨.

## ಖ

ಖ್ಯಾತ್ಯಾದಯಃ – ಗ್ರಂಥರಚನೆಯನ್ನು ಮಾಡುವವರಿಗೆ ಖ್ಯಾತ್ಯಾದಿಗಳ ಆಸೆಯಿದ್ದರೆ ಗ್ರಂಥವು ಅಪ್ರಮಾಣವೆಂದಾಗುತ್ತದೆ, ೧-೬.

## ಗ

ಗೀರ್ಮನಸೋಃ ಸ್ಮೃತಿಃ – ವಾಕ್ಕು ಮನಸ್ಸು ಇವುಗಳಿಗೆ ವಿಷಯ. ತತ್ತ್ವಮಸ್ಯಾದಿವಾಕ್ಯದಿಂದ ಜ್ಞಾನವಾದಾಗ ವಾಙ್ಮನಸ್ಸುಗಳಿಗೆ ಅವಿಷಯನಾಗುತ್ತಾನೆ, ೩-೧.

ಗುಣಃ – (೧) ಅಂಗವಾದದ್ದು. ಜ್ಞಾನವು ಕರ್ಮಕ್ಕೆ ಗುಣವಲ್ಲ, ಏಕೆಂದರೆ ಅದು ಕರ್ಮವನ್ನೇ ತಿಂದುಹಾಕಿಬಿಡುತ್ತದೆ, ೧-೬೩ ; ಕರ್ಮಕಾಂಡದಲ್ಲಿರುವ ಜ್ಞಾನವು ಅದಕ್ಕೆ ಅನುಗುಣವಾಗಬಹುದು, ವಸ್ತುಮಾತ್ರಬೋಧಕವಾದ ಆತ್ಮಜ್ಞಾನವು ಅದಕ್ಕೆ ಗುಣವಾಗಲಾರದು, ೧-೫೪, ೬೩. (೨) ಗುಣವೃತ್ತಿ. ಯಾವದಾದರೊಂದು ಗುಣ ಸಾದೃಶ್ಯದಿಂದ ಅರ್ಥವನ್ನು ಹೇಳುವ ಶಬ್ದದ ವೃತ್ತಿ, ೨-೫೪ ; ಅಹಂಕಾರವು ಆತ್ಮನಿಗೆ ಗುಣಲೇಶದಿಂದ ಎಂದರೆ ಸ್ವಲ್ಪಗುಣಸಾದೃಶ್ಯವಿರುವದರಿಂದ, ಲಕ್ಷಣವಾಗಿರುತ್ತದೆ, ೩-೯೮, ೯೯, ೧೦೨, ೧೦೪ ; ಪ್ರತ್ಯಕ್ಷಕ್ಕೂ ವಾಕ್ಯಕ್ಕೂ ವಿರೋಧವಾದರೆ ಪ್ರತ್ಯಕ್ಷವು ಗೌಣವು ಎನ್ನಬೇಕು, ೩-೯೬.

ಗುರುಃ – ಅವಿದ್ಯೆಯನ್ನು ಹೋಗಲಾಡಿಸುವ ಗುರು, ೧-೨ ; ಗುರುಗಳ ಅಪ್ಪಣೆಯಿಂದ ಈ ಪ್ರಕರಣವನ್ನು ಬರೆದಿದೆ, ೧-೫ ; ಜ್ಞಾನವಾದಬಳಿಕ ಗುರುಶಾಸ್ತ್ರಾದಿ ಭೇದವಿರುವದಿಲ್ಲ, ೪-೩೭.

ಗ್ರಹೀತೃಗ್ರಹಣಗ್ರಾಹ್ಯಗೃಹೀತಯಃ – ಗ್ರಹೀತೃವೆಂದರೆ ಗ್ರಹಿಸುವವನು, ಅರಿಯುವ ದ್ರಷ್ಟೃ, ಪ್ರಮಾತೃ ; ಗ್ರಹಣವೆಂದರೆ ಅರಿವು ; ಗ್ರಾಹ್ಯವೆಂದರೆ ಅರಿಯಲ್ಪಡುವ ದೃಶ್ಯ, ಪ್ರಮೇಯ ; ಗೃಹೀತಿ ಎಂದರೆ ಅರಿತದ್ದರ ಫಲವು, ಪ್ರಮಿತಿ. ಇದೆಲ್ಲವೂ ಆತ್ಮನ ಅವಿದ್ಯೆಯಿಂದ ತೋರುವ ಅನಾತ್ಮವು, ೨-೯೭ ; ಹೊರಗೆ ಆಕಾರವುಳ್ಳದ್ದಾಗಿರುವದು ಗ್ರಾಹ್ಯವೆಂದೂ ನಿಶ್ಚಯವೇ ಮುಂತಾದ ವೃತ್ತಿಯುಳ್ಳದ್ದು ಗ್ರಹಣವೆಂದೂ ಅವುಗಳಲ್ಲಿ ಅನ್ವಯಿಯಾಗಿ ಸೇರಿಕೊಂಡು ಬಂದಿರುವದು ನಾನೆಂಬ ಗ್ರಹೀತೃವೆಂದೂ ಇವೆಲ್ಲವನ್ನೂ ಅರಿಯುತ್ತಿರುವ ಆತ್ಮನೇ ಸಾಕ್ಷಿಯೆಂದೂ ವಿಂಗಡಿಸಿಕೊಳ್ಳಬೇಕು, ೨-೧೦೭ ; ಆತ್ಮನು ಗ್ರಾಹಕನೆಂದರೆ ಗ್ರಾಹ್ಯವಾದ ಅಹಂಕಾರವು ಬೇರೆ ಎಂದು ಒಪ್ಪಬೇಕು, ೨-೨೭, ೩-೫೯ ; ಗ್ರಾಹಕಾದಿಗಳೇ ತಮ್ಮ ಭಾವಾಭಾವಗಳನ್ನು ಅರಿಯಲಾರವು, ೨-೧೦೯ ; ಅವಿದ್ಯಾಮಾತ್ರಸಿದ್ಧವಾಗಿರುವದರಿಂದ ಗ್ರಾಹಕಾದಿಗಳು ಆತ್ಮನಿಗಿಂತ ಬೇರೆಯಾಗಿಲ್ಲವೇ ಇಲ್ಲ, ೨-೧೧೪.

## ಘ

ಘಟಃ, ಕುಮ್ಭಃ – ಗಡಿಗೆ. ಅಹಂಕಾರವು ಜ್ಞಾತೃವಿಗೆ ಘಟದಂತೆ ದೃಶ್ಯ, ೨-೩೭ ; ಬುದ್ಧಿದೇಹಘಟಾದಿಗಳು ಆತ್ಮನನ್ನು ಬಿಟ್ಟರೆ ಇಲ್ಲವೇ ಇಲ್ಲ, ೨-೧೧೪ ; ದೇಹಾದಿಬುದ್ಧ್ಯಂತರಗಳೆಲ್ಲವೂ ಘಟದಂತೆ ದೃಶ್ಯವಾಗಿರುವದರಿಂದ ಅನಾತ್ಮ, ೨-೫೪ ; ಘಟಾದಿಗಳು ಅಹಂಕಾರಕ್ಕೆ ಪರಂಪರೆಯಿಂದ ಲಿಂಗವಾಗಿರುವಂತೆ ಅಹಂಕಾರವೂ ದ್ರಷ್ಟೃವಿಗೆ ಲಿಂಗ, ೩-೫೬ ; ಘಟವು ಘಟಪ್ರತ್ಯಯಕ್ಕೆ ದೃಶ್ಯವಾಗಿರುವದರಿಂದ ಅದರ ದ್ರಷ್ಟೃವಾಗಲಾರದು ; ಹೀಗೆಯೇ ಆತ್ಮನು ಅಹಂಪ್ರತ್ಯಯಕ್ಕೆ ದೃಶ್ಯನಾಗಿರುವದಾದರೆ ಆತ್ಮನು ದ್ರಷ್ಟೃವಾಗಬಾರದಾಗುವದು, ೨-೨೪ ; ಘಟಾದಿಗಳು ಹತ್ತಿರವಿದ್ದರೂ ಇಲ್ಲದಿದ್ದರೂ ರತ್ನವು ಬೆಳಗುತ್ತಲೇ ಇರುವಂತೆ ಆತ್ಮನು ಬುದ್ಧಿವೃತ್ತಿಗಳು ಇದ್ದರೂ ಇಲ್ಲದಿದ್ದರೂ ಬೆಳಗುತ್ತಿರುವನು, ೨-೬೫, ೬೬ ; ಗಡಿಗೆಯ ಉತ್ಪತ್ತಿಸ್ಥಿತಿನಾಶಗಳಿಂದ ಆಕಾಶಕ್ಕೆ ಆ ಉತ್ಪತ್ತ್ಯಾದಿಗಳಾಗದಿರುವಂತೆ ಬುದ್ಧಿವೃತ್ತಿಗಳ ಉತ್ಪತ್ತ್ಯಾದಿಗಳಿಂದ ಆತ್ಮನಿಗೂ ಉತ್ಪತ್ತ್ಯಾದಿಗಳು ಆಗುವದಿಲ್ಲ, ೨-೭೯ ; ಗಡಿಗೆ ಮುಂತಾದವುಗಳಂತೆ ಅಹಂಕಾರಾದಿಗಳು ಆತ್ಮನು ಹಾಗೇ ಇದ್ದರೂ ಬಂದುಹೋಗುತ್ತಿರುವವು, ೨-೯೫ ; ಘಟಾದಿಗಳು ಆತ್ಮನಿಗೆ ಮರೆಯಾಗಿರುವಂತೆ ಆತ್ಮನು ಆತ್ಮನಿಗೆ ಮರೆಯಾಗಿಲ್ಲ, ೨-೯೮ ; ಘಟ, ಘಟಬುದ್ಧಿ- ಇವೆರಡಕ್ಕಿಂತಲೂ ದ್ರಷ್ಟೃವು ಬೇರೆಯಾಗಿರುವಂತೆ ಅಹಂಬುದ್ಧಿ, ಅಹಂಬುದ್ಧಿಗಮ್ಯನಾದ ದುಃಖಿ- ಇವರಿಗಿಂತ ಆತ್ಮನು ಬೇರೆ, ೨-೧೦೦ ; ಘಟಾಕಾಶ, ಆಕಾಶ- ಎಂಬ ಸಾಮಾನ್ಯವಿಶೇಷಗಳ ಹಂಗಿಲ್ಲದೆ ಆಕಾಶವು ಅವಿಕಾರಿಯಾಗಿರುವಂತೆ

ಆತ್ಮನೂ ಅವಿಕಾರಿ ೩-೧೭ ; ಅಜ್ಞಾನವು ಸುಷುಪ್ತಿಯಲ್ಲಿದ್ದರೆ ಘಟವನ್ನರಿಯೆನು ಎಂಬಂತೆ ಪ್ರತ್ಯಕ್ಷವಾಗಿ ಅನುಭವಕ್ಕೆ ಬರಬೇಕೆಂಬ ಆಕ್ಷೇಪವು ಸರಿಯಲ್ಲ, ೩-೫೮ ; ಘಟಾಕಾಶ, ಮಹಾಕಾಶ- ಇವುಗಳಂತೆ ತತ್ತ್ವಂಪದಾರ್ಥಗಳಿಗೆ ವಿಶೇಷಣವಿಶೇಷ್ಯಭಾವದಿಂದ ವಿರುದ್ಧಧರ್ಮಗಳು ತೊಲಗುತ್ತವೆ, ೩-೯ ; ಘಟಾದಿಗಳು ಸದಸತ್ತುಗಳಿಗಿಂತ ಭಿನ್ನವಾದರೂ ಅನುಮಾನಕ್ಕೆ ಲಿಂಗವಾಗಿಯೂ ಲಿಂಗವಲ್ಲದೆಯೂ ಇರುವದರಿಂದ ಅಸತ್ತು ಲಿಂಗವಾಗಲಾರದೆಂಬ ಯುಕ್ತಿಯೂ ಸರಿಯಲ್ಲ, ೩-೧೦೯.

## ಚ

**ಚತುರ್ವಿಧ** – ನಾಲ್ಕು ಬಗೆಯ ಕರ್ಮಕಾರ್ಯಗಳು. ಉತ್ಪಾದ್ಯ, ಆಪ್ಯ, ಸಂಸ್ಕಾರ್ಯ, ವಿಕಾರ್ಯ ಎಂಬಿವು ; ಮೋಕ್ಷವು ಇವುಗಳಲ್ಲಿ ಒಂದೂ ಅಲ್ಲ, ೧-೨೪.

**ಚಿತಿಃ, ಚೈತನ್ಯಮ್** – ಆತ್ಮಸ್ವರೂಪನಾದ ಜ್ಞಾನ. ಚಿದ್ರೂಪನಾದ ಆತ್ಮನಿಗೆ ಅಂತಃಕರಣಸಂಬಂಧದಿಂದ ಭೇದ, ೨-೪೮ ; ಆತ್ಮನ ಚೈತನ್ಯವನ್ನು ಅಹಂಕಾರದಲ್ಲಿಯೆಂದು ತಿಳಿಯುವದು ಭ್ರಾಂತಿ, ೨-೧೦೨, ೩-೩೦.

**ಚಿತ್ತಮ್** – ಅಂತಃಕರಣ. ಈಶ್ವರಾರ್ಪಿತಕರ್ಮಗಳಿಂದ ಚಿತ್ತಶುದ್ಧಿ, ೧-೪೭, ೪೮ ; ಯೋಗಾಭ್ಯಾಸದಿಂದ ಚಿತ್ತವು ಪ್ರತ್ಯಕ್ಪ್ರವಣವಾಗುತ್ತದೆ, ೧-೫೨.

**ಚಿನ್ನಿಭ** – ಚಿದ್ರೂಪನಾದ ಆತ್ಮನಂತೆ ತೋರುವ, ಅಹಂಕಾರ. ಇದನ್ನು ವಿವೇಕಿಗಳು ಕೂಡ ಆತ್ಮನೆಂದು ತಿಳಿಯುತ್ತಾರೆ, ೩-೭೨, ೧೦೦ ; ಬುದ್ಧಿವೃತ್ತಿಗಳೆಲ್ಲ ಚಿನ್ನಿಭವಾಗಿರುವದರಿಂದ ವೃತ್ತಿಭೇದದಿಂದ ಅವಗತಿರೂಪನಾದ ಆತ್ಮನಿಗೆ ಭೇದವಾಗುವದಿಲ್ಲ, ೨-೮೬.

**ಚಿರನ್ತನೀ ಭ್ರಾನ್ತಿಃ** – ಅನಾದಿಯಾದ ಅವಿದ್ಯೆ. ಇದು ತತ್ತ್ವಜ್ಞಾನದಿಂದಲೇ ಹೋಗುತ್ತದೆ, ೨-೧೦೩.

**ಚೋದ್ಯಮ್** – (೧) ಆಕ್ಷೇಪ, ೩-೧೧೦, ೧೧೬, (೨) ಚೋದನೆಗೆ ತಕ್ಕ ವಿಧಿ. ಆಕಾರಕಬ್ರಹ್ಮಾತ್ಮಸ್ವರೂಪವನ್ನು ಅರಿತುಕೊಂಡವನು, ಯಾವ ಚೋದನೆಗೂ ತಕ್ಕವನಲ್ಲ, ೧-೫೮.

## ಜ

ಜೈಮಿನಿಃ – (೧) ಕರ್ಮಕಾಂಡದ ಧರ್ಮವನ್ನು ವಿಚಾರಿಸುವದಕ್ಕಾಗಿ ಧರ್ಮಜಿಜ್ಞಾಸೆಯನ್ನು ಮಾಡುವ ಸೂತ್ರಗಳನ್ನು ಬರೆದಿರುವ ಋಷಿಗಳು, ೧-೧೭ ; ಅವರಿಗೆ ವೇದವೆಲ್ಲ ಕ್ರಿಯಾರ್ಥವೆಂಬ ಅಭಿಪ್ರಾಯವಿತ್ತೆಂಬುದು ತಪ್ಪು, ೧-೮೯. (೨) ಜೈಮಿನಿಯ ಅನುಯಾಯಿಯಾದ ಕರ್ಮವಾದಿ. ಕರ್ಮವಾದಿಗಳ ಮತದಲ್ಲಿಯೂ ಅಜ್ಞನಿಗೇ ಕರ್ಮವಿಧಿ, ೧-೯೨ ರಿಂದ ೯೬ರ ವರೆಗೆ.

ಜ್ಞಾನಮ್ – (೧) ಅರಿವು. ನಿದ್ರೆಯಿಂದೆಚ್ಚತ್ತವನಿಗೆ ನಾನೇನೂ ಅರಿಯಲಿಲ್ಲ ಎಂಬ ಅರಿವು ಆಗುವದರಿಂದ ನಿದ್ರೆಯಲ್ಲಿ ಇದು, ನನ್ನದು ಎಂಬ ಜ್ಞಾನವಿಲ್ಲವೆಂದಾಯಿತು, ೩-೬೨ ; (೨) ಕರ್ತ್ರಾತ್ಮಜ್ಞಾನವೆಂಬರ್ಥದಲ್ಲಿ ಮೀಮಾಂಸಕರು ಈ ಶಬ್ದವನ್ನುಪಯೋಗಿಸಿ ಕರ್ಮದಿಂದಲೇ ಮೋಕ್ಷವೆಂದೂ ಜ್ಞಾನಕರ್ಮಗಳಿಗೆ ಅಂಗಾಂಗಿಭಾವವೆಂದೂ ವಾದಿಸುತ್ತಾರೆ, ೧-೧೦ರಿಂದ ೨೦ರ ವರೆಗೆ. (೩) ಉಪಾಸನೆ ಎಂಬರ್ಥದಲ್ಲಿ ಕೆಲವರು ಈ ಶಬ್ದವನ್ನು ಉಪಯೋಗಿಸಿ ಜ್ಞಾನಕರ್ಮಸಮುಚ್ಚಯವನ್ನು ಮೋಕ್ಷಸಾಧನವೆನ್ನುತ್ತಾರೆ. (೪) ಸಾಕ್ಷಾತ್ಕಾರರೂಪವಾದ ಅವಾಕ್ಯಾರ್ಥಜ್ಞಾನವೆಂಬ ಸಂಸರ್ಗರಹಿತಜ್ಞಾನರೂಪವಾದ ಅನುಭವವು ವಾಕ್ಯಜ್ಞಾನದ ಅಭ್ಯಾಸದಿಂದಾಗುವ ದೆಂದು ಕೆಲವರು ವಾದಿಸುತ್ತಿದ್ದರು, ೧-೬೭. (೫) ಈ ಎಲ್ಲಾ ಮತಗಳನ್ನೂ ಖಂಡಿಸಿ ವಾಕ್ಯಾರ್ಥಜ್ಞಾನವೇ ವೇದಾಂತೋಕ್ತಜ್ಞಾನವು, ಅದರಿಂದಲೇ ಮೋಕ್ಷ ಎಂದು ಈ ಪ್ರಕರಣದಲಿ ತೋರಿಸಿದೆ. ಮಿಥ್ಯಾಜ್ಞಾನ, ಭ್ರಾನ್ತಿಜ್ಞಾನ – ಎಂದು ಮುಂತಾಗಿ ಉಪಪದಗಳನ್ನುಪಯೋಗಿಸಿದ ಹೊರತು ಜ್ಞಾನವೆಂದರೆ ಸಮ್ಯಗ್ಜ್ಞಾನ - ಸರಿಯಾದ ಆತ್ಮಜ್ಞಾನ - ಎಂದೇ ಈ ಪ್ರಕರಣದಲ್ಲಿ ಸಾಮಾನ್ಯವಾಗಿ ತಿಳಿಯಬೇಕು. ಈ ಜ್ಞಾನವೇ ಅಜ್ಞಾನವನ್ನು ಕಳೆಯುವದು. ಬೋಧ, ಅವಬೋಧ, ಪ್ರಬೋಧ, ತತ್ತ್ವದರ್ಶನ, ವಿದ್ಯಾ, ಸಮ್ಯಗ್ಜ್ಞಾನ - ಇವೆಲ್ಲ ಪರ್ಯಾಯಗಳು, ೧-೩೪, ೩೭, ೩೮, ೫೨, ೫೪, ೬೪, ೬೫, ೬೮.

ಜ್ಞಾನಮ್ – ಚೈತನ್ಯಸ್ವರೂಪ. ಆತ್ಮನು ಜ್ಞಾನಸ್ವರೂಪನೇ, ೩-೧ ; ಆತ್ಮಜ್ಞಾನವಿಲ್ಲದೆ ಯಾವ ವಿಷಯವೂ ಇರುವದಿಲ್ಲ, ೨-೯೭.

ಜ್ಞಾನಕಾರೀ, ಜ್ಞಾನಪ್ರಕೃತಿಃ – ಅಂತಃಕರಣದಲ್ಲಿ ಜ್ಞಾನವನ್ನುಂಟುಮಾಡುವ ಆತ್ಮ, ೩-೧.

ಜ್ಞಾನೀ – (೧) ಜ್ಞಾನವುಳ್ಳವನು (೨) ಜ್ಞಾನವಾದಿ, ೧-೧೨, ೧೯.

**ಜ್ಞೇಯಜ್ಞಾತೃಕತಾ** – ಅರಿಯಲ್ಪಡುವದು, ಅರಿಯುವದು- ಎಂಬ ಸಂಬಂಧ. ಅಂತಃಕರಣದಲ್ಲಿರುವ ಅಹಂಕಾರಕ್ಕೂ ಜ್ಞಾತೃವಿಗೂ ಗ್ರಾಹ್ಯಗ್ರಾಹಕತ್ವವಿದೆ, ೩-೫೯.

**ಜ್ಯೋತಿಃ** – ಬೆಳಕು. ಅಂತಃಕರಣವೇ ಮುಂತಾದದ್ದೆಲ್ಲವನ್ನೂ ಬೆಳಗುವ ಚೈತನ್ಯಜ್ಯೋತಿಯು ಆತ್ಮನು, ೨-೮೮, ೮೯, ೯೭.

## ತ

**ತತ್ಪದಾರ್ಥಃ** – ತತ್ತ್ವಮಸಿ ಎಂಬ ವಾಕ್ಯದಲ್ಲಿ ತತ್ಪದಕ್ಕೆ ವಿವಕ್ಷಿತವಾದ ಅರ್ಥವು ಅದ್ವಿತೀಯತ್ವವು, ಪಾರೋಕ್ಷ್ಯವು ಅವಿವಕ್ಷಿತವು, ಏಕೆಂದರೆ ಆತ್ಮನಿಗೆ ಪಾರೋಕ್ಷ್ಯವು ಹೊಂದುವದಿಲ್ಲ, ೩-೭೯.

**ತತ್ತ್ವಮಸ್ಯಾದಿವಾಕ್ಯಮ್** – ಜೀವಬ್ರಹ್ಮರಿಗೆ ಐಕ್ಯವನ್ನು ಹೇಳುವ 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ'- ಮುಂತಾದ ವಾಕ್ಯಗಳು. ಇವನ್ನು ಈಗಿನ ವೇದಾಂತಿಗಳು ಮಹಾವಾಕ್ಯಗಳೆನ್ನುವರು. ಚಿತ್ತವು ಪ್ರತ್ಯಕ್ಪ್ರವಣವಾದ ಬಳಿಕ ವಾಕ್ಯಜ್ಞಾನವಾಗಿ ಅವಿದ್ಯೆಯ ನಾಶವಾಗುವದು, ೧-೫೨ ; ಇಂಥ ವಾಕ್ಯಗಳು ವಿಧಿಯನ್ನು ಹೇಳುವದಿಲ್ಲವಾದ್ದರಿಂದ ಕರ್ಮಾರ್ಥವಲ್ಲ, ೧-೯೧ ; ಇವು ಸ್ವತಃಸಿದ್ಧವಾದ ಅರ್ಥವನ್ನು ತಿಳಿಸುವವೇ ಹೊರತು ಪ್ರಸಂಖ್ಯಾನವೇ ಮುಂತಾದ ಬೇರೆಯ ಅರ್ಥವನ್ನು ಎಂದಿಗೂ ತಿಳಿಸಲಾರವು, ೧-೯೮, ೩-೮೨ ; ಅಜ್ಞಾನವನ್ನು ಕಳೆಯುವ ಜ್ಞಾನವು ತತ್ತ್ವಮಸ್ಯಾದಿ ವಾಕ್ಯದಿಂದಲೇ ಆಗುವದು, ೨-೧, ೩-೧ ; ವಾಕ್ಯಶ್ರವಣವಾದ ಬಳಿಕವೂ ತ್ವಂಪದಾರ್ಥದ ಜ್ಞಾನವಿಲ್ಲದ್ದರಿಂದ ವಾಕ್ಯಾರ್ಥಜ್ಞಾನವಾಗುವದಿಲ್ಲ, ೨-೧ ; ಪದಪದಾರ್ಥಗಳಿಗೆ ಅನ್ವಯವ್ಯತಿರೇಕವನ್ನು ಮಾಡಿಕೊಂಡರೆ ಜ್ಞಾನವಾಗುತ್ತದೆ ; ಆತ್ಮಾನಾತ್ಮವಿಭಾಗಜ್ಞಾನವೂ ಅವಿದ್ಯೆಯ ಕಾರ್ಯವೇ, ಅದನ್ನು ವಾಕ್ಯವು ಪರಿಗಣಿಸುತ್ತದೆ, ೩-೬ ; ತತ್ತ್ವಮಸಿವಾಕ್ಯವು ಪ್ರಮಾಣಾಂತರವಿಷಯವಲ್ಲದ ನಿರ್ದುಃಖ್ಯಾತ್ಮನನ್ನು ಸ್ಪಷ್ಟವಾಗಿ ತಿಳಿಸುತ್ತದೆಯಾದ್ದರಿಂದ ಪ್ರಮಾಣ, ೩-೩೫ ; ಅಭಿಧಾಶ್ರುತಿಯಾದರೂ ತತ್ತ್ವಮಸಿ ವಾಕ್ಯವು ಅಪ್ರಮೇಯನಾದ ಆತ್ಮನನ್ನು ತಿಳಿಸುತ್ತದೆ, ೩-೪೭ ; ಅದ್ವಿತೀಯನೇ ಆಗಿದ್ದರೂ ಅಜ್ಞಾನದಿಂದ ತನ್ನ ಸ್ವರೂಪವನ್ನು ಅರಿಯದೆ ಇರುತ್ತಾನೆ. ವಾಕ್ಯದಿಂದಲೇ ಅರಿತುಕೊಳ್ಳುತ್ತಾನೆ, ೩-೬೫ ; ವಾಕ್ಯವು ಕರ್ತೃತ್ವಾದಿಗಳನ್ನು ಅನುವಾದಮಾಡಿಕೊಂಡು ಇದಲ್ಲ ಎಂದು ಬೋಧಿಸುತ್ತದೆ, ೩-೭೩ ; ಸ್ಫುಟವಾದ ಜ್ಞಾನವನ್ನು ಮಾಡಿಕೊಡುವದರಿಂದ ತತ್ತ್ವಮಸಿವಾಕ್ಯವನ್ನು ಅನಾದರಿಸತಕ್ಕದ್ದಲ್ಲ, ೩-೧೧೭ ; ಇದರಿಂದ ಅನುಭವವೇ ಆಗಿಬಿಡುವದರಿಂದ ಬೇರೆ ಅರ್ಥವನ್ನು ಕಲ್ಪಿಸಬಾರದು, ೩-೧೧೯.

ತಮಃ – ಅಜ್ಞಾನ, ೧-೨೪. ಜ್ಞಾನಜ್ಞಾತೃಜ್ಞೇಯಗಳನ್ನು ಅವಿಕಾರನಾಗಿ ಅರಿಯುವ ಆತ್ಮನಿಗೆ ತಮಸ್ಸು ಹೊರಚ್ಚಾಗಿಯೇ ಇದೆ, ಅದು ಅನಾತ್ಮಧರ್ಮವೇ, ೪-೪೫.

ತ್ವಂಪದಾರ್ಥಃ – ತ್ವಂಪದಾರ್ಥದ ವಿವೇಕವಿಲ್ಲದ್ದರಿಂದ ತತ್ತ್ವಮಸಿವಾಕ್ಯಾರ್ಥದ ಜ್ಞಾನವಾಗುವದಿಲ್ಲ, ಅದನ್ನು ಎರಡನೆಯ ಅಧ್ಯಾಯದಲ್ಲಿ ಹೇಳಿರುವ ಅನ್ವಯವ್ಯತಿರೇಕ ನ್ಯಾಯದಿಂದ ಸಂಪಾದಿಸಿಕೊಳ್ಳಬೇಕು, ೪-೭ ; ತ್ವಂಪದಕ್ಕೆ ಪ್ರತ್ಯಗಾತ್ಮನೆಂಬುದೇ ಅರ್ಥವು ; ತತ್ಪದಸಾಮಾನಾಧಿಕರಣ್ಯದಿಂದ ಅದಕ್ಕೆ ಸದ್ವಿತೀಯವೆಂಬ ಅರ್ಥವು ತ್ಯಾಜ್ಯವಾಗುತ್ತದೆ, ಏಕೆಂದರೆ ಆ ಪದದ ಅದ್ವಿತೀಯತ್ವಕ್ಕೆ ಇದು ವಿರುದ್ಧವಾಗಿರುತ್ತದೆ, ೩-೨, ೭೮, ೭೯.

## ದ

ದಾರ್ಷ್ಟಾನ್ತಿಕಮ್ – ಏತಕ್ಕೆ ದೃಷ್ಟಾಂತವನ್ನು ಕೊಟ್ಟಿದೆಯೊ, ಅದು, ೧-೫೭, ೩-೬೫.

ದುಃಖಮ್ – ಆತ್ಮಾನವಬೋಧದಿಂದಲೇ ದುಃಖ (ಅವ) ; ಆತ್ಮನು ದುಃಖಿ ಎಂದರೆ ಅವನಿಗೆ ಮತ್ತೊಬ್ಬನು ಸಾಕ್ಷಿಯಲ್ಲ ; ಸಾಕ್ಷಿಗೆ ದುಃಖವು ಸಲ್ಲದು, ೩-೭೬ ; ತತ್ತ್ವಮಸಿವಾಕ್ಯದಲ್ಲಿ ತತ್ತ್ವಂಪದಗಳ ಸಾಮಾನಾಧಿಕರಣ್ಯದಿಂದ ಆತ್ಮನನ್ನು ಅರಿತುಕೊಳ್ಳುವಾಗ ಆ ಪದಗಳಿಂದ ಆತ್ಮನಲ್ಲಿ ದುಃಖಿತ್ವವೂ ಅನಾತ್ಮತ್ವವೂ ತೊಲಗುವವು, ೩-೨.

ದೃಕ್, ದೃಶಿಃ – ಚೈತನ್ಯರೂಪ. ಆತ್ಮಚೈತನ್ಯವೊಂದೇ ದೃಶ್ಯಭೇದಗಳಿಂದ ಅನೇಕವಾಗಿರುವಂತೆ ಕಾಣುತ್ತಿರುತ್ತದೆ, ೨-೪೭, ೮೮ ; ದೇಹವು ದೃಶಿರೂಪದೊಡನೆ ಅನ್ವಯವಾಗದಿರುವದರಿಂದ ಅನಾತ್ಮವು, ೨-೧೯ ; ಅಹಂಕಾರವೂ ಘಟಾದಿಗಳಂತೆ ದೃಶಿರೂಪಕ್ಕೆ ವಿಷಯವು, ೨-೩೭ ; ದ್ರಷ್ಟೃವಾದ ಆತ್ಮನನ್ನು ನೋಡುವ ದೃಶಿರೂಪವಿಲ್ಲ, ೨-೩೯.

ದೃಶ್ಯಮ್ – ಅರಿಯಲ್ಪಡತಕ್ಕದ್ದು, ಅನಾತ್ಮವು. ದೇಹವೂ ಅಹಂಕಾರವೂ ದೃಶ್ಯವಾದ್ದರಿಂದ ಅನಾತ್ಮ, ೨-೧೯ ; ಒಂದೇ ವಸ್ತು ದ್ರಷ್ಟೃವೂ ದೃಶ್ಯವೂ ಆಗಿರಲಾರದು, ೨-೩೯ ; ದ್ರಷ್ಟೃವೂ ದೃಶ್ಯನೆಂದರೆ ದೋಷ, ೨-೪೦, ೪-೩೦ ; ದೃಶ್ಯಗಳಿಂದ ದೃಕ್ಕಿಗೆ ಅನೇಕತ್ವವಿರುವಂತೆ ತೋರುತ್ತದೆ, ೨-೪೭.

ದೃಷ್ಟಾಂತಃ – ಹೋಲಿಕೆಗಾಗಿ ಹೇಳಿದ್ದು. ಈ ಪ್ರಕರಣದಲ್ಲಿರುವ ಕೆಲವು ಮುಖ್ಯದೃಷ್ಟಾಂತಗಳನ್ನು ಇಲ್ಲಿ ಕೊಡುತ್ತೇವೆ. (೧) ಅತ್ತೆ ಭಿಕ್ಷವಿಲ್ಲವೆಂದು ಹೇಳಿದಂತೆ, (ನಿಷಿದ್ಧಕರ್ಮವನ್ನು ಬಿಡಬೇಕೆಂಬುದು), ೧-೨೮ ; (೨) ಆಕಾಶದ ನೀಲತ್ವವನ್ನು ಅಲ್ಲಗಳೆದಂತೆ (ಸೂಕ್ಷ್ಮದೇಹನಿರಾಕರಣೆ), ೨-೨೧ : ಆಕಾಶಕ್ಕೆ ಮೋಡಕವಿದು ಹೋಗುವಂತೆ (ಆತ್ಮನಲ್ಲಿ ಜಗತ್ತು), ೨-೬೮ ; ಗಡಿಗೆಯ ಹುಟ್ಟು ಹೊಂದುಗಳಿಂದ ಆಕಾಶಕ್ಕೆ ಹುಟ್ಟುಹೊಂದುಗಳಾಗದಂತೆ (ಅಂತಃಕರಣದಿಂದ ಆತ್ಮನಿಗೆ ಏನೂ ಆಗದು), ೨-೭೯ ; ಆಕಾಶದಲ್ಲಿ ಹೊಗೆ ಮಂಜು ಮುಂತಾದವನ್ನು ಕಲ್ಪಿಸುವಂತೆ (ಆತ್ಮನಲ್ಲಿ ಸಂಸಾರಕಲ್ಪನೆ), ೩-೯೯ ; ಘಟಾಕಾಶಮಹಾಕಾಶಗಳಂತೆ (ಸಾಮಾನಾಧಿಕರಣ್ಯದಿಂದ ಅವಾಕ್ಯಾರ್ಥ), ೩-೯ ; (೩) ಕೊರಳಿನಲ್ಲಿ ಹಾರವಿದ್ದರೂ ಪಡೆದುಕೊಳ್ಳಬೇಕೆನ್ನುವಂತೆ, ರಾಕ್ಷಸನಿಲ್ಲದಿದ್ದರೂ ತೊಲಗಿಸಿಕೊಳ್ಳಬೇಕೆನ್ನುವಂತೆ (ಇರುವದರ ಪ್ರಾಪ್ತೀಚ್ಛೆ, ಇಲ್ಲದ್ದರ ಪರಿಹಾರೇಚ್ಛೆ), ೧-೩೧, ೩೨ ; (೪) ದಾನಾರ್ಥದಲ್ಲಿ ಧಾವೇತ್ (ಓಡಬೇಕು) ಎಂಬ ಪದವನ್ನುಪಯೋಗಿಸುವಂತೆ, (ಸ್ವತಃಸಿದ್ಧಾತ್ಮನನ್ನು ಆಗು ಎಂದು ಹೇಳುವದು), ೧-೯೭ ; (೫) ದಂಡವು (ಕೋಲು) ದಂಡಿಸಂನ್ಯಾಸಿಯಲ್ಲಿದ್ದು ಅವನನ್ನು ಪೂಜೆಮಾಡುವವನಿಗೆ ಕಾಣುತ್ತಿರುವಂತೆ (ಸಾಕ್ಷಿಗೆ ಬುದ್ಧಿ ಕಾಣುವದು), ೨-೮೦ ; ಕೋಲು ನೀರಿನಲ್ಲಿ ವಕ್ರವಾಗಿ ಕಾಣುವಂತೆ (ಆತ್ಮನಿಗೆ ಕಲ್ಪಿತ ಪರಿಣಾಮ), ೨-೮೫ ; (೬) ದಶಮನು (ಹತ್ತನೆಯವನು) ತಾನೇ ಆದರೂ ಹಾಗೆಂದು ಅರಿಯದಿರುವಂತೆ (ಅದ್ವಿತೀಯಾತ್ಮನನ್ನು ಅರಿತುಕೊಳ್ಳದಿರುವದು), ೩-೬೪, ೬೫ ; (೭) ನೀಲೋತ್ಪಲ ನೈದಿಲೆ ಕಪ್ಪು ಎಂಬ ವಾಕ್ಯದಲ್ಲಿ ವಿಶೇಷಣವಿಶೇಷ್ಯಭಾವದಿಂದ ಅವಿವಕ್ಷಿತವಾದ ಅರ್ಥವು ತೊಲಗುವಂತೆ (ತತ್ತ್ವಮಸಿವಾಕ್ಯದಲ್ಲಿ ಅವಿವಕ್ಷಿತವಾದ ಪದಾರ್ಥಗಳ ತ್ಯಾಗ), ೩-೨ ; (೮) ಬುದ್ಧಿಯಲ್ಲಿ ಹೋಮಮಾಡಿದಂತೆ (ವಿಧಿಯಿಲ್ಲದೆ ಕರ್ಮವನ್ನು ಮಾಡುವದು), ೧-೧೬ ; (೯) ಬೆಂಕಿಯು ತಂಪಿಗೆ ಅಂಗವಾಗದಂತೆ (ಜ್ಞಾನವು ಕರ್ಮಕ್ಕೆ ಅಂಗವಲ್ಲ), ೧-೭೯ ; ಬೆಂಕಿ ತನ್ನನ್ನು ತಾನೇ ಸುಡದಿರುವಂತೆ, (ಆತ್ಮನು ತನ್ನನ್ನು ತಾನು ಅರಿಯಲಾರನು), ೨-೨೩ ; ಸುಡುವ ಬೆಂಕಿಯೂ ಸುಡಲ್ಪಡುವ ಕಟ್ಟಿಗೆಯೂ ಒಂದೇ ಕಡೆಯಿರುವಂತೆ (ಜ್ಞಾತೃಹಂಗಳಿಗೆ ಜ್ಞಾತೃಜ್ಞೇಯಭಾವ), ೩-೫೯ ; (೧೦) ಮೃಗತೃಷ್ಣಿಕೆಯ (ಬಿಸಿಲುಕುದುರೆಯ) ನೀರನ್ನು ಕುಡಿಯಲೆಳಸುವವನಂತೆ (ಭ್ರಾಂತಿಯಿಂದ ಕರ್ಮದಲ್ಲಿ ತೊಡಗುವವನು), ೧-೨೯ ; (೧೧) ಮೂಗಿನ ತುದಿಯಲ್ಲಿರುವ ಫಲದಂತೆ (ಅದಿರಾಡುತ್ತಿರುವ ಅವಿದ್ಯೆ), ೩-೧೧೦ ; (೧೨) ಮೊಲವು ಕಣ್ಣುಮುಚ್ಚಿದಂತೆ, (ಆತ್ಮಾನಾತ್ಮವಿಭಾಗಮಾತ್ರದಿಂದ ಮುಕ್ತಿಯನ್ನು ಬಯಸುವದು), ೪-೧೬ ; (೧೩) ಮೋಟುಮರವನ್ನು ಕಳ್ಳನೆಂದುಕೊಂಡು ಓಡುವಂತೆ (ಅಧ್ಯಾರೋಪದಿಂದ

ಕರ್ಮಪ್ರವೃತ್ತಿ), ೧-೬೦ ; ಮನುಷ್ಯನೆಂಬ ಬುದ್ಧಿಯಿಂದ ಮರವೆಂಬ ಬುದ್ಧಿ ತೊಲಗುವಂತೆ (ಬ್ರಹ್ಮಬುದ್ಧಿಯಿಂದ ಅಹಂಬುದ್ಧಿ ತೊಲಗುತ್ತದೆ), ೨-೨೯ ; (೧೪) ಮಣ್ಣಿನಾನೆಯನ್ನು ಹುಡುಗರು ಆನೆಯೆಂದು ತಿಳಿಯುವಂತೆ (ದೇಹಾದಿಗಳನ್ನು ಆತ್ಮನೆಂದು ತಿಳಿಯುವದು), ೧-೫೯ ; (೧೫) ರತ್ನವು ಇದ್ದಂತಿದ್ದು ಪದಾರ್ಥಗಳನ್ನು ಬೆಳಗಿತೋರುವಂತೆ (ಆತ್ಮನು ಬುದ್ಧಿವೃತ್ತಿಗಳನ್ನು ಬೆಳಗುವದು), ೨-೬೪ ; (೧೬) ಸುಪ್ತಪುರುಷನನ್ನು ಎಬ್ಬಿಸುವ ವಾಕ್ಯದಂತೆ (ಅನಭಿಧೇಯನಾದ ಆತ್ಮನನ್ನು ಶಬ್ದವು ತಿಳಿಸುವದು), ೩-೧೦೫ ; ಕನಸಿನ ನಿಮಿತ್ತದಿಂದ ಎಚ್ಚರುವಂತೆ (ಶ್ರುತಿಯಿಂದ ಜ್ಞಾನ), ೪-೩೬ ; (೧೭) ಸೂರ್ಯನು ಕತ್ತಲೆಗೆ ಅಂಗವಲ್ಲದಿರುವಂತೆ (ಜ್ಞಾನವು ಕರ್ಮಕ್ಕೆ ಅಂಗವಲ್ಲ), ೧-೭೯ ; ಸೂರ್ಯನು ನೀರಿನ ಪಾತ್ರೆಗಳಲ್ಲಿ ಅನೇಕವಾಗಿ ತೋರುವಂತೆ (ದೃಗ್ರೂಪನಾದ ಆತ್ಮನು ದೃಶ್ಯಗಳಿಂದ ಅನೇಕವಾಗಿ ನೋಡುತ್ತಿರುವದು), ೨-೪೭ ; (೧೮) ಸೋಮಶರ್ಮನ ತಂದೆಯಂತೆ, (ಹುಟ್ಟದೆ ಇದ್ದ ಮಗನನ್ನು ಕಲ್ಪಿಸಿದ, ಆ ಬ್ರಾಹ್ಮಣನಂತೆ (ಕ್ರಿಯಾಕಾರಕಫಲಗಳನ್ನು ಆತ್ಮನಲ್ಲಿ ಕಲ್ಪಿಸುವದು), ೨-೫೧ ; (೧೯) ಹಡಗಿನ ಚಲನೆಯಿಂದ ದಡದ ಮರಗಳಿಗೆ ಚಲನೆಯನ್ನು ಕಲ್ಪಿಸುವಂತೆ (ಅಹಂಕಾರದ ವ್ಯಾಪಾರವನ್ನು ಆತ್ಮನಲ್ಲಿ ಕಲ್ಪಿಸುವದು), ೨-೬೩ ; (೨೦) ಹಾವು ಹಗ್ಗಕ್ಕೆ ಲಕ್ಷಣವಾಗುವಂತೆ (ಅಹಂಕಾರವು ತನ್ನ ಬಾಧದಿಂದಲೇ ಆತ್ಮನಿಗೆ ಲಕ್ಷಣ), ೩-೨೭ ; ಅಜ್ಞಾನವು ಹೋದ ಬಳಿಕ ಹಗ್ಗದಹಾವು ಹೋಗಿಬಿಡುವಂತೆ (ಅಹಂಕಾರವು ಹೋದರೆ ಮಮಕಾರವು ಹೋಗುವದು), ೨-೩೦ ; ಕೋಲಿನಹಾವು ಕೋಲಿನಲ್ಲಿ ಕೊನೆಗಾಣುವಂತೆ (ಸಂಸಾರವೆಲ್ಲವೂ ಜ್ಞಾನದಿಂದ ಆತ್ಮನೇ ಆಗುವದು), ೪-೩೮ ; ಕಲ್ಪಿತವಾದ ಹಾವು ಹೋದರೂ ನಡುಕವುಳಿಯುವಂತೆ (ಜ್ಞಾನಿಗೂ ನಿವೃತ್ತಕರ್ಮವು ಉಳಿಯುವದು), ೪-೬೧ ; (೨೧) ಹುಟ್ಟುಕುರುಡರು ಆನೆಯ ವಿಷಯದಲ್ಲಿ ಬೇರೆಬೇರೆ ಅಭಿಪ್ರಾಯಪಟ್ಟಂತೆ (ಅದ್ವಿತೀಯಬ್ರಹ್ಮದಲ್ಲಿ ವಾದಿಗಳು ಬಗೆಬಗೆಯಾಗಿ ಕಲ್ಪಿಸುವದು), ೨-೯೩ ; (೨೨) ಹೂಗಂಧಗಳು ಮೈಗೇ ಸೇರಿದವೆಂದು ಭಾವಿಸುವಂತೆ (ದೇಹವು ಆತ್ಮನಾಗಿ ತೋರುವದು), ೨-೧೨ ; (೨೩) ಒಬ್ಬ ಹೆಂಗಸಿನಲ್ಲಿ ಬೇರೆಬೇರೆ ದೃಷ್ಟಿಯಿಂದ ಬೇರೆಬೇರೆ ಕಲ್ಪನೆಗಳಾಗುವಂತೆ (ಒಬ್ಬ ಆತ್ಮನಲ್ಲಿ ವಿರುದ್ಧವಾದ ಕಲ್ಪನೆಗಳಾಗುವದು), ೨-೫೦.

ದೃಷ್ಟಿಃ – ಅಂತಃಕರಣವೃತ್ತಿ . ಶಬ್ದಾದಿರೂಪವಾದ ದೃಷ್ಟಿಯು ಆತ್ಮನಿಗೆ ಭಾಸ್ಯವಾಗಿದೆ, ೨-೯೧ ; ಆತ್ಮನು ದೃಷ್ಟಿಗೂ ದ್ರಷ್ಟೃವಾದ್ದರಿಂದ ಅವನನ್ನು ಅದು ನೋಡಲಾರದು, ೨-೯೨, ೩-೫೦ ; ದೃಷ್ಟಿಯು ಆತ್ಮನನ್ನು ಕಾಣಲಾರದೆಂಬುದಕ್ಕೆ ಕಾರಣ, ೩-೪೯.

ದೃಷ್ಟಿವಿಧಿಃ – ಹೀಗೆಂದು ಉಪಾಸನೆಮಾಡಬೇಕೆಂಬ ವಿಧಿವಾಕ್ಯವು. ಪ್ರತ್ಯಕ್ಷವಿರುದ್ಧವಾದದ್ದನ್ನು ಹೇಳಿದರೆ ಅಲ್ಲಿ ದೃಷ್ಟಿವಿಧಿಯನ್ನು ಕಲ್ಪಿಸಬೇಕು, ೩-೮೧.

ದೇಹಃ – ದೇಹವನ್ನು ಸ್ವೀಕರಿಸುವದಕ್ಕೆ ಧರ್ಮಾಧರ್ಮಗಳೇ ಕಾರಣ (ಅವ) ; ಅನ್ನಕಾರ್ಯವಾಗಿರುವದರಿಂದ ದೇಹವು ಅನಾತ್ಮ , ೨-೧೧ ; ಭ್ರಾಂತಿಯಿಂದ ಆತ್ಮವಾಗಿ ತೋರಿದರೂ ದೇಹವು ಸರ್ವಸಾಧಾರಣವಾದ್ದರಿಂದ ಅದನ್ನು ಅನಾತ್ಮವೆಂದು ತಿಳಿಯಬೇಕು, ೨-೧೨ ರಿಂದ ೧೪ ; ಸೂಕ್ಷ್ಮದೇಹವು ವಿಷಯವಾಗಿರುವದೇ ಮುಂತಾದ ಕಾರಣಗಳಿಂದ ಅನಾತ್ಮ , ೨-೨೧, ೨೨ ; ದೇಹಾದಿಬುದ್ಧ್ಯಂತವಾಗಿರುವದು ಆತ್ಮವೊ ಅನಾತ್ಮವೊ ಎಂಬ ಸಂಶಯವಿದೆ, ೪-೪ ರಿಂದ ೬ ; ದೇಹಾದಿಯು ಅನಾತ್ಮ , ೨-೧೯, ೨೦.

ದ್ರಷ್ಟೃದರ್ಶನದೃಶ್ಯಾನಿ – ಗ್ರಾಹಕಗ್ರಹಣಗ್ರಾಹ್ಯಗಳು. ದ್ರಷ್ಟ್ರಾದಿಗಳು ತಮ್ಮನ್ನು ತಾವಾಗಲಿ ಒಂದನ್ನೊಂದಾಗಲಿ ಅರಿಯಲಾರವು, ಅವನ್ನು ಮತ್ತೊಂದೇ ಅರಿಯಬೇಕು, ೨-೧೦೬ ; ಅವಸ್ಥಾತ್ರಯದಲ್ಲಿ ಇವು ಆಗಮಾಪಾಯಿಗಳೆಂದು ತಿಳಿಯುವ ಸಾಕ್ಷಿಯೇ ಆತ್ಮವೆಂದು ತಿಳಿಯುವದು ಲಿಂಗಮಾತ್ರದಿಂದಾದ ಪರೋಕ್ಷಜ್ಞಾನವು, ೩-೫೭ ; ಅಹಂಕಾರವು ದ್ರಷ್ಟೃವನ್ನು ನೋಡಲಾರದು, ೨-೨೪ ; ದ್ರಷ್ಟೃವಿನ ಧರ್ಮವಾದದ್ದು ದ್ರಷ್ಟೃವಿನ ಬೋಧದಂತೆ ಅವನಿಗೆ ವಿಷಯವಾಗಲಾರದು, ೨-೨೫ ; ದ್ರಷ್ಟೃವು ಎಂದಿಗೂ ದೃಶ್ಯವಾಗಲಾರದು, ೨-೨೭ ; ದ್ರಷ್ಟೃವೂ ದೃಶ್ಯವಾಗುವನೆಂದರೆ ದೋಷ, ೨-೪೦ ; ಒಬ್ಬನೇ ಒಮ್ಮೆಗೆ ದ್ರಷ್ಟೃವೂ ದೃಶ್ಯವೂ ಆಗಿರಲಾರನು, ೨-೩೯ ; ಅಹಂಕಾರವು ದ್ರಷ್ಟೃದೃಶ್ಯಗಳೆರಡರ ಸಂಬಂಧವೂ ಉಳ್ಳದ್ದಾದ್ದರಿಂದ ದ್ರಷ್ಟೃವಾಗಿಯೂ ದೃಶ್ಯವಾಗಿಯೂ ತೋರುತ್ತದೆ, ೨-೪೬, ೫೩ ; ಚಂಡಾಲಬುದ್ಧಿಗೂ ಬ್ರಾಹ್ಮಣ ಬುದ್ಧಿಗೂ ದ್ರಷ್ಟೃವಾಗಿರುವ ಚೈತನ್ಯವು ಒಂದೇ, ಎಲ್ಲಾ ಬುದ್ಧಿಗಳನ್ನೂ ನೋಡುತ್ತಿರುವದು ಅದೇ, ೨-೮೮, ೮೯ ; ಘಟಾದಿಗಳಿಗಿಂತ ದ್ರಷ್ಟೃ ಬೇರೆಯಾಗಿರುವಂತೆ ಅಹಂಬುದ್ಧಿಗಿಂತಲೂ ಅಹಂಗಮ್ಯದುಃಖಿಗಿಂತಲೂ ಆತ್ಮನು ಬೇರೆ, ೨-೧೦೦.

ದ್ವಯಪಾರೋಕ್ಷ್ಯೇ – ತತ್ತ್ವಂಪದಗಳಿಗೆ ದ್ವೈತಪರೋಕ್ಷತ್ವಗಳಿಲ್ಲದ ಆತ್ಮನೇ ತಾತ್ಪರ್ಯ, ೩-೭೬.

ದ್ವೈತಮ್ – ನಾನಾತ್ಮರೂಪವಾದ ಅನಾತ್ಮ . ಅಹಂಬುದ್ಧಿಯು ತೊಲಗಿದರೆ ದ್ವೈತವು ಉಳಿಯುವದಿಲ್ಲ , ೨-೩೦ ; ದ್ವೈತವು ಕಲ್ಪಿತ, ೨-೪೪, ೪೫ ; ಕೂಟಸ್ಥನಾದ ಆತ್ಮನು ಒಂದಿಷ್ಟೂ ದ್ವೈತವನ್ನು ಸೋಂಕುವದಿಲ್ಲ, ೨-೬೯ ; ಅನಾತ್ಮವಾದ ದ್ವೈತೇಂದ್ರಿಯಜಾಲವು ಅಜ್ಞಾನದಿಂದುಂಟಾಗಿ ಇತರೇತರಸ್ವಭಾವಾಪೇಕ್ಷಸಿದ್ಧವಾಗಿದೆ,

ಸ್ವತಃಸಿದ್ಧವಲ್ಲ, ೨-೧೧೨, ೧೧೪ ; ಅಜ್ಞಾನವು ಹೋದರೆ ದ್ವೈತಾನರ್ಥವಿರುವದಿಲ್ಲ, ೩-೧ ; ದ್ವೈತಪ್ರಪಂಚವಿಲ್ಲದ ಆತ್ಮನನ್ನು ತತ್ತ್ವಮಸ್ಯಾದಿವಾಕ್ಯವು ಅಪರೋಕ್ಷವಾಗಿ ತಿಳಿಸುತ್ತದೆ, ೩-೪೭.

ದ್ವೈತಿನಃ – ಸಾಧಕನು ಬೇರೆ, ಪರಮೇಶ್ವರನು ಬೇರೆ ಎಂಬ ವಾದಿಗಳು. ಮುಕ್ತಿಯಲ್ಲಿ ಪರಮಾತ್ಮನನ್ನು ಪಡೆಯುವದಕ್ಕೆ ಅವರಿಗೂ ಜ್ಞಾನಾಭ್ಯಾಸವು ಸಾಧನವಾದೀತೇ ಹೊರತು ಕರ್ಮವು ಸಾಧಕವಾಗಲಾರದು, ೧-೭೨.

## ಧ

ಧರ್ಮಧರ್ಮಿತ್ವೇ – ಬುದ್ಧಿಯ ಬೋದ್ಧೃತ್ವ, ಅಹಂತ್ವ-ಇವುಗಳಿಗೆ ಧರ್ಮಧರ್ಮಿಭಾವವುಂಟು. ಆತ್ಮನಲ್ಲಿ ಈ ಭೇದವಿಲ್ಲ, ೩-೧೩.

ಧರ್ಮಾಧರ್ಮೌ – ಧರ್ಮಾಧರ್ಮಗಳಿಂದ ದೇಹಸ್ವೀಕಾರವಾಗುತ್ತದೆ, (ಅವ), ೧-೧೨ ; ಅವುಗಳನ್ನು ಅನುಭವಿಸಿ ಮುಗಿಸಬೇಕು, ೧-೧೨.

ಧೀಃ – ಬುದ್ಧಿ.

ಧ್ವಾನ್ತಮ್ – ಅಜ್ಞಾನ. ಬುದ್ಧಿಸಾಕ್ಷಿಯೇ ಪರಮಾತ್ಮನೆಂದು ಅರಿತುಕೊಂಡರೆ ಅಜ್ಞಾನನಾಶ, ೧-೧ ; ಅಂತಃಕರಣದಿಂದಲೇ ಅಜ್ಞಾನವು ಸ್ಫುಟವಾಗಿ ತೋರುವದು, ೩-೫೮.

## ನ

ನ ಜಾನಾಮಿ – ಅರಿಯೆನು. ಗಡಿಗೆಯನ್ನು ಅರಿಯೆನು ಎಂಬಂತೆ ಸುಷುಪ್ತಿಯಲ್ಲಿ ಅಜ್ಞಾನವನ್ನು ಅರಿಯೆನು ಎಂಬ ಅನುಭವವೇಕಿಲ್ಲ ? ಎಂಬ ಆಕ್ಷೇಪವು ಸರಿಯಲ್ಲ, ೩-೫೮.

ನಾಜ್ಞಾಸಿಷಮ್ – 'ನಿದ್ರೆಯಲ್ಲಿ ಏನನ್ನೂ ನಾನು ಅರಿಯಲಿಲ್ಲ' ಎಂಬ ಪರಾಮರ್ಶದಿಂದ ಅಹಂಕಾರವು ಆತ್ಮನಿಗೆ ಲಕ್ಷಣವೆಂದಾಗುತ್ತದೆ, ೨-೫೪.

ನಾದ್ರಾಕ್ಷಮ್ – 'ನಿದ್ರೆಯಲ್ಲಿ ಏನೂ ಕಾಣುವದಿಲ್ಲ' ಎಂಬ ಪರಾಮರ್ಶವು ತನ್ನ ದೃಷ್ಟಿಯು ಇರಲಿಲ್ಲವೆನ್ನುವದಿಲ್ಲ, ಪ್ರತ್ಯಯವನ್ನು ಮಾತ್ರ ಅಲ್ಲಗಳೆಯುತ್ತದೆ, ೪-೨೩.

ನಾನಾಬ್ರಹ್ಮವಾದಃ – ಬ್ರಹ್ಮದಲ್ಲಿ ನಾನಾತ್ವವಿದೆ ಎಂಬ ವಾದ. ಈ ವಾದದಲ್ಲಿಯೂ ಜ್ಞಾನಕರ್ಮಸಮುಚ್ಚಯಸಿದ್ಧಿಯಿಲ್ಲ, ೧-೬೮.

ನಿತ್ಯಂ ಕರ್ಮ, ನಿತ್ಯೇಹಾ – ನಿತ್ಯಕರ್ಮದಿಂದ ದುರಿತಕ್ಷಯವಾಗಿ ಚಿತ್ತಶುದ್ಧಿಯಾಗಿ ವೈರಾಗ್ಯವುಂಟಾಗುವದು, ೧-೨೬, ೪೫ ; ಆದ್ದರಿಂದ ಮುಮುಕ್ಷುಗಳು ಇದನ್ನು ಮಾಡಬೇಕು, ೪-೫೦ ; ನಿತ್ಯಕರ್ಮದಿಂದ ಹಿಂದಿನ ಜನ್ಮಗಳ ಕ್ಷಯವಿಲ್ಲ, ೧-೮೨, ೮೩.

ನಿತ್ಯಾವಗತಿಃ – ಯಾವಾಗಲೂ ಅರಿವಿನ ರೂಪವಾಗಿಯೇ ಇರುವ ಆತ್ಮ. ಇವನು ಪ್ರಮೇಯನಲ್ಲ, ೩-೪೭ ; ಇವನಿಗೆ ಕಾರಕಾದಿಗಳಿಲ್ಲ, ೩-೧೦೩.

ನಿಯಮವಿಧಿಃ – 'ಆತ್ಮೇತ್ಯೇವೋಪಾಸೀತ' ಎಂಬುದು ಅಪೂರ್ವವಿಧಿಯಲ್ಲ ; ಅದನ್ನು ವಿಧಿಯೆಂದರೂ ಆತ್ಮನೆಂದೇ ಉಪಾಸನೆಮಾಡಬೇಕು ಎಂಬ ನಿಯಮ ವಿಧಿ ಯಾಗಬಹುದು, ೧-೮೮.

ನಿಯೋಗಃ – ಕಟ್ಟುಮಾಡುವದು. ತತ್ತ್ವಮಸ್ಯಾದಿವಾಕ್ಯಗಳಿಗೆ ಹೀಗೆಂದು ನಿದಿಧ್ಯಾಸನಮಾಡತಕ್ಕದ್ದು ಎಂಬ ನಿಯೋಗದ ಮೂಲಕವೇ ಪ್ರಾಮಾಣ್ಯವನ್ನು ಹೇಳಬೇಕು- ಎಂಬವರ ವಾದವು ಸರಿಯಲ್ಲ, ೩-೪೭ ; 'ದ್ರಷ್ಟವ್ಯಃ' ಎಂಬಲ್ಲಿ ದರ್ಶನಕ್ರಿಯೆಯಲ್ಲಿ ನಿಯೋಗವಿದೆ ಎಂಬುದು ಸರಿಯಲ್ಲ, ೧-೮೮ ; ಅದ್ವೇಷ್ಟೃತ್ವಾದಿಗುಣಗಳು ಆತ್ಮಜ್ಞಾನಿಗೆ ನಿಯೋಗದಿಂದ ಇರುವದಿಲ್ಲ ; ಅಯತ್ನದಿಂದ ಇರುತ್ತದೆ, ೪-೬೯.

ನಿರಪೇಕ್ಷಃ – ಗ್ರಾಹಕಾದಿಗಳು ಸಾಕ್ಷಿಪೂರ್ವಕವಾಗಿ ಸಿದ್ಧವಾಗುವದಾದರೂ ಸಾಕ್ಷಿಗೂ ಮತ್ತೊಂದರ ಅಪೇಕ್ಷೆಯಿಂದ ಸಿದ್ಧಿಯೆಂಬುದಿಲ್ಲ, ಏಕೆಂದರೆ ಆತ್ಮನು ನಿರಪೇಕ್ಷನು, ಅವಿಕ್ರಿಯನಾದ್ದರಿಂದ ಮತ್ತೊಂದನ್ನು ಬಯಸುವದಿಲ್ಲ, ೨-೭೫, ೧೧೦.

ನಿರಸ್ತೈಷಣಃ, ನಿರಸ್ತಸರ್ವಕರ್ಮಾ – ಏಷಣಾತ್ರಯವನ್ನು ಬಿಟ್ಟು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿರುವವನೇ ಅದ್ವೈತಜ್ಞಾನಕ್ಕೆ ಅಧಿಕಾರಿ, ೪-೭೧, ೭೩.

ನಿರ್ದುಃಖಿತ್ವಮ್ – ದುಃಖವಿಲ್ಲದವನಾಗಿರುವದು. ಆತ್ಮನಿಗೆ ನಿರ್ದುಃಖಿತ್ವವು ತಾನೇ ಸಿದ್ಧ, ಪ್ರಮಾಣಸಿದ್ಧವಲ್ಲ, ೩-೯೪ ; ತದರ್ಥವಿಶೇಷಣದಿಂದ ತ್ವಮರ್ಥವು ನಿರ್ದುಃಖಿ ಎಂದಾಗುತ್ತದೆ, ೩-೧೦.

ನಿರ್ದ್ವಯಮ್ – ಅದ್ವಿತೀಯ. ಅದ್ವಿತೀಯಾತ್ಮನನ್ನು ಲಕ್ಷ್ಯವಿಟ್ಟು ಕರ್ಮವನ್ನು ಶಾಸ್ತ್ರದಲ್ಲಿ ವಿಧಿಸಿಲ್ಲ, ಮನುಷ್ಯತ್ವಾಭಿಮಾನಿಯಾದವನಿಗೆ ವಿಧಿಸಿದೆ, ೧-೯೬.

ನಿರ್ವಿಶೇಷಣ, ನಿರ್ಗುಣ – ಯಾವ ಧರ್ಮವೂ ಇಲ್ಲದ. ಯಾವಯಾವದನ್ನು ಆತ್ಮನ ವಿಶೇಷಣವೆನ್ನುವರೋ ಅದು ಯಾವದೂ ಆತ್ಮನೊಡನೆ ಅನ್ವಯಿಸಿರುವದಿಲ್ಲವಾದ್ದರಿಂದ ಆತ್ಮನು ನಿರ್ವಿಶೇಷನು, ೨-೯೪ ; ನೇತಿ ನೇತಿ ಎಂದು ಮತ್ತೆಮತ್ತೆ ಶ್ರುತಿ ಹೇಳುವದರಿಂದ ಆತ್ಮನು ನಿರ್ಗುಣನು, ೨-೪೨.

ನೇತಿ ನೇತಿ – ಇದಲ್ಲ, ಇದಲ್ಲ. ಶ್ರುತಿಯಲ್ಲಿ ಬ್ರಹ್ಮವು ನಿರ್ಗುಣವೆಂದು ತಿಳಿಸುವದಕ್ಕೆ ''ನೇತಿ ನೇತಿ'' ಎಂದು ಮತ್ತೆ ಮತ್ತೆ ಹೇಳಿದೆ, ೨-೪೨ ; ಈ ಶ್ರುತಿಯ ಅರ್ಥವನ್ನು ಅರಿತುಕೊಂಡವನು ವಿದೇಹನಾದ್ದರಿಂದ ಕರ್ಮವನ್ನು ಕಣ್ಣೆತ್ತಿಯೂ ನೋಡನು, ೧-೫೮.

ನೈಷ್ಕರ್ಮ್ಯಪ್ರವಣ – ನಿಷ್ಕರ್ಮಭಾವದ ಜ್ಞಾನದ ಕಡೆಗೇ ಒಲಿಯುವ ಶ್ರುತಿಗಳು. ''ಪರೀಕ್ಷ್ಯ ಲೋಕಾನ್'' (ಮುಂ. ೧-೨-೧) ಮುಂತಾದ ಶ್ರುತಿಗಳು ನೈಷ್ಕರ್ಮ್ಯವನ್ನೇ ಒತ್ತಿಹೇಳುತ್ತವೆ, ೧-೮೭.

## ಪ - ಮ

ಪಟಲಮ್ – ಕಣ್ಣುಪರೆ. ಅವಿದ್ಯಾಪಟಲಮ್, ೧-೪೧, ೩-೩೩, ೪-೩೬ ; ಅನವಬೋಧಪಟಲಮ್, ೨-೫೨ ಎಂದು ಮುಂತಾಗಿ ಅಜ್ಞಾನವನ್ನು ಕಣ್ಣುಪರೆಗೆ ಈ ಪ್ರಕರಣದಲ್ಲಿ ಹೋಲಿಸಿರುತ್ತದೆ. ಇದರಿಂದ ಅದು ಭಾವರೂಪವಾಗಿರುವದೆಂದು ಕೆಲವರು ಊಹಿಸಿರುತ್ತಾರೆ ; ಆದರೆ ಜ್ಞಾನಾಭಾವಕ್ಕಿಂತ ಬೇರೆಯ ಅವಿದ್ಯೆಯನ್ನು ಪ್ರಕರಣಕಾರರು ಒಪ್ಪಿರುವದಿಲ್ಲ, ಪೀಠಿಕೆಯನ್ನು ನೋಡಿ.

ಪದಪದಾರ್ಥೌ – ವಾಕ್ಯವಿಲ್ಲದೆ ಪದಪದಾರ್ಥಗಳ ವಿಚಾರವಾಗುವದಿಲ್ಲ, ೨-೮ ಪದಪದಾರ್ಥಗಳನ್ನು ಅರಿತಿರುವವನಿಗೆ ವಾಕ್ಯದಿಂದ ಅಜ್ಞಾನದ ನಿವೃತ್ತಿ, ೩-೧ ; ಪದಪದಾರ್ಥವಿವೇಕವು 'ಅಹಮ್' (ನಾನು) ಎಂಬಲ್ಲಿ ಆತ್ಮತತ್ತ್ವನಿರ್ಧಾರಣೆಗೆ ಯುಕ್ತಿ, ೪-೨೨.

ಪದಾರ್ಥದ್ವಯಮ್ – ಆತ್ಮ, ಅನಾತ್ಮ ಎಂಬೆರಡು ಪದಾರ್ಥಗಳಲ್ಲಿ ಅಜ್ಞಾನಾಶ್ರಯತ್ವವಿಷಯತ್ವವು ಆತ್ಮನಿಗೆ ಹೊಂದುತ್ತದೆ ಅನಾತ್ಮಕ್ಕಲ್ಲ, ೩-೧.

**ಪರತಃಸಿದ್ಧ**, ಭಿನ್ನಸಾಧನ– ಮತ್ತೊಂದರಿಂದ ಸಿದ್ಧ. ಅನಾತ್ಮವು ಆತ್ಮನಿಂದಲೇ ಸಿದ್ಧವಾಗತಕ್ಕದ್ದು, ಪ್ರಮಾಣದಿಂದಲೇ ಸಿದ್ಧವಾಗತಕ್ಕದ್ದು, ೨-೯೯, ೧೦೧.

**ಪರಮಾತ್ಮಾ**, ಪರಾತ್ಮಾ– ನಿಜವಾಗಿಯೂ ಎಲ್ಲರಿಗೂ ಆತ್ಮನಾಗಿರುವ ಬ್ರಹ್ಮ. ದ್ವೈತಿಗಳು ಜ್ಞಾನಾಭ್ಯಾಸದಿಂದ ಪರಮಾತ್ಮನನ್ನು ಪಡೆದುಕೊಂಡರೂ ಪಡೆದುಕೊಂಡಾರು, ವಿರುದ್ಧವಾದ ಕರ್ಮದಿಂದಲ್ಲ, ೧-೭೨ ; ಅನಾತ್ಮದ ಚಿಂತನೆಯನ್ನು ಬಿಡುವದರಿಂದಲೇ ಪರಮಾತ್ಮನ ಉಪಾಸನೆಮಾಡಬೇಕು ಎಂಬುದು ದ್ರಷ್ಟವ್ಯಃ ಮುಂತಾದ ವಿಧಿಗಳ ಅರ್ಥ, ೧-೮೮ ; ಅಹಂಕಾರವು ಪರಮಾತ್ಮನಿಗೆ ಲಕ್ಷಣವಾಗಿರುತ್ತದೆ, ೨-೫೪ ರಿಂದ ೫೬ ; ಅವಿದ್ಯೆಯು ಅವಸ್ತುವಾದರೂ ಪರಮಾತ್ಮನಂತೆ ವಸ್ತುವಾಗಿ ಕಾಣುತ್ತಿರುತ್ತದೆ, ೩-೧೧೧ ; ಪರಮಾತ್ಮ, ಅಪರಮಾತ್ಮ - ಈ ಎರಡನ್ನೂ ವಿಂಗಡಿಸಿಕೊಳ್ಳದೆ ಇರುವವನಿಗೆ ಶ್ರುತಿಯು ಉಪದೇಶಮಾಡಿದೆ, ೪-೨೦.

**ಪರಮಾರ್ಥಃ**– ನಿಜವಾಗಿಯೂ ಇರುವದು. ಆತ್ಮವಸ್ತು, ೧-೩೬ ; ಕ್ರಿಯಾ ಕಾರಕಫಲರೂಪವಾದ ತೋರಿಕೆಯು ಪರಮಾರ್ಥವಸ್ತುವಿಗೆ ಸೋಂಕುವದಿಲ್ಲ, ೨-೫೧; ಪರಮಾರ್ಥದಿಂದ ಆತ್ಮನಿಗೆ ಅವಿದ್ಯೆಯ ಅಥವಾ ಅದರ ಕಾರ್ಯದ ಸಂಬಂಧವು ಮೂರು ಕಾಲದಲ್ಲಿಯೂ ಇಲ್ಲ, ೨-೫೩ ; ಪರಮಾರ್ಥತತ್ತ್ವವನ್ನು ತಿಳಿದವನು ಕರ್ಮಕ್ಕೆ ಶೇಷವಾಗಲಾರನು, ೪-೫೬ ; ಪರಮಾರ್ಥವನ್ನರಿತವರಿಗೆ ದುಃಖವೇ ಇಲ್ಲ, ೨-೯೦ ; ಈ ಪ್ರಕರಣದಲ್ಲಿ ಪರಮಾರ್ಥವಾದ ಆತ್ಮಜ್ಞಾನವನ್ನು ಹೇಳಿದೆ, ೪-೫೨.

**ಪರಾಕ್**, ಪರಾಚೀನ – ಬಾಹ್ಯವಾದ, ಹೊರಗಿನ ಅನಾತ್ಮವಿಷಯವಾದ. ಸುಖದುಃಖಾದಿಗಳು ಪರಾಗ್ರೂಪ, ಆತ್ಮನು ಪ್ರತ್ಯಗ್ರೂಪನಾದ್ದರಿಂದ ಅವುಗಳ ಸಂಬಂಧವು ಅವನಿಗೆ ಇಲ್ಲ, ೧-೯೪ ; ಪರಾಗ್ವಿಷಯವಾದ ಪ್ರತ್ಯಕ್ಷಾದಿಗಳಿಗೆ ಆತ್ಮನಲ್ಲಿ ವ್ಯಾಪಾರವಿಲ್ಲ, ೩-೪೫ ; ಅನುಮಾನವು ಪ್ರತ್ಯಕ್ಷಾನುಸಾರಿಯಾದ್ದರಿಂದ ಅದಕ್ಕೂ ಆತ್ಮನು ವಿಷಯನಲ್ಲ, ಪರಾಗ್ವಿಷಯಗಳಲ್ಲಿಯೇ ಅದರ ವ್ಯಾಪಾರ, ೩-೫೧ ; ಅಂತಃಕರಣವು ಪರಾಗ್ರೂಪವಾಗಿದೆ, ಆತ್ಮನು ಅದನ್ನು ಅರಿಯುತ್ತಾನೆ, ೨-೭೫ ; ಪ್ರಮಾಣವ್ಯವಹಾರವೆಲ್ಲ ಪರಾಗ್ವಿಷಯಕವಾದದ್ದು, ೩-೫೨ ; ಜ್ಞಾತೃಜ್ಞಾನಜ್ಞೇಯಗಳನ್ನು ಅವಿಕಾರನಾಗಿ ಕಾಣುತ್ತಿರುವ ಆತ್ಮನಿಗೆ ಅಜ್ಞಾನವು ಧರ್ಮವಲ್ಲ, ಅದು ಪರಾಗ್ವಿಷಯವೆ ಆಗಿರುತ್ತದೆ, ೪-೪೫.

**ಪರಿಣಾಮಃ** – ವಿಕಾರ. ಆತ್ಮನಿಗೆ ಅಂತಃಕರಣದಂತೆ ಕರ್ತೃತ್ವಾದಿಪರಿಣಾಮ ವಿಲ್ಲ, ೨-೫೮ ; ಕಲ್ಪಿತಪರಿಣಾಮವಿರಬಹುದು, ೨-೮೫ ; ಬುದ್ಧಿಯು ವಿಷಯಗಳನ್ನು

ಒಂದೊಂದಾಗಿ ಅರಿಯುವದರಿಂದ ಪರಿಣಾಮಿ, ೨-೭೦ ; ಕೂಟಸ್ಥನಾದ ಆತ್ಮನಿಗೂ ಪರಿಣಾಮಿಯಾದ ಅಂತಃಕರಣಕ್ಕೂ ತಾರತಮ್ಯ, ೨-೮೬, ೮೭, ೩-೧೬, ೧೭ ; ಇವೆರಡಕ್ಕೂ ಅಜ್ಞಾನಸಂಬಂಧ, ೩-೨೨.

ಪರಿಸಂಖ್ಯಾವಿಧಿಃ – ಇನ್ನೊಂದನ್ನು ಮಾಡಕೂಡದೆಂದು ಹೇಳುವ ವಿಧಿ. 'ಆತ್ಮಾ ವಾ ಅರೇ ದ್ರಷ್ಟವ್ಯಃ' (ಆತ್ಮನನ್ನೇ ನೋಡಬೇಕು) ಎಂಬುದು ಅನಾತ್ಮವನ್ನು ನೋಡಬಾರದೆಂದು ವಿಧಿಸುತ್ತದೆಯಾದ್ದರಿಂದ ಪರಿಸಂಖ್ಯಾವಿಧಿ, ೧-೮೮.

ಪಶ್ವಾದಯಃ – ಶಾಸ್ತ್ರವು ಪ್ರವರ್ತಕವಲ್ಲ, ಪ್ರವೃತ್ತಿನಿವೃತ್ತಿಗಳು ಸ್ವಾಭಾವಿಕವೆಂಬುದಕ್ಕೆ ಪಶ್ವಾದಿಗಳೇ ನಿದರ್ಶನ, ೧-೩೦.

ಪಾರಿಶೇಷ್ಯಮ್ – ಉಳಿದದ್ದನ್ನು ತೆಗೆದುಕೊಳ್ಳಬೇಕೆಂಬ ನ್ಯಾಯ. ಕರ್ಮಗಳಿಗೆಲ್ಲ ಒಂದೊಂದು ಸಾಧ್ಯವಿದ್ದೇ ಇರುವದರಿಂದ ಪಾರಿಶೇಷ್ಯನ್ಯಾಯದಿಂದ ಇಂಥ ಕರ್ಮದಿಂದ ಮುಕ್ತಿಯೆನ್ನುವದಕ್ಕಿಲ್ಲ, ೧-೨೬ ; ಆತ್ಮ, ಅನಾತ್ಮ- ಇವೆರಡರೊಳಗೆ ಅನಾತ್ಮಕ್ಕೇ ಅಜ್ಞಾನಾಶ್ರಯತ್ವವಿಷಯತ್ವಗಳು ಹೊಂದುವದಿಲ್ಲವಾಗಿ ಪಾರಿಶೇಷ್ಯದಿಂದ ಆತ್ಮನೇ ಅಜ್ಞಾನಕ್ಕೆ ಆಶ್ರಯಿವಿಷಯಿ ಎಂದು ನಿಶ್ಚಯಿಸಬೇಕು, ೩-೧.

ಪುರುಷತಂತ್ರ, ಪುರಷಾಯಾಸಮಾತ್ರಜನಿತ – ವಸ್ತುತಂತ್ರವಲ್ಲದ ಮನುಷ್ಯನು ಮಾಡುವದಕ್ಕೂ ಬಿಡುವದಕ್ಕೂ ಆಗುವ ಕರ್ಮ, ಉಪಾಸನೆ. ಅಜ್ಞಾನವನ್ನು ಕಳೆಯುವ ಆತ್ಮಜ್ಞಾನವು ಪುರುಷತಂತ್ರವಲ್ಲ, ೧-೮೮ ; ಪ್ರಸಂಖ್ಯಾನವು ಪುರುಷಾಯಾಸಮಾತ್ರದಿಂದಾಗುವದರಿಂದ ಪ್ರಮಾಣವಲ್ಲ, ಅದು ಐಕಾಗ್ರ್ಯರೂಪವಾದ ಧ್ಯಾನವೇ, ೩-೯೦.

ಪುರುಷಪರಿಕಲ್ಪನಾ, ಪುರುಷಮೋಹಃ – ಪ್ರಮಾಣವಿಲ್ಲದೆ ಮನುಷ್ಯನು ಕಲ್ಪಿಸಿಕೊಂಡದ್ದು. ವೇದವಾಕ್ಯವು ಸಾಪೇಕ್ಷವೆಂಬುದು ಬರಿಯ ಕಲ್ಪನೆ, ೩-೯೪ ; ವಾಕ್ಯಪ್ರತ್ಯಕ್ಷಗಳಿಗೆ ವಿರೋಧವೆಂಬುದು ಮೋಹಮಾತ್ರ, ೩-೯೬.

ಪುರುಷಾರ್ಥಃ – ಅನರ್ಥನಿವೃತ್ತಿ, ಅರ್ಥಪ್ರಾಪ್ತಿ. ಅವಿದ್ಯಾನಿವೃತ್ತಿಯೇ ಪುರುಷಾರ್ಥ, ವೇದಾಂತಜ್ಞಾನವೇ ಅದಕ್ಕೆ ಹೇತು, ೧-೭, ೮ ; ಜ್ಞಾನವು ಪುರಷಾರ್ಥಸಿದ್ಧಿಗೆ ಮತ್ತೇನನ್ನೂ ಬಯಸದು, ೧-೩೬, ೪-೬೯ ; ಅದ್ವಿತೀಯಪ್ರತ್ಯಗಾತ್ಮಜ್ಞಾನವನ್ನು ಹೇಳುವ ತತ್ತ್ವಂಪದಗಳ ಅರ್ಥವು ಅಜ್ಞಾತಪುರುಷಾರ್ಥವನ್ನು ತಿಳಿಸುವದರಿಂದ ಬಾಧಿತವಾಗುವದಿಲ್ಲ, ೩-೮೦.

ಪ್ರತಿಪತ್ತಿಃ – (೧) ಅರಿವು. ಐಕಾತ್ಮ್ಯದ ಪ್ರತಿಪತ್ತಿಯಿಲ್ಲದಿರುವದೇ ಅವಿದ್ಯೆ, ೧-೭ ; ವಾಕ್ಯಾರ್ಥದ ಪ್ರತಿಪತ್ತಿಯಿಲ್ಲದಿರುವದಕ್ಕೆ ಬುದ್ಧ್ಯಾದಿದೇಹಾದಿಗಳನ್ನು ತಾನೆಂದು ಕೊಂಡು ತ್ವಂಪದಾರ್ಥವನ್ನು ತಿಳಿದುಕೊಳ್ಳದಿರುವದೇ ಕಾರಣ, ೨-೧, ೧೮ ; ದೇಹವ್ಯತಿರಿಕ್ತಾತ್ಮರ ಪ್ರತಿಪತ್ತಿಯಾದರೆ ರಾಗದ್ವೇಷಗಳಿರುವದಿಲ್ಲ, ೨-೧೬, ೧೭ ; ಅವಾಕ್ಯಾರ್ಥದ. (೨) ಪ್ರತಿಪತ್ತಿಗಾಗಿ ವಿಶೇಷಣವಿಶೇಷ್ಯಭಾವವನ್ನು ಅರಿತುಕೊಳ್ಳಬೇಕು, ೩-೧೦ ; ದೇಹಾದಿಗಳು ಅನಾತ್ಮವೆಂಬ ಪ್ರತಿಪತ್ತಿಯಾದರೇ ಪ್ರತ್ಯಗಾತ್ಮನು ತತ್ಪದಾರ್ಥ ದೊಡನೆ ಐಕ್ಯವನ್ನು ಹೊಂದುತ್ತಾನೆ, ೩-೨೯ ; ಪದವು ಸಾಮಾನ್ಯವೃತ್ತಿಯಾದರೂ ಶ್ರುತ್ಯಾದಿಗಳ ನಿಮಿತ್ತದಿಂದ ವಾಕ್ಯಾರ್ಥವನ್ನು ಹೇಳುವದು, ೩-೩೨ ; ಆತ್ಮನು ನಿತ್ಯಪ್ರತಿಪನ್ನನು, ಅವನನ್ನು ಮತ್ತೆ ಅರಿಯಬೇಕೆನ್ನುವದು ಹೊಂದಲಾರದು, ೨-೧೧೮.

ಪ್ರತಿಪತ್ತಿಕರ್ಮ – ತಾನೇ ಪ್ರಾಪ್ತವಾಗಿರುವ ಕರ್ಮವನ್ನು ವಿಧಿಸುವದು, ೧-೮೦.

ಪ್ರತ್ಯಕ್ತ್ವ, ಪ್ರತ್ಯಗಾತ್ಮತ್ವ – ಒಳಗಿನ ಸ್ವರೂಪ, 'ಪರಾಕ್' ಅಲ್ಲದ್ದು. ಆತ್ಮನು ಪ್ರತ್ಯಗ್ರೂಪನು, ಪರಾಗ್ರೂಪವಾದ ಸುಖದುಃಖಗಳ ಸಂಬಂಧವು ಅವನಿಗಿಲ್ಲ, ೧-೯೪ ; ಒಳಗಿನ ಪಿತ್ತದಿಂದ ಹೊರಗಿನ ಪದಾರ್ಥವು ಹಳದಿಯಾಗಿ ಕಾಣುವ ಹಾಗೆ ಪ್ರತ್ಯಗಾತ್ಮನ ಚೈತನ್ಯವು ಹೊರಗಿನ ವಸ್ತುಗಳಲ್ಲಿಯೂ ಕಾಣುತ್ತದೆ, ೩-೩೦ ; ಅಹಂಕಾರವು ಮಿಕ್ಕವುಗಳಿಗಿಂತ ಪ್ರತ್ಯಕ್ತ್ವವುಳ್ಳದ್ದಾದ್ದರಿಂದ ಅದು ಪ್ರತ್ಯಗಾತ್ಮನಿಗೆ ಲಕ್ಷಣವಾಗಿರುತ್ತದೆ, ೨-೫೪, ೫೫ ; ಆತ್ಮನು ನಿಜವಾಗಿ ಪ್ರತ್ಯಗ್ರೂಪನು, ಬುದ್ಧಿಯು ಪರಾಗ್ರೂಪವೇ, ೨-೭೫ ; ಅಹಂಕಾರದ ಬೋದ್ಧೃತಾಪ್ರತ್ಯಕ್ತ್ವಗಳು ಕೂಟಸ್ಥನಾದ ಆತ್ಮನ ಬೋಧ ಪ್ರತ್ಯಕ್ತ್ವಗಳಿಂದಾಗಿರುವವು, ಅವುಗಳಿಗೆ ಪರಸ್ಪರ ಭೇದವುಂಟು, ೩-೧೨ ರಿಂದ ೧೫ ; ಬುದ್ಧಿಯ ಪ್ರತ್ಯಗಾತ್ಮತ್ವವು ಆತ್ಮಚೈತನ್ಯದ ಆಭಾಸದಿಂದ, ಆತ್ಮನಿಗೆ ಅದೇ ಸ್ವರೂಪವು, ೩-೭೧ ; ಪ್ರತ್ಯಕ್ಷಾದಿಪ್ರಮಾಣಗಳು ಪ್ರತ್ಯಗಾತ್ಮನನ್ನು ಅರಿಯಲಾರವು, ೩-೪೮.

ಪ್ರತ್ಯಕ್ಪ್ರವಣ – ಒಳಗಿನ ಆತ್ಮನಕಡೆಗೆ ತಿರುಗಿದ. ಕರ್ಮದಿಂದ ಚಿತ್ತವು ಶುದ್ಧವಾಗಿ ಯೋಗಾಭ್ಯಾಸದ ಮೂಲಕ ಪ್ರತ್ಯಕ್ಪ್ರವಣವಾಗುವದು, ೧-೪೯, ೫೨ ; ಪ್ರತ್ಯಕ್ಪ್ರವಣಬುದ್ಧಿ ಯುಳ್ಳವರಿಗೇ ಜ್ಞಾನವಾಗುತ್ತದೆ, ೪-೭೩.

ಪ್ರತ್ಯಕ್ಷಾದಯಃ – ಪ್ರತ್ಯಕ್ಷ, ಅನುಮಾನ, ಉಪಮಾನ ಮುಂತಾದ ಲೌಕಿಕ ಪ್ರಮಾಣಗಳು, ಭೌತಿಕವಿಷಯಗಳನ್ನು ಮಾತ್ರ ನೋಡುವವು, ಅವಕ್ಕೆ ಪ್ರತ್ಯಗ್ರೂಪನಾದ ಆತ್ಮನು ವಿಷಯನಲ್ಲ, (ಅವ), ೨-೧ ; ೩-೧೩. ಆತ್ಮಾನಾತ್ಮ ವಿಭಾಗವು ಪ್ರತ್ಯಕ್ಷಾದಿಪ್ರಮಾಣವಿಷಯಕ, ೨-೧೦೩ ; ವೇದಾಂತವಾಕ್ಯವು ಪ್ರತ್ಯಕ್ಷಾದಿವಿರುದ್ಧವಲ್ಲ, ೩-೮೧ ; ಪ್ರತ್ಯಕ್ಷಾದಿವಿರುದ್ಧವಾದರೆ ದೃಷ್ಟಿವಿಧಿಪರವೆಂದು ಕಲ್ಪಿಸಬೇಕು, ೩-೮೦ ; ಅಥವಾ

ಪ್ರಮಾಣಾಭಾಸವೆಂದಾದರೂ ಕಲ್ಪಿಸಬೇಕು, ೩-೮೫ ; ಆತ್ಮನು ದುಃಖಿಯೆಂದೇನೂ ಪ್ರತ್ಯಕ್ಷಾದಿಗಳು ಹೇಳುವದಿಲ್ಲ, ೩-೮೭ ; ಪ್ರತ್ಯಕ್ಷಾದಿಗಳಿಂದ ದುಃಖಿತ್ವವು ಕಂಡರೂ ಪ್ರತ್ಯಗಾತ್ಮದೃಷ್ಟಿಯಿಂದ ನಿರ್ದುಃಖಿತ್ವವು ಸ್ವತಃಸಿದ್ಧವಾಗಿರುತ್ತದೆಯಾದ್ದರಿಂದ ವಾಕ್ಯವೇ ಪ್ರಬಲ, ೩-೯೪ ; ಆತ್ಮಾನಾತ್ಮಗಳು ಪ್ರತ್ಯಕ್ಷಾದಿಪ್ರಮಾಣದಿಂದ ಸಿದ್ಧವಾಗಿರುತ್ತದೆ, ೪-೩ ; ಆತ್ಮಜ್ಞಾನದಿಂದಾಗುವ ಫಲವು ಪ್ರತ್ಯಕ್ಷಾನುಭವಸಿದ್ಧ, ೧-೯೦.

ಪ್ರಮಾತೃಪ್ರಮಾಣಪ್ರಮೇಯಾನಿ– ಗ್ರಾಹಕ, ಗ್ರಹಣ, ಗ್ರಾಹ್ಯ, ಜ್ಞಾತೃ, ಜ್ಞಾನ, ದ್ರಷ್ಟೃ, ದರ್ಶನ, ದೃಶ್ಯ. ಪ್ರಮಾತ್ರಾದಿವಿಭಾಗವು ಅಭಾಸಮಾತ್ರ ; ಅದಕ್ಕೂ ಕೂಟಸ್ಥಾತ್ಮನಿಗೂ ಅಜ್ಞಾನವೇ ಸಂಬಂಧ, ೩-೧ ; ಪ್ರಮಾತ್ರಾದಿಗಳಿಗೆ ಹಾನೋಪಾದಾನಗಳುಂಟು ; ಅದಕ್ಕಿಂತ ಆತ್ಮನು ಬೇರೆಯೆಂಬುದನ್ನು ಅನ್ವಯವ್ಯತಿರೇಕಗಳಿಂದ ಅರಿತುಕೊಳ್ಳಬೇಕು, ೩-೪೬ ; ಪ್ರಮಾತ್ರಾದಿವ್ಯವಹಾರವು ಪರಾಗ್ವಿಷಯಕವಾದದ್ದು, ೩-೫೨ ; ಪ್ರಮಾತ್ರಾದಿಗಳಿಗೆ ಅನವಬೋಧವೇ ಉಪಾದಾನ, ೨-೧೦೬.

ಪ್ರಮಾಣಮ್ – ಪರಲೋಕಸಂಬಂಧವಾದ ಸಾಧ್ಯಸಾಧನಭಾವವನ್ನು ವಚನಪ್ರಮಾಣದಿಂದ ತಿಳಿಯಬೇಕು, ೩-೨೭ ; ಲೌಕಿಕಪ್ರಮಾಣಸಿದ್ಧವಾದ ಸಾಧನಗಳನ್ನು ಉಪಯೋಗಿಸಿಕೊಂಡೇ ಬೇಕಾದದ್ದನ್ನು ಪಡೆಯುವದಕ್ಕೂ ಬೇಡದ್ದನ್ನು ತಪ್ಪಿಸಿಕೊಳ್ಳುವದಕ್ಕೂ ಪ್ರವರ್ತಿಸುತ್ತಾರೆ, ೧-೨೯ ; ಭ್ರಾಂತಿಯೇ ಪ್ರವೃತ್ತಿನಿಮಿತ್ತವೆಂಬುದು ಪ್ರತ್ಯಕ್ಷಾದಿಪ್ರಮಾಣಗಳಿಂದ ಸಿದ್ಧವಾಗುತ್ತದೆ, ೧-೩೦ ; ಐಕಾತ್ಮ್ಯವನ್ನು ಪ್ರಮಾಣಬಲದಿಂದ ಅರಿತುಕೊಳ್ಳಬೇಕಾದದ್ದಿಲ್ಲ, ೧-೮೯ ; ಆತ್ಮನಿಂದಲೇ ಪ್ರಮಾಣಗಳ ಸಿದ್ಧಿ, ೨-೩೭ ; ಪ್ರಮಾಣಗಳಿಗೆಲ್ಲ ತಮ್ಮ ವಿಷಯವನ್ನು ತಿಳಿಸುವದೇ ಸ್ವಭಾವ, ೨-೫ ; ಪ್ರಮಾಣವನ್ನು ಅಸಡ್ಡೆಮಾಡುವದಕ್ಕೆ ಕಾರಣವಾದ ಅನುವಾದ, ಸಂಶಯ, ವಿಪರೀತಬೋಧನ – ಇವುಗಳು ಯಾವವೂ ಶ್ರುತಿಯಲ್ಲಿಲ್ಲ, ೩-೩೫ ರಿಂದ ೩೮ ; ಪ್ರಮಾಣಾಂತರಕ್ಕೆ ಅವಿಷಯನಾದ ಆತ್ಮನನ್ನೇ ಶ್ರುತಿ ತಿಳಿಸುತ್ತದೆ, ೩-೩೫, ೪೭ ; ಒಂದು ಪ್ರಮಾಣಕ್ಕೆ ಒಂದೇ ವಿಷಯ, ಒಂದಕ್ಕೆ ಅನೇಕ ಪ್ರಮಾಣಗಳಿಲ್ಲ, ೧-೮೬ ; ಪ್ರಮಾಣಗಳು ಭಿನ್ನವಿಷಯಕವಾದ್ದರಿಂದ ವಾಕ್ಯಪ್ರತ್ಯಕ್ಷಗಳಿಗೆ ವಿರೋಧವಿಲ್ಲ, ೩-೮೩, ೮೬ ; ಪ್ರಮಾಣಗಳಿಗೆ ಪರಸ್ಪರವಿರೋಧವೆಂಬುದು ಪುರುಷಮೋಹದಿಂದ, ೩-೯೬ ; ಪ್ರಮಾಣಗಳು ತಮ್ಮ ಮಹಿಮೆಯಿಂದಲೇ ವಿಷಯವನ್ನು ತಿಳಿಸುತ್ತವೆ, ಒಂದಕ್ಕೊಂದು ಸಹಾಯವಾಗಬೇಕಾಗಿಲ್ಲ, ೩-೮೬ ; ಅಪೂರ್ವಾರ್ಥವನ್ನು ತಿಳಿಸದೆ ಇದ್ದರೆ ಪ್ರಮಾಣವೇ ಅಲ್ಲ, ೩-೮೩, ೧೨೨ ; ದುಃಖಿತ್ವವು ಪ್ರಮಾಣಬದ್ಧಮೂಲವಾದರೆ ಪ್ರಸಂಖ್ಯಾನದಿಂದಲೂ ಹೋಗಬಾರದು, ೩-೮೮ ; ಪ್ರಮಾಣ, ಪ್ರಮಾಣಾಭಾಸ - ಇವೆರಡರಲ್ಲಿಯೂ ಆತ್ಮನ ಜ್ಞಾನವು ನಾಶವಾಗದೆ ಇರುತ್ತದೆ, ೨-೭೯.

**ಪ್ರಮಾ, ಪ್ರಮಿತಿಃ** – ಯಥಾರ್ಥಜ್ಞಾನ. ಪ್ರಮಾಕರ್ಮವಾದ ಪ್ರಮೇಯದಲ್ಲಿ ಪ್ರಮೆಯುಂಟಾಗಬೇಕು, ಕರ್ತೃವಾದ ಪ್ರಮಾತೃವಿನಲ್ಲಲ್ಲ, ೩-೮೭ ; ಪ್ರತ್ಯಕ್ಷಾದಿ ವಿರುದ್ಧವಾದ ಜ್ಞಾನವು ಪ್ರಮೆಯಾಗಲಾರದು, ೩-೮೯ ; ಪ್ರಮಾಣಗಳು ಪ್ರಮಿತಿಯನ್ನು ಬೆಳೆಯಿಸಿ ಪರಿಪೂರ್ಣಪ್ರಮೆಯನ್ನು ಮಾಡುತ್ತವೆ ಎಂಬುದು ತಪ್ಪು, ೩-೯೦. ಕೆಲವೇ ದಿನಗಳ ಭಾವನಾಭ್ಯಾಸವು ಸ್ಥಿರವೆಂಬುದಕ್ಕೆ ಪ್ರಮೆಯು (ಪ್ರಮಾಣವು) ಇಲ್ಲ, ೩-೯೨ ; ವಾಕ್ಯವು ಪ್ರತ್ಯಕ್ಷಾದಿ ವಿರುದ್ಧವಾಗಿ ಪ್ರಮೆಯನ್ನುಂಟುಮಾಡಿದರೆ ಪ್ರತ್ಯಕ್ಷವು ಗೌಣವೆನ್ನಬೇಕು, ೩-೯೬ ; ತನ್ನ ವಿಷಯದಲ್ಲಿ ಪ್ರಮೆಯನ್ನುಂಟುಮಾಡದ್ದು ಪ್ರಮಾಣವೇ ಅಲ್ಲ, ೧-೯೧, ೩-೧೨೨.

**ಪ್ರಮೇಯಮ್** – ಪ್ರಮಾಣದಿಂದ ಅರಿಯುವ ವಿಷಯ. ಆತ್ಮನು ಪ್ರಮೇಯನಲ್ಲ, ಪ್ರಮೇಯವಿಲಕ್ಷಣ, (ಅವ), ೨-೧ ; ಪ್ರಮಾತೃ, ಪ್ರಮೇಯ-ಇವುಗಳನ್ನು ಅರಿಯಬೇಕೆಂಬ ಇಚ್ಛೆಯುಂಟಾದಾಗ ತಾನೇ ತೋರುತ್ತಿರುವ ಆತ್ಮನೇ ವೇದಾಂತದಲ್ಲಿ ಅಜ್ಞಾತವಾಗಿರುವ ಪ್ರಮೇಯವು, ೩-೮.

**ಪ್ರವೃತ್ತಿಃ** – ತೊಡಗುವದು. ಜ್ಞಾನಿಗೆ ಪ್ರವೃತ್ತಿನಿವೃತ್ತಿಧರ್ಮಗಳು ಯಾವವೂ ನಿಜವಾಗಿಲ್ಲ, ೪-೫೪ ; ಜ್ಞಾನಿಗೆ ಕರ್ಮಪ್ರವೃತ್ತಿಯ ಬೀಜವಾದ ಕಾಮವೇ ಹೋಗಿಬಿಟ್ಟಿರುತ್ತದೆ, ೪-೬೧, ೬೫ ; ಪ್ರವೃತ್ತಿನಿವೃತ್ತಿಗಳೆರಡೂ ಅವಿದ್ಯಾಕಾರ್ಯ, ೪-೬೯ ; ಕರ್ಮಪ್ರವೃತ್ತಿಗೆ ಭ್ರಾಂತಿಯೇ ನಿಮಿತ್ತ, ೧-೨೯ ; ದೇಹವ್ಯತಿರಿಕ್ತಾತ್ಮವಾದಿಗಳಿಗೂ ಅಜ್ಞಾನದಿಂದಲೇ ಕರ್ಮದಲ್ಲಿ ಪ್ರವೃತ್ತಿ, ೧-೯೨.

**ಪ್ರಸಂಖ್ಯಾನಮ್** – ವಾಕ್ಯಯುಕ್ತಿಗಳ ಅಭ್ಯಾಸಮಾಡುವದೆಂಬ ನಿದಿಧ್ಯಾಸನ. ಪ್ರಸಂಖ್ಯಾನವಾದದ ಖಂಡನೆ, ೩-೮೨, ೮೮ ರಿಂದ ೯೩, ೧೧೭ ರಿಂದ ೧೨೫ ; ಶ್ರವಣಾದಿಗಳಲ್ಲಿಯೇ ಪ್ರಸಂಖ್ಯಾನವನ್ನು ಒಪ್ಪಬಹುದು, ೩-೧೨೫, ೧೨೬.

**ಫಲಮ್** – (೧) ಕರ್ಮದ ಕಾರ್ಯ. ಕಾಮ್ಯಕರ್ಮಕ್ಕೆ ಸ್ವರ್ಗಾದಿಫಲ, ೧-೨೬, ೪೬ ; ನಿತ್ಯಕರ್ಮಕ್ಕೆ ಫಲವಿಲ್ಲವೆಂದು ಮೀಮಾಂಸಕರು, ದುರಿತಕ್ಷಯವೇ ಅದಕ್ಕೆ ಫಲ, ೧-೨೬, ೨೮, ೮೨ ; ಜ್ಞಾನದ ಫಲವು ಪ್ರತ್ಯಕ್ಷವಾಗಿ ಕೂಡಲೆ ಅನುಭವಕ್ಕೆ ಬರುತ್ತದೆ, ೧-೯೦. (೨) ಪ್ರಮಾಣದ ಫಲವಾದ ಅರಿವು. ಪ್ರಮೇಯದ ವಿಷಯಕ್ಕೆ ಅಜ್ಞಾತಜ್ಞಾಪನವೇ ಫಲವು, ಆದರೆ ಚೈತನ್ಯರೂಪನಾದ ಆತ್ಮನಿಗೆ ಅಜ್ಞಾನನಾಶವಲ್ಲದೆ ಮತ್ತೇನೂ ಫಲವಿಲ್ಲ, ೨-೯೯, ೧೦೫.

**ಬಲವತ್** – ವಿದ್ಯಾವಿದ್ಯೆಗಳಲ್ಲಿ ವಿದ್ಯೆಯೇ ಪ್ರಬಲ, ೧-೩೫, ೩೮ ; ತತ್ತ್ವಮಸ್ಯಾದಿವಾಕ್ಯಜ್ಞಾನವೇ ಪ್ರತ್ಯಕ್ಷಜ್ಞಾನಕ್ಕಿಂತ ಪ್ರಬಲ, ೩-೯೪, ೯೫.

ಬಾಧ್ಯಬಾಧಕಭಾವಃ – ಕರ್ಮಕ್ಕೂ ಜ್ಞಾನಕ್ಕೂ ಬಾಧ್ಯಬಾಧಕಭಾವವಿದೆ ; ೧-೨೯, ೫೫ ; ವಿದ್ಯೆಯು ಅವಿದ್ಯೆಯನ್ನು ಬಾಧಿಸಿದ ಬಳಿಕ ಅವಿದ್ಯೆಯು ಆ ವಿದ್ಯೆಯನ್ನು ಮತ್ತೆ ಬಾಧಿಸಲಾರದು, ೧-೩೮ ; ತತ್ತ್ವಂಪದಾರ್ಥಗಳ ಅದ್ವಿತೀಯಪ್ರತ್ಯಕ್ತ್ವಗಳೇ ಬಾಧಕ, ದುಃಖಿತ್ವಸದ್ವಿತೀಯತ್ವಗಳೇ ಬಾಧ್ಯ ಎಂಬುದಕ್ಕೆ ಕಾರಣ ೩-೭೯, ೮೦ ; ಆತ್ಮನ ಬೋಧಾಬೋಧಗಳು ಬಾಧ್ಯಬಾಧಕವಾದರೂ ಆತ್ಮಸ್ಪರ್ಶಿಗಳಲ್ಲ, ೩-೧೦೭ ; ಪ್ರತ್ಯಕ್ಷಾಗಮಗಳಿಗೆ ವಿರೋಧವಾದರೆ ಬಾಧ್ಯಬಾಧಕಭಾವವಿರುತ್ತದೆ, ೩-೮೫.

ಬುದ್ಧಿಃ, ಧೀಃ – (೧) ಅಂತಃಕರಣ. ಆತ್ಮನು ಬುದ್ಧಿಗೂ ಸಾಕ್ಷಿ, ೧-೧, ೨-೮೦ ; ಬುದ್ಧಿಗಳಿಂದ ಆತ್ಮನ ಸ್ವರೂಪಾಪಹಾರವಾಗುವದಿಲ್ಲ, ೨-೪೯ ; ಪರಿಣಾಮಿಯಾದ ಬುದ್ಧಿಯನ್ನು ಕೂಟಸ್ಥನಾದ ಆತ್ಮನು ನೋಡುತ್ತಾನೆ, ೨-೭೧ ; ಬುದ್ಧಿಗೂ ಆತ್ಮನಿಗೂ ತಾರತಮ್ಯ, ೨-೭೧ ರಿಂದ ೭೫ ; ಬುದ್ಧಿಯ ಎಲ್ಲಾ ವಿಕಾರಗಳಿಗೂ ಆತ್ಮನು ಸಾಕ್ಷಿ, ೨-೭೭ ; ಆತ್ಮಜ್ಯೋತಿಯನ್ನೂ ಬುದ್ಧಿಯನ್ನೂ ಅನುಮಾನದಿಂದ ವಿಂಗಡಿಸಿಕೊಳ್ಳಬೇಕು, ೨-೯೭ ; ಬುದ್ಧ್ಯಾದಿಗಳಂತೆ ಆತ್ಮನು ವ್ಯವಹಿತನಾಗಿಲ್ಲ, ೨-೯೮ ; ಬುದ್ಧಿಯಂತೆ ಆತ್ಮನಿಗೆ ಮತ್ತೊಂದರಿಂದ ಸಿದ್ಧಿಯಾಗಬೇಕಾದದ್ದಿಲ್ಲ, ೨-೧೧೦ ; ಆತ್ಮನಿಂದ ಬೇರ್ಪಡಿಸಿದರೆ ಬುದ್ಧ್ಯಾದಿಗಳು ಷಷ್ಠಗೋಚರದಂತೆ ಅಭಾವರೂಪವೇ, ೨-೧೧೪ ; ಕಾಮಗಳೆಲ್ಲ ಹೋಗಲು ಬುದ್ಧಿಯು ಆತ್ಮನನ್ನು ಸೇರಿಕೊಳ್ಳುವದು, ೧-೪೮. (೨) ಬುದ್ಧಿವೃತ್ತಿ. ಪುರುಷಬುದ್ಧಿಯಿಂದ ಸ್ಥಾಣುಬುದ್ಧಿಯು ಬಾಧಿತವಾಗುವಂತೆ ಬ್ರಹ್ಮಬುದ್ಧಿಯಿಂದ ಅಹಂಬುದ್ಧಿ ತೊಲಗುತ್ತದೆ, ೨-೨೯ ; ಅಹಂಬುದ್ಧಿ ಹೋದರೆ ಮಮಬುದ್ಧಿಯೂ ಹೋಗುತ್ತದೆ, ೨-೩೦ ; ಬುದ್ಧಿಯು ಹುಟ್ಟಿದರೂ ಆತ್ಮನಲ್ಲಿ ವಿಕಾರವಾಗದು, ೨-೬೧, ೬೩ ; ಆತ್ಮನು ಬುದ್ಧಿವೃತ್ತಿಗಳಿಗೆ ನಿರ್ವಿಕಾರನಾಗಿಯೇ ಅಭಿವ್ಯಂಜಕನು, ೨-೬೬ ; ಬುದ್ಧಿವೃತ್ತಿಗಳೆಲ್ಲ ಆತ್ಮಚೈತನ್ಯದಿಂದ ವ್ಯಾಪ್ತವಾಗಿರುತ್ತವೆ, ೨-೬೯ ; ಬುದ್ಧಿಯ ಉತ್ಪತ್ತಿಸ್ಥಿತಿನಾಶಗಳಿಂದ ಆತ್ಮನಿಗೆ ಉತ್ಪತ್ತ್ಯಾದಿಗಳಾಗುವದಿಲ್ಲ, ೨-೭೯ ; ಬ್ರಾಹ್ಮಣಬುದ್ಧಿ ಚಂಡಾಲಬುದ್ಧಿ ಎರಡಕ್ಕೂ ಆತ್ಮಚೈತನ್ಯವೇ ಭಾಸಕ, ೨-೮೮ ; ಘಟಬುದ್ಧಿಘಟಗಳಿಗೆ ದ್ರಷ್ಟೃವು ಬೇರೆಯಿರುವಂತೆ ಅಹಂಬುದ್ಧಿ ಅಹಂಗಮ್ಯ- ಈ ಎರಡಕ್ಕಿಂತ ದೃಗ್ರೂಪಚೈತನ್ಯವು ಬೇರೆಯಾಗಿರುತ್ತದೆ, ೨-೧೦೦.

ಬುದ್ಧ್ಯಾದಿದೇಹಾನ್ತಾಃ, ದೇಹಾದಿಬುದ್ಧ್ಯನ್ತಾಃ – ಬುದ್ಧಿಯಿಂದ ದೇಹದವರೆಗೆ ಸಂಶಯಗ್ರಸ್ತವಾಗಿರುವ ಅನಾತ್ಮಗಳು, ೨-೧೫, ೧೮, ೪-೪, ೧೦.

ಬೋಧಃ – (೧) ಜ್ಞಾನ. ಆತ್ಮನಿಗೆ ಅಹಂಕಾರವು ಧರ್ಮವಾಗಿದ್ದರೆ ಬೋಧದಂತೆ ಅದೂ ನಿತ್ಯವಾಗಿರಬೇಕಿತ್ತು, ೨-೩೩ ; (೨) ಸಮ್ಯಗ್ಜ್ಞಾನ. ಜ್ಞಾನಕ್ಕಿಂತ

ಮೊದಲೇ ಮತ್ತೊಂದು ದೇಹದ ದುಃಖವಿರುವದಿಲ್ಲ ; ಜ್ಞಾನವಾದಮೇಲೆ ಯಾವ ದುಃಖವೂ ಇರುವದಿಲ್ಲ, ೨-೯೦ ; (೩) ಚೈತನ್ಯ. ಬೋಧಸ್ವರೂಪನೇ ಆಗಿರುವ ಆತ್ಮನನ್ನು ಹೇಳುವದರಿಂದ ಶ್ರುತಿಯು ಅಧಿಕಾರಿಗೆ ಅನುಭವವನ್ನುಂಟುಮಾಡಿಯೇ ತೀರುತ್ತದೆ, ೩-೩೮.

ಬೋದ್ಧೃತ್ವಮ್ – ಜ್ಞಾತೃತ್ವ. ಆತ್ಮನು ಕೂಟಸ್ಥಬೋಧದಿಂದ ಬೋದ್ಧೃ ; ಅದರ ಸಂಬಂಧದಿಂದ ಬುದ್ಧಿಯು ಬೋದ್ಧೃ, ೩-೧೫ ; ಆತ್ಮನಿಗಿರುವ ಬೋಧವು ಅನಿಮಿತ್ತವಾಗಿರುತ್ತದೆ, ಬುದ್ಧಿಯ ಬೋದ್ಧೃತ್ವಕ್ಕೆ ಅದು ಕಾರಣವು, ೩-೧೧ ; ಬುದ್ಧಿಯ ಬೋದ್ಧೃತ್ವವು ಪ್ರತ್ಯಯದ ಉತ್ಪತ್ತಿಯಿಂದ ಆತ್ಮನಿಗೆ ಸ್ವಾಭಾವಿಕ, ೩-೧೯.

ಬ್ರಹ್ಮ – ಪರಮಾತ್ಮ. ಏಕರಸವಾದ ಅದ್ವೈತಬ್ರಹ್ಮವಾದದಂತೆ ನಾನಾರಸ ಬ್ರಹ್ಮವಾದದಲ್ಲಿಯೂ ಕರ್ಮಜ್ಞಾನಸಮುಚ್ಚಯವು ಸಿದ್ಧಿಸುವದಿಲ್ಲ, ೧-೬೮ ; ಆಮ್ನಾಯವೆಲ್ಲ ಕ್ರಿಯಾರ್ಥವೆಂಬುದು ಜೈಮಿನಿಗಳ ಅಭಿಪ್ರಾಯವಲ್ಲವಾದ್ದರಿಂದ ಬ್ರಹ್ಮ ವಸ್ತುವನ್ನು ತಿಳಿಸುವ ಶಾರೀರಕವನ್ನು ಬಾದರಾಯಣರು ರಚಿಸಿರುತ್ತಾರೆ, ೧-೯೧ ; ಬ್ರಹ್ಮವಾಗಿದೇನೆ ಎಂಬ ಬುದ್ಧಿಯಿಂದ ಅಹಂಬುದ್ಧಿ ಹೋಗುತ್ತದೆ, ೨-೨೯ ; ನಾನು ಎಂಬ ವಾಕ್ಯಾರ್ಥಜ್ಞಾನವನ್ನು ಅಭ್ಯಾಸಮಾಡುತ್ತಿದ್ದರೆ ಅವಾಕ್ಯಾರ್ಥಜ್ಞಾನವು ಬೇರೆಯಾಗುತ್ತದೆ ಎಂಬುದು ಸರಿಯಲ್ಲ, ೧-೬೭ ; ಬ್ರಹ್ಮವು ನಾನು ಎಂಬ ಜ್ಞಾನದಿಂದ ವಾಙ್ಮನಸ್ಸುಗಳಿಗೆ ಗೋಚರವಾಗದು, ೩-೧ ; ಜ್ಞಾನ್ಯಜ್ಞಾನಿತ್ವಗಳು ಕಲ್ಪಿತವೆಂದು ಅರಿತುಕೊಂಡಿರು ವವನು ಶ್ರೇಷ್ಠನಾದ ಬ್ರಹ್ಮಜ್ಞಾನಿ, ೪-೫೩ ; ಬ್ರಹ್ಮಸಂಸ್ಥರಾದ ಆಚಾರ್ಯರ ಸೇವೆಯಿಂದ ಜ್ಞಾನವನ್ನು ಹೊಂದಿ ಈ ಪ್ರಕರಣವನ್ನು ಬರೆದಿದೆ, ೪-೭೬.

ಭಾವನಾ – ಭಾವನೆಯನ್ನು ಕೂಡಿಸಿಕೊಳ್ಳುವದರಿಂದ ಅಜ್ಞಾನವು ನಿಶ್ಶೇಷವಾಗಿ ಹೋಗುವದೆಂಬ ವಾದವು ಸರಿಯಲ್ಲ, ೧-೬೭ ; ಪ್ರಸಂಖ್ಯಾನವು ಅಭ್ಯಾಸದಿಂದ ಬೆಳೆಯುತ್ತದೆ ಎಂದರೆ ಅದು ಭಾವನೆಯ ಏಕಾಗ್ರ್ಯವೇ ಆಗುತ್ತದೆ, ಆಗ ಅದರ ಫಲವು ನಿಯತವಾಗಲಾರದು, ೩-೯೦ ರಿಂದ ೯೩.

ಭಾವಾಭಾವೌ – ನಾನು ದೇಹಾದಿಗಳು ಎಂಬ ಭಾವಜ್ಞಾನ, ನಾನು ದೇಹಾದಿಗಳಲ್ಲ ಎಂದು ಅನುಮಾನದಿಂದಾಗುವ ಅಭಾವಜ್ಞಾನ- ಇವೆರಡನ್ನೂ ವಾಕ್ಯವು ತೊಲಗಿಸುತ್ತದೆ, ೩-೧೧೩ ರಿಂದ ೧೧೫ ; ತತ್ತ್ವಮಸಿವಾಕ್ಯದಿಂದ ಭಾವಾಭಾವಗಳ ನಿತ್ಯಸಾಕ್ಷಿಯಾಗಿರುವ ಆತ್ಮನನ್ನು ಅರಿತುಕೊಳ್ಳಬೇಕು, ೪-೮.

ಭಿನ್ನಸಾಕ್ಷಿಕ, ಭಿನ್ನಸಾಧನ – ಗ್ರಾಹಕಾದಿಗಳು ತಮಗಿಂತ ಬೇರೆಯಾದ ಸಾಕ್ಷಿಯಿಂದ ಸಿದ್ಧವಾಗುತ್ತವೆ, ೨-೧೦೬, ೧೦೯.

ಭಿನ್ನಾಭಿನ್ನ– ಬೇರೆಯೂ ಆಗಿ ಬೇರೆಯಲ್ಲದೆಯೂ ಇರುವದು. ಬ್ರಹ್ಮವು ನಮ್ಮ ಆತ್ಮನಿಗಿಂತ ಭಿನ್ನಾಭಿನ್ನವೆಂಬುದು ತನಗೆ ತಾನೇ ವಿರುದ್ಧವಾಗಿರುತ್ತದೆ, ಏಕೆಂದರೆ ಭಿನ್ನವಾಗಿದ್ದರೆ ಅಭಿನ್ನವಾಗಲೇ ಆರದು, ಈ ಪಕ್ಷದಲ್ಲಿ ಅಭಿನ್ನವಾಗಿರುವ ಬ್ರಹ್ಮಕ್ಕೆ ಎಲ್ಲರ ದುಃಖವೂ ಗಂಟುಬೀಳುತ್ತದೆ, ೧-೭೮.

ಭೇದಃ, ಭಿದಾ, ನಾನಾತ್ವಮ್ – ದ್ವೈತವು, ಬೇರೆಯಾಗಿರುವದು. ಬ್ರಹ್ಮದಲ್ಲಿ ನಾನಾತ್ವವಿದೆ ಎಂಬ ವಾದಿಗಳ ಪಕ್ಷದಲ್ಲಿ ಆ ಬ್ರಹ್ಮವು ಆತ್ಮನಿಗಿಂತ ಭಿನ್ನವಾದರೂ ಅಭಿನ್ನವಾದರೂ ಭಿನ್ನಾಭಿನ್ನವಾದರೂ ಜ್ಞಾನಕರ್ಮಸಮುಚ್ಚಯವು ಸಿದ್ಧಿಸುವದಿಲ್ಲ, ೧-೬೮ ರಿಂದ ೭೮ ; ನಾನಾತ್ವರೂಪವಾದ ದ್ವೈತವು ತನಗೆತಾನಾಗಲಿ ಅವಗತಿರೂಪದಿಂದಲಾಗಲಿ ಉಭಯರೂಪದಿಂದಾಗಲಿ ಸಿದ್ಧವಿಲ್ಲದ್ದರಿಂದ ಹುಸಿಯೇ, ೨-೧೧೨ ; ಅನಾತ್ಮಜ್ಞಾನವು ಭೇದಜ್ಞಾನವು, ಸಾಕ್ಷಿಜ್ಞಾನವು ಭೇದಾಭಾವಜ್ಞಾನವು ಎಂಬ ವಿವೇಕವೂ ಅವಿದ್ಯಾಕಾರ್ಯವಾದ್ದರಿಂದ ಚೈತನ್ಯೈಕಜ್ಞಾನದಿಂದ ತೊಲಗುವದು, ೩-೬ ; ಅಂತಃಕರಣದಲ್ಲಿರುವ ಬೋಧಪ್ರತ್ಯಕ್ತ್ವಗಳಿಗೆ ಭೇದವುಂಟು, ಆತ್ಮನಲ್ಲಿ ಅವಕ್ಕೆ ಭೇದವಿಲ್ಲ, ೩-೧೩, ೧೪.

ಭ್ರಾನ್ತಿಃ – ಮೋಹ, ತಪ್ಪುತಿಳಿವಳಿಕೆ. ಭ್ರಾಂತಿಯಿಂದ ಪ್ರಾಪ್ತವಾದದ್ದನ್ನು ಪಡೆಯುವದಕ್ಕೂ ಪರಿಹೃತವಾದದ್ದನ್ನು ಪರಿಹರಿಸಿಕೊಳ್ಳುವದಕ್ಕೂ ಯತ್ನಿಸುವದು, ೧-೩೧ ; ಭ್ರಾಂತಿಜ್ಞಾನವೇ ಕರ್ಮಕ್ಕೆ ಅಂಗ, ಪ್ರವರ್ತಕ, ೧-೨೯, ೬೦ ; ಅಜ್ಞಾನವಿದ್ದಾಗಲೇ ಭ್ರಾಂತಿಯಾಗುವದು, ೨-೩೧ ; ಆತ್ಮಭ್ರಾಂತಿಯು ಆಲಂಬನವಿಲ್ಲದೆ ಇರುವದರಿಂದ ವಿಚಾರಕ್ಕೆ ನಿಲ್ಲುವದಲ್ಲ, ೩-೬೬.

ಮಮ – ನನ್ನದೆಂಬ ಅಭಿಮಾನ. ಇದು ಅನಾತ್ಮಧರ್ಮ, ೨-೨೨ ; ನಾನೆಂಬ ಬುದ್ಧಿ ಹೋದರೆ ನನ್ನದೆಂಬುದೂ ಹೋಗಿಬಿಡುತ್ತದೆ, ೨-೩೦ ; ಜ್ಞಾತೃವಿಗೆ ಇದು ಎಂಬ ಅರಿವೂ ವಿಷಯದ ಉಪಕಾರಾಪಕಾರಗಳಿಂದಾದ ಅಹಂಕಾರದ ವಿಕಾರದಿಂದ ನನ್ನದೆಂಬ ಅರಿವೂ ಆಗುತ್ತವೆ, ೩-೬೧ ; ಸುಷುಪ್ತಿಯಲ್ಲಿ ಈ ಎರಡು ಅರಿವುಗಳೂ ಇರುವದಿಲ್ಲ, ೩-೬೨ ; ಶ್ರುತಿವಾಕ್ಯದಿಂದ ನಾನು ನನ್ನದೆಂಬಿವು ಆತ್ಮನಲ್ಲಿಲ್ಲವೇ ಇಲ್ಲವೆಂಬ ಬುದ್ಧಿಯುಂಟಾಗುವದು, ೨-೧೧೭.

ಮಿಥ್ಯಾಜ್ಞಾನಮ್, ಅನ್ಯಥಾಮತಿಃ – ತಪ್ಪುತಿಳಿವಳಿಕೆ. (೧) ಅನಾತ್ಮವನ್ನು ಆತ್ಮನೆಂದು ತಿಳಿಯುವ ಮಿಥ್ಯಾಜ್ಞಾನವೇ ಅಜ್ಞಾನವು, ಅನಾತ್ಮವಿವೇಕವೇ ಜ್ಞಾನವು- ಎಂಬ ಸಾಂಖ್ಯರ ಮತ ಸರಿಯಲ್ಲ, ೩-೬ ; ಮಿಥ್ಯಾಜ್ಞಾನಕ್ಕಿಂತ ಬೇರೆಯಾದ ಸಂಸಾರಕಾರಣವಾದ ಅಜ್ಞಾನವಿಲ್ಲವೆನ್ನುವವರ ಮತವೂ ಸರಿಯಲ್ಲ, ೩-೮ ; ಜ್ಞಾನವು ಹುಟ್ಟಿದ ಮಾತ್ರದಿಂದ ಅಜ್ಞಾನವನ್ನು ನಾಶಗೊಳಿಸುತ್ತದೆ, ಅನ್ಯಥಾಮತಿಯು ಅದಕ್ಕಿಂತ ಬೇರೆಯಲ್ಲ, ೪-೫೭.

ಮಿಥ್ಯಾಧ್ಯಾಸಃ – ಹುಸಿಯ ತೋರಿಕೆ. ಅಹಂಮಮತ್ವಾದಿಗಳು ಆತ್ಮನಲ್ಲಿ ಬರಿಯ ಅಧ್ಯಾಸವೇ, ೨-೧೧೬ ; ಪ್ರಮಾತ್ರಾದಿಯೆಲ್ಲ ಮಿಥ್ಯಾಧ್ಯಾಸವೇ, ೩-೧ ; ಮಿಥ್ಯಾಸಿದ್ಧ (ದ್ವೈತ) ೨-೪೪, ೪೫, ಮಿಥ್ಯಾಸ್ವಭಾವ (ಭೇದ) ೨-೯೫ - ಇವಕ್ಕೂ ಮಿಥ್ಯಾಧ್ಯಾಸವೆಂದೇ ಅರ್ಥ.

ಮೀಮಾಂಸಕಃ – ಕರ್ಮದಿಂದಲೇ ಮುಕ್ತಿಯೆನ್ನುವವ. ಇವನ ಮತದ ಖಂಡನೆಯು ಈ ಪ್ರಕರಣದ ಒಂದನೆಯ ಅಧ್ಯಾಯದಲ್ಲಿದೆ. ಅಹಂಪ್ರತ್ಯಯಗ್ರಾಹ್ಯವಾಗಿರುವದರಿಂದಲೇ ಆತ್ಮನು ಗ್ರಾಹಕನೆಂಬ ಮೀಮಾಂಸಕನ ಮತದ ಖಂಡನೆ, ೨-೨೪ ರಿಂದ ೪೩ರ ವರೆಗೆ.

ಮುಕ್ತಿಃ, ಮೋಕ್ಷಃ – ಸಂಸಾರದಿಂದ ಬಿಡುಗಡೆ. ಅವಿದ್ಯಾನಾಶವೇ ಮುಕ್ತಿ, ೧-೭ ; ಮುಕ್ತಿಯು ಕರ್ಮದಿಂದಲೇ ಆಗುವದೆಂಬ ಮತ, ೧-೯ ರಿಂದ ೨೦ ; ಅದರ ಖಂಡನೆ, ೧-೨೨ ರಿಂದ ೧ನೆಯ ಅಧ್ಯಾಯದ ಕೊನೆಯವರೆಗೆ ; ಮುಕ್ತಿಹೇತುವಾದ ಜ್ಞಾನವು ಪುರುಷತಂತ್ರವಲ್ಲ, ೧-೮೮ ; ಜ್ಞಾನದಿಂದಲೇ ಮುಕ್ತಿ, (ಅವ), ೧-೯೯.

ಮುಮುಕ್ಷವಃ – ಮೋಕ್ಷವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯುಳ್ಳವರು. ಮುಮುಕ್ಷುತ್ವವು ಸಂಸಾರದ ಯಾಥಾತ್ಮ್ಯವನ್ನು ತಿಳಿದುಕೊಂಡು ವಿರಕ್ತರಾದವರಿಗೇ ಉಂಟಾಗುತ್ತದೆ, ೧-೫೨, ೨-೬ ; ಆದ್ದರಿಂದ ಮುಮುಕ್ಷುಗಳು ಚಿತ್ತಶುದ್ಧಿಗಾಗಿ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡುತ್ತಿರಬೇಕು, ೧-೫೦ ; ಮುಮುಕ್ಷುವಾದವರಿಗೆ ಶ್ರುತಿವಾಕ್ಯದಿಂದ ಅಹಂಕಾರಾದಿಗಳ ಸೋಂಕು ಆತ್ಮನಿಗಿಲ್ಲವೆಂಬ ನಿಶ್ಚಯವುಂಟಾಗುತ್ತದೆ, ೨-೧೧೭.

ಮೋಹಃ – ಭ್ರಾಂತಿ, ಅಜ್ಞಾನ. ವೇದಾಂತವಾಕ್ಯದಿಂದಾದ ಜ್ಞಾನವೇ ಮೋಹವನ್ನು ಕಳೆಯುತ್ತದೆ, ಕರ್ಮವಲ್ಲ, ೧-೮ ; ಮೋಹದಿಂದ ಹಿತಾಹಿತಗಳ ಪ್ರಾಪ್ತಿಪರಿಹಾರೇಚ್ಛೆ, ೧-೨೯, ೩೨ ; ಪರಿಹೃತವೇ ಆಗಿ ಆಪ್ತವೇ ಆಗಿರುವ ಹಾನ

ಪ್ರಾಪ್ತಿಗಳಿಗೆ ಮೋಹವೊಂದೇ ಅಡ್ಡಿ, ೧-೩೪ ; ಆತ್ಮನೇ ಆಗಿರುವ ಬ್ರಹ್ಮದ ಅನಾಪ್ತಿ ಮೋಹದಿಂದ, ಮೋಹದ ಅಡ್ಡಿಯನ್ನು ಕಳೆಯುವದಕ್ಕೆ ಕರ್ತವ್ಯವು ವ್ಯರ್ಥ, ೧-೬೯, ೭೦ ; ಬೌದ್ಧರು ಮೋಹದಿಂದ ಶ್ರುತಿಯನ್ನು ಕೈಬಿಟ್ಟಿರುತ್ತಾರೆ, ೩-೩೪ ; ಮೋಹದಿಂದಾಗಿರುವ ಜ್ಞಾತೃತ್ವದಿಂದ ಇದಂಪ್ರತ್ಯಯವಾಗುವದು, ೩-೬೧, ೬೨ ; ದ್ವೈತಕ್ಕೆ ಮೋಹವೇ ಕಾರಣ, ೨-೪೪ ; ಕ್ರಿಯಾಕಾರಕಫಲರೂಪವಾದ ತೋರಿಕೆಗೆ ಮೋಹವೊಂದೇ ಉಪಾದಾನ, ೨-೯೯, ಮೋಹವು ಹೋದರೂ ಬಾಧಿತಾನುವೃತ್ತಿಯಿಂದ ಮೋಹದ ಕಾರ್ಯವಾದ ನಿವೃತ್ತಿಕರ್ಮವು ಇದ್ದುಕೊಂಡಿರಬಹುದು, ೪-೬೦.

## ಯ -ರ

**ಯಥಾವಸ್ಥಿತ, ಯಥಾಭೂತ –** ಇದ್ದದ್ದು ಇದ್ದಂತೆ ಇರುವ ಸಿದ್ಧವಸ್ತು. ವೇದಾಂತವಾಕ್ಯವು ಇಂಥ ವಸ್ತುವನ್ನು ತಿಳಿಸುವದು, ೧-೨೯, ೩-೪೭, ೬೪.

**ಯಥೇಷ್ಟಾಚರಣಮ್ –** ಜ್ಞಾನಿಗೆ ಯತೇಷ್ಟಾಚಾರವಿರಲಾರದು, ೪-೬೨ ರಿಂದ ೬೭.

**ಯೋಗಾಭ್ಯಾಸಃ –** ಆತ್ಮಧ್ಯಾನದ ಅಭ್ಯಾಸ. ಇದರ ಮೂಲಕ ಕರ್ಮದಿಂದ ಪ್ರತ್ಯಕ್ಪ್ರವಣತೆ, ೧-೫೨.

**ರಾಗದ್ವೇಷೌ –** ರಾಗದ್ವೇಷಗಳು. ಇದಕ್ಕೆ ಒಳ್ಳೆಯದು ಕೆಟ್ಟದ್ದು ಎಂಬ ಅಧ್ಯಾಸವೇ ಕಾರಣ (ಅವ). ವಿದ್ಯೆಯುಂಟಾದಮೇಲೂ ರಾಗದ್ವೇಷಗಳು ಕಾಣುವವೆಂಬುದು ಸರಿಯಲ್ಲ, ೧-೩೮, ೪-೬೭.

## ಲ

**ಲಕ್ಷ್ಯಲಕ್ಷಣಭಾವಃ –** ತತ್ತ್ವಂಪದಾರ್ಥಗಳು ಅದ್ವಿತೀಯಪ್ರತ್ಯಗಾತ್ಮನಲ್ಲಿ ಲಕ್ಷಣವಾಗಿರುವಿಕೆ, ೩-೩, ೧೧, ೨೬.

**ಲಿಙ್ಗಮ್ –** (೧) ಗುರುತು. ರಾಗವು ಅಜ್ಞಾನದ ಗುರುತು, ೪-೬೭. (೨) ಅನುಮಾನಕ್ಕೆ ಕರಣವಾದ ಹೊಗೆ ಮುಂತಾದದ್ದು. ಗಡಿಗೆ ಮುಂತಾದವು ಪರಂಪರೆಯಿಂದ ಅಹಂಕಾರಕ್ಕೆ ಲಿಂಗವಾಗಿರುವಂತೆ ದೃಶ್ಯವಾದ ಅಹಂಕಾರವೂ

ದ್ರಷ್ಟೃವಾದ ಆತ್ಮನಿಗೆ ಲಿಂಗ, ೩-೫೬ ; ಬುದ್ಧ್ಯಾದಿಗಳಿಗೆ ಅನಾತ್ಮತ್ವವು ಲಿಂಗದಿಂದಲೂ ಸಿದ್ಧವಾದರೂ ಅಷ್ಟರಿಂದ ಅವುಗಳ ನಿವೃತ್ತಿಯಾಗದಾದ್ದರಿಂದ ವಾಕ್ಯವು ಬೇಕು, ೩-೩೩ ; ಲಿಂಗವು ವಸ್ತುವಿದೆಯೆಂದು ಮಾತ್ರ ಸಾಧಿಸುತ್ತದೆ, ನೇರಾಗಿ ತಿಳಿಸಲಾರದು, ೩-೫೭.

**ಲೌಕಿಕ** – ವೇದಪ್ರಮಾಣದಿಂದಾದದ್ದಲ್ಲದ. ಪ್ರತ್ಯಕ್ಷಾದಿಗಳು ಲೌಕಿಕಪ್ರಮಾಣಗಳು, (ಅವ) ; ಲೌಕಿಕಪ್ರಮಾಣಗಳಿಂದ ಕಂಡ ಸಾಧನಗಳಿಂದಲೇ ಹಿತಪ್ರಾಪ್ತಿಗೂ ಅಹಿತಪರಿಹಾರಕ್ಕೂ ಹವಣಿಸುತ್ತಾರೆ, ೧-೨೯ ; ವಾಕ್ಯಾರ್ಥಜ್ಞಾನವು ಲೌಕಿಕಪ್ರಮಾಣಗಳಿಗೆ ಸಿಕ್ಕತಕ್ಕದ್ದಲ್ಲ, ೩-೫೩ ; ಆತ್ಮನು ಲೌಕಿಕಪ್ರಮೇಯವಿಲಕ್ಷಣನು, ೨-೧೦೫ ; ಲೌಕಿಕವಾದ ರಜ್ಜುಸರ್ಪದ ಅಧ್ಯಾಸದಂತೆ ಆತ್ಮಾನಾತ್ಮರ ಇತರೇತರಾಧ್ಯಾಸವೂ ಅವಿದ್ಯೆಯನ್ನಾಶ್ರಯಿಸಿಕೊಂಡೇ ಆಗುತ್ತದೆ, ೨-೧೦೧ ; ಬ್ರಹ್ಮವು ಆತ್ಮನಿಗಿಂತ ಭಿನ್ನಾಭಿನ್ನ ಎಂದರೆ ಭಿನ್ನಾಭಿನ್ನಪದಗಳ ಅರ್ಥಗಳು ಅಲೌಕಿಕವಾಗುವವು, ಲೋಕದಲ್ಲಿ ಪ್ರಸಿದ್ಧವಿಲ್ಲದ ಅರ್ಥಗಳೆಂದಾಗುವದು, ೧-೭೮.

## ವ

ವಸ್ತು – ಇರುವ ಪದಾರ್ಥ. ವೇದಾಂತದಲ್ಲಿ ಹೇಳಿರುವ ಜ್ಞಾನವು ವಸ್ತು ಬೋಧಕ, ೧-೩, ೧೯ ; ಆತ್ಮವಸ್ತುಬೋಧಮಾತ್ರದಿಂದಲೇ ಪುರುಷಾರ್ಥವಾಗುತ್ತದೆ, ೧-೩೫ ; ಅವಿದ್ಯೆಯು ಯಥಾವಸ್ತುವಾಗಿ ತಿಳಿಸುವದಿಲ್ಲ, ವಿದ್ಯೆಯು ಅದಕ್ಕೆ ವಿರುದ್ಧ, ೧-೫೬ ; ಪರಮಾರ್ಥವಸ್ತುವನ್ನು ಕ್ರಿಯಾಕಾರಕಫಲಗಳು ಸ್ವಲ್ಪವೂ ಮುಟ್ಟವು, ೨-೫೧ ; ವಸ್ತುವನ್ನೇ ತಿಳಿಸುವ ವಾಕ್ಯವು ಕ್ರಿಯಾಪರವಾಗಲಾರದು, ಏಕೆಂದರೆ ವಸ್ತುವಿನಲ್ಲಿ ಹಾಗೂ ಇರಬಹುದು ಹೀಗೂ ಇರಬಹುದು ಎಂಬ ವಿಕಲ್ಪವಿಲ್ಲ, ೩-೮೨ ; ಜ್ಞಾನವು ವಸ್ತುತಂತ್ರ, ಕರ್ಮವು ವಸ್ತುತಂತ್ರವಲ್ಲ, ೧-೭೬.

ವಾಕ್ಯಮ್ – ವೇದಾಂತದಲ್ಲಿರುವ ತತ್ತ್ವಮಸ್ಯಾದಿವಾಕ್ಯ. ವೇದಾಂತಾಗಮ ವಾಕ್ಯದಿಂದಲೇ ಸಮ್ಯಗ್ಜ್ಞಾನವಾಗುವದು, (ಅವ), ೧-೮ ; ಈ ವಾಕ್ಯವು ಸ್ವತಃಸಿದ್ಧವಾದ ವಸ್ತುವನ್ನು ಹೇಳುವದಿಲ್ಲವೆಂದು ಮತ್ತೊಂದು ವಾಕ್ಯಾರ್ಥವನ್ನು ಕಲ್ಪಿಸುವದು ಯಾರಿಂದಲೂ ಆಗಲಾರದು, ೧-೯೮, ೩-೧೧೯ ; ವಾಕ್ಯಜ್ಞಾನವನ್ನು ಅಭ್ಯಾಸ ಮಾಡುವದರಿಂದ ಅವಾಕ್ಯಾರ್ಥರೂಪವಾದ ಮತ್ತೊಂದು ಜ್ಞಾನವುಂಟಾಗುವದೆಂದು ಹೇಳುವದು ಸರಿಯಲ್ಲ, ೧-೬೭ ; ಆತ್ಮವಸ್ತು ವಾಕ್ಯೈಕಗಮ್ಯವಲ್ಲ, ಅನುಭವಮಾತ್ರ ಸ್ವರೂಪವಾಗಿದೆ, ೧-೮೯ ; ವಾಕ್ಯವು ತತ್ತ್ವವನ್ನು ತಿಳಿಸುವದಿಲ್ಲವೆಂಬವರ ಪಕ್ಷದಲ್ಲಿ ವಾಕ್ಯವು ಅಪ್ರಮಾಣವಾಗುತ್ತದೆ, ೩-೧೨೨ ; ವಾಕ್ಯವು ಕ್ರಿಯಾರ್ಥಕವಲ್ಲ, ೧-೯೧.

(ವಿಶೇಷಃ ವಾಕ್ಯಾರ್ಥವನ್ನೇ ಕಾರಣಾಂತರದಿಂದ ಅವಾಕ್ಯಾರ್ಥವೆಂದು ಕರೆಯುವದರಿಂದ ಸೌಕರ್ಯಕ್ಕಾಗಿ ಅದರ ವಿವರವನ್ನು ಈ ಕೆಳಗೆ ಕೊಟ್ಟಿದೆ).

ಅವಾಕ್ಯಾರ್ಥಃ– ತತ್ತ್ವಮಸ್ಯಾದಿವಾಕ್ಯಗಳಿಂದ ತದರ್ಥವೇ ತ್ವಮರ್ಥವು ಎಂಬ ಅವಾಕ್ಯಾರ್ಥವನ್ನು ಅರಿತು ವಾಙ್ಮನಸ್ಸುಗಳನ್ನು ಮೀರಿದ ಸ್ವರೂಪನಾಗುವನು, ೩-೧, ೨ ; ಅವಾಕ್ಯಾರ್ಥತ್ವವನ್ನು ವಾಕ್ಯದ ಪದಗಳ ಸಾಮಾನಾಧಿಕರಣ್ಯವೇ ಮುಂತಾದವುಗಳಿಂದ ಅರಿತುಕೊಳ್ಳುತ್ತಾನೆ ; ವಾಕ್ಯದಿಂದ ಸಂಸರ್ಗಾತ್ಮಕಜ್ಞಾನವಾಗುವದೆಂದೂ ಅದರ ಅಭ್ಯಾಸದಿಂದ ಅವಾಕ್ಯಾರ್ಥಾತ್ಮಕವಾದ ನೇರಾದ ಜ್ಞಾನವಾಗುವದೆಂದು ಹೇಳುವದು ಸರಿಯಲ್ಲ, ವಾಕ್ಯದಿಂದಲೇ ನೇರಾಗಿ ಆ ಜ್ಞಾನವಾಗುತ್ತದೆ, ೩-೯ ರಿಂದ ೧೨, ೩೯.

ವಿಧಿಃ – ಹೀಗೆ ಮಾಡಬೇಕೆಂದು ಹೇಳುವ ವಾಕ್ಯ. ಬ್ರಹ್ಮಸ್ವರೂಪದಲ್ಲಿಯೇ ನಿಂತಿರುವವನಿಗೆ ಅದರ ಪ್ರಾಪ್ತಿಗಾಗಿ ವಿಧಿ ಬೇಕಿಲ್ಲ, ೧-೩೪, ೭೨ ; ಕಾಮಿಗಳು ಅನೇಕರಾಗಿರುವದರಿಂದ ಶ್ರುತಿಸ್ಮೃತಿಗಳಲ್ಲಿ ಕಾಮ್ಯಕರ್ಮವನ್ನು ವಿಧಿಸುವ ವಾಕ್ಯಗಳು ಹೇರಳವಾಗಿವೆ, ೧-೮೫ ; ಆತ್ಮಜ್ಞಾನಕ್ಕಾಗಿ ಸಾಧನವನ್ನು ಮಾಡಬೇಕೆಂಬ ವಿಧಿಗಳೂ ಇವೆ, ೧-೮೭ ; ಆತ್ಮದರ್ಶನವನ್ನು ಶ್ರುತಿಯಲ್ಲಿ ವಿಧಿಸಿಲ್ಲ, ವಿಧಿಸಿದೆ ಎಂದು ಒಪ್ಪಿಕೊಂಡರೂ ಅದು ನಿಯಮವಿಧಿಯೋ ಪರಿಸಂಖ್ಯಾನವಿಧಿಯೋ ಆಗಬಹುದು, ೧-೮೮ ; ವಿಧಿಯಿಲ್ಲದೆ ಅನುಷ್ಠಾನಮಾಡಬಾರದೆಂಬುದು ಕಾಲಾಂತರಫಲದ ಕರ್ಮಕ್ಕೆ ಹೊಂದುತ್ತದೆ, ಈಗಲೆ ಫಲವನ್ನು ಕೊಡುವ ಜ್ಞಾನಕ್ಕೆ ಹೊಂದದು, ೧-೯೦ ; ಅನ್ವಯವ್ಯತಿರೇಕನ್ಯಾಯವು ವಿಧಿಪರಿಪ್ರಾಪಿತ, ೩-೫ ; ಪ್ರಸಂಖ್ಯಾನವಿಧಿಯನ್ನು ಒಪ್ಪದಿದ್ದರೆ ಆರೂಢಪತಿತತ್ವವು ಸಿದ್ಧಿಸುವದಿಲ್ಲವೆಂಬುದಿಲ್ಲ, ತ್ವಮರ್ಥದ ಜ್ಞಾನಕ್ಕೆ ವಿಧಿಯನ್ನು ಒಪ್ಪಿದರೆ ಸಾಕು, ೩-೧೨೬ ; ಅಜ್ಞನು ವಿಧಿಪ್ರತಿಷೇಧಗಳಿಗೆ ಕಟ್ಟುಬಿದ್ದು ಸಂಸಾರವನ್ನು ಪಡೆಯುತ್ತಾನೆ, ೧-೩೯, ೪೧.

ವಿಶೇಷಣವಿಶೇಷ್ಯಭಾವಃ – ತತ್ತ್ವಮಸಿವಾಕ್ಯದ ತತ್ತ್ವಂಪದಗಳ ಅರ್ಥಗಳಿಗೆ ವಿಶೇಷಣವಿಶೇಷ್ಯಭಾವದಿಂದ ಅವಿವಕ್ಷಿತವಾದ ದುಃಖಿತ್ವಪಾರೋಕ್ಷ್ಯಗಳನ್ನು ತಳ್ಳಿಹಾಕಬೇಕಾಗಿದೆ, ೩-೨, ೯, ೧೦.

ವೀಕ್ಷಾಪನ್ನಃ – ಆಲೋಚನಾಪರನಾಗಿರುವವನು. ಅನ್ವಯವ್ಯತಿರೇಕಗಳಿಂದ ಪದಾರ್ಥಜ್ಞಾನವನ್ನು ಮಾಡಿಕೊಂಡಬಳಿಕವೂ ನಾನು ಯಾರು ಎಂಬುದನ್ನರಿಯದೆ ಕಳವಳಪಡುತ್ತಿರುವವನಿಗೇ ತತ್ತ್ವಮಸಿ ಎಂಬ ವಾಕ್ಯದ ಉಪದೇಶ, ೩-೫, ೩-೫೩, ೪-೩೪.

ವೇದಾನ್ತಃ, ವೇದಾವಸಾನಮ್ – ಉಪನಿಷತ್ತು. ವೇದಾಂತದಲ್ಲಿ ಆತ್ಮವಸ್ತು ವಿಷಯಕಜ್ಞಾನವಿದೆ, ೧-೩, ೪-೭೭ ; ವೇದಾಂತವಾಕ್ಯಜ್ಞಾನವೇ ಅಜ್ಞಾನವನ್ನು ಕಳೆಯುತ್ತದೆ, ೧-೮ ; ಈ ಜ್ಞಾನವನ್ನು ಈ ಪ್ರಕರಣದಲ್ಲಿ ಹೇಳಿರುತ್ತದೆ, ೪-೫೨.

ವೈರಾಗ್ಯಮ್ – ಕರ್ಮದಿಂದ ಚಿತ್ತಶುದ್ಧಿಯಾಗಿ ಸಂಸಾರದ ನಿಜವು ತಿಳಿದವನಿಗೆ ಬ್ರಹ್ಮಲೋಕಾದಿಗಳಲ್ಲಿಯೂ ಅದು ವೈರಾಗ್ಯವನ್ನುಂಟುಮಾಡುತ್ತದೆ, ೧-೪೫, ೪೬, ೪೭, ೫೧.

ವ್ಯಭಿಚಾರೀ – ಸ್ವರೂಪವು ಇದ್ದದ್ದು ಇದ್ದಂತೆ ಇರದೆ ಮಾರ್ಪಡುತ್ತಿರುವದು. ಅನಾತ್ಮವೆಲ್ಲ ವ್ಯಭಿಚಾರಿ, ೨-೭೮ ; ಪ್ರತ್ಯಕ್ಷಾದಿಗಳ ಪ್ರಾಮಾಣ್ಯವು ವ್ಯಭಿಚಾರಿ, ವಾಕ್ಯಜ್ಞಾನವೇ ಅವ್ಯಭಿಚಾರಿ, ೩-೯೪.

## ಶ

ಶಬ್ದಃ – ಶಬ್ದವು ಅರ್ಥದಲ್ಲಿ ಪ್ರವರ್ತಿಸುವದಕ್ಕೆ ಬೇಕಾದ ಷಷ್ಠ್ಯಾದಿಗಳು ಯಾವವೂ ಆತ್ಮನಲ್ಲಿಲ್ಲ, ೩-೧೦೩ ; ಶಬ್ದವು ಅಭಿಧಾನಾಭಿಧೇಯತ್ವಸಂಬಂಧವನ್ನು ಇಟ್ಟುಕೊಳ್ಳದೆಯೇ ಆತ್ಮನನ್ನು ತಿಳಿಸುತ್ತದೆ, ೩-೧೦೪, ೧೦೫ ; ಬೇರೆಬೇರೆ ವಿಷಯಗಳ ಪ್ರಮಾಣಗಳಿಗೆ ವಿರೋಧವಿಲ್ಲವೆಂಬುದಕ್ಕೆ ಶಬ್ದದ ಉದಾಹರಣೆ, ೩-೮೪ ; ಶಬ್ದಪ್ರಮಾಣಕ್ಕೂ ಪ್ರತ್ಯಕ್ಷಕ್ಕೂ ವಿರೋಧವಿಲ್ಲ, ವಿರುದ್ಧವಾದರೆ ಆಭಾಸಮಾತ್ರ, ೩-೮೫.

ಶರೀರಾದಿಬುದ್ಧ್ಯನ್ತಾಃ – ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳು. ಶರೀರಾದಿಯಾದ ಅನಾತ್ಮವೇ ನಾನೆಂಬ ಮಿಥ್ಯಾಜ್ಞಾನವೇ ಅಜ್ಞಾನವೆಂಬ ಸಾಂಖ್ಯರ ಮತ ಸರಿಯಲ್ಲ, ೩-೬ ; ಇವು ಅನಾತ್ಮವೆಂದು ತಿಳಿದರೂ ತಾನು ಯಾರೆಂಬ ಜಿಜ್ಞಾಸೆ ತಪ್ಪುವದಿಲ್ಲ, ೪-೧೦.

ಶಾರೀರಕಮ್ – ವೇದಾಂತಾರ್ಥವನ್ನು ವಿಚಾರಮಾಡುವ ಶಾಸ್ತ್ರ, ಬ್ರಹ್ಮಸೂತ್ರ. ಬ್ರಹ್ಮವಸ್ತುಸ್ವರೂಪವನ್ನು ಮಾತ್ರ ವಿಚಾರಮಾಡುವ ಈ ಶಾಸ್ತ್ರದ ಪ್ರಾರಂಭವೇ ಸರ್ವವೇದಕ್ಕೂ ಕರ್ಮವು ಅರ್ಥವೆಂಬವರ ಮತವು ತಪ್ಪೆಂದು ತಿಳಿಸುತ್ತದೆ, ೧-೯೧.

ಶಾಸ್ತ್ರಮ್, ಶ್ರುತಿಃ – (೧) ವೇದ, ವೇದಾಂತವಾಕ್ಯ. ಶಾಸ್ತ್ರವು ಹಿತಾಹಿತಪ್ರಾಪ್ತಿಪರಿಹಾರಗಳಿಗೆ ಉಪಾಯವನ್ನು ಮಾತ್ರ ತಿಳಿಸುತ್ತದೆ, ೧-೨೯ ; ಶಾಸ್ತ್ರವು ಪದಾರ್ಥದಲ್ಲಿಲ್ಲದ ಶಕ್ತಿಯನ್ನು ಅದಕ್ಕೆ ಉಂಟುಮಾಡಲಾರದು, ೧-೩೦, ೩-೯೩ ;

ಪ್ರಸಂಖ್ಯಾನದ ಫಲವು ಶಾಸ್ತ್ರಬಲದಿಂದ ಸ್ಥಿರವಾಗಿರಲಾರದು, ಏಕೆಂದರೆ ಶಾಸ್ತ್ರವು ಇದ್ದದ್ದನ್ನು ತಿಳಿಸುವದೇ ಹೊರತು ಇಲ್ಲದ್ದನ್ನುಂಟುಮಾಡಲಾರದು, ೩-೯೩ ; ವಿಧಿಪ್ರತಿಷೇಧಶಾಸ್ತ್ರಕ್ಕೆ ಅಜ್ಞನೇ ಅಧಿಕಾರಿ, ೧-೩೧ ; ನಿವೃತ್ತಿ ಶಾಸ್ತ್ರವನ್ನು ಮೀಮಾಂಸಕರು ಒಪ್ಪುವದಿಲ್ಲ, ೧-೨೯ ; ಆತ್ಮನ ಸ್ವಭಾವವು ನಿವೃತ್ತಿಶಾಸ್ತ್ರಕ್ಕೆ ವಿರುದ್ಧವಲ್ಲವಾಗಿ ಜ್ಞಾನಿಗೆ ನಿವೃತ್ತಿರೂಪವಾದ ಅಮಾನಿತ್ವಾದಿಗಳು ಇದ್ದೇ ಇರುವವು, ೪-೬೯ ; ಜ್ಞಾನಿಯು ಕರ್ಮಾಧಿಕಾರವನ್ನು ಸುಟ್ಟುಹಾಕಿಕೊಂಡಿರುವದರಿಂದ ಶ್ರುತಿಯ ತಲೆಯಮೇಲೆ ನಿಂತಿರುತ್ತಾನೆ, ವೇದಕಿಂಕರನಲ್ಲ, ೧-೪೦ ; ನೈಷ್ಕರ್ಮ್ಯಪರವಾದ ಶ್ರುತಿಯೂ ಇದೆ, ೧-೮೭ ; ಅನಾತ್ಮವನ್ನು ವಿಂಗಡಿಸಿಕೊಂಡಿರುವವನಿಗೆ ಶ್ರುತಿಯು ''ತತ್ತ್ವಮಸಿ'' ಎಂದು ಹೇಳುತ್ತದೆ, ೩-೫ ; ಶ್ರುತಿಯನ್ನು ಅನಾದರಮಾಡಿ ಬರಿಯ ಅನುಮಾನವನ್ನು ನಂಬಬಾರದು, ೩-೩೪. (೨) ತಾತ್ಪರ್ಯಲಿಂಗವಾದ ವಾಚಕಶಬ್ದ. ಶ್ರುತ್ಯಾದಿಗಳಿಂದ ವಾಕ್ಯಾರ್ಥವನ್ನು ಅರಿತುಕೊಳ್ಳಬೇಕು, ೩-೩೨. (೩) ಶ್ರವಣ. ವಾಕ್ಯಜ್ಞಾನದ ಪ್ರಸಂಖ್ಯಾನವನ್ನು ನಾವು ಒಪ್ಪದಿದ್ದರೂ ಶ್ರವಣಾದಿಗಳಲ್ಲಿ ಇದನ್ನು ಒಪ್ಪಿರುತ್ತೇವೆ, ೩-೧೨೫.

**ಶ್ರೋತೃಚತುಷ್ಟಯಮ್** – ಅನಾತ್ಮವು ಇಲ್ಲವೇ ಇಲ್ಲವೆಂಬ ಅರಿವಿನಿಂದ ತನ್ನ ಆತ್ಮನು ಅವಾಕ್ಯಾರ್ಥರೂಪನಾದ ಅದ್ವಿತೀಯಬ್ರಹ್ಮವು ಎಂದು ತಿಳಿಯುವವನು, ವಾಕ್ಯಶ್ರವಣಮಾತ್ರದಿಂದಲೇ ಈ ಜ್ಞಾನವನ್ನು ಪಡೆದುಕೊಳ್ಳುವವನು, ಶ್ರವಣಮಾಡಿದ ಬಳಿಕ ತಾನೇ ಅನ್ವಯವ್ಯತಿರೇಕವನ್ನು ಮಾಡಿಕೊಂಡು ಅವಾಕ್ಯಾರ್ಥವನ್ನು ಅರಿತುಕೊಳ್ಳುವವನು, ಯಾವನಿಗೆ ಅನ್ವಯವ್ಯತಿರೇಕಗಳಿಂದ ಪದಾರ್ಥಜ್ಞಾನಮಾಡಿಸಿಕೊಟ್ಟು ಮತ್ತೆ ಮತ್ತೆ ಶ್ರವಣಮಾಡಿಸಬೇಕಾಗಿದೆಯೋ ಅವನು - ಹೀಗೆ ನಾಲ್ಕು ಜನ ಶ್ರೋತೃಗಳು. ಕಡೆಯ ಶ್ರೋತೃವೇ ಈ ಗ್ರಂಥಕ್ಕೆ ಅಧಿಕಾರಿ, ಅವನಿಗೆ ದಶಮನ ದೃಷ್ಟಾಂತದಿಂದ ವಾಕ್ಯಜ್ಞಾನ, ೩-೬೪.

## ಷ

**ಷಡ್ಭಾವವಿಕಾರಾಃ** – ಪದಾರ್ಥಗಳ ಆರು ವಿಕಾರಗಳು. ಅಂತಃಕರಣದ ವೃತ್ತಿಗಳು ಹುಟ್ಟುವದು, ಇರುವದು, ಬೆಳೆಯುವದು, ಮಾರ್ಪಡುವದು, ಕ್ಷಯವಾಗುವದು, ನಾಶವಾಗುವದು - ಎಂಬ ಆರು ವಿಕಾರಗಳನ್ನೂ ಆತ್ಮಚೈತನ್ಯದಿಂದ ವ್ಯಾಪ್ತವಾಗಿಯೇ ಅನುಭವಿಸುತ್ತವೆ, ೨-೮೨ ; ಆತ್ಮನಲ್ಲಿ ಆರು ಭಾವವಿಕಾರಗಳೂ ಇಲ್ಲ, ೧-೯೭, ೨-೮೫, ೩-೧.

**ಷಷ್ಠಗೋಚರಃ** – ಆರನೆಯ ಪ್ರಮಾಣಕ್ಕೆ ವಿಷಯವಾದ ಅಭಾವ. ಬುದ್ಧ್ಯಾದಿಗಳು ಆತ್ಮನಿಂದ ಬೇರ್ಪಡಿಸಿದಾಗ ಅಭಾವವೇ, ಇಲ್ಲವೇ ಇಲ್ಲ, ೨-೧೧೪.

ಷಷ್ಠೀ – ಸಂಬಂಧ. ಷಷ್ಠೀ, ಗುಣ, ಕ್ರಿಯೆ, ಜಾತಿ, ರೂಢಿ – ಎಂಬ ಆರು ಶಬ್ದಪ್ರವೃತ್ತಿನಿಮಿತ್ತಗಳೂ ಆತ್ಮನಲ್ಲಿಲ್ಲ, ೩-೧೦೩.

# ಸ

ಸಂಶಯಃ – ಪ್ರಮಾಣವನ್ನು ಅನಾದರಮಾಡುವದಕ್ಕೆ ಅನುವಾದ, ಸಂಶಯ, ವಿಪರೀತಪ್ರತಿಪಾದನ- ಇವೇ ಕಾರಣ, ೩-೩೫ ; ಅನುಮಾನದಿಂದ ಸಂಶಯಹೇತುವೆಲ್ಲವೂ ಹೋದಮೇಲೆ ವಾಕ್ಯಜ್ಞಾನದಲ್ಲಿ ಸಂಶಯವಾಗಲಾರದು, ೩-೩೬ ; ಆತ್ಮನು ಅವಗತಿರೂಪನಾಗಿರುವದರಿಂದ ಸಂಶಯಕ್ಕೆ ಕಾರಣವಿಲ್ಲ, ಎಲ್ಲಿ ಸಂಶಯವಿರುವದೋ ಅದು ಆತ್ಮನಲ್ಲ, ೩-೩೭ ; ಆತ್ಮನಲ್ಲಿ ಸಂಶಯಕ್ಕೆ ಕಾರಣವಿಲ್ಲವಾದ್ದರಿಂದ ಅವನು ಪ್ರಮೇಯನಲ್ಲ, ೩-೪೭.

ಸಂಸರ್ಗಃ – ಸೇರಿಕೊಳ್ಳುವದು, ಸಂಬಂಧ. ಪದಾರ್ಥಗಳ ಸಂಸರ್ಗವೇ ವಾಕ್ಯಾರ್ಥವು ; ಪದಾರ್ಥಗಳು ಒಂದಕ್ಕೊಂದು ಅಂಗಾಂಗಿಭಾವದಿಂದ ಸೇರಿಕೊಂಡು ಒಂದಾನೊಂದು ವಿಶೇಷಾರ್ಥವನ್ನು ಹೇಳುತ್ತವೆ- ಎಂಬುದು ಮೀಮಾಂಸಕರ ಮತ. ಉದಾಹರಣೆ 'ನೀಲಮುತ್ಪಲಮ್' ಎಂಬಲಿ ನೀಲತ್ವ (ಕಪ್ಪು,) ಉತ್ಪಲತ್ವ (ನೈದಿಲೆ) ಎಂಬೆರಡು ಪದಾರ್ಥಗಳ ಸಂಸರ್ಗವು ವಾಕ್ಯಾರ್ಥವು. ಇದೇ ವಾಕ್ಯದಲ್ಲಿ ಅನೀಲ, ಅನುತ್ಪಲ- ಇವುಗಳಿಂದ ಭಿನ್ನವೆಂದು ವಾಕ್ಯವು ತಿಳಿಸುತ್ತದೆಯಾದ್ದರಿಂದ ಭೇದವು ವಾಕ್ಯಾರ್ಥವೆಂದು ಕೆಲವರ ಮತವು. ಉದ್ದೇಶ್ಯವಾದ ಪದಾರ್ಥವು ತನ್ನ ಗುಣದೊಡನೆ ಸೇರಿಯೇ ವಿಧೇಯಪದಾರ್ಥದೊಡನೆ ಸಂಸರ್ಗವಾಗುವದಿಲ್ಲ, ೩-೨೫ ; ವೇದಾಂತವಾಕ್ಯದಿಂದ ಆದ ಜ್ಞಾನವು ಅಹಂಬ್ರಹ್ಮಪದಾರ್ಥಗಳ ಸಂಸರ್ಗವನ್ನು ಹೇಳುತ್ತದೆ ಎಂಬವರ ಮತ ಸರಿಯಲ್ಲ, ೧-೬೭, ೩-೭೬ ; ಆ ವಾಕ್ಯವು ಭೇದವನ್ನಾಗಲಿ ಸಂಸರ್ಗವನ್ನಾಗಲಿ ಹೇಳುವದಿಲ್ಲ, ಅದ್ವಿತೀಯಪ್ರತ್ಯಗಾತ್ಮನೆಂಬ ಒಂದೇ ಅವಾಕ್ಯಾರ್ಥವನ್ನು ಹೇಳುತ್ತದೆ, ೩-೨೬, ೭೬.

ಸಂಸಾರ – ಗೃಹೀತ್ರಾದಿರೂಪವಾದ ಸಂಸಾರವು, ೨-೯೭ ; ಅವಿದ್ಯೆಯೂ ಅದರಿಂದಾದ ಕಾಮವೂ ಸಂಸಾರಕ್ಕೆ ಬೀಜ, ೧-೭, ೪೩ ; ಅವಿದ್ಯೆಯ ಅನ್ವಯವಿದ್ದರೆ ಸಂಸಾರದ ಅನ್ವಯ, ೧-೩೯ ; ಸಂಸಾರವು ಅನಾತ್ಮ, ಅವಿದ್ಯಾಶ್ರಿತ, ೨-೯೭ ; ವೇದಾಂತ ಜ್ಞಾನವು ಸಂಸಾರವನ್ನು ತೊಲಗಿಸುತ್ತದೆ, ೧-೩ ; ಸಂಸಾರಬೀಜವಾದ ಅವಿದ್ಯೆಯಲ್ಲಿ ಇರುವಾತನು ಬರಿಯ ಆತ್ಮಾನಾತ್ಮ ವಿಭಾಗದಿಂದಲೇ ಮುಕ್ತಿಯನ್ನು ಬಯಸುತ್ತಾನೆ, ೪-೧೬ ; ತತ್ತ್ವಮಸಿ ವಾಕ್ಯದಲ್ಲಿ ತ್ವಂಪದಾರ್ಥದಲ್ಲಿ ತೋರುವ ಸಂಸಾರಿತ್ವವು

ತತ್ಪದಾರ್ಥದ ಅದ್ವಿತೀಯತ್ವಕ್ಕೆ ವಿರುದ್ಧವಾಗಿದ್ದು ತತ್ಪದಾರ್ಥದಲ್ಲಿ ತೋರುವ ಪಾರೋಕ್ಷ್ಯವು ತ್ವಂಪದಾರ್ಥದಲ್ಲಿರುವ ಪ್ರತ್ಯಗಾತ್ಮತ್ವಕ್ಕೆ ವಿರುದ್ಧವಾಗಿರುವದರಿಂದ ಅವೆರಡೂ ಬಾಧಿತವಾಗಿ ಅದ್ವಿತೀಯಪ್ರತ್ಯಗಾತ್ಮಜ್ಞಾನವಾಗುತ್ತದೆ, ೩-೭೯ ; ವಾಕ್ಯಜ್ಞಾನವಾದಾಗ ಸಂಸಾರವೆಲ್ಲವೂ ಅವಗತಿರೂಪನಾದ ಆತ್ಮನೇ ಆಗಿಬಿಡುತ್ತದೆ, ೪-೩೮.

ಸನ್ನಜ್ಞಾತಃ – ಅಜ್ಞಾತವಾಗಿರುವ ಬ್ರಹ್ಮಾತ್ಮ. ಪ್ರತಿಯೊಂದು ಪದಾರ್ಥವೂ ಅಜ್ಞಾತವಾಗಿಯೇ ಇದ್ದು ಸದ್ರೂಪವಾಗಿರುವದರಿಂದ ಆ ಸತ್ತೇ ಅಜ್ಞಾತವು, ೩-೭ ; ಪ್ರಮಾತೃಪ್ರಮಾಣಗಳನ್ನು ಅರಿಯಬೇಕೆಂಬ ಇಚ್ಛೆಯಿಂದಾದ ಯಾವದು ತಾನೇ ತೋರುತ್ತದೆಯೋ, ಯಾವದು ತನ್ನ ಮಹಿಮೆಯಿಂದಲೇ ಸಿದ್ಧವಾಗಿದೆಯೋ ಆ ಆತ್ಮನೇ ಸನ್ನಜ್ಞಾತವೆಂಬುದು, ೩-೮.

ಸಮಸ್ತವ್ಯಸ್ತ, ಸಾಮಾನ್ಯವಿಶೇಷಯುಕ್ತ – ಒಟ್ಟಾಗಿಯೂ ಬಿಡಿಬಿಡಿಯ ಜೀವರುಗಳಾಗಿಯೂ ಇರುವ ನಾನಾರಸಬ್ರಹ್ಮವೆಂದು ಭರ್ತೃಪ್ರಪಂಚಾದಿಗಳು ಒಪ್ಪಿರುವ ತತ್ತ್ವ, ೧-೭೩, ೭೭ ; ಆತ್ಮನು ಸಾಮಾನ್ಯವಿಶೇಷಗಳಿಲ್ಲದೆ ಕೂಟಸ್ಥನಾಗಿರುತ್ತಾನೆ, ೩-೧೭.

ಸಮುಚ್ಚಯಃ – ಕರ್ಮಜ್ಞಾನಗಳು ಸೇರಿ ಮುಕ್ತಿಸಾಧನವಾಗಿರುವದೆಂಬುದು ಸರಿಯಲ್ಲ, ೧-೬೦, ೬೬, ೬೮.

ಸಮ್ಯಗ್ಜ್ಞಾನಮ್, ಸಮ್ಯಗ್ಬೋಧಃ – ಸರಿಯಾದ ಜ್ಞಾನ, ವಿದ್ಯೆ. ಅಜ್ಞಾನದ ನಾಶಕ್ಕೆ ಸಮ್ಯಗ್ಜ್ಞಾನವೊಂದೇ ಸಾಕು, ೧-೩೭ ; ಸಮ್ಯಗ್ಜ್ಞಾನವು ಬಾಧಕ, ಮತ್ತೊಂದರಿಂದ ಬಾಧ್ಯವಾಗದು, ೧-೩೬ ; ಸಮ್ಯಗ್ಜ್ಞಾನ, ಸಂಶಯಜ್ಞಾನ, ಮಿಥ್ಯಾಜ್ಞಾನ - ಎಂದು ವಿಂಗಡವಾಗಿರುವದು ಪ್ರತ್ಯಯಗಳಲ್ಲಿಯೇ, ಆತ್ಮಸ್ವರೂಪಜ್ಞಾನದಲ್ಲಲ್ಲ, ೩-೨೦ ; ಸಮ್ಯಗ್ಜ್ಞಾನವು ಬಾಧ್ಯವಾದದ್ದನ್ನೆಲ್ಲ ಒಂದೇ ಸಲಕ್ಕೆ ತೊಲಗಿಸುತ್ತದೆ, ೪-೫೯ ; ಸಮ್ಯಗ್ಬೋಧವು ಪ್ರವೃತ್ತಿನಿವೃತ್ತಿಗಳೆರಡನ್ನೂ ಬಾಧಿಸುತ್ತದೆ, ೪-೫೬.

ಸಾಕ್ಷೀ – ಎಲ್ಲವನ್ನೂ ಅವಿಕೃತನಾಗಿ ನೋಡುತ್ತಿರುವ ಆತ್ಮ. ಆತ್ಮನು ದುಃಖಿಯಲ್ಲ, ದುಃಖಿತ್ವಕ್ಕೂ ಸಾಕ್ಷಿ, ೨-೭೬ ; ಬುದ್ಧಿಯ ಉತ್ಪತ್ತ್ಯಾದಿಗಳಿಗೂ ಸಾಕ್ಷಿ, ೨-೭೯, ೩-೪೬ ; ಗ್ರಾಹಕಾದಿಗಳಿಗೂ ಹಾನೋಪಾದಾನಗಳಿಗೂ ಸಾಕ್ಷಿ, ೨-೧೦೮ ; ಆಗಮಾಪಾಯಿಯಾದ ಅನಾತ್ಮಕ್ಕೆಲ್ಲ ಸಾಕ್ಷಿ, ೩-೫೪, ೫೫ ; ಅನಾತ್ಮದಲ್ಲಿ ಭೇದವಿದೆ, ಸಾಕ್ಷಿಯಲ್ಲಿ ಭೇದವಿಲ್ಲ ಎಂಬ ಅರಿವೂ ಅವಿದ್ಯೆಯ ಕಾರ್ಯ, ೩-೬.

ಸಾಂಖ್ಯಾಃ – ಸಾಂಖ್ಯರು. ಅವರ ಪ್ರಕ್ರಿಯೆಯಿಂದ ಆತ್ಮಾನಾತ್ಮವಿವೇಕ, ೨-೫೮ ; ಸಾಂಖ್ಯವೇದಾಂತಗಳ ತಾರತಮ್ಯ , ೨-೮೪, ೯೭, ೩-೬.

ಸಾಧ್ಯಸಾಧನೇ – (೧) ಪಡೆಯಬೇಕಾದದ್ದು ಸಾಧ್ಯ, ಅದಕ್ಕೆ ಉಪಾಯವು ಸಾಧನ. ಪರಲೋಕಸಂಬಂಧವಾದ ಸಾಧ್ಯಸಾಧನಭಾವಕ್ಕೆ ವೇದವಚನವೇ ಬೇಕು, ೧-೨೭ ; ಕರ್ಮವು ಮುಕ್ತಿಗೆ ಸಾಧನವಲ್ಲ, ೧-೫೩ ; ಜ್ಞಾನಕರ್ಮಗಳಿಗೆ ಸಾಧ್ಯಸಾಧನಭಾವ, ೧-೫೪ ; ಆತ್ಮಜ್ಞಾನಕ್ಕೆ ಪುರುಷಾರ್ಥವನ್ನು ಕೊಡುವದಕ್ಕೆ ಮತ್ತೆ ಯಾವ ಸಾಧನವೂ ಬೇಡ, ೧-೩೬ ; ಜ್ಞಾನದ ಉತ್ಪತ್ತಿಗೆ ಅಮಾನಿತ್ವಾದಿಗಳು ಸಾಧನ, ೪-೬೮, ೭೦. (೨) ತಿಳಿಸಿಕೊಡುವ ಉಪಾಯ. ದ್ರಷ್ಟ್ರಾದಿಗಳಿಗೆ ಬೇರೊಂದು ಸಾಧನ ಬೇಕು, ೨-೧೦೬.

ಸಾಮಾನಾಧಿಕರಣ್ಯಾದಿಃ – ತತ್ತ್ವಮಸ್ಯಾದಿವಾಕ್ಯಗಳಲ್ಲಿ ಪದಗಳು ಒಂದೇ ಅರ್ಥವನ್ನು ಹೇಳುವದು, ಪದಾರ್ಥಗಳಿಗೆ ವಿಶೇಷಣವಿಶೇಷ್ಯಭಾವವಿರುವದು, ತತ್ತ್ವಂ ಪದಾರ್ಥಗಳಿಗೂ ಅದ್ವಿತೀಯಪ್ರತ್ಯಗಾತ್ಮನಿಗೂ ಲಕ್ಷ್ಯಲಕ್ಷಣಭಾವವಿರುವದು ಇವು, ೩-೩, ೯, ೧೧.

ಸಾಮಾನ್ಯವಿಶೇಷಾರ್ಥೌ – ಪದವು ಸಾಮಾನ್ಯಾರ್ಥವನ್ನು ಹೇಳುತ್ತದೆ, ವಾಕ್ಯವು ವಿಶೇಷಾರ್ಥವನ್ನು ಹೇಳುತ್ತದೆ, ೩-೩೨ ; ವಾಕ್ಯದಲ್ಲಿ ಸಮಾನಾಧಿಕರಣವಾಗಿರುವ ಪದಗಳೆರಡೂ ಸ್ವಪ್ರಧಾನವಾಗಿದ್ದರೆ ಸಾಮಾನ್ಯಾರ್ಥವನ್ನೇ ಹೇಳುತ್ತವೆ, ೩-೭೫.

ಸಿದ್ಧಿಃ, ರಾದ್ಧಿಃ – (೧) ಉಂಟಾಗುವದು, ಪ್ರಾಪ್ತಿ. ಜ್ಞಾನಸಿದ್ಧಿಯು ವಾಕ್ಯದಿಂದಲೇ ಎಂಬ ಬಗ್ಗೆ ಪೂರ್ವಪಕ್ಷ, ೨-೨೩ ; ವಾಕ್ಯಾರ್ಥಜ್ಞಾನಪ್ರಾಪ್ತಿಗಾಗಿ ಅನ್ವಯವ್ಯತಿರೇಕ, ೨-೧೦ ; (೨) ಜ್ಞಾನದಿಂದ ಸಿದ್ಧವಾಗುವದು. ಪ್ರಮಾಣಗಳಿಗೆ ಆತ್ಮನಿಂದ ಸಿದ್ಧಿ, ೨-೩೭ ; ಆತ್ಮಸಿದ್ಧಿಯಿಂದಲೇ ಅನಾತ್ಮಸಿದ್ಧಿ, ೧-೪ ; ಅನಾತ್ಮಕ್ಕೆ ಆತ್ಮನಿಗಿಂತ ಬೇರೆ ಅಥವಾ ಆತ್ಮರೂಪದಿಂದ ಸಿದ್ಧಿಯಿಲ್ಲ, ೨-೪೫ ; ಅವಿದ್ಯೆಯಿದೆ ಎಂಬ ಸಿದ್ಧಿಯು ಅವಿದ್ಯಾಪ್ರಸಿದ್ಧಿಯಿಂದ, ೩-೧೧೧, ೧೧೨.

ಸುಖದುಃಖೇ – ಸುಖದುಃಖಗಳು. ದುಃಖಕ್ಕೆ ಅನವಬೋಧವೇ ಕಾರಣ (ಅವ). ನಿಜವಾದ ಅನಾಗಮಾಪಾಯಿಸುಖಕ್ಕೆ ಅನವಬೋಧವೇ ಕಾರಣ, (ಅವ) ; ನಿಜವಾದ ಅನಾಗಮಾಪಾಯಿಸುಖಕ್ಕೆ ಅನವಬೋಧವೇ ಆವರಣ, (ಅವ) ; ನಿರತಿಶಯ ಸುಖದ ಪ್ರಾಪ್ತಿಯೂ ನಿಃಶೇಷದುಃಖನಿವೃತ್ತಿಯೂ ಜ್ಞಾನದಿಂದಲೇ, ೧-೩೫ ; ಆತ್ಮನು ನಿರತಿಶಯಸುಖಹಿತಸ್ವರೂಪನೇ, (ಅವ), ೧-೩೦ ; ಕರ್ಮಿಯು ದುಃಖರೂಪ

ಸಂಸಾರದಲ್ಲಿ ತೊಳಲುತ್ತಾನೆ, ೧-೪೨ ; ಆತ್ಮನಿಗೆ ಆಗಂತುಕಸುಖದುಃಖಗಳ ಸಂಬಂಧವಿಲ್ಲ, ೧-೯೪.

ಸುಪ್ತ, ಸುಷುಪ್ತ – ನಿದ್ರಿಸಿದ, ನಿದ್ರೆ. ನಿದ್ರೆಯಿಂದ ಎಚ್ಚತ್ತವನು ನಾನು ಅರಿಯಲಿಲ್ಲ ಎನ್ನುವದರಿಂದ ಅಹಂಕಾರವು ಆತ್ಮನಿಗೆ ಲಕ್ಷಣ, ೨-೫೪ ; ಜಾಗ್ರತ್ಸ್ವಪ್ನಸುಷುಪ್ತಿಗಳ ಸಾಕ್ಷಿಯೆಂದು ಆಗುವ ಜ್ಞಾನವು ಅಪರೋಕ್ಷವಲ್ಲ, ೩-೫೭ ; ಅಹಂಕಾರವು ಆತ್ಮನ ಧರ್ಮವಲ್ಲ, ಏಕೆಂದರೆ ಮುಕ್ತಿಸುಷುಪ್ತಿಗಳಲ್ಲಿ ಅದು ಇಲ್ಲ, ೨-೩೨ ; ಸುಷುಪ್ತಿಯಲ್ಲಿ ಜ್ಞಾತೃತ್ವವಾಗಲಿ ಅಹಂಕಾರದ ವಿಕಾರವಾಗಲಿ ಇಲ್ಲದ್ದರಿಂದ 'ಇದು', 'ನನ್ನದು' ಎಂಬ ಅರಿವಿಲ್ಲ, ೩-೬೨ ; ಸುಷುಪ್ತಿಯಲ್ಲಿ ಯಾವ ವಿಕಲ್ಪವೂ ಇಲ್ಲದ ಆತ್ಮನು ಇದ್ದರೂ ಅಲ್ಲಿ ಅಜ್ಞಾನವಿದೆ, ೩-೫೮ ; ಸುಷುಪ್ತಿಯಲ್ಲಿ ಏನೂ ಅರಿಯಲಿಲ್ಲವೆಂದರೆ ಆತ್ಮನ ಚೈತನ್ಯವಿಲ್ಲವೆಂದಲ್ಲ, ಪ್ರತ್ಯಯವಿಲ್ಲವೆಂದೇ ಅಭಿಪ್ರಾಯ, ೪-೨೩.

ಸೂಕ್ಷ್ಮದೇಹಃ – ಅಹಂಮಮತ್ವಯತ್ನೇಚ್ಛಾದಿಗಳು. ಇವು ಅನಾತ್ಮವೆಂದು ಅನ್ವಯವ್ಯತಿರೇಕದಿಂದ ನಿಶ್ಚಯಿಸುವ ಬಗೆ, ೨-೨೨ ರಿಂದ ೯೬.

ಸ್ವತಃ, ಸ್ವಯಮ್ – ಮತ್ತೊಂದರಿಂದಲ್ಲದೇ, ತಾನೇ. ಆತ್ಮನು ಪ್ರಮಾಣಸಿದ್ಧನಲ್ಲ, ಸ್ವತಃಸಿದ್ಧನು, (ಅವ), ೧-೩೬, ೮೯, ೯೭ ; ತತ್ತ್ವಮಸ್ಯಾದಿವಾಕ್ಯಗಳು ಸ್ವತಃಸಿದ್ಧವಾದರ್ಥವನ್ನೇ ತಿಳಿಸುತ್ತವೆ, ೧-೯೮ ; ಸ್ವತಃಸಿದ್ಧಾತ್ಮನ ಅನವಬೋಧದಿಂದ ಸಂಸಾರವು ಕಾಣಿಸುತ್ತದೆ, ೨-೯೭ ; ಸ್ವತಃಸಿದ್ಧವಾದ ಆತ್ಮನ ನಿತ್ಯಚೈತನ್ಯದಿಂದ ಬುದ್ಧಿವೃತ್ತಿಗಳೂ ಅವುಗಳಿಂದ ಘಟಾದಿಗಳೂ ಸಿದ್ಧವಾಗುತ್ತವೆ, ೨-೧೧೫ ; ಸ್ವತಃಸಿದ್ಧನಾದ ಆತ್ಮನಲ್ಲಿ ಅನಾತ್ಮವು ಅಧ್ಯಾರೋಪಿತವಾಗಿದೆ, ೨-೧೦೧ ; ಆತ್ಮನು ನಿರ್ದುಃಖಿಯೆಂಬುದು ತಾನೇ ಸಿದ್ಧ, ೩-೯೪ ; ಸ್ವಯಂದೃಶಿ, ೩-೫೫, ಸ್ವಯಂಜ್ಯೋತಿ, ೩-೪೧ ಎಂಬಿವಕ್ಕೆ ತಾನೇ ಬೆಳಗುವ ಆತ್ಮ ಎಂದರ್ಥ ; ಆತ್ಮನು ಸ್ವತೋಬುದ್ಧ, ಮತ್ತೊಂದು ಅರಿವಿನಿಂದ ಕಾಣುವವನಲ್ಲ, ೩-೪೯ ; ಸ್ವತೋಮುಕ್ತ, ಮತ್ತೊಂದರಿಂದ ಸಂಸಾರಬಂಧವನ್ನು ಕಳೆದುಕೊಳ್ಳಬೇಕಾದವನಲ್ಲ, ೩-೪೨.

ಸ್ವಪ್ನ, ಸ್ವಾಪಃ ಕನಸಿನಲ್ಲಿ ಕಾಣುವ ಕಳ್ಳರು, ಆನೆ- ಮುಂತಾದ ಸ್ವಪ್ನನಿಮಿತ್ತವು ಎಚ್ಚರಕ್ಕೆ ಕಾರಣ. ಇದರಂತೆ ಜ್ಞಾನಕ್ಕೆ ಶ್ರುತಿವಾಕ್ಯವು ಕಾರಣ, ೨-೧೦೭, ೪-೩೬, ೩೭ ; ಸುಷುಪ್ತಿಯ ಅಗ್ರಹಣವು ಸ್ವಪ್ನಜಾಗರಗಳಿಗೆ ಬೀಜ, ೪-೪೦, ೪೩ ; ಅನ್ಯಥಾಗ್ರಹಣವೇ ಸ್ವಪ್ನ, ೪-೪೨ ; ಸುಷುಪ್ತಿಯಂತೆ ಸ್ವಪ್ನಜಾಗರಿತಗಳಲ್ಲಿಯೂ ಆತ್ಮನು ನಿರ್ವಿಕಾರಿ, ೪-೪೮.

ಸ್ವಾರ್ಥಃ – (೧) ಆತ್ಮನು ತನಗಾಗಿ ತಾನು ಇರತಕ್ಕವನು, ಅನಾತ್ಮದಂತೆ ಮತ್ತೊಂದರ ಅಧೀನವಾಗಿರತಕ್ಕವನಲ್ಲ, ೨-೭೪, ೩-೪೮. (೨) ತನ್ನ ಅರ್ಥ. ವಿಧಿ ವಾಕ್ಯಗಳೂ ಆತ್ಮವಾಕ್ಯಗಳೂ ತಮ್ಮತಮ್ಮ ಅರ್ಥದಲ್ಲಿ ಪ್ರಮಾಣ, ೧-೯೧.

## ಹ

ಹಾನೋಪಾದಾನೇ – ಹಾನ (ಬಿಡುವದು, ನಾಶ), ಉಪಾದಾನ, ಇವೆರಡೂ ಅನಾತ್ಮಧರ್ಮಗಳು. (ತೆಗೆದುಕೊಳ್ಳುವದು, ಹುಟ್ಟುವದು) - ಇವು. ಅಜ್ಞಾನದ ಹಾನವೇ ಮುಕ್ತಿ, ೧-೨೪ ; ಪರಿಹೃತವಾದದ್ದರ ಹಾನವನ್ನೂ ಅಜ್ಞಾನದಿಂದ ಬಯಸಬಹುದು, ೧-೩೪ ; ಹಾನೋಪಾದಾನಗಳಿಗೆ ಸಾಕ್ಷಿಯಾಗಿರುವ ಆತ್ಮನಿಗೆ ಹಾನೋಪಾದಾನಗಳಿಲ್ಲ, ೨-೧೦೮ ; ಬುದ್ಧಿಯ ಸಮ್ಯಕ್ತ್ವಾದಿಗಳ ಹಾನೋಪಾದಾನಗಳು ಅವನ್ನು ನೋಡುತ್ತಿರುವ ಸಾಕ್ಷಿಯಲ್ಲಿ ಅಜ್ಞಾನದಿಂದ ಅಧ್ಯಸ್ತವಾಗಿವೆ, ೩-೨೦, ೨೧ ; ಶಾಸ್ತ್ರವು ಅಹಿತ, ಹಿತ-ಇವುಗಳ ಪ್ರಾಪ್ತಿಗಳಿಗೆ ಉಪಾಯವನ್ನು ಮಾತ್ರ ಹೇಳುತ್ತದೆ, ೧-೩೦ ; ಹಾನೋಪಾದಾನಗಳುಳ್ಳ ಪ್ರಮಾತ್ರಾದಿಗಳಿಂದ ಹಾನೋಪಾದಾನಗಳಿಲ್ಲದ ಆತ್ಮನನ್ನು ಅನ್ವಯವ್ಯತಿರೇಕಗಳಿಂದ ವಿಂಗಡಿಸಿಕೊಂಡು ಅರಿಯಬೇಕು, ೩-೪೬ ; ಹಾನೋಪಾದಾನಗಳ ಸಿದ್ಧಿಯು ಹಾನೋಪಾದಾನರಹಿತನಾದ ಆತ್ಮನಿಂದಲೇ ಆಗುತ್ತದೆ, ೩-೨೧.

ಹಿತಮ್ – ತನಗೆ ಒಳ್ಳೆಯದಾದ, ಸುಖಕಾರಣವಾದ. ಹಿತಾಹಿತಗಳು ಭ್ರಾಂತಿಯಿಂದ ಅಧ್ಯಸ್ತವಾಗಿವೆ, ೧-೩೦ ; ನಿರತಿಶಯಹಿತಕ್ಕಿಂತ ಆತ್ಮನು ಬೇರೆಯಲ್ಲ, ೧-೩೦.

ಹೇತುಸ್ವರೂಪಕಾರ್ಯಾಣಿ – ಜ್ಞಾನಕರ್ಮಗಳಿಗೆ ಹೇತ್ವಾದಿಗಳು ಬೇರೆಬೇರೆಯಾಗಿ ಪರಸ್ಪರವಿರುದ್ಧವಾಗಿವೆ, ೧-೬೬.